ಚತುಃಶ್ಲೋಕಿ
ಶ್ರೀಮದ್ಭಾಗವತ

॥ಶ್ರೀಶ್ರೀ ಗುರು–ಗೌರಂಗೌ ಜಯತಃ॥

ಶ್ರೀಮದ್ ಕೃಷ್ಣದ್ವೈಪಾಯನ–ವೇದವ್ಯಾಸ ಪ್ರಣೀತ

ಚತುಃಶ್ಲೋಕಿ ಶ್ರೀಮದ್ಭಾಗವತ

(ಶ್ರೀಮದ್ಭಾಗವತ ದ್ವಿತೀಯಸ್ಕಂದ ಒಂಬತ್ತನೆಯ ಅಧ್ಯಾಯದ
೨೯ನೇ ಶ್ಲೋಕದಿಂದ ೩೮ನೇ ಶ್ಲೋಕದವರೆಗು)

ಅನ್ವಯ, ಅನುವಾದ, ತತ್ವ ಶ್ರೀಮಧ್ವಾಚಾರ್ಯಪಾದರು,
ಶ್ರೀವಿಜಯಧ್ವಜ ತೀರ್ಥಪಾದರು, ಶ್ರೀಲ ಜೀವ ಗೋಸ್ವಾಮಿಪಾದರು,
ಶ್ರೀಲ ಕೃಷ್ಣದಾಸ ಕವಿರಾಜ ಗೋಸ್ವಾಮಿ, ಶ್ರೀಲ ಶ್ರೀನಿವಾಸಾಚಾರ್ಯಪಾದರು,
ಶ್ರೀಲ ವಿಶ್ವನಾಥ ಚಕ್ರವರ್ತೀ ಠಾಕುರರು, ಶ್ರೀಶ್ರೀಧರಸ್ವಾಮೀಪಾದರು,
ಶ್ರೀವಲ್ಲಭಾಚಾರ್ಯಪಾದರು, ಶ್ರೀವೀರರಾಘವಾಚಾರ್ಯಪಾದರು,
ಶ್ರೀಶುಕದೇವಪಾದರು, ಶ್ರೀಲ ಭಕ್ತಿವಿನೋದ ಠಾಕುರರು,
ಶ್ರೀಲ ಭಕ್ತಿಸಿದ್ಧಾಂತ ಸರಸ್ವತೀ ಠಾಕುರರು 'ಪ್ರಭುಪಾದ' ಮುಂತಾದವರಿಂದ
ವ್ಯಾಖ್ಯಾಯನಗಳು ಹಾಗೂ ವಿವರಣೆಗಳು ಮತ್ತು
ಅವರ ಭಾವಾನುವಾದಗಳು ಒಳಗೊಂಡಿದೆ.

**ಶ್ರೀಗೌಡಿಯ ವೇದಾಂತ ಸಮಿತಿ ಹಾಗೂ ತದಂತರ್ಗತವಾದ ಭಾರತವ್ಯಾಪೀ
ಶ್ರೀಗೌಡೀಯ ಮಠಗಳ ಪ್ರತಿಷ್ಠಿತ, ಶ್ರೀಕೃಷ್ಣಚೈತನ್ಯಾಂನ್ಯಾ ದಶಮಾಧಸ್ತನವರ
ಶ್ರೀಗೌಡೀಯಾಚಾರ್ಯಕೇಸರಿ ನಿತ್ಯಲೀಲಾಪ್ರವಿಷ್ಟ ಓಂ ವಿಷ್ಣುಪಾದ ಅಷ್ಟೋತ್ತರಶತಶ್ರೀ
ಶ್ರೀಮದ್ಭಕ್ತಿಪ್ರಜ್ಞಾನ ಕೇಶವ ಗೋಸ್ವಾಮೀ ಮಹಾರಾಜರ ಅನುಗ್ರವುಳ್ಳ**

ತ್ರಿದಂಡಿಸ್ವಾಮಿ

ಶ್ರೀಶ್ರೀಮದ್ಭಕ್ತಿವೇದಾಂತ ನಾರಾಯಣ ಗೋಸ್ವಾಮಿ ಮಹಾರಾಜರ
ಮೂಲಕ ಪ್ರಕಾಶಗೊಂಡಿದೆ

ಮುನ್ನುಡಿ

ವಿಷಯ-ಸೂಚಿ

ಪ್ರಸ್ತಾವನೆ...

ಪ್ರಥಮ-ಶ್ಲೋಕ (ಶ್ರೀಮದ್ಭಾ ೨/೯/೨೯...

ಶ್ರೀಬ್ರಹ್ಮದೇವರ ಮೂಲಕ ತಮ್ಮಲ್ಲಿ ತಾವು ಸೃಷ್ಟಿಕರ್ತರೆಂಬ ಪ್ರಬಲ ಅಹಂಕಾರ ಉದಿತವಾಗದಿರಲೆಂದು ಶ್ರೀಭಗವಂತನಲಿಪ್ರಾರ್ಥನೆ

ದ್ವಿತೀಯ-ಶ್ಲೋಕ (ಶ್ರೀಮದ್ಭಾ ೨/೯/೩೦) ....
ಶ್ರೀಭಗವಂತನ ಮುಕಾಂತರ ಪರಮ-ಭಾಗವತರಾದ ಬ್ರಹ್ಮದೇವರಿಗೆ ಶ್ರೀಮದ್ಭಾಗವತ ಹೆಸರಿನ ನಮ್ಮ ಶಾಸ್ತ್ರದ

ಸರ್ವಶ್ರೇಷ್ಠ ಪ್ರತಿಪಾದನೆಯ ನಾಲ್ಕು ವಸ್ತುಗಳ ವಿವರಣೆ

ತೃತೀಯ-ಶ್ಲೋಕ (ಶ್ರೀಮದ್ಭಾ ೨/೯––––––––––––––––––––––––––––––––

ಶ್ರೀಬ್ರಹ್ಮನ ಹೃದಯದಲ್ಲಿ ತನ್ನ ವಿಜ್ಞಾನ ಮತ್ತು ರಹಸ್ಯ ಆವಿರ್ಭೂತವಾಗಲೆಂದು ಶ್ರೀಭಗವಂತನ ಮೂಲಕ

ಆಶೀರ್ವಾದ ಪ್ರದಾನ

ಚತುರ್ಥ-ಶ್ಲೋಕ (ಶ್ರೀಮದ್ಭಾ ೨/೯––––––––––––––––––––––––––––––––

ಚತುಃಶ್ಲೋಕಿಯ ಅಂತರಂಗ ಪ್ರಥಮ ಶ್ಲೋಕ- ಶ್ರೀಭಗವಂತನ ಮೂಲಕ ನಾಲ್ಕು ವಸ್ತುಗಳಲ್ಲಿ ಸರ್ವಪ್ರಥಮ

ಭಗವತ್-ಜ್ಞಾನದ ಪ್ರತಿಪಾದನೆ

ಪಂಚಮ-ಶ್ಲೋಕ (ಶ್ರೀಮದ್ಭಾ ೨/೯/೩೩)––––––––––––––––––––––

ಚತುಃಶ್ಲೋಕಿಯಲ್ಲಿ ಒಳಗೊಂಡ ದ್ವಿತೀಯ ಶ್ಲೋಕ- ಹಿಂದಿನ ಭಗವತ್-ಜ್ಞಾನವನ್ನು ವ್ಯತಿರೇಕ ರೂಪದಲ್ಲಿ ತಿಳಿಸುವುದಕ್ಕಾಗಿ

ಶ್ರೀಭವಂತನ ಮೂಲಕ ಮಾಯೆಯ ಲಕ್ಷಣದ ನಿರೂಪಣೆ

ಶಷ್ಠ-ಶ್ಲೋಕ (ಶ್ರೀಮದ್ಭಾ ೨/೯/೩೪)––––––––––––––––––––––––––––––

ಚತುಃಶ್ಲೋಕೀ ಅಂತರ್ಗತ ತೃತೀಯ ಶ್ಲೋಕ ' ಶ್ರೀಭಗವಂತನ ಮೂಲಕ ತನ್ನ ಚಿತ್-ವಿಲಾಸ ಪಾತ್ರದ ಪ್ರಕಾರ ಅಥವಾ

ಪ್ರೇಮದ ರಹಸ್ಯ ಸ್ವರೂಪವಾಗುವ ವರ್ಣನೆ

ಸಪ್ತಮ–ಶ್ಲೋಕ (ಶ್ರೀಮದ್ಭಾ ೨/೯/೩೫)--------------------------

ಚತುಃಶ್ಲೋಕದಲ್ಲಿ ಒಳಗೊಂಡ ಚತುರ್ಥ ಶ್ಲೋಕ– ಶ್ರೀಭಗವಂತನ ಮೂಲಕ ಭಗವತ್–ಪ್ರೇಮದ ಅಂಗ– ಸಾಧನವು

ಅತ್ಯಂತ ರಹಸ್ಯಮಯವಾದ ಕಾರಣ ಬಹಿರಂಗ ವ್ಯಕ್ತಿಗಳಿಗೆ ಅಗೋಚರ ರೂಪದಲ್ಲೇ ಅದರ ಉಪದೇಶ

ವೇದ ಮತ್ತು ಚತುಃಶ್ಲೋಕಿ (ಶ್ರೀಮದ್ಭಾ ೨/೯/೩೨–೩೫)----------------

ವಿವೃತ್ತಿಸಾರ (ಶ್ರೀಮದ್ಭಾ ೨/೯/೩೨–೩೫)--------------------

ಅಷ್ಟಮ–ಶ್ಲೋಕ (ಶ್ರೀಮದ್ಭಾ ೨/೯/೩೬)-------------------------

ಚತುಃಶ್ಲೋಕೀ–ಭಾಗವತದ ಗಂಭೀರವಾದ ಅರ್ಥವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಅಸಮರ್ಥತೆಯ ಶಂಕೆಯನ್ನು ಮಾಡಿದಾಗ ಶ್ರೀಭಗವಂತನ ಮೂಲಕ ಬ್ರಹ್ಮದೇವರಲ್ಲಿ ಉಪದೇಶ ಹಾಗೂ ಅವರಲ್ಲಿ ಸೃಷ್ಟಿಕರ್ತನೆಂಬ ಅಭಿಮಾನ ಬಾರದಿರಲು ಅನುಗ್ರಹ

ನವಮ–ಶ್ಲೋಕ (ಶ್ರೀಮದ್ಭಾ ೨/೯/೩೭)-----------------------

ಶ್ರೀಬ್ರಹ್ಮನ ಸಮಕ್ಷದಲ್ಲಿ ಶ್ರೀಭಗವಂತನ ಮೂಲಕ ತನ್ನ ಅಲೌಕಿಕ ರೂಪದ ಅಂತರ್ಧಾನ

ದಶಮ–ಶ್ಲೋಕ (ಶ್ರೀಮದ್ಭಾ ೨/೯/೩೮)-----------------------

ಭಗವಾನ್ ಶ್ರೀಹರಿಯ ಅಂತರ್ಧಾನದ ನಂತರ ಬ್ರಹ್ಮದೇವರು ಮೋಹರಹಿತರಾಗಿ ವಿಶ್ವದ ಸೃಷ್ಟಿ

ಪ್ರಸ್ತಾವನೆ

ಪರಮಾರಾಧ್ಯರಾದ ಶ್ರೀಗುರುಪಾದಪದ್ಮ ನಿತ್ಯಲೀಲಾ ಪ್ರವಿಷ್ಟ ಓಂ ವಿಷ್ಣುಪಾದ ಅಷ್ಟೋತ್ತರಶತ ಶ್ರೀ ಶ್ರೀಮದ್ಭಕ್ತಿಪ್ರಜ್ಞಾನ ಕೇಶವ ಗೋಸ್ವಾಮಿ ಮಹಾರಾಜರ ಅಹೈತುಕಿ ಕರುಣೆ ಮತ್ತು ಪ್ರೇರಣೆಯಿಂದ ಅವರ ಪ್ರೀತಿಗಾಗಿಯೇ ಶ್ರೀಮದ್ಭಾಗವತದಲ್ಲಿ ವರ್ಣಿತವಾದ 'ಚತುಃಶ್ಲೋಕಿ–ಭಾಗವತ' ಹಿಂದಿ ಭಾಷಾ–ಭಾಷಿತರ ಓದುಗರ ಸಮಕ್ಷದಲ್ಲಿ ಪ್ರಸ್ತುತಪಡಿಸುತ್ತ ಅಪಾರವಾದ ಆನಂದವನ್ನು ಅನುಭವಿಸುತ್ತಿದ್ದೇನೆ. ಈ ಜ್ಞಾನ–ವಿಜ್ಞಾನ–ಸಾರಗರ್ಭ 'ಚತುಃಶ್ಲೋಕಿ–ಭಾಗವತ'ದಲ್ಲಿ ಜಗತ್–ವರೇಣ್ಯ, ಪರಮ ವಿದ್ವಾನ್ ಹಾಗೂ ಅನುಭವ ಸಂಪನ್ನರಾದ ಪೂರ್ವ–ಪೂರ್ವ ಆಚಾರ್ಯರುಗಳಾದ– ಶ್ರೀಬ್ರಹ್ಮ–ಮಧ್ವ–ಗೌಡೀಯ ವೈಷ್ಣವ ಸಂಪ್ರದಾಯದ ಶ್ರೀಮಧ್ವಾಚಾರ್ಯಪಾದರು ಬರೆದ 'ತಾತ್ಪರ್ಯ', ಶ್ರೀವಿಜಯಧ್ವಜ ತೀರ್ಥಪಾದರು ರಚಿಸಿದ 'ಪದರತ್ನಾವಳಿ', ಶ್ರೀಲ ಜೀವ ಗೋಸ್ವಾಮೀಪಾದರು ರಚಿಸಿರುವ 'ಕ್ರಮ–ಸಂದರ್ಭ', ಶ್ರೀಲ ಕೃಷ್ಣದಾಸ ಕವಿರಾಜ ಗೋಸ್ವಾಮೀಪಾದರು ರಚಿಸಿರುವ 'ಶ್ರೀಚೈತನ್ಯಚರಿತಾಮೃತ', ಶ್ರೀಲ ಶ್ರೀನಿವಾಸಾಚಾರ್ಯಪಾದರು ರಚಿಸಿರುವ 'ಚತುಃಶ್ಲೋಕಿ ಭಾಷ್ಯಮ್', ಶ್ರೀಲ ವಿಶ್ವನಾಥ ಚಕ್ರವರ್ತಿ ಠಾಕುರರು ರಚಿಸಿರುವ 'ಸಾರಾರ್ಥದರ್ಶಿನಿ', ಶ್ರೀಲ ಸಚ್ಚಿದಾನಂದ ಭಕ್ತಿವಿನೋದ ಠಾಕುರರು ಬರೆದ ವ್ಯಾಖ್ಯಾಯನ (ಶ್ರೀಭಾಗವತಾರ್ಕಮರೀಚಿಮಾಲಾ ಹಾಗೂ ಅಮೃತಪ್ರವಾಹ ಭಾಷ್ಯ), ಶ್ರೀಲ ಭಕ್ತಿಸಿದ್ಧಾಂತ ಸರಸ್ವತಿ ಠಾಕುರರು 'ಪ್ರಭುಪಾದ್' ರವರು ಬರೆದ 'ವಿವೃತ್ತಿ'; ಶ್ರೀವಿಷ್ಣುಸ್ವಾಮಿ ಸಂಪ್ರದಾಯದ ಪ್ರಪೂಜ್ಯಚರಣ ಶ್ರೀಶ್ರೀಧರ ಸ್ವಾಮೀಪಾದರು ರಚಿಸಿರುವ 'ಭಾವಾರ್ಥದೀಪಿಕ'; ಶ್ರೀವಲ್ಲಭಾಚಾರ್ಯಪಾದರು ರಚಿಸಿರುವ 'ಸುಬೋಧಿನಿ'; ಶ್ರೀರಾಮಾನುಜ ಸಂಪ್ರದಾಯದ ಶ್ರೀವೀರರಾಘವಾಚಾರ್ಯಪಾದರು ರಚಿಸಿರುವ 'ಶ್ರೀಭಾಗವತಚಂದ್ರಿಕ' ಹಾಗೂ ಶ್ರೀನಿಂಬಾದಿತ್ಯ ಸಂಪ್ರದಾಯದ ಶ್ರೀಶುಕದೇವಪಾದರವರು ರಚಿಸಿರುವ 'ಸಿದ್ಧಾಂತಪ್ರದೀಪ' ಹೆಸರಿನ ಟೀಕೆಗಳು, ವ್ಯಾಖ್ಯಾಯನಗಳು ಹಾಗೂ ವಿವರಣೆಗಳು. ಅದಾಗ್ಯೂ ಈ ಟೀಕೆಗಳು, ವ್ಯಾಖ್ಯಾಯನಗಳು ಹಾಗೂ ವಿರವರಣೆಗಳ ಭಾಷೆಯನ್ನು ಅರ್ಥಮಾಡಿಕೊಳ್ಳುವುದು ಸಾಧಾರಣ ಜನರಿಗೆ ಸಹಜವಾದದ್ದಲ್ಲ, ಆದ್ದರಿಂದ ವಿಧ್ಯಾಸಂಪನ್ನೆಯಾದ ಮಧು ಖಂಡೇಲ್ವಾಲ್, ಎಮ್.ಎ, ಪಿ.ಎಚ್.ಡಿ. ರವರು ಪ್ರಬಲ ಪರಿಶ್ರಮದಿಂದ ಈ ಟೀಕೆಗಳು, ವ್ಯಾಖ್ಯಾಯನಗಳು, ವಿವರಣೆಗಳನ್ನು ಇತ್ಯಾದಿಗಳನ್ನು ಸಂಗ್ರಹಿಸಿ ದೊಡ್ಡ ಯತ್ನಪೂರ್ವಕವಾಗಿ ಅವುಗಳನ್ನು ಹಿಂದಿ ಭಾಷೆಗೆ ಅನುವಾದ ಮಾಡಿ ಹಿಂದಿ–ಜಗತ್ತಿಗೆ ಬಹಳ ದೊಡ್ಡ ಉಪಕಾರವನ್ನು ಮಾಡಿದ್ದಾರೆ.

ಸೃಷ್ಟಿಯ ಪ್ರಾರಂಭದಲ್ಲಿ ಪದ್ಮಯೋನಿ ಅಂದರೆ ಶ್ರೀಭಗವಂತನ ನಾಭಿಕಮಲದಿಂದ ಉದ್ಭವಿಸಿದ ಶ್ರೀಬ್ರಹ್ಮದೇವರು, "ನಾನು ಯಾವ ರೀತಿ ಸೃಷ್ಟಿ ಮಾಡಲಿ" ಎಂದು ಯೋಚಿಸುತ್ತಿದ್ದರು. ನಿರಂತರ ಅವರು ಹೀಗೆ ಚಿಂತನೆಯಲ್ಲಿ ಮಗ್ನರಾಗಿರುವಾಗ

ಅವರಿಗೆ ಜಲದ ಅಂತರಾಳದಿಂದ ಎರಡು ಬಾರಿ 'ತಪ' ಎಂಬ ಶಬ್ದ ಕೇಳಿಸಿತು. ಆದರೆ ಅವರು ಈ ಶಬ್ದವನ್ನು ಹೇಳಿದ ವಾಕ್ತಾರನನ್ನು ಕಾಣಲಾಗಲಿಲ್ಲ, ಇದರಿಂದಾಗಿ ಬ್ರಹ್ಮದೇವರಿಗೆ ಮನೋ ತಪಸ್ಸಿನಲ್ಲಿ ನಿಯುಕ್ತರಾಗುವ ಸಾಕ್ಷಾತ್ ಪ್ರೇರಣೆಯುಂಟಾಯಿತು. ಆಗ ಶ್ರೀಬ್ರಹ್ಮದೇವರು ಸ್ಥಿರ-ಮನಸ್ಸಿನಿಂದ ಒಂದು ಸಾವಿರ ದಿವ್ಯ ವರ್ಷಗಳಕಾಲ ತಪಸ್ಸನ್ನು ಮಾಡಿದರು. ಶ್ರೀಬ್ರಹ್ಮದೇವರ ತಪಸ್ಸಿನಿಂದ ಸಂತುಷ್ಟನಾದ ಶ್ರೀಭಗವಂತನು ಅವರ ಸಮಕ್ಷ ಪ್ರಕಟಿತನಾದನು ಹಾಗೂ ಅವರಲ್ಲಿ ಸೃಷ್ಟಿ ಮಾಡಲು ಶಕ್ತಿಯನ್ನು ಪ್ರಸಾದಿಸಿದನು. ಶ್ರೀಬ್ರಹ್ಮದೇವರಲ್ಲಿ ಸ್ವತಂತ್ರ ಸೃಷ್ಟಿಕರ್ತ ಎಂಬ ಅಭಿಮಾನವು ಉದಿತವಾಗದಿರಲಿ ಎಂದು ಶ್ರೀಭಗವಂತನು ಕೃಪಾಪೂರ್ವಕವಾಗಿ ಶಕ್ತಿ ಸಂಚಾರಮಾಡಿ ಅವರಿಗೆ ನಿರ್ವಿಶೇಷ ಜ್ಞಾನಕ್ಕಿಂತಲೂ ಶ್ರೇಷ್ಠವಾದ ತನ್ನ ಪರಮ ಗುಹ್ಯಜ್ಞಾನ, ತದ್ರೂಪವೈಭವ ಇತ್ಯಾದಿ ವಿಜ್ಞಾನ, ಪ್ರೇಮಭಕ್ತಿರೂಪ ರಹಸ್ಯ ಮತ್ತು ಆ ಪ್ರೇಮಭಕ್ತಿಯ ಅಂಗಸ್ವರೂಪ ಸಂಬಂಧಜ್ಞಾನದಿಂದ ಯುಕ್ತವಾದ ಶ್ರವಣ ಇತ್ಯಾದಿ ಸಾಧನಭಕ್ತಿಯ ಅಂಗಗಳ ಶ್ರವಣ ಮಾಡಿಸಿದರು. ಶ್ರೀಭಗವಂತನ ಮೂಲಕ ಶ್ರೀಬ್ರಹ್ಮದೇವರಿಗೆ ಪ್ರಸಾದಿಸಿದ ಈ ಸಾಕ್ಷಾತ್ ಜ್ಞಾನವನ್ನೇ 'ಚತುಃಶ್ಲೋಕಿ-ಭಾಗವತ' ಎಂದು ಕರೆಯಲಾಗಿದೆ.

ಈ ಚತುಃಶ್ಲೋಕವೇ ಶ್ರೀಮದ್ಭಾಗವತದ ಮೂಲ ಸೂತ್ರಾವಳಿ. ಈ ಸೂತ್ರಾವಳಿಯ ಆಧಾರದಲ್ಲೇ ಹದಿನೆಂಟು ಸಾವಿರ ಶ್ಲೋಕಗಳಿಂದ ಸಮನ್ವಿತವಾದ ಶ್ರೀಮದ್ಭಾಗವತವು ರಚನೆಯಾಗಿದೆ. ಯಾವ ರೀತಿ ಶ್ರೀಮದ್ಭಾಗವತದಲ್ಲಿ ಸರ್ಗ, ವಿಸರ್ಗ, ಸ್ಥಾನ, ಊಕ್ತಿ, ಪೋಷಣೆ, ಮನ್ವಂತರಕಥೆ, ಈಶಕಥೆ, ನಿರೋಧ, ಮುಕ್ತಿ ಮತ್ತು ಆಶ್ರಯ- ಈ ಹತ್ತು ವಿಶಯ ಹನ್ನೆರಡು ಸ್ಕಂಧಗಳಲ್ಲಿ ವಿಸ್ತೃತ ರೂಪದಿಂದ ವಿವರಿಸಲಾಗಿದೆ, ಅದೇ ಪ್ರಕಾರವಾಗಿ ಈ ಚತುಃಶ್ಲೋಕದಲ್ಲೂ ಸಹ ಸೂತ್ರ ರೂಪದಿಂದ ಈ ಹತ್ತು ವಿಷಯವು ವರ್ಣಿಸಲಾಗಿದೆ ಹಾಗೂ ಈ ಚತುಃಶ್ಲೋಕದಲ್ಲಿ ಸಂಬಂಧ, ಅಭಿದೇಯ ಮತ್ತು ಪ್ರಯೋಜನ ಎಂಬ ಹೆಸರಿನ ಮೂರು ತತ್ವಗಳನ್ನೂ ಸಹ ನಿರೂಪಣೆ ಮಾಡಲಾಗಿದೆ- ಮೊದಲ ಎರಡು ಶ್ಲೋಕಗಳ ಮೂಲಕ ಸಂಬಂಧತತ್ವ, ಮೂರನೆಯ ಶ್ಲೋಕದ ಮೂಲಕ ಪ್ರಯೋಜನತತ್ವ ಹಾಗೂ ನಾಲ್ಕನೆಯ ಶ್ಲೋಕದ ಮೂಲಕ ಅಭಿದೇಯತತ್ವದ ನಿರೂಪಣೆಯಾಗಿದೆ.

ಇದಕ್ಕೆ ಅತಿರಿಕ್ತವಾಗಿ ಈ 'ಚತುಃಶ್ಲೋಕಿ-ಭಾಗವತ'ವು ವೇದಗಳಿಗೂ ಸಹ ಸಾರ-ಸ್ವರೂಪ. ಸಮಗ್ರ ಋಗ್-ವೇದದ ಸಂಕ್ಷೇಪ-ಸ್ವರೂಪ ಅದರಲ್ಲಿ ಯಾವ ಪ್ರಥಮ ಮಂತ್ರವಿದೆಯೋ, ಅದರ ಅರ್ಥವು ಚತುಃಶ್ಲೋಕಿ-ಭಾಗವತದ ಪ್ರಥಮ ಶ್ಲೋಕದಲ್ಲಿ ವ್ಯಕ್ತವಾಗಿದೆ. ಸಮಗ್ರ ಯಜುರ್ವೇದದ ಸಂಕ್ಷೇಪ-ಸ್ವರೂಪವು ಅದರ ಯಾವ ಪ್ರಥಮ ಮಂತ್ರವಿದೆಯೋ, ಅದರ ಅರ್ಥ ಚತುಃಶ್ಲೋಕಿ ಭಾಗವತದ ದ್ವಿತೀಯ ಶ್ಲೋಕದಲ್ಲಿ ಹೇಳಲಾಗಿದೆ. ಸಮಗ್ರ ಅಥರ್ವಣವೇದದ ಸಕ್ಷೇಪ-ಸ್ವರೂಪವು ಅದರ ಯಾವ ಪ್ರಥಮ ಮಂತ್ರವಿದೆಯೋ, ಅದರ ಅರ್ಥವು ಚತುಃಶ್ಲೋಕಿ-ಭಾಗವತದ ತೃತೀಯ ಶ್ಲೋಕದಲ್ಲಿ ಸಂಗೃಹಿತವಾಗಿದೆ. ಸಮಗ್ರ ಸಾಮವೇದದ ಸಂಕ್ಷೇಪ-ಸ್ವರೂಪವು ಅದರ ಯಾವ ಪ್ರಥಮ ಮಂತ್ರವಿದೆಯೋ, ಅದರ ಅರ್ಥ ಚತುಃಶ್ಲೋಕಿ-ಭಾಗವತದ ಚತುರ್ಥ ಶ್ಲೋಕದಲ್ಲಿದೆ.

ಭಗವಾನ್ ಶ್ರೀನಾರಾಯಣನಿಂದ ಚತುಃಶ್ಲೋಕಿ-ಭಾಗವತವು ಪ್ರಾಪ್ತವಾದ ನಂತರ ಶ್ರೀಬ್ರಹ್ಮದೇವರು ಈ ಉಪದೇಶವನ್ನು ಶ್ರೀನಾದರಿಗೆ ನೀಡಿದರು ಹಾಗೂ ಅವರು ಇದನ್ನು ವಿಸ್ತಾರ ಮಾಡಲು ಆದೇಶನಿಡಿದರು. ಶ್ರೀನಾರದರು ಕೃಪಾಪೂರ್ವಕವಾಗಿ ಶ್ರೀಕೃಷ್ಣದ್ವೈಪಾಯನ ವೇದವ್ಯಾಸರಿಗೆ ಈ ಉಪದೇಶವನ್ನು ನೀಡಿ ಅವರಿಗೆ ಸಮಾಧಿಯೋಗದಿಂದ ಶ್ರೀಕೃಷ್ಣನ ಸಮಸ್ತ ಲೀಲೆಗಳ ದರ್ಶನವನ್ನು ಪಡೆದು ವಿಸ್ತಾರಪೂರ್ವಕವಾಗಿ ಅದನ್ನು ವರ್ಣನೆ ಮಾಡಲು ಹೇಳಿದರು. ಶ್ರೀವೇದವ್ಯಾಸರು ಸಮಾಧಿಯೋಗದಲ್ಲಿ ಶ್ರೀಕೃಷ್ಣನ ಸಮಸ್ತ ಲೀಲೆಗಳನ್ನು ದರ್ಶಿಸಿ ಸಂಪೂರ್ಣ ಶ್ರೀಮದ್ಭಾಗವತದ ರಚನೆಯನ್ನು ಮಾಡಿದರು ಹಾಗೂ ಇದನ್ನು ಶ್ರೀಶುಕದೇವ ಗೋಸ್ವಾಮಿಗಳಿಗೆ ಅಧ್ಯಾಯನ ನೀಡಿದರು. ಶ್ರೀಶುಕದೇವ ಗೋಸ್ವಾಮಿಗಳೇ ಶ್ರೀಮದ್ಭಾಗವತದ ಪ್ರಥಮ ವಕ್ತಾರರು.

ದ್ವಿತೀಯಸ್ಕಂದದ ನವಮ ಅಧ್ಯಾಯದ ೨೯ನೇ ಶ್ಲೋಕದಿಂದ ೩೮ನೇ ಶ್ಲೋಕದವರೆಗು ಹತ್ತು ಶ್ಲೋಕಗಳಲ್ಲಿ 'ಚತುಃಶ್ಲೋಕಿ-ಭಾಗವತ'ದ ಪ್ರಸಂಗ.

ಸರ್ವಪ್ರಥಮ ೨೯ನೇ ಶ್ಲೋಕದಲ್ಲಿ ಬ್ರಹ್ಮದೇವರು ಶ್ರೀಭಗವಂತನಲ್ಲಿ ಹೀಗೆ ಪ್ರಾರ್ಥನೆಯನ್ನು ಮಾಡುತ್ತಾರೆ, ಸೃಷ್ಟಿ ಮಾಡಿದ ನಂತರ ಅವರು ಸ್ವತಂತ್ರ ಸೃಷ್ಟಿಕರ್ತರಾಗುವ ಕಾರಣ ಅವರಲ್ಲಿ ಅಭಿಮಾನ ಉದಿತವಾಗದಿರಲಿ. ತದನಂತರ ೩೦ನೇ ಶ್ಲೋಕದಲ್ಲಿ ಶ್ರೀಭಗವಂತನು ಬ್ರಹ್ಮದೇವರಿಗೆ ಶ್ರೀಮದ್ಭಾಗವತ ಎಂಬ ಹೆಸರಿನ ನಮ್ಮ ಶಾಸ್ತ್ರದ ಸರ್ವಶ್ರೇಷ್ಠ ಪ್ರತಿಪಾದನೆಯ ನಾಲ್ಕು ವಸ್ತುಗಳ– ಜ್ಞಾನ, ವಿಜ್ಞಾನ, ರಹಸ್ಯ (ಪ್ರೇಮ) ಮತ್ತು ಅದರ ಅಂಗ (ಸಾಧನಭಕ್ತಿಯ) ವರ್ಣನೆಯನ್ನು ಮಾಡಿದ್ದಾರೆ ಹಾಗೂ ೩೧ನೇ ಶ್ಲೋಕದಲ್ಲಿ ಅವರ ಹೃದಯದಲ್ಲಿ ತನ್ನ {ಭಗವತ್} ವಿಜ್ಞಾನ ಮತ್ತು ರಹಸ್ಯವು ಆವಿರ್ಭೂತ ಮಾಡಲು ಶ್ರೀಭಗವಂತನು ಆಶೀರ್ವಾದ ಪ್ರದಾನ ಮಾಡಿದರು. ತದನಂತರ ಶ್ರೀಭಗವಂತನು ಬ್ರಹ್ಮದೇವರಿಗೆ ನಾಲ್ಕು ಶ್ಲೋಕಗಳಲ್ಲಿ ಅಂದರೆ ೩೨ನೇ ಶ್ಲೋಕದಿಂದ ೩೫ನೇ ಶ್ಲೋಕದವರೆಗು 'ಚತುಃಶ್ಲೋಕಿ–ಭಾಗವತ'ವನ್ನು ಹೇಳಿದರು. ಆ ನಾಲ್ಕು ಶ್ಲೋಕವೇ ಮೂಲ 'ಚತುಃಶ್ಲೋಕ', ಇದರಲ್ಲಿ ಉಕ್ತವಾದ ಪ್ರತಿಪಾದನೆಯ ನಾಲ್ಕು ವಸ್ತುಗಳನ್ನು ನಾಲ್ಕು ಶ್ಲೋಕಗಳಲ್ಲಿ ವರ್ಣಿಸಲಾಗಿದೆ. ಅದರ ನಂತರದ ೩೬ನೇ ಶ್ಲೋಕದಲ್ಲಿ ಶ್ರೀಭಗವಂತನು ಬ್ರಹ್ಮದೇವರಿಗೆ ಹೀಗೆ ಆಶ್ವಾಸನೆ ನೀಡಿದರು, 'ನನ್ನ ಮೂಲಕ ವಿವರಿಸಲ್ಪಟ್ಟ 'ಚತುಃಶ್ಲೋಕೀ–ಭಾಗವತವನ್ನು' ಏಕಾಗ್ರತಚಿತ್ತದಿಂದ ಸ್ಮರಣೆ ಮಾಡಿದಾಗ ನಿನ್ನಲ್ಲಿ ಸ್ವತಂತ್ರ ಸೃಷ್ಟಿಕರ್ತಾ ಎಂಬ ಅಭಿಮಾನವು ಉದಿತವಾಗುವುದಿಲ್ಲ' ಎಂದರು. ಅಂತ್ಯದ ಎರಡು ಶ್ಲೋಕಗಳನ್ನು ಅಂದರೆ ೩೭ ಮತ್ತು ೩೮ನೇ ಶ್ಲೋಕದಲ್ಲಿ ಶ್ರೀಭಗವಂತನು ಬ್ರಹ್ಮದೇವರ ಸಮಕ್ಷದಲ್ಲೇ ಅಂತರ್ಧಾನರಾದದ್ದು ಹಾಗೂ ಬ್ರಹ್ಮದೇವರ ಮೂಲಕ ಮೋಹರಹಿತರಾಗಿ ಲೋಕ–ಸೃಷ್ಟಿಕಾರ್ಯದಲ್ಲಿ ತತ್ಪರವಾದ ವಿಷಯದಲ್ಲಿ ಶ್ರೀಶುಕದೇವ ಗೋಸ್ವಾಮಿಗಳ ಮೂಲಕ ವಿವರಿಸಲ್ಪಟ್ಟಿದೆ. ಹೀಗೆ ಶ್ರೀಭಗವಂತನ ಮೂಲಕ ವಿವರಿಸಲ್ಪಟ್ಟ ನಾಲ್ಕು ಶ್ಲೋಕಗಳೂ (೩೧–೩೫) ಮೂಲ ಚತುಃಶ್ಲೋಕವಾದರೂ ಸಹ ಮುಂದೆ–ಹಿಂದೆ ಕೆಲವು ಶ್ಲೋಕಗಳೂ ಸಹ ಚತುಃಶ್ಲೋಕಿಗೆ ಸಂಬಂಧಪಟ್ಟಿರುವ (ಉಪಕ್ರಮ ಹಾಗೂ ಉಪಸಂಹಾರ) ಕಾರಣ ಅವುಗಳನ್ನು ಚತುಃಶ್ಲೋಕಿಯಲ್ಲಿ ಒಳಗೊಂಡಿವೆ ಎಂದೇ ತಿಳಿಯಲಾಗಿದೆ.

ಈ ಗ್ರಂಥದಲ್ಲಿ ಪ್ರಸ್ತುತ ಟೀಕೆಗಳು, ವಿವರಣೆಗಳು ಇತ್ಯಾದಿಯ ಕ್ರಮ ವಿಶ್ವವ್ಯಾಪಿ ಗೌಢಿಯ ಮಠಗಳ ಸಂಸ್ಥಾಪಕ ಜಗದ್ ಗುರು ನಿತ್ಯಲೀಲ ಪ್ರವಿಷ್ಟ ಓಂ ವಿಷ್ಣುಪಾದ ಶ್ರೀ ಶ್ರೀಮದ್ಭಕ್ತಿಸಿದ್ಧಾಂತ ಸರಸ್ವತಿ ಠಾಕುರ್ 'ಪ್ರಭಪಾದ್' ಮೂಲಕ ಪ್ರಕಾಶಿತ ಹಾಗೂ ಗೌಢಿಯ ಮಠದ ಮೂಲಕ ಪ್ರಕಾಶಿತವಾದ ಶ್ರೀಮದ್ಭಾಗವತದ ದ್ವಿತೀಯಸ್ಕಂಧದ ೯ನೇ ಅಧ್ಯಾಯದ ೩೦ ರಿಂದ ೩೫ ರವರೆಗಿನ ಶ್ಲೋಕಗಳಲ್ಲಿ ಪ್ರಸ್ತುತ 'ವೈಭವ–ವಿವೃತ್ತಿ'ಯ ಅನುಸಾರವಾಗಿ ನೀಡಲಾಗಿದೆ. 'ಮಧುರೇಣ–ಸಮಾಪಯೇತ್' ವಿಚಾರದ ಅನುಸಾರವಾಗಿ ಗೌಢಿಯ ವೈಷ್ಣವಾಚಾರ್ಯ ಶ್ರೀ ಶ್ರೀನಿವಾಸಾಚಾರ್ಯಪಾದರ 'ಚತುಃಶ್ಲೋಕೀ ಭಾಷ್ಯಮ್' ಹೆಸರಿನ ವ್ರಜರಸ–ಪರಕ ಟೀಕೆಯನ್ನು ಎಲ್ಲ ಟೀಕೆಗಳ ಅಂತ್ಯದಲ್ಲಿ ಕೊಡಲಾಗಿದೆ.

ಈ ಗ್ರಂಥದಲ್ಲಿ ಪ್ರಸ್ತುತವಾದ ಶ್ರೀವಲ್ಲಭಾಚಾರ್ಯಪಾದರ ವ್ಯಾಖ್ಯಾಯನಗಳು

ಸರಳ ಹಾಗೂ ವಿವರಣೆಯ ಅನುವಾದವನ್ನು ಶ್ರೀಸುಬೋಧಿನೀ ಪ್ರಕಾಶನ ಮಂಡಲ, ಜೋಧ್ಪೂರ್, ರಾಜಸ್ಥಾನದ ಮೂಲಕ ಪ್ರಕಾಶಿತ ಶ್ರೀಮದ್ಭಾಗವತದ ದ್ವಿತೀಯಸ್ಕಂಧದಿಂದ ಸಂಗ್ರಹಿಸಲಾಗಿದೆ. ಈ ಟೀಕೆಯ ಅನುವಾದಕರು ಶ್ರೀನಾಥದ್ವಾರಕೆಯ ಶ್ರೀನಾರಾಯಣಜೀ ಶಾಸ್ತ್ರಿಗಳು.

ಈ ಗ್ರಂಥದ ಫಾಂಟ್–ಲಿಪಿ ಪ್ರಸ್ತುತ ಪಡಿಸಲು, ಪ್ರೂಫ್–ಸಂಶೋಧನೆ, ಲೇ–ಔಟ್ ಇತ್ಯಾದಿ ಸೇಕಾರ್ಯಗಳಿಗಾಗಿ ಶ್ರೀಮನ್ ಭಕ್ತಿವೇದಾಂತ ಮಾಧವ ಮಹಾರಾಜರು, ಪರಮ ವಿದ್ಯಾಸಂಪನ್ನರಾದ ಪುತ್ರಿ ಮಧು ಖಂಡೇಲ್ವಾಲ ಎಮ್.ಎ, ಪೀ.ಎಚ್.ಡಿ ರವರು, ಶ್ರೀಸುವಲ ಸಖಾ ಬ್ರಹ್ಮಚಾರಿ, ಶ್ರೀವಿಜಯಕೃಷ್ಣ ಬ್ರಹ್ಮಚಾರಿ, ಶ್ರೀಅಚ್ಯುತಾನಂದ ಬ್ರಹ್ಮಚಾರಿ, ಪುತ್ರಿ ಶಾಂತಿ ದಾಸಿ, ಶ್ರೀಕೃಷ್ಣಕಾರುಣ್ಯ ಬ್ರಹ್ಮಚಾರಿ ಹಾಗೂ ಮುಖಪೃಷ್ಠದ ಚಿತ್ರಕ್ಕಾಗಿ ಶ್ರೀಮತೀ ಶ್ಯಾಮರಾಣೀ ದಾಸಿ ಮುಂತಾದವರ ಸೇವಾ–ಪ್ರಯತ್ನಗಳು ಪ್ರಶಂಸನೀಯ ಹಾಗೂ ವಿಶೇಷ ಉಲ್ಲೇಖನೆಗೆ ಯೋಗ್ಯವಾದದ್ದು. ಶ್ರೀಶ್ರೀಗುರು–ಗೌರಂಗ–ಗಾಂಧರ್ವಿಕಾ–ಗಿರಿಧಾರಿ ಇವರಲ್ಲಿ ವಿಶೇಷ ಕೃಪಾ–ಆಶೀರ್ವಾದ ನೀಡಲಿ, ಅವರ ಶ್ರೀಚರಣಗಳಲ್ಲಿ ಇದೇ ನನ್ನ ಪ್ರಾರ್ಥನೆ.

ನನಗೆ ವಿಶ್ವಾಸವಿದೆ, ತತ್ವ–ಜ್ಞಾನದ ದಾಹವಿರುವ ವಿದ್ವಜ್ಜನರಿಗೆ ಈ ಗ್ರಂಥವು ಅತ್ಯಂತ ಆದರವಾಗಬಹುದು.

ಅಂತ್ಯದಲ್ಲಿ ಭಗವತ್ಕರುಣೆಯ ಘನವಿಗ್ರಹ ಪರಮಾರಾಧ್ಯತಮ ಶ್ರೀಗುರುಪಾದಪದ್ಮವು ನನ್ನಲ್ಲಿ ವಿಶೇಷ ಕರುಣಾಮಳೆಯನ್ನು ಸುರಿಸಲಿ, ಇದರಿಂದ ನಾನು ಅವರ ಮೋನೋಽಭೀಷ್ಟ ಸೇವೆಯಲ್ಲಿ ಅಧಿಕಾಧಿಕ ಅಧಿಕಾರವನ್ನು ಪ್ರಾಪ್ತಿಸುಕೊಳ್ಳುವಂತ್ತಾಗಲಿ– ಇದೇ ಅವರ ಶ್ರೀಕೃಷ್ಣಪ್ರೇಮ ಪ್ರದಾನಕಾರಿ ಶ್ರೀಚರಣಗಳಲ್ಲಿ ಸಕಾತರ ಪ್ರಾರ್ಥನೆ.

ಶ್ರೀಲ ಗುರುಪಾದಪದ್ಮರ
ಶುಭ ಆವಿರ್ಭಾವ ತಿಥಿ
೨೪ ಫೆಬ್ರವರಿ ೨೦೦೮

ಶ್ರೀಹರಿ–ಗುರು–ವೈಷ್ಣವ–ಕೃಪಾಲೇಶ–ಪ್ರಾರ್ಥಿ
ದೀನ–ಹೀನ
ತ್ರಿದಂಡಿಭಿಕ್ಷು ಶ್ರೀಭಕ್ತಿವೇದಾಂತ ನಾರಯಣ











ಪ್ರಥಮ-ಶ್ಲೋಕ

ಶ್ರೀಬ್ರಹ್ಮದೇವರ ಮೂಲಕ ತಮ್ಮಲ್ಲಿ ಸೃಷ್ಟಿಕರ್ತ ಎಂಬ ಪ್ರಬಲ ಅಹಂಕಾರ ಉದಿತವಾಗದಿರಲೆಂದು ಶ್ರೀಭಗವಂತನಲ್ಲಿ ಪ್ರಾರ್ಥನೆ

ಶ್ರೀಬ್ರಹ್ಮೊವಾಚ–

ಯಾವತ್ ಸಖಾ ಸಖ್ಯುರಿವೇಶ ತೇ ಕೃತಃ
ಪ್ರಜಾವಿಸರ್ಗೇ ವಿಭಜಾಮಿ ಭೋ ಜನಮ್ ।
ಅವಿಕ್ಲವಸ್ತೇ ಪರಿಕರ್ಮಣಿ ಸ್ಥಿತೊ
ಮಾ ಮೇ ಸಮುನ್ನದ್ಧ-ಮದೋಽಜಮಾನಿನಃ ॥

(ಶ್ರೀಮದ್ಭಾಗವತಂ ೨/೯/೨೯)

ಅನ್ವಯ

[ಶ್ರೀಬ್ರಹ್ಮೋವಾಚ (ಶ್ರೀಬ್ರಹ್ಮ ಹೇಳಿದನು)] ಭೋಃ ಈಶ (ಹೇ ಈಶ!) ಸಖ್ಯುಃ ಸಖಾ ಇವ ಕೃತಃ (ಸಖ ಯಾವ ರೀತಿ ತನ್ನ ಸಖನೊಂದಿಗೆ ವರ್ತಿಸುತ್ತಾನೋ) ತೇ (ನೀವು) [ಸಹ ಅದೇ ರೀತಿ ನನ್ನ ಕರ ಸ್ಪರ್ಶಾದಿಗಳ ಮೂಲಕ ಸಮಾನರಂತೆ ನನ್ನೊಂದಿಗೆ ಸಮ್ಮಾನಪೂರ್ವಕವಾಗಿ ನಡೆದುಕೊಂಡಿರಿ, ಆದ್ದರಿಂದ ನನ್ನ ಪ್ರಾರ್ಥನೆ ಏನೆಂದರೆ ನಾನು] ಯಾವತ್ (ಎಲ್ಲಿಯವರೆಗು) ಅವಿಕಲ್ವಃ (ಸ್ಥಿರಚಿತ್ತನಾಗಿ) ಜನಂ ವಿಭಜಾಮಿ (ಉತ್ತಮ-ಮದ್ಯಮಾದಿಗಳ ಭೇದಗಳಿಂದ ವಿಭಾಗಮಾಡಿ) ಪ್ರಜಾವಿಸರ್ಗೇ (ಪ್ರಜಾಸೃಷ್ಟಿ-ಕಾರ್ಯರೂಪವನ್ನು) ತೆ (ನಿಮ್ಮ) ಪರಿಕರ್ಮಣಿ ಸ್ಥಿತೊ (ಸೇವೆಯಲ್ಲಿ ನಿರತನಾಗಿರುತ್ತೇನೋ) [ಅಲ್ಲಿಯವರೆಗು] ಅಜಮಾನಿನಃ ('ನಾನೂ ಸಹ ಅಜ' ಅಂದರೆ ನಿಮ್ಮಂತೆ ಸ್ವತಂತ್ರ ಭಗವಂತ, ಚಕ್ರವರ್ತಿ ಹಾಗೂ ನಿಮ್ಮ ಸಮಕ್ಷ ಇದ್ದೇನೆ-ಈ ರೀತಿಯಾದ) ಸಮುನ್ನದ್ಧಃ (ಪ್ರಬಲ) ಮದಃ (ಅಭಿಮಾನ) ಮೆ (ನನ್ನಲ್ಲಿ) [ಉದಿತ] ಮಾ (ಆಗದಿರಲಿ) ॥೨೯॥

ಅನುವಾದ

(ಶ್ರೀಬ್ರಹ್ಮ ಹೇಳಿದನು)- ಹೇ ಭಗವಂತ! ಒಬ್ಬ ಸಖ ಯಾವ ರೀತಿ ತನ್ನ ಸಖನೊಂದಿಗೆ ವರ್ತಿಸುತ್ತಾನೋ, ಹಾಗೆ ನೀವೂ ಸಹ ನನ್ನ ಕೈ ಸ್ಪರ್ಶಾದಿಗಳ ಮೂಲಕ ನನ್ನೊಂದಿಗೆ ಅದೇ ರೀತಿ ಸಮ್ಮಾನಪೂರ್ವಕವಾಗಿ ನಡೆದುಕೊಂಡಿರಿ. ಆದ್ದರಿಂದ ನನ್ನ ಪ್ರಾರ್ಥನೆ ಏನೆಂದರೆ ನಾನು ಎಲ್ಲಿಯವರೆಗು ಸ್ಥಿರ-ಚಿತ್ತನಾಗಿ ಉತ್ತಮ-ಮಧ್ಯಮಾದಿಗಳ ಭೇದಗಳಿಂದ ಪ್ರಜಾಸೃಷ್ಟಿ-ಕಾರ್ಯರೂಪವಾಗಿ ನಿಮ್ಮ ಸೇವೆಯಲ್ಲಿ ನಿರತನಾಗಿರುತ್ತೇನೋ, ಅಲ್ಲಿಯವರೆಗು- 'ನಾನೂ ಸಹ ಅಜನು' (ಅಂದರೆ ನಿಮ್ಮಂತೆ ಸ್ವತಂತ್ರ ಭಗವಂತ, ಚಕ್ರವರ್ತಿ ಹಾಗೂ ನಿಮ್ಮ ಸಮಕ್ಷ ಇದ್ದೇನೆ) 'ಎಂಬ ಈ ರೀತಿಯಾದ ಪ್ರಬಲ ಅಭಿಮಾನ ನನ್ನಲ್ಲಿ ಉದಿತವಾಗದಿರಲಿ. ॥೨೯॥

ಶ್ರೀಲ ವಿಶ್ವನಾಥ ಚಕ್ರವರ್ತಿ ಠಾಕುರರು ರಚಿಸಿರುವ 'ಸಾರಾರ್ಥದರ್ಶಿನಿ ಟಿಪ್ಪಣಿ'

ಮನೋವಾಂಛಿತಮಭಿವ್ಯಂಜಯನ್ ಪ್ರಾರ್ಥಯತೇ– ಯಾವದಿತಿ । ಹೇ ಈಶ! ತೇ ತ್ವಯಾ, ಸಖ್ಯುಃ ಸಖೇವ ದಾಸಾಭಾಸೋಽಪ್ಯಹಂ ಕೃತಃ ಕರಸ್ಪರ್ಶಾದಿನಾ ವ್ಯವಹೃತಃ, ಅತಃ ಸಖ್ಯಭಕ್ತಿಮೇವಾಹಂ ಪ್ರಾಪ್ನುಯಾಮಿತಿ । ಕಿಂಚ, *'ಯಾವದಧಿಕಾರಮವ ಸ್ಥಿತಿರಾಧಿಕಾರಿಕಾಣಾಮ್'* ಇತಿ ನ್ಯಾಯೇನ, ಸ್ವಾಯುಃ ಪರ್ಯಂತಂ ಯಾವತ್, ಪ್ರಜಾನಾಂ ವಿಸರ್ಗ ವಿವಿಧಸೃಷ್ಟೌ, ಭೋಃ ಪರಮೇಶ್ವರ, ಜನಂ ವಿಭಜಾಮಿಉತ್ತಮಾಧಮಮಧ್ಯಮಬ ೇದೇನ ವಿಭಕ್ತಂ ಕರೋಮಿ । ಕೀದೃಶಃ' ತೇ ತವ, ಪರಿಕರ್ಮಣಿ ಪರಿಚರ್ಯಯಾಮ್, ಅವಿಕ್ಲವೋಽವ್ಯಾಕುಲಃ, ಸಾವಧಾನತಯಾ ಸ್ಥಿತಃ ಸನ್ನಿತ್ಯಾರ್ಥಃ ।ತಾವತ್ ಸಮುನ್ನದ್ಧಃ ಉತ್ಕಟಃ ಮದಃ, ಮೇ ಮಮ ಮಾ ಭೂತ್ ॥೨೯॥

ಭಾವಾನುವಾದ– ಶ್ರೀಬ್ರಹ್ಮ 'ಯಾವದ್' ಮುಂತಾದ ಶ್ಲೋಕದ ಮೂಲಕ ಅವರ ಮನಸ್ಸಿನ ಅಭಿಲಾಷೆಯನ್ನು ಪ್ರಕಟಗೊಳ್ಳಿಸುತ್ತಾ ಹೀಗೆ ಪ್ರಾರ್ಥನೆ ಮಾಡುತ್ತಿದ್ದಾರೆ– 'ಹೇ ಈಶ (ಹೇ ಪ್ರಭೋ)! ಅದಾಗ್ಯೂ ನಾನು ನಿಮ್ಮ ದಾಸಭಾಸನು, ಆದರೂ ಪ್ರಾಕೃತ ಜಗತ್ತಿನಲ್ಲಿ ಒಬ್ಬ ಮಿತ್ರ ಯಾವ ರೀತಿ ತನ್ನ ಮಿತ್ರನೊಂದಿಗೆ ವರ್ತಿಸುತ್ತಾನೋ, ಅದೇ ರೀತಿ ನೀವು ನನ್ನ ಕರ ಸ್ಪರ್ಶಾದಿಗಳ ಮೂಲಕ ಮಿತ್ರನ ಸಮಾನವಾಗಿ ನನ್ನನ್ನು ಗೌರವಿಸಿದಿರಿ. ಆದ್ದರಿಂದ ನಾನು ನಿಮ್ಮ ಸಖ್ಯ–ಭಕ್ತಿಯನ್ನು ಪ್ರಾಪ್ತಿಸಿಕೊಂಡಿದ್ದೇನೆ.' ಅನಂತರ ಹೇಳುತ್ತಿದ್ದಾರೆ– 'ಎಲ್ಲಿಯವರೆಗು ಅಧಿಕಾರಿ ಜನರ ಅಂದರೆ ಅಧಿಕಾರವನ್ನು ಪಡೆದ ಜನರ ಅಧಿಕಾರದ ಅವದಿ ಇರುತ್ತದೋ'– ಈ ನ್ಯಾಯದ ಅನುಸಾರವಾಗಿ,' ಹೇ ಪರಮೇಶ್ವರ! ನಾನು ನನ್ನ ಪರಮಾಯುವಿನ ಸಮಾಪ್ತಿಯವರೆಗೂ ಅಂದರೆ ನಾನು ಈ ಬ್ರಹ್ಮ–ಪದವಿಯಲ್ಲಿರುವವರೆಗು ಪ್ರಜಾಜನರ ವಿವಿಧ ಸೃಷ್ಟಿಯ ವಿಶಯದಲ್ಲಿ ಉತ್ತಮ, ಮಧ್ಯಮ ಹಾಗೂ ಅಧಮ ಇತ್ಯಾದಿ ಭೇದಗಳಿಂದ ವಿಭಾಗವಾಗಿಸುತ್ತೇನೆ. ಅರ್ಥಾತ್ ಹೇಳಿ, ಯಾವ ರೀತಿ ಸೃಷ್ಟಿ ಮಾಡಲಿ' ಆದ್ದರಿಂದ ಹೇಳುತ್ತಿದ್ದೇನೆ– ನಿಮ್ಮ ಸೇವೆಯಲ್ಲಿ ವ್ಯಾಕುಲತೆ ಇಲ್ಲದವನಾಗಿ ಅಂದರೆ ಆಲಸ್ಯವಿಲ್ಲದೆ ಹಾಗೂ ಸಾವಧಾನಪೂರ್ವಕವಾಗಿ ಸ್ಥಿರನಾಗಿದ್ದು, ಎಲ್ಲಿಯವರೆಗೂ ನಾನು ನಿಮ್ಮ ಸೇವೆಯಲ್ಲಿ ನಿರತನಾಗಿರುತ್ತೇನೋ, ಅಲ್ಲಿಯವರೆಗೂ ನನ್ನಲ್ಲಿ ಉತ್ಕಟ ಗರ್ವ ಉತ್ಪನ್ನವಾಗದಿರಲಿ ಅರ್ಥಾತ್ 'ನಾನೂ ಸಹ ಒಬ್ಬ ಸ್ವತಂತ್ರ ಪುರುಷನು'– ಈ ರೀತಿಯಾದ ಪ್ರಬಲ ಅಭಿಮಾನ ನನ್ನ ಚಿತ್ತದಲ್ಲಿ ಉದಿತವಾಗದಿರಲಿ. ॥೨೯॥

ಶ್ರೀಲ ಭಕ್ತಿಸಿದ್ಧಾಂತ ಸರಸ್ವತಿ ಠಾಕುರ್ 'ಪ್ರಭುಪಾದ್'ರ 'ವಿವೃತ್ತಿ'

ಪ್ರಣಿಪಾತ (ನಮ್ರತೆ), ಪರಿಪ್ರಶ್ನೆ ಮತ್ತು ಸೇವೆ– ಈ ಮೂರು ಪ್ರಕಾರದ ವೃತ್ತಿಗಳೊಂದಿಗೆ ಯಾವ ಸಮಯ ಜೀವಿ ತತ್ವದರ್ಶಿ ಜನರ ಸಮೀಪ ಇರುತ್ತಾನೋ, ಅಂತಹ ಸಮಯದಲ್ಲಿ ತತ್ವದರ್ಶಿಗಳು ಆ ಜೀವಿಯ ಸೇವೋನ್ಮುಖವನ್ನು ಕಂಡು

ಅವನಿಗೆ ತತ್ತ್ವ-ಜ್ಞಾನದ ವಿಚಾರದಲ್ಲಿ ಉಪದೇಶ ಮಾಡುತ್ತಾರೆ. ಅದೇ ಸಮಯದಲ್ಲಿ ಆ ಸೇವೋನ್ಮುಖ ಜೀವಿಯ ಹೃದಯದಲ್ಲಿ ಶುದ್ಧ ಅಹೈತುಕ ಜ್ಞಾನವು ಪ್ರಕಟಗೊಳ್ಳುತ್ತದೆ. ಪೂರ್ವಕಾಲದಲ್ಲಿ ಶ್ರೀಬ್ರಹ್ಮದೇವರು ಸ್ವಯಂ ತಾವೇ ಅನೇಕ ಪ್ರಕಾರದ ಪರಿಶೋಧನೆಗಳನ್ನು ನಡೆಸಿದರು, ಆದರೆ ಅವರಿಗೆ ಸ್ವಯಂ ಹಾಗೂ ಭಗವತ್-ಸ್ವರೂಪದ ಜ್ಞಾನವು ಪ್ರಾಪ್ತಿಸಲಿಲ್ಲ. ಆದ್ದರಿಂದ ಈಗ ಅವರು ಶ್ರೀಭಗವಂತನಲ್ಲಿ ಸಂಪೂರ್ಣವಾಗಿ ಶರಣಾಗತರಾಗಿ ಭಗವತ್-ಪ್ರೀತಿಪೂರ್ವಕ ಸೇವೆ ಮತ್ತು ಅವರಿಗೆ ಸಂಬಂಧಪಟ್ಟ ಜ್ಞಾನದ ಪ್ರಾಪ್ತಿಗಾಗಿ ಇಚ್ಛುಕರಾಗಿದ್ದಾರೆ. ಶ್ರೀಮದ್ಭಗವದ್ಗೀತೆಯಲ್ಲೂ ಸಹ ಶ್ರೀಭಗವಂತನು ಅರ್ಜುನನನ್ನು ಲಕ್ಷ್ಯವಾಗಿಟ್ಟುಕೊಂಡು ಇದೇ (ತತ್-ವಿಷಯದ) ಉಪದೇಶವನ್ನು ಮಾಡಿದರು. ಶ್ರೀಕೃಷ್ಣ ಅರ್ಜುನನ ಸಖ. ಯುದ್ಧ-ಕ್ಷೇತ್ರದಲ್ಲಿ ಅವರ ಸಮ್ಮುಖ ಉಪಸ್ಥಿತರಾಗಿರುವ ಆತ್ಮೀಯ-ಸ್ವಜನ, ಗುರುಜನ ಹಾಗೂ ಮುಂತಾದವರನ್ನು ಯುದ್ಧದಲ್ಲಿ ಸಂಹರಿಸಬೇಕಾಗುತ್ತದೆ, ಇದನ್ನು ಯೋಚಿಸಿ ಅರ್ಜುನನ ಹೃದಯದಲ್ಲಿ ದುಃಖವು ಉತ್ಪನ್ನವಾಗುತ್ತದೆ. ಮೊದಲು ಅರ್ಜುನನು ಸ್ವತಃ ಅನೇಕ ಪ್ರಕಾರದಿಂದ ಸ್ಥಿರನಾಗಿರುತ್ತಾನೆ, ಆದರೆ ಮತ್ತೆ ಅವನ ಮನಸ್ಸು ಧರ್ಮಸಂಕಟದಲ್ಲಿ ಸಿಲುಕಿಕೊಳ್ಳುತ್ತದೆ. ಯಾವುದು ವಾಸ್ತವ ಕರ್ತವ್ಯ, ಅನ್ನುವುದನ್ನು ಸ್ಥಿರಪಡಿಸಲು ಸಾಧ್ಯವಾಗುವುದಿಲ್ಲ. ಅವರ ಸಮ್ಮುಖದಲ್ಲೇ ಸಖ ಶ್ರೀಕೃಷ್ಣ ವಿರಾಜಮಾನನಾಗಿದ್ದನು. ಆ ಸಮಯದಲ್ಲಿ ಅರ್ಜುನನು ಶ್ರೀಕೃಷ್ಣನನ್ನು ಕೇವಲ 'ಸಖ' ಎಂದು ಮಾತ್ರವೇ ತಿಳಿದಿರಲಿಲ್ಲ, ಗುರು ಎಂದೂ ಸಹ ತಿಳಿದಿದ್ದನು. ಅರ್ಜುನನು ಶ್ರೀಕೃಷ್ಣನ 'ಶಿಷ್ಯ' (ಶಾಸನ ಯೋಗ್ಯ)ನಾಗಿ ಅವರಿಂದ ಶಿಕ್ಷಣವನ್ನು ಪಡೆಯಲು ಸಿದ್ಧನಾದನು. ಈಗ ಅವನು ಸಂಪೂರ್ಣವಾಗಿ ಶರಣಾಗತನಾಗಿ ಹೀಗೆ ಹೇಳುತ್ತಾನೆ (ಶ್ರೀಮದ್ಭಗವದ್ಗೀತ ೨/೭)-

ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಂ ಪ್ರಪನ್ನಮ್ ।

ಅರ್ಥಾತ್ 'ನಾನು ನಿಮ್ಮ ಶಿಷ್ಯ ಮತ್ತು ನಿಮಗೆ ಶರಣಾಗತನಾದವನು, ಆದ್ದರಿಂದ ನೀವು ನನಗೆ ಶಿಕ್ಷಣವನ್ನು ಪ್ರಸಾದಿಸಿ ನನ್ನನ್ನು ಪರಿಶುದ್ಧಗೊಳಿಸಿರಿ'.

ಇಲ್ಲಿ ಶ್ರೀಬ್ರಹ್ಮದೇವರು ಶ್ರೀಭಗವಂತನಲ್ಲಿ ಹೇಳುತ್ತಿರುವುದೇನೆಂದರೆ, ಈ ಪ್ರಕಾರ ಲೌಕಿಕ ಸಖನಂತೆ ಕೈಹಿಡಿಯುವ ಮೂಲಕ ಸನ್ಮಾಮ ಮಾಡಿರುವುದರಿಂದ ಅವರಲ್ಲಿ ಅಭಿಮಾನ ಉತ್ಪನ್ನವಾಗಬಹುದು. ಆದ್ದರಿಂದ ಅವರು 'ನಾನು ಸೃಷ್ಟಿಕರ್ತನು ಹಾಗೂ ನಾನೂ ಸಹ ಸ್ವತಂತ್ರ ಭಗವಂತನು'- ಈ ರೀತಿಯಾದ ಪ್ರಬಲ ಅಹಂಕಾರ ಉದ್ಭವಿಸದಿರಲಿ, ಎಂದು ಇದಕ್ಕಾಗಿ ಶ್ರೀಬ್ರಹ್ಮದೇವರು ಭಗವಂತನ-ಕೃಪೆಯನ್ನು ಬೇಡುತ್ತಿದ್ದಾರೆ. ಇದಕ್ಕೆ ಕಾರಣವೇನೆಂದರೆ ಶ್ರೀಭಗವಂತನೇ ವಾಸ್ತವದಲ್ಲಿ ಸೃಷ್ಟಿಕರ್ತ, ಬ್ರಹ್ಮದೇವರು ಕೇವಲ ಯಂತ್ರಮಾತ್ರವಷ್ಟೆ. ಸೂರ್ಯಕಾಂತಿಮಣಿಯು ಸೂರ್ಯನ ಕಿರಣಗಳ ಪ್ರಭಾವದ ಮೂಲಕ ಅನ್ಯ ವಸ್ತುಗಳನ್ನು ದಗ್ಧಗೊಳಿಸುತ್ತದೆ, ಆದರೆ ಇಲ್ಲಿ ಸೂರ್ಯ ಯಾವ ರೀತಿ ಮೂಲ ರೂಪದಲ್ಲಿ ದಹನಕ್ಕೆ ಕಾರಣನೋ, ಅದೇ ರೀತಿ

ಬ್ರಹ್ಮದೇವರೂ ಸಹ ಶ್ರೀವಿಷ್ಣುವಿನ ಶಕ್ತಿಯಿಂದ ಶಕ್ತಿ–ಸಂಪನ್ನರಾಗಿ ವಿಶ್ವಸೃಷ್ಟಿ ಮಾಡಲು ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಾರೆ.

ಶ್ರೀಭಗವಂತನಲ್ಲಿ ನಿತ್ಯ ಶರಣಾಗತಿ ಮತ್ತು ಭಗವಂತನ–ಕೃಪೆಯನ್ನು ಬಿಟ್ಟರೆ ಜೀವಿ ಈ ಭೀಕರವಾದ ಅಹಂಕಾರವೆಂಬ ಕೈಗಳಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಜೀವಿ ಯಾವ ರೀತಿ ಶ್ರೀಭಗವಂತನ ಚರಣಗಳಲ್ಲಿ ಆದರವಿಲ್ಲದೇ ಗೌರವವಿಲ್ಲದೇ ಅವನಲ್ಲಿನ ಶರಣಾಗತಿಯ ಭಾವನೆಯನ್ನು ತ್ಯಾಗಮಾಡುತ್ತಾನೋ, ಅದೇ ಕಾಲದಲ್ಲಿ ಅವನಲ್ಲಿ 'ನಾನು ಸ್ವತಂತ್ರ ಭಗವಂತನು'– ಈ ರೀತಿಯಾದ ದುರ್ಬುದ್ಧಿಯು ಉತ್ಪನ್ನವಾಗುತ್ತದೆ. ಇದೇ ಭೀಕರ ಭಯಂಕರವಾದ ಅಹಂಕಾರದ ಕಾರಣ ನಿರ್ವಿಶೇಷವಾದಿ ಹಾಗೂ ಅಸುರಗಣ ವ್ಯಕ್ತಿಗಳು ಪತಿತರಾಗುತ್ತಿದ್ದಾರೆ, ಏಕೆಂದರೆ ಶ್ರೀಭಗವಂತನಲ್ಲಿ ಅವರ ಸಾಧನೆ ನಿತ್ಯವಾಗಿರುವುದಿಲ್ಲ. ಆದ್ದರಿಂದ ಆದಿಗುರು ಶ್ರೀಬ್ರಹ್ಮದೇವರು ಶ್ರೀಭಗವಂತನಲ್ಲಿ ಈ ರೀತಿಯಾಗಿ ಪ್ರಾರ್ಥನೆ ಮಾಡಿದರು ಹಾಗೂ ಈ ರೀತಿ ಶರಣಾಗತಿಯ ಮೂಲಕ ಪ್ರಾರ್ಥನೆಯ ಫಲದಿಂದ ಅವರಿಗೆ ಶ್ರವಣದ (ಭಗವಂತ ಹೇಳುವುದನ್ನು ಕೇಳುವ) ಯೋಗ್ಯತೆಯನ್ನು ಪ್ರಾಪ್ತಿಸಿಕೊಂಡರು. ಈ ಶ್ರವಣದ ಯೋಗ್ಯತೆ ಪ್ರಾಪ್ತಿಯಾದ ಕಾರಣದಿಂದಲೇ ಶ್ರೀಭಗವಂತನ ಮೂಲಕ ಅವರ (ಬ್ರಹ್ಮನ) ಸಮೀಪ ಆದಿ–ಚತುಃಶ್ಲೋಕಿ–ಭಾಗವತದ ಮುಂದಿನ ಶ್ಲೋಕದಲ್ಲಿ ಹೇಳುತ್ತಿದ್ದಾರೆ. ॥೨೯॥

ದ್ವಿತೀಯ–ಶ್ಲೋಕ

ಶ್ರೀಭಗವಂತನ ಮುಕಾಂತರ ಪರಮ–ಭಾಗವತರಾದ ಬ್ರಹ್ಮದೇವರಿಗೆ ಶ್ರೀಮದ್ಭಾಗವತ ಹೆಸರಿನ ನಮ್ಮ ಶಾಸ್ತ್ರದ ಸರ್ವಶ್ರೇಷ್ಠ ಪ್ರತಿಪಾದನೆಯ ನಾಲ್ಕು ವಸ್ತುಗಳ ವಿವರಣೆ

ಶ್ರೀಭಗವಾನುವಾಚ–

ಜ್ಞಾನಂ ಪರಮಗುಹ್ಯಂ ಮೇ ಯದ್ವಿಜ್ಞಾನಸಮನ್ವಿತಮ್ ।
ಸರಹಸ್ಯಂ ತದಂಗಚ ಗೃಹಾಣ ಗದಿತಂ ಮಯಾ ॥

(ಶ್ರೀಮದ್ಭಾಗವತಂ ೨/೯/೩೦)

ಅನ್ವಯ

ಶ್ರೀಭಗವಾನ್ ಉವಾಚ (ಶ್ರೀಭಗವಂತ ಹೇಳಿದನು) [ಹೇ ಬ್ರಹ್ಮನ್!] ವಿಜ್ಞಾನ (ಭಗವಂತನ ಸ್ವರೂಪ ಜ್ಞಾನ) [ಮತ್ತು] ಸರಹಸ್ಯಂ (ರಹಸ್ಯಮಯವಾದ ಪ್ರೇಮಭಕ್ತಿ) ಸಮನ್ವಿತಮ್ (ಅದರೊಂದಿಗೆ) ಪರಮಗುಹ್ಯಂ (ಅತ್ಯಂತ ಗೋಪ್ಯವಾದ) ಯತ್ ಮೇ ಜ್ಞಾನಂ (ಶಬ್ದ–ಶಾಸ್ತ್ರಗಳಲ್ಲಿ ಪ್ರತಿಪಾದಿಸುವ ನನ್ನ ಜ್ಞಾನ) ಚ್ (ಮತ್ತು) ತದಂಗಮ್ (ಆ ಪ್ರೇಮಭಕ್ತಿಯ ಅಂಗವಾದ ಸಾಧನಭಕ್ತಿಯನ್ನು) ಮಯಾ ಗದಿತಂ (ನಾನು ಹೇಳುತ್ತಿದ್ದೇನೆ) [ನೀನು ಇದನ್ನು] ಗೃಹಣ (ಗ್ರಹಿಸು) ॥೩೦॥

ಅನುವಾದ

ಶ್ರೀಭಗವಂತನು ಹೀಗೆ ಹೇಳಿದನು– ಹೇ ಬ್ರಹ್ಮ! ಭಗವತ್ ಸ್ವರೂಪ ಜ್ಞಾನ ಮತ್ತು ರಹಸ್ಯಮಯವಾದ ಪ್ರೇಮಭಕ್ತಿಯೊಂದಿಗೆ ಅತ್ಯಂತ ಗೋಪನೀಯವಾದ ಶಬ್ದ–ಶಾಸ್ತ್ರಗಳಲ್ಲಿ ಪ್ರತಿಪಾದಿಸುವ ನನ್ನ (ಭಗವಂತನ) ಜ್ಞಾನ ಮತ್ತು ಈ ಪ್ರೇಮಭಕ್ತಿಯ ಅಂಶವಾದ–ಸಾಧನಭಕ್ತಿಯನ್ನು ನಾನು ಹೇಳುತ್ತಿದ್ದೇನೆ, ನೀನು ಇದನ್ನು ಗ್ರಹಿಸು ॥೩೦॥

ಶ್ರೀಲ ಭಕ್ತಿವಿನೋದ ಠಾಕುರರು ಬರೆದಿರುವ ವ್ಯಾಖ್ಯಾಯನ

ಅದ್ವಯ ಜ್ಞಾನವೇ ಪರಮತತ್ತ್ವವು. ಶ್ರೀಭಗವಂತನು ಹೀಗೆ ಹೇಳಿದನು– ಹೇ ಬ್ರಹ್ಮನ್! ನನ್ನ ಜ್ಞಾನವು, ಅದ್ವಯ ಮತ್ತು ಪರಮ ಗುಹ್ಯತಮವಾದದ್ದು. ಅದು ಅದ್ವಯವಾಗಿದ್ದರೂ ಸಹ ನಿರಂತರವಾಗಿ ನಾಲ್ಕು ವಿಧಗಳ ಭೇದಗಳಿಂದ ಯುಕ್ತವಾಗಿದೆ– ಜ್ಞಾನ, ವಿಜ್ಞಾನ, ರಹಸ್ಯ ಮತ್ತು ತದಂಗ (ಸಾಧನಭಕ್ತಿ). ನನ್ನ ಈ ಜ್ಞಾನವನ್ನು ಜೀವಿ ತನ್ನ ಬುದ್ಧಿಶಕ್ತಿಯಿಂದ ತಿಳಿಯಲು ಸಾಧ್ಯವಿಲ್ಲ, ಆದ್ದರಿಂದ ನೀನು ನನ್ನ ಅನುಗ್ರಹದಿಂದ ಇದನ್ನು ಪಡೆದುಕೊ. ಜ್ಞಾನ ನನ್ನ ಸ್ವರೂಪ, ವಿಜ್ಞಾನ ಶಕ್ತಿ–ಸಂಬಂಧ, ಜೀವಿ ನನ್ನ ರಹಸ್ಯ, ಪ್ರಧಾನ ನನ್ನ ಜ್ಞಾನಾಂಗ (ತದಂಗ). ಈ ನಾಲ್ಕು ತತ್ತ್ವಗಳ ನಿತ್ಯ ಅದ್ವಯತೆ ಮತ್ತು ನಿತ್ಯ ರಹಸ್ಯಗತ ಭೇದವು ನನ್ನ ಅಚಿಂತ್ಯಶಕ್ತಿಯ ಪ್ರಮಾಣವಾಗಿದೆ (ಶ್ರೀಭಾಗವತಕರ್ಮರೀಚಿಮಾಲಾ ೧೦/೨) ॥೩೦॥

ಶ್ರೀಲ ವಿಶ್ವನಾಥ ಚಕ್ರವರ್ತಿ ಠಾಕುರರು ರಚಿಸಿರುವ 'ಸಾರಾರ್ಥದರ್ಶಿನಿ ಟೀಕೆ'

ಅತ್ರ *'ಪರಾವರೆ ಯಥಾ ರೂಪೆ ಜಾನೀಯಾಮ್'* (ಶ್ರೀಮದ್ಭಾ ೨/೯/೨೫) ಇತ್ಯನೇನ ತವ ಅಪ್ರಾಕೃತಂ ರೂಪಂ ಪ್ರಾಕೃತಂಚ ರೂಪಂ ಕೀದೃಶಂ' ಇತಿ; *'ಯಥಾತ್ಮಮಾಯಾಯೋಗೇನ'* (ಶ್ರೀಮದ್ಭಾ ೨/೯/೨೬) ಇತ್ಯನೇನ ತವ ಮಾಯಾ, ಯೋಗಮಾಯಾ ಚ ಕೀದೃಶೀ' ಇತಿ; 'ಯಥಾ ಕ್ರೀಡಸಿ' (ಶ್ರೀಮದ್ಭಾ ೨/೯/೨೭) ಇತಿ ಮಾಯಾಧಿಕೃತೇಷು ಯೋಗಮಾಯಾದಿಕೃತೇಷು ತವ ಕೇನ ಪ್ರಕಾರೇಣ ಕ್ರೀಡ' ಇತಿ; *'ಭಗವಚ್ಛಿಕ್ಷಿತಮಹಂ ಕರವಾಣಿ ಹ್ಯತನ್ದ್ರಿತಃ'* (ಶ್ರೀಮದ್ಭಾ ೨/೯/೨೮) ಇತ್ಯನೇನ ಮದಭೀಷ್ಟಸಿದ್ಧ್ಯರ್ಥಂ ತ್ವಚ್ಛಿಕ್ಷಿತಂ ಕಿಂ ಮಮ ಕರ್ತವ್ಯಮ್' ಇತಿ– ಬ್ರಹ್ಮಣಾ ಕ್ರಮೇಣ ಪೃಷ್ಟಸ್ಯ ವಸ್ತುಚತುಷ್ಟಯಸ್ಯ ಚತುಃಶ್ಲೋಕ್ಯಾ ಕ್ರಮೇಣೈವೋತ್ತರಂ ದಾತುಂ ಭಗವಾನ್ ಪ್ರತಿಜಾನೀತೆ– ಜ್ಞಾನಮಿತಿ । ಎತದೇವ ಭಗವದ್ಯತ್ತೋತ್ತರಚತುಷ್ಟಯಾತ್ಮಕಮೇವ ಶ್ರೀಭಾಗವತಂ ಶಾಸ್ತ್ರಂ ಶ್ರೀಭಗವತ್ಪ್ರೋಕ್ತತ್ವೇನ ಪ್ರಸಿದ್ಧಮಿತ್ಯಾಹುಃ । ನ ಕೇವಲಂ ಮದ್ರೂಪಸ್ಯ ಜ್ಞಾನಮೇವ ತುಭ್ಯಂ ದದಾಮಿ, ಅಪಿ ತು ವಿಜ್ಞಾನೇನಾನುಭವೇನ ಸಮನ್ವಿತಂ ಯತ್ತದಪಿ । ಕಿಂಚ, ಪರಮಗುಹ್ಯಂ ನಿರ್ವಿಶೇಷ–ಬ್ರಹ್ಮಜ್ಞಾನಾದಪಿ ಶ್ರೇಷ್ಠತ್ವಾದಿತಿ ಭಾವಃ । ಕಿಂಚ, ರಹಸ್ಯಂ ಪ್ರೇಮಭಕ್ತಿಂಚ, ಸ ಪ್ರಸಿದ್ಧಸ್ತ್ವಂ ಗೃಹಾಣ । *'ಸುಗೋಪ್ಯಮಪಿ ವಕ್ಷ್ಯಾಮಿ'* (ಶ್ರೀಮದ್ಭಾ ೧೧/೧೧/೪೯) ಇತ್ಯನೇನೈವೈತತ್ತ್ರಿಕಮಪಿ ತ್ವಯಾ ಅಪೃಷ್ಟಮೇವೇತಿ ಚತುರ್ಥಶ್ಲೋಕ ಎವ ರಹಸ್ಯತ್ವಾತ್ ಬಹಿರಂಗಲೋಕಾಗಮ್ಯತಯೈವ ವಕ್ಷ್ಯಾಮಿ । ತತ್ರ ರಹಸ್ಯ–ತದಂಗಯೋ ರೆತಯೋರ್ನಾಮಾಗ್ರಹಣಂ ಪ್ರಥಮೋಕ್ತಂ ಪರಮಗುಹ್ಯ–ತಜ್ಜ್ಞಾನಾದಪ್ಯತಿಗೋಪ್ಯತ್ವಮ್ ಉತ್ಕೃಷ್ಟತ್ವಂಚ ಬೋಧಯತೀತ ಜ್ಞೇಯಮ್ । 'ಮಯಾ ಗೃಹಾಣ' ಇತ್ಯವದಧಾನಮಪಿ ಬ್ರಹ್ಮಾಣಂ ವಿಶೇಷತೋಽವಧಾಪಯತಿ ॥೩೦॥

ಭಾವಾನುವಾದ– ಈ ಪ್ರಸಂಗದಲ್ಲಿ ಶ್ರೀಬ್ರಹ್ಮದೇವರು ಶ್ರೀಭಗವಂತನಲ್ಲಿ ನಾಲ್ಕು ಪ್ರಶ್ನೆಗಳನ್ನು ಕೇಳಿದರು, (೧) 'ಪರಾವರೆ ಯಥಾವರೆ ಯಥಾರೂಪೆ ಜಾನೀಯಾಮ್' (ಶ್ರೀಮದ್ಭಾವತ ೨/೯/೨೫)– ನಿಮ್ಮ ಅಪ್ರಾಕೃತ ಮತ್ತು ಪ್ರಾಕೃತ ರೂಪ ಯಾವ ರೀತಿಯಾಗಿದೆ'; (೨) 'ಯಥಾತ್ಮಯಯೋಗೇನ' (ಶ್ರೀಮದ್ಭಾಗವತಂ ೨/೯/೨೬)– ಅರ್ಥಾತ್ ನಿಮ್ಮ ಮಾಯೆ ಹಾಗೂ ಯೋಗಮಾಯೆಯು ಯಾವ ಪ್ರಕಾರವಾಗಿದೆ'; (೩) 'ಯಥಾ ಕ್ರೀಡಸಿ' (ಶ್ರೀಮದ್ಭಾಗವತಂ ೨/೯/೨೭) ಅರ್ಥಾತ್ ಮಾಯೆ ಮತ್ತು ಯೋಗಮಾಯೆಯ ಅಧಿಕೃತ ಸ್ಥಾನಗಳಲ್ಲಿ (ಲೋಕದಲ್ಲಿ) ನಿಮ್ಮ ಲೀಲೆಗಳು ಯಾವ–ಯಾವ ಪ್ರಕಾರವಾಗಿದೆ'; (೪) 'ಭಗವಚ್ಛಿಕ್ಷಿತಮಹಂ ಕರವಾಣಿ ಹ್ಯತಂದ್ರಿತಃ' (ಶ್ರೀಮದ್ಭಾಗವತಂ ೨/೯/೨೮)– ನನ್ನ ಅಭೀಷ್ಟ ಸಿದ್ಧಿಗಾಗಿ ನಿಮ್ಮ ಮೂಲಕ ನನಗಾಗಿ ಯಾವ–ಯಾವ ಕರ್ತವ್ಯಗಳಿವೆ'– ಈ ರೀತಿ ಶ್ರೀಬ್ರಹ್ಮನ ಮೂಲಕ ಕ್ರಮವಾಗಿ ಕೇಳಲ್ಪಟ್ಟ ಈ ನಾಲ್ಕು ಪ್ರಶ್ನೆಗಳಿಗೆ ಉತ್ತರ ಕ್ರಮವಾಗಿಯೇ ನಾಲ್ಕು ಶ್ಲೋಕಗಳಲ್ಲಿ ಪ್ರಸಾದಿಸಲು ಅಂಗೀಕರಿಸುತ್ತ ಶ್ರೀಭಗವಂತನು 'ಜ್ಞಾನ' ಇತ್ಯಾದಿ ಶ್ಲೋಕವನ್ನು ಹೇಳುತ್ತಿದ್ದಾರೆ. ಶ್ರೀಭಗವಂತನ ಮುಕಾಂತರ ಹೇಳಿದ

ಈ ಉತ್ತರಗಳ–ಸರಣಿಯಾದ ಚತುಃಶ್ಲೋಕವು 'ಶ್ರೀಭಾಗವತ–ಶಾಸ್ತ್ರ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.

ನಾನು ಕೇವಲ ನನ್ನ ಸ್ವರೂಪ ಜ್ಞಾನವನ್ನು ಮಾತ್ರ ನಿನಗೆ ನೀಡುತ್ತಿದ್ದೇನೆ–ಎಂದಲ್ಲ, ಅದರೊಂದಿಗೆ 'ವಿಜ್ಞಾನ' ಅಂದರೆ ಅನುಭವಗಮ್ಯವಾದ ಜ್ಞಾನವನ್ನೂ ಸಹ ನಿನಗೆ ನೀಡುತ್ತಿದ್ದೇನೆ. ವಿಶೇಷವಾಗಿ ಇದು 'ಪರಮಗುಹ್ಯಂ' ಅಂದರೆ ಅತ್ಯಂತ ಗೋಪನೀಯವಾದದ್ದು, ಏಕೆಂದರೆ ನಿರ್ವಿಶೇಷ ಬ್ರಹ್ಮಜ್ಞಾನದ ಅಪೇಕ್ಷೆಯೂ ಸಹ ಶ್ರೇಷ್ಠವಾದದ್ದು. ಹಾಗೂ 'ರಹಸ್ಯಂ' ಅಂದರೆ ಅತ್ಯಾಧಿಕ ರಹಸ್ಯಪೂರ್ಣವಾದ–'ಪ್ರೇಮಭಕ್ತಿ'ಯನ್ನೂ ಸಹ ಪ್ರಸಾದಿಸುತ್ತಿದ್ದೇನೆ, 'ಬ್ರಹ್ಮ' ಎಂಬ ಹೆಸರಿನಿಂದ ಪ್ರಸಿದ್ಧನಾದ ನೀನು ಇದನ್ನು ಗ್ರಹಿಸು.

ಶ್ರೀಮದ್ಭಾಗವತದ ಹನೊಂದನೆಯ–ಸ್ಕಂಧದಲ್ಲಿ (೧೧/೧೧/೪೯) ಶ್ರೀಭಗವಂತನು ಉದ್ಧವನಿಗೆ ಹೀಗೆ ಹೇಳುತ್ತಾನೆ–

ಅಥೈತತ್ ಪರಮಂ ಗುಹ್ಯಂ ಶೃಣ್ವತೋ ಯದುನಂದನ ।
ಸುಗೋಪ್ಯಮಪಿ ವಕ್ಷ್ಯಾಮಿ ತ್ವಂ ಮೇ ಭೃತ್ಯಃ ಸುಹೃತ್ ಸಖ ॥

"ಹೇ ಉದ್ಧವ! ನೀನು ನನ್ನ ಸೇವಕ, ಹಿತೈಷಿ ಮತ್ತು ಸಖ, ಆದ್ದರಿಂದ ಅತ್ಯಂತ ಗೋಪನೀಯವಾಗಿದ್ದರೂ ಸಹ ನಾನು ನಿನಗೆ ಪರಮಗುಹ್ಯಕರವಾದ ತತ್ವವನ್ನು ಹೇಳುತ್ತಿದ್ದೇನೆ, ನೀನು ಅದನ್ನು ಆಲಿಸು". ಶ್ರೀಭಗವಂತನ ಈ ನಿರ್ದೇಶನದಿಂದ ಆ ಪ್ರೇಮದ ರಹಸ್ಯತ್ವವನ್ನು ತಿಳಿದುಕೊಳ್ಳಬೇಕು. 'ತದಙ್ಗಂಚ' ಅಂದರೆ ಪ್ರೇಮಭಕ್ತಿಯ ರಹಸ್ಯ ಅಂಶವಾದ ಯಾವ ಸಾಧನಭಕ್ತಿಯೋಗವಿದೆಯೋ, ಅದರಲ್ಲಿ ನಿನಗೆ ಜಿಜ್ಞಾಸು ಇಲ್ಲದಿದ್ದರೂ ಸಹ ನಾನು ನಿನಗೆ ತಿಳಿಸಿಕೊಡುತ್ತಿದ್ದೇನೆ. ಅಂದರೆ ಈ ಮೂರು ವಿಷಯ' ವಿಜ್ಞಾನ ಅರ್ಥಾತ್ ಅನುಭವಯುಕ್ತವಾದ ಪರಮಗುಹ್ಯ–ಜ್ಞಾನ, ಅತಿ ರಹಸ್ಯಮಯವಾದ ಪ್ರೇಮಭಕ್ತಿ ಮತ್ತು ಸಾಧನಭಕ್ತಿಯನ್ನು ಕೃಪಾಪೂರ್ವಕವಾಗಿ ನಾನು ನಿನಗೆ ಹೇಳುತ್ತೇನೆ. ಅಥವಾ (ಶ್ರೀಮದ್ಭಾಗವತಂ ೨/೯/೨೮) 'ನಾನು ನಿಮ್ಮ ಮುಕಾಂತರ ಉಪದೇಶ ನೀಡಿದ ಕಾರ್ಯವನ್ನೇ ಪಾಲಿಸುತ್ತೇನೆ" ನಿನ್ನ ಈ ವಚನದ ಮೂಲಕ ವ್ಯಕ್ತವಾದ ಮೂರು ವಿಷಯಗಳಿಗಿಂತಲೂ ಸಹ ಜಿಜ್ಞಾಸೆಯು ನಿನ್ನ ಮೂಲಕ ಉಂಟಾಗಿದೆ. ಆದುದರಿಂದ ನಾಲ್ಕನೇ ಶ್ಲೋಕವು (ಶ್ರೀಮದ್ಭಾಗವತಂ (೨/೯/೩೪) 'ಯಥಾ ಮಹಾಂತಿ') ಅತ್ಯಂತ ರಹಸ್ಯಪೂರ್ಣವಾಗಿರುವ ಕಾರಣ ಬಹಿರಂಗ ಜನರಿಗೆ ಅಗಮ್ಯ (ಅಸ್ಪಷ್ಟ) ರೂಪದಲ್ಲೇ ನಾನು ನಿನಗೆ ಹೇಳುತ್ತೇನೆ. ಈ ಶ್ಲೋಕದಲ್ಲಿ 'ರಹಸ್ಯ' (ಪ್ರೇಮಭಕ್ತಿ) ಮತ್ತು 'ತದಂಗ' ಅದರ (ಸಾಧನಭಕ್ತಿ)– ಈ ಎರಡು ವಿಚಾರಗಳನ್ನು ಸ್ಪಷ್ಟ ರೂಪದಲ್ಲಿ ಉಲ್ಲೇಖನೆ ಕೊಡುತ್ತಾ ಪ್ರಥಮವಾಗಿ "ಪರಮಗುಹ್ಯಂ ಅಂದರೆ ಭಗವಂತನ ಜ್ಞಾನ" ಕ್ಕಿಂತಲೂ ಸಹ ಅವನ ಅತಿ ಗೋಪನೀಯವಾದ ಹಾಗೂ ಉತ್ಕೃಷ್ಟತೆಯನ್ನು ತಿಳಿಸಿಕೊಟ್ಟರು– ಹೀಗೆ ಇದನ್ನು ಅರ್ಥಮಾಡಿಕೊಳ್ಳಬೇಕು. 'ಮಯಾ ಗೃಹಣ' ಅಂದರೆ "ನಾನು ಹೇಳಿತ್ತಿದ್ದೇನೆ, ನೀನು ಗ್ರಹಿಸು"– ಹೀಗೆ ಹೇಳುತ್ತ ಶ್ರೀಭಗವಂತ ಸ್ಥಿರಚಿತ್ತರಾಗಿ ಕೇಳುತ್ತಿರುವ ಶ್ರೀಬ್ರಹ್ಮದೇವರಿಗೆ ಮತ್ತಷ್ಟು ವಿಶೇಷರೂಪದಲ್ಲಿ

ಎಚ್ಚರಿಕೆಯನ್ನು ನೀಡುತ್ತಿದ್ದಾರೆ, ಅಂದರೆ ಮನೋಯೋಗಿ ಆಗಿಸುತ್ತಿದ್ದಾರೆ. ॥೩೦॥

ಶ್ರೀಲ ಕೃಷ್ಣದಾಸ ಕವಿರಾಜ ಗೊಸ್ವಾಮಿಪಾದರು ರಚಿಸಿರುವ
'ಶ್ರೀಚೈತನ್ಯಚರಿತಾಮೃತ'

"ಪ್ರಣವೇರ ಯೆಇ ಅರ್ಥ, ಮಾಯತ್ರೀತೇ ಸೆಇ ಹಯ ।
ಸೆಇ ಅರ್ಥ ಚತುಃಶ್ಲೋಕೀತೆ ವಿವರಿಯಾ ಕಯ ॥

ಬ್ರಹ್ಮಾರೆ ಈಶ್ವರ ಚತುಃಶ್ಲೋಕೀ ಯೇ ಕಹಿಲಾ ।
ಬ್ರಹ್ಮಾ ನಾರದೇ ಸೆಇ ಉಪದೇಶ ಕೈಲಾ ॥

ನಾರದ ಸೆಇ ಅರ್ಥ ವ್ಯಾಸೆರೆ ಕಹಿಲಾ ।
ಶುನಿ' ವೇದವ್ಯಾಸ ಮನೆ ವಿಚಾರ ಕರಿಲಾ ॥"

'ಎಇ ಅರ್ಥ– ಆಮಾರ ಸೂತ್ರೇರ ವ್ಯಾಖ್ಯಾನುರೂಪ ।
'ಭಾಗವತ' ಕರಿಬ ಸೂತ್ರೇರ ಭಾಷ್ಯಸ್ವರೂಪ ॥'

ಚಾರಿವೇದ–ಉಪನಿಷದೆ ಯತ ಕಿಛು ಹಯ ।
ತಾರ ಅರ್ಥ ಲಂಯಾ ವ್ಯಾಸ ಕರಿಲಾ ಸಂಚಯ ॥

ಯೆಇ ಸೂತ್ರೆ ಯೆಇ ಋಕ್–ವಿಷಯ–ವಚನ ।
ಭಾಗವತೆ ಸೆಇ ಋಕ್ ಶ್ಲೋಕೆ ನಿಬಂಧನ ॥

ಅತಏವ ಬ್ರಹ್ಮಸೂತ್ರೇರ ಭಾಷ್ಯ– ಶ್ರೀಭಾಗವತ ।
ಭಾಗವತ–ಶ್ಲೋಕ, ಉಪನಿಷತ್ ಕಹೇ 'ಏಕ' ಮತ ॥

ಭಾಗವತೇರ ಸಂಬಂಧ, ಅಭಿಧೇಯ, ಪ್ರಯೋಜನ ।
ಚತುಃಶ್ಲೋಕೀತೆ ಪ್ರಕಟ ತಾರ ಕತಿಯಾಛೆ ಲಕ್ಷಣ ॥

'ಆಮಿ– 'ಸಂಬಂಧ'– ತತ್ತ್ವ, ಆಮಾರ ಜ್ಞಾನ–ವಿಜ್ಞಾನ ।
ಆಮಾ ಪಾಇತೆ ಸಾಧನ–ಭಕ್ತಿ 'ಅಭಿಧೇಯ'– ನಾಮ ॥

ಸಾಧನೇರ ಫಲ–'ಪ್ರೇಮ' ಮೂಲ–ಪ್ರಯೋಜನ ।
ಸೆಇ ಪ್ರೇಮೆ ಪಾಯ ಜೀವ ಆಮಾರ 'ಸೇವನ' ॥

ಎಇ 'ತಿನ' ತತ್ತ್ವ ಆಮಿ ಕಹಿನು ತೋಮಾರೆ ।
'ಜೀವ' ತುಮಿ ಎಇ ತಿನ ನಾರಿಬೆ ಜಾನಿವಾರೆ ॥'

(ಚೈ. ಚ. ಮ. ೨೫/೯೨–೨೮; ೧೦೦–೧೦೨; ೨೦೪)

ಭಾವಾನುವಾದ– ಪ್ರಣವ ಅಂದರೆ ಓಂ–ಕಾರದ ಅರ್ಥವು ಗಾಯತ್ರೀ ಮಂತ್ರದಲ್ಲಿ ನೆಲಸಿದೆ. ಇದರ ವಿಸ್ತೃತ ವ್ಯಾಖ್ಯಾಯನವು ಚತುಃಶ್ಲೋಕಿ ಭಾಗವತದಲ್ಲಿದೆ.

ಪ್ರಪ್ರಥಮವಾಗಿ ಈ ಚತುಃಶ್ಲೋಕಿ ಭಾಗವತವನ್ನು ಶ್ರೀಭಗವಂತನು ಬ್ರಹ್ಮದೇವರಿಗೆ

ಹೇಳಿದನು, ಶ್ರೀಬ್ರಹ್ಮದೇವರು ಈ ಚತುಃಶ್ಲೋಕಿ–ಭಾಗವತದ ಉಪದೇಶವನ್ನು ಶ್ರೀನಾರದರಿಗೆ ಕೊಟ್ಟರು.

ಶ್ರೀನಾರದರು ಇದರ ಅರ್ಥವನ್ನು ಶ್ರೀವ್ಯಾಸದೇವರಿಗೆ ಹೇಳಿದರು ಮತ್ತು ಶ್ರೀವ್ಯಾಸದೇವರು ಇದನ್ನು ಗ್ರಹಿಸಿ ತಮ್ಮ ಮನಸ್ಸಿನಲ್ಲಿ ಹೀಗೆ ವಿಚಾರ ಮಾಡಿದರು– 'ಓಂಕಾರದ ಈ ಅರ್ಥವು ನನ್ನ ಸೂತ್ರದ (ವೇದಾಂತಸೂತ್ರದ) ವ್ಯಾಖ್ಯಾಯನಕ್ಕೆ ಅನುರೂಪಕವಾಗಿದೆ ಮತ್ತು ನಾನು ಇದೇ ಅರ್ಥದಿಂದ ನನ್ನ ಸೂತ್ರದ ಭಾಷ್ಯಸ್ವರೂಪವಾದ 'ಭಾಗವತ'ದ ವರ್ಣನೆಯನ್ನು ಮಾಡುತ್ತೇನೆ' ಎಂದರು.

ನಾಲ್ಕು ವೇದಗಳು ಮತ್ತು ಸಮಸ್ತ ಉಪನಿಷದ್ಗಳಲ್ಲಿ ಏನೆಲ್ಲ ಹೇಳಲಾಗಿದಿಯೋ, ಇದರ ಸಾರವನ್ನು ಸಂಗ್ರಹಿಸಿ ಶ್ರೀವ್ಯಾಸದೇವರು ವೇದಾಂತ ಸೂತ್ರದ ರೂಪದಲ್ಲಿ ಇದನ್ನು ಪ್ರಸ್ತುತಪಡಿಸಿದ್ದಾರೆ.

ವೇದಾಂತ ಸೂತ್ರದಲ್ಲಿ ಯಾವ ಮಂತ್ರಗಳ ತಾತ್ಪರ್ಯವು ವರ್ಣಿಸಲಾಗಿದಿಯೋ, ಅದೇ (ವೇದದ) ಮಂತ್ರಗಳನ್ನು ಶ್ರೀಮದ್ಭಾಗವತದಲ್ಲಿ ಶ್ಲೋಕಗಳ ರೂಪದಲ್ಲಿ ಸಂಕಲನೆ ಮಾಡಲಾಗಿದೆ.

ಆದುದರಿಂದ ಶ್ರೀಮದ್ಭಾಗವತವೇ ಬ್ರಹ್ಮಸೂತ್ರದ ಯಥಾರ್ಥ ಭಾಷ್ಯವಾಗಿದೆ. ಶ್ರೀಭಾಗವತದ ಶ್ಲೋಕಗಳು ಮತ್ತು ಉಪನಿಷದ್ಗಳಲ್ಲಿನ ಮಂತ್ರಗಳು– ಇವೆರಡರ ತಾತ್ಪರ್ಯವೂ ಒಂದೇ ಆಗಿದೆ.

ಶ್ರೀಮದ್ಭಾಗವತದಲ್ಲಿ ವರ್ಣಿಸಲಾದ ಈ ಸಂಬಂಧ, ಅಭಿಧೇಯ ಹಾಗೂ ಪ್ರಯೋಜನವಿರುವುದೋ, ಅದರ ಲಕ್ಷಣವು ಈ ಚತುಃಶ್ಲೋಕದಲ್ಲಿ ಪ್ರಕಟಿಸಲಾಗಿದೆ.

[ಶ್ರೀಭಗವಂತನು ಬ್ರಹ್ಮನ ಹತ್ತಿರ ಚತುಃಶ್ಲೋಕದಲ್ಲಿ ಒಳಗೊಂಡಿರುವ 'ಸಂಬಂಧ', 'ಅಭಿಧೇಯ' ಮತ್ತು 'ಪ್ರಯೋಜನ'– ಈ ಮೂರು ತತ್ವಗಳನ್ನು ಸಂಕ್ಷೇಪವಾಗಿ ವ್ಯಾಖ್ಯಾನ ಮಾಡುತ್ತಾ ಹೀಗೆ ಹೇಳಿದನು]– ವಿಷಯಬೋಧರೂಪವಾದ ನನ್ನ ಅರ್ಥಾತ್ ಭಗವತ್–ಸ್ವರೂಪವನ್ನು ನಿರ್ಧರಿಸುವುದೇ ಚಿನ್ಮಯವಾದ 'ಜ್ಞಾನ' ಮತ್ತು ಆಶ್ರಯದ (ಭಕ್ತರ) ಚಿತ್ತ–ವಿಲಾಸಾನುಭವರೂಪವಾದ ಭಗವತ್–ಸ್ಫೂರ್ತಿಯೇ 'ವಿಜ್ಞಾನ'' ಇದೇ 'ಸಂಬಂಧ'–ತತ್ವ ಮತ್ತು ನನ್ನನ್ನು ಪ್ರಾಪ್ತಿಸಿಕೊಳ್ಳಲು ಯಾವ ಸಾಧನಭಕ್ತಿ ಇರುವುದೋ' ಅದನ್ನು 'ಅಭಿಧೇಯ' ಎಂದು ಕರೆಯಲ್ಪಡುತ್ತದೆ.

ಸಾಧನೆಯ ಫಲ 'ಪ್ರೇಮ' ಒಂದೇ ಮೂಲ ಪ್ರಯೋಜನ. ಅದೇ ಪ್ರೇಮದ ಮೂಲಕ ಜೀವಿ ನನ್ನ ಸೇವೆಯನ್ನು ಪ್ರಾಪ್ತಿಸಿಕೊಳ್ಳುತ್ತಾನೆ.

[ಶ್ರೀಭಗವಂತ ಹೀಗೆ ಹೇಳಿದನು–] ಹೇ ಬ್ರಹ್ಮ! ನೀನು ಜೀವಿಯಾದ ಕಾರಣ ಈ ಮೂರು ತತ್ವಗಳನ್ನು ಅರ್ಥಮಾಡಿಕೊಳ್ಳಲಾರೆ, ಆದುದರಿಂದ ನಾನು ನಿನ್ನಲ್ಲಿ ಕೃಪಾಪೂರ್ವಕನಾಗಿ ಇದರ ವರ್ಣನೆ ಮಾಡಿದ್ದೇನೆ. ॥೩೦॥

ಶ್ರೀಲಜೀವ ಗೊಸ್ವಾಮಿರವರು ರಚಿಸಿರುವ 'ಕ್ರಮ-ಸಂದರ್ಭಃ'

ಅಥ ತತ್ರ ಪರಮಭಾಗವತಾಯ ಬ್ರಹ್ಮಣೇ ಶ್ರೀಮದ್ಭಾಗವತಾಖ್ಯಂ ನಿಜಂ ಶಾಸ್ತ್ರಮುಪದೇಷ್ಟುಂ ತತ್ಪ್ರತಿಪಾದ್ಯತಮಂ ವಸ್ತುಚತುಷ್ಟಕ್ಯಂ ಪ್ರತಿಜಾನೀತೆ- ಜ್ಞಾನಮಿತ್ಯಾದಿ ಷಟ್ಕಮ್ । ಮೇ ಮಮ ಭಗವತೋ ಜ್ಞಾನಂ ಶಬ್ದದ್ವಾರಾ ಯಾಥಾರ್ಥ್ಯ-ನಿರ್ಧಾರಣಂ ಮಯಾ ಗದಿತಂ ತತ್ ಗೃಹಾಣ- ಇತ್ಯಾನ್ಯೋ ನ ಜಾನಾತೀತಿ ಭಾವಃ । ಯತಃ ಪರಮಗುಹ್ಯಂ ಬ್ರಹ್ಮಜ್ಞಾನಾದಪಿ ರಹಸ್ಯತಮಂ- 'ಮುಕ್ತಾನಾಮಪಿ ಸಿದ್ಧಾನಾಮ್' (ಶ್ರೀಮದ್ಭಾ ೬/೧೪/೫) ಇತ್ಯಾದೇಃ; ತಚ್ಚ ವಿಜ್ಞಾನೇನ ತದನುಅಭವೇನಾಪಿ ಯಕ್ತಂ ಗೃಹಣ । ನ ಚೈತಾವದೇವ । ಕಿಂಚ, ಸರಹಸ್ಯಂ, ತತ್ರಾಪಿ ರಹಸ್ಯಂ ಯತ್ ಕಿಮಪ್ಯಸಿತ್, ತೇನಾಪಿ ಸಹಿತಮ್ । ತಚ್ಚ ಪ್ರೇಮಭಕ್ತಿರೂಪಮಿತ್ಯಗ್ರೆ ವ್ಯಂಜಯಿಷ್ಯತೆ । ತಥಾ ತದಂಗಂಚ ಗೃಹಾಣ । ತಚ್ಚ ಸತಿ ತ್ವಪರಾಧಾಖ್ಯವಿಘ್ನೆ ನ ಝಟಿತಿ ವಿಜ್ಞಾನ-ರಹಸ್ಯೇ ಪ್ರಕಟಯೇತ್ । ತಸ್ಮಾತ್ತಸ್ಯ ಜ್ಞಾನಸ್ಯ ಸಹಾಯಂಚ ಗೃಹಾಣೇತ್ಯರ್ಥಃ । ತಚ್ಚ ಶ್ರವಣಾದಿಭಕ್ತಿರೂಪಮಿತ್ಯಗ್ರೆ ವ್ಯಂಜಯಿಷ್ಯತೆ; ಯದ್ವಾ, ಸರಹಸ್ಯಮಿತಿ ತದಂಗಸ್ಯೈವ ವಿಶೇಷಣಂ ಜ್ಞೇಯಂ- ಸುಹೃದೋರಿವ ಮಿಥಃ-ಸಂವರ್ದ್ಧಕಯೋರೆಕತ್ರಾವಸ್ಥಾನಾತ್ ॥೩೦॥

ಭಾವಾನುವಾದ- ಶ್ರೀಭಗವಂತನು ಪರಮ-ಭಾಗವತರಾದ ಬ್ರಹ್ಮದೇವರಿಗೆ ಶ್ರೀಮದ್ಭಾಗವತ ಎಂಬ ಹೆಸರಿನ ಶಾಸ್ತ್ರದ ಉಪದೇಶ ಮಾಡಲು 'ಜ್ಞಾನ' ಮುಂತಾದ ಆರು ಶ್ಲೋಕಗಳಲ್ಲಿ ತನ್ನ ಸರ್ವಶ್ರೇಷ್ಠ ಪ್ರತಿಪಾದನೆಯ ನಾಲ್ಕು ತತ್ವಗಳನ್ನು ಹೇಳುತ್ತಿದ್ದಾನೆ. 'ಮೇ' ಅಂದರೆ ಸ್ವಯಂ ಭಗವಂತ ನನ್ನ । 'ಜ್ಞಾನ್' ಅಂದರೆ ಶಬ್ದ ಅಥವಾ ವೇದಶ್ರವಣದ (ಶ್ರೌತಪಂಥಾ) ಮೂಲಕ ಪ್ರಾಪ್ತಿಯಾಗುವ ನನ್ನ (ಭಗವತ್) ಜ್ಞಾನ ಅಥವಾ ಯಥಾರ್ಥ ಸ್ವರೂಪದ ನಿರೂಪಣೆ. 'ನಾನು ಹೇಳುವುದನ್ನು, ನೀನು ಗ್ರಹಿಸು"- ಇದರ ಭಾವಾರ್ಥ ಏನೆಂದರೆ ಇತರರಿಗೆ ಈ ಜ್ಞಾನವು ಅರ್ಥವಾಗುವುದಿಲ್ಲ, ಏಕೆಂದರೆ ಶ್ರೀಮದ್ಭಾಗತದಲ್ಲಿ (೬/೧೪/೭) 'ಮುಕ್ತಾನಾಪಿ ಸಿದ್ಧಾನಾಂ ನಾರಾಯಣಪರಾಯಣಃ । ಸುದುರ್ಲಭಃ ಪ್ರಶಾಂತಾತ್ಮಕೊಟಿಷ್ವಪಿ ಮಹಾಮುನೆ ।"- ಶ್ರೀಪರೀಕ್ಷಿತರ ಈ ವಚನದಿಂದ ಹಾಗೂ ಇತರ ಅನೇಕ ಪ್ರಮಾಣಗಳಿಂದ ತಿಳಿಯುವುದೇನೆಂದರೆ, ಶ್ರೀಭಗವಂತನ ಜ್ಞಾನವನ್ನು ಪ್ರಾಪ್ತಿಸಿಕೊಳ್ಳುವಂತಹ ಪ್ರಶಾಂತಾತ್ಮ ಸಾಧು ಕೋಟಿ-ಕೋಟಿ ಮುಕ್ತ ಪುರುಷರಲ್ಲೂ ಸಹ ಅತ್ಯಂತ (ಅಪರೂಪ) ವಿರಳ, ಆದ್ದರಿಂದ ಇಲ್ಲಿ ಜ್ಞಾನ ಪರಮಗುಹ್ಯ ಅರ್ಥಾತ್ ಬ್ರಹ್ಮ-ಜ್ಞಾನಕ್ಕಿಂತಲೂ ಗುಹ್ಯತಮವಾದದ್ದು. ಈ ಭಗವತ್-ಜ್ಞಾನ ಮತ್ತು ವಿಜ್ಞಾನ ಅಂದರೆ ಭಗವಂತನ ಪ್ರಾಪ್ತಿಯೊಂದಿಗೆ ಸಂಯುಕ್ತ ಜ್ಞಾನವನ್ನೂ ನೀನು ಗ್ರಹಿಸು. ಕೇವಲ ಇಷ್ಟು ಮಾತ್ರ ಗ್ರಹಿಸು ಎಂದಲ್ಲ, ಆದರೆ ಅದರಲ್ಲೂ ಸಹ ಮತ್ತೆ ಏನೆಲ್ಲ ರಹಸ್ಯ ವಿಚಾರವಿದಿಯೋ, ಅದರೊಂದಿಗೆ ಇದನ್ನೂ ಸಹ ಗ್ರಹಿಸು. ಅದು ರಹಸ್ಯ ಪ್ರೇಮಭಕ್ತಿರೂಪ'- ಇದನ್ನು ಅನಂತರ ಸೂಚಿಸಲಾಗುವುದು. ಈ ಪ್ರಕಾರ ರಹಸ್ಯ ಅಂಗವಾದ ಸಾಧನಭಕ್ತಿಯನ್ನೂ ಸಹ ಗ್ರಹಿಸು. ಅಪರಾಧರೂಪವಾದ ವಿಘ್ನಗಳು ದೂರವಾದಂತೆಯೇ ಅಲ್ಲಿ ಸಾಧನಭಕ್ತಿ ಶೀಘ್ರದಲ್ಲಿ ವಿಜ್ಞಾನ (ಭಗವದನುಭವ) ಮತ್ತು

ರಹಸ್ಯವು (ಪ್ರೇಮಭಕ್ತಿ) ಪ್ರಕಟವಾಗುತ್ತದೆ. ಆದುದರಿಂದ ಇಲ್ಲಿ ಸಾಧನಭಕ್ತಿ ಭಗವತ್-ವಿಜ್ಞಾನಕ್ಕೆ ಸಹಾಯಕವಾಗಿದೆ, ಆದ್ದರಿಂದ ನೀನು ಇದನ್ನು ಗ್ರಹಿಸು. ಈ ಸಾಧನಭಕ್ತಿಯು ಶ್ರವಣ-ಕೀರ್ತನಾದಿ ಭಕ್ತಿರೂಪವಾಗಿದೆ'- ಇದನ್ನು ಅನಂತರ ವಿವರಿಸಲಾಗುವುದು. ಅಥವಾ ಪರಸ್ಪರ ಸಂವರ್ಧನಕಾರವಾದ ಇಬ್ಬರು ಮಿತ್ರರ ಏಕತ್ವವು ನೆಲಸಿರುವಂತೆ, 'ರಹಸ್ಯ' ಪದವನ್ನು 'ತದಂಗ'ದ ವಿಶೇಷವನ್ನೇ ಅರ್ಥಮಾಡಿಕೊಳ್ಳಬೇಕು.॥೩೦॥

ಶ್ರೀಶ್ರೀಧರ-ಸ್ವಾಮಿರವರು ರಚಿಸಿರುವ 'ಭಾವಾರ್ಥ-ದೀಪಿಕ'

ಜ್ಞಾನಂ ಶಾಸ್ತ್ರೋತ್ಥಮ್, ವಿಜ್ಞಾನಂ ಅನುಭವಃ, ರಹಸ್ಯಂ ಭಕ್ತಿಃ, ಸುಗೋಪ್ಯಮಪಿ ವಕ್ಷ್ಯಾಮೀತ್ಯಾದಿ- ನಿರ್ದೇಶತ್; ತಸ್ಯಾಂಗಂ ಸಾಧನಮ್ ॥೩೦॥

ಭಾವಾನುವಾದ- 'ಜ್ಞಾನ' ಶಬ್ದದಿಂದ ಶಾಸ್ತ್ರದಿಂದ ಉತ್ಪನ್ನವಾದ ಜ್ಞಾನದ ಅರ್ಥವು ಗೋಚರಿಸುತ್ತದೆ. 'ವಿಜ್ಞಾನ' ಶಬ್ದದಿಂದ ಅನುಭವವೆಂದು ಅರ್ಥಮಾಡಿಕೊಳ್ಳಬೇಕು. "ಅತಿ ಗೋಪನೀಯವಾಗಿದ್ದರೂ ಸಹ ನಾನು ಹೇಳುತ್ತೇನೆ"- ಈ ನಿರ್ದೇಶಣದ ಕಾರಣ 'ರಹಸ್ಯ' ಶಬ್ದದಿಂದ ಭಕ್ತಿಯನ್ನು ಸೂಚಿಸಲಾಗಿದೆ. ಆ ರಹಸ್ಯದ 'ಅಂಗ'ವು ಸಾಧನಭಕ್ತಿ. ॥೩೦॥

ಶ್ರೀಮಧ್ವಾಚಾರ್ಯಪಾದರು ಬರೆದಿರುವ 'ತಾತ್ಪರ್ಯ'

'ಯೇನ ಯೇನ ಯಥಾ ಜ್ಞಾತ್ವಾ ನಿಯತಂ ಮುಕ್ತಿರಾಪ್ಯತೇ ।
ತದ್ವಿಜ್ಞಾನಮಿತಿ ಪ್ರೋಕ್ತಂ ಜ್ಞಾನಂ ಸಾಧಾರಣಂ ಸ್ಮೃತಮ್ ॥'

ಇತಿ ವಾಮನೆ ॥೩೦॥

ಭಾವಾನುವಾದ- ವಾಮನಪುರಾಣದಲ್ಲಿ ಹೀಗೆ ಹೇಳಿದೆ- ಯಾವ-ಯಾವ ಉಪಾಯದಿಂದ ಯಾವ ರೂಪದಲ್ಲಿ ಶ್ರೀಭಗವಂತನನ್ನು ಅರಿತುಕೊಂಡಾಗ ಸರ್ವದಾ ಮುಕ್ತಿ ಅಂದರೆ ವಿಷ್ಣುಪದ ಪ್ರಾಪ್ತಿಯಾಗುತ್ತದೋ, ಅದನ್ನು 'ವಿಜ್ಞಾನ' ಎಂದು ಕರೆಯುತ್ತಾರೆ ಮತ್ತು ಸಾಧಾರಣ ರೂಪದಲ್ಲಿ ಅದನ್ನೇ 'ಜ್ಞಾನ' ಎಂಬ ಹೆಸರಿನಿಂದ ಅರ್ಥ ಮಾಡಿಕೊಳ್ಳಬಹುದು ॥೩೦॥

ಶ್ರೀವಿಜಯಧ್ವಜ ತೀರ್ಥಪಾದರು ರಚಿಸಿರುವ 'ಪದರತ್ನಾವಳಿ'

ಯತ್ ಕಿಂಚಿತ್ ಪೃಷ್ಟಯಿಃ ಕಶಿಚತ್ ಪರಿಹಾರ ಇತಿ, ಅತಃ (ಶ್ರೀಮದ್ಭಾ ೨/೯/೨೫) 'ಪರಾವರೆ' ಇತಿ ಪ್ರಾರ್ಥಿತವರದಾನಪ್ರಕಾರಮ್ ವಕ್ತಿ- ಜ್ಞಾನಮಿತಿ । ನಿಯತ ಮುಕ್ತಿಪ್ರಾಪಕೇಣ ಸ್ವಬಿಂಬವಿಷಯೇಣ ವಿಜ್ಞಾನೇನ ಸಮನ್ವಿತಂ ಮೇ ಸ್ವರೂಪವಿಷ್ಯಮ್, ಸರಹಸ್ಯಂ ಉಪನಿಷತ್ಸಂವಾದಸಹಿತಮ್ ಯಜ್ಜ್ಞಾನಮ್, ತಸ್ಯ ಜ್ಞಾನಸ್ಯ ಯದಂಗಶ್ಚ ತನ್ಮಯಾಗದಿತಮ್, ಗೃಹಾಣೆತ್ಯನ್ವಯಿಃ । ಉಪನಿಷದೋ ಬಾಹ್ಯರ್ಥರೂಪಮ್ ಚೇತ್ ಇದಮನುಪಾದೇಯ

ಸ್ಯಾತ್’ ಇತ್ಯಾತಃ ಉತ್ತಮ್– ಪರಮೇತಿ । ಜ್ಞಾನಮ್ ಶಾಸ್ತ್ರಾರ್ಥವಿಷಯಮ್, ವಿಜ್ಞಾನಮ್ ಸ್ವಾನುಭವ ಇತ್ಯಪವ್ಯಾಖ್ಯಾನಮ್, ಗದಿತಮಿತ್ಯನೇನ ಸೂಚಿತಯಾ *‘ಯೇನ ಯೇನ ಯಥಾ ಜ್ಞಾತ್ವಾ ನಿಯತಮ್ ಮುಕ್ತಿರಾಪ್ಯತೆ । ತದ್ವಿಜ್ಞಾನಮಿತಿ ಪ್ರೋಕ್ತಮ್ ಜ್ಞಾನಮ್ ಸಾಧಾರಣಮ್ ಸ್ಮೃತಮ್ ॥’* ಇತಿ ಸ್ಮೃತ್ಯಾ ನಿರಸ್ತಮ್ ॥೩೦॥

ಭಾವಾನುವಾದ– ಯಾರು ಜಿಜ್ಞಾನಸು ನಡೆಸುವ ಮತ್ತು ಯಾರು ತ್ಯಾಗಮಾಡಲು ಯೋಗ್ಯರಾಗಿದ್ದಾರೋ ಅಂತಹ ವ್ಯಕ್ತಿಗಳಿಗಾಗಿ ಹೇಳಲು ಈಗ ಶ್ರೀಭಗವಂತನು ‘ಪರಾವರೆ’ ಇತ್ಯಾದಿ ಇಪ್ಪತ್ತೈದನೆಯ ಶ್ಲೋಕದಲ್ಲಿ ಪ್ರಾರ್ಥಿತಿಸಲಾದ ವರದಾನದ ಪ್ರಕಾರ ‘ಜ್ಞಾನಂ’ ಮುಂತಾದ ಶ್ಲೋಕದ ಮೂಲಕ ತಿಳಿಸುತ್ತಿದ್ದಾರೆ. ನಿಯತ (ನಿತ್ಯ) ಮುಕ್ತಿಯನ್ನು ಪಡೆಯುವ ಸ್ವ–ಬಿಂಬ–ವಿಷಯ ಅಂದರೆ ವಿಜ್ಞಾನ ಸಹಿತ ನನ್ನ ಸ್ವರೂಪದ ವಿಷಯ, ರಹಸ್ಯ ಸಹಿತ ಅಂದರೆ ಉಪನಿಷದ್–ಸಂವಾದ ಸಹಿತ ಯಾವ ಜ್ಞಾನವಿದೆಯೋ ಮತ್ತು ಅಂತಹ ಜ್ಞಾನದ ಯಾವ ಅಂಶವಿರುವುದೋ, ಅದನ್ನೂ ಸಹ ನಾನು ತಿಳಿಸಿಕೊಡುತ್ತಿದ್ದೇನೆ, ಅದನ್ನು ನೀನು ಗ್ರಹಿಸು. ಇಲ್ಲಿ ಅನರ್ಥವಾಗಬಹುದೇನೆಂದರೆ, ಉಪನಿಷದ್ಗಳ ಬಾಹ್ಯ ಅರ್ಥರೂಪ ಜ್ಞಾನವು ಯಾವ ರೀತಿ {ಅನುಪಮ,ಹೋಲಿಕೆಯಿಲ್ಲದ} ಅನುಪಾದೇಯವಾಗಿರುತ್ತದೋ, ಅದೇ ರೀತಿ ಇದೂ ಸಹ ಅನುಪಾದೇಯವೇ? ಎಂಬ ಈ ರೀತಿಯಾದ ಪ್ರಶ್ನೆಗಳ ಉತ್ತರದಲ್ಲಿ ಹೇಳುತ್ತಾರೆ– ‘ಪರಮ್’ ಮುಂತಾದ ಶಾಸ್ತ್ರಾರ್ಥ–ವಿಷಯವೇ ಜ್ಞಾನ, ಅನುಭವವೇ ವಿಜ್ಞಾನ– ಈ ಅಪವ್ಯಾಖ್ಯಾಯನವು ‘ಗದಿತಂ’ ಶಬ್ದದ ಮೂಲಕ ಸೂಚಿತವಾದ ಸ್ಮೃತಿವಾಖ್ಯಯನ– “ಯಾವ–ಯಾವ ಉಪಾಯಗಳು ಮತ್ತು ಭಾವಗಳನ್ನು ತಿಳಿದು ಮುಕ್ತಿಯನ್ನು ಪಡೆಯಲಾಗುತ್ತದೋ, ಅದನ್ನು ವಿಜ್ಞಾನದ ರೂಪದಲ್ಲಿ ಹೇಳಲಾಗಿ, ಮತ್ತು ಜ್ಞಾನ ಸಾಧಾರಣವಾದದ್ದು” ಈ ಮೂಲಕ ನಿರರ್ಥಕವಾಗಿದೆ ॥೩೦॥

ಶ್ರೀವೀರರಾಗವಾಚಾರ್ಯಪಾದರು ರಚಿಸಿರುವ ‘ಶ್ರೀಭಾಗವತಚಂದ್ರಿಕ’

ಏವಂ ಪ್ರಾರ್ಥಿತೋ ಭಗವಾನ್ ತಮನುಗ್ರಹ್ಣನ್ ಪರಾವರರೂಪಪ್ರಕಾಶಕಮ್ ಚತುಃಶ್ಲೋಕ್ಯಾತ್ಮಕಂ ಭಾಗವತಮಾಹ– ಜ್ಞಾನಮಿತಿ । ಜ್ಞಾನಂ ಪ್ರಧಾನ್ಯೇನ ಜ್ಞಾತವ್ಯಂ ಭಗವತ್ ಸ್ವರೂಪ–ವಿಷಯಿಕಂ ಜ್ಞಾನಮ್; ತದಂಗಮ್ ಪ್ರಧಾನತಯಾ ಜ್ಞಾತವ್ಯ ಚಿದಚಿತ್ಸ್ವರೂಪ–ವಿಷಯಿಕಂಚ ಜ್ಞಾನಂ । ಮಯಾ ಗದಿತಮ್, ತತ್ ಮೇ ಮತ್ತಃ ಗೃಹಾಣ । ಕಥಂ ಭೂತಂ ಜ್ಞಾನಂ?– ಪರಮಗುಹ್ಯಮಿತಿ, ಗೋಪ್ಯಂ ವಿಜ್ಞಾನಸಮನ್ವಿತಂ । ವಿಜ್ಞಾಯತೇಽನೇನೇತಿ ವಿಜ್ಞಾನಂ, ಶಾಸ್ತ್ರಂ ಯೋಗಶ್ಚ ತಾಭ್ಯಾಂಸಹಿತಂ। ಸರಹಸ್ಯಂ ಸಮನ್ತ್ರಕಮ್ ॥೩೦॥

ಭಾವಾನುವಾದ– ಈ ಪ್ರಕಾರ ಪ್ರಾರ್ಥಿತರಾಗಿ ಶ್ರೀಬ್ರಹ್ಮದೇವರಿಗೆ ಅನುಗ್ರಹಿಸಲು ಶ್ರೀಭಗವಂತ ಪರಾವರ (ಚರಾಚರ) ರೂಪ–ಪ್ರಕಾಶಕವಾದ ಚತುಃಶ್ಲೋಕಿ–ಭಾಗವತದ ಉಪದೇಶವನ್ನು ಮಾಡುತ್ತಿದ್ದಾರೆ. ‘ಜ್ಞಾನ’ ಶಬ್ದದಿಂದ ಪ್ರಧಾನ ರೂಪದಿಂದ ತಿಳಿಯುವ ಚಿತ್–ಅಚಿತ್–ಸ್ವರೂಪ ವಿಷಯದ ಜ್ಞಾನವನ್ನು

ಅರ್ಥಮಾಡಿಕೊಳ್ಳಬೇಕು. ಇದು ನನ್ನ ಮೂಲಕ ಹೇಳಲ್ಪಡುತ್ತಿದೆ, ನೀನು ಇದನ್ನು ನನ್ನಿಂದ ಗ್ರಹಿಸು. ಇದು ಯಾವ ಪ್ರಕಾರದ ಜ್ಞಾನ? ಎಂದು ನೀನು ಕೇಳಿದರೆ, ಅದಕ್ಕೆ ಉತ್ತರದಲ್ಲಿ ಹೇಳುತ್ತಾರೆ– ಈ ಜ್ಞಾನ ಪರಮಗುಹ್ಯತಮ ಅರ್ಥಾತ್ ಗೋಪನೀಯ ಮತ್ತು ವಿಜ್ಞಾನ ಯುಕ್ತವಾದದ್ದು ಎಂದು ಹೇಳಲಾಗುತ್ತದೆ. ಇದರ ಮೂಲಕ ನನ್ನ ಜ್ಞಾನವು ವಿಶೇಷವಾಗಿ ಅರ್ಥಮಾಡಿಕೊಳ್ಳಲಾಗುತ್ತದೆ, ಇದು ವಿಜ್ಞಾನ, ಶಾಸ್ತ್ರ ಮತ್ತು ಯೋಗದ ಮೂಲಕ ಪ್ರಾಪ್ತವಾಗುತ್ತದೆ. 'ಸರಹಸ್ಯಮ್' ಅಂದರೇ ಮಂತ್ರ ಸಹಿತ ಎಂದರ್ಥ ॥೩೦॥

ಶ್ರೀಶುಕದೇವಪಾದರು ರಚಿಸಿರುವ 'ಸಿದ್ಧಾಂತಪ್ರದೀಪ'

ಏವಂ ಬ್ರಹ್ಮಂಣಾ ಪ್ರಾರ್ಥಿತಃ ಆಹ ಭಗವಾನ್–ಜ್ಞಾನಮಿತಿ । ಯತ್ ಪರಮಗುಹ್ಯಂ ಪರಮಗೋಪ್ಯಂ, ಸರಹಸ್ಯಂ ರಹಸ್ಯೇನ ಭಕ್ತಿಯೋಗೇನ ಸಹಿತಂ ಯಸ್ಮಿನ್ ಜಾತೆ ಭಕ್ತಿಯೋಗೋ ದೃಢೋ ಭವೇದೇವಂಭೂತಮಿತ್ಯರ್ಥಃ । ಸವಿಜ್ಞಾನಂ ವಿಜ್ಞಾನೇನ ವಿವಿಧಗುಣಶಕ್ತಿವಿಷಯಕೇಣ ಅವಾಂತರಜ್ಞಾನೇನ ಸಹಿತಮ್ । ಏವಂಭೂತಮ್ ಅಸ್ಮದ್ವಿಷ್ಯಕಂ ಜ್ಞಾನಂ, ತಸ್ಯಾಂಗಮ್ ತತ್ಪ್ರತಿಪಾದಕ– ಚತುಃಶ್ಲೋಕ್ಯಾತ್ಮಕಂ ಶಾಸ್ತ್ರಂ; ಯದ್ವಾ, ತಸ್ಯಾಂಗಂ ಉಪಾಯಂ ಚ ಮಯಾ ಗದಿತಂ ಮೇ ಮತ್ತಃ ಗೃಹಾಣ ॥೩೦॥

ಭಾವಾನುವಾದ– ಈ ಪ್ರಕಾರ ಶ್ರೀಬ್ರಹ್ಮನ ಮೂಲಕ ಪ್ರಾರ್ಥಿತರಾಗಿ ಶ್ರೀಭಗವಂತ ಹೀಗೆ ಹೇಳುತ್ತಿದ್ದಾರೆ– 'ಪರಮಗುಹ್ಯ' ಅಂದರೆ ಪರಮ ಗೋಪನೀಯ ಜ್ಞಾನ, 'ಸ–ರಹಸ್ಯ' ಶಬ್ದದ ಅರ್ಥ– ಭಕ್ತಿಯೋಗದೊಂದಿಗೆ, ಅಂದರೆ ಯಾವ ಜ್ಞಾನ (ಸಂಬಂಧಜ್ಞಾನ) ವು ಉದಿತವಾದರೆ ಭಕ್ತಿಯೋಗವು (ಅಭಿಧೇಯ) ದೃಢವಾಗುತ್ತದೋ– ಅದೇ ಈ ಪ್ರಕಾರದ ಜ್ಞಾನ. 'ಸ–ವಿಜ್ಞಾನ' ಶಬ್ದದ ಅರ್ಥವು –ವಿಜ್ಞಾನ ಅಂದರೆ ವಿವಿಧ ಗುಣ–ಶಕ್ತಿ–ವಿಷಯ ಸ್ವರೂಪಜ್ಞಾನದೊಂದಾದದ್ದು . ಈ ರೀತಿ ನನ್ನ ಸಂಬಂಧದಲ್ಲಿ ಯಾವ ಜ್ಞಾನವಿದೆಯೋ, ಅದರ ಅಂಗ ಅಂದರೆ ಪರಮಗುಹ್ಯ ಭಕ್ತಿಯೋಗರೂಪ ಜ್ಞಾನದ ಪ್ರತಿಪಾದಕ ಚತುಃಶ್ಲೋಕಾತ್ಮಕ ಶಾಸ್ತ್ರವನ್ನು ಅಥವಾ ಯಾವ ಪ್ರಕಾರದಿಂದ ಭಕ್ತಿಯೋಗವು ಪ್ರಕಾಶವಾಗಬಹುದು, ಇಂತಹ ಉಪಾಯವನ್ನು ನನ್ನಿಂದ ಗ್ರಹಿಸು ॥೩೦॥

ಶ್ರೀವಲ್ಲಭಾಚಾರ್ಯಪಾದರು ರಚಿಸಿರುವ 'ಸುಬೋಧಿನಿ'

ಏವಂ ಪರಾವರಜ್ಞಾನಂ, ಕ್ರೀಡಾಜ್ಞಾನಂ, ಶಿಕ್ಷಾ, ಗರ್ವಾಭಾವಶ್ಚೇತಿ ಚತ್ವಾರಃ ಪ್ರಾರ್ಥಿತಾಃ। ತತ್ರ ಕ್ರಮಾಜ್ಜ್ಞಾನದ್ವಯೆ ಶ್ಲೋಕದ್ವಯಮ್ । ಶಿಕ್ಷಾಯಾಂ ಚತುಃಶ್ಲೋಕೀ । ಅನೇನೈವ ಗರ್ವಾಭಾವ ಇತ್ಯಂತಿಮಃ ಶ್ಲೋಕಃ । ಏವಂ ಸಪ್ತಭಿಃ ಶ್ಲೋಕೈಶ್ಚತುರ್ಣಾಮುತ್ತರಂ ಭವತಿ, ತತ್ರ ಪ್ರಥಮಂ ಜ್ಞಾನದ್ವಯೆ ಉತ್ತರಮಾಹಜ್ಞಾನಮಿತಿ । ಮೇ ಪುರುಷೋತ್ತಮಸ್ಯ

ಯಜ್‌ಜ್ಞಾನಂ ತತ್ಪರಮಗುಹ್ಯಂ, ವಕ್ತವ್ಯಂ ನ ಭವತಿ । ಯಾದೃಶಂ ಮಾಂ ಪಶ್ಯಸಿ ತಾದೃಶ ಎವಾಽಹಂ ಪುರುಷೋತ್ತಮಃ । ಇದಮೇವ ಮಮಾದಿರೂಪಂ ಅಂತಿಮಂ ರೂಪಂ ಚ, ಇದಂ ಮದನ್ಯಃ ಕೋಽಪಿ ನ ಜಾನಾತಿ । ಅತೋ ಮಯ್ಯೈವ ಗದಿತಂ ಸಾಮಾನ್ಯತೋ ನಿರೂಪಿತಂ, ತ್ವಂ ಗೃಹಾಣ । ಭಗವದ್‌ಬುದ್ಧ್ಯಾ ಸಿದ್ಧಂ ಭಗವದ್ಗುಣಜ್ಞಾನಾವತಾರರೂಪಂ ಭಗವಜ್‌ಜ್ಞಾನಂ ಗೃಹಣೇತ್ಯರ್ಥಃ । ಭಗವತೋ ಹಿ ಜ್ಞಾನಂ ಗದಿತಮಪಿ ಕೃಪಾವ್ಯತಿರೇಕೇಣ ನ ಪ್ರಾಪ್ಯತ ಇತಿ ಸಿದ್ಧವತ್ಕಾರೇಣ ದದದಾಹ–ಗೃಹಾಣೇತಿ । ಉಪದೇಶಪೂರ್ವಕಂ ಬ್ರಹ್ಮಣೆ ಜ್ಞಾನಂ ದತ್ತವಾನಿತ್ಯರ್ಥಃ । ತಸ್ಯ ಜ್ಞಾನಸ್ಯ ಪರಿಕರಮಾಹ–ಯದ್ವಿಜ್ಞಾನಸಮನ್ವಿತಮಿತಿ । ವಿವಿಧಂ ಜ್ಞಾನಂ ವಿಜ್ಞಾನಂ । ಅಸ್ಯಾನುಭವಸ್ಯ ಜಾತತ್ವಾತ್ ಅಸ್ಯೈವ ಜ್ಞಾನರೂಪತ್ವಾತ್, ವಿಜ್ಞಾನಂ ನಾನುಭವಃ । ಕಿಂತು, *'ಅಖಿಲಸಾತ್ವತಾಂ ಪತಿಮ್'* (ಶ್ರೀಮದ್ಭಾ ೨/೯/೧೪) ಇತ್ಯಾದಿ ಪತಿ ಚತುಷ್ಟಯಜ್ಞಾನಂ ವಿಜ್ಞಾನಂ ತೇನ ಸಮನ್ವಿತಂ ಜ್ಞಾನಂ । ತಸ್ಯ ರಹಸ್ಯಂ ಸುನಂದನಂದಾದಿವೇಷ್ಟಿತತ್ವಮ್ । ಭಕ್ತಿರಿತಿ ಯಾವತ್ । ತಸ್ಯಾಂಗಮ್ *'ಭೃತ್ಯಪ್ರಸಾದಾಭಿಮುಖಂ' (ಶ್ರೀಮದ್ಭಾ ೨/೯/೧೫)* ಇತ್ಯಾದಿಭಿಃ ನಿರೂಪಿತಾನಿ ಪ್ರಸಾದಾದೀನಿ। ಚಕಾರಸ್ತ್ವನುಕ್ತಸರ್ವಸಮುಚ್ಚಯಾರ್ಥಃ । ಕಿಂ ಬಹುನಾ? ಯತ್ಕಿಂಚಿತ್ವಯಾ ವೈಕುಂಠೆ ದೃಷ್ಟಂ, ತಸ್ಯ ಸರ್ವಸ್ಯ ಜ್ಞಾನಂ ತವ ಭವತ್ವಿತ್ಯರ್ಥಃ ॥೩೦॥

ಭಾವಾನುವಾದ– ಈ ಪ್ರಕಾರ ಶ್ರೀಬ್ರಹ್ಮದೇವರು ಶ್ರೀಭಗವಂತನಲ್ಲಿ ಪರ–ಅಪರ ಜ್ಞಾನ, ಭಗವತ್–ಲೀಲಾ ಜ್ಞಾನ, ಜಗತ್–ರಚನೆಯ ಶಿಕ್ಷಣ ಮತ್ತು ಗರ್ವನಾಗದಿರುವುದು ಈ ನಾಲ್ಕು ವರಗಳಿಗಾಗಿ ಪ್ರಾರ್ಥಿಸಿದರು. ಇವುಗಳಲ್ಲಿ ಕ್ರಮವಾಗಿ ಎರಡು ಶ್ಲೋಕಗಳಲ್ಲಿ (೨/೯/೩೦–೩೧) ಎರಡು ಪ್ರಕಾರದ ಜ್ಞಾನದ ವರ್ಣನೆಯಾಗಿದೆ ಅರ್ಥಾತ್ 'ಜ್ಞಾನಂ ಪರಮಗುಹ್ಯಂ' ಶ್ಲೋಕದ ಮೂಲಕ ಪರ–ಅಪರ ಜ್ಞಾನ ಮತ್ತು 'ಯಾವಾನಹಮ್' ಶ್ಲೋಕದ ಮೂಲಕ ಭಗವತ್–ಲೀಲಾ ಜ್ಞಾನವನ್ನು ಶ್ರೀಭಗವಂತನ ಮೂಲಕ ಉಪದೇಶಿಸಲಾಗಿದೆ. ಜಗತ್–ರಚನೆಯ ಶಿಕ್ಷಣವನ್ನು ನಾಲ್ಕು ಶ್ಲೋಕಗಳಲ್ಲಿ ಅಂದರೆ ಚತುಃಶ್ಲೋಕಿ ರೂಪದಲ್ಲಿ ಹೇಳಲಾಗಿದೆ ಮತ್ತು ಇದನ್ನು ಅರ್ಥಮಾಡಿಕೊಳ್ಳುವುದರಿಂದಲೇ ಗರ್ವರಹಿತನಾಗುವ ವಿಷಯವು ಅಂತಿಮ ಶ್ಲೋಕದಲ್ಲಿ ನಿರ್ದಿಷ್ಟವಾಗಿದೆ. ಈ ರೀತಿಯಾಗಿ (ಈ ಶ್ಲೋಕ ೩೦ ರಿಂದ ೩೬ ರವರೆಗೆ) ಏಳು ಶ್ಲೋಕಗಳಲ್ಲಿ ನಾಲ್ಕು ಪ್ರಶ್ನೆಗಳಿಗೆ ಉತ್ತರವನ್ನು ಕೊಡಲಾಗಿದೆ.

ಅದರಲ್ಲಿ ಮೊದಲನೆಯ ಎರಡು ಪ್ರಕಾರದ ಜ್ಞಾನದ ನಿರೂಪಣೆ ಮಾಡುವಾಗ ಶ್ರೀಭಗವಂತ 'ಜ್ಞಾನಂ' ಮುಂತಾದ ಶ್ಲೋಕದ ಮೂಲಕ ಹೇಳುತ್ತಿರುವುದೇನೆಂದರೆ, 'ಮೇ' ಅರ್ಥಾತ್ ನನ್ನ ಯಾವ ಪುರುಷೋತ್ತಮ ಜ್ಞಾನವಿದೆಯೋ, ಅದು ಪ್ರಮಗುಹ್ಯವಾದದ್ದು. ಅದನ್ನು ಶಬ್ದಗಳ ಮೂಲಕ ವ್ಯಕ್ತಪಡಿಸಲಾಗುವುದಿಲ್ಲ. ನೀನು ನನ್ನನ್ನು ಯಾವ ರೂಪದಲ್ಲಿ ಕಾಣುತ್ತಿದ್ದೀಯೋ, ನಾನು ಅದೇ ರೂಪದಲ್ಲಿ ಪುರುಷೊತ್ತಮನಾಗಿದ್ದೇನೆ ಮತ್ತು ಇದೇ ನನ್ನ ಆದಿ ಮತ್ತು ಅಂತ್ಯ ಅಥವಾ ನಿತ್ಯ. ಇದನ್ನು ನನ್ನನ್ನು ಹೊರತುಪಡಿಸಿ ಬೇರೆ ಯಾರೂ ಸಹ ಅರಿಯರು. ಆದ್ದರಿಂದ

ನಾನು ಖುದ್ದಾಗಿ ನನ್ನ ಈ ರೂಪದ ಸಂಬಂಧದಲ್ಲಿ ಸಾಮಾನ್ಯವಾಗಿ ನಿರೂಪಣೆ ಮಾಡುತ್ತಿದ್ದೇನೆ, ನೀನು ಇದನ್ನು ಗ್ರಹಿಸು. ಅಂದರೆ ಭಗವತ್-ಬುದ್ಧಿಯಲ್ಲಿ (ಹೃದಯದಲ್ಲಿ) ನಿತ್ಯ ಸ್ಥಿತವಾದ ಭಗವತ್-ಗುಣಗಳ ಜ್ಞಾನಾವತಾರರೂಪ ಭಗವತ್-ಜ್ಞಾನವನ್ನು ನೀನು ಗ್ರಹಿಸು. (ಅರ್ಥಾತ್ ಶ್ರೀಭಗವಂತನಲ್ಲಿ ಎಲ್ಲವೂ ಸ್ಥಿರ ಅರ್ಥಾತ್ ನೆಲೆಸಿರುತ್ತದೆ, ಪಡೆಯಬೇಕಾದದ್ದು ಏನೂ ಇಲ್ಲ. ಆದುದರಿಂದ ಶ್ರೀಭಗವಂತನಲ್ಲಿ ಸ್ಥಿತವಾದ ಈ ಜ್ಞಾನವನ್ನು ನೀನು ಗ್ರಹಿಸು.) ಶ್ರೀಭಗವಂತನ ಮೂಲಕ ತನ್ನ ಸ್ವರೂಪದ ಜ್ಞಾನ ವಿವರಣೆಯನ್ನೂ ಸಹ ಬ್ರಹ್ಮದೇವರಿಗೆ ಅವನ {ಭಗವಂತನ} ಕೃಪೆಯಿಲ್ಲದೆ ಪ್ರಾಪ್ತಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಆದುದರಿಂದ ಶ್ರೀಭಗವಂತನೇ ಬ್ರಹ್ಮನಲ್ಲಿ ಕೃಪೆಮಾಡಿ ವರವನ್ನು ಪ್ರಸಾದಿಸುತ್ತಿರುವಾಗ ಹೀಗೆ ಹೇಳಿದರು- "ಗೃಹಾಣ ಅರ್ಥಾತ್ ನೀನು ಇದನ್ನು ಗ್ರಹಿಸು." ಅಂದರೆ ಸ್ವಯಂ ಶ್ರೀಭಗವಂತನೇ ಉಪದೇಶದ ರೂಪದಲ್ಲಿ ಶ್ರೀಬ್ರಹ್ಮದೇವರಿಗೆ ಈ ಜ್ಞಾನವನ್ನು ಪ್ರಸಾದಿಸಿದನು.

ಈ ಜ್ಞಾನ ಪರಿಚಯದ ಸಂಬಂಧದಲ್ಲಿ 'ಯದ್ವಿಜ್ಞಾನಸಮನ್ವಿತಮ್' ಇತ್ಯಾದಿ ಪದದ ಮೂಲಕ ಹೇಳುತ್ತಿದ್ದಾರೆ, ಕೆಲವರು 'ಜ್ಞಾನ'ದ ಅರ್ಥ ಸ್ವರೂಪಜ್ಞಾನ ಮತ್ತು 'ವಿಜ್ಞಾನ' ದ ಅರ್ಥ ಅವನ ಅನುಭವದ ರುಪವೆಂದು ಹೇಳುತ್ತಾರೆ, ಅದು ಸರಿಯಲ್ಲ. ಇದಕ್ಕೆ ಕಾರಣವೇನೆಂದರೆ ಈ ಜ್ಞಾನದ ಅನುಭವವಾಗುವುದರಿಂದ ವಿಜ್ಞಾನದ ಅರ್ಥವು ಅನುಭವವಾಗುವುದಿಲ್ಲ. 'ದದರ್ಶ ತತ್ರಾಖಿಲ ಸಾತ್ವತಂ ಪತಿಂ' (ಶ್ರೀಮದ್ಭಾಗವತಂ ೨/೯/೧೪) ಶ್ಲೋಕದಲ್ಲಿ ಶ್ರೀಭಗವಂತನಿಗೆ ಯಾವ ನಾಲ್ಕು ಪ್ರಕಾರದ ಪತಿರೂಪದಲ್ಲಿ ಹೇಳಲಾಗಿದಿಯೋ, ಆ ನಾಲ್ಕು ಪ್ರಕಾರದ ಪತಿ-ಸಂಬಂಧಿತ ಜ್ಞಾನವನ್ನೇ ಇಲ್ಲಿ 'ವಿಜ್ಞಾನ' ಎಂಬ ಶಬ್ದದಿಂದ ನಿರ್ದಿಷ್ಟ ಪಡಿಸಲಾಗಿದೆ. ಅಂತಹ ಪತಿ-ಚತುಷ್ಟ ಜ್ಞಾನದಲ್ಲಿ ಸಂಪೂರ್ಣ ವಿಶ್ವ ಮತ್ತು ವಿಶ್ವಪತಿ ಸಂಬಂಧಿತವಾದ ವಿವಿಧ ಜ್ಞಾನ ಉಪದಿಷ್ಟವಾಗಿದೆ ಮತ್ತು ಈಗ ಶ್ರೀಭಗವಂತನು ಬ್ರಹ್ಮದೇವರಿಗೆ ಆ ವಿವಿಧ ಜ್ಞಾನದೊಂದಿಗೆ ಗುಹ್ಯಜ್ಞಾನವನ್ನು ಕೊಡುತ್ತಿದ್ದಾನೆ.

ಆ ಜ್ಞಾನದ ರಹಸ್ಯ-ಸುನಂದ-ನಂದಾದಿಗಳಿಂದ ಪರಸ್ಪರ ಭಗವತ್-ಪ್ರಸಾದವಾಗಿದೆ ಅಂದರೆ ಪ್ರಚಾರಿತ ಭಗವತ್-ಅನುಗ್ರಹವಾಗಿದೆ. ಈ ಜ್ಞಾನವು ಭಕ್ತಿರೂಪದಿಂದಲೂ ಸಹ ಒಂದು ಸ್ವರೂಪವುಂಟು ಅರ್ಥಾತ್ ತನ್ನ ಸ್ವರೂಪಜ್ಞಾನದೊಂದಿಗೆ ಶ್ರೀಭಗವಂತನು ಬ್ರಹ್ಮದೇವರಿಗೆ ಭಗವತ್ ಭಕ್ತಿಯನ್ನೂ ಸಹ ದಾನ ಮಾಡಿದ್ದಾನೆ. ಜ್ಞಾನದ ರಹಸ್ಯ ಭಗವದ್ಭಕ್ತಿಯೊಂದಿಗೆ ಶ್ರೀಭಗವಂತನು ಬ್ರಹ್ಮದೇವರಿಗೆ ಆ ಭಕ್ತಿಯ ಅಂಗವನ್ನೂ ಸಹ ದಾನ ಮಾಡಿದ್ದಾರೆ. 'ಭೃತ್ಯಪ್ರಸಾದಾಭಿಮುಖಮ್' (ಶ್ರೀಮದ್ಭಾಗವತಂ ೨/೯/೧೫) ಇತ್ಯಾದಿ ಶ್ಲೋಕದಲ್ಲಿ ಭಗವಂತನ ಕೃಪೆ ಮುಂತಾದವುಗಳ ಯಾವ ನಿರೂಪಣೆ ಮಾಡಲಾಗಿದೆಯೋ, ಅದು ಭಗವತ್-ಕೃಪೆಯ ಈ ಜ್ಞಾನದ ಅಂಶವಾಗಿದೆ. ಅದನ್ನೂ ಸಹ ಶ್ರೀಭಗವಂತನು ಬ್ರಹ್ಮದೇವರಿಗೆ ನೀಡಿದ್ದಾನೆ. ಮೂಲ ಶ್ಲೋಕದಲ್ಲಿ 'ಚ' ಕಾರದ ಪ್ರಯೋಗದಿಂದ ಯಾವುದೆಲ್ಲ ವ್ಯಕ್ತವಾಗಿಲ್ಲವೋ, ಅದನ್ನೂ ಸಹ ಗ್ರಹಿಸಬೇಕು. ಮತ್ತೆ

ಅಧಿಕವಾಗಿ ಎನು ಹೇಳಲಿ' ಹೇ ಬ್ರಹ್ಮ! ವೈಕುಂಠದಲ್ಲಿ ನೀನು ಯಾವುದೇಲ್ಲವನ್ನು ನೋಡಿದೆಯೋ, ಅವೇಲ್ಲ ಜ್ಞಾನವೂ ನಿನ್ನದಾಗಲಿ॥೩೦॥

ತಥ್ಯ–

ವೇದಾಂತೆ ಪರಮಂ ಗುಹ್ಯಂ ಪುರಾಕಲ್ಪೆ ಪ್ರಚೋದಿತಮ್ ।
ನಾಪ್ರಶಾಂತಾಯ ದಾತ್ವಯಂ ನ ಪುತ್ರಯಾಶಿಷ್ಯಾಯ ವಾ ಪುನಃ ॥

ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ ।
ತಸ್ಯೈತೆ ಕಥಿತಾ ಹ್ಯರ್ಥಾಃ ಪ್ರಕಾಶಂತೆ ಮಹಾತ್ಮನಃ ॥
(ಶ್ವೆ. ಉ. ೬/೨೨–೨೩)

ಉಪನಿಷದ್ಗಗಳಲ್ಲಿ ಪರಮಗುಹ್ಯವಾದ ಈ ವಿದ್ಯೆಯನ್ನು ಪೂರ್ವಕಲ್ಪದಲ್ಲಿ ಉಪದೇಶ ಮಾಡಲಾಗಿತ್ತು. ಯಾರ ಚಿತ್ತವು ಅತ್ಯಂತ ವಿಚಲಿತವಾಗಿರುವುದೋ ಅಂದರೆ ವಿಷಯಾಸಕ್ತಿಯ ಮಲದಿಂದ ದೂರನಾಗದಿರುತ್ತಾನೋ ಮತ್ತು ಯಾವ ವ್ಯಕ್ತಿ ಪುತ್ರ ಅಥವಾ ಶಿಷ್ಯನಲ್ಲದವನಾಗಿರುತ್ತಾನೋ, ಅಂತಹ ಮನುಷ್ಯನಿಗೆ ಈ ಜ್ಞಾನವನ್ನು ಕೊಡಬಾರದು.

ಯಾವ ವ್ಯಕ್ತಿಗೆ ಶ್ರೀಭಗವಂತನಲ್ಲಿ ಪರಮ ಭಕ್ತಿಯಿದಿಯೋ ಮತ್ತು ಶ್ರೀಭಗವಂತನಿಗೆ ಸಮಾನವಾಗಿ ಶ್ರೀಗುರುದೇವರಲ್ಲೂ ಸಹ ಪರಮಭಕ್ತಿಯಿಂದಿರುವನೋ, ಅಂತಹ ಮಹಾತ್ಮನ ಹೃದಯದಲ್ಲಿ ಶೃತಿಗಳಲ್ಲಿನ ಎಲ್ಲ ಮರ್ಮಾರ್ಥವು ಪ್ರಕಾಶಿತವಾಗುತ್ತದೆ.

ಶ್ರೀಮದ್ಭಗವದ್ಗೀತೆಯಲ್ಲಿ ಅರ್ಜುನನೊಂದಿಗೆ ಶ್ರೀಭಗವಂತನ ವಚನಗಳು'

ಇದಂತು ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ ।
ಜ್ಞಾನಂ ವಿಜ್ಞಾನಸಹಿತಂ ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥
(ಶ್ರೀಮದ್ಭಗವದ್ಗೀತ ೯/೧)

ಹೇ ಅರ್ಜುನ! ನೀನು ಅಸೂಯೆ ಇಲ್ಲದವನು, ಆದುದರಿಂದ ನಾನು ನಿನಗೆ ವಿಜ್ಞಾನಯುಕ್ತವಾದ, ಕೇವಲ ಶುದ್ಧಭಕ್ತಿ–ಲಕ್ಷಣದಿಂದ ಯುಕ್ತವಾದ ಈ ಜ್ಞಾನವನ್ನು ತಿಳಿಸಿಕೊಡುತ್ತಿದ್ದೇನೆ, ಇದನ್ನು ತಿಳಿದು ನೀನು ಈ ದುಃಖಮಯ ಸಂಸಾರದಿಂದ ಪಾರಾಗುತ್ತೀಯೆ.

ಸರ್ವಗುಹ್ಯತಮಂ ಭೂಯಃ ಶೃಣು ಮೇ ಪರಮಂ ವಚಃ ।
ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಮ್ ॥
(ಶ್ರೀಮದಭಗವದ್ಗೀತ ೧೮/೬೪)

ಹೇ ಅರ್ಜುನ! ಎಲ್ಲರ ಅಪೇಕ್ಷೆಯ ಅತ್ಯಂತ ರಹಸ್ಯಮಯವಾದ ನನ್ನ ಪರಮ ವಚನಗಳನ್ನು ಮತ್ತೆ ಕೇಳು. ನೀನು ನನಗೆ ಅತ್ಯಂತ ಪ್ರಿಯನಾದವನು, ಹೀಗಾಗಿ ನಾನು ನಿನ್ನ ಹಿತಕ್ಕಾಗಿಯೇ ಹೇಳುತ್ತಿದ್ದೇನೆ.

ಅರ್ಥಾತ್, ನಾನು ನಿನಗೆ 'ಗುಹ್ಯ ಬ್ರಹ್ಮ-ಜ್ಞಾನ' ಮತ್ತು 'ಗುಹ್ಯತರ ಈಶ್ವರ-ಜ್ಞಾನವನ್ನು ತಿಳಿಸಿಕೊಟ್ಟಿದ್ದೇನೆ. ಈಗ 'ಗುಹ್ಯತಮ ಭಗವತ್-ಜ್ಞಾನದ ಉಪದೇಶವನ್ನು ನೀಡುತ್ತಿದ್ದೇನೆ" ಎಂದರ್ಥ

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ॥

(ಶ್ರೀಮದ್ಭಗವದ್ಗೀತ ೧೮/೬೫)

ನೀನ ನನ್ನಲ್ಲಿ ಚಿತ್ತವನ್ನು ಸಮರ್ಪಿಸು, ನನ್ನ ನಾಮ, ರೂಪ, ಲೀಲೆ ಇತ್ಯಾದಿಗಳ ಶ್ರವಣ-ಕೀರ್ತನಾದಿಗಳಲ್ಲಿ ಆಸಕ್ತಿಯುಳ್ಳವನಾಗಿ ನನ್ನ ಭಕ್ತನಾಗು, ನನ್ನನ್ನು ಪೂಜಿಸುವಂತವನಾಗು ಮತ್ತು ನನಗೆ ನಮಸ್ಕರಿಸು. ಈ ಪ್ರಕಾರ ನೀನು ನನ್ನನ್ನೇ ಪ್ರಾಪ್ತಿಸಿಕೊಳ್ಳುವೆ. ನಾನು ನಿನ್ನಲ್ಲಿ ಈ ಸತ್ಯದ ಪ್ರತಿಜ್ಞೆಯನ್ನು ಮಾಡುತ್ತಿದ್ದೇನೆ, ಏಕೆಂದರೆ ನೀನು ನನಗೆ ಪ್ರಿಯನಾದವನು.

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾಂ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥
(ಶ್ರೀಮದ್ಭಗವದ್ಗೀತ ೧೮/೬೬)

ವರ್ಣ, ಆಶ್ರಮ ಮುಂತಾದ ಸಮಸ್ತ ಶಾರೀರಿಕ ಮತ್ತು ಮಾನಸಿಕ ಧರ್ಮಗಳನ್ನು ಪರಿತ್ಯಜಿಸಿ ನನಗೆ ಶರಣಾಗತನಾಗು. ನಾನು ನಿನ್ನನ್ನು ಎಲ್ಲ ಪಾಪಗಳಿಂದಲೂ ಮುಕ್ತನನ್ನಾಗಿ ಮಾಡುವೆ, ನೀನು ಶೋಕಿಸಬೇಡ.

ಯ ಇಮಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ ।
ಭಕ್ತಿಂ ಮಯಿ ಪರಾಂ ಕೃತ್ವಾ ಮಾಮೇವೈಷ್ಯತ್ಯಸಂಶಯಃ ॥
(ಶ್ರೀಮದ್ಭಗವದ್ಗೀತ ೧೮/೬೮)

ಯಾರು ಪರಮಗುಹ್ಯತಮವಾದ ಈ ಗೀತಾಶಾಸ್ತ್ರದ ಉಪದೇಶವನ್ನು ನನ್ನ ಭಕ್ತರಿಗೆ ತಿಳಿಸಿಕೊಡುತ್ತಾರೋ, ಅಂತವರು ನನ್ನ ಪರಾಭಕ್ತಿಯನ್ನು ಪ್ರಾಪ್ತಿಸಿಕೊಂಡು ಸಂಶಯರಹಿತರಾಗಿ ನನ್ನನ್ನೇ ಪ್ರಾಪ್ತಿಸಿಕೊಳ್ಳುತ್ತಾರೆ.

ಯದಾ ತಮಸ್ತನ್ನ ದಿವಾ ನ ರಾತ್ರಿರ್ನ ಸನ್ ನ ಚಾಸಚ್ಛಿವ ಎವ ಕೇವಲಃ ।
ತದಕ್ಷರಂ ತತ್ಸವಿತುರ್ವರೇಣ್ಯಂ ಪ್ರಜ್ಞಾ ಚ ತಸ್ಮಾತ್ ಪ್ರಸೃತಾ ಪುರಾಣೀ ॥

(ಶ್ವೆ . ಉ . ೪/೧೮)

ಯಾವ ಸಮಯದಲ್ಲಿ 'ಅತಮ' ಅಂದರೆ ಜ್ಞಾನ ಪ್ರಕಾಶವಾಗುತ್ತದೋ, ಆ ಸಮಯದಲ್ಲಿ ಪ್ರಾಕೃತ ದಿನ ಅಥವಾ ರಾತ್ರಿ ಇರುವುದಿಲ್ಲ, ಸತ್ ಮತ್ತು ಅಸತ್ ಇರುವುದಿಲ್ಲ ಅಂದರೆ ದ್ವೈತ-ಬುದ್ಧಿಯ ಕಾರಣದಿಂದ ಒಳ್ಳೆಯ ಮತ್ತು ಕೆಟ್ಟದಾದ ಜ್ಞಾನರೂಪ ಮನೋಧರ್ಮವು ಲೋಪವಾಗುತ್ತದೆ, ಆಗ ಕೇವಲ ಪರಮಮಂಗಳಮಯವಾದ

ಅದ್ವಯಜ್ಞಾನ–ಪರತತ್ವನಾದ ಶ್ರೀಭಗವಂತನು ಮಾತ್ರ ನೆಲಸಿರುತ್ತಾನೆ. ಅವನೇ ಅಕ್ಷರ, ಅವನೇ ಸವಿತಾನ (ಸೂರ್ಯನ) ವರ್ಣೀಯ ತೇಜಸ್ಸು, ಅವನಿಂದಲೇ ಸನಾತನ ಜ್ಞಾನವು (ಗುರುಪರಂಪರಾಗತವಾದ ಜ್ಞಾನವು) ಪ್ರಕಟಗೊಳ್ಳುತ್ತದೆ.

ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್
ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್ ॥
(ಮುಣ್ಡ. ಉ . ೧/೨/೧೩ ಉತ್ತರಾರ್ಧ)

ಆ ಭಗವತ್–ವಸ್ತುವಿನ ವಿಜ್ಞಾನವನ್ನು (ಪ್ರೇಮಭಕ್ತಿ ಸಹಿತ ಜ್ಞಾನ) ಪ್ರಾಪ್ತಿಸಿಕೊಳ್ಳಲು ಕೈಯಲ್ಲಿ ಯಜ್ಞೀಯ ಅರ್ಪಣೀಯವನ್ನು ಹಿಡಿದು ಶ್ರೋತ್ರಿಯ (ವೇದಗಳ ತಾತ್ಪರ್ಯವನ್ನು ತಿಳಿದವರು) ಮತ್ತು ಬ್ರಹ್ಮನಿಷ್ಠ (ಕೃಷ್ಣತತ್ವವಿದ) ಸದ್–ಗುರುವಿನ ಹತ್ತಿರ ಕಾಯ–ಮನಸ್ಸು–ವಾಖ್ಯದೊಂದಿಗೆ ಪೂರ್ಣ ಸಮರ್ಪಿತ ಭಾವದಿಂದ ಹೋಗಬೇಕು.

ತಸ್ಮೈ ಸ ವಿದ್ವಾನುಪಸನ್ನಾಯ ಸಮ್ಯಕ್ ಪ್ರಶಾಂತಚಿತ್ತಾಯ ಸಮಾನ್ವಿತಾಯ ।
ಯೇನಾಕ್ಷರಂ ಪುರುಷಂ ವೇದ ಸತ್ಯಂ ಪ್ರೋವಾಚ ತಾಂ ತತ್ತ್ವತೋ ಬ್ರಹ್ಮವಿಧ್ಯಾಮ್ ॥
(ಮುಣ್ಡ . ಉ . ೧/೨/೧೩)

ಅಂತಹ ಶ್ರೋತ್ರಿಯ ಬ್ರಹ್ಮನಿಷ್ಠ ಮಹಾತ್ಮನಿಗು (ಗುರುವಿಗು) ಸಹ ಅಗತ್ಯವಾದದ್ದೇನೆಂದರೆ ತನ್ನ ಶರಣದಲ್ಲಿ ಬಂದಿರುವ ಅಂತಹ ಶಿಷ್ಯನಿಗೆ, ಅವನ ಚಿತ್ತ ಪೂರ್ಣವಾಗಿ ಶಾಂತ–ನಿಶ್ಚಲವಾಗಿದ್ದರೇ, ಸಂಸಾರಿಕ ಭೋಗಗಳಲ್ಲಿ ಸರ್ವತಾ ವೈರಾಗ್ಯನಾಗಿರುವ ಕಾರಣ ಅವನ ಚಿತ್ತದಲ್ಲಿ ಯಾವುದೇ ಪ್ರಕಾರದ ಚಿಂತೆ, ವ್ಯಾಕುಲತೆ ಹಾಗೂ ವಿಕಾರವಿರುವುದಿಲ್ಲವೋ, ಅಂತವನು ತನ್ನ ಮನಸ್ಸು, ಬುದ್ಧಿ ಮತ್ತು ಇಂದ್ರಿಯಗಳನ್ನು ವಶದಲ್ಲಿರಿಸಿಕೊಂಡಿದ್ದರೇ, ಆ ಬ್ರಹ್ಮವಿಧ್ಯಯ ತತ್ವ–ವಿವೇಚನಪೂರ್ವಕವಾಗಿ ತುಂಬಚೆನ್ನಾಗಿ ಅರ್ಥಮಾಡಿಕೊಂಡು ಉಪದೇಶನೀಡಿದ್ದಲ್ಲಿ, ಅದರಿಂದಾಗಿ ಆ ಶಿಷ್ಯನು ನಿತ್ಯ ಅವಿನಾಶಿ ಪರಬ್ರಹ್ಮ ಪುರುಷೋತ್ತಮನ ಜ್ಞಾನವನ್ನು ಪ್ರಾಪ್ತಿಸಿಕೊಳ್ಳಬಹುದು.

ಓಂಬ್ರಹ್ಮಾ ದೇವಾನಾಂ ಪ್ರಥಮಃ ಸಂಬಭೂವ ವಿಶ್ವಸ್ಯ ಕರ್ತ ಭುವನಸ್ಯ ಗೋಪ್ತಾ ।
ಸ ಬ್ರಹ್ಮವಿಧ್ಯಾಂ ಸರ್ವವಿಧ್ಯಾಪ್ರತಿಷ್ಠಾಮಥವರ್ಯ ಜ್ಯೇಷ್ಠಪುತ್ರಾಯ ಪ್ರಾಹ ॥
(ಮುಂಡಕ . ಉ . ೧/೧/೧)

ವಿಶ್ವಕರ್ತ ಭುವನಪಾಲಕ ಆದಿದೇವ ಅರ್ಥಾತ್ ಸಮಸ್ತ ದೇವತೆಗಳಿಗಿಂತಲೂ ಪ್ರಪ್ರಥಮವಾಗಿ ಉದ್ಭವರಾದ ಶ್ರೀಬ್ರಹ್ಮದೇವರು ತಮ್ಮ ಜ್ಯೇಷ್ಠ ಪುತ್ರನಾದ ಅಥರ್ವನಿಗೆ ಸಮಸ್ತ ವಿದ್ಯೆಗಳಲ್ಲಿ ಆಧಾರಸ್ವರೂಪವಾದ ಬ್ರಹ್ಮವಿಧ್ಯಯನ್ನು ಉಪದೇಶ ಮಾಡಿದರು.

ಕಾಲೇನ ನಷ್ಟಾ ಪ್ರಲಯೇ ವಾಣೀಯಂ ವೇದಸಂಜ್ಞಿತಾ ।
ಮಯಾದೌ ಬ್ರಹ್ಮಣೇ ಪ್ರೋಕ್ತಾ ಧರ್ಮೋ ಯಸ್ಯಾಂ ಮದಾತ್ಮಕಃ ॥

ತೇನ ಪ್ರೋಕ್ತಾ ಚ ಪುತ್ರಾಯ ಮನವೇ ಪೂರ್ವಜಾಯ ಸಾ ।
ತತೋ ಭೃಗ್ವಾದಯೋಽಗೃಹ್ಣನ್ ಸಪ್ತ ಬ್ರಹ್ಮಮಹರ್ಷಯಃ ॥
(ಶ್ರೀಮದ್ಭಾಗವತಂ ೧೧/೧೪/೩ ' ೪)

ಭಗವಾನ್ ಶ್ರೀಕೃಷ್ಣ ಉದ್ಧವನಿಗೆ ಹೀಗೆ ಹೇಳಿದರು– ಆ ವೇದವಾಣಿಯು ಯಾವುದರಲ್ಲಿ ನನ್ನ ಸ್ವರೂಪಭೂತವಾದ ಧರ್ಮದ (ಭಗವತ್–ಧರ್ಮದ) ವರ್ಣನೆಯಿದೆಯೋ, ಅದು ಕಾಲದ ಪ್ರಭಾವದಿಂದ ಪ್ರಳಯದ ಸಮಯದಲ್ಲಿ ನಷ್ಟವಾಯಿತು. ಪುನಃ ಸೃಷ್ಟಿಯ ಪ್ರಾರಂಭದಲ್ಲಿ ನಾನೇ ಸ್ವತಃ ಸರ್ವಪ್ರಥಮವಾಗಿ ಬ್ರಹ್ಮನಿಗೆ ಇದರ ಉಪದೇಶವನ್ನು ನೀಡಿದೆ. ಬ್ರಹ್ಮನು ತನ್ನ ಜ್ಯೇಷ್ಠ ಪುತ್ರನಾದ ಸ್ವಯಂಭುವ ಮನುವಿಗೆ ಇದೇ ಧರ್ಮದ ಉಪದೇಶವನ್ನು ಕೊಟ್ಟನ್ನು ಮತ್ತು ಮನುವಿನಿಂದ ಭೃಗು, ಅಂಗಿರ, ಮರಿಚಿ, ಪುಲಹ, ಅತ್ರಿ, ಪುಲಸ್ತ್ಯ ಮತ್ತು ಕ್ರತು– ಈ ಏಳು ಮಹರ್ಷಿಗಳು ಗ್ರಹಿಸಿದರು.

ತೇನೇ ಬ್ರಹ್ಮಹೃದಾ ಯ ಆದಿಕವಯೇ ಮುಹ್ಯಂತಿ ಯತ್ ಸೂರ್ಯಃ ।
(ಶ್ರೀಮದ್ಭಾಗವತಂ ೧/೧/೧)

ಯಾರು ಆದಿಕವಿ ಶ್ರೀಬ್ರಹ್ಮನ ಹೃದಯದಲ್ಲಿ ಬುದ್ಧಿ–ವೃದ್ಧಿಯ ಪ್ರವರ್ತನೆಗೊಳಿಸಿ ಅವನ ಹೃದಯದಲ್ಲಿ ತತ್ತ್ವವಸ್ತುವನ್ನು ಪ್ರಕಾಶಿಸಿದ್ದನು.....ಇತ್ಯಾದಿ ।

ಪ್ರಚೋದಿತಾ ಯೇನ ಪುರಾ ಸರಸ್ವತೀ
ವಿತನ್ವತಾಜಸ್ಯ ಸತೀಂ ಸ್ಮೃತಿಂ ಹೃದಿ ।

ಸ್ವಲಕ್ಷಣಾ ಪ್ರಾದುರಭೂತ ಕಿಲಾಸ್ಯತಃ
ಸ ಮೇ ಋಷೀಣಾಮೃಷಭಃ ಪ್ರಸೀದತಾಮ್ ॥
(ಶ್ರೀಮದ್ಭಾಗವತಂ ೨/೪/೨೨)

ಕಲ್ಪದ ಆರಂಭದಲ್ಲಿ ಯಾರು ಬ್ರಹ್ಮನ ಹೃದಯದಲ್ಲಿ ಸೃಷ್ಟಿಗೆ ಸಂಬಂಧಪಟ್ಟ ಸ್ಮೃತಿಯನ್ನು ಪ್ರಕಾಶಿಸಿದ್ದರು; ಯಾರ ಪ್ರೇರಣೆಯಿಂದ ವೇದರೂಪ ಸರಸ್ವತೀಯವರು ಬ್ರಹ್ಮನ ಮುಖಕಮಲದಿಂದ ಪ್ರಕಟಿತರಾದರೆಂಬ ಪ್ರಸಿದ್ಧಿಯಿದೆಯೋ ಮತ್ತು ಅದೇ ಸರಸ್ವತೀದೇವಿ ಶ್ರೀಕೃಷ್ಣನನ್ನೇ ಉಪಾಸನೆಯರೂಪದಲ್ಲಿ ನಿದರ್ಶಿಸುತ್ತಾರೆ – ಜ್ಞಾನ ಪ್ರದಾತರಲ್ಲಿ ಸರ್ವಶ್ರೇಷ್ಠನಾದ ಆ ಶ್ರೀಭಗವಂತನು ನನ್ನಲ್ಲಿ ಪ್ರಸನ್ನರಾಗಲಿ.

ಧರ್ಮಂತು ಸಾಕ್ಷಾತ್ ಭಗವತ್ಪ್ರಣೀತಂ ನ ವೈ ವಿದುರ್‌ಋಷಯೋ ನಾಪಿ ದೇವಾಃ ।
ನ ಸಿದ್ಧಮುಖ್ಯಾ ಅಸುರಾ ಮನುಷ್ಯಾಃ ಕುತೊ ನ ವಿಧ್ಯಾಧರ–ಚಾರಣಾದಯಃ ॥

ಸ್ವಯಂಭೂರ್ನಾರದಃ ಶಂಭುಃ ಕುಮಾರಃ ಕಪಿಲೋ ಮನುಃ ।
ಪ್ರಹ್ಲಾದೋ ಜನಕೋ ಭೀಷ್ಮೋ ಬಲಿರ್ವೈಯಾಸಕಿರ್ವಯಮ್ ॥

ದ್ವಾದಶೌತೇ ವಿಜಾನೀಮೋ ಧರ್ಮಂ ಭಾಗವತಂ ಭಟಾಃ ।
ಗುಹ್ಯಂ ವಿಶುದ್ಧಂ ದುರ್ಬೋಧಂ ಯಂ ಜ್ಞಾತ್ವಾಮೃತಮಶ್ನುತೇ ॥
(ಶ್ರೀಮದ್ಭಾಗವತಾಂ ೬/೩/೧೯–೨೧)

ವಾಸ್ತವದಲ್ಲಿ ಸಾಕ್ಷಾತ್ ಶ್ರೀಭಗವಂತನೇ ಧರ್ಮದ ಮರ್ಯಾದೆಯ ಕರ್ತೃ. ಭೃಗುವಿನಂತಹ ಸತ್ವಗುಣ ಪ್ರಧಾನ ಋಷಿಗಳೂ ಸಹ ಸರಿಯಾಗಿ ತಿಳಿಯರು ಮತ್ತು ದೇವತೆಗಳೂ ಸಹ ಅದನ್ನು ಅರಿಯರು. ಮಹಾ-ಮಹಾನ್ ಸಿದ್ಧರು, ಅಸುರರು ಹಾಗೂ ಮನುಷ್ಯರು- ಯಾರೂ ಸಹ ಅದನ್ನು ಅರಿಯರು. ಹಾಗಿರುವಾಗ ವಿಧ್ಯಾಧರ, ಚಾರಣ, ಮತ್ತು ಮುಂತಾದವರ ವಿಷಯದಲ್ಲಿ ಏನು ಹೇಳುವುದು- ಹೇ ದೂತರೇ! ಸ್ವಯಂಭೂ (ಬ್ರಹ್ಮದೇವರು), ದೇವರ್ಷಿ ನಾರದರು, ಶಂಭು, ಸನತ್ಕುಮಾರರು, ದೇವಹೂತಿ ಪುತ್ರ ಕಪಿಲ, ಸ್ವಾಯಂಭೂವ ಮನು, ಪ್ರಹ್ಲಾದ, ಜನಕ, ಭೀಷ್ಮ, ಬಲಿ, ಶುಕದೇವರು, ಮತ್ತು ನಾನು (ಯಮ)- ನಾವು ಈ ಹನ್ನೆರಡು ಜನ ಮಾತ್ರ ಈ ಭಾಗವತ-ಧರ್ಮದ ತತ್ವವನ್ನು ತಿಳಿದಿದ್ದೇವೆ. ಶ್ರೀಭಗವಂತನ ಮೂಲಕ ನಿರ್ಮಿತವಾದ ಈ ಭಾಗವತ-ಧರ್ಮವು ಪರಮ ಶುದ್ಧ ಹಾಗೂ ಅತ್ಯಂತ ಗೋಪನೀಯವಾದದ್ದು, ಆದುದರಿಂದ ಇದನ್ನು ಅರ್ಥಮಾಡಿಕೊಳ್ಳುವುದು ಬಹಳ ಕಠಿಣ. ಯಾರು ಇದನ್ನು ಅರ್ಥಮಾಡಿಕೊಳ್ಳುವರೋ, ಅಂತಹವರು ಶ್ರೀಭಗವಂತನ ಪರಮಪದರೂಪವಾದ ಪ್ರೇಮಮಯ ಸೇವೆಯನ್ನು ಪಡೆಯುತ್ತಾರೆ ॥೩೦॥

ಶ್ರೀಲ ಭಕ್ತಿಸಿದ್ಧಾಂತ ಸರಸ್ವತಿ ಠಾಕುರ್ 'ಪ್ರಭುಪಾದ' ರ 'ವಿವೃತಿ'

ಅದ್ವಯಜ್ಞಾನತತ್ವನಾದ ಶ್ರೀ ವ್ರಜೇಂದ್ರನಂದನನು ಬ್ರಹ್ಮಜ್ಞಾನ, ಪರಮಾತ್ಮ-ಯೋಗ ಮತ್ತು ಭಗವತ್-ಜ್ಞಾನಗಳಿಗೆ ಏಕಮಾತ್ರ ಆಧಾರ ಸ್ವರೂಪನಾಗಿದ್ದಾನೆ. ಅವನಿಂದಲೇ ಪರಮಾತ್ಮಯೋಗ ಮತ್ತು ಬ್ರಹ್ಮಜ್ಞಾನವು ಪ್ರಕಟಿತವಾಗುತ್ತದೆ ಮತ್ತು ಅವನು ಅದ್ವಯ ಭಗವತ್-ಜ್ಞಾನದೊಂದಿಗೆ ಅಭಿನ್ನನಾಗಿರುತ್ತನೆ. ಅಭಿನ್ನನಾಗಿದ್ದರೂ ಸಹ ಸಾಧಾರಣ, ಗೋಪನೀಯ ಹಾಗೂ ಪರಮ ಗೋಪನೀಯ ಭೇದಗಳಿಂದ ಜ್ಞಾನವು ಮೂರು ವಿಧಗಳಾಗಿವೆ. ಈ ತ್ರಿವಿಧ ಜ್ಞಾನಸ್ವರೂಪದ ಪರಿಚಯದ ಮೂಲಕ ಅಜ್ಞಾನ, ದ್ವೈತಜ್ಞಾನ ಅಥವಾ ಅದ್ವಯಜ್ಞಾನದ ಅಭಾವವು ಕಾಣಿಸಿಕೊಳ್ಳುವುದಿಲ್ಲ. ಎಲ್ಲಿ ಅದ್ವಯಜ್ಞಾನದ ಅಭಾವವಿರುವುದೋ, ಅಲ್ಲಿ ಅಜ್ಞಾನ ಅಥವಾ ಕೈತವ, ಮಾಯೆ ಅಥವಾ ತಮಸ್ಸು ಮತ್ತು ಅನಿತ್ಯ ನಿರಾನಂದವು ನೆಲಸಿರುತ್ತದೆ. ಅದ್ವಯಜ್ಞಾನವು ಸತ್, ಚಿತ್ ಮತ್ತು ಆನಂದ- ಈ ಮೂರು ವೃತ್ತಿಗಳಿಂದ ಪರಿಪೂರ್ಣವಾದ್ದದು. ಎಲ್ಲಿ ಸಚ್ಚಿದಾನಂದದ ಅನುಭವಕ್ಕೆ ಅತಿರಿಕ್ತವಾಗಿ ಕೃತ್ರಿಮ ಭೇದಜ್ಞಾನವು ಅದ್ವಯಜ್ಞಾನಕ್ಕೆ ತೊಂದರೆಯನ್ನುಂಟು ಮಾಡುತ್ತದೋ, ಅಲ್ಲಿ ಸತ್ಯ ಪರಮೇಶ್ವರ ಭಗವಂತನ ಅನುಭೂತಿಯ ಅಂಶ ರೂಪದಿಂದ ಆವೃತ್ತವಾಗಿರುತ್ತದೆ. ಸಾಧಾರಣ ಕೇವಲ-ಜ್ಞಾನವಾದಿಗಳು ಯಾವ ಅದ್ವಯಜ್ಞಾನವನ್ನು ಧ್ಯೇಯ ಮಾಡಿಕೊಂಡಿರುತ್ತಾರೋ, ಅವರ ಅಪೇಕ್ಷೆಯ ಪರಮಾತ್ಮಯೋಗದಲ್ಲಿ ಅಧಿಕ ಪೂರ್ಣವಾಗಿರುತ್ತದೆ. ಪರಮಾತ್ಮಯೋಗದಲ್ಲಿ ಶಕ್ತಿ ಮತ್ತು ಶಕ್ತಿವಂತನ ವಿಚಾರವು ನಿಃಶಕ್ತಿಕವಾದ ಬ್ರಹ್ಮಜ್ಞಾನಕ್ಕೆ ಪ್ರತಿಕೂಲವಾಗಿದ್ದರೂ ಸಹ ಅದು ಅದ್ವಯಜ್ಞಾನಾತ್ಮಕವಾದದ್ದು. ಪರಮಾತ್ಮನ

ಶಕ್ತಿಯ ವಿಚಾರದಿಂದ ಶಕ್ತಿವಂತನ ಸಮಸ್ತ ಅಂಗಗಳಲ್ಲಿ ಮೂರು ಪ್ರಕಾರದ ಅಂಗವು ವಿಚಾರಿತವಾಗುತ್ತದೆ– ಪರಮಾತ್ಮನ 'ಅಂತರಂಗ', ಪರಮಾತ್ಮನ 'ಬಹಿರಂಗ' ಮತ್ತು ಪರಮಾತ್ಮನ 'ತಟಾಂಗ'. ಅಂಶಿಯ ಅಂಗ ಪರಿಚಯದಲ್ಲಿ ಮೂರು ಶಕ್ತಿಗಳು– ತದ್ರೂಪವೈಭವ, ಜೀವ ಮತ್ತು ಪ್ರಧಾನ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಪರಮಾತ್ಮನ 'ಅಂತರಂಗ' ಶಕ್ತಿಯಿಂದ ಪ್ರಕಟಿತವಾದ ತದ್ರೂಪವೈಭವವು 'ಭಕ್ತಿಯೋಗ ಮಾಯಪ್ರಭಾವ–ಪ್ರಕಟಿತ' ಎಂಬ ಹೆಸರಿನಿಂದ ಪರಿಚಿತವಾಗಿದೆ. ಪರಮಾತ್ಮನ 'ಬಹಿರಂಗ'– ಶಕ್ತಿಯಿಂದ ಪ್ರಕಟಿತವಾದ ಪ್ರಕೃತಿ–ಬ್ರಹ್ಮಾಂಢವನ್ನು ಉತ್ಪನ್ನ ಮಾಡುವವಂತಹ ಗುಣಮಾಯೆಯು ಕಾಲ ಪ್ರಭಾವದಿಂದ ಕ್ಷೋಬೆಗೊಂಡ ಕಾರಣ ನಶ್ವರ ವಿಚಿತ್ರವಾದ ಸಂಪನ್ನತೆಯನ್ನು {ಸೃಷ್ಟಿ} ಮಾಡುವುದರಲ್ಲಿ ನಿಪುಣರು ಮತ್ತು ಪರಮಾತ್ಮನ ಅಂತರಂಗ ಮತ್ತು ಬಹಿರಂಗ ಶಕ್ತಿಗಳ ಎಲ್ಲೆಯ ಮಧ್ಯದಲ್ಲಿ 'ತಟಸ್ಥ' ಎಂಬ ಹೆಸರಿನ ಜೀವಮಾಯೆಯು ನಿತ್ಯಕಾಲವು ಶಕ್ತಿವಂತನ ಶಕ್ತಿಯ ಆಶ್ರಯವನ್ನು ಪಡೆದುಕೊಂಡು ಶಕ್ತಿ ಮತ್ತು ಶಕ್ತಿವಂತನ ಅಭೇದತತ್ವವನ್ನ ಏಕಕಾಲದಲ್ಲಿ ಸಿದ್ಧಪಡಿಸುತ್ತದೆ. ಇದಕ್ಕೆ ಅತಿರಿಕ್ತವಾದ ಶಕ್ತಿ ಮತ್ತು ಶಕ್ತಿವಂತನ ಲೀಲಾ–ವೈವಿಧ್ಯತೆಯು ಪರಸ್ಪರ ಭೇದಯುಕ್ತವಾಗಿದ್ದರೂ ಸಹ ಪರಮಾತ್ಮನ ಅದ್ವಯಜ್ಞಾನದ ಸಾಕ್ಷಿಯನ್ನು ಅನುಗ್ರಹಿಸುತ್ತದೆ.

ಶಕ್ತಿಯ ವಿಚಾರದಿಂದ ದೂರನಾಗಿ ವಸ್ತುವಿನ ಅದ್ವಯಜ್ಞಾನ ಯುಕ್ತಿ–ಸಂಗತನಾಗದಿರುವ ಕಾರಣ ಅವನು ನಿರ್ವಿಶೇಷ–ಜ್ಞಾನದಲ್ಲಿ ಪರಿಣತನಾಗುತ್ತಾನೆ. ಎಲ್ಲಿ ಜ್ಞಾನ ಮತ್ತು ವಿಜ್ಞಾನ ಸಂಯುಕ್ತವಿರುವುದಿಲ್ಲವೋ, ಅಲ್ಲಿ ಕಾಲ್ಪನಿಕ ನಿರ್ವಿಶೇಷ ಧಾರಣೆ 'ಆಯೋಗ' ಶಬ್ದದ ಮೂಲಕ ಕರೆಯಲ್ಪಡುತ್ತದೆ. ಜ್ಞಾನ ಮತ್ತು ವಿಜ್ಞಾನದ ಸಂಯೋಗದಲ್ಲಿ ಪ್ರಕೃತಿ ಜ್ಞಾನದಿಂದ ಅತೀತವಾದ ನಿರ್ವಿಶೇಷ ಜ್ಞಾನದ ಅಭಾವವಿರುತ್ತದೆ. ತಮೋಗುಣದಲ್ಲೇ ರಜಸ್–ಸತ್ವದ ವಿನಾಷವಾಗುವ ಕಾರಣ ಮಾಯಾಶಕ್ತಿಯು ಬ್ರಹ್ಮನ್ ರೂಪದಲ್ಲಿ ಗೋಚರಿಸುತ್ತದೆ. ನಿರ್ವಿಶಿಷ್ಟ ಜ್ಞಾನವು, ಜ್ಞಾನ ಮತ್ತು ಅದಕ್ಕೆ ವಿಪರೀತವಾದ ಅಜ್ಞಾನದ ತಾರತಮ್ಯವನ್ನು ಸ್ಥಾಪಿಸುವುದಿಲ್ಲ. ಭಗವತ್–ಜ್ಞಾನವು ಅಣುಚಿತ್ ಶಕ್ತಿ ಸಂಪನ್ನವಾದ ವಿಜ್ಞಾನ ಅನುಭವನೀಯ ವಿಷಯವಾಗಿದೆ. ಚಿನ್ಮಯ ಜ್ಞಾನದಲ್ಲಿ ಈ ವಿಜ್ಞಾನದ ಹೊಂದಾಣಿಕೆ ಇರುತ್ತದೆ, ಆದರೆ ಅಜ್ಞಾನವು ವಿಜಾತೀಯ ಧರ್ಮದ ಪ್ರತೀಕ. ಆದುದರಿಂದ ಶ್ರೀಭಗವಂತನು ಬ್ರಹ್ಮನಲ್ಲಿ ತನ್ನ ಜ್ಞಾನವನ್ನು ಸರ್ವೋತ್ಕೃಷ್ಟ ಮತ್ತು ಪರಮ ಚಮತ್ಕಾರಮಯ ಸ್ವಯಂರೂಪ–ಪ್ರಕಾಶವನ್ನು ತಿಳಿಸಿಕೊಟ್ಟನು. ಜೀವಮಾಯೆ ಮತ್ತು ಗುಣಮಾಯೆಯ ಅಭಾವದಲ್ಲಿ ಸಾಧಾರಣ ನಿರ್ವಿಶೇಷ ಜ್ಞಾನವು ಭಗವತ್ತತ್ವವನ್ನು ನಿರ್ದೇಶಿಸಲಾರದು, ಆದುದರಿಂದ ಈ ಜ್ಞಾನವನ್ನು ಪರಮ ಗೋಪನೀಯವೆಂದು ಕರೆಯಲ್ಪಡುವುದಿಲ್ಲ. ಅದೇ ಜ್ಞಾನ ಮತ್ತು ವಿಜ್ಞಾನದ ಸಂಯೋಗದಿಂದಲೇ ಶಕ್ತಿ ಮತ್ತು ಶಕ್ತಿವಂತನ ಲೀಲೆಯ ಯಾವ ಅನುಭವವಾಗುತ್ತದೋ, ಅದು ರಹಸ್ಯಮಯವಾದ್ದದು. ರಹಸ್ಯದಿಂದ ದೂರನಾದರು ಭಗವತ್–ಜ್ಞಾನದ ಅಸಂಪೂರ್ಣ ಮತ್ತು ಅಂಶಿಕ ದರ್ಶನದಲ್ಲಿ ಅದ್ವಯಜ್ಞಾನದ

ವಿಭಿನ್ನ ಪ್ರತೀತಿಗಳು ಕಾಣಿಸಿಕೊಳ್ಳುತ್ತದೆ. ರಹಸ್ಯದ ಅಂಶೀಭೂತ ವಸ್ತುಗಳು ಮತ್ತು ತದನುಷಾಂಗಿಕವಾದ (ಅದರಿಂದ ಸಂಯುಕ್ತವಾದ ವಸ್ತುಗಳು) ಅಪೃಥಕವಾದದ್ದು, ಆದರೆ ಭಿನ್ನ ವಿಷಯಸಮ್ಮೂಹ ಜ್ಞಾನ-ವಿಜ್ಞಾನ-ರಹಸ್ಯಯುಕ್ತ ಪೂರ್ಣತೆಯ ಸಂಪೂರ್ಣವಾದ ಸಾಧನೆಯಲ್ಲಿ ಅಯೋಗ್ಯವಾದದ್ದಲ್ಲ ಅಂದರೆ ಯೋಗ್ಯವಾದದ್ದು.

ಸಂಬಂಧತತ್ವದ ಆಲೋಚನೆಯಲ್ಲಿ ನಾವು 'ವಿಷಯ' ಮತ್ತು 'ಆಶ್ರಯ' ಎಂಬ ಹೆಸರಿನ 'ಆಲಂಬನೆ' ವಿಭಾಗವನ್ನು ಲಕ್ಷ್ಯ ಮಾಡುತ್ತೇವೆ. 'ಉದ್ದೀಪ' {ಪ್ರಕಾಶನ} ವಿಭಾಗದಲ್ಲಿ ಇದರ ಪರಸ್ಪರ ಸಂಯೋಗವಿದೆ ಮತ್ತು 'ಉದ್ದೀಪನ'- ವಿಭಾಗದ ಅಭಾವದಲ್ಲಿ ಇದರ ಪರಸ್ಪರ ವಿಯೋಗವಿದೆ. ಎಲ್ಲಿ ವಿಯೋಗ ಧರ್ಮದ ಪ್ರಕಟನೆಯಾಗುತ್ತದೋ, ಅಲ್ಲಿ 'ಸಂವೇತ್ತ', 'ಸಂವೇಧ್ಯ', ಮತ್ತು 'ಸಂವೇದನ' ಧರ್ಮದ ಅಭಾವವಿರುತ್ತದೆ. ಈ ಸಂಬಂಧವು ರಹಸ್ಯಮಯವಾದ್ದದು ಮತ್ತು ಪರಮ ಗೋಪನೀಯವಾದದ್ದು. ಎಲ್ಲಿ ಅನುಭವನೀಯ ಸಂಯುಕ್ತ {ಸಮನ್ವಯ} ಜ್ಞೇಯವಿರುವುದಿಲ್ಲವೋ, ಅಲ್ಲಿ ವಿಜ್ಞಾನದ ಅಭಾವವಿರುತ್ತದೆ. ವಿಜ್ಞಾನ-ಸಮನ್ವಿತ ಅದ್ವಯಜ್ಞಾನ-ರಹಸ್ಯವನ್ನು ಜ್ಞೇಯ ರೂಪದಲ್ಲಿ ತನ್ನ ಪ್ರಯೋಜನವನ್ನು ತಿಳಿದುಕೊಂಡರೆ ಮಾತ್ರ ಸಚ್ಚಿದಾನಂದನ ಲೀಲೆಯು ಪ್ರಕಟವಾಗುತ್ತದೆ. ಸಚ್ಚಿದಾನಂದ ವಸ್ತುವಿನ ಅಂಶಿತ್ವ-ಸೂತ್ರದಲ್ಲಿ ಲೀಲೆಗಳ ಅಂತರ್ಗತ ಅನುಶೀಲನೀಯ-ಸಾಧನೆಯನ್ನು 'ಅಭಿಧೇಯ' ಎಂದು ಕರೆಯಲ್ಪಡುತ್ತದೆ, ಇದೇ ಅಂಶೀಯ ಅಂಶ. ಅದ್ವಯಜ್ಞಾನ ಅಂಶದೊಂದಿಗೆ ಅವಿಚ್ಛಿನ್ನವಾಗಿರುತ್ತದೆ. ವಿಜ್ಞಾನ ಮತ್ತು ರಹಸ್ಯ (ಪ್ರಯೋಜನ ಅಂದರೆ ಪ್ರೇಮ) ದ 'ಅಭೇದ' ವಿಚಾರದಿಂದ ಒಂದೇ ಸಮಯದಲ್ಲಿ ಅಂಗದೊಂದಿಗೆ (ಅಭಿಧೇಯ-ಸಾಧನಭಕ್ತಿಯೊಂದಿಗೆ) ಸಂಯುಕ್ತವಾಗಿದ್ದರೂ ಸಹ ರಹಸ್ಯದ ಅಂಗದಿಂದ 'ಭೇದ'ವಿರುತ್ತದೆ. ಅಂಗವು ಅಂಗಿಯಿಂದ ಪೃಥಕವಾಗಿರುವುದಿಲ್ಲ. ಅಂಗ ಮತ್ತು ಅಂಗದಲ್ಲಿ ಯಾವ ಭೇದ ಅಥವಾ ವೈಶಿಷ್ಟ್ಯತೆ ನೆಲಸಿರುತ್ತದೋ, ಅದು ಪರಮ ಗೋಪನೀಯ ಭಗವತ್-ಜ್ಞಾನದಲ್ಲಿ ಮಾತ್ರ ಸುಪ್ರಕಾಶಿತವಾಗುತ್ತದೆ. ಅಲ್ಲಿ ವಿಜ್ಞಾನದ್ದೇ ಅಧಿಷ್ಠಾನವು ಪರಿಲಕ್ಷಿತವಾಗುತ್ತದೆ {ಕಾಣಿಸಿಕೊಳ್ಳುತ್ತದೆ}. ವಿಜ್ಞಾನದ ಅಭಾವದಲ್ಲಿ ಅದ್ವಯಜ್ಞಾನ ವಸ್ತುವನ್ನು ಅಂಗ ಮತ್ತು ರಹಸ್ಯದಿಂದ ಪೃಥಕ್ಕರಿಸಿ ಯಾವ ಅಶೋಭನೀಯ ಭೇದವು ಉಪಸ್ಥಿತವಾಗುತ್ತದೋ, ಆ ದುಷ್ಟತೆಯನ್ನು ಶಾಂತಗೊಳಿಸಲೆಂದೇ ಅಕ್ಷಜ ವಿಚಾರದಲ್ಲಿ ಭಕ್ತಿಹೀನ ಜನರಿಗೆ ನಿರ್ವಿಶೇಷ-ವಾದದ ಪ್ರಸ್ತಾವನೆಯಾಗಿದೆ. ಶ್ರೀಭಗವಂತನ ವಿಜ್ಞಾನರಹಿತ, ರಹಸ್ಯವರ್ಜಿತ {ರಹಸ್ಯವನ್ನು ತ್ಯಜಿಸುವ} ಅಂಶದ ಧಾರಣೆಯಿಂದ ರಹಿತ ಅಜ್ಞ ಜನರ ಕಾಲ್ಪನಿಕ ಜ್ಞಾನರೂಪ ಮಂಧ ಧಾರಣೆಯನ್ನು ದೂರ ಮಾಡಲೆಂದೇ ಶ್ರೀಬ್ರಹ್ಮದೇವರಿಗೆ ಈ ಭಗವತ್-ಜ್ಞಾನ-ವಿಷಯಿಕ ಅನುಭವವನ್ನು ಪ್ರಸಾದಿಸಿದರು. ಶ್ರೀಭಗವಂತ ತನ್ನ ಜ್ಞಾನ-ಸ್ವರೂಪದ ಪ್ರದಾತ. ಶ್ರೋತಾರೂಪದಲ್ಲಿ ಬ್ರಹ್ಮದೇವರು ಶ್ರೀಭಗವಂತನ ಮುಕಾಂತರ ಹೇಳಲಾದ ವಿಜ್ಞಾನ ಮತ್ತು ರಹಸ್ಯ ಸಹಿತ ಅದ್ವಯಜ್ಞಾನ ಮತ್ತು ಅದರ ಅಂಶದ ವಿಚಾರವನ್ನು ಶ್ರವಣಿಸಿದರು. ತಿಳಿಸಿಕೊಟ್ಟ ಈ ವಿಷಯವನ್ನು ಪಾಲಿಸಲು ಶ್ರೀಭಗವಂತನು ಬ್ರಹ್ಮನಲ್ಲಿ

ಶಕ್ತಿ ಸಂಚಾರ ಮಾಡಿದ್ದರು. ಕೀರ್ತನೆ ಮತ್ತು ಶ್ರವಣದ ಪ್ರಭಾವದ ಮೂಲಕ ಸಂಬಂಧಜ್ಞಾನವು ಉದಯವಾಗುವುದರಿಂದ 'ಅಭಿಧೇಯ ಅಂಗ– ಸಾಧನಭಕ್ತಿಯ ಮೂಲಕ ಮಾತ್ರ ರಹಸ್ಯದೊಂದಿಗೆ, ವಿಜ್ಞಾನಮಯವಾದ ಅದ್ವಯಜ್ಞಾನವೂ ಸಹ ಉದಿತವಾಗುತ್ತದೆ.

ಚತುಃಶ್ಲೋಕದ ನಾಲ್ಕು ಶ್ಲೋಕಗಳ ಪ್ರತಿಪಾದನೆಯ ನಾಲ್ಕು ವಿಷಯವು ಇದೇ ಶ್ಲೋಕದಲ್ಲೇ ಗ್ರಥಿತವಾಗಿದೆ. ಪ್ರಸ್ತುತ ಶ್ಲೋಕದ ನಾಲ್ಕು ಚರಣದ ನಾಲ್ಕು ಪೃಥಕ ಶ್ಲೋಕಗಳಲ್ಲಿ ವಿಸ್ತೃತವಾಗಿ ಚತುಃಶ್ಲೋಕಿ ಹೆಸರಿನಿಂದ ಪ್ರಸಿದ್ಧವಾಗಿದೆ. 'ಜ್ಞಾನಂ ಮೇ ಪರಮಂ ಗುಹ್ಯಂ'– ಈ ಚರಣದ ಪ್ರತಿಪಾದನೆಯ ವಿಷಯ "ಅಹಮೇವಾಸಮೇವಾಗ್ರೆ"– ಶ್ಲೋಕದಲ್ಲಿ ವಿಸ್ತೃತವಾಗಿದೆ. 'ಯದ್ವಿಜ್ಞಾನ ಸಮನ್ವಿತಂ'– ಈ ಚರಣವು "ಋತೇಽರ್ಥಮ್ ಯತ್ ಪ್ರತೀಯೇತ" ಶ್ಲೋಕದಲ್ಲಿ, 'ಸರಹಸ್ಯಂ ತದಂಗಞ್ಚ'– ಈ ಚರಣವು "ಯಥಾ ಮಹಾಂತಿ ಭೂತಾನಿ" ಶ್ಲೋಕದಲ್ಲಿ ಹಾಗೂ 'ಗೃಹಣ ಗದಿತಂ ಮಯಾ' ಈ ಅಂತಿಮ ಚರಣವು ನಾಲ್ಕನೆಯ "ಏತಾವದೇವ ಜಿಜ್ಞಾಸ್ಯಂ" ಶ್ಲೋಕದಲ್ಲಿ, ಅಥವಾ ಅನ್ಯರ ಮತದಲ್ಲಿ 'ಯಥಾ ಮಹಾಂತಿ ಭೂತಾನಿ' ಶ್ಲೋಕದಲ್ಲಿ ವರ್ಣಿಸಲಾಗಿದೆ. 'ಸಂಬಂಧತತ್ವ' ಈ ಶ್ಲೋಕದ ಮೊದಲನೆಯ ಎರಡು ಚರಣಗಳಲ್ಲಿ, 'ಅಭಿಧೇಯ' ನಾಲ್ಕನೆಯ ಚರಣದಲ್ಲಿ ಹಾಗೂ 'ಪ್ರಯೋಜನ' ತೃತೀಯ ಚರಣದಲ್ಲಿ ಅಭಿವ್ಯಕ್ತವಾಗಿದೆ.

ತರ್ಕ–ವಿತರ್ಕಗಳ ಆಶ್ರಯವನ್ನು ಪಡೆಯುವುದರಿಂದ (ಶ್ರೀಭಗವಂತನ) ಅದ್ವಯಜ್ಞಾನ ಸ್ವರೂಪದ ಪ್ರಾಪ್ತಿಯಾಗುವುದಿಲ್ಲ. ಅವಿಧ್ಯಾಗ್ರಸ್ತ ಜೀವಿಗಳಿಗೆ ಇದನ್ನು ತಿಳಿಸಲು ಶ್ರೀಭಗವಂತನು ಹೇಳಿರುವುದೇನೆಂದರೆ ಏಕಮಾತ್ರ ಶ್ರೋತ್ಯಪಂಥವೇ ಗ್ರಹಣೀಯವಾದದ್ದು. ತರ್ಕಪಂಥನು ಎಂದೇಂದಿಗು ಅದ್ವಯಜ್ಞಾನದ ಸಾಧನಸ್ವರೂಪ ಅಂಗವಾಗಲು ಸಾಧ್ಯವಿಲ್ಲ. ತರ್ಕಪಂಥರ ಮೂಲಕ ಭ್ರಮೆ, ಪ್ರಮಾದ, ಅವಿವೇಕ ಮತ್ತು ವಂಚನೆ ಈ ನಾಲ್ಕು ದೋಷಗಳಿಂದ ಯುಕ್ತನಾದ ಅವಿಧ್ಯಾಗ್ರಸ್ತ ಜೀವಿ ಅದ್ವಯಜ್ಞಾನಸ್ವರೂಪ ಶ್ರೀವ್ರಜೇಂದ್ರನಂದನನ ವಿಷಯ ಅರ್ಥಮಾಡಿಕೊಳ್ಳಲಾರ. ಭಗವತ್–ಸ್ವರೂಪ ಮತ್ತು ಭಕ್ತಸ್ವರೂಪ– ಈ ಎರಡರ ಪರಸ್ಪರ ಚಿತ್ತ–ಉದ್ದೀಪನಮಯವಾದ {ಪ್ರಕಾಶನಮಯ} ನಿತ್ಯ ಅನುಭವನೀಯ ಭಾವವು ತರ್ಕಪಥದ ಮೂಲಕ ಪ್ರಾಪ್ತಿಯಾಗುವುದಿಲ್ಲ. ಶ್ರೌತಪಥವೇ ಈ ಆವರ್ಣವನ್ನು ದೂರಮಾಡಲು ಏಕಮಾತ್ರ ಉಪಾಯ. ಕೀರ್ತನೆಯ ಮಾಧ್ಯಮದಿಂದಲೇ ಶ್ರೌತಪಥವು ಸಂರಕ್ಷಿಸಲ್ಪಡುತ್ತದೆ. ಗುರುಪರಂಪರೆಯಿಂದ ದೂರನಾದ ಗುರುವು ಅವಜ್ಞಾಮಯ ತರ್ಕಪಥ ಅವಿಧ್ಯಾಗ್ರಸ್ತ ಜೀವಿಗಳನ್ನು ತಮೋರಾಜ್ಯದಲ್ಲಿ ಪ್ರವೇಶ ಮಾಡಿಸುತ್ತಾನೆ. ಅಲ್ಲಿ ಭಜನೀಯ ವಸ್ತುವಿನಲ್ಲಿ ಸೇವಾವೃತ್ತಿ ಇರುವುದಿಲ್ಲ. ಈ ಭಗವತ್–ಜ್ಞಾನ ಕೇವಲ ಶ್ರೌತಪಥದ ಮೂಲಕವಷ್ಟೇ ಪ್ರಾಪ್ತಿಯಾಗುತ್ತದೆ ॥೩೦॥

ಶ್ರೀಶ್ರೀನಿವಾಸಾಚಾರ್ಯಪಾದಕೃತ
'ಚತುಃಶ್ಲೋಕಿ-ಭಾಷ್ಯಮ್'

ಶ್ರೀಕೃಷ್ಣ ಕೃಷ್ಣಚೈತನ್ಯ ಸಸನಾತನ-ರೂಪಕ ।
ಗೋಪಾಲ-ರಘುನಾಥಾಪ್ತ ವ್ರಜವಲ್ಲಭ ಪಾಹಿ ಮಾಮ್ ॥

ಶ್ರೀಭಗವಾನುವಾಚೇತಿ- ಭಗವಂತೋ ಜ್ಞಾನಶಕ್ತಿ-ವೈರಾಗ್ಯಯೈಶ್ವರ್ಯ-ವೀರ್ಯ-ತೇಜೋವಂತಃ ಷಡ್ಗುಣಯುಕ್ತಾಃ, ಅತಏವ '*ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಃ ಶ್ರೀಯಃ । ಜ್ಞಾನ-ವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀಂಗನಾ ॥*'; ಭಗವಂತಸ್ತ್ರಿಪಾದ್ವಿಭೂತಿಯುಕ್ತಃ ಶ್ರೀವೈಕುಂಠನಾಥಾದಯಃ ಪೂರ್ಣಾಃ, ಶ್ರೀಕೃಷ್ಣಸ್ತು ಸ್ವಯಂ ಭಗವಾನ್ ಚಾತುಷ್ಪಾದಿಕ-ವಿಭೂತಿಮಾನ್ ಶ್ರೀಗೋಪಾಲರೂಪೀ ಪೂರ್ಣತಮಃ । ತಥಾಹಿ ಶ್ರೀಗೋಪಾಲವಾಕ್ಯಂ (ಬ್ರಹ್ಮಾಂಡಪುರಾಣೆ)- 'ಸನ್ತಿ ಭೂರೀಣಿ ರೂಪಾಣಿ ಮಮ ಪೂರ್ಣಾನಿ ಷಡ್ಗುಣ್ಯೈಃ । ಭವೇಯುಸ್ತಾನಿ ತುಲ್ಯಾನಿ ನ ಮಯಾ ಗೋಪರೂಪಿಣಾ ॥' ಇತಿ । ಅತಏವ ಸರ್ವಾತಿಶಯಾನ್ತಗುಣವಾನ್ ಗೋಲೋಕಧಾಮಾ ಎವ ವಕ್ತಾ ।

ಜ್ಞಾನಮಿತ್ಯಾದಿ-ಮೋಕ್ಷೇ ಧೀಃ ಜ್ಞಾನಂ, ಭಕ್ತೌ ಧೀಃ ಪರಮಜ್ಞಾನಂ, ಪ್ರೀತೌ ಧೀಃ ಪರಮಗುಹ್ಯಜ್ಞಾನಂ, ವಿಜ್ಞಾನಂ ಶಿಲ್ಪ-ಶಾಸ್ತ್ರಯೋಃ । ಶಿಲ್ಪಮತ್ರ ಶ್ರೀವಿಗ್ರಹ-ತ್ರಿಭಂಗಿ-ಸುಗಠನ-ಕರಚರಣ-ರೇಖಾವಿನ್ಯಾಸಾದಿ; ಶಾಸ್ತ್ರಮತ್ರ ಶ್ರೀಭಾಗವತ-ಗೀತಾ-ಪದ್ಮಪುರಾಣಾದಿ ಸಾತ್ವಿಕ-ಕಲ್ಪಾದಿ । ರಹಸ್ಯಮತ್ರ ರಾಸ-ನಿಕುಂಜ-ಮೋಹನಮಂದಿರ-ಶ್ರೀರಾಧಾ-ಸಂಭೋಗಪರಮಸುಖಂ ಪ್ರಧಾನಮಂಗಿ । ಅಂಗಮತ್ರ ವಿಭಾವಾನುಭಾವ-ಸಾತ್ವಿಕ-ಸಂಚಾರಿ, ಸುಹೃದ್ ರೂಪ-ಸಖ್ಯಾದಿ-ವೈರಿರೂಪ-ವಾತ್ಸಲ್ಯಾದಿ, ವಿಪ್ರಲಂಭ-ಪೂರ್ವರಾಗ-ಮಾನ-ಪ್ರವಾಸಾದಿ, ದ್ವಿಯೋನ್ಮಾದ ಚಿತ್ರಜಲ್ಪಾದಿಕೋಟಿಶ್ಚ । ಚ-ಕಾರಾದನನ್ತಮ್ । ಮಯಾ-ಸ್ವಯಂಭಗವತಾ ರಸಿಕಶಿರೋಮಣಿನಾ ನಿಗೂಢ-ನಿಜಲೀಲಾ-ವಿಶಾರದೇನ ಗದಿತಂ ವ್ಯಕ್ತಮುಕ್ತಂ ಭರತಾದಿಮುನಿಮಾನಸಾಗೋಚರತ್ವಾದವ್ಯಕ್ತಮ್ । ಅತಏವ ಗೃಹಾಣ ಪರಮಾಗ್ರಹಪೂರ್ವಕಂ ದುರ್ಲಭಂ ವಸ್ತು ಮಹಾನಿಧಿವದ್ಧಾರಯ ಇತಿ ದಿಕ್ ॥೩೦॥

ಭಾವಾನುವಾದ- ವ್ರಜವಲ್ಲಭ ಶ್ರೀಕೃಷ್ಣ, ಶ್ರೀಕೃಷ್ಣಚೈತನ್ಯ ಮಹಾಪ್ರಭು ಹಾಗೂ ಶ್ರೀಲ ಸತಾತನ ಗೋಸ್ವಾಮಿ ಸಹಿತ ಶ್ರೀಲ ರೂಪ ಗೋಸ್ವಾಮಿ, ಶ್ರೀ ಗೋಪಾಲ ಭಟ್ಟ ಗೋಸ್ವಾಮಿ, ಶ್ರೀಲ ರಘುನಾಥ ದಾಸ ಗೋಸ್ವಾಮಿ ಮುಂತಾದ ವ್ರಜರಸ-ತತ್ವಜ್ಞರು ನನ್ನನ್ನು ರಕ್ಷಿಸಲಿ, ನಾನು ಅವರಿಗೆ ಶರಣಾಗುತ್ತೇನೆ.

ಸರ್ವ ಪ್ರಥಮ ಶ್ಲೋಕದಲ್ಲಿ ವಿವರಿಸಲಾದ 'ಶ್ರೀಭಗವಾನುವಾಚ'ವನ್ನು ಅರ್ಥೈಸಲಾಗುತ್ತಿದೆ. ಯಾರಲ್ಲಿ ಜ್ಞಾನ, ಶಕ್ತಿ, ವೈರಾಗ್ಯ, ಐಶ್ವರ್ಯ, ವೀರ್ಯ ಮತ್ತು ತೇಜ ರೂಪವಾದ ಆರು ಗುಣಗಳಿವೆಯೋ, ಅವರನ್ನೇ ಭಗವಂತ ಎಂದು ಕರೆಯಲಾಗುತ್ತದೆ. ತ್ರಿಪಾದ್ವಿಭೂತಿಯಿಂದ ಯುಕ್ತ ಶ್ರೀವೈಕುಂಠನಾಥನಾನ್ನು ಭಗವಾನ್ ಎಂಬ ಶಬ್ದದಿಂದ ಕರೆಯುತ್ತಾರೆ ಮತ್ತು ಅವನು ಪೂರ್ಣನು, ಆದರೇ ಶ್ರೀಕೃಷ್ಣ

ಸ್ವಯಂ ಭಗವಂತನು. ಶ್ರೀಕೃಷ್ಣನು ಚತುಷ್ಪಾದ-ವಿಭೂತಿ-ಸಂಪನ್ನ ಶ್ರೀಗೋಪಾಲನ ರೂಪದಲ್ಲಿ ಪೂರ್ಣನಾಗಿದ್ದನೆ. ಬ್ರಹ್ಮಾಂಡಪುರಾಣದಲ್ಲಿ ಶ್ರೀಗೋಪಾದೇವರು ಹೀಗೆ ಹೇಳುತ್ತಾರೆ- 'ನನ್ನ ಷಡ್-ಗುಣಗಳಿಂದ ಯುಕ್ತ ಮತ್ತು ಪೂರ್ಣವಾದ ರೂಪವು ಹೆಚ್ಚಾಗಿ ಪ್ರಕಾಶಮಯವಾದದ್ದು, ಆದರೆ ನನ್ನ ಗೋಪ ರೂಪದ ಮುಂದೆ ಅವೇಲ್ಲ ಸಮವಾಗುವುದಿಲ್ಲ'. ಆದ್ದರಿಂದ ಇಲ್ಲಿಯವರೆಗು ಸರ್ವಶ್ರೇಷ್ಠ ಮತ್ತು ಅನಂತ ಗುಣಸಂಪನ್ನ ಗೋಲೋಕವಾಸಿ ಶ್ರೀಹರಿಯೇ ವಕ್ತಾ ಅಂದರೆ 'ಶ್ರೀಭಗವಾನುವಾಚ' ಶಬ್ದದ ಮೂಲಕ ಅಭಿಪ್ರಾಯವಾಗಿದೇ.

ಮೋಕ್ಷ-ವಿಷಯದ ಬುದ್ಧಿಯನ್ನು 'ಜ್ಞಾನ' ಎಂದು, ಭಕ್ತಿ-ವಿಷಯದ ಬುದ್ಧಿಯನ್ನು 'ಪರಮಜ್ಞಾನ' ಎಂದು, ಪ್ರೀತಿ-ವಿಷಯದ ಬುದ್ಧಿಯನ್ನು 'ಪರಮಗುಹ್ಯ ಜ್ಞಾನ' ಎಂದು ಕರೆಯಲಾಗುತ್ತದೆ. 'ವಿಜ್ಞಾನ' ಶಬ್ದದ ಮೂಲಕ ಶಿಲ್ಪ ಮತ್ತು ಶಾಸ್ತ್ರ-ವಿಷಯಕ ಅನುಭವವೇ ಕಾಣಲ್ಪಡುತ್ತದೆ. ಇಲ್ಲಿ 'ಶಿಲ್ಪ' ಶಬ್ದದಿಂದ ಶ್ರೀವಿಗ್ರಹದ ತ್ರಿಭಂಗಿಮ ಸುಗಠನೆ, ಕರ-ಚರಣ ಮುಂತಾದ ರೇಖವಿನ್ಯಾಸ ಮತ್ತು ವೇಶವಿನ್ಯಾಸ ಇತ್ಯಾದಿ ಎಂದು ಅರ್ಥಮಾಡಿಕೊಳ್ಳಬೇಕು. ಮತ್ತು 'ಶಾಸ್ತ್ರ' ಶಬ್ದದಿಂದ ಶ್ರೀಮದ್ಭಾಗವತ, ಗೀತೆ, ಪದ್ಮಪುರಾಣ ಮುಂತಾದ ಸಾತ್ವಿಕ ಕಲ್ಪಇತ್ಯಾದಿ ಎಂದು ಅರ್ಥಮಾಡಿಕೊಳ್ಳಾಲಾಗುತ್ತದೆ. 'ರಹಸ್ಯ' ಶಬ್ದದಿಂದ ಇಲ್ಲಿ ರಾಸ- ನಿಕುಂಜಮೋಹನ-ಮಂದಿರ ಇತ್ಯಾದಿಯಲ್ಲಿ ಶ್ರೀರಾಧೆಯೊಂದಿಗೆ ಸಂಭೋಗಾದಿ ಪರಮ ಸುಖದ ಅನುಭವವೇ ಪ್ರಧಾನ ಅಂಗ. 'ಅಂಗ' ಶಬ್ದದಿಂದ ವಿಭವ (ಆಲಂಬನ ಮತ್ತು ಉದ್ದೀಪನ), ಅನುಭವ (ಚಿತ್-ಸ್ಥಿತ ಭಾವಗಳ ಅವಭೋಧಕ ನೃತ್ಯ, ಗಾನ, ಹುಂಕಾರ, ಆಲಾಪನೆ ಇತ್ಯಾದಿ), ಸಾತ್ವಿಕ (ಅಶ್ರು, ಕಂಪನ ಇತ್ಯಾದಿ), ಸೇವೆ (ತ್ರಾಸ, ಶಂಕೆ, ಶ್ರಮ ಇತ್ಯಾದಿ), (ಮಧುರರೂಪ ಅಂಶದ) ಸುಹೃದ್ರೂಪ-ಸಖ್ಯಾದಿ, ವೈರೀರೂಪ-ವಾತ್ಸಲ್ಯ, ವಿಪ್ರಲಂಭ ಪೂರ್ವರಾಗ-ಮಾನ-ಪ್ರವಾಸ ಇತ್ಯಾದಿ, ದಿವ್ಯೋನ್ಮಾದ-ಚಿತ್ರಜಲ್ಪ ಇತ್ಯಾದಿ ಅನಂತ ಪ್ರಕಾರದ ವಿಷಯಗಳನ್ನು ಗ್ರಹಿಸಲಾಗುವುದು.

'ಮಯಾ'- ಸ್ವಯಂ ಭಗವಂತ, ರಸಿಕ-ಶಿರೋಮಣಿ, ನಿಗೂಢ ಲೀಲಾ-ವಿಶಾರದನಾದ ನಾನೇ ನಿನಗೆ ಈ ಎಲ್ಲ ತತ್ವಗಳನ್ನು ತಿಳಿಸಿಕೊಡುತ್ತಿದ್ದೇನೆ. ಅದಾಗ್ಯೂ ಈ ತತ್ವ ಭರತಾದಿ ಮುನಿಗಳಿಗೂ ಸಹ ಮನೋ ವೃತ್ತಿಯ ಅಗೋಚರದ ಕಾರಣ ಇಲ್ಲಿಯವರೆಗೂ ಅವ್ಯಕ್ತವಾಗಿತ್ತು, ಆದ್ದರಿಂದ ನಾನು ನಿನಗೆ ಕೃಪಾಪೂರ್ವಕನಾಗಿ ಸ್ಪಷ್ಟವಾಗಿ ತಿಳಿಸಿಕೊಡುತ್ತೇನೆ. ಹೇ ಬ್ರಹನ್! ನೀನು ಈ ತತ್ವವನ್ನು ಮಹಾನಿಧಿಯಂತೆ ಮನಸ್ಸಿನಲ್ಲಿ ಪರಮ ಆಗ್ರಹದೊಂದಿಗೆ ಧಾರಣೆ ಮಾಡು. ॥೩೦॥

ತೃತೀಯ-ಶ್ಲೋಕ

ಶ್ರೀಬ್ರಹ್ಮನ ಹೃದಯದಲ್ಲಿ ಭಗವತ್ ವಿಜ್ಞಾನ ಮತ್ತು ರಹಸ್ಯ ಆವಿರ್ಭೂತವಾಗಲೆಂದು ಶ್ರೀಭಗವಂತನ ಮೂಲಕ ಆಶೀರ್ವಾದ ಪ್ರದಾನ

ಯಾವಾನಹಂ ಯಥಾಭಾವೋ ಯದ್ರೂಪಗುಣಕರ್ಮಕಃ ।
ತಥೈವ ತತ್ತ್ವವಿಜ್ಞಾನಮಸ್ತು ತೇ ಮದನುಗ್ರಹಾತ್ ॥
(ಶ್ರೀಮದ್ಭಾಗವತಂ ೨/೯/೩೧)

ಅನ್ವಯ

ಅಹಂ ಯಾವಾನ್ (ವಾಸ್ತವದಲ್ಲಿ ನನ್ನ ಯಾವ ಪ್ರಮಾಣ ಅಂದರೆ ಆಕಾರವಿದೆಯೋ) ಯಥಾಭಾವಃ (ಸಕ್ತಾಶೀಲತೆ ಇತ್ಯಾದಿ ಯಾವ ಲಕ್ಷಣಗಳಿವೆಯೋ) ಯದ್ರೂಪಗುಣಕರ್ಮಕಃ (ಹಾಗೂ ನನ್ನ ಯಾವ-ಯಾವ ರೂಪ ಅಂದರೆ ಶ್ಯಾಮ, ಚತುರ್ಭುಜ ಮುಂತಾದವು; ಗುಣ ಅಂದರೆ ಭಕ್ತವಾತ್ಸಲ್ಯ ಮುಂತಾದ ಹಾಗೂ ಕರ್ಮ ಅಂದರೆ ಲೀಲೆಗಳಿವೆಯೋ) ತೇ (ನೀನು) ತಥಾ (ಆ ಎಲ್ಲಾ ವಿಷಯಗಳ) ಎವ ತತ್ತ್ವವಿಜ್ಞಾನಂ (ಯಥಾರ್ಥಃ ಅನುಭವ) ಮದನುಗ್ರಹಾತ್ (ನನ್ನ ಕೃಪೆಯಿಂದ) [ಸಂಪೂರ್ಣ ರೂಪದಿಂದ] ಅಸ್ತು (ಪ್ರಾಪ್ತಿಸಿಕೋ) ॥೩೧॥

ಅನುವಾದ

ವಾಸ್ತವದಲ್ಲಿ ನನ್ನ ಯಾವ ಪ್ರಮಾಣ (ಆಕಾರ) ಇದೆಯೋ, ಸಕ್ತಾಯುಕ್ತ ಇತ್ಯಾದಿ ನನ್ನ ಯಾವ ಲಕ್ಷಣವಿದೆ ಹಾಗೂ ನನ್ನ ಯಾವ-ಯಾವ ರೂಪ (ಶ್ಯಾಮ, ಚತುರ್ಭುಜ ಮುಂತಾದ ರೂಪಗಳು), ಗುಣ (ಭಕ್ತವಾತ್ಸಲ್ಯ ಮುಂತಾದ ಗುಣಗಳು) ಮತ್ತು ಕರ್ಮ (ಲೀಲೆಗಳು) ಇವೆಯೋ, ನೀನು ಆ ಎಲ್ಲ ವಿಷಯಗಳ ಯಥಾರ್ಥ ಅನುಭವನ್ನು ನನ್ನ ಕೃಪೆಯಿಂದ ಸಂಪೂರ್ಣವಾಗಿ ಪ್ರಾಪ್ತಿಸಿಕೋ. ॥೩೧॥

ಶ್ರೀವಿಶ್ವನಾಥ ಚಕ್ರವರ್ತೀಪಾದ

ಕಿಂಚ, ಜ್ಞಾನಂ ಶಬ್ದದ್ವಾರಾ ಯಥಾರ್ಥ್ಯನಿರ್ಧಾರಣಂ ಪರೋಕ್ಷಂ, ತಚ್ಚ ಕಿಂಚಿತ್ ಶುದ್ಧಚಿತ್ತಾನಾಮಾಸ್ತಿಕಾನಾಂ ಸಂಭವೇದಪಿ । ವಿಜ್ಞಾನನ್ತ್ವಪರೋಕ್ಷಾನುಭವಃ- ಮತ್ಸ್ವರೂಪಸ್ಯ ಯಾಥಾರ್ಥ್ಯೇನ ಸಕ್ಷಾತ್ಕಾರಃ, ಸ ಚ ರಹಸ್ಯ-ತದಂಗಶಬ್ದಾಭ್ಯಾಂ ಮತ್ಪ್ರೇಮಭಕ್ತಿ-ಸಾಧನಭಕ್ತಿಭ್ಯಾಂ ವಿನಾ ನೈವ ಭವತೀತಿ ಬೋಧಯಂಸ್ತದರ್ಥಮಾಶಿಷಂ ದದಾತಿ । ಯಾವನ್ ಯತ್ಪ್ರಮಾಣಾಕಾರಃ - ಯಾದೃಶಸ್ಥೌಲ್ಯ-ಕಾರ್ಶ್ಯದೈರ್ಘ್ಯತುಂಗತ ಆವೃತ್ತತಾಧ್ಯೌಚಿತ್ಯಸಂನಿವೇಶವಿಶಿಷ್ಟಾವಯ ಽವ ಇತ್ಯರ್ಥಃ । ಯಥಾಭಾವೋ ಯಾದೃಶಾಭಿಪ್ರಾಯಃ । ಯಾನಿ ರೂಪಾಣಿ ಶ್ಯಾಮತ್ವ-ಚತುರ್ಭುಜತ್ವ-ಕೃಷ್ಣತ್ವ-ನೃಸಿಂಹತ್ವಾದೀನಿ, ಗುಣಾ ಭಕ್ತವಾತ್ಸಲ್ಯಾಧ್ಯಾಃ, ಕರ್ಮಾಣಿ ಲಕ್ಷ್ಮೀ-ಪರಿಗ್ರಹ-ಗೋವರ್ಧನೋದ್ಧರಣಾದೀನಿ ಯಸ್ಯ ಸಃ । ತಥೈವೇತಿ ಯೇನ ಯೇನ ಪ್ರಕಾರೇಣ ಮಮ ಪರಿಮಾಣಾಭಿಪ್ರಾಯರೂಪ ಗುಣಕರ್ಮಾಣ್ಯಾವಿರ್ಭವಂತಿ ತೇನೈವ ಪ್ರಕಾರೇಣ

ತತ್ವವಿಜ್ಞಾನಂ ತೇಷಾಂ ಯಾಥಾರ್ಥ್ಯಾನುಭವೋಽಸ್ತು। ತತ್ರಾಶೀರ್ವಾದೇನೈವಾನುಗ್ರಹೇ ವ್ಯಂಜಿತೇಽಪಿ ಪುನರ್ಮದನುಗ್ರಹಪದೋಪಾದಾನಂ ಪರಮಾನ್ತರಂಗಮತ್ಕೃಪಾಶಕ್ತಿವೃತ್ತಿವಿಶೇಷ–ಸಾಧನಭಕ್ತಿ–ಪ್ರೇಮಭಕ್ತ್ಯೋರ್ವೃದ್ಧಿ–ತಾರತಮ್ಯೇನೈವ ತದ್ರೂಪಗುಣಾದಿಮಾಧುರ್ಯಾನುಭವ–ತಾರತಮ್ಯೇ ಸಮುತ್ಪತ್ಸ್ಯಮಾನೇಽಪ್ಯೇತಸ್ಮಾದಪಿ ಮತ್ಸ್ವರೂಪಾದಿಕತಮಮಾಧುರ್ಯಂ ಪರಮದುರ್ಲಭಂ ಕೃಷ್ಣಸ್ವರೂಪಂ ಮಾಂ ವ್ರಜಭೂಮೌ ತ್ವಂ ಸಾಕ್ಷಾದನುಭವಿಷ್ಯಸೀತಿ ಸೂಚಯತಿ । ಏತೇನ ಚತುಃಶ್ಲೋಕ್ಯಾ ನಿರ್ವಿಶೇಷಸ್ವರೂಪಮಾತ್ರ–ಪರತ್ವೇನಾನ್ಯವ್ಯಾಖ್ಯಾನಂ ಸ್ವಯಮೇವ ಪರಾಸ್ತಮ್ ॥೩೧॥

ಭಾವಾನುವಾದ– ಯಾವ ವಿವೇಕದ ಮೂಲಕ ವಸ್ತು ವಿಷಯವನ್ನು ಪೂರ್ಣರೂಪದಿಂದ ತಿಳಿಯಲಾಗುತ್ತದೋ, ಅದನ್ನು ಜ್ಞಾನ ಎಂದು ಕರೆಯುತ್ತಾರೆ. 'ಜ್ಞಾನ' ಶಬ್ದದ ಮೂಲಕ ಯಾವ ಯಥಾರ್ಥ ಸ್ವರೂಪದ ನಿರೂಪಣೆಯಾಗಿದೆಯೋ, ಅದು ಪರೋಕ್ಷವಾಗಿ ಅರ್ಥಾತ್ ಅಪ್ರತ್ಯಕ್ಷ ಜ್ಞಾನವು ಕೆಲವರು ಶುದ್ಧ ಮನಸ್ಸಿನವರ ಆಸ್ತಿಕ ಜನರಲ್ಲೂ ಸಹ ಇರಬಹುದು. ಆದರೆ 'ವಿಜ್ಞಾನ' ಎಂದು ಕರೆಯುವುದರಿಂದ ಯಾವ ಅಪರೋಕ್ಷ (ಪ್ರತ್ಯಕ್ಷ)ದ ಅನುಭವವಿದೆಯೋ, ಅದು ನನ್ನ (ಭಗವಂತನ) ಸ್ವರೂಪದ ಯಥಾರ್ಥ ರೂಪದಲ್ಲಿನ ಸಾಕ್ಷಾತ್ಕಾರ. ಆ ವಿಜ್ಞಾನವು ನನ್ನ 'ರಹಸ್ಯ' ಅರ್ಥಾತ್ ನನ್ನ ಪ್ರೇಮಭಕ್ತಿ ಹಾಗೂ 'ತದಂಗ' ಅರ್ಥಾತ್ ಸಾಧನಭಕ್ತಿಗೆ ಹೊರತುಪಡಿಸಿ ಎಂದಿಗೂ ಸಂಭದವಿಲ್ಲ. ಈ ವಿಷಯವನ್ನು ತಿಳಿಸುವ ಸಂದರ್ಭದಲ್ಲಿ ಶ್ರೀಭಗವಂತನು ಬ್ರಹ್ಮದೇವರಿಗೆ ಕೃಷ್ಣ–ಪ್ರೇಮ ಮತ್ತು ಸಾಧನಭಕ್ತಿಯ ಪ್ರಾಪ್ತಿಗಾಗಿ ಆಶೀರ್ವಾದ ಮಾಡುತ್ತಿದ್ದಾರೆ. 'ಯಾವಾನ್' ಶಬ್ದದ ಅರ್ಥವೇನೆಂದರೆ– ಯಾವ ಪ್ರಮಾಣದಲ್ಲಿ ನನ್ನ ಆಕಾರವಿದೆಯೋ (ಸ್ವರೂಪ) ಅಂದರೆ ನಾನು ಯಾವ ರೀತಿ ಸ್ಥೂಲತೆ, ಕೃಶತೆ, ದೀರ್ಘತೆ, ಉಚ್ಚತೆ, ಗೋಲಾಕಾರ ಮುಂತಾದ ಯಥೋಚಿತ ಸನ್ನಿವೇಶದ ಮುಕಾಂತರ ಯಾವ ವಿಶಿಷ್ಟ ಅಂಶಗಳಿಂದ ಯುಕ್ತನಾಗಿದ್ದೇನೆ ಎಂಬುದು. 'ಯಥಾಭಾವಃ' ಎಂಬುದರ ಅರ್ಥವು– ಯಾವ ರೀತಿ ನನ್ನ (ಭಗವಂತನ) ಅಭಿಪ್ರಾಯವಿದೆಯೋ. 'ಯದ್–ರೂಪ–ಕರ್ಮಕಃ' ಶಬ್ದದಲ್ಲಿ ರೂಪ ಅಂದರೆ ಶ್ಯಾಮತ್ವ, ಚತುರ್ಭುಜತ್ವ, ಕೃಷ್ಣತ್ವ, ರಾಮತ್ವ, ನರಸಿಂಗತ್ವ ಇತ್ಯಾದಿ, 'ಗುಣ' ಅಂದರೆ ಭಕ್ತರಲ್ಲಿ ವಾತ್ಸಲ್ಯ ಇತ್ಯಾದಿ, 'ಕರ್ಮ' ಅಂದರೆ ಲಕ್ಷ್ಮೀ–ಪರಿಗ್ರಹ, ಗೋವರ್ಧನ ಪರ್ವತದ ಧಾರಣೆ ಇತ್ಯಾದಿ ಯಾವ ಲೀಲೆಗಳಿವೆಯೋ, ಅದು ಶ್ರೀಭಗವಂತನಂತೆ ರೂಪ–ಗುಣ ಸಮ್ಪನ್ನ ಮತ್ತು ಲೀಲಾಮಯವಾದದ್ದು. 'ತತೈವ'– ಅದೇ ರೀತಿ ಅರ್ಥಾತ್ ಯಾವ–ಯಾವ ಪ್ರಕಾರದಿಂದ ನನ್ನ (ಭಗವಂತನ) ಪ್ರಮಾಣ (ಆಕಾರ), ಅಭಿಪ್ರಾಯ, ರೂಪ, ಗುಣ ಮತ್ತು ಕರ್ಮ (ಲೀಲೆ ಮುಂತಾದ) ಪ್ರಕಾಶಿತವಾಗುತ್ತದೋ, ಸರಿಯಾಗಿ ಅದೇ ಪ್ರಕಾರದಿಂದಲೇ ಆ ಎಲ್ಲ 'ತತ್ವ ವಿಜ್ಞಾನಂ' ಅಂದರೆ ಯಥಾರ್ಥ ಅನುಭವವು ನಿನಗೆ ಪ್ರಾಪ್ತಿಸಲಿ.

ಇಲ್ಲಿ ಕೇವಲ ಆಶೀರ್ವಾದದ ಮೂಲಕವೇ ಶ್ರೀಭಗವಂತನ ಅನುಗ್ರಹ

ಪ್ರಕಾಶಿತವಾದರೂ ಸಹ ಮತ್ತೆ ಪುನಃ 'ಮದನುಗ್ರಹ' ನನ್ನ ಅನುಗ್ರಹ" ಈ ಪದದ ಉಲ್ಲೇಖನೆ ಮಾಡುವುದರಿಂದ ನನ್ನ ಪರಮ ಅಂತರಂಗ ಕೃಪಾ-ಶಕ್ತಿಯ ವೃತ್ತಿ-ವಿಶೇಷ'ಸಾಧನಭಕ್ತಿ ಮತ್ತು ಪ್ರೇಮಭಕ್ತಿಯ ವೃದ್ಧಿಯ ತಾರತಮ್ಯದ ಕಾರಣದಿಂದ ಕ್ರಮೇಣ ನನ್ನ ಆ ರೂಪ-ಗುಣಗಳ ಮಾಧುರ್ಯದ ಅನುಭವದ ತಾರತಮ್ಯವು ಉತ್ಪನ್ನವಾಗುತ್ತದೆ. ಈ ತಾರತಮ್ಯದ ಕಾರಣ ನನ್ನ ಈ ಸ್ವರೂಪ (ವರ್ತಮಾನದಲ್ಲಿ ಪರಿದೃಶ್ಯಮಾನವಾದ ಈ ಚತುರ್ಭುಜ ರೂಪ) ಕ್ಕಿಂತಲೂ ಸಹ ಅಧಿಕವಾಗಿ ಮಾಧುರ್ಯದ ವಿಶೇಷತೆಯಿಂದ ಯುಕ್ತವಾದ ನನ್ನ ಯಾವ ಪರಮ ದುರ್ಲಭ ಕೃಷ್ಣಸ್ವರೂಪವಿದೆಯೋ, ಅದನ್ನು (ಅಂದರೆ ನನ್ನ ಸ್ವಯಂ-ಭಗವತ್ ರೂಪ, ಐಶ್ವರ್ಯ-ಮಾಧುರ್ಯ-ಘನ-ವಿಗ್ರಹ ಶ್ರೀಕೃಷ್ಣ ಸ್ವರೂಪ) ನೀನು ವ್ರಜಭೂಮಿಯಲ್ಲಿ ಸಾಕ್ಷಾತ್ ಅನುಭವ ಪಡೆಯುವೆ- ಇದನ್ನೇ ಸೂಚಿಸಲಾಗಿದೆ. ಯಾರು ಚತುಃಶ್ಲೋಕದ ಮೂಲಕ ಕೇವಲ ನಿರ್ವಿಶೇಷ ಸ್ವರೂಪ ಮಾತ್ರದ ವ್ಯಾಖ್ಯಾಯನ ಮಾಡುತ್ತಾರೋ, ಇದರ ಮೂಲಕ ಅವರ ಭಕ್ತಿಹೀನ ಇತರ ವ್ಯಾಖ್ಯಾನವು ಸ್ವತಃ ಪರಾಸ್ತವಾಗಿದೆ (ಸೋತಿದೆ).॥೩೧॥

ಶ್ರೀಕೃಷ್ಣದಾಸ ಕವಿರಾಜ್ ಗೋಸ್ವಾಮೀಪಾದರು

'ಯೈಛೆ ಆಮಾರ 'ಸ್ವರೂಪ', ಯೈಛೆ ಆಮಾರ 'ಸ್ಥಿಥಿ' ।
ಯೈಛೆ ಆಮಾರ ಗುಣ, ಕರ್ಮ, ಷಡೈಶ್ವರ್ಯ-ಶಕ್ತಿ ॥

ಆಮಾರ ಕೃಪಾಯ ಏಇ ಸಭ್ ಸ್ಫುರುಕ ತೋಮಾರೆ।'
ಎತ ಬಲಿ ತಿನ್ ತತ್ವ ಕಹಿಲಾ ತಾಂಹಾರೆ ॥
(ಚೈ. ಚ. ಮ. ೨೫/೧೦೫-೧೦೬)

ಭಾವಾನುವಾದ-ಯಾವ ರೀತಿ ನನ್ನ 'ಸ್ವರೂಪವಿರುವುದೋ', ಅದೇ ರೀತಿ ನನ್ನ ಸ್ಥಿತಿಯೂ ಇದೆ, ಅದೇ ಪ್ರಕಾರದಿಂದಲೇ ನನ್ನ ಗುಣ, ಕರ್ಮ ಹಾಗೂ ನನ್ನ ಷಡೈಶ್ವರ್ಯ-ಶಕ್ತಿಯೂ ಇದೆ, ಈ ಎಲ್ಲವನ್ನು ನನ್ನ ಕೃಪೆಯಿಂದ ಸರಿಯಾಗಿ ಅದೇ ಪ್ರಕಾರದಿಂದಲೇ ನಿನ್ನ ಹೃದಯದಲ್ಲಿ ಸ್ಫುರಿತವಾಗಲಿ. ಹೀಗೆ ಹೇಳಿ ಶ್ರೀಭಗವಂತನು ಬ್ರಹ್ಮನಿಗೆ ಮೂರು ತತ್ವಗಳ ಉಪದೇಶ ನೀಡಿದನು.॥೩೧॥

ಶ್ರೀಜೀವ ಗೋಸ್ವಾಮಿಪಾದರು

ತತ್ರ ಸಾಧ್ಯಯೋರ್ವಿಜ್ಞಾನರಹಸ್ಯಯೋರಾವಿರ್ಭಾವಾರ್ಥಮಾಶಿಷಂ ದದಾತಿ-ಯಾವಾನಹಮಿತಿ । ಯಾವಾನ್-ಸ್ವರೂಪತಾ ಯತ್ಪ್ರಿಮಾಣಕೋಽಹಮ್; ಯಥಾಭಾವಃ 'ಸತ್ತಾ ಸಸ್ಯೇತಿ ಯಲ್ಲಕ್ಷಣೋಽಹಮಿತ್ಯರ್ಥಃ; ಯಾನಿ- ಸ್ವರೂಪಾನ್ತರಂಗಾಣಿ; ರೂಪಾಣಿ-ಶ್ಯಾಮತ್ವ-ಚರುರ್ಭುಜತ್ವಾದೀನಿ; ಗುಣಾಃ - ಭಕ್ತವಾತ್ಸಲ್ಯಾಧ್ಯಾಃ; ಕರ್ಮಾಣಿ-ತಲ್ಲೀಲಾ ಯಸ್ಯ ಸ ಯದ್ರೂಪಗುಣಕರ್ಮಕೋಽಹಂ ತಥೈವ ತೇನ ತೇನ ಸರ್ವಪ್ರಕಾರೇಣೈವ ತತ್ವವಿಜ್ಞಾನಂ ಯಾಥಾರ್ಥ್ಯನುಭವೋ ಮದನುಗ್ರಹಾತ್ ತೇ ತವಾಸ್ತು ಭವತಾದಿತಿ ।

ಏತೇನ ಚತುಃಶ್ಲೋಕ್ಯರ್ಥಸ್ಯ ನಿರ್ವಿಶೇಷಪರತ್ವಂ ಸ್ವಯಮೇವ ಪರಾಸ್ತಮ್ । ವಕ್ಷ್ಯತೇ ಚ ಚತುಃಶ್ಲೋಕೀಮೇವೋದ್ದಿಶತಾ ಶ್ರೀಭಗವತಾ ಸ್ವಯಮುದ್ಧವಂ ಪ್ರತಿ (ಶ್ರೀಮದ್ಭಾ ೩/೪/೧೩) 'ಪುರಾ ಮಯಾ' ಇತ್ಯಾದೌ 'ಜ್ಞಾನಂ ಪರಂ ಮನ್ಮಹಿಮಾವಭಾಸಮ್' ಇತಿ । 'ತತ್ತ್ವವಿಜ್ಞಾನ'–ಪದೇನ ರೂಪಾದೀನಾಮಪಿ ಸ್ವರೂಪಭೂತತ್ವಂ ವ್ಯಕ್ತಮ್ । ತತ್ರ ವಿಜ್ಞಾನಾಶೀಃ ಸ್ಪಷ್ಟಾ, ರಹಸ್ಯಾಶೀಶ್ಚ ಪರಮಾನಂದಾತ್ಮಕತತ್ತದ್ ಯಾಥಾರ್ಥ್ಯಾನುಭವೇನಾವಶ್ಯಂ ಪ್ರೇಮೋದಯಾತ್ ॥೩೧॥

ಭಾವಾನುವಾದ– ನಾಲ್ಕು ವಸ್ತುಗಳಲ್ಲಿ ಎರಡು ಸಾಧಕ ವಸ್ತುಗಳು– ವಿಜ್ಞಾನ ಮತ್ತು ರಹಸ್ಯ, ಈ ಪ್ರಕಾರವಾಗಿ ಬ್ರಹ್ಮದೇವರ ಹೃದಯದಲ್ಲಿ ಆವಿರ್ಭವಿಸಲಿ, ಎಂದು ಶ್ರೀಭಗವಂತನು ಆಶೀರ್ವಾದವನ್ನು ಪ್ರಸಾದಿಸುತ್ತಿದ್ದಾನೆ. 'ಯಾವಾನ್' ಅರ್ಥಾತ್ ನಾನು ಯಾವ ಪ್ರಮಾಣ (ಆಕಾರ) ದಲ್ಲಿ ಯುಕ್ತನಾಗಿದ್ದೇನೋ; 'ಯದ್ರೂಪಗುಣ – ಕರ್ಮಕಃ' ಶಬ್ದದಿಂದ ನನ್ನ ಯಾವ ಎಲ್ಲ ಅಂತರಂಗ ಸ್ವರೂಪ ಅಂದರೆ ಶ್ಯಾಮ–ಚತುರ್ಭುಜ ರೂಪ, ಭಕ್ತವತ್ಸಲ ಹಾಗೂ ಲೀಲೆಗಳಿವೆಯೋ, ನಾನು ಆ ಎಲ್ಲ ವಿಶೇಷತೆಗಳಿಂದ ಯುಕ್ತನಾಗಿದ್ದೇನೆ. ಅದೇ ತತ್ತ್ವವಿಜ್ಞಾನ ಅಂದರೆ ಯಥಾರ್ಥ ಅನುಭವವು ಸಂಪೂರ್ಣವಾಗಿ ನನ್ನ ಕೃಪೆಯಿಂದ ನಿನ್ನ ಹೃದಯದಲ್ಲಿ ಸ್ಫುರಿತವಾಗಲಿ. ಶ್ರೀಭಗವಂತನ ಈ ವಚನಗಳಿಂದ ಚತುಃಶ್ಲೋಕದ ನಿರ್ವಿಶೇಷ ಪರ ಅರ್ಥವು ಸ್ವಯಂ ನೀರಸವಾಗಿದೆ. ಶ್ರೀಭಗವಂತನು ಸ್ವಯಂ ಈ ಚತುಃಶ್ಲೋಕವನ್ನು ಲಕ್ಷ್ಯವಾಗಿರಿಸಿಕೊಂಡು ಶ್ರೀಮದ್ಭಾವತದಲ್ಲಿ (೩/೪/೧೩) ಉದ್ಧವನಿಗೆ ಹೀಗೆ ಹೇಳಿದ್ದಾರೆ– ಪೂರ್ವಕಾಲದಲ್ಲಿ ಅಂದರೆ ಪದ್ಮಕಲ್ಪದಲ್ಲಿ ನಾನು ಪದ್ಮಯೋನಿ ಬ್ರಹ್ಮನಿಗೆ ನನ್ನ ಮಹಿಮಾ–ಸೂಚಕ ಪರಮ ಜ್ಞಾನವು, ಯಾವುದನ್ನು ವಿದ್ವಾಂಸರು 'ಭಾಗವತ' ಎಂಬ ಹೆಸರಿನಿಂದ ಸಂಬೋಧಿಸುತ್ತಾರೋ, ಅದನ್ನು ಉಪದೇಶ ಮಾಡಿದ್ದೆ'. 'ತತ್ತ್ವವಿಜ್ಞಾನ' ಎಂಬ ಶಬ್ದದಿಂದ ನನ್ನ ರೂಪ, ಗುಣಗಳ ಯಾವ ನನ್ನ ಸ್ವರೂಪವು ಒಳಗೊಂಡಿರುವುದೋ, ಅದು ವ್ಯಕ್ತವಾಗುತ್ತದೆ. ಇಲ್ಲಿಯವರೆಗು ಈ ವಿಜ್ಞಾನದ ಉದಯಕ್ಕಾಗಿ ಶ್ರೀಬ್ರಹ್ಮನಲ್ಲಿ ಶ್ರೀಭಗವಂತನ ಆಶೀರ್ವಾದ ಸ್ಪಷ್ಟತೆಯನ್ನು ನೀಡಲಾಗುತ್ತಿದೆ. ಪರಮಾನಂದದಾಯಕನಾದ ಶ್ರೀಭಗವಂತನ ರೂಪ, ಗುಣ ಮತ್ತು ಲೀಲಾ–ಸಂಬಂಧಿತ ವೈಶಿಷ್ಟ್ಯತೆಗಳ ಯಥಾರ್ಥ ಸ್ವರೂಪಾನುಭವದ ಮೂಲಕ ನಿಶ್ಚಿತ ರೂಪದಿಂದ ಪ್ರೇಮವು ಉದಯವಾಗುತ್ತದೆ. ಆದ್ದರಿಂದ ಶ್ರೀಭಗವಂತನ ಮೂಲಕ ಬ್ರಹ್ಮನಿಗೆ ಅವನಲ್ಲಿ ರಹಸ್ಯ ಅರ್ಥಾತ್ ಪ್ರೇಮಭಕ್ತಿ ಪ್ರಾಪ್ತಿಗಾಗಿ ಆಶೀರ್ವಾದವನ್ನು ಸಹ ನೀಡಲಾಗುತ್ತಿದೆ.॥

ಶ್ರೀ ಶ್ರೀಧರಸ್ವಾಮಿಪಾದ

ನನು ತ್ವದ್ದರ್ಶನೇऽಪ್ಯಸಮರ್ಥೋऽಹಂ ಕಥಂ ಜ್ಞಾನಾಧಿಕಾರೀ ಸ್ಯಾಮ್? ತತ್ರಾಹ– ಯಾವಾನ್ ಸ್ವರೂಪತಃ; ಯಥಾಭಾವಃ ಯಾದೃಕ್ ಸತ್ತಾವಾನ್, ಯಾನಿ ರೂಪಾಣಿ ಗುಣಾಃ ಕರ್ಮಾಣಿ ಚ ಯಸ್ಯ ॥೩೧॥

ಭಾವಾನುವಾದ– ಬ್ರಹ್ಮದೇವರು ಹೀಗೆ ಹೇಳಿದರು– ಹೇ ಭಗವಾನ್! ನಿಮ್ಮ ದರ್ಶನವನ್ನು ಪ್ರಾಪ್ತಿಸಿಕೊಳ್ಳುವುದಕ್ಕೂ ಸಹ ನಾನು ಅಸಮರ್ಥನು, ಹಾಗಿರುವಾಗ ಯಾವ ರೀತಿ ನಿಮ್ಮ ಜ್ಞಾನದ ಪ್ರಾಪ್ತಿಯ ಅಧಿಕಾರಿಯಾಗಬಲ್ಲೆ? ಇದಕ್ಕೆ ಉತ್ತರವಾಗಿ ಶ್ರೀಭಗವಂತನು ಈ ಶ್ಲೋಕವನ್ನು ಹೇಳಿದರು. 'ಯಾವಾನ್'– ಸ್ವರೂಪತಃ ನಾನು ಯಾವ ಪ್ರಮಾಣ (ಆಕಾರ) ದಿಂದ ಯುಕ್ತನಾಗಿದ್ದೇನೆ, 'ಯಥಾಭಾವಃ' – ನಾನು ಯಾವ ಪ್ರಕಾರ ಸತ್–ಶೀಲ ಅಂದರೆ ನಿತ್ಯ ಸತ್ಯನಾಗಿದ್ದೇನೆ, 'ಯದ್ರೂಪಗುಣಕರ್ಮಕಃ' ಅಂದರೆ ಈ ಸಮಸ್ತ (ಅಪ್ರಾಕೃತ) ರೂಪ, ಗುಣ ಮತ್ತು ಲೀಲೆಗಳಿವೆಯೋ, ನಾನು ಆ ಎಲ್ಲ ವಿಶೇಷತೆಗಳಿಂದ ಯುಕ್ತನಾಗಿದ್ದೇನೆ.॥

ಶ್ರೀವಿಜಯಧ್ವಜ ತೀರ್ಥಪಾದರು

'ಯಥಾತ್ಮಮಾಯಾಯೋಗೇನ' (ಶ್ರೀಮದ್ಭಾ ೨/೯/೨೬) ಇತಿ ಯಾಚಿತವರಪ್ರದಾನ–ಪ್ರಕಾರಮಾಹ–ಯಾವಾನಿತಿ।ದೇಶಕಾಲವ್ಯಾಪ್ತ್ಯಾ ಯಾವಾನ್ ಅನಂತಪರಿಮಾಣೋಪೇತೋಽಹಂ, ಯಥಾಭಾವೋ ಯಾದೃಶಸತ್ತಾವಾನ್ ನಿರುಪಾಧಿಕಸತ್ತೋಪೇತಃ, ಯದ್ರೂಪಗುಣಕರ್ಮಕಃ ಯಾದೃಶಾವತಾರಃ ಯಾದೃಶಗುಣಃ ಯಾದೃಶಾಕರ್ಮಶ್ಚಾಹಂ, ಮದನುಗ್ರಹಾತ್ ತೇ ತವ ತಥೈವ ತತ್ತ್ವವಿಜ್ಞಾನಮಸ್ತ್ವಿತ್ಯನ್ವಯಃ । ಏವ ಶಬ್ದೇನ ಸೋಪಾಧಿಕರೂಪಂ ವ್ಯಾವರ್ತಯತಿ ॥೩೧॥

ಭಾವಾನುವಾದ– ವರ್ತ್ತಮಾನ ಶ್ಲೋಕದಲ್ಲಿ ಇಪತ್ತಾರನೆಯ ಶ್ಲೋಕ 'ಯಥಾತ್ಮ' ದಲ್ಲಿ ಬೇಡಲ್ಪಟ್ಟ ವರವನ್ನು ಪ್ರಸಾದಿಸುವ ಪ್ರಕಾರವನ್ನು ಹೇಳುತ್ತಿದ್ದಾರೆ. ದೇಶ–ಕಾಲಗಳಲ್ಲಿ ವ್ಯಾಪ್ತನಾಗಿ ನಾನು ಅನಂತ–ಪ್ರಮಾಣದಿಂದ ಯುಕ್ತನಾಗಿದ್ದೇನೆ, ಯಾವ ರೀತಿ ಸತ್ಯವಂತ ಅರ್ಥಾತ್ ನಿರೂಪಾಧಿತ ಸತ್ಯದಿಂದ ಯುಕ್ತನಾಗಿದ್ದೇನೆ, ಯಾವ ರೀತಿ ಅವತಾರ, ಗುಣ ಮತ್ತು ಲೀಲಾ–ವಿಶಿಷ್ಟನಾಗಿದ್ದೇನೋ, ಅದೇ ರೀತಿಯಾಗಿ ನನ್ನ ಅನುಗ್ರಹದ ಮೂಲಕ ನಿನ್ನ ಹೃದಯದಲ್ಲಿ ಈ ಪ್ರಕಾರದ ತತ್ತ್ವ–ವಿಜ್ಞಾನವು ಸ್ಫೂರಿತವಾಗಲಿ. 'ಏವ' ಶಬ್ದದ ಮೂಲಕ ಸೋಪಾನ ರೂಪವನ್ನು ನಿಷೇಧಿಸುತ್ತಿದ್ದಾರೆ.॥

ಶ್ರೀ ವೀರರಾಘವಾಚಾರ್ಯಪಾದ

ಕಾರ್ತ್ಸ್ನ್ಯೇನ ತ್ವದುಗದಿತಗ್ರಹಣೇನ 'ಅಹಂ ಪ್ರಭುಃ' ಇತ್ಯಾಶಂಕಮಾನಂ ಪ್ರತ್ಯಾಹ–ಯಾವಾನಿತಿ। *'ಅಹಂ ಸತ್ಯಂ ಜ್ಞಾನಂ ಯಃ ಸರ್ವಜ್ಞಃ'* ಇತ್ಯಾದಿ ಶ್ರುತ್ಯುಕ್ತ ಜ್ಞಾನ ಸ್ವರೂಪಜ್ಞಾನಗುಣಗೋಽಹಂ, ಯಾವಾನ್ ಯತ್ಪರಿಮಾಣಕಃ ಅಪರಿಚ್ಛಿನ್ನಃ, ಯಥಾಭಾವಃ ಯಾದೃಕ್ ಸ್ವಭಾವಃ *'ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ'* ಇತ್ಯುಕ್ತ ಸರ್ವಜ್ಞತ್ವಾದಿ ಗುಣಕಃ ।ಯದ್ರೂಪಗುಣಕರ್ಮಕಃ – 'ರೂಪಮ್' ಚಿದಚಿದ್ವಸ್ತು, 'ಗುಣಃ' ತಯೋರ್ಗುಣಃ ಸ ಚ ಸದ್ವಾರಕೋ ಭಗವದ್ಗುಣಃ, 'ಕಾಠಿನ್ಯವಾನ್ ಯೋವಿಭರ್ತಿ' ಇತಿವತ್ ಕರ್ಮ–ಜಗದ್ವ್ಯಾಪಾರಃ ಯಾನಿರುಪಗುಣಕರ್ಮಾಣಿ । ಯಸ್ಯ ಸ ಬಹುವ್ರೀಹಿಃ ತಥೈವ ತತ್ತ್ವವಿಜ್ಞಾನಂ ಮತ್ಸ್ವರೂಪ–ರೂಪ–ಗುಣ–ವಿಭೂತಿ ಯಾಥಾತ್ಮ್ಯವಿಜ್ಞಾನಂ ಮದನುಗ್ರಹಾತ್ ಮತ್ಪ್ರಸಾದಾದ್ಧೇತೋಃ ತೇ ತವ ಅಸ್ತು ಭವತು ॥೩೧॥

ಭಾವಾನುವಾದ– ಶ್ರೀಭಗವಂತನ ವಚನಗಳನ್ನು ಸಂಪೂರ್ಣವಾಗಿ ಗ್ರಹಿಸಿದರೂ ಸಹ 'ನಾನೇ ಪ್ರಭು' ಅಥವಾ ಈ ರೀತಿ ಯಾರು ಆಶಂಕಿಸುತ್ತಾರೋ, ಅಂತವರಿಗೆ ಸಮಾಧಾನವಾಗಿ ಶ್ರೀಭಗವಂತ– ಯಾವಾನ್ ಮುಂತಾದ ಶ್ಲೋಕವನ್ನು ಹೇಳುತ್ತಿದ್ದಾರೆ. 'ಅಹಂ ಸತ್ಯಂ ಜ್ಞಾನಂ ಯಃ ಸರ್ವಜ್ಞಃ, ಅರ್ಥಾತ್ ನಾನು ಸತ್ಯ, ಜ್ಞಾನಸ್ವರೂಪ ಮತ್ತು ಸರ್ವಜ್ಞ.'– ನಾನು ವೇದೋಕ್ತ ಜ್ಞಾನ ಅರ್ಥಾತ್ ಸ್ವರೂಪಜ್ಞಾನ ಗುಣದಿಂದ ಯುಕ್ತನಾದವನು, ನನ್ನ ಯಾವ ಪ್ರಮಾಣ ಅರ್ಥಾತ್ ಅಪರಿಚ್ಛಿನ್ನಮಯತೆ, ಯಾವ ಪ್ರಕಾರದ ಸ್ವಭಾವ ಅಂದರೆ ಶಕ್ತಿ–ಸಂಬಂಧದಲ್ಲಿ "ಸ್ವಭಾವಕೀ ಜ್ಞಾನ–ಬಲ–ಕ್ರಿಯಾ ಚ"– ವೇದಗಳಲ್ಲಿ ನಿರೂಪಿತವಾದ ಯಾವ ಸರ್ವಜ್ಞತೆ ಇತ್ಯಾದಿ ಗುಣಗಳಿವೆಯೋ, ಅವುಗಳಿಂದ ಯುಕ್ತನು. 'ಯದ್ರೂಪಗುಣಕರ್ಮಕಃ' ಅಂದರೆ 'ರೂಪ'– ಚಿದಚಿತ್ ವಸ್ತು; 'ಗುಣ'– ಈ ಎರಡರ ಗುಣ ಹಾಗೂ ಭಗವಂತನ ಸತ್–ಧಾರಕ ಗುಣ; "ಕಾಠಿನ್ಯವಾನ್ ಯೋ ವಿಭಕ್ತಿ ಅಂದರೆ ಕಠೋರನಾಗುತ್ತಿದ್ದರೂ ಸಹ ಯಾರು ಪಾಲಿಸುತ್ತಾರೋ"– ಈ ಪ್ರಕಾರದ 'ಕರ್ಮ' ಅರ್ಥಾತ್ ಜಗತ್–ವ್ಯಾಪಾರ ಅಂದರೆ ಜಗತ್–ಸೃಷ್ಟಿ ಇತ್ಯಾದಿ ಯಾರ ರೂಪ, ಗುಣ ಹಾಗೂ ಕರ್ಮ ಇರುವುದೋ ಅದು. ನನ್ನ ಕೃಪೆಯಿಂದ ನಿನಗೆ ತತ್ವ–ವಿಜ್ಞಾನವು ಪ್ರಾಪ್ತಿಯಾಗಲಿ, ಅರ್ಥಾತ್ ನನ್ನ ಸ್ವರೂಪ–ರೂಪ–ಗುಣ–ವಿಭೂತಿಯನ್ನು ಸರಿಯಾಗಿ ಅದೇ ಪ್ರಕಾರದಿಂದಲೇ ಅದುಇದ್ದಂತೆ ಯಥಾರ್ಥ–ವಿಜ್ಞಾನ ಅನುಭವವಾಗಲಿ.॥

ಶ್ರೀಶುಕದೇವಪಾದರು

ಭಕ್ತಿಯೋಗ–ಸಮನ್ವಿತಸ್ಯ ಜ್ಞಾನಸ್ಯ ಮುಖ್ಯೋಪಾಯಃ ಮಮಾನುಗ್ರ ಏವ ಇತ್ಯಾಹ–ಯಾವಾನಿತಿ । ಅಹಂ ಯಾವಾನ್ ಯತ್ಪರಿಮಾಣಕಃ, ಯಥಾಭಾವಃ ಯಾದೃಕ್ ಸತ್ತಾವಾನ್, ಯಾನಿ ರೂಪಾಣಿ ಗುಣಾಃ ಕರ್ಮಾಣಿ ಚ ಯಸ್ಯ ಸ ಯದ್ರೂಪಗುಣಕರ್ಮಕಃ, ತಥೈವ ತತ್ ತತ್ವವಿಜ್ಞಾನಂ ಮದನುಗ್ರಹಾತ್ ತೇಽಸ್ತು ॥೩೧॥

ಭಾವಾನುವಾದ– ಭಕ್ತಿಯೋಗದಿಂದ ಯುಕ್ತವಾದ ಜ್ಞಾನವನ್ನು ಪ್ರಾಪ್ತಿಸಿಕೊಳ್ಳಲು ಮುಖ್ಯ ಉಪಾಯವೆಂದರೆ ಕೇವಲ ನನ್ನ ಕೃಪೆಯಿಂದ ಮಾತ್ರ ಸಾಧ್ಯ– ಎಂದು ಇದ್ದನ್ನೇ ಹೇಳುತ್ತಿದ್ದಾರೆ. ನನ್ನ ಯಾವ ಪ್ರಮಾಣವಿದೆಯೋ, ನಾನು ಯಾವ ಪ್ರಕಾರ ಸತ್–ವಿಶೀಷ್ಟನಾಗಿದ್ದೇನೋ, ನನ್ನದು ಯಾವ ಎಲ್ಲ ರೂಪ, ಗುಣ ಮತ್ತು ಲೀಲೆಗಳಿವೆಯೋ, ಸರಿಯಾಗಿ ಅದೇ ಜ್ಞಾನವನ್ನು ನನ್ನ ಅನುಗ್ರಹದಿಂದ ನೀನು ವಿಶೇಷ ಪೂರ್ವಕವಾಗಿ ಪಡೆದುಕೋ. ॥೩೧॥

ಶ್ರೀವಲ್ಲಭಾಚಾರ್ಯಪಾದರವರು

ದ್ವಿತೀಯಂ ಜ್ಞಾನಮಾಹ– ಯಾವಾನಹಮಿತಿ । ಪ್ರಮಾಣತೋ ಯಾವಾನಂ ಪರಿಮಾಣತೋಽಪಿ, ಯಥಾಭಾವಃ ಯಾದೃಶೋ ಮಮಕಾರಣಭೂತೋ ಭಾವಃ, ಸರ್ವಕಾರ್ಯಕರಣಾಯ ಸರ್ವಶಕ್ತಿರೂಪಃ । ಪಾವನ್ತಿ ರೂಪಾಣಿ ಗುಣಾಃ ಕರ್ಮಾಣಿ

ಚ ಯಸ್ಯ । ಯಾನಿ ವಾ ಗುಣಾದೀನಿ । ಎತದಪಿ ಪೂರ್ವವತ್ । ತದಾಹ– ತಥೈವ ತೇ ಮದನುಗ್ರಹಾತ್ ತತ್ತ್ವವಿಜ್ಞಾನಮಸ್ತು । ತತ್ತ್ವತೋ ವಿಶೇಷೇಣ ಜ್ಞಾನಂ ಸರ್ವೇಷಂ ಯಥಾರ್ಥಂ ತವ ಸ್ಫುರತ್ವಿತ್ಯರ್ಥಃ ॥೩೧॥

ಭಾವಾನುವಾದ– ಈಗ ಮತ್ತೊಂದು ಜ್ಞಾನದ (ತನ್ನ ಲೀಲೆಯ ಜ್ಞಾನದ) ನಿರೂಪಣೆ ಮಾಡುವಾಗ ಶ್ರೀಭಗವಂತನು ಹೇಳುತಿರುವುದೇನೆಂದರೆ ನಾನು ಯಾವ ಪ್ರಮಾಣದವನು ಮತ್ತು ಎಲ್ಲ ಪ್ರಕಾರದ ಕಾರ್ಯಗಳನ್ನು ಮಾಡಲು ಯಾವ ಪ್ರಕಾರದ ನನ್ನ ಸರ್ವಶಕ್ತಿರೂಪಭಾವ (ಸ್ಥಿತಿ) ಹಾಗೂ ಯಾವ–ಯಾವ ನನ್ನ ರೂಪ, ಗುಣ, ಕರ್ಮ ಮುಂತಾದಗಳಿವೆಯೋ, ಆ ಎಲ್ಲಾ ತತ್ತ್ವ–ವಿಜ್ಞಾನ ಅಂದರೆ ವಿಶೇಷವಾದ ಜ್ಞಾನವು ನನ್ನ ಕೃಪಯಿಂದ ನಿನ್ನದಾಗಲಿ. ಅಂದರೆ ನನ್ನ ಸ್ವರೂಪ–ಗುಣಗಳ, ನನ್ನ ಶಕ್ತಿಗಳ, ನನ್ನ ಸ್ವರೂಪಗಳ ಮತ್ತು ನನ್ನ ಲೀಲೆಗಳ ಯಥಾರ್ಥ ಜ್ಞಾನ (ಅನುಭವ) ಎಲ್ಲವೂ ನಿನ್ನಲ್ಲಿ ಉಂಟಾಗಲಿ. ॥೩೧॥

ತಥ್ಯ–

ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ ।
(ಶ್ರೀಗೀ– ೧೮/೫೫)

ನಾನು ಯಾವ ರೀತಿಯಿಂದ ವಿಭೂತಿಸಂಪನ್ನನಾಗಿದ್ದೇನೋ ಮತ್ತು ನನ್ನ ಯಾವ ಸ್ವರೂಪವಿದೆಯೋ, ಅದನ್ನು ಕೇವಲ ಭಕ್ತಿಯ ಮೂಲಕದಿಂದ ಮಾತ್ರವೇ ತತ್ತ್ವತಃ (ನಾನಿರುವಂತೆ; ಸತ್ಯ) ಅರ್ಥಮಾಡಿಕೊಳ್ಳಲಾಗುತ್ತದೆ.

ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನಾ ಬಹುನಾ ಶ್ರುತೇನ ।
ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನುಂ ಸ್ವಾಮ್ ॥
(ಕಠ. ಉ. ೨/೨೩)

ಈ ಪರಮಾತ್ಮವಸ್ತುವನ್ನು ಪ್ರವಚನೆಯಿಂದಾಗಲಿ, ಬುದ್ಧಿಯಿಂದಾಗಲಿ ಅಥವಾ ಬಹಳ ಬಾರಿ ಇತರರಿಂದ ಕೇಳುವುದರಿಂದಾಗಲಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಯಾವಾಗ ಜೀವಾತ್ಮನು ಶ್ರೀಭಗವಂತನಲ್ಲಿ ಶರಣಾಗತನಾಗುತ್ತಾನೋ, ಆಗ ಶ್ರೀಭಗವಂತನು ಕೃಪಾಪೂರ್ವಕದಿಂದ ಅವನನ್ನು ಸ್ವೀಕರಿಸುತ್ತಾನೆ ಹಾಗೂ ಅವನ ಹತ್ತಿರ ಸ್ವಯಂ ಆತನೇ ತನ್ನ ಶ್ರೀವಿಗ್ರಹವನ್ನು ಪ್ರಕಾಶಿತಗೊಳ್ಳಿಸುತ್ತಾನೆ.

ಅಥಾಪಿ ತೇ ದೇವ ಪದಾಂಬುಜದ್ವಯ
ಪ್ರಸಾದಲೇಶಾನುಗ್ರಹೀತ ಏವ ಹಿ ।

ಜಾನಾತಿ ತತ್ತ್ವಂ ಭಗವನ್ಮಹಿಮ್ನೋ
ನ ಚಾನ್ಯ ಏಕೋಽಪಿ ಚಿರಂ ವಿಚಿನ್ವನ್ ॥
(ಶ್ರೀಮದ್ಭಾಗ– ೧೦/೧೪/೨೯)

ಹೇ ದೇವ! ಹೇ ಭಗವಾನ್! ಯಾರು ನಿಮ್ಮ ಯುಗಲ ಚರಣಕಮಲಗಳ ಕರುಣೆಯ ಕಣಮಾತ್ರವಷ್ಟನ್ನು ಪ್ರಾಪ್ತಿಸಿಕೊಂಡಿರುವರೋ, ಅವರು ಮಾತ್ರ ನಿಮ್ಮ ಯಥಾರ್ಥ ಮಹಿಮೆಯನ್ನು ಅರ್ಥಮಾಡಿಕೊಳ್ಳಬಲ್ಲರು. ಇವರನ್ನು ಹೊರತುಪಡಿಸಿ ದೀರ್ಘಕಾಲದಿಂದಲೂ ಅನುಸಂಧಾನ ಮಾಡಿದರೂ ಸಹ ಯಾರೇ ಆಗಲಿ ಅದನ್ನು ಅರ್ಥಾಮಾಡಿಕೊಳ್ಳಲು ಸಮರ್ಥರಾಗುವುದಿಲ್ಲ.

ಅನುಮಾನ ಪ್ರಮಾಣ ನಹೇ ಈಶ್ವರತತ್ವ-ಜ್ಞಾನೆ ।
ಕೃಪಾ ವಿನಾ ಈಶ್ವರೇರ ಕೇಹ ನಾಹಿ ಜಾನೆ ॥

ಈಶ್ವರೇರ ಕೃಪಾ-ಲೇಶ ಹಯ ತ' ಯಾಹಾರೆ ।
ಸೇಈ ತ' ಈಶ್ವರ-ತತ್ವ ಜಾನಿವಾರೆ ಪಾರೆ ॥

(ಚೈ . ಚ . ಮ . ೬/೮೨-೮೩)

(ಗೋಪೀನಾಥ ಆಚಾರ್ಯರು ಸಾರ್ವಭೌಮ ಭಟ್ಟಾಚಾರ್ಯರ ಶಿಷ್ಯರಿಗೆ ಹೇಳುತ್ತಿದ್ದಾರೆ)- ಶ್ರೀಭಗವಂತನ ಕೃಪೆಯನ್ನು ಹೊರತುಪಡಿಸಿ ಅನುಮಾನ-ಪ್ರಮಾಣದ ಮೂಲಕ ಭಗವತ್-ತತ್ವವನ್ನು ಯಾರೂ ಸಹ ತಿಳಿಯಲಾಗುವುದಿಲ್ಲ. ಯಾರಲ್ಲಿ ಶ್ರೀಭಗವಂತನ ಕೊಂಚಮಾತ್ರವಾದರೂ ಕೃಪೆಯಿರುತ್ತದೋ, ಕೇವಲ ಅವರು ಮಾತ್ರ ಈಶ್ವರತತ್ವವನ್ನು ಅರ್ಥಮಾಡಿಕೊಳ್ಳಬಹುದು.

ಶ್ರೀಲ ಭಕ್ತಿಸಿದ್ಧಾಂತ ಸರಸ್ವತೀ ಠಾಕುರ್ 'ಪ್ರಭುಪಾದ್'

ವಿಜ್ಞಾನ ಮತ್ತು ರಹಸ್ಯಯುಕ್ತ ಅದ್ವಯಜ್ಞಾನಸ್ವರೂಪ ವಸ್ತು ಹಾಗೂ ಅದರ ಅಂಶದ ಪರಿಚಯವು ಬಾಹ್ಯ ದೃಶ್ಯ ಜಗತ್ತಿನ ಹೆಸರು, ರೂಪ, ಗುಣ ಮತ್ತು ಕ್ರಿಯೆಗಳಿಗೆ ಸಮಾನವಾದ ನಶ್ವರ ಧರ್ಮಯುಕ್ತವಲ್ಲ. ತತ್ವ-ವಿಜ್ಞಾನದ ಅಭಾವದಲ್ಲಿ ಚೇತನರಹಿತ ಅಜ್ಞಾನವನ್ನು ವಿಜ್ಞಾನವೆಂದು ಹೇಳುತ್ತ ಯಾರು ಭ್ರಾಂತರಾಗುತ್ತಾರೋ, ಅವರು ಭಗವಂತನ ಆಕಾರ, ರೂಪ, ನಿತ್ಯಲೀಲೆಗಳು ಹಾಗೂ ನಿತ್ಯಗುಣಗಳನ್ನು ಸಾಧಿಸಲು ಅಸಮರ್ಥರು. ನಿತ್ಯ ಅನುಭವಕಾರಿಯಾದ ಅಣುಚಿತ್ತ ಜೀವಿ ವಿಜ್ಞಾನದಲ್ಲಿ ಅವಸ್ಥಿತವಾಗದ ಕಾರಣ ಅಂದರೆ ವಿಜ್ಞಾನದಲ್ಲಿ ತನ್ನ ಸ್ವರೂಪಾಧಿಷ್ಠಾನವನ್ನು ಅರ್ಥಮಾಡಿಕೊಳ್ಳದ ಕಾರಣದಿಂದ ಅನೇಕ ಪ್ರಕಾರದ ಗೊಂದಲಗಳಿಗೆ ಒಳಗಾಗುತ್ತಾನೆ. ಶ್ರೀಭಗವಂತನ ಅನುಗ್ರಹಕ್ಕೆ ಅತಿರಿಕ್ತವಾಗಿ ವಿಜ್ಞಾನ-ರಹಸ್ಯ ಸಂಯುಕ್ತವಾದ ಅದ್ವಯಜ್ಞಾನಸ್ವರೂಪವು ಸಿದ್ಧಿಸುವುದಿಲ್ಲ. ಗುಣಗಳ ಮೂಲಕ ಉತ್ತೇಜಕರಾಗಿ ಗುಣಾತೀತ ವಸ್ತುವಿನ ಹೆಸರು, ರೂಪ, ಗುಣ ಮತ್ತು ಲೀಲೆಯ ನಿರೂಪಣೆ ಮಾಡುವ ಯತ್ನವು ವಂಚನೆಯುಕ್ತ ಅಜ್ಞಾನದ್ದೇ ಪ್ರಚಂಢ ನೃತ್ಯವಾಗಿದೆ. ಶ್ರೀಭಗವಂತನ ಅನುಗ್ರಹಕ್ಕೆ ಹೊರತುಪಡಿಸಿ ಶ್ರೌತಪಥದ ಉಲ್ಲಂಘನೆ ಮಾಡುವುದರಿಂದ ಶ್ರೀಭಗವಂತನ ಜ್ಞಾನ ಪ್ರಾಪ್ತವಾಗುವುದಿಲ್ಲ. ಕೀರ್ತನೆಯ ಮೂಲಕ ಭಜನೀಯ ವಸ್ತುವಿನ ಸೇವ-ಪ್ರವೃತ್ತಿಯ ಅವಸ್ಥಾನವೇ ಭಗವತ್-ಜ್ಞಾನ ಪ್ರಾಪ್ತಿಯ ನಿದರ್ಶನ.

"ಯಮೇವೈಷ ವೃಣತೇ ತೇನ ಲಭ್ಯಃ"– ಇಲ್ಲಿನ ಶ್ರುತಿವಚನದ ವ್ಯಾಖ್ಯಾಯನದಲ್ಲಿ ಭಾಗವತದ "ಅಸ್ತು ತೇ ಮದನುಗ್ರಹಾತ್" ವಚನವು ಬಹಳ ಚನ್ನಾಗಿ ವಿವರಿಸುತ್ತದೆ. ಶ್ರೀಭಗವಂತನ ಕೃಪೆಯಿಂದಲೇ ಶ್ರೀಕೃಷ್ಣನೊಂದಿಗೆ ಸಂಬಂಧಜ್ಞಾನವು ಉದಿಸುತ್ತದೆ. ಭಗವತ್–ಕೃಪೆಯಿಂದ ಮಾತ್ರ ಜೀವಿಯ ಅಭಿಧೇಯರೂಪ ಭಜನೆಯಲ್ಲಿ ಪ್ರಯತ್ನ ಉಂಟಾಗುತ್ತದೆ. ಭಜನ–ಪ್ರಯತ್ನದ ಫಲಸ್ವರೂಪವೇ ಭಗವಂತನ ಕೃಪೆಯು ಪ್ರಾಪ್ತವಾಗುತ್ತದೆ ಮತ್ತು ಅದರಿಂದಲೇ ಭಗವತ್–ಪ್ರೇಮವು ಸಹ ಪ್ರಾಪ್ತವಾಗುತ್ತದೆ. ಸಂಬಂಧ, ಅಭಿಧೇಯ (ಸೇವೆ), ಪ್ರಯೋಜನ– ಈ ಮೂರು ತತ್ತ್ವಗಳ ಮೂಲ ವಿಷಯ ಶ್ರೀಭಗವಂತನು. ಅವನೇ ಭಜನೀಯ ವಸ್ತು. ಯಾರಿಗೆ ಶ್ರೀಭಗವಂತನು ಮಾತ್ರ ಭಜನೀಯ ವಸ್ತುವಾಗಿದ್ದಾನೋ, ಅವರಿಗೆ ಮಾತ್ರ ತತ್ತ್ವ–ವಿಜ್ಞಾನ ಹಾಗೂ ಸಾಧನಭಕ್ತಿಯ ಸಂಧಾನ ಪ್ರಾಪ್ತಿಯಾಗುತ್ತದೆ ಮತ್ತು ಇದರ ಫಲಸ್ವರೂಪವಾಗಿ ಅವನಿಗೆ ಪ್ರೇಮ ಅಥವಾ ಹ್ಲಾದಿನೀಶಕ್ತಿಯ ಅನುಗತ್ಯ ಪ್ರಾಪ್ತವಾಗುತ್ತದೆ. ಅಭಿಧೇಯದ ವಿಚಾರದಲ್ಲಿ ಸಾಧನಭಕ್ತಿ ಮತ್ತು ಪ್ರೇಮಭಕ್ತಿ ಎರಡು ಸ್ಥಿತಿಗಳಿವೆ. ಕೇವಲ ಪ್ರೇಮಭಕ್ತಿಯೊಂದೇ ಪ್ರಯೋಜನ.॥

ಶ್ರೀಶ್ರೀನಿವಾಸಾಚಾರ್ಯಪಾದ

ಯಾವಾನಹಂ– ಗೋಲೋಕಧಾಮಾ ಗೋಪವೇಶೋ ಗೋಪೀಪತಿಃ; *'ಕಂ ಪ್ರತಿ ಕಥಯಿತುಮೀಶೆ, ಸಂಪ್ರತಿ ಕೋ ವಾ ಪ್ರತೀತಿಮಾಯಾತು । ಗೋಪತಿ–ತನಯಾ–ಕುಂಜೇ, ಗೋಪವಧುಟೀವಿಟಂ ಬ್ರಹ್ಮ ॥'* (ಪದ್ಯಾವಳೀ ೯೯) ವಿಟಶ್ಚೋಪಪತಿಃ ಸ್ಮೃತಃ; ಅತಃ ಪತಿಃ ಏಕದೇಶೋಪಚಾರಃ । ಯಥಾಭಾವೋ ಯಥೋಜ್ಜ್ವಲಾದಿ–ಭಾವಾಶ್ರಯಃ । ಯದ್ರೂಪಗುಣಕರ್ಮಕಃ' ಶ್ಯಾಮಸುಂದರಃ ಕೋಟಿಕಂದರ್ಪ–ಲಾವಣ್ಯಧಾಮಾ, ಅಸಾಧಾರಣ–ಗುಣಚತುಷ್ಟಯ– ಮುರಲೀಮೋಹನತ್ವಾದಿವಾನ್, ಕರ್ಮ ರಾಸಲೀಲಾವಿನೋದೀ । ತಥೈವೇತಿ–ನಿಗಮ–ನಿಗೂಢತ್ವಾತ್, ನಿಗಮಕರ್ತ್ರೇಪಿ ಬ್ರಹ್ಮಣೇ ಅತಏವ ಆಶೀರ್ವಾದಃ, ತದಗೋಚರತ್ವಾತ್– ಅಶಕ್ಯತ್ವಾಚ್ಚ । *'ಗೋಲೋಕನಾಮ್ನಿ ನಿಜಧಾಮ್ನಿ'* (ಬ್ರಹ್ಮ ಸಂಹಿತಾ ೫,೪೩), 'ಗೋಲೋಕ ಏವ ನಿವಸತಿ' (ಬ್ರಹ್ಮ ಸಂಹಿತಾ ೫/೩೭) ಇತ್ಯಾದಿ । 'ಕೃಷ್ಣಂ ಗೋಪಾಲರೂಪಿಣಮ್' (ಗೌತಮೀಯತಂತ್ರೆ), 'ಭವೇಯುಸ್ತಾನಿ ತಲ್ಯಾನಿ ನ ಮಯಾ ಗೋಪರೂಪಿಣಾ' (ಬ್ರಹ್ಮಾಂಡ ಪುರಾಣೆ), 'ಗೋಪವೇಶೋ ಮೇ ಪುರಸ್ತಾದಾವಿರ್ಬಭೂವ' (ಗೋಪಾಲತಾಪನೀ ಪೂರ್ವ ೨೮) ಇತ್ಯಾದಿ । 'ಗೋಪೀಜನವಲ್ಲಭಃ', 'ಸ್ವಾಮೀ ಭವತಿ' (ಗೋಪಾಲತಾಪನೀ ಉತ್ತರ), 'ಕೃಷ್ಣವಧ್ವಃ' (ಶ್ರೀಮದ್ಭಾ ೧೦/೩೩/೭), 'ಬಲ್ಲವ್ಯೋ ಮೇಽನುಶಾಂತಯೇ' ಇತ್ಯಾದಿ । ಅಥಷ್ಠಾತೃತ್ವೇ 'ನೃಸಿಂಹೋ ನಂದನಂದನಃ' (ಶ್ರೀಭಕ್ತಿರಸಾಮೃತೆ ೨/೫/೧೧೯), 'ಶೃಂಗಾರರಸಸರ್ವಸ್ವಮ್' (ಕರ್ಣಾಮೃತೆ ೯೩), 'ಜನ್ಮಾದ್ಯಸ್ಯ ಯತಃ' (ಶ್ರೀಮದ್ಭಾ ೧/೧/೯), 'ಶೃಂಗಾರಃ ಸಖಿ ಮೂರ್ತಿಮಾನಿವ' (ಗೀತಗೋವಿಂದೆ ೧/೪೮) ಇತ್ಯಾದಿ. 'ಯಂ ಶ್ಯಾಮಸುಂದರ' (ಬ್ರಹ್ಮ ಸಂಹಿತಾ ೫/೩೮), 'ಶ್ಯಾಮಮೇವ ಪರಂ ರೂಪಮ್' (ಪಧ್ಯಾವಳಿ ೮೩) ಇತ್ಯಾದಿ । 'ಕಂದರ್ಪಕೋಟಿಲಾವಣ್ಯಃ'

(ಸ್ತವಮಾಲಾ ಮಹಾನಂದ ೧), 'ಕಂದರ್ಪಕೋಟಿ ರಮ್ಯಾಯ' (ಸ್ತವಮಾಲಾ ಪ್ರಣಾಮ ೨) ಇತ್ಯಾದಿ । 'ವೇಣುಂ ಕ್ವಣಂತಂ' (ಬ್ರಹ್ಮ ಸಂಹಿತಾ ೫/೩೦), 'ವೇಣುವಾಧ್ಯಮಹೋಲ್ಲಾಸ' (ಗೌತಮೀಯೆ ಸ್ತವರಾಜಃ ೧೩), 'ಗೋವಿಂದಂ ಕಲವೇಣುವಾದನಪರಮ್' (ಪಧ್ಯಾವಳಿ ೪೬) ಇತ್ಯಾದಿ. 'ಗೋವರ್ಧನಗಿರೌ ರಮ್ಯೇ ಸ್ಥಿಥಂ ರಾಸರಸೋತ್ಸುಕಮ್' (ಗೌತಮೀಯೆ ಸ್ತವರಾಜಃ ೧೧); 'ನ ಹಿ ಜಾನೆ ಸ್ಮೃತೆ ರಾಸೆ ಮನೋ ಮೇ ಕೀದೃಶಂ ಭವೇತ್' (ಬೃಹದ್ವಾಮನ ಪುರಾಣ); 'ಅಭೂದಾಕುಲಿತೋ ರಾಸಃ ಪ್ರಮದಾಶತಕೋಟಿಭಿಃ ।'; 'ರಾಸೋತ್ಸವಃ ಸಂಪ್ರವೃತ್ತೋ ಗೋಪೀಮಂಡಲಮಂಡಿತಃ' (ಶ್ರೀಮದ್ಭಾ ೧೦/೩೩/೩); 'ಜಯತಿ ಶ್ರೀಪತಿರ್ಗೋಪೀರಾಸಮಂಡಲ–ಮಂಡಿತಃ' (ಭಾವಾರ್ಥದೀಪಿಕಾ ೧೦/೯ ಪ್ರಾರಂಭ ೨) ಇತ್ಯಾದಿ ॥೩೧॥

ಭಾವಾನುವಾದ– ನನ್ನ ಕೃಪೆಯಿಂದ ನಿನಗೆ ನನ್ನ ಮತ್ತು ನನಗೆ ಸಂಬಂಧಿತವಾದ ಸಮಸ್ತ ಪ್ರಕಾರದ ತತ್ವಜ್ಞಾನವು ಸ್ಫೂರಿತವಾಗಲಿ. ಈ ಶ್ಲೋಕದಲ್ಲಿ 'ಯಾವಾನಹಂ' ಶಬ್ದವು ನನ್ನ ಸ್ವರೂಪವನ್ನು ಪ್ರಕಟಗೊಳ್ಳಿಸುವಂತಹದ್ದಾಗಿದೆ. ನಾನು ಗೋಲೋಕ–ಧಾಮವಾಸಿ, ಗೋಪವೇಶಧಾರಿ ಮತ್ತು ಗೋಪೀಪತಿ. 'ಗೋಪೀಪತಿ' ಶಬ್ದದಿಂದ ಗೋಪಿಯರ ಉಪಪತಿ ಎಂದೇ ಅರ್ಥಮಾಡಿಕೊಳ್ಳಬೇಕು. 'ಯಥಾಭಾವಃ' ಶಬ್ದದ ಮೂಲಕ ಉಜ್ವಲವಾದ ಇತ್ಯಾದಿ ಭಾವಗಳ ಆಶ್ರಯದ ಅರಿವಾಗುತ್ತದೆ. 'ಯದ್ರೂಪಗುಣಕರ್ಮಕಃ' ಪದದಲ್ಲಿ 'ರೂಪ' ಶಬ್ದದಿಂದ ಶ್ಯಾಮಸುಂದರ, ಕೋಟಿ–ಕಂದರ್ಪ–ಲಾವಣ್ಯಮಯ ವಿಗ್ರಹ ಇತ್ಯಾದಿ ಧ್ವನಿತವಾಗುತ್ತದೆ; 'ಗುಣ' ಶಬ್ದದಿಂದ ಅಸಾಧಾರಣವಾದ ನಾಲ್ಕು ಗುಣ ಅಂದರೆ ಲೀಲಾಮಾಧುರ್ಯ, ವೇಣುಮಾಧುರ್ಯ, ರೂಪಮಾಧುರ್ಯ ಮತ್ತು ಪ್ರೇಮಮಾಧುರ್ಯವನ್ನು ಅರ್ಥಮಾಡಿಕೊಳ್ಳಬೇಕು ಮತ್ತು 'ಕರ್ಮಃ' ಶಬ್ದವು ರಾಸಲೀಲೆ ಇತ್ಯಾದಿ ವಿನೋದದ ವಾಚಕವಾಗಿದೆ.

ಈ ಎಲ್ಲ ತತ್ವ ನಿಗಮಕ್ಕೂ ಸಹ ನಿಗೂಢವಾದ ಕಾರಣ ನಿಗಮಕರ್ತನಾದ ಬ್ರಹ್ಮನಿಗೂ ಅಗೋಚರ ಮತ್ತು ದುರ್ಬೋಧ್ಯವಾಗಿದೆ, ಆದ್ದರಿಂದ ಶ್ರೀಭಗವಂತನಿಗೆ ಅವರನ್ನು ಆಶೀರ್ವದಿಸುವ ಅವಶ್ಯಕತೆ ಬಂದಿದೆ.
ಈ ಸತ್ಯಾಂಶಗಳ ಪ್ರಮಾಣವು ಈ ಪ್ರಕಾರವಾಗಿದೆ'

ಕಂ ಪ್ರತಿ ಕಥಯಿತುಮೀಶೆ ಸಂಪ್ರತಿ ಕೋ ವಾ ಪ್ರತೀತಿಮಾಯಾತು ।
ಗೋಪತಿ–ತನಯಾ–ಕುಂಜೆ ಗೋಪವಧೂಟೀ–ವಿಟಂ ಬ್ರಹ್ಮ ॥
(ಶ್ರೀ ರೂಪ ಗೋಸ್ವಾಮಿ ರಚಿಸಿರುವ ಪದ್ಮಾವಳಿ ೯೮)

ನಾನು ಈ ರಹಸ್ಯಮಯವಾದ ಮಾತನ್ನು ಯಾರಿಗೆ ಹೇಳಲಿ? ಅಥವಾ ಈಗ ಈರೀತಿ ಯಾರಿದ್ದಾರೆ ನನ್ನ ಈ ಮಾತಿನಲ್ಲಿ ವಿಶ್ವಾಸವನ್ನಿಡುವಂತಹವರು ಅಥವಾ ನಿಖಿಲ ಶ್ರುತಿಗಳನ್ನು ಪ್ರತಿಪಾದಿಸುವ ಅವರು ಪರಬ್ರಹ್ಮನು ಶ್ರೀಯಮುನಾ ತೀರದ ವನದಲ್ಲಿ ಗೋಪತರಾಣಿ ಶ್ರೀರಾಧಿಕಾರವರೊಂದಿಗೆ ಉಪಪತಿರೂಪದಲ್ಲಿ ಲೀಲೆಗಳನ್ನು

ಮಾಡುತ್ತ ಸಧಾ–ಸರ್ವಧಾ ವಿರಾಜಮಾನನಾಗಿದ್ದಾನೆ ಎಂದು. [ಇಲ್ಲಿ 'ವಿಟ' ಎಂಬ ಪದದ ಅರ್ಥ 'ಉಪಪತಿ' ಎಂದು ಅರ್ಥಮಾಡಿಕೊಳ್ಳಬೇಕು.]

ಬ್ರಹ್ಮಸಂಹಿತ (೫/೪೩)ದಲ್ಲಿ ಹೀಗೆ ಹೇಳಿದೆ– "ಗೋಲೋಕನಾಮ್ನಿ ನಿಜಧಾಮ್ನಿ" ಅಂದರೆ ಹದಿನಾಲ್ಕು ಭುವನರೂಪವು ದೇವಿಧಾಮ, ಅದರ ಮೇಲೆ ಮಹೇಶ ಧಾಮ, ಅದಕ್ಕಿಂತಲೂ ಮೇಲೆ ಹರಿಧಾಮ ಮತ್ತು ಎಲ್ಲದಕ್ಕಿಂತಲೂ ಮೇಲೆ ಗೋಲೋಕವೆಂಬ ಹೆಸರಿನ ತಮ್ಮ (ಸ್ವಯಂಭಗವಾನ್ ಗೋವಿಂದನ) ಧಾಮವಿದೆ. ಆ–ಆ ಧಾಮಗಳ ಬೇರೆ–ಬೇರೆ, ವಿಶೇಷ–ವಿಶೇಷ ಪ್ರಭಾವಗಳನ್ನು ಯಾರು ನಿಯಮಿಸುತ್ತಿದ್ದಾರೋ, ಆ ಆದಿಪುರುಷನಾದ ಶ್ರೀಗೋವಿಂದನನ್ನು ನಾನು ಭಜಿಸುತ್ತೇನೆ. ಹಾಗೂ ಬ್ರಹ್ಮಸಂಹಿತ (೫/೩೭) ರಲ್ಲಿ ಹೇಳಿದೆ– "ಗೋಲೋಕ ಎವ ನಿವಾಸತಿ" ಅಂದರೆ ಆ ಅಖಿಲಾತ್ಮಭೂತ ಗೋವಿಂದನು ಗೋಲೋಕಧಾಮದದಲ್ಲೇ ವಾಸಿಸುತ್ತಾನೆ.

ಗೌತಮೀಯತಂತ್ರದಲ್ಲಿ ಹೀಗೆ ಹೇಳಿದೆ– "ಕೃಷ್ಣಂ ಗೋಪಾಲರೂಪಿಣಮ್" ಅರ್ಥಾತ್ ಗೋಪಾಲರೂಪಿ ಶ್ರೀಕೃಷ್ಣನನ್ನು ನಾನು ನಮಸ್ಕರಿಸುತ್ತೇನೆ, ಹಾಗೂ ಬ್ರಹ್ಮಾಂಢಪುರಾಣದಲ್ಲಿ ಹೀಗೆ ಪ್ರಸ್ತಾವನೆಯಿದೆ– "ಭವೇಯುಸ್ತಾನಿ ತುಲ್ಯಾನಿ ನ ಮಯಾ ಗೋಪರೂಪಿಣಾ." ಅಂದರೆ ನನ್ನ ಗೋಪವೇಶ ಮತ್ತು ವ್ರಜರಾಜನಂದನ ಸ್ವರೂಪದಲ್ಲಿ ಯಾವ ರೀತಿ ಸೌಂದರ್ಯ–ಮಾಧುರ್ಯ ಹಾಗೂ ಐಶ್ವರ್ಯದ ಪರಾಕಾಷ್ಠೆ ನೆಲೆಸಿರುತ್ತದೋ, ಅದೇ ರೀತಿ ನನ್ನ ಅನ್ಯ ಸ್ವರೂಪದಲ್ಲಿಲ್ಲ. ಗೋಪಾಲತಾಪನೀ (ಪೂರ್ವ ೨೮)ದಲ್ಲಿ ಹೇಳಲಾಗಿದ– "ಗೋಪವೇಶೋ ಮೇ ಪುರಸ್ತಾದಾವಿಬರ್ಭೂವ" ಅರ್ಥಾತ್ [ಯಾವಾಗ ಸನಕಾದಿ ಮುನಿಗಣರು ಬ್ರಹ್ಮದೇವರಿಂದ ಅಷ್ಟಾಕ್ಷರಿ ಮಂತ್ರದ ಸ್ವರೂಪ ಜಿಜ್ಞಾಸೆ ನಡೆಸಿದರೋ, ಆಗ ಬ್ರಹ್ಮದೇವರು ಹೀಗೆ ಹೇಳುತ್ತಾರೆ]– "ಹೇ ಪುತ್ರರೇ! ಒಂದು ಪರಾರ್ದ್ಧಕಾಲದವರೆಗು ನಾನು ಆ ಶ್ರೀವ್ರಜೇಂದ್ರನಂದನನ ಧ್ಯಾನ ಹಾಗೂ ಸ್ತುತಿಸಿದೆ, ಆಗ ಪರಾರ್ದ್ಧದ ಅಂತ್ಯದಲ್ಲಿ ಆ ಪರಬ್ರಹ್ಮ ಗೋಪವೇಶದಲ್ಲಿ ನನ್ನ ಸಮ್ಮುಖ ಪ್ರಕಟವಾದರು."

ಗೋಪಾಲತಾಪನೀ (ಪೂರ್ವ ೩) ದಲ್ಲಿ ಹೇಳಲಾಗಿದೆ– "ಗೋಪೀಜನವಲ್ಲಭಃ" ಅರ್ಥಾತ್ ಗೋಪಿಯರ ವಲ್ಲಭ; "ಸ್ವಾಮೀ ಭವತಿ" (ಗೋಪಾಲತಾಪನೀ ಉತ್ತರ ೯೩) ಅಂದರೆ ಆ ಶ್ರೀಭಗವಂತನೇ ನಿನ್ನ ಸ್ವಾಮಿ. ಶ್ರೀಭಾಗವತ (೧೦/೩೩/೮) ದಲ್ಲಿ ಹೇಳಲಾಗಿ– "ಕೃಷ್ಣವಧ್ವಃ" ಅಂದರೆ ಶ್ರೀಕೃಷ್ಣನ ಅಂಗನೆಯರು, ಶ್ರೀಭಾಗವತ (೧೦/೪೭/೬) ದಲ್ಲಿ ಹೇಳಿದೆ' "ವಲ್ಲವ್ಯೋ ಮೇಽನುಶಾಂತಯೆ [ಮದಾತ್ಮಿಕಾಃ]" ಅಂದರೆ ಗೋಪಿಯರು ನನ್ನ ಸ್ವರೂಪಶಕ್ತಿಭೂತರಾಗಿದ್ದಾರೆ.

"ನೃಸಿಂಹೋ ನಂದನಂದನಃ" (ಭಕ್ತಿರಸಾಮೃತಸಿಂಧು ೨/೫/೧೧೯) ಅಧಿಷ್ಠಾತೃವಿನ ರೂಪದಲ್ಲಿ ಶ್ರೀನಂದನಂದನನು. ಕೃಷ್ಣಕರ್ಣಾಮೃತ (೯೩)ದಲ್ಲಿ ಬಿಲ್ವಮಂಗಳರವರು ಹೇಳುತ್ತಾರೆ– "ಶೃಂಗಾರರಸಸರ್ವಸ್ವಂ ಶಿಖಿಪಿಚ್ಛವಿಭೂಷನಂ. ಅಂಗೀಕೃತನರಾಕಾಂ ಆಶ್ರಯೆ ಭವನಾಶ್ರಯಂ॥" ಅರ್ಥಾತ್ ಮನುಷ್ಯ

ಆಕೃತಿಯನ್ನು ಧರಿಸಿರುವವನೇ ಹಾಗೂ ತ್ರಿಲೋಕದ ಆಶ್ರಯ ನವಿಲುಗರಿಯ ಕಿರೀಟಧಾರಿ {ನವಿಲುಗರಿಯಕಿರೀಟಧಾರಿ} ಶೃಂಗಾರ ರಸ ಸರ್ವಸ್ವವನಲ್ಲಿ ನಾನು ಸರ್ವಾತ್ಮಭಾವದಿಂದ ಶರಣಾಗುತ್ತೇನೆ. ಇದೇ ರೀತಿ ಶ್ರೀಭಾಗವತ (೧/೧/೧) ದಲ್ಲಿ "ಜನ್ಮಾದ್ಯಸ್ಯ ಯತಃ" ಅರ್ಥಾತ್ ಶ್ರೀಕೃಷ್ಣನಿಂದ ಆದಿ–ರಸ–ಶೃಂಗಾರರಸದ ಉದ್ಭವವಾಗಿದೆ. ಗೀತಗೋವಿಂದದ ಪ್ರಥಮ ಕಂಡ (೧/೪೮) "ಶೃಂಗಾರಃ ಸಖಿ ಮೂರ್ತಿಮಾನಿವ" ಅಂದರೆ ವಿಲಾಸ–ರಸದಲ್ಲಿ ಉನ್ಮತ ಶ್ರೀಕೃಷ್ಣ ಮೂರ್ತಿಮಾನನು ಶೃಂಗಾರ ರಸಸ್ವರೂಪನಾಗಿ ವಿಹರಿಸುತ್ತಿದ್ದಾನೆ.

ಬ್ರಹ್ಮಸಂಹಿತೆಯಲ್ಲಿ (೫/೩೮) "ಯಂ ಶ್ಯಾಮಸುಂದರಮಚಿಂತ್ಯ ಗುಣಸ್ವರೂಪಂ" ಅಂದರೆ ಯಾರ ಅಚಿಂತ್ಯಗುಣವಿಶಿಷ್ಟ ಶ್ಯಾಮಸುಂದರ ಸ್ವರೂಪವಿರುವುದೋ. "ಶ್ಯಾಮಮೇವ ಪರಂ ರೂಪಂ" (ಪಧ್ಯಾವಳಿ ೭೩) ಅಂದರೆ ನನ್ನ ಶ್ಯಾಮರೂಪ ಮಾತ್ರ ಸರ್ವಶ್ರೇಷ್ಠ ರೂಪವು.

"ಕಂದರ್ಪಕೋಟಿಲಾವಣ್ಯಃ" (ಸ್ತವಮಾಲಾ ಮಹಾನಂದ ೨) ಅಂದರೆ ಅವನು ಕೋಟಿ–ಕೋಟಿ ಕಂದರ್ಪರ ಲಾವಣ್ಯದಿಂದ ಯುಕ್ತವಾಗಿದ್ದಾನೆ ಹಾಗೂ "ಕಂದರ್ಪಕೋಟಿರಮ್ಯಾಯ" (ಸ್ತವಮಾಲಾ ಪ್ರಣಾಮ ೧) ಅಂದರೆ ಕೋಟಿ–ಕೋಟಿ ಕಂದರ್ಪರಿಗಿಂತಲೂ ಸಹ ಕಮನೀಯನಾಗಿದ್ದಾನೆ.

(ಬ್ರಹ್ಮಸಂಹಿತ ೫/೩೦) "ವೇಣುಂ ಕ್ವಣನ್ತಮ್" ಅರ್ಥಾತ್ ವೇಣುವಾದನದಲ್ಲಿ ತತ್ಪರತೆ ಇರುತ್ತದೆ, "ವೇಣುವಾಧ್ಯಮಹೋಲ್ಲಾಸ" (ಗೌತಮೀಯೆ ಸ್ತವರಾಜಃ ೧೩) ಅಂದರೆ ವೇಣು ವಾದನದ ಮೂಲಕ ಮಹಾನ್ ಉಲ್ಲಾಸ ಅಂದರೆ ಆನಂದ ಪ್ರಸಾದಿಸುತ್ತಾನೆ. "ಗೋವಿಂದಂ ಕಲವೇಣುವಾದನಪರಮ್" (ಪಧ್ಯಾವಳಿ ೪೬) ಅಂದರೆ ಶ್ರೀಗೋವಿಂದನು ಅವ್ಯಕ್ತ ಹಾಗೂ ಮಧುರಧ್ವನಿಯಿಂದ ಯುಕ್ತವಾದ ವೇಣು ನುಡಿಸುತ್ತಾನೆ.

"ರಾಸೋತ್ಸವಃ ಸಂಪ್ರವೃತ್ತೋ ಗೋಪೀಮಂಡಲಮಣ್ಡಿತಃ" (ಶ್ರೀಮದ್ಭಾ ೧೦/೩೩/೩) ಅಂದರೆ ಸಹಸ್ರ ಗೋಪಿಯರ ಮಂಢಲದಿಂದ ಶೋಭಾಯಮಾನನಾದ ಭಗವಾನ್ ಶ್ರೀಕೃಷ್ಣನ ದಿವ್ಯ ರಾಸೋತ್ಸವ ಆರಂಭವಾಯಿತು. ಮತ್ತು ಅಂತಿಮವಾಗಿ "ಜಯತಿ ಶ್ರೀಪತಿರ್ಗೋಪೀರಾಸಮಂಡಲಮಂಡಿತಃ" (ಭಾವಾರ್ಥದೀಪಿಕಾ ೧೦/೨೯ ಪ್ರಾರಂಭ ೨) ಅರ್ಥಾತ್ ಗೋಪಿಯರೊಂದಿಗೆ ರಾಸಮಂಡಲದಲ್ಲಿ ಸುಶೋಭಿತ ಪರಬ್ರಹ್ಮ ಶ್ರೀಪತಿ ಶ್ರೀಕೃಷ್ಣನಿಗೆ ಜಯವಾಗಲಿ. ॥೩॥

ಚತುರ್ಥ–ಶ್ಲೋಕ

ಚತುಃಶ್ಲೋಕಿಯಲ್ಲಿ ಒಳಗೊಂಡ ಪ್ರಥಮ ಶ್ಲೋಕ – ಶ್ರೀಭಗವಂತನ ಮೂಲಕ ನಾಲ್ಕು ವಸ್ತುಗಳಲ್ಲಿ ಸರ್ವಪ್ರಥಮವಾಗಿ ಭಗವತ್–ಜ್ಞಾನದ ಪ್ರತಿಪಾದನೆ

ಅಹಮೇವಾಸಮೇವಾಗ್ರೇ ನಾನ್ಯದ್ಯತ್ ಸದಸತ್ಪರಮ್ ।
ಪಶ್ಚಾದಹಂ ಯದೇತಚ್ಚ ಯೋಽಸ್ಮ್ಯಹಮ್ ॥

(ಭಾಗವತಂ ೩೨)

ಅನ್ವಯ

[ಯಾವನಿತ್ಯಸ್ಯ ಅರ್ಥ ಸ್ಫುಟಯತಿ (ಮುವತ್ತೊಂದನೆಯ ಶ್ಲೋಕದ 'ಯಾವಾನಹಂ' ಇತ್ಯಾದಿಯ ಅರ್ಥವನ್ನು ವಿಸ್ತಾರಪೂರ್ವಕವಾಗಿ ಪ್ರಕಟಿಸುತ್ತಿದ್ದಾರೆ)]– ಅಹಂ ಏವ ಅಗ್ರೇ (ಸೃಷ್ಟಿಯ ಪೂರ್ವದಲ್ಲಿ ಏಕಮಾತ್ರ ನಾನೊಬ್ಬನೆ) ಆಸಮ್ ಏವ (ಸ್ಥಿತನಾಗಿದ್ದೆ) ಯತ್ ಸತ್ (ಸ್ಥೂಲ) [ಮತ್ತು] ಅಸತ್ (ಸೂಕ್ಷ್ಮ) ಪರಂ (ಇವೆರಡರ ಕಾರಣಭೂತ ಪ್ರಧಾನವಾದ ಅಥವಾ ಪ್ರಕೃತಿ), [ನನ್ನಿಂದ ಪೃಥಕ ರೂಪದಲ್ಲಿ] ಅನ್ಯತ್ ನ (ಅನ್ಯಥಾ ಬೇರೆ ಯಾವುದೂ ಇರಲಿಲ್ಲ), ಪಶ್ಚಾತ್ (ಸೃಷ್ಟಿಯ ನಂತರ) ಅಹಮ್ [ಏವ (ಖಚಿತವಾಗಿ)] ಅಸ್ಮಿ (ಏಕಮಾತ್ರ ನಾನೊಬ್ಬನೇ ಇರುತ್ತೇನೆ) [ಏಕೆಂದರೆ] ಯತ್ ಏತತ್ (ಈ ವಿಶ್ವವು ಸಹ) [ನಾನೆ ಆಗಿದ್ದೇನೆ] ಚ (ಮತ್ತು) [ಪ್ರಳಯದಲ್ಲಿ] ಯಃ ಅವಿಷ್ಯೇತ ಸಃ (ಯಾವುದು ಉಳಿದಿರುತ್ತದೋ ಅದೂ ಸಹ) ಅಹಂ [ಖಚಿತವಾಗಿ] (ನಾನೆ). ॥೩೨॥

ಅನುವಾದ

ಸೃಷ್ಟಿಯ ಪೂರ್ವದಲ್ಲಿ ಏಕಮಾತ್ರ ನಾನೊಬ್ಬನೇ ನೆಲಸಿದ್ದೆ. ಸ್ಥೂಲ ಮತ್ತು ಸೂಕ್ಷ್ಮ ಹಾಗೂ ಇವೆರಡರ ಕಾರಣಭೂತ ಪ್ರಧಾನ ಅಥವಾ ಪ್ರಕೃತಿ ನನ್ನಿಂದ ಪೃಥಕ ರೂಪದಲ್ಲಿತ್ತು ಅನ್ಯ ಯಾವುದೂ ಇರಲಿಲ್ಲ. ಸೃಷ್ಟಿಯ ನಂತರವೂ ಸಹ ಕೇವಲ ನಾನೊಬ್ಬನೆ ನೆಲಸಿರುತ್ತೇನೆ, ಏಕೆಂದರೆ ಈ ವಿಶ್ವವೂ ಸಹ ನಾನೇ ಆಗಿದ್ದೇನೆ ಹಾಗೂ ಪ್ರಳಯದಲ್ಲೂ ಸಹ ಕೇವಲ ನಾನು ಮಾತ್ರ ಉಳಿದಿರುತ್ತೇನೆ. ॥೩೨॥

ಶ್ರೀಭಕ್ತಿವಿನೋದ ಠಾಕುರ್

ಪ್ರಸ್ತುತ ಶ್ಲೋಕದಿಂದ ಆರಂಭದ ನಾಲ್ಕು ಶ್ಲೋಕಗಳಲ್ಲಿ ಶ್ರೀಭಗವಂತನು ನಾಲ್ಕು ತತ್ವಗಳ ಭೇದವನ್ನು ತೊರಿಸುತ್ತಿದ್ದಾನೆ. ಇದರ ಹೆಸರೇ ಚತುಃಶ್ಲೋಕೀ–ಭಾಗವತ. ನಾನು ಪರಮ ನಿತ್ಯವಾದ ಅದ್ವಯತತ್ವ. ಮೊದಲು ನಾನೇ ನೆಲಸಿದ್ದೆ. ಸತ್ ಮತ್ತು ಅಸತ್ – ಇವೆರಡಕ್ಕಿಂತ ಶ್ರೇಷ್ಠ ಕೇವಲ ನಾನೇ ಆಗಿದ್ದೆ, ಅನ್ಯ ಯಾವುದೂ ಇರಲಿಲ್ಲ.

ಅಸತ್ ಅಂದರೆ ಆಗಮಾಪಾಯ (ಜನ್ಮ–ಮರಣಶೀಲ, ನಶ್ವರ) ಸ್ಥಿತಿ ಮತ್ತು ಸತ್ ಅಂದರೆ ಸೃಷ್ಟಿಯಿಂದ ನನ್ನ ಅನ್ವಯ ಸಂಬಂಧ – ಈ ಎರಡು ಕ್ರಿಯೆಗಳು ಯಾವ ಸೃಷ್ಟಿಯಲ್ಲಿ ಪ್ರಕಟವಾಗಿದೆಯೋ, ಅದೂ ಸಹ ನಾನೆ ಆಗಿದ್ದೇನೆ. ಅಗ್ನಿಯಿಂದ ಯಾವ ರೀತಿ ಅಗ್ನಿ ಕಣಗಳು ಹೊರಸೂಸುತ್ತದೋ ಹಾಗೂ ಸೂರ್ಯನಿಂದ ಯಾವ ರೀತಿ ಕಿರಣಗಳು ಹೊರಸೂಸುತ್ತದೋ, ಅದೇ ರೀತಿಯಾಗಿ ಸಮಸ್ತ ಜೀವಿಯು ನನ್ನ ಶಕ್ತಿಯ ಪರಿಣಾಮವಾಗಿದೆ. ನಾನು ಪರಿಣಿತ (ವಿಕೃತ) ಹೊಂದುವುದಿಲ್ಲ, ಆದರೆ ಚಿಂತಾಮಣಿಯ ಮೂಲಕ ಸ್ವರ್ಣವು ಪ್ರಸವಿಸುವಂತೆ ನನ್ನ ಅಕ್ಷಯಶಕ್ತಿಯು ಅವಿಕೃತವಾಗಿದ್ದರೂ ಸಹ ಈ ಚರಾಚರ ಜಗತ್ತನ್ನು ಸೃಷ್ಟಿ ಮಾಡುತ್ತದೆ. ಸೃಷ್ಟಿಯಾಗುವುದರಿಂದ ನನ್ನ ಅದ್ವಯತೆಗೆ ಹಾನಿಯಾಗುವುದಿಲ್ಲ. ಸೃಷ್ಟಿತತ್ವವು ಪೃಥಕವಾದರು ಸಹ ನಾನು ಒಂದೇ ಸರ್ವಸ್ವರೂಪ ತತ್ವನಾಗಿದ್ದೇನೆ–ಇದೇ ನನ್ನ ಅಚಿಂತ್ಯಶಕ್ತಿಯ ಭೇದಾಭೇದ ಪರಿಚಯ. ಪುನಃ ಪ್ರಳಯಕಾಲದಲ್ಲಿ ಕೇವಲ ನಾನು ಮಾತ್ರ ಉಳಿದಿರುತ್ತೇನೆ. ಕೇವಲಾದ್ವೈತ ವಾದ, ಕೇವಲ–ದ್ವೈತ ವಾದ, ದ್ವೈತಾದ್ವೈತ ವಾದ, ವಿಶಿಷ್ಟಾದ್ವೈತ ವಾದ ಮತ್ತು ಶುದ್ಧಾದ್ವೈತ ವಾದ ' ಈ ಎಲ್ಲಾವು ಹೆಸರಿಗೆ ಮಾತ್ರ ವಿವಾದಗಳಾಗಿವೆ. ಸಮಸ್ತ ವಾದಗಳ ವಾದತ್ವವು ದೂರವಾದಾಗ ಯಾವ ಪರಮ ಸತ್ಯವಿರುತ್ತದೋ, ಅದು ನನ್ನ ಅಚಿಂತ್ಯಶಕ್ತಿಯ ಪರಿಣಾಮರೂಪವಾಗಿರುವಂತಹ ನಿತ್ಯ–ಭೇದಾಭೇದಜ್ಞಾನ. ಇದೇ ಸಮಸ್ತ ವೇದವಾಕ್ಯಗಳ ಹಾಗೂ ಮಹಾವಾಕ್ಯಗಳ ಮುಕಾಂತರವಾದ ಸಮ್ಮತಿ. (ಶ್ರೀಭಾಗವಾತಾರ್ಕಮರೀಚಿಮಾಲಾ ೧೦/೪) ॥೩೨॥

ಶ್ರೀವಿಶ್ವನಾಥ ಚಕ್ರವರ್ತೀಪಾದರು

ಏವಂ ಶ್ಲೋಕಾಭ್ಯಾಂ ದೇಯತ್ವೇನ ಜ್ಞಾನಾದಿಕಂ ಪ್ರತಿಶ್ರುತ್ಯ ತತ್ಪ್ರಾಪ್ತಾವಾಶಿಷ್ಯೈವ ಯೋಗ್ಯತಾಮಾಪಧ್ಯ ಚ, ಪ್ರಥಮಂ ಜ್ಞಾನಮುಪದಿಶನ್ನೇವ *'ಪರಾವರೆ ಯಥಾರೂಪೆ ಜಾನೀಯಾಮ್'* (ಶ್ರೀಮದ್ಭಾ ೨/೯/೨೫) ಇತಿ ಪ್ರಶ್ನಸ್ಯಯೋತ್ತರಮಾಹ– ಅಹಮೇವಾಗ್ರೆ ಸೃಷ್ಟೇಃ ಪೂರ್ವಮಾಸಮಿತಿ ತರ್ಜನ್ಯಾ ಸ್ವವಕ್ಷಃ ಸ್ಪೃಶತಿ; ಏವಕಾರೇಣಾನ್ಯಯೋಗವ್ಯವಚ್ಛೆದಕೇ ನ ಮದ್ವಿಜಾತೀಯಂ ಪ್ರಾಕೃತಂ ವಸ್ತು ಕಿಮಪಿ ನಾಸೀದಿತಿ ಲಭ್ಯತೆ। ಅಯಮರ್ಥಃ– ಸಂಪ್ರತಿ ಭವಂತಂ ಪ್ರತಿ ಪ್ರಾದುರ್ಭವನ್ನಸೌ ಪರಮಮನೋಹರಾಕರೋ ರೂಪಗುಣಮಾಧುರೀ–ಮಹೋದಧಿರಹಮೇವಾಗ್ರೆ ಮಹಾಪ್ರಲಯಕಾಲೇಽಪ್ಯಾಸಮೇವ । *'ವಾಸುದೇವೋ ವಾ ಇದಮಗ್ರ ಆಸೀನ್ನ ಬ್ರಹ್ಮಾ ನ ಚ ಶಂಕರಃ'* ಇತಿ, *'ಆತ್ಮೈವೇದಮಗ್ರ ಆಸೀತ್ ಪುರುಷವಿಧಃ'* ಇತಿ, *'ಪುರುಷೋ ಹ ವೈ ನಾರಾಯಣಃ'* ಇತಿ, *'ಏಕೋ ಹ ವೈ ನಾರಾಯಣ ಆಸೀತ್'* ಇತಿ, *'ಪುರುಷೋ ಹ ವೈ ನಾರಾಯಣೋಽಕಾಮಯತ । ಅಥ ನಾರಾಯಣಾದಜೋಽಜಾಯತ, ಯತಃ ಸರ್ವಾಣಿ ಭೂತಾಣಿ । ನಾರಾಯಣಃ ಪರಂ ಬ್ರಹ್ಮ, ತತ್ವಂ ನಾರಾಯಣಃ ಪರಮ್ । ಋತಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣಪಿಂಗಳಮ್ ॥'* ಇತಿ, *'ಏಕೋ ನಾರಾಯಣ ಆಸೀನ್ನ ಬ್ರಹ್ಮಾ ನೇಶಾನಃ'* ಇತ್ಯಾದಿಶ್ರುತಿಭ್ಯಃ, *'ಭಗವಾನೇಕ ಆಸೇದಮ್'* (ಶ್ರೀಮದ್ಭಾ ೩/೫/೨೩)– ಇತ್ಯಾದಿ–ಸ್ಮೃತೇಶ್ಚ। ಅತ್ರ ವೈಕುಂಠತತ್ಪಾರ್ಷದಾದೀನಾಮಪಿ ತದುಪಾಂಗತ್ವಾತ್ ಅಹಂ–ಪದೇನೈವ ಗ್ರಹಣಂ–ರಾಜಾಸೌ ಪ್ರಯಾತೀತಿವತ್ । ಅತಸ್ತೇಷಾಂಚ ತದ್ವದೇವ

ಸ್ಥಿತಿರ್ಬೋಧ್ಯತೇ । ತಥಾ ಚ ರಾಜಪ್ರಶ್ನಃ (ಶ್ರೀಮದ್ಭಾ ೨/೮/೧೦)– *'ಸ ಚಾಪಿ ಯತ್ರ ಪುರುಷೋ ವಿಶ್ವಸ್ಥಿತ್ಯುದ್ಭವಾಪ್ಯಯಃ । ಮುಕ್ತ್ವಾತ್ಮಮಾಯಾಂ ಮಾಯೇಶಃ ಶೇತೆ ಸರ್ವಗುಹಾಶಯಃ ॥'* ಇತಿ, ಶ್ರೀವಿದುರಪ್ರಶ್ನಶ್ಚ (ಶ್ರೀಮದ್ಭಾ ೩/೭/೩೭)– *'ತತ್ತ್ವಾನಾಂ ಭಗವಂಸ್ತೇಷಾಂ ಕತಿಧಾ ಪ್ರತಿಸಂಕ್ರಮಃ । ತತ್ರೇಮಂ ಕ ಉಪಾಸೀರನ್ ಕ ಉ ಸ್ವಿದನುಶೇರತೆ ॥'* ಇತಿ । ಶ್ರೀಸ್ವಾಮಿಚರಣಾನಾಂ ವ್ಯಾಖ್ಯಾ ಚ– 'ತತ್ರ ಪ್ರಲಯೇ ಇಮಂ ಪರಮೇಶ್ವರಂ ಶಯಾನಂ ರಾಜಾನಮಿವ ಚಾಮರಗ್ರಾಹಿಣಃ ಕೇ ಉಪಾಸೀರನ್ ಕೇ ವಾ ತದನುಶೇರತೆ ಶಯಾನಮನುಸ್ವಪಂತಿ ।' ಇತ್ಯೇಷಾ । ಕಾಶೀಖಂಡೇಽಪ್ಯುಕ್ತಂ– *'ನ ಚ್ಯವಂತೇಽಪಿ ಯದ್ಭಕ್ತಾ ಮಹತ್ಯಾಂ ಪ್ರಲಯಾಪದಿ । ಅತೋಽಚಯುತೋಽಖಿಲೆ ಲೋಕೆ ಸ ಏಕಃ ಸರ್ವಗೋಽವ್ಯಯಃ ॥'* ಇತಿ । ಆಸಮೇವೇತ್ಯೋಗವ್ಯವಚ್ಛೇದಃ, 'ಅಸ್ತೇಃ' ಸತ್ತಾರ್ಥಕತ್ವಾತ್ ತದಾನೀಂ ಮದ್ವಿದ್ಯಮಾನತಾಯಾ ಅಭಾವಃ ಸರ್ವಥಾ ಮಾಭೂದಿತ್ಯೇವಾರ್ಥಪ್ರತೀತೇಃ । ಅಹಮೇವಾಸಮೇವ ನ ಕಿಮಪ್ಯಕರವಮಿತಿ ಕ್ರಿಯಾಂತರವ್ಯಾವೃತ್ತಿಸ್ತು ವಸ್ತುತೋ ನ ಘಟತೆ; ಅಸ್ತೇಃ ಸರ್ವಧಾತ್ವರ್ಥೇಷ್ವೇವಾನುಸ್ಯೂತತ್ವಾತ್ । ಪೂರ್ವಸ್ಮಿನ್ ವರ್ಷೆ ತತ್ರ ಗ್ರಾಮೆ ಚೈತ್ರ ಆಸೀದೇವೇತ್ಯುಕ್ತೆ ಚೈತ್ರಸ್ಯಯ ಶಯನಾಸಭೋಜನಾದಿಕ್ರಿಯಾ ನೈವ ವ್ಯಾವರ್ತ್ತಂತೆ, ಕಿಂತ್ವಭಾವ ಏವೇತಿ, ಕಿಂತೂಕ್ತಿಪರಿಪಾಟ್ಯಾ ಘಟ್ಯತೇ ಚ । ಯಥಾ ಸಂದರ್ಭೆ– 'ಆಸಮೇವೇತಿ ಬ್ರಹ್ಮಾದಿಬಹಿರ್ಜನಜ್ಞಾನ–ಗೋಚರಸೃಷ್ಟ್ಯಾದಿಲಕ್ಷಣ ಕ್ರಿಯಾಂರಸ್ಯೈವ ವ್ಯಾವೃತ್ತಿರ್ನ ತು ಸ್ವಾಂತರಂಗಲೀಲಾಯಾ ಅಪಿ । ಯಥಾ– ಆಧುನಾಸೌ ರಾಜಾ ನ ಕಿಂಚಿಪಿ ಕರೋತೀತ್ಯುಕ್ತೆ, ರಾಜಸಂಬಂಧಿಕಾರ್ಯಮೇವ ನಿಷಿಧ್ಯತೆ, ನ ತು ಶಯನಭೋಜನಾದಿಕಮಪೀತಿ ತದ್ವತ್' ಇತಿ ದೃಷ್ಟಮ್ । ನನು, ಕ್ವಚಿನ್ನಿರ್ವಿಶೇಷಮೇವ ಬ್ರಹ್ಮಾಸೀತ್ ಇತಿ ಶ್ರೂಯತೆ? ತತ್ರಾಹ– ಸತ್ ಕಾರ್ಯಮ್, ಅಸತ್ ಕಾರಣಮ್, ತಾಭ್ಯಾಂ ಪರಂ ಯದ್ಬ್ರಹ್ಮ ತನ್ನ ಮತ್ತೋಽನ್ಯತ್ । ಕ್ವಚಿದಾಧಿಕಾರಿಣಿ ಶಾಸ್ತ್ರೇ ವಾ ಮತ್ಸ್ವರೂಪಭೂತ–ನಾನಾವಿಶೇಷವ್ಯುತ್ಪತ್ತ್ಯಸಮರ್ಥೆ ಸೋಽಯಮಹಮೇವ ನಿರ್ವಿಶೇಷಬ್ರಹ್ಮತಯಾ ಪ್ರತಿಭಾಮೀತ್ಯರ್ಥಃ । ತ್ವಂತು ಪೂರ್ವಶ್ಲೋಕೋಕ್ತ–ಮದಾಶೀರ್ವಾದಾನುಗ್ರಹಾಭ್ಯಾಂ ರೂಪಗುಣಾದಿವಿಶಿಷ್ಟಮೇವ ಮಾಂ ಜಾನೀಹೀತಿ ಭಾವಃ । ನನು, ಸೃಷ್ಟೇರನಂತರಂ ಜಗದೇವ, ನ ತು ತ್ವಮುಪಲಭ್ಯಸೇ? ತತ್ರಾಹ– ಪಶ್ಚಾತ್ ಸೃಷ್ಟೇರನಂತರಮಪ್ಯಹಮೇವಾಸ್ಮ್ಯೇವೇತಿ ವೈಕುಂಠೇಷು ಭಗವದಾಧ್ಯಕಾರೇಣ, ಪ್ರಪಂಚೇಷ್ವನ್ತರ್ಯಾಮಿರೂಪೇಣ, ಯಥಾಸಮಯಂ ಮತ್ಸ್ಯಾದ್ಯವತಾರರೂಪೇಣ ಚ । ನನು ತರ್ಹಿ ಪೃಥಿವ್ಯಾದಿಕಂ ದೇವತಿರ್ಯಗಾದಿಕಂಚ ತ್ವಂ ನ ಭವಸೀತಿ ತವಾಪೂರ್ಣತ್ವಪ್ರಸಕ್ತಿಃ? ತತ್ರಾಹ–ಯದೇತಚ್ಚ ವ್ಯಷ್ಟಿ–ಸಮಷ್ಟಿವಿರಾಣ್ಮಯಂ ವಿಶ್ವಂ ತದಪ್ಯಹಮೇವ, ಮಚ್ಛಕ್ತಿಜನ್ಯತ್ವಾನ್ಮಮೈವ ಪ್ರಾಕೃತಂ ರೂಪಂ; *'ಪರಾವರೆ ಯಥಾ ರೂಪೆ ಜಾನೀಯಾಮ್'* (ಶ್ರೀಮದ್ಭಾ ೨/೯/೨೫) ಇತಿ ತ್ವಯಾ ಯದವರಂ ರೂಪಂ ಪೃಷ್ಟಂ ತದೇವೇದಂ ತ್ವಂ ಜಾನೀಜೇತ್ಯಾರ್ಥಃ । ತಥಾ ಯೋಽವಶಿಷ್ಯೇತ 'ಭವಾನೇಕಃ ಶಿಷ್ಯತೆ ಶೋಷಸಂಜ್ಞಃ' (ಶ್ರೀಮದ್ಭಾ ೧೦/೩/೨೫) ಇತ್ಯಾದ್ಯುಕ್ತಃ ಪರಮೇಶ್ವರಃ ಸೋಽಹಮಸ್ಮಿ। ತತ್ರ 'ಅಹಮ್' ಇತ್ಯಸ್ಯ ತ್ರಿರಾವೃತ್ತ್ಯಾ ನಿರ್ಧಾರಣಸ್ಯ ಸೂಚಿತತ್ವಾತ್ ಏತದ್ರೂಪಗುಣಾದಿವಿಶಿಷ್ಟಸ್ಯ ಮಮ ತ್ರೈಕಾಲಿಕನಿತ್ಯಸ್ಥಿತ್ಯಾ ಪರರೂಪತ್ವಂ, ಸೃಷ್ಟಿಸಂಹಾರಯೋರ್ಮಧ್ಯ ಏವ ದೃಶ್ಯಮಿದಂ ಮಾಯಿಕಪ್ರಪಂಚಜಾತಮವರಂ ರೂಪಮಿತಿ ಪರಾವರರೂಪಯೋರ್ಜ್ಞಾನಮುಕ್ತಂ,

ವಿಜ್ಞಾನನ್ತು ಪರರೂಪಸ್ಯ ಪ್ರಥಮಸ್ಯೈವ । ತಚ್ಚ ತದೈವ ಸ್ಯಾದ್ಯದಾ ಶ್ರವಣಕೀರ್ತನಾದಿಜನ್ಯ-ಪ್ರೇಮಭಕ್ತ್ಯಾ ತದ್ರೂಪಗುಣಾದಿಮಾಧುರ್ಯಮಾಸ್ವಾದ್ಯಮಾನಂ ಸ್ಯಾದಿತಿ ಚತುರ್ಥಶ್ಲೋಕ ವ್ಯಕ್ತಂ ಭಾವಿ ॥೩೨॥

ಭಾವಾನುವಾದ– ಈ ಪ್ರಕಾರವಾಗಿ ಹಿಂದಿನ ಎರಡು ಶ್ಲೋಕಗಳ ಮೂಲಕ ಶ್ರೀಬ್ರಹ್ಮನಿಗೆ ಜ್ಞಾನ ಮತ್ತು ವಿಜ್ಞಾನಾದಿಗಳನ್ನು ಪ್ರಸಾದಿಸುವುದಾಗಿ ಪ್ರತಿಜ್ಞೆಮಾಡಿ ಹಾಗೂ ಅದರ ಪ್ರಾಪ್ತಿಯ ವಿಷಯದಲ್ಲಿ ಆಶೀರ್ವಾದಮಾಡಿ ಶ್ರೀಭಗವಂತನು ಅವರಲ್ಲಿ ಯೋಗ್ಯತೆಯನ್ನು ಪ್ರಸಾದಿಸಿದರು. ತದನಂತರ ಸರ್ವಪ್ರಥಮ ಭಗವತ್-ಜ್ಞಾನದ ಉಪದೇಶ ಮಾಡುತ್ತಾ ಶ್ಲೋಕ ೨೫ ರಲ್ಲಿ ವರ್ಣಿತವಾದ– "ಯಾವ ರೀತಿ ನಾನು ನಿಮ್ಮ ಪ್ರಾಕೃತ (ಆವರ್ಣ) ಹಾಗೂ ಅಪ್ರಾಕೃತ (ಪರ) ರೂಪವನ್ನು ತಿಳಿದುಕೊಳ್ಳಬಲ್ಲೆ?". –ಬ್ರಹ್ಮನ ಈ ಪ್ರಶ್ನೆಗೆ ಉತ್ತರದಲ್ಲಿ "ಅಹಂ ಏವ ಅಗ್ರೆ ಅರ್ಥಾತ್ ಸೃಷ್ಟಿಯ ಪೂರ್ವದಲ್ಲಿ ನಾನೇ ಇದ್ದೆ"– ಇದನ್ನು ಶ್ರೀಭಗವಂತನು ತನ್ನ ತೋರುಬೆರಳಿನ ಮೂಲಕ ಆತನ ವಕ್ಷಃಸ್ಥಳವನ್ನು ಸ್ಪರ್ಶಿಸುತ್ತ ಹೇಳಿದನು (ಅರ್ಥಾತ್ ಈ ಸಮಯದಲ್ಲಿ ನಿನ್ನ ಕಣ್ಣುಗಳ ಮುಂದೆ ನಿಂತ್ತಿರುವ ಭಗವಂತನು ನಾನೇ ಆಗಿದ್ದೇ). ಇಲ್ಲಿ 'ಏವಾ'ಕಾರದ ಪ್ರಯೋಗದಿಂದ ಅನ್ಯ ವಸ್ತುವಿನ ಸಂಯೋಗದ ಖಂಢನೆಯನ್ನು ಸೂಚಿಸುತ್ತಿದ್ದಾರೆ, ಅಂದರೆ 'ಆ ಸಮಯದಲ್ಲಿ ನನ್ನ ವಿಜಾತೀಯವಾದ ಯಾವುದೇ ಪ್ರಾಕೃತ ವಸ್ತುವೂ ಸಹ ಇರಲಿಲ್ಲ'. ತಾತ್ಪರ್ಯವೇನೆಂದರೆ ಈ ಸಮಯದಲ್ಲಿ ನಿನ್ನ ಸಮ್ಮುಖದಲ್ಲಿ ಆವಿರ್ಭವಿಸಿರುವ ಪರಮ ಮನೋಹರ ಆಕೃತಿ, ರೂಪ, ಗುಣ ಹಾಗೂ ಮಾಧುರ್ಯದ ಮಹಾಸಮುದ್ರ ರೂಪದಲ್ಲಿ ವಿರಾಜಮಾನಾದ ನಾನೇ ಸೃಷ್ಟಿಯ ಪೂರ್ವದಲ್ಲಿ ಅಂದರೆ ಮಹಾಪ್ರಳಯದಲ್ಲೂ ಸಹ ನೆಲಸಿದ್ದೆ.

ಶೃತಿಗಳಲ್ಲಿ ಮತ್ತು ಸ್ಮೃತಿಗಳಲ್ಲಿ ಅನೇಕ ಪ್ರಮಾಣಗಳಿಂದ ಹೀಗೆ ಹೇಳಲ್ಪಟ್ಟಿದೆ – "ಈ ವಿಶ್ವದಸೃಷ್ಟಿಯ ಪೂರ್ವದಲ್ಲಿ ಶ್ರೀವಾಸುದೇವರೊಬ್ಬರು ಮಾತ್ರ ಇದ್ದರು, ಬ್ರಹ್ಮ ಅಥವಾ ಶಂಕರ ಯಾರೂ ಇರಲಿಲ್ಲ", "ಈ ಸೃಷ್ಟಿಗೆ ಮೊದಲು ಕೇವಲ ಪುರುಷಾಕೃತಿ ಆತ್ಮ ಮಾತ್ರವಿತ್ತು", "ಅದೇ ಪುರುಷನೇ ನಾರಾಯಣನು", "ಕೇವಲ ನಾರಾಯಣನು ಮಾತ್ರ ನೆಲಸಿದ್ದನು", "ಆ ಪುರುಷರೂಪೀ ಶ್ರೀನಾರಯಣನ ಇಚ್ಛೆಯಂತೆ ಶ್ರೀನಾರಾಯಣನಿಂದಲೇ ಬ್ರಹ್ಮದೇವರು ಜನ್ಮ ಪಡೆದರು, ಅವನಿಂದೆಲೇ ಸಮಸ್ತ ಪ್ರಾಣಿಗಳ ಉತ್ಪತ್ತಿ ಯಾಗಿದೆ. ಶ್ರೀನಾರಯಣನೇ ಪರಬ್ರಹ್ಮನು, ಶ್ರೀನಾರಯಣನೇ ಪರಮ–ತತ್ವ, ನಿತ್ಯ ಸತ್ಯ, ಪರಬ್ರಹ್ಮ ಪುರುಷನು ಕೃಷ್ಣಪಿಂಗಳ ಅಂದರೆ ಹಳದಿ-ಶ್ಯಾಮವರ್ಣನು, ಅವನಿಂದಲೇ ಲಾವಣ್ಯದ ಪರಮಾವದಿ". "ಏಕಮಾತ್ರ ಶ್ರೀನಾರಾಯಣ ಒಬ್ಬನು ಮಾತ್ರ ನೆಲೆಸಿದ್ದನು, ಬ್ರಹ್ಮ ಅಥವಾ ಈಶ್ವರ (ಶಂಕರ) ಯಾರೂ ಸಹ ಇರಲಿಲ್ಲ". –ಮುಂತಾದ ಶೃತಿಗಳಿಂದ ಹಾಗೂ ಶ್ರೀಭಾಗವತದ ತೃತೀಯ–ಸ್ಕಂದ(೩/೫/೨೩) ದಲ್ಲಿ ವಿದುರ–ಮೈತ್ರೇಯ ಸಂವಾದದಲ್ಲಿ ಹೇಳುತ್ತಾರೆ– "ಈ ವಿಶ್ವದ ಸೃಷ್ಟಿಗೆ ಮೊದಲು ಸಮಸ್ತ ಆತ್ಮಗಳ ಆತ್ಮ ಏಕಮಾತ್ರ ವಿಭೂ ಭಗವಂತ

ಶ್ರೀಹರಿಯೊಬ್ಬನೇ ನೆಲೆಸಿದ್ದ". –ಇತ್ಯಾದಿ ಸ್ಮೃತಿಗಳಿಂದ ತಿಳಿಯಬಹುದು.

ಯಾವ ರೀತಿ "ರಾಜನು ಹೋಗುತ್ತಿದ್ದಾನೆ"– ಎಂದು ಹೇಳುವ ಅರ್ಥದೊಂದಿಗೆ ಅವನ ಜೊತೆಯಲ್ಲಿ ರಕ್ಷಕ, ಸೇವಕ, ಸಹೋದ್ಯೋಗಿ ಹಾಗೂ ಸಂಬಂಧಿ ಮುಂತಾದವರನ್ನೂ ಸಹ ಗಮನದಲ್ಲಿರಿಸಿಕೊಂಡು ಅರ್ಥಮಾಡಿಕೊಳ್ಳುತ್ತೇವೆ, ರಾಜನನ್ನು ಒಬ್ಬಂಟಿಯಾಗಿ ಲಕ್ಷಿಸುವುದಿಲ್ಲ, ಅದೇ ರೀತಿ 'ಅಹಂ' ಪದದಿಂದ ಶ್ರೀಭಗವಂತನೊಂದಿಗೆ ಅವನ ಧಾಮ– ವೈಕುಂಠ ಹಾಗೂ ಸಂಯೋಗ ಮುಂತಾದವೂ ಸಹ ಶ್ರೀಭಗವಂತನ ಉಪಾಂಗವಾದ ಕಾರಣ ಗ್ರಹಣೀಯವಾದದ್ದು. ಆದ್ದರಿಂದ ಶ್ರೀಭಗವಂತನ ಧಾಮ ಹಾಗೂ ಅವನ ಸಂಯೋಗ ಮುಂತಾದವೂ ಸಹ ಅವನ ಸಮಾನವಾಗಿಯೇ ವಿಶ್ವಸೃಷ್ಟಿಗೆ ಮೊದಲೇ ನೆಲಸಿತ್ತು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಮಹಾರಾಜ ಪರೀಕ್ಷಿತ್ ಸಹ ಇದೇ ದ್ವಿತೀಯ–ಸ್ಕಂಧದ ಎಂಟನೆಯ ಅಧ್ಯಾಯ (ಶ್ರೀಮದ್ಭಾಗ ೨/೮/೧೦) ದಲ್ಲಿ ಶ್ರೀಶುಕದೇವ ಗೋಸ್ವಾಮಿಯವರಿಂದ ಇದೇ ಪ್ರಕಾರದ ಪ್ರಶ್ನೆಯನ್ನು ಮಾಡಿದರು– "ಹೇ ಬ್ರಾಹ್ಮಣ! ಯಾರಿಂದ ಈ ವಿಶ್ವದ ಸೃಷ್ಟಿ, ಸ್ಥಿತಿ ಹಾಗೂ ಲಯೆ ಉಂಟಾಗುತ್ತಿದೆಯೋ, ಆ ಮಾಯಾಧೀಶ, ಎಲ್ಲರ ಅಂತರ್ಯಾಮಿ ಪುರುಷನಾಗಿ ಆತ್ಮಮಾಯೆಯ ಪರಿತ್ಯಾಗ ಮಾಡಿ ಯಾವ ಪ್ರಕಾರವಾಗಿ ಶಯನಿಸಿದ್ದಾನೇ, ಅದನ್ನು ತತ್ವತಃ ವರ್ಣಿಸಿರಿ". ತೃತೀಯ– ಸ್ಕಂಧದ ಸಪ್ತಮ ಅಧ್ಯಾಯ (ಶ್ರೀಮದ್ಭಾ ೩/೭/೩೭) ದಲ್ಲಿ ಮಹಾಮುನಿ ಶ್ರೀಮೈತ್ರೇಯರ ಮೂಲಕ ಶ್ರೀವಿದುರರೂ ಸಹ ಇದೇ ಪ್ರಕಾರವಾಗಿ ಪ್ರಶ್ನೆ ಮಾಡಿದರು– "ಹೇ ಮುನಿಗಳೇ! ನೀವು ಯಾವ ಎಲ್ಲ ತತ್ವಗಳ ಸಂಬಂಧದಲ್ಲಿ ವರ್ಣನೆಮಾಡಿದ್ದೀರಿ, ಆ ಎಲ್ಲದರ ಲಯೆ ಎಷ್ಟು ಪ್ರಕಾರಗಳಾಗಿವೆ? ಪ್ರಳಯಕಾಲದಲ್ಲಿ ಶ್ರೀಭಗವಂತನು ಶೇಷಶಯನದಲ್ಲಿ ನಿದ್ರಿಸುವಾಗ, ನಿದ್ರೆಯಲ್ಲಿರುವ ಆ ಪರಮೇಶ್ವರನಿಗೆ ಯಾರು ಸೇವೆ ಮಾಡುತ್ತಾರೆ ಮತ್ತು ಅವನೊಂದಿಗೆ ಯಾವ– ಯಾವ ಪದಾರ್ಥವು ಸೂಪ್ತವಾಗಿರುತ್ತದೆ" ಶ್ರೀ ಶ್ರೀಧರ ಸ್ವಾಮಿಪಾದರವರು ಇದರ ವ್ಯಾಖ್ಯಾಯನವನ್ನು ಹೀಗೆ ಮಾಡುತ್ತಾರೆ– "ರಾಜನು ಶಯನಿಸುವಾಗ ಯಾವ ರೀತಿ ಸೇವಕರು ಚಾಮರದೊಂದಿಗೆ ಅವನ ಸೇವೆ ಮಾಡುತ್ತಾರೋ, ಅದೇ ರೀತಿ ಪ್ರಳಯಕಾಲದಲ್ಲಿ ಆ ನಿದ್ರಿತ ಪರಮೇಶ್ವರನನ್ನು ಯಾರು ಸೇವೆ ಮಾಡುತ್ತಾರೆ? ಹಾಗೂ ಯಾರು–ಯಾರು ಅವನೊಂದಿಗೆ ಸುಪ್ತಿಯಲ್ಲಿರುತ್ತಾರೆ?" ಕಾಶೀಖಂಢದಲ್ಲೂ ಸಹ ಹೀಗೆ ಹೇಳಲಾಗಿದೆ– "ಮಹಾಪ್ರಳಯರೂಪಿ ವಿಪತ್ತಿನಲ್ಲೂ ಸಹ ನಿನ್ನ ಭಕ್ತರು ವಿಚ್ಯುತ ರಾಗುವುದಿಲ್ಲ, ಹಾಗಿರುವಾಗ ಈ ಅಖಿಲ ವಿಶ್ವ ಬ್ರಹ್ಮಾಂಢದಲ್ಲಿ ಕೇವಲ ನೀನೊಬ್ಬನೆ 'ಅಚ್ಯುತ', ಸರ್ವವ್ಯಾಪಕ ಮತ್ತು ಅವ್ಯಯನು".

"ಆಸಮ್ ಏವ" ಅರ್ಥಾತ್ ಕೇವಲ ನಾನು ಮಾತ್ರ ನೆಲಸಿದ್ದೆ, ಇಲ್ಲಿ 'ಏವ'– ಎಂಬ ಈ ಶಬ್ದ ಪ್ರಯೋಗದ ಮೂಲಕ ಅನ್ಯ ವಿಷಯದ ಸಂಯೋಗವನ್ನು ಖಂಢನೆ ಮಾಡಲಾಗಿದೆ, ಮತ್ತು 'ಅಸ್ತಿ' ಕ್ರಿಯಾಪದದ 'ಸತ್ತ'– ವಾಚಕವಾಗುವ ಕಾರಣ ಆ ಸಮಯದಲ್ಲೂ ಸಹ ನನ್ನ ಅಸ್ತಿತ್ವದ ಅಭಾವವು ಯಾವುದೇ ಪ್ರಕಾರದಿಂದಲೂ ಸಹ

ಉಂಟಾಗಲಿಲ್ಲ, ಇದೇ 'ಏವ' ಪದದ ಅರ್ಥ. "ಏಕಮಾತ್ರ ನಾನೊಬ್ಬನೇ ನೆಲಸಿದ್ದೆ, ಆದರೆ ಏನನ್ನು ಮಾಡುತ್ತಿರಲಿಲ್ಲ"- ಈ ರೀತಿಯಾಗಿ ಶ್ರೀಭಗವಂತನ ಮೂಲಕ ಅನ್ಯಕಾರ್ಯ ಮಾಡಲು ನಿಷೇಧ ಎಂಬುದು ವಾಸ್ತವಿಕವಲ್ಲ, ಏಕೆಂದರೆ ಸಮಸ್ತ ಧಾತುಗಳ ಅರ್ಥಗಳಲ್ಲಿಯೇ 'ಅಸ್ತಿ' ಕ್ರಿಯಾಪದದ ಅರ್ಥವು ನೆಲಸಿರುತ್ತದೆ- ಇದು ಕಾಣಲಾಗುತ್ತದೆ. ಉದಾಹರಣೆಗೆ, "ಹಿಂದಿನ ವರ್ಷ ಆ ಮನೆಯಲ್ಲಿ ಚೈತ್ರಾಚರಣೆ ಇತ್ತು."- ಈ ವಾಕ್ಯದಲ್ಲಿ 'ಚೈತ್ರವಿತ್ತು' ಎಂಬ ವಿಚಾರದ ಮೂಲಕ ಚೈತ್ರಮಾಸದಲ್ಲಿ ಶಯನ, ಗಮನ ಮತ್ತು ಭೋಜನ ಇತ್ಯಾದಿ ಕ್ರಿಯೆಗಳನ್ನೂ ಸಹ ನಿಷೇಧ ಮಾಡಲಾಗಿಲ್ಲ, ಆದರೆ ಕೇವಲ ಚೈತ್ರದಲ್ಲಿ ಅವಿಧ್ಯಮಾನತೆಯನ್ನು ಮಾತ್ರ ನಿಷೇಧ ಮಾಡಲಾಗಿದೆ (ಅಂದರೆ ಅಂತಹದ್ದು ಆಚರಣೆಯಲ್ಲಿತ್ತು). ಇಲ್ಲಿಯವರೆಗು ಸ್ಪಷ್ಟವಾಗಿ ಭೋಜನಾದಿ ಅನ್ಯಾನ್ಯ ಕ್ರಿಯೆಗಳ ನಿಷೇದದ ಉಲ್ಲೇಖನೆಯಾದರೂ ಸಹ ಭೋಜನ ಇತ್ಯಾದಿಗಳ ನಿಷೇದವಾಗುತ್ತದೆ, ಅನ್ಯಥಾ ಬೇರೆ ಯಾವುದು ಅಲ್ಲ.

ಹೇಗೆಂದರೆ ಕ್ರಮ-ಸಂದರ್ಭದಲ್ಲಿ ಕಾಣುವಂತಹ- 'ಅಸಮೇವ' ಅರ್ಥಾತ್ "ನಾನು ಒಬ್ಬನೇ ಅಸ್ತಿತ್ವದಲ್ಲಿದೆ"- ಈ ಹೇಳಿಕೆಯ ಮೂಲಕ ಬ್ರಹ್ಮ ಇತ್ಯಾದಿ ಬಹೀರ್ಜನರ ಜ್ಞಾನಗೋಚರವಾದ ಸೃಷ್ಟಿ ಮುಂತಾದ ಲಕ್ಷಣಗಳಿಂದ ಯುಕ್ತವಾದ ಕೇವಲ ಶ್ರೀಭಗವಂತನ ಅನ್ಯ ಕ್ರಿಯೆಗಳನ್ನು ಮಾತ್ರ ನಿಷೇದ ಮಾಡಲಾಗಿತ್ತು, ಆದರೆ ಅವನು ತನ್ನ ಅಂತರಂಗ ಲೀಲೆಗಳನ್ನು ನಿಷೇದ ಮಾಡಿರಲಿಲ್ಲ. ಹೇಗೆಂದರೆ- "ರಾಜ ಈಗ ಏನೂ ಮಾಡುವುದಿಲ್ಲ"- ಎಂದು ಹೇಳುವುದರಲ್ಲಿ ಆ ರಾಜನು ಕೇವಲ ರಾಜ್ಯ ಮತ್ತು ಸಂಬಂಧೀ ಕಾರ್ಯಗಳನ್ನು ಮಾತ್ರ ನಿಷೇದ ಮಾಡಲಾಗಿದೆ ಎಂದು ಅರ್ಥಮಾಡಿಕೊಳ್ಳಲಾಗುತ್ತದೆ, ಆದರೆ ರಾಜನ ಶಯನ, ಭೋಜನ ಇತ್ಯಾದಿ ಸ್ವಾಭಾವಿಕ ಕರ್ಮಗಳ ನಿಷೇದನೆ ಎಂದಲ್ಲ. ಅದೇ ರೀತಿಯಾಗಿ ಮೇಲಿನ ವಿಷಯವನ್ನು ಅರ್ಥಮಾಡಿಕೊಳ್ಳಬೇಕು. (ಅಂದರೆ ಕೇವಲ ಶ್ರೀಭಗವಂತನ ಅಸ್ತಿತ್ವವನ್ನು ಹೇಳುವುದರಿಂದ ಅವನ ಅಂತರಂಗ ಸೇವಕರೊಂದಿಗೆ ಅವನ ಲೀಲೆಗಳ ಅಸ್ತಿತ್ವವನ್ನು ಅರ್ಥಮಾಡಿಕೊಳ್ಳಬೇಕು.)

ಅದಾಗ್ಯೂ ಹೀಗೆ ಕೇಳುವುದಾದರೆ ಕೆಲುವೊಮ್ಮೆ "ಏಕಮಾತ್ರ ನಿರ್ವಿಶೇಷ ಬ್ರಹ್ಮನ್ ಮಾತ್ರ ಅಸ್ತಿತ್ವದಲ್ಲಿದ್ದನೆ?"- ಎಂಬ ಈ ರೀತಿಯಾದ ಪ್ರಶ್ನೆಗೆ ಉತ್ತರದಲ್ಲಿ ಹೇಳುತ್ತಾರೆ- 'ಸದಸತ್ಪರಮ್' ಅರ್ಥಾತ್ 'ಸತ್'- ಕಾರ್ಯ ಹಾಗೂ 'ಅಸತ್'- ಕಾರಣ ಮತ್ತು ಈ ಎರಡರಿಂದ 'ಪರ' ಅಂದರೆ ಪೃತಕ ವಸ್ತು ಎಂಬ ಬ್ರಹ್ಮ ಇರುವುದೋ, ಅದೂ ಸಹ ನನ್ನಿಂದ ಭಿನ್ನವಾದದ್ದಲ್ಲ. ಭಗವಂತನ ಸ್ವರೂಪಭೂತ ಚಿತ್-ವಿಲಾಸದ ಸಂಪೂರ್ಣ ಅಂದರೆ ಬಹುವಿಧ ವಿಶೇಷಪರಕೀಯ ಜ್ಞಾನ ಪ್ರಾಪ್ತಿಸಿಕೊಳ್ಳಲು ಅಸಮರ್ಥರಾಗಿರುವ ಕಾರಣ ಕೆಲವರು ನಿರ್ವಿಶೇಷಾಧಿಕಾರಿ ಅಥವಾ ನಿರ್ವಿಶೇಷಪರಕೀಯ ಶಾಸ್ತ್ರದಲ್ಲಿ ನಾನೇ ನಿರ್ವಿಶೇಷ ನಿರಾಕಾರ-ಬ್ರಹ್ಮರೂಪದಲ್ಲಿ ಪ್ರತಿಬಿಂಬಿಸುತ್ತೇನೆ. ಆದರೆ ಹೇ ಬ್ರಹ್ಮ! ನೀನು ಹಿಂದಿನ ಶ್ಲೋಕದಲ್ಲಿ ಪ್ರಸ್ತಾಪಿಸಿದ ನನ್ನ ಆಶೀರ್ವಾದ ಮತ್ತು ಅನುಗ್ರಹದ

ಬಲದಿಂದ ನನ್ನ ಅಪ್ರಾಕೃತ ರೂಪ ಮತ್ತು ಗುಣ ಇತ್ಯಾದಿಗಳಿಂದ ಯುಕ್ತವಾದ ರೂಪದಲ್ಲೇ ನನ್ನನ್ನು ತಿಳಿದುಕೊ– ಇದೇ ಭಾವಾರ್ಥವು.

ಸೃಷ್ಟಿಯ ನಂತರ ಜಗತ್ತನ್ನು ಮಾತ್ರ ನೋಡಲಾಗುತ್ತದೆ, ಆದರೆ ನಿಮ್ಮನ್ನು ನೋಡಲಾಗುವುದಿಲ್ಲವೆ? ಎಂದು ಹೀಗೆ ಪ್ರಶ್ನಿಸಿದರೆ, ಇದಕ್ಕೆ ಉತ್ತರದಲ್ಲಿ ಹೇಳುತ್ತಾರೆ– 'ಪಶ್ಚಾತ್ ಅಹಂ' ಅರ್ಥಾತ್ ಸೃಷ್ಟಿಯ ನಂತರವು ಸಹ ನಾನೇ ನೆಲೆಸಿರುತ್ತೇನೆ, ಏಕೆಂದರೆ ಅನಂತ ವೈಕುಂಠದಲ್ಲಿ ಷಡೈಶ್ವರ್ಯಶಾಲೀ ಭಗವತ್–ರೂಪದಲ್ಲಿ, ಪ್ರಪಂಚದಲ್ಲಿ ಅಂತರ್ಯಾಮಿ ರೂಪದಲ್ಲಿ ಹಾಗೂ ಅವತರಿಸಲು ಉಪಯುಕ್ತ ಸಮಯದಲ್ಲಿ ಮತ್ಸ್ಯಾದಿ ಅವತಾರ–ರೂಪಗಳಲ್ಲಿ ನನ್ನದೇ ಉಪಸ್ಥಿತವಿರುತ್ತದೆ. ಪೃಥ್ವಿ ಇತ್ಯಾದಿ ಪ್ರಪಂಚ ಹಾಗೂ ದೇವತೆ–ಪರ್ಯಾಯ ಇತ್ಯಾದಿಗಳು ನೀವಲ್ಲ, ಆದರೆ ನಿಮ್ಮ ಅಪೂರ್ಣತೆ ಅರ್ಥಾತ್ ಖಂಡತ್ವದ ಪ್ರಸಂಗ ಉಪಸ್ಥಿತವಾಗುವುದೇ? ಎಂದು ಹೀಗೆ ಏನಾದರೂ ನೀವು ಪ್ರಶ್ನಿಸಿದರೆ ಅದಕ್ಕೆ ಉತ್ತರದಲ್ಲಿ ಹೇಳುತ್ತಾರೆ– 'ಯದೇತಚ್ಚ' ಅರ್ಥಾತ್ ಇದು ಯಾವ ವ್ಯಷ್ಟಿ–ಸಮಷ್ಟಿ–ವಿರಾಟ್ ರೂಪ ವಿಶ್ವವಿದೆಯೋ, ಅದೂ ಸಹ ನಾನೆ– ಇದು ನನ್ನ ಬಹಿರಂಗ ಮಾಯಾಶಕ್ತಿಯಿಂದ ಉತ್ಪನ್ನವಾದ ಕಾರಣ ನನ್ನದೇ ಪ್ರಾಕೃತ ರೂಪವಾಗಿದೆ. "ನಿಮ್ಮ ಅಪ್ರಾಕೃತ ಮತ್ತು ಪ್ರಾಕೃತ ರೂಪಗಳನ್ನು ತಿಳಿಯಬಹುದೇ"– ಹೀಗೆ ಮುಂತಾದ ಪ್ರಕಾರದಿಂದ ನೀನು ನನ್ನ 'ಅವರ' ಅಂದರೆ ಪ್ರಾಕೃತ ರೂಪದ ಸಂಬಂಧದಲ್ಲಿ ಜಿಜ್ಞಾಸು ನಡೆಸಿದೆ, ಈ ವಿಶ್ವವನ್ನು ನನ್ನ ಪ್ರಾಕೃತ ರೂಪವೆಂದೇ ಅರ್ಥಮಾಡಿಕೊ– ಇದೇ ಭಾವಾರ್ಥ.

ಅದೇ ರೀತಿ "ಯಃ ಅವಶಿಷ್ಯೇತ ಅಂದರೆ ಯಾವುದು ಅವಶೇಷವಿರುತ್ತದೆ (ಉಳಿದಿರುತ್ತದೆ)", "ಭವಾನೇಕಃ ಶಿಷ್ಯತೆ ಶೇಷ ಸಂಜ್ಞಃ" ಅಂದರೆ ಕೇವಲ ನೀವು ಒಬ್ಬರು ಮಾತ್ರ ಉಳಿದಿರುತ್ತೀರಿ, ಆದ್ದರಿಂದ ಶೇಷವು (ಉಳಿತ) ನಿಮ್ಮ ಸಂಕೇತ– ಇತ್ಯಾದಿಯಾಗಿ ದಶಮ–ಸ್ಕಂಧದಲ್ಲಿ (೧೦/೩/೨೫) ದೇವ ದೇವಿಯರ ಸ್ತುತಿಯಲ್ಲಿ ಯಾವ ಪರಮೇಶ್ವರನ ವರ್ಣನೆ ಇರುವುದೋ, ಆ ಪರಮೇಶ್ವರನು ನಾನೆ.

ಈ ಶ್ಲೋಕದಲ್ಲಿ 'ಅಹಮ್' (ನಾನು)– ಈ ಪದವನ್ನು ಮೂರು ಬಾರಿ ಆವೃತ್ತಿಯ ಮೂಲಕ ನನ್ನದೇ ನಿರ್ಧಾರಣೆ ಅಂದರೆ (ಸರ್ವಾಧಿಕ ಉತ್ಕರ್ಷದ ನಿಶ್ಚಯತೆಯನ್ನು) ಸೂಚಿಸುವುದರಿಂದ, ಅಪ್ರಾಕೃತ ರೂಪ–ಗುಣ ಇತ್ಯಾದಿ ನನ್ನ ತ್ರೈಕಾಲಿಕ (ಭೂತ–ಭವಿಷ್ಯತ್–ವರ್ತಮಾನ ಈ ಮೂರು ಕಾಲಗಳಲ್ಲಿ) ನಿತ್ಯ ಸ್ಥಿತಿಯ ಕಾರಣ ಪರ–ರೂಪತ್ವ (ಅಪ್ರಾಕೃತ ರೂಪ) ಮತ್ತು ಸೃಷ್ಟಿ ಮತ್ತು ಸಂಹಾರದ ಮಧ್ಯೆ ಜೀವಿಗಳ ದೃಶ್ಯ ಮಾಯಿಕ ಪ್ರಪಂಚದ ಅಪರತ್ವ (ಪ್ರಾಕೃತ ರೂಪ)– ಈ ಪ್ರಕಾರ ಪರ (ಅಪ್ರಾಕೃತ) ಮತ್ತು ಅಪರ (ಪ್ರಾಕೃತ) ಎರಡು ರೂಪಗಳ ಜ್ಞಾನ ಎನ್ನಲಾಗಿದೆ. ಆದರೆ, ಪ್ರಥಮೋಕ್ತ 'ಪರ' (ಅಪ್ರಾಕೃತ, ನಿತ್ಯ ಚಿನ್ಮಯ) ರೂಪವೇ ವಿಜ್ಞಾನವಾಗುತ್ತದೆ, 'ಅಪರ'ರೂಪವು ವಿಜ್ಞಾನವಾಗುವುದಿಲ್ಲ. ಮತ್ತು ಆ ಅಪ್ರಾಕೃತ ರೂಪದ ವಿಜ್ಞಾನವೂ ಸಹ ಅಗುತ್ತದೆ,

ಯಾವಾಗ (ಭಗವಂತನ ನಾಮ, ರೂಪ, ಗುಣ, ಲೀಲೆ ಇತ್ಯಾದಿಯ) ಶ್ರವಣ, ಕೀರ್ತನೆ ಇತ್ಯಾದಿಯಿಂದ ಉದಿತವಾದ ಪ್ರೇಮಭಕ್ತಿಯ ಮೂಲಕ ಅವನ ಅಪ್ರಾಕೃತ ರೂಪ–ಗುಣಾದಿಯ ಮಾಧುರ್ಯದ ಆಸ್ವಾದನೆಯಾಗುತ್ತದೆ– ಎಂಬ ಈ ವಿಚಾರವನ್ನು ಚತುರ್ಥ ("ಯಥಾ ಮಹಾಂತಿ ಭೂತಾನಿ") ಶ್ಲೋಕದಲ್ಲಿ ವಿಶೇಷವಾಗಿ ಹೇಳಲಾಗಿದೆ॥೩೨॥

ಶ್ರೀಕೃಷ್ಣದಾಸ ಕವಿರಾಜ ಗೋಸ್ವಾಮಿಪಾದರು

ಸೃಷ್ಟಿರ ಪೂರ್ವೇ ಷಡೈಶ್ವರ್ಯಪೂರ್ಣ ಆಮಿ ತ' ಹಇಯೆ ।
'ಪ್ರಪಂಚ', 'ಪ್ರಕೃತಿ', ಪುರುಷ' ಆಮಾತೇಇ ಲಯೆ॥

ಸೃಷ್ಟಿ ಕರಿ ತಾರ ಮಧ್ಯೇ ಆಮಿ ತ' ಬಸಿಯೆ।
ಪ್ರಪಂಚ ಯೇ ದೇಖ ಸಬ, ಸಹೆ ಆಮಿ ಹಇಯೆ॥

ಪ್ರಲಯೇ ಅವಶಿಷ್ಟ ಆಮಿ 'ಪೂರ್ಣ' ಹಇಯೆ।
ಪ್ರಾಕೃತ ಪ್ರಪಂಚ ಪಾಯ ಆಮಾತೇಇ ಲಯೆ॥

'ಅಹಮೇವ'–ಶ್ಲೋಕೆ 'ಅಹಮ'–ತಿನಬಾರ ।
ಪೂರ್ಣೈಶ್ವರ್ಯ–ವಿಗ್ರಹೇರ ಸ್ಥಿತಿರ ನಿರ್ದ್ಧಾರ॥

ಯೇ 'ವಿಗ್ರಹ' ನಾಹಿ ಮಾನೇ, 'ನಿರಾಕಾರ' ಮಾನೆ ।
ತಾರೆ ತಿರಸ್ಕರಿವಾರೇ ಕರಿಲಾ ನಿರ್ದ್ಧಾರಣೇ ॥೩೨॥

(ಚೈ.ಚ.ಮ.೨೫/೧೦೮–೧೧೦; ೧೧೨–೧೧೩)

ಭಾವಾನುವಾದ– ಸೃಷ್ಟಿಯ ಪೂರ್ವದಲ್ಲಿ ಆರು ಐಶ್ವರ್ಯಗಳಿಂದ ಪರಿಪೂರ್ಣನಾಗಿ ಕೇವಲ ನಾನೊಬ್ಬನಿದ್ದೆ. ಆ ಸಮಯದಲ್ಲಿ ಪ್ರಪಂಚ, ಪ್ರಕೃತಿ ಮತ್ತು ಪುರುಷ (ಜೀವಿ) ನನ್ನಲ್ಲಿ ಲೀನವಾಗಿತ್ತು.

ಸೃಷ್ಟಿಯ ನಂತರವೂ ನಾನೇ ಅದರಲ್ಲಿ ಸ್ಥಿತನಾಗಿದ್ದೇನೆ. ಪ್ರಪಂಚದಲ್ಲಿ ಏನೇಲ್ಲ ದೃಷ್ಟಿಗೋಚರವಾಗುವುದೋ, ಅವೇಲ್ಲವು (ನನ್ನ ಶಕ್ತಿಯ ಪರಿಣಾಮಸ್ವರೂಪ) ನಾನೇ ಆಗಿದ್ದೇನೆ.

ಪ್ರಳಯದ ಸಮಯದಲ್ಲಿ ನನ್ನಿಂದಲೇ ಪರಿಪೂರ್ಣವಾಗಿ ಕೇವಲ ನಾನು ಮಾತ್ರ ನೆಲೆಸಿರುತ್ತೇನೆ ಮತ್ತು ಪ್ರಾಕೃತ (ಪ್ರಕಟ) ಪ್ರಪಂಚವು ನನ್ನಲ್ಲಿ ಲೀನವಾಗಿರುತ್ತದೆ.

ಶ್ರೀಭಗವಂತನ ಮೂಲಕ ವಿವರಿಸಲ್ಪಟ್ಟ 'ಅಹಮೇವ' ಇತ್ಯಾದಿ ಶ್ಲೋಕದಲ್ಲಿ (ಶ್ರೀಮದ್ಭಾ ೨/೯/೩೩) 'ಅಹಂ' ಶಬ್ದವನ್ನು ಮೂರು ಬಾರಿ ಹೇಳಲಾಗಿದೆ– 'ಅಹಮೇವ', 'ಪಶ್ಚಾದ್ ಅಹಂ', 'ಸೋಽಸ್ಮಿ ಅಹಂ'.

'ಅಹಂ'ನ ಪುನರಾವೃತ್ತಿಯ ಮೂಲಕ ಆರು ಐಶ್ವರ್ಯ ಯುಕ್ತ ಪರಿಪೂರ್ಣ

ವಿಗ್ರಹನಾದ ಪರಮಪುರುಷ ಶ್ರೀಭಗವಂತನ ಸ್ಥಿತಿಯನ್ನೇ ನಿರ್ಧಾರಿಸಲ್ಪಟ್ಟಿದೆ.

ಯಾವ ಜನರು ಶ್ರೀಭಗವಂತನ ಶ್ರೀವಿಗ್ರಹವನ್ನು ನಂಬದೆ ಅವನನ್ನು ನಿರಾಕಾರನೆಂದು ನಂಬುತ್ತಾರೋ, ಅಂತಹವರ ತಿರಸ್ಕಾರಕ್ಕಾಗಿ ಮೂರು ಬಾರಿ 'ಅಹಂ' ಶಬ್ದವನ್ನು ಹೇಳಿ ಶ್ರೀಭಗವಂತನ ಅಪ್ರಾಕೃತ ಶ್ರೀವಿಗ್ರಹದ ನಿರೂಪಣೆಮಾಡಿದ್ದಾರೆ.

ಶ್ರೀಜೀವ ಗೋಸ್ವಾಮೀಪಾದರು

ತದೇವಾಭಿಧೇಯಾದಿ-ಚರುಷ್ಟಯಂ ಚತುಃಶ್ಲೋಕ್ಯಾ ನಿರೂಪಯನ್ ಪ್ರಥಮಂ ಜ್ಞಾನ-ವಿಜ್ಞಾನಾರ್ಥಂ ಸ್ವಲಕ್ಷಣಂ ಪ್ರತಿಪಾದಯತಿ- ಅಹಮೇವಾಸಮಿತಿ । ಅತ್ರಾಹಂಶಬ್ದೇನ ತದ್ವಕ್ತಾ ಮೂರ್ತ್ತ ಏವೋಚ್ಯತೆ, ನ ತು ನಿರ್ವಿಶೇಷಂ ಬ್ರಹ್ಮ-ತದವಿಷಯತ್ವಾತ್; ಆತ್ಮಜ್ಞಾನ-ತಾತ್ಪರ್ಯಕತ್ವೇ ತು (ಛಾ. ೬/೮/೭) *'ತತ್ವಮಸಿ'* ಇತಿವತ್ ತ್ವಮೇವಾಸೀರಿತ್ಯೇವ ವಕ್ತುಮುಪಯುಕ್ತತ್ವಾತ್ । ತತಶ್ಚಾಯಮರ್ಥಃ – ಸಂಪ್ರತಿ ಭವನ್ತಂ ಪ್ರತಿ ಪ್ರಾಸುರ್ಭವನ್ನಸೌ ಪರಮಮನೋಹರ ಶ್ರೀವಿಗ್ರಹೋಽಹಮೇವಾಗ್ರೆ ಮಹಾಪ್ರಲಯ-ಕಾಲೇಽಪ್ಯಾಸಮೇವ; 'ವಾಸುದೇವೋ ವಾ ಇದಮಗ್ರ ಆಸೀನ್ನ ಬ್ರಹ್ಮಾ ನ ಚ ಶಂಕರಃ'; (ಮಹೋಪನಿಷತ್ ೧) 'ಏಕೋ ನಾರಾಯಣ ಆಸೀನ್ನ ಬ್ರಹ್ಮಾ ನೇಶಾನಃ' ಇತ್ಯಾದಿ ಶ್ರುತಿಭ್ಯಃ; (ಶ್ರೀಮದ್ಭಾ ೩/೫/೨೩) 'ಭಗವಾನೇಕ ಆಸೇದಮಗ್ರ ಆತ್ಮಾತ್ಮನಾಂ ವಿಭುಃ' ಇತ್ಯಾದಿ ತೃತೀಯಾತ್ । ಅತೋ ವೈಕುಂಠ-ತತ್ಪಾರ್ಷದಾದೀನಾಮಪಿ ತದುಪಾಂಗತ್ವಾದಹಂಪದೇನೈವ ಗ್ರಹಣಮ್-ರಾಜಾಽಸೌ ಪ್ರಯಾತೀತವತ್ । ತತಸ್ತೇಷಾಂಚ ತದ್ವದೇವ ಸ್ಥಿತಿರ್ಬೋಧ್ಯತೆ । ತಥಾ ಚ ರಾಜಪ್ರಶ್ನಃ '(ಶ್ರೀಮದ್ಭಾ ೨/೮/೯) *'ಸ ಚಾಪಿ ಯತ್ರ ಪುರುಷೋ ವಿಶ್ವಸ್ಥಿತ್ಯುದ್ಭವಾಪಯಃ । ಮುಕ್ತ್ವಾತ್ಮಮಾಯಾಂ ಮಾಯೇಶಃ ಶೇತೇ ಸರ್ವಗುಹಾಶಯಃ ॥'* ಇತಿ; ಶ್ರೀವಿದುರ-ಪ್ರಶ್ನಶ್ಚ-(ಶ್ರೀಮದ್ಭಾ ೩/೭/೩೭) *'ತತ್ವಾನಾಂ ಭಗವಂಸ್ತೇಷಾಂ ಕತಿಧಾ ಪ್ರತಿಸಂಕ್ರಮಃ । ತತ್ರೇಮಂ ಕ ಉಪಾಸೀರನ್ ಕ ಉ ಸ್ವಿದನುಶೇರತೆ ॥'* ಇತಿ; ಕಾಶೀಖಂಡೇಽಪ್ಯುಕ್ತಂ ಶ್ರೀಧ್ರುವಚರಿತೆ- *'ನ ಚ್ಯವಂತೇ ಹಿ ಯದ್ಭಕ್ತಾ ಮಹತ್ಯಾಂ ಪ್ರಲಯಾದಪಿ । ಅತೋಽಚ್ಯುತೋಽಖಿಲೆ ಲೋಕೇ ಸ ಏಕಃ ಸರ್ವಗೋಽವ್ಯಯಃ ॥'* ಇತಿ । ಅಹಮೇವೇತ್ಯೇವ-ಕಾರೇಣ ಕರ್ತ್ರನ್ತರಸ್ಯಾರೂಪತ್ವಾದಿಕಸ್ಯ ಚ ವ್ಯಾವೃತಿಃ । ಆಸಮೇವೇತಿ ತತ್ರಾಸಂಭಾವನಾಯಾ ನಿವೃತ್ತಿಸ್ತದುಕ್ತಮ್- ಯದ್ರೂಪ-ಗುಣಕರ್ಮಕ ಇತಿ । ಯದ್ವಾ, ಆಸಮೇವೇತಿ ಬ್ರಹ್ಮಾದಿ-ಬಹಿರ್ಜನ-ಜ್ಞಾನಗೋಚರ-ಸೃಷ್ಟ್ಯಾದಿ-ಲಕ್ಷಣ ಕ್ರಿಯಾನ್ತರಸ್ಯೈವ ವ್ಯಾವೃತ್ತಿಃ, ನ ತು ಸ್ವಾನ್ತರಂಗಲೀಲಾಯಾ ಅಪಿ। ಯಥಾ- 'ಅಧುನಾಽಸೌ ರಾಜಾಕಾರ್ಯಂ ನ ಕಿಂಚಿತ್ ಕರೋತಿ' ಇತ್ಯುಕ್ತೆ ರಾಜ್ಯಸಂಬಂಧಿ-ಕಾರ್ಯಮೇವ ನಿಷಿಧ್ಯತೆ, ನ ತು ಶ್ಯಯನ- ಭೋಜನಾದಿಕಮಪೀತಿ, ತದ್ವತ್ । ಯದ್ವಾ, (ಪಾಣಿನಿ ೬/೪/೯೮) *'ಅಸ್ ಗತಿದೀಪ್ತ್ಯಾದಾನೇಷು'* ಇತ್ಯಸ್ಮಾದಾಸಮ್-ಸಾಮ್ಪ್ರತಂ ಭವತಾ ದೃಶ್ಯಮಾನೈರ್ವಿಶೇಷೈರೆಭಿರಗ್ರೇಽಪಿ ವಿರಾಜಮಾನ ಏವಾತಿಷ್ಠಮಿತಿ ನಿರಾಕಾರತ್ವಾದಿಕಸ್ಯೈವ ವಿಶೇಷತೋ ವ್ಯಾವೃತ್ತಿಃ । ತದುಕ್ತಮನೇನ ಶ್ಲೋಕೇನ ಸಾಕಾರ-ನಿರಾಕಾರ-ವಿಷ್ಣುಲಕ್ಷಣಕಾರಿಣ್ಯಾಃ ಮುಕ್ತಾಫಲಟೀಕಾಯಾಮಪಿ- *'ನಾಪಿ ಸಾಕಾರೇಷ್ವವ್ಯಾಪ್ತಿಃ, ತೇಷಾಮಾಕಾರಾತಿರೋಹಿತತ್ವಾತ್'* ಇತಿ; ಏತರೇಯಕ-ಶ್ರುತಿಶ್ಚ- (ಬೃ. ೧/೪/೧) 'ಆತ್ಮೈವೇದಮಗ್ರ ಆಸೀತ್ ಪುರುಷವಿಧಃ' ಇತಿ । ಏತೇನ ಪ್ರಕೃತೀಕ್ಷಣತೋಽಪಿ ಪ್ರಾಗ್ಭಾವಾತ್

ಪುರುಷಾದಪ್ಯುತ್ತಮತ್ವೇನ ಭಗವಜ್–ಜ್ಞಾನಮೇವ ಕಥಿತಮ್ । ನನು ಕ್ವಚಿನ್ನಿರ್ವಿಶೇಷಮೇವ ಬ್ರಹ್ಮಾಸೀದಿತಿ ಶ್ರುಯತೆ? ತತ್ರಾಹ– ಸತ್ ಕಾರ್ಯಮಸತ್ ಕಾರಣಮ್ ತಯೋಃ ಪರಂ ಯದ್‌ಬ್ರಹ್ಮ, ತನ್ನ ಮತ್ತೋಽನ್ಯತ್– ಕ್ವಚಿದಧಿಕಾರಿಣಿ ಶಾಸ್ತ್ರೇ ವಾ ಸ್ವರೂಪಭೂತವಿಶೇಷ–ವ್ಯತ್ಪತ್ಯಸಮರ್ಥೆ ಸೋಽಯಮಹಮೇವ ನಿರ್ವಿಶೇಷತಯಾ ಪ್ರತಿಭಾಮೀತ್ಯರ್ಥಃ। ಯದ್ವಾ, ತದಾನೀಂ ಪ್ರಚಂಚೆ ವಿಶೇಷಾಭಾವಾನ್ನಿರ್ವಿಶೇಷ–ಚಿನ್ಮಾತ್ರಕಾರೇಣ, ವೈಕುಂಠೆ ತು ಸವಿಶೇಷ–ಭಗವದ್ರೂಪೇಣೇತಿ ಶಾಸ್ತ್ರದ್ವಯ–ವ್ಯವಸ್ಥಾ । ಎತೇನ ಚ (ಗೀ ೧೪/೨೭) 'ಬ್ರಹ್ಮಣೋ ಹಿ ಪ್ರತಿಷ್ಠಾಹಮ್' ಇತ್ಯತ್ರೋಕ್ತಂ ಭಗವದ್‌ಜ್ಞಾನಮೇವ ಪ್ರತಿಪಾದಿತಮ್ । ಅತಏವಾಸ್ಯ ಜ್ಞಾನಸ್ಯ ಪರಮ–ಗುಹ್ಯತ್ವಮುಕ್ತಮ್ । ನನು ಸೃಷ್ಟೇರನಂತರಂ ಜಗತಿ ನೋಪಲಭ್ಯಸೇ? ತತ್ರಾಹ– ಪಶ್ಚಾತ್ ಸೃಷ್ಟೇರನನ್ತರಮಪ್ಯಹಮೇವಾಸ್ಮ್ಯೇವ, ವೈಕುಂಠೇಷು ಭಗವಧ್ಯಾಕಾರೇಣ, ಪ್ರಪಂಚೇಷ್ವನ್ತರ್ಯಾ–ಮ್ಯಾಕಾರೇಣೇತಿ ಶೇಷಃ । ಎತೇನ (ಶ್ರೀಮದ್ಭಾ ೧೧/೩/೩೫) *'ಸೃಷ್ಟಿ–ಸ್ಥಿತಿ–ಪ್ರಲಯಹೇತುರಹೇತುರಹ್ಯ'* ಇತ್ಯಾದಿ–ಪ್ರದಿಪಾದಿತಂ ಭಗವಜ್ ಜ್ಞಾನಮೇವೋಪದಿಷ್ಟಮ್ । ನನು ಸರ್ವತ್ರ ಘಟಪಟಾಧ್ಯಾಕಾರಾ ಯೇ ದೃಶ್ಯಂತೆ, ತೇ ತು ತ್ವದ್ರೂಪಾಣಿ ನ ಭವನ್ತೀತಿ ತವಾಪೂರ್ಣತ್ವಪ್ರಸಕ್ತಿಃ ಸ್ಯಾದಿತ್ಯಾಶಙ್ಕ್ಯಾಹ– ಯದೇತದ್ವಿಶ್ವಂ ತದಪ್ಯಹಮೇವ– ಮದನಂತತ್ವಾನ್ಮದಾತ್ಮಕಮೇವೇತ್ಯರ್ಥಃ । ಅನೇನ (ಶ್ರೀಮದ್ಭಾ ೨/೬/೩೦) *'ಸೋಽಯಂತೇಽಭಿಹಿತಸ್ತಾತ ಭಗವಾನ್ ವಿಶ್ವಭಾವನಃ । ಸಮಾಸೇನ ಹರೇರ್ನಾನ್ಯದನ್ಯಸ್ಮಾತ್ ಸದಸಚ್ಚ ಯತ್ ॥'* ಇತ್ಯಾದ್ಯುಕ್ತಂ ಭಗವಜ್‌ಜ್ಞಾನಮೇವೋಪದಿಷ್ಟಮ್ । ತಥಾ ಪ್ರಲಯೇ ಯೋಽವಶಿಷ್ಯೇತ, ಸೋಽಹಮೇವಾಸ್ಮ್ಯೇವ । ಎತೇನ (ಶ್ರೀಮದ್ಭಾ ೩/೫/೨೩) *'ಭಗವಾನೇಕ ಆಸೇದಮ್'* ಇತ್ಯಾದುಕ್ತಂ ಭಗವಜ್‌ಜ್ಞಾನಮೇವೋಪದಿಷ್ಟಮ್ । ತಥಾ ಪೂರ್ವಂ ಸಾನುಗ್ರಹಪ್ರಕಾಶ್ಯತ್ವೇನ ಪ್ರತಿಜ್ಞಾತಂ ಯಾವತ್ವಂ ಸರ್ವಕಾಲ–ದೇಶಾಪರಿಚ್ಛೇದ್ಯತ್ವ–ಜ್ಞಾಪನಯೋಪದಿಷ್ಟಮ್ ಎವಂ 'ನಾನ್ಯದ್ಯತ್ ಸದಸತ್ಪರಮ್' ಇತ್ಯನೇನ (ಗೀ ೧೪/೨೭) *'ಬ್ರಹ್ಮಣೋ ಹಿ ಪ್ರತಿಷ್ಠಾಹಮ್'* ಇತಿ ಜ್ಞಾಪನಯಾ ಯಥಾಭಾತತ್ವಮ್, ಸರ್ವಾಕಾರಾ ವಯವಿಭಗವದಾಕಾರನಿರ್ದೇಶೇನ ವಿಲಕ್ಷಣಾನನ್ತರೂಪತ್ವ–ಜ್ಞಾಪನಯಾ ಯದ್ರೂಪತ್ವಮ್, ಸರ್ವಾಶ್ರಯತಾ–ನಿರ್ದೇಶೇನ ವಿಲಕ್ಷಣಾನನ್ತಗುಣತ್ವ–ಜ್ಞಾಪನಯಾ ಯದ್ಗುಣತ್ವಮ್, ಸೃಷ್ಟಿ–ಸ್ಥಿತಿ–ಪ್ರಲಯೋಪಲಕ್ಷಿತ–ವಿವಿಧಕ್ರಿಯಾಶ್ರಯತ್ವ–ಕಥನೇನಾಲೌಕಿಕಾನನ್ತಕರ್ಮತ್ವ–ಜ್ಞಾಪನಯಾ ಯತ್ಕರ್ಮತ್ವಂಚ ॥೩೨॥

ಭಾವಾನುವಾದ– ಆ ನಾಲ್ಕು ವಾಕ್ಯಗಳನ್ನೇ ಶ್ರೀಭಗವಂತನು ಚತುಃಶ್ಲೋಕದ ಮೂಲಕ ನಿರೂಪಣೆ ಮಾಡುತ್ತಿದ್ದಾನೆ. ಮೊದಲನೆಯ ಎರಡು ಶ್ಲೋಕಗಳಲ್ಲಿ ಜ್ಞಾನ ಮತ್ತು ವಿಜ್ಞಾನದ ಅರ್ಥದಿಂದ ಯುಕ್ತವಾಗಿ ತನ್ನ ಲಕ್ಷಣದ ಪ್ರತಿಪಾದಿಸುತ್ತಿದ್ದಾನೆ. ಅದರಲ್ಲಿ ಮೊದಲು ಜ್ಞಾನಾರ್ಥದ ಶ್ಲೋಕವನ್ನು ತಿಳಿಸಿಕೊಡುತ್ತಿದ್ದಾನೆ.

ಪ್ರಸ್ತುತ ಶ್ಲೋಕದಲ್ಲಿ 'ಅಹಂ' ಶಬ್ದದ ಮೂಲಕ ಹೇಳುತ್ತಿರುವುದೇನೆಂದರೆ ಶ್ಲೋಕದ ವಕ್ತಾರನು (ಶ್ರೀಭಗವಂತ) ಮೂರ್ತಿವಿಗ್ರಹನಾಗಿದ್ದಾನೆ, ಆದರೆ ಅಜ್ಞೇಯ ನಿರ್ವಿಶೇಷ ಬ್ರಹ್ಮನಲ್ಲ. ಇದಕ್ಕೆ ಕಾರಣವೇನೆಂದರೆ ಆತ್ಮಜ್ಞಾನದ ತಾತ್ಪರ್ಯದ ವಿಷಯದಲ್ಲಿ 'ತತ್ವಮಸಿ'– ಈ ವೇದವಾಕ್ಯದಲ್ಲಿ ಯಾವ ರೀತಿ "ನೀನೆ ಆಗಿರುವೇ" ಅಂದರೆ ನಿನ್ನ

ಪೃಥಕ ಮೂರ್ತಿಯುಳ್ಳವನಾಗಿರುವೆ, ಇದನ್ನು ಹೇಳುವುದು ಉಪಯುಕ್ತ, ಅದೇ ರೀತಿ ಶ್ರೀಭಗವಂತನದೂ ಸಹ ಸ್ವತಂತ್ರ ವಿಗ್ರಹವಂತವನಾಗಿರುವುದು ನಿಶ್ಚಿತ. ಈಗ ಹೇ ಬ್ರಹ್ಮ! ಈ ಸಮಯದಲ್ಲಿ ನಿನ್ನ ಮುಂದೆ ನಾನು ಯಾವ ಪರಮ ಮನೋಹರ ಶ್ರೀವಿಗ್ರಹವಿಶಿಷ್ಟ ರೂಪದಲ್ಲಿ ಪ್ರದುರ್ಭೂತನಾಗಿದ್ದೇನೋ, ಅಲ್ಲು ನಾನೇ ಮೊದಲು ಅಂದರೆ ಮಹಾಪ್ರಳಯಕಾಲದಲ್ಲೂ ಸಹ ಇದೇ ರೂಪದಲ್ಲಿ ಸ್ಥಿತನಾಗಿದ್ದೆ . ಹೀಗೆ ಶೃತಿಗಳಲ್ಲಿಯೂ ಸಹ ವರ್ಣನೆಯುಂಟು– "ಈ ವಿಶ್ವಸೃಷ್ಟಿಯ ಪೂರ್ವದಲ್ಲಿ ಶ್ರೀವಾಸುದೇವನೊಬ್ಬನಿದ್ದ, ಬ್ರಹ್ಮ ಅಥವಾ ಶಂಕರ ಯಾರೂ ಸಹ ಇರಲಿಲ್ಲ", "ಏಕಮಾತ್ರ ಶ್ರೀನಾರಾಯಣನೊಬ್ಬನಿದ್ದ, ಬ್ರಹ್ಮ ಅಥವಾ ಈಶ್ವರ ಯಾರೂ ಸಹ ಇರಲಿಲ್ಲ". ತೃತೀಯ ಸ್ಕಂಧದಲ್ಲೂ (ಶ್ರೀಮದ್ಭಾ–೩/೫/೨೩) ಸಹ ಹೀಗೆ ವಿವರಿಸಿದ್ದಾರೆ– "ಸೃಷ್ಟಿಯ ಪೂರ್ವದಲ್ಲಿ ಸಮಸ್ತ ಆತ್ಮಗಳ ಆತ್ಮನಾದ ಏಕಮಾತ್ರ ವಿಭೂ ಭಗವಾನ್ ಶ್ರೀನಾರಾಯಣನು ಮಾತ್ರ ನೆಲೆಸಿದ್ದ.

"ಈ ರಾಜನು ಹೋಗುತ್ತಿದ್ದಾನೆ"– ಎಂದು ಹೇಳುವುದರಿಂದ ಯಾವ ರೀತಿ ರಾಜವೇಶ ದರಿಸಿ ರಾಜದಂಢ, ರಾಜಛತ್ರ, ಸೇನೆ, ಮಂತ್ರಿಗಳು ಮತ್ತು ಸೇವಕರೊಂದಿಗೆ ರಾಜನನ್ನು ಗಮನದಲ್ಲಿಸಿಕೊಂಡು ಅರ್ಥ ಮಾಡಿಕೊಳ್ಳುತ್ತೇವೋ, ಅದೇ ರೀತಿ 'ಅಹಂ' ಪದದ ಮೂಲಕ ಶ್ರೀಭಗವಂತನ ವೈಕುಂಠ ಧಾಮ ಹಾಗೂ ಸಂಗಡವು ಸಹ ಶ್ರೀಭಗವಂತನ ಉಪಾಂಗದ ರೂಪದಲ್ಲಿ ಗ್ರಹಿಸಬೇಕು ಮತ್ತು ಅದರ ಸ್ಥಿತಿಯೂ ಸಹ ಭಗವಂತನ ಸಮಾನವಾಗಿಯೆ ಅರ್ಥಮಾಡಿಕೊಳ್ಳಬೇಕು. ಶ್ರೀಭಾಗವತ (೨/೮/೯) ದಲ್ಲಿ ಶ್ರೀಪರೀಕ್ಷಿತರು ಹೀಗೆ ಪ್ರಶ್ನಿಸುತ್ತಾರೆ– "ಹೇ ಬ್ರಹ್ಮನ್! ಯಾರಿಂದ ಈ ವಿಶ್ವದ ಸೃಷ್ಟಿ, ಸ್ಥಿತಿ ಮತ್ತು ಪ್ರಳಯವಾಗುತ್ತದೆ, ಆ ಮಾಯಾದೀಶ ಸರ್ವಾಂತರ್ಯಾಮಿ ಪುರುಷ ಆತ್ಮಮಾಯೆಯನ್ನು ಪರಿತ್ಯಾಗಮಾಡಿ ಯಾವ ರೀತಿಯಾಗಿ ಶಯನಿಸುತ್ತಾನೆ, ಎಂಬುದನ್ನು ತತ್ವತಃ ವರ್ಣಿಸಿರಿ." ಪುನಃ ಶ್ರೀಭಾಗವತ (೩/೭/೩೭) ದಲ್ಲಿ ಶ್ರೀವಿದುರನ ಪ್ರಶ್ನೆಯಲ್ಲೂ ಸಹ ಇದರದ್ದೇ ಉಲ್ಲೇಖನೆಯಾಗಿದೆ– "ಹೇ ಮುನಿ! ನೀವು ಈ ಎಲ್ಲ ತತ್ವಗಳ ವರ್ಣನೆಯನ್ನು ಮಾಡಿದ್ದೀರಿ, ಆ ಎಲ್ಲದರ ಲಯೆ ಎಷ್ಟು ಪ್ರಕಾರಗಳಾಗಿರುತ್ತವೆ? ರಾಜನು ಶಯನಿಸುವಾಗ ಯಾವ ರೀತಿ ಸೇವಕಗಣರು ಚಾಮರ ಇತ್ಯಾದಿಗಳ ಮೂಲಕ ಅವನ ಸೇವೆ ಮಾಡುತ್ತಾರೋ, ಅದೇ ರೀತಿ ಪ್ರಳಯಕಾಲದಲ್ಲಿ ಶೇಷ ಶಯನದಲ್ಲಿ ಶಯನಿಸುವ ಸಮಯದಲ್ಲಿ ಶ್ರೀಭಗವಂತನ ಸೇವೆಯನ್ನು ಯಾರು ಮಾಡುತ್ತಾರೆ ಮತ್ತು ಅವನ ಜೊತೆಯಲ್ಲಿ ಯಾವ–ಯಾವ ಪದಾರ್ಥಗಳು ಸುಪ್ತವಾಗಿರುತ್ತದೆ?" ಕಾಶೀಖಂಢದಲ್ಲಿ ಒಳಗೊಂಡಿರುವ ಧ್ರುವ–ಚರಿತ್ರೆಯಲ್ಲೂ ಸಹ ಹೀಗೆ ಹೇಳಲಾಗಿದೆ– "ಮಹಾಪ್ರಳಯರೂಪ ಆಪತ್ಕಾಲದಲ್ಲು ಸಹ ತನ್ನ ಭಕ್ತರು ಭ್ರಷ್ಟರಾಗುವುದಿಲ್ಲ, ಆದ್ದರಿಂದ ಶ್ರೀಭಗವಂತನು ಅಖಿಲ ಲೋಕಗಳಲ್ಲಿ ಅಚ್ಯುತ, ಏಕ (ಅದ್ವಿತೀಯ), ಸರ್ವಗನು ಅಂದರೆ ಸರ್ವವ್ಯಾಪಕನು ಮತ್ತು ಅವ್ಯಯದ ರೂಪನೆಂದು ತಿಳಿಯಲಂತಹವನು."

'ಅಹಮೇವ' ಪದದ 'ಏವ'ಕಾರದ ಮೂಲಕ ಭಗವಾನ್ ಶ್ರೀಕೃಷ್ಣನಿಗೆ ಅತಿರಿಕ್ತವಾಗಿ ಅನ್ಯ ಕರ್ತನ ಅಸ್ತಿತ್ವ ಮತ್ತು ನಿತ್ಯ ನಾಮ, ರೂಪ, ಗುಣ, ಲೀಲೆ ಹಾಗೂ ಧಾಮ ಇತ್ಯಾದಿ ಅಂದರೆ ಚಿತ್–ವೈಚಿತ್ರ್ಯ–ವಿಹೀನ ತತ್ವವಸ್ತುವಿನ ಅಸ್ತಿತ್ವದ ಖಂಡನೆಯನ್ನು ಮಾಡಲಾಗಿದೆ. 'ಆಸಮೇವ' ಕಥನದ ಮೂಲಕ ಶ್ರೀಭಗವಂತನ ಅಸ್ತಿತ್ವದ ಅಸಂಭಾವನೆ ಅಂದರೆ ಅವನ ಅನಸ್ಥಿತ್ವದ (ಅಸ್ತಿತ್ವರಹಿತವನ್ನು) ಖಂಡನೆ ಮಾಡಿದ್ದಾರೆ. ಆದ್ದರಿಂದ 'ಯದ್ರೂಪಗುಣಕರ್ಮಕಃ' ಅರ್ಥಾತ್ 'ನಾನು ಯಾವ ರೂಪ, ಗುಣ ಮತ್ತು ಲೀಲೆಗಳಿಂದ ವಿಶಿಷ್ಟನಾಗಿದ್ದೇನೆ'– ಎಂಬುದನ್ನು ಕುರಿತು ಹೇಳಲಾಗಿದೆ. ಅಥವಾ 'ಆಸಮೇವ' ಪದದಲ್ಲಿ ಬ್ರಹ್ಮಾದಿ ಬಹೀರ್ಜನಗಳ ಜ್ಞಾನಗೋಚರವಾದ ಸೃಷ್ಟಿ ಮುಂತಾದ ಲಕ್ಷಣಯುಕ್ತ ಅನ್ಯ ಕ್ರಿಯೆಗಳು ಶ್ರೀಭವಂತನಿಗೆ ನಿಷಿದ್ಧವಾಗಿದೆ, ಆದರೆ ಇದರಿಂದಾಗಿ ಶ್ರೀಭಗವಂತನು ತನ್ನ ಅಂತರಂಗ ಲೀಲೆಗಳು ಸಹ ನಿಷೇಧಿಸಲಾಗಿದೆ– ಎಂದ್ದಲ್ಲ. ಯಾವ ರೀತಿ "ರಾಜನು ಈಗ ಯಾವುದೇ ಕಾರ್ಯವನ್ನು ಮಾಡುವುದಿಲ್ಲ"– ಎಂದು ಹೇಳುವುದರಲ್ಲಿ ಅವನ ರಾಜ್ಯ–ಸಂಬಂಧದ ಕಾರ್ಯಗಳನ್ನು ಮಾತ್ರ ನಿಷೇಧವೆಂದಾಗುತ್ತದೆ ಅಂದರೆ ಆ ರಾಜ್ಯಕಾರ್ಯಗಳಿಂದ ವಿರಕ್ತನಾಗಿದ್ದಾನೆ, ಅಷ್ಟು ಮಾತ್ರವೇ ಅರ್ಥ ಮಾಡಿಕೊಳ್ಳಬೇಕು. ಆದರೆ ಇದರಿಂದಾಗಿ ರಾಜನ ಶಯನ–ಭೋಜನ ಇತ್ಯಾದಿಗಳ ಅಥವಾ ಅವನ ಅಂತರಂಗೋಚಿತ ಕಾರ್ಯ–ಕಲಾಪಗಳ ನಿಷೇಧವಾಗಿದೆ ಎಂದು ಅರ್ಥ ಮಾಡಿಕೊಳ್ಳಲಾಗುವುದಿಲ್ಲ, ಶ್ರೀಭಗವಂತನ ವಿಚಾರದಲ್ಲೂ ಸಹ ಇದೇ ಪ್ರಕಾರವಾಗಿ ಅರ್ಥ ಮಾಡಿಕೊಳ್ಳಬೇಕು. ಅಥವಾ 'ಅಸ್' ಧಾತು 'ಗತಿ', 'ದೀಪ್ತಿ', 'ಗ್ರಹಣ' ಅರ್ಥಗಳಲ್ಲಿಯೂ ಸಹ ವ್ಯವಹೃತವಾಗುತ್ತದೆ. ಆದ್ದರಿಂದ 'ಆಸಮ್' ಶಬ್ದದ ಮೂಲಕ ಶ್ರೀಭಗವಂತನು ಹೀಗೆ ಹೇಳುತ್ತಿದ್ದಾರೆ– ಹೇ ಬ್ರಹ್ಮನ್! ನಿಮ್ಮ ಮೂಲಕ ಗೋಚರವಾದ ಈ ಜಡವೈಚಿತ್ರ್ಯದ ಪೂರ್ವದಲ್ಲು ನಾನೇ ನೆಲೆಸಿದ್ದೆ– ಇದರ ಮೂಲಕ ಶ್ರೀಭಗವಂತನ ನಿರಾಕಾರ ಸ್ವರೂಪದವನ್ನೇ ವಿಶೇಷ ಭಾವದಿಂದ ನಿಷೇಧ ಮಾಡಲಾಗಿದೆ.

ಪ್ರಸ್ತುತ ಶ್ಲೋಕದ ಮೂಲಕ ಸಾಕಾರ–ನಿರಾಕಾರ–ವಿಷ್ಣುಲಕ್ಷಣದ ನಿರ್ದೇಶಕಾರಣವಾದ 'ಮುಕ್ತಫಲ' ಟಿಪ್ಪಣಿಯಲ್ಲಿಯೂ ಸಹ ಹೀಗೆ ವಿವರಿಸಲಾಗಿದೆ– "ಶ್ರೀಭಗವಂತನ ಆಕಾರ ಅರ್ಥಾತ್ ರೂಪ–ಗುಣಾದಿಗಳ ತಿರಸ್ಕಾರವಾಗದಿರುವ ಕಾರಣ ಸಾಕಾರ ರೂಪದಿಂದ ಅಂದರೆ ರೂಪ–ಗುಣಾದಿಗಳಿಂದಲು ಸಹ ಅವನು ಅವ್ಯಾಪ್ತನಲ್ಲ, ಅಂದರೆ ಅವನು ವಿಭಾಗಿತ ಅಥವಾ ಸೀಮಿತನಲ್ಲ.' ಇತರ ಶೃತಿಗಳಲ್ಲು ಸಹ ಹೀಗೆ ವರ್ಣನೆಯಿದೆ– "ಈ ವಿಶ್ವಸೃಷ್ಟಿಯ ಮೊದಲು ಪುರುಷರೂಪದಲ್ಲಿ ಕೇವಲ ಆತ್ಮ ಒಂದೇ ನೆಲೆಸಿತ್ತು". ಇದರ ಮೂಲಕ ಪ್ರಕೃತಿಗೆ ಪ್ರತಿಯಾಗಿ ಈಕ್ಷಣ–ಕ್ರಿಯೆಗಳಿಗು ಮೊದಲು ನೆಲೆಸಿರುವ ಕಾರಣ ಶ್ರೀಭಗವಂತನ ಪ್ರಕೃತಿಯಲ್ಲಿ ವಶನಾಗಲು ಯೋಗ್ಯನಾದ ಪುರುಷನಿಗಿಂತ (ಜೀವಿಗಿಂತ) ಶ್ರೇಷ್ಟವಾದದ್ದು, ಆದುದರಿಂದ ಇಲ್ಲಿ ಭಗವತ್–ಜ್ಞಾನವನ್ನೇ ವಿವರಿಸಲಾಗಿದೆ.

ನಿರ್ವಿಶೇಷ ಬ್ರಹ್ಮನೇ ವಿಶ್ವ ಸೃಷ್ಟಿಯ ಪೂರ್ವದಲ್ಲು ನೆಲೆಸಿದ್ದ ಎಂದು ಶೃತಿಯಲ್ಲಿ ಅಲ್ಲಲ್ಲಿ ಈರೀತಿ ಯಾತಕ್ಕಾಗಿ ಕಾಣಲ್ಪಡುತ್ತದೆ? ಎಂದು ಹೀಗೆ ಪ್ರಶ್ನಿಸುವುದಾದರೆ, ಇದಕ್ಕೆ ಉತ್ತರದಲ್ಲಿ ಹೇಳುತ್ತಾರೆ– 'ಸತ್' ಅರ್ಥಾತ್ ಕಾರ್ಯ, 'ಅಸತ್' ಅರ್ಥಾತ್ ಕಾರಣ, ಈ ಎರಡರಗಿಂತಲೂ ಅತೀತವಾದ ಯಾವ ಬ್ರಹ್ಮನ್ ಇರುವುದೋ, ಅದೂ ಸಹ ನನ್ನಿಂದ ಪೃಥಕ ಅನ್ಯ ವಸ್ತುವಲ್ಲ. ಅಥವಾ ಶ್ರೀಭಗವಂತನ ಸ್ವರೂಪಭೂತವಾದ ಚಿತ್–ವಿಲಾಸವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಅಸಮರ್ಥರಾದ ಕೆಲವು ನಿರ್ವಿಶೇಷಾಧಿಕಾರಿ ಶಾಸ್ತ್ರಗಳಲ್ಲಿ ನಾನೇ ನಿರ್ವಿಶೇಷ ರೂಪದಲ್ಲಿ ಪ್ರತಿಭಿಂಬಿತನಾಗುತ್ತೇನೆ. ಅಥವಾ ಆ (ಪ್ರಳಯದ) ಸಮಯದಲ್ಲಿ ವಿಶ್ವ–ಪ್ರಪಂಚದಲ್ಲಿ ವೈಚಿತ್ರ್ಯ–ಹೀನತೆಯ ಕಾರಣ ನಿರ್ವಿಶೇಷ ಅಚಿತ್–ಮಿಶ್ರಾತೀತವಾಗಿ ಚಿನ್ಮಯ ರೂಪದಲ್ಲಿ ಹಾಗೂ ವೈಕುಂಠದಲ್ಲಿ ಚಿತ್–ವಿಲಾಸಮಯ ಸವಿಶೇಷ ಭಗವತ್–ರೂಪದಲ್ಲಿ ನಾನು ಸ್ಥಿತನಾಗಿದ್ದೆ– ಶಾಸ್ತ್ರದಲ್ಲಿ ಇದೇ ಎರಡು ವ್ಯವಸ್ಥೆಗಳಿವೆ (ಅಂದರೆ ಭಗವತ್–ತತ್ವದಲ್ಲಿ ಎರಡು ಸ್ವರೂಪವುಂಟು– ಭಗವಾನ್ ಮತ್ತು ಬ್ರಹ್ಮ). ಇದರ ಮೂಲಕ "ನಾನು ಬ್ರಹ್ಮನ ಪ್ರತಿಷ್ಠೆಯಾಗಿದ್ದೇನೆ"– ಶ್ರೀ ಗೀತೆಯಲ್ಲಿ (೧೪/೨೭) ವ್ಯಕ್ತವಾದ ಇದೇ ಭಗವತ್–ಜ್ಞಾನವನ್ನೇ ಪ್ರತಿಪಾದಿಸಲಾಗಿದೆ ಮತ್ತು ಇದೇ ಕಾರಣದಿಂದ ಭಗವತ್–ಜ್ಞಾನದ ಪರಮ ಗೂಢತ್ವವನ್ನು ವಿವರಿಸಲಾಗಿದೆ. ಹೇ ಭಗವನ್! ಸೃಷ್ಟಿಯ ನಂತರ ನಿಮ್ಮನ್ನು ಪಡೆಯಲಾಗುವುದಿಲ್ಲವೆ?– ಎಂದು ಹೀಗೆ ನೀನು (ಬ್ರಹ್ಮ) ಕೇಳುವುದಾದರೆ ಇದಕ್ಕೆ ಉತ್ತರದಲ್ಲಿ ಶ್ರೀಭವಂತನು ಹೇಳುತ್ತಾನೆ– ಸೃಷ್ಟಿಯ ನಂತರವೂ ಸಹ ನಾನೇ ಎರಡು ರೂಪಗಳಲ್ಲಿ ಸ್ಥಿತನಾಗಿರುತ್ತೇನೆ, ಅಂದರೆ ವೈಕುಂಠದಲ್ಲಿ ಷಡ್ಯೈಶ್ವರ್ಯಪೂರ್ಣ ಸಚ್ಚಿದಾನಂದ–ವಿಗ್ರಹದ ರೂಪದಲ್ಲಿ ಮತ್ತು ಪ್ರಾಪಂಚಿಕ ಬ್ರಹ್ಮಾಂಢದಲ್ಲಿ ಅಂತರ್ಯಾಮಿಯ ರೂಪದಲ್ಲಿ. ಇದರ ಮೂಲಕ "ವಿಶ್ವದ ಸೃಷ್ಟಿ–ಸ್ಥಿತಿ–ಪ್ರಳಯದ ಕಾರಣ ಮತ್ತು ಅಕಾರಣ ಶ್ರೀಭಗವಂತನೇ ಆಗಿದ್ದಾನೆ' ಇತ್ಯಾದಿ ಪ್ರಕಾರದಿಂದ ಶ್ರೀಮದ್ಭಾಗವತದಲ್ಲಿ (೧೧/೩/೩೫) ಪ್ರತಿಪಾದಿಸಲಾದ ಭಗವತ್–ಜ್ಞಾನವನ್ನೇ ಉಪದೇಶಿಸಲಾಗಿದೆ.

ಇಲ್ಲಿ ಅನರ್ಥವಾಗಬಹುದು, ಅದೇನೆಂದರೆ ಸರ್ವತ್ರ ಯಾವ ಮಡಿಕೆ–ಕುಡಿಕೆ, ವಸ್ತ್ರ ಇತ್ಯಾದಿ ರೂಪವು ಕಾಣಲ್ಪಡುತ್ತದೆ, ಅಂದರೆ ಆ ಸಮಸ್ತ ರೂಪವು ನಿಮ್ಮದಲ್ಲವೆಂದರೆ, ಆಗ ನಿಮ್ಮ ಅಪೂರ್ಣತ್ವದ (ಖಂಡ–ಭಾವ) ಪ್ರಸಂಗ ಉಪಸ್ಥಿತವಾಗುತ್ತದೆಯೆ? ಎಂಬ ಈ ರೀತಿಯಾದ ಸಂಶಯಕ್ಕೆ ಉತ್ತರದಲ್ಲಿ ಶ್ರೀಭಗವಂತನು ಹೇಳುತ್ತಾನೆ– ಇದು ಯಾವ ವಿಶ್ವವಿದೆಯೋ, ಅದೂ ಸಹ ನಾನೇ, ಅಂದರೆ ಇದು ನನ್ನಿಂದ ಅತಿರಿಕ್ತ ಅನ್ಯ ವಸ್ತುವಲ್ಲ (ಪೃಥಕ ಶಕ್ತಿಯಲ್ಲ). ವಾಸ್ತವಿಕವಾಗಿ ಅದು ಭಗವದಾತ್ಮವೆ (ಈಶಾವಾಸ್ಯ). ಇದರ ಮೂಲಕ "ಹೇ ಕುಮಾರ! ಆ ಭಗವಾನ್ ವಿಶ್ವಭವನಾದ ಶ್ರೀವಿಷ್ಣುವಿನ ಕಥೆಯನ್ನೇ ನಿನಗೆ ಹೇಳಿರುವುದು." ಇತ್ಯಾದಿ (ಶ್ರೀಮದ್ಭಾ ೨/೭/೫) ದಲ್ಲಿ ಹೇಳಲಾದ ಭಗವತ್–ಜ್ಞಾನವನ್ನೇ ಉಪದೇಶ ನೀಡಿದ್ದಾರೆ.

ಈ ಪ್ರಕಾರ "ಪ್ರಳಯದ ನಂತರ ಯಾವ ಅವಶೇಷವಿರತ್ತದೆ, ಅದೂ ಸಹ ನಾನೇ- ಈ ಅರ್ಥದ ಮೂಲಕ ಏಕಮಾತ್ರ ನೀವೇ 'ಶೇಷ' ನಾಮದಿಂದ ಅವಶಿಷ್ಟರಾಗಿರುತ್ತೀರಿ." ಮುಂತಾದ ಶ್ಲೋಕದಲ್ಲಿ (ಶ್ರೀಮದ್ಭಾ ೩/೫/೨೩) ವಿವರಿಸಲಾದ ಭಗವತ್-ಜ್ಞಾನದ ಉಪದೇಶವನ್ನು ನೀಡಲಾಗಿದೆ. ನೀವು ಮೊದಲು ಅನುಗ್ರಹಪೂರ್ವಕವಾಗಿ ನಿಮ್ಮ ಪ್ರಮಾಣದ ಮಾತನ್ನು ಬ್ರಹ್ಮನ ಸಮೀಪ ಪ್ರಕಾಶಿತಗೊಳಿಸುವ ಪ್ರತಿಜ್ಞೆ ಮಾಡಿದ್ದೀರಿ, ಅದರ ಸರ್ವದೇಶತ್ವ ಮತ್ತು ಸರ್ವಕಾಲತ್ವ ಅಪ್ರಮೇಯತ್ವವನ್ನು (ಅಸೀಮತ್ವವನ್ನು) ತಿಳಿಸುವ ಭಗವತ್-ಪ್ರಮಾಣ. 'ಸತ್' ಮತ್ತು 'ಅಸತ್ತನ್ನೂ' ಮೀರಿದ (ಅತೀತ) ಯಾವುದೇ ವಸ್ತುವೂ ಸಹ ನನ್ನಿಂದ ಪೃತಕವಲ್ಲ, ಈ ವರ್ಣನೆಯ ಮೂಲಕ (ಶ್ರೀಗೀತ -೧೪/೨೭) "ನಾನು ಬ್ರಹ್ಮನಿಗು ಸಹ ಪ್ರತಿಷ್ಠನು"- ಇದನ್ನು ತಿಳಿಸಿಕೊಟ್ಟು ಇದರ ಮೂಲಕ ಭಗವತ್-ಲಕ್ಷಣವನ್ನು ವಿವರಿಸಲಾಗಿದೆ; ಎಲ್ಲ ಅವತಾರಗಳಲ್ಲಿ ಮೂಲ ಅಂಶವು ಶ್ರೀಭವಂತನ ಆಕಾರದ ನಿರ್ದೇಶನದ ಮೂಲಕ ಜಡದಿಂದ ವಿಲಕ್ಷಣವಾದ ಅವನ ಅನಂತ ರೂಪಗಳ ವಿವರಣೆಯನ್ನು ತಿಳಿಸಿಕೊಟ್ಟು ಭಗವಂತನ ರೂಪದ ವರ್ಣನೆಯನ್ನು ಮಾಡಲಾಗಿದೆ; ಭಗವಂತನು ಎಲ್ಲದರ ಆಶ್ರಯನಾಗಿದ್ದಾನೆ- ಇದರ ನಿರ್ದೇಶನದ ಮೂಲಕ ಜಡದಿಂದ ವಿಲಕ್ಷಣವಾದ ಅವನ ಅನಂತ ಗುಣಗಳನ್ನು ವಿವರಿಸಲಾಗಿದೆ; ಭಗವಂತನ ಗುಣಗಳು ಮತ್ತು ವಿಶ್ವದ ಸೃಷ್ಟಿ, ಸ್ಥಿತಿ ಮತ್ತು ಪ್ರಳಯದ ವರ್ಣನೆಯಿಂದ ಉಪಲಕ್ಷಿತ ವಿವಿಧ ಲೀಲೆಗಳ ಆಶ್ರಯತ್ವ ವರ್ಣಿಸುವ ಅವನ ಅಪ್ರಾಕೃತ ಅನಂತ ಲೀಲೆಗಳ ವರ್ಣನೆಯ ಮೂಲಕ ಶ್ರೀಭಗವಂತನ ಲೀಲೆಗಳನ್ನೇ ಉಪದೇಶ ನೀಡಲಾಗಿದೆ ॥೩೨॥.

ಶ್ರೀಶ್ರೀಧರ-ಸ್ವಾಮೀಪಾದರು

ಏತದೇವ ಸಮ್ಯಗುಪದಿಶನ್ ಯಾವಾನಿತ್ಯಸ್ಯರ್ಥಂ ಸ್ಫುಟಯತಿ- ಅಹಮೇವಾಗ್ರೆ ಸೃಷ್ಟೇಃ ಪೂರ್ವಂ ಆಸಂ ಸ್ಥಿತಃ; ನಾನ್ಯತ್ ಕಿಂಚಿತ್ ಯತ್ ಸತ್ ಸ್ಥುಲಮ್, ಅಸತ್ ಸೂಕ್ಷ್ಮಮ್, ಪರಮ್ ತಯೋಃ ಕಾರಣಮ್ ಪ್ರಧಾನಂ । ತಸ್ಯಾಪ್ಯನ್ತರ್ಮುಖತಯಾ ತದಾ ಮಯ್ಯೇವ ಲೀನತ್ವಾತ್ । ಅಹಂಚ ತದಾ ಆಸಮೇವ ಕೇವಲಂ, ನ ಚಾನ್ಯದಕರವಮ್; ಪಶ್ಚಾತ್ ಸೃಷ್ಟೇರನಂತರಮಪಿ ಅಹಮೇವಾಸ್ಮಿ; ಯದೇತದ್ ವಿಶ್ವಂ, ತದಪ್ಯಹಮೇವಾಸ್ಮಿ; ಪ್ರಲಯೇ ಯೋಽವಶಿಷ್ಯೇತ, ಸೋಽಪ್ಯಹಮೇವ । ಅನೇನ ಚಾನಾದ್ಯನನ್ತತ್ವಾತ್ ಅದ್ವಿತೀಯತ್ವಾಚ್ಚ ಪರಿಪೂರ್ಣೋಽಹಮಿತ್ಯುಕ್ತಂ ಭವತಿ ॥೩೨॥

ಭಾವಾನುವಾದ- ಈ ವಿಶಯದ (ಅಂದರೆ ಹಿಂದಿನ ಶ್ಲೋಕದಲ್ಲಿ ಹೇಳಲಾದ ಶ್ರೀಭಗವಂತನ ರೂಪ-ಗುಣ ಇತ್ಯಾದಿಗಳ) ಸಂಯಮ ರೂಪದಲ್ಲಿ ಉಪದೇಶ ಮಾಡಲೆಂದು ಈಗ ಶ್ರೀಭಗವಂತನು ಪೂರ್ವ ಶ್ಲೋಕದ ಅರ್ಥವನ್ನು ಸ್ಪಷ್ಟಪಡಿಸುತ್ತಿದ್ದಾರೆ- ನಾನು ವಿಶ್ವ ಸೃಷ್ಟಿಯ ಪೂರ್ವದಲ್ಲು ನೆಲೆಸಿದ್ದೆ, ನನಗೆ ಅತಿರಿಕ್ತವಾಗಿ 'ಸತ್' ಅಂದರೆ ಸ್ಥೂಲ ಅಥವಾ ಕಾರ್ಯ, 'ಅಸತ್' ಅಂದರೆ ಸೂಕ್ಷ್ಮ ಅಥವಾ ಕಾರಣ ಮತ್ತು 'ಪರ' ಅಂದರೆ ಸ್ಥೂಲ-ಸೂಕ್ಷ್ಮದ ಕಾರಣ ಪ್ರಧಾನ- ಈ

ಪ್ರಕಾರದ ಬೇರೆ ಯಾವುದು ಸಹ ಇರಲಿಲ್ಲ, ಏಕೆಂದರೆ ಅಂತರ್ಮುಖತಾವಶತಃ ಈ ಎಲ್ಲವು ನನ್ನಲ್ಲಿ ಲೀನವಾಗಿತ್ತು. ಆ ಸಮಯದಲ್ಲಿ ನಾನು ಸಹ ಅಂತರಂಗ ಲೀಲಾಮಯನಾಗಿದ್ದೆ, ಬಹಿರಂಗ ಕ್ರಿಯೆಗಳನ್ನು ಯಾವುದು ಸಹ ಮಾಡುತ್ತಿರಲಿಲ್ಲ. ಅನಂತ ವಿಶ್ವಸೃಷ್ಟಿಯ ನಂತರವು ಸಹ ನಾನೇ ಇದ್ದೇನೆ. ಏನೀ ವಿಶ್ವವಿದೆ, ಅದು ಸಹ ನಾನೇ ಆಗಿದ್ದೇನೆ– ಇದು ನನ್ನಿಂದ ಪೃಥಕ ಶಕ್ತಿಯಲ್ಲ. ಪ್ರಳಯಕಾಲದಲ್ಲಿ ಯಾವುದು ಶೇಷ ರೂಪದಲ್ಲಿ ನೆಲೆಸಿರುತ್ತದೋ, ಅದು ಸಹ ನಾನೇ, ಅನ್ಯ ಯಾರೂ ಸಹ ಇರಲಿಲ್ಲ– ಇದರ ಮೂಲಕ ನನ್ನ ಅನಾದಿ, ಅನಂತ ಮತ್ತು ಅದ್ವಿತೀಯ ರೂಪದಲ್ಲಿ ಪರಿಪೂರ್ಣವಾಗಿ ವಿವರಿಸಲ್ಪಟ್ಟಿದೆ. ॥೩೨॥

ಶ್ರೀಮಧ್ವಾಚಾರ್ಯಪಾದರು

ಪರಂ ಸ್ವತಂತ್ರಂ ನ ।

'ವಿಷ್ಣೋರಧೀನಂ ಪ್ರಾಕ್ ಸೃಷ್ಟೇಸ್ತಥೈವ ಚ ಲಯಾದನು ।
ಅಸ್ಯ ಸತ್ವಪ್ರವೃತ್ಯಾದಿ ವಿಶೇಷೇಣಾಧಿಗಮ್ಯತೇ ॥

ಸ್ವಾತಂತ್ರ್ಯಂ ಸ್ಥಿತಿಕಾಲೇ ತು ಕಥಂಚಿದ್‌ಬುದ್ಧಿ–ಮೋಹತಃ ।
ಪ್ರತೀಯಮಾನಮಪಿ ತು ತಸ್ಮಾನ್ನೈವೇತಿ ಗಮ್ಯತೇ ॥

ಜನಿಷ್ಯೇಽಹಂ ಲಯಿಷ್ಯೇಽಹಮಿತಿ ನ ಹ್ಯಭಿಸಂಧಿತಃ ।
ಅತೋ ಜೀವನಮಪ್ಯೇತದ್ಭವೇದೀಶಾಭಿಸಂಹಿತಮ್ ॥

ಅತಃ ಸ್ವರೂಪಭೇದೇಽಪಿ ಹ್ಯಾತ್ಮೈವೇದಮಿತಿ ಶ್ರುತಿಃ ।
ವತತ್ಯಸ್ಯೇಶತಂತ್ರತ್ವಾದ್‌ಯದಶಕ್ತಸ್ತ್ವಸನ್ನಿತಿ ॥

ವಿದ್ಯಂತೇ ಹಿ ತದಾ ಜೀವಾಃ ಕಾಲಕರ್ಮಾದಿಕಂ ತಥಾ ।
ಕ್ವಾನ್ಯಥಾ ಹಿ ಪುನಃ ಸೃಷ್ಟಿಃ ಪೂರ್ವಕರ್ಮಾನುಸಾರಿಣೀ ॥'

ಇತಿ ಬ್ರಹ್ಮತರ್ಕೇ ।

ತ್ವಮೇತಚ್ಚ ಪರಂ ನ ಭವತಿ ಸ್ವತಂತ್ರಂ ನ ॥೩೨॥

ಭಾವಾನುವಾದ– 'ಪರಮ್' ಅಂದರೆ ಅಸ್ವತಂತ್ರವಾದದ್ದು ಎಂದರ್ಥ. ಬ್ರಹ್ಮತರ್ಕದಲ್ಲಿ ಹೀಗೆ ಹೇಳಲಾಗಿ– "ಯಾವ ರೀತಿ ಸೃಷ್ಟಿಯ ಪೂರ್ವದಲ್ಲಿ ವಿಶ್ವದ ಉತ್ಪತ್ತಿ ಮತ್ತು ಸ್ಥಿತಿ ಇತ್ಯಾದಿ ಕಾರ್ಯಗಳು ವಿಷ್ಣುವಿನ ಅಧೀನವಾಗಿರುವುದೋ, ಅದೇ ರೀತಿ ಪ್ರಳಯದ ನಂತರವೂ ಸಹ ಈ ವಿಶ್ವದ ಸ್ಥಿತಿ ಮತ್ತು ಪ್ರವೃತ್ತಿ (ಉತ್ಪತ್ತಿ) ಮುಂತಾದ ಕರ್ಯಗಳು ವಿಷ್ಣುವಿನದ್ದೇ ಅಧೀನವಾಗಿರುತ್ತದೆ, ಇದನ್ನು ವಿಶೇಷವಾಗಿ ಅರ್ಥ ಮಾಡಿಕೊಳ್ಳಲಾಗುತ್ತದೆ. ಯಾವುದೇ ಪ್ರಕಾರದ ಬುದ್ಧಿಯ ಮೂಢತ್ವದಲ್ಲಿ ಜಗತ್ತಿನ ಸ್ಥಿತಿಕಾಲಗಳು ವಿಷ್ಣುವಿನಿಂದ ಸ್ವತಂತ್ರವೆಂದು ಗೋಚರವಾದರೂ ಸಹ ಇದು ಅವನಿಂದ

ಸ್ವತಂತ್ರ ಅಥವಾ ಪೃಥಕವಾದದ್ದಲ್ಲ"– ಇದನ್ನು ಹೀಗೆ ಅರ್ಥಮಾಡಿಕೊಳ್ಳಲಾಗುತ್ತದೆ. "ನನ್ನ ಜನ್ಮವಾಗುತ್ತದೆ, ನನ್ನ ವಿನಾಶ (ಮರಣ) ವಾಗುತ್ತದೆ"– ಇದು ಸಂಪೂರ್ಣ ರೂಪದಲ್ಲಿ ಅದ್ವಯಜ್ಞಾನ–ಪ್ರತೀತಯುಕ್ತ ಕಥನವಲ್ಲ. ಆದ್ದರಿಂದ ಈ ಜೀವಿಯು ಸಹ ಈಶ್ವರನಿಂದ ಅಭಿನ್ನವಾಗಿದೆ, ಆದ್ದರಿಂದ ಸ್ವರೂಪ ಭೇದದಲ್ಲಿಯೂ ಸಹ ಈ ಆತ್ಮಕ್ಕೆ ಅತಿರಿಕ್ತವಾಗಿ ಅನ್ಯ ವಸ್ತು ಇಲ್ಲ. ಈ ಜಗತ್ತಿನಲ್ಲಿ ಈಶ್ವರಾಧೀನತೆಯ ಕಾರಣ ಇದು ದುರ್ಬಲವಾಗಿದೆ ಮತ್ತು ನಿತ್ಯಸತ್ಯವಲ್ಲ– ಎಂದು ಶ್ರುತಿಗಳು ಹೇಳುತ್ತದೆ. ಜೀವಿ ಮತ್ತು ಕಾಲ–ಕರ್ಮಾದಿಗಳು ಸಹ ಅದೇ ಪ್ರಕಾರದಲ್ಲಿ ಸ್ಥಿತವಾಗಿದೆ (ಅಂದರೆ ಭಗವಂತನಿಗೆ ಸಮಾನವಾಗಿ ನಿತ್ಯವಾಗಿರುತ್ತದೆ), ಅನ್ಯಥಾ ಯಾವ ರೀತಿ ಪುನಃ ಪೂರ್ವಕರ್ಮದ ಅನುಸಾರವಾಗಿ ಸೃಷ್ಟಿಯಾಗುತ್ತದೆಯೆ? ಅದ್ದರಿಂದ ಹೇ ಬ್ರಹ್ಮ! ನೀನು ಸ್ವತಂತ್ರನಲ್ಲ ಹಾಗೂ ಈ ಪ್ರಾಪಂಚಿಕ ವಿಶ್ವವೂ ಸಹ ಸ್ವತಂತ್ರವಲ್ಲ ॥೩೨॥

ಶ್ರೀವಿಜಯಧ್ವಜ ತೀರ್ಥಪಾದರು

ಜ್ಞಾನೋಪದೇಶ–ಪ್ರಕಾರಮಾಹ–ಅಹಮಿತಿ । ಅಗ್ರೇ ಸೃಷ್ಟೇಃಪ್ರಾಕ್ ಅಹಮೇವಾಸಂ; ಚ ಶಬ್ದಾತ್ ಸದಸದಾಸೀತ್, ಕಾಲ–ಪ್ರಕೃತ್ಯಾದಿಕಂ ಅಭೂತ್, ತಥಾಪಿ ಪ್ರಲಯೇ ಯತ್ಕಾಲ–ಕರ್ಮಾದಿಕಮನ್ಯತ್ ಹರೇರ್ಭಿನ್ನಮಭೂತ್, ತತ್ಪರಮ್ ಸ್ವತಂತ್ರಮ್ ನ ಆಸಂ, ಕಿಂಚ, ಮಾಯಾವೃತತ್ವೇನ ಮದಧೀನಮೇವಾಭೂತ್ । ಪಶ್ಚಾತ್ ಸೃಷ್ಟ್ಯನನ್ತರಮ್ ಸ್ಥಿತಿಕಾಲೇ ತ್ವಮಹಮ್–ಏತಜ್ಜಗಚ್ಚ ಆಸೀತ್, ಆಸಮ್, ಆಸೀತ್, ಫಲಿತಮಾಹ– ಯಃ ಇತಿ । ಸ್ಥಿತಿಕಾಲೇ ಭೋಕ್ತಾಽಹಂ–ಕರ್ತಾಽಹಂ ಇತಿ ಸ್ವಾತಂತ್ರ್ಯ ಪ್ರತೀತೇಃ ಸೃಷ್ಟೇಃಪ್ರಾಕ್ ಲಯಾನನ್ತರಮ್ ಚ ಅಸ್ಯ ಜಗತಃ ಸ್ವಾತಂತ್ರ್ಯಮ್ ಸ್ಯಾದಿತಿ ಚೇತ್? ನ, ತತ್ಪ್ರತೀತೇಃ ಬುದ್ಧಿ ಮೋಹ–ಮೂಲತ್ವಾತ್ । ತದುಕ್ತಂ– ವಿಷ್ಣೋರಧೀನೆ ಪ್ರಾಕ್‌ಸೃಷ್ಟೇಸ್ತಥೈವಪ್ರಲಯಾದನು ಅಸ್ಯಸತ್ವಪ್ರವೃತ್ತ್ಯಾದಿ ವಿಶೇಷೇಣ ಅಧಿಗಮ್ಯತೆ, ಸ್ವಾತಂತ್ರ್ಯಮ್ ಸ್ಥಿತಿಕಾಲೇ ತು ಕಥಂಚಿತ್ ಬುದ್ಧಿಮೋಹತಃ ಪ್ರತೀಯಮಾನಮಪಿ ತು ತಸ್ಮಾನ್ನೈವೇತಿ ಗಮ್ಯತಾಮಿತ್ಯಾದಿ । ಅನೇನ, ಕಾಲತ್ರಯೇಽಪಿ ಸ್ವತಂತ್ರೋಽಹಮ್; ತ್ವದಾದಿಕಮ್ ಸರ್ವಂ ಯದಧೀನಮೇವೇತ್ಯುಕ್ತಮ್ ಭವತಿ ॥೩೨॥

ಭಾವಾನುವಾದ– ಈ ಶ್ಲೋಕದಲ್ಲಿ ಶ್ರೀಭಗವಂತನು ಜ್ಞಾನದ ಉಪದೇಶದ ಪ್ರಕಾರ ತಿಳಿಸುತ್ತಿದ್ದಾನೆ. ಸೃಷ್ಟಿಯ ಪೂರ್ವದಲ್ಲಿ ನಾನೇ ನೆಲಸಿದ್ದೆ. 'ಚ' ಶಬ್ದದಿಂದ ಸತ್–ಅಸತ್ ಹಾಗೂ ಕಾಲ ಮತ್ತು ಪ್ರಕೃತಿ ಮುಂತಾದವುಗಳನ್ನೂ ಸಹ ತಿಳಿಯಲಾಗುತ್ತದೆ. ಆದರೂ ಪ್ರಳಯದಲ್ಲಿ ಕಾಲ–ಕರ್ಮಾದಿಗಳು ಯಾವುದೇಲ್ಲ ಹರಿಯಿಂದ ಭಿನ್ನವಾಗಿದ್ದಿತೋ, ಅದೇಲ್ಲವು ನನ್ನಿಂದ (ಶ್ರೀಹರಿಯಿಂದ) ಸ್ವತಂತ್ರವಾಗಿರಲಿಲ್ಲ ಮತ್ತು ಮಾಯೆಯ ಮೂಲಕ ಆವೃತ್ತವಾದ ಕಾರಣ ಅವೇಲ್ಲವು ನನ್ನ ಅಧೀನ ತತ್ವರೂಪದಲ್ಲಿ ನೆಲಸಿತ್ತು. ಸೃಷ್ಟಿಯ ನಂತರ ಸ್ಥಿತಿ–ಕಾಲದಲ್ಲಿ ಅಸ್ತಿತ್ವದಲ್ಲಿತ್ತು ಕೇವಲ ನೀನು, ನಾನು ಮತ್ತು ಈ ಜಗತ್ತು. ಸ್ಥಿತಿ ಕಾಲದಲ್ಲಿ "ನಾನೇ ಭೋಕ್ತಾರನು', ನಾನೇ ಕರ್ತಾರನು" ಎಂಬ ಹೀಗೆ ಅನರ್ಥವಾಗಬಹುದು– ಇಂತಹ ಸ್ವಾತಂತ್ರದ ಕಲ್ಪನೆಯಿಂದಾಗಿ ಸೃಷ್ಟಿಗೆ ಮೊದಲು ಮತ್ತು ಪ್ರಳಯದ ನಂತರ ಈ ಜಗತ್ತಿಗೆ ಸ್ವಾತಂತ್ರವಿರುದೇ? ಆದರೆ ಈ

ರೀತಿಯಲ್ಲ, ಏಕೆಂದರೆ ಈ ರೀತಿಯಾದ ಕಲ್ಪನೆಯ ಬುದ್ಧಿಯು ಮೋಹವಶವು. ಸೃಷ್ಟಿಗೆ ಮೊದಲು ಮತ್ತು ಪ್ರಳಯದ ನಂತರವೂ ಸಹ ಈ ಜಗತ್ತಿನ ಸೃಷ್ಟಿ-ಸ್ಥಿತಿ ಇತ್ಯಾದಿಗಳು ಶ್ರೀವಿಷ್ಣುವಿನ ಅಧೀನದಲ್ಲಿರುತ್ತದೆ- ಎಂಬುದನ್ನು ವಿಶೇಷ ಭಾವದಿಂದ ಅರ್ಥಮಾಡಿಕೊಳ್ಳಲಾಗುತ್ತದೆ, ಏಕೆಂದರೆ ಸ್ಥಿತಿಕಾಲದಲ್ಲಿ ಯಾವುದೇ ಪ್ರಕಾರದಿಂದ ಬುದ್ಧಿ-ಮೋಹದ ಕಾರಣ ಅವನಿಂದ ಸ್ವತಂತ್ರ ಎಂಬ ಕಲ್ಪನೆಯುಂಟಾದರೂ ಸಹ ವಾಸ್ತವದಲ್ಲಿ ಆ ರೀತಿಯಲ್ಲ- ಎಂಬುದನ್ನು ತಿಳಿಯಬೇಕು. ಇದರ ಮೂಲಕ ತ್ರಿಕಾಲದಲ್ಲೂ ಸಹ ನಾನು (ಭಗವಂತ) ಸ್ವತಂತ್ರನಾಗಿದ್ದೇನೆ. ನೀನು ಮತ್ತು ಅನ್ಯ ಯಾವುದೆಲ್ಲವು ನೆಲಸಿರುವುದೋ, ಅವೆಲ್ಲವು ನನ್ನ ಅಧೀನ ತತ್ವವಾಗಿರುತ್ತದೆ.॥೩೨॥

ಶ್ರೀವೀರರಾಘವಾಚಾರ್ಯಪಾದರು

'ಯಾವಾನ್' (ಶ್ರೀಮದ್ಭಾ ೨/೯/೩೧) ಇತ್ಯಸ್ಯಾರ್ಥಮೇವ ಸ್ಫುಟಯನ್ ಪ್ರಧಾನ್ಯತಯಾ-ಜ್ಞಾತವ್ಯ ಪರಶಬ್ದೋಕ್ತಂ ಭಗವತ್ಸ್ವರೂಪಮಾಹ-ಅಹಮಿತಿ । ಸದಸತ್ಪರಮ್ ಚೇತನಾಚೇತನ-ವಿಲಕ್ಷಣಂ ಯದ್ವಸ್ತು, ತದಹಮೇವಾಸಮ್ ಅಭವಮ್ । ಅನ್ಯತ್ರಚಿದಚಿದ್ವಿಲಕ್ಷಣಂ ನ ಭವತಿ, ಅನ್ಯತ್ಸರ್ವಂ ಚಿದಚಿದಂತರ್ಗತಂ, ಅಹಮೇವ ತದ್ವಿಲಕ್ಷಣಮಿತ್ಯರ್ಥಃ । ಅಗ್ರೇ ಸೃಷ್ಟೇಃ ಪ್ರಾಕ್‌ಯದ್ವಸ್ತು, ಪಶ್ಚಾತ್ಸೃಷ್ಟಿಕಾಲೆ ಜಾತಸ್ತ್ವಮೇತತ್ಕಾರ್ಯಜಾತಂ ಚ, ತದಪ್ಯಹಂ ಕಾರಣಚಿದಚಿದ್ರೂಪಃ ಕಾರ್ಯಚಿದಚಿದ್ರೂಪಶ್ಚಾಹಮಿತ್ಯರ್ಥಃ; ಪುನಃ ಸಂಹಾರಕಾಲೆ ಯೋಽವಸಿಷ್ಯೇತ ಸಂಹಿತೆ, ಸೋಽಪ್ಯಹಮೇವೇತ್ಯರ್ಥಃ । ಪ್ರಕೃತಿಪುರುಷವಿಲಕ್ಷಣಃ ತತ್ಛರೀರಕಶ್ಚಾಹಮೇಕ ಏವ, ಯ ಏವ ಸರ್ವಜ್ಞಃ ಸರ್ವಶಕ್ತಿಃ ಸರ್ವೇಶ್ವರಃ । ಸೃಷ್ಟೇಃ ಪ್ರಾಗ್ವಿಭಕ್ತ ನಾಮ-ರೂಪ ಸೂಕ್ಷ್ಮ-ಪ್ರಕೃತಿ-ಪುರುಷ ಶರೀರಕಃ, ಸೃಷ್ಟಿಕಾಲೇ ವಿಭಕ್ತ ನಾಮ-ರೂಪ ಪ್ರಕೃತಿ-ಪುರುಷ ಶರೀರಕಃ ಸ್ವಪರ್ಯನ್ತ ನಾಮ-ರೂಪ ಆಸಮ್, ಸಂಹಾರವಿಷಯೋಪ್ಯಹ ಮೇವೇತ್ಯರ್ಥಃ । ಏವಂ ಕಾರಣ ಅವಸ್ಥಾಯಾಮ್ ವಿಭಕ್ತ ನಾಮ-ರೂಪ ಪ್ರಕೃತಿಶರೀಕತ್ವೇನ, ಕಾರ್ಯವಸ್ಥಾಯಾಮ್ ವಿಭಕ್ತ ನಾಮ-ರೂಪ ಪ್ರಕೃತಿ-ಪುರೂಷ ಶರೀರಕತ್ವೇನ ಅವಸ್ಥಿತಸ್ಯಾಪಿ ಪರಮಾತ್ಮನಃ ಸ್ವಶರೀರಭೂತ ಚೇತನಾಚೇತನಗತ ಅಜ್ಞತ್ವ-ದುಃಖಿತ್ವ-ಕರ್ಮವಶತ್ವ-ಪರಿಣಾಮಿತ್ವ-ಜಡತ್ವಾದಿರ್ಭಿವಿಕಾರೈಃ ಜೀವಾತ್ಮನಸ್ತಚ್ಛರೀರಗತ ಬಾಲತ್ವ-ಯುವತ್ವ-ಸ್ಥವಿರತ್ವಾದಿಭಿರಿವ ಅಸ್ಪರ್ಶಾತ್ ಚೇತನಾಚೇತನ ವೈಲಕ್ಷಣ್ಯಮವಿಹಿತಮೇವಾವತಿಷ್ಠತೆ । ಕಾರ್ಯತ್ವಂ ಕಾರಣತ್ವಂ ಚ ಸ್ವಶರೀರಭೂತ ಪ್ರಕೃತಿ-ಪುರೂಷ ದ್ವಾರಕಮುಪಪನ್ನಮಿತಿ ಅತ್ರ ಭಾಷ್ಯಾದಿಷು ವಿಸ್ತರೋದ್ರಷ್ಟವ್ಯಃ ॥೩೨॥

ಭಾವಾನುವಾದ- ಹಿಂದಿನ ಶ್ಲೋಕದಲ್ಲಿ 'ಯಾವಾನ್' (ಯಾವ ಪ್ರಮಾಣ) ಪದದ ಅರ್ಥ ಸ್ಪಷ್ಟಪಡಿಸಲೆಂದು ಶ್ರೀಭಗವಂತನು ಮುಖ್ಯವಾಗಿ ತಿಳಿಸಲು ಯೋಗ್ಯವಾದ 'ಪರ' ಶಬ್ದದ ಮೂಲಕ ನಿರ್ದಿಷ್ಟ ಭಗವತ್-ಸ್ವರೂಪದ ವರ್ಣನೆ ಮಾಡುತ್ತಿದ್ದಾರೆ. 'ಸದಸತ್ಪರ' ಶಬ್ದದಲ್ಲಿ ಚೇತನ-ಅಚೇತನದಿಂದ ವಿಲಕ್ಷಣವಾದ ಯಾವ ವಸ್ತುವಿದೆಯೋ, ಅದು ನಾನೇ ಆಗಿದ್ದೇನೆ. ಅನ್ಯ ವಸ್ತುವು ಚಿತ್-ಅಚಿತ್-ವಿಲಕ್ಷಣವಾಗುವುದಿಲ್ಲ, ಆದರೂ ಎಲ್ಲವು ಚಿತ್-ಅಚಿತ್ ನ ಅಂತರ್ಗತವಾಗಿದೆ, ಕೇವಲ

ನಾನು ಮಾತ್ರ ಅದರಿಂದ ವಿಲಕ್ಷಣನಾಗಿದ್ದೇನೆ. 'ಅಗ್ರೆ' ಅಂದರೆ ಸೃಷ್ಟಿಯ ಪೂರ್ವದಲ್ಲಿ ಯಾವ ವಸ್ತುವಿತ್ತು, 'ಪಶ್ಚಾತ್' ಅಂದರೆ ಸೃಷ್ಟಿಕಾಲದಲ್ಲಿ ಉತ್ಪನ್ನ ನೀನು ಮತ್ತು ಈ ಕಾರ್ಯಸಮ್ಮೂಹ- ಅದೂ ಸಹ ನಾನೇ ಆಗಿದ್ದೇನೆ, ಪುನಃ ಸಂಹಾರಕಾಲದಲ್ಲಿ ಯಾವುದು ಉಳಿದಿರುತ್ತದೋ, ಅದೂ ಸಹ ನಾನೇ ಆಗಿರುತ್ತೇನೆ. ಪ್ರಕೃತಿ-ಪುರುಷನಿಂದ ವಿಲಕ್ಷಣವಾದ ಈ ಶರೀರ-ವಿಶಿಷ್ಟನಾದ ನಾನು ಒಬ್ಬ (ಅದ್ವಿತೀಯ), ಸರ್ವಜ್ಞ, ಸರ್ವಶಕ್ತಿವಂತ, ಸರ್ವೇಶ್ವರನಾಗಿದ್ದೇನೆ. ಸೃಷ್ಟಿಯ ಪೂರ್ವದಲ್ಲಿ ಪ್ರತ್ಯೇಕ ನಾಮ-ರೂಪ ಸೂಕ್ಷ್ಮ-ಪ್ರಕೃತಿ-ಪುರುಷ-ಶರೀರವಿಶಿಷ್ಟವಾದ, ಸೃಷ್ಟಿಕಾಲದಲ್ಲಿ ಪ್ರತ್ಯೇಕ ನಾಮ-ರೂಪ ಪ್ರಕೃತಿ-ಪುರುಷ-ಶರೀರವಿಶಿಷ್ಟವಾದ ನನ್ನದೇ ಆದಂತಹ ಬೇರೆ-ಬೇರೆ ನಾಮ-ರೂಪಗಳಿವೆ ಮತ್ತು ಸಂಹಾರ-ವಿಷಯದಲ್ಲೂ ಸಹ ನಾನೇ ಆಗಿದ್ದೇನೆ. ಈ ಪ್ರಕಾರವಾಗಿ ಕಾರಣಾವಸ್ಥೆಯಲ್ಲಿ ಪ್ರತ್ಯೇಕ ನಾಮ-ರೂಪ-ಪ್ರಕೃತಿ ಶರೀರಯುಕ್ತವಾದ ಮತ್ತು ಕಾರ್ಯಾವಸ್ಥೆಯಲ್ಲಿ ಪ್ರತ್ಯೇಕ ನಾಮ-ರೂಪ-ಪ್ರಕೃತಿ-ಪುರುಷ ಶರೀರಯುಕ್ತವಾದ ರೂಪದಲ್ಲಿ ಸ್ಥಿತನಾಗಿರುವಾಗ, ಏನು ಪರಮಾತ್ಮನು ಸ್ವಶರೀರ-ಯುಕ್ತ-ಚೇತನಾಚೇತನಗತ ಅಜ್ಞಾನ, ದುಃಖಿತ್ವ, ಕರ್ಮಬಂಧನ, ಪರಿಣಾಮ ಮತ್ತು ಜಡತ್ವ ಇತ್ಯಾದಿ ವಿಕಾರಗಳಿಂದಿರುವನೆ? ಎಂದು ಹೀಗೆ ಪ್ರಶ್ನಿಸಿದರೆ, ಅದಕ್ಕೆ ಸಮಾಧಾನದಲ್ಲಿ ಹೇಳುತಾರೆ ಯಾವ ರೀತಿ ಜೀವಾತ್ಮ ಶರೀರಗತವಾಗಿ ಬಾಲ್ಯ, ಯೌವನ ಮತ್ತು ವೃದ್ಧಾವಸ್ಥೆ ಮುಂತಾದ ವಿಕಾರಗಳಿಂದ ಸ್ಪರ್ಶರಹಿತವಾಗಿರುತ್ತದೋ, ಅದೇ ರೀತಿ ಪರಮಾತ್ಮನೂ ಸಹ ಈ ವಿಕಾರಗಳಿಂದ ಸ್ಪರ್ಶರಹಿತನಾದ ಕಾರಣ ಚೇತನಾಚೇತನ-ವಿಲಕ್ಷಣನಾಗಿ ಸ್ಥಿತನಾಗಿರುತ್ತಾನೆ. ಕಾರ್ಯತ್ವ ಮತ್ತು ಕಾರಣತ್ವವು ತನ್ನ ಶರೀರಯುಕ್ತ ಪ್ರಕೃತಿ-ಪುರುಷನ ಮೂಲಕ ಉತ್ಪನ್ನವಾಗಿದೆ.॥೩೨॥

ಶ್ರೀಶುಕದೇವಪಾದರು

ಅಥ ಸಂಕ್ಷೇಪತಸ್ತದೇವ ಜ್ಞಾನಂ ಜ್ಞೇಯವಸ್ತೂಪದೇಶದ್ವಾರಾ ಉಪದಿಶನ್, ಪರಾವರೇ ರೂಪೆ ದರ್ಶಯತಿ-ಅಹಮಿತಿ । ಸದಸತೋಃ ಸ್ಥೂಲಸೂಕ್ಷ್ಮಯೋಃ, ಪರಮ್ ಬೀಜಭೂತಂ ಕಾರಣಂ, ಯದಗ್ರೆ ಸೃಷ್ಟೇಃ ಪೂರ್ವಂ ವಸ್ತು ತದಹಮೇವಾಸಮ್ ನಾನ್ಯತ್ ಕಿಂಚಿದಾಸೀತ್ । ಯಶ್ಚ ಪಶ್ಚಾದವಶಿಷ್ಯೇತ ಸೋಽಪ್ಯಹಮಸ್ಮಿ । ಏವಂ ಪರಾವರೂಪೋ ಜಗದಾಯತ್ತರೂಪೋ ಅಹಮೇವಾಸ್ಮೀತ್ಯರ್ಥಃ । ಯದೇತಚ್ಚಿದಚಿದಾತ್ಮಕಂ ವಿಶ್ವಂ ತದಪ್ಯಹಮೇವಾಸ್ಮಿ ವಿಶ್ವ ಭಿನ್ನಭಿನ್ನಸ್ವರೂಪೋಽಸ್ಮೀತ್ಯರ್ಥಃ । ಅನೇನ, ಪರಿಮಾಣತಃ ಅಪತಿಚ್ಛಿನ್ನಃ, ತ್ರೈಕಾಲಿಕ-ಸತ್ತಾವಾನ್, ಜಗದ್ಭಿನ್ನಭಿನ್ನಸ್ವರೂಪಃ ವಿಶ್ವಸೃಷ್ಟ್ಯಾದ್ಯನುರೂಪ, ಸರ್ವಜ್ಞತ್ವಾದಿ ಗುಣವಾನ್, ವಿಶ್ವೇಕರ್ಮಶ್ಚಾಹಮಸ್ಮಿ । ತದ್ವಿಷ್ಯಕಜ್ಞಾನವಾನ್ ಮಮಾನುಗ್ರಹಾತ್ ಭೂತ್ವಾ ದೃಢವಿಶ್ವಾಸೇನ ಮಾಮ್ ಭಜೇತ್ಯುಪದಿಷ್ಟಮ್ ॥೩೨॥

ಭಾವಾನುವಾದ- ಸೃಷ್ಟಿಯ ಪೂರ್ವದಲ್ಲಿ ಸ್ಥೂಲ ಮತ್ತು ಸೂಕ್ಷ್ಮಕ್ಕಿಂತ ಶ್ರೇಷ್ಟವಾದಂತಹ ಬೀಜಯುಕ್ತ ಕಾರಣಸ್ವರೂಪವಾದ ಯಾವ ವಸ್ತುವು ಅಸ್ತಿತ್ವದಲ್ಲಿತ್ತೋ, ಅದೂ ನಾನೇ ಆಗಿದ್ದೆ, ನನಗೆ ಅತಿರಿಕ್ತವಾಗಿ ಅನ್ಯ ಯಾವುದೇ ವಸ್ತುವೂ ಸಹ ಇರಲಿಲ್ಲ.

ಅನಂತರವೂ ಸಹ ಯಾವುದು ಅವಶೀಷ್ಟವಿರುತ್ತದೋ (ಉಳಿದಿರುತ್ತದೋ), ಅದೂ ಸಹ ನಾನೇ ಆಗಿದ್ದೇನೆ. ಈ ಪ್ರಕಾರವಾಗಿ ಪರ-ಅಪರಸ್ವರೂಪ ಮತ್ತು ಜಗತ್ತಿನ ಆಶ್ರಯ ರೂಪದಲ್ಲಿ ನಾನೇ ನೆಲಸಿದ್ದೇನೆ. ಯಾವ ಈ ಚಿತ್-ಅಚಿದಾತ್ಮಕ ವಿಶ್ವವು ದೃಷ್ಟಿಗೋಚರವಾಗುತ್ತದೆ, ಅದೂ ಸಹ ನಾನೆ, ಅಂದರೆ ನಾನು ವಿಶ್ವದಿಂದ ಭಿನ್ನ ಮತ್ತು ಅಭಿನ್ನ ಸ್ವರೂಪ-ವಿಶಿಷ್ಟನಾಗಿದ್ದೇನೆ. ಇದರ ಮೂಲಕ ಪ್ರಮಾಣವಾಗಿ ಅಪರಿಚ್ಛಿನ್ನ, ತ್ರಿಕಾಲಿಕ ಸ್ಥಿತವಂತನು, ಜಗತ್ತಿನಿಂದ ಭೇದಾಭೇದ ಸ್ವರೂಪ ವಿಶ್ವಸ್ರಷ್ಟ ಮುಂತಾದ ಅನುರೂಪ, ಸರ್ವಜ್ಞ ಗುಣವಂತ ಮತ್ತು ವಿಶ್ವಕರ್ಮ ಸ್ವರೂಪದಲ್ಲು ನಾನೇ ನಿತ್ಯ ನೆಲಸಿದ್ದೇನೆ- ಈ ಪ್ರಕಾರವಾಗಿ ತಿಳಿಸುತ್ತಿದ್ದಾರೆ. ನನ್ನ ಕೃಪೆಯಿಂದ ಈ ವಿಷಯದ ಜ್ಞಾನವನ್ನು ಪ್ರಾಪ್ತಿಸಿಕೊಂಡು ದೃಢ ವಿಶ್ವಾಸಪೂರ್ವಕವಾಗಿ ನನ್ನನ್ನು ಭಜಿಸುವುದೇ ಕರ್ತವ್ಯ- ಇದನ್ನು ಉಪದೇಶ ಮಾಡಿದರು.॥೩೨॥

ಶ್ರೀವಲ್ಲಭಾಚಾರ್ಯಪಾದರು

ಏವಂ ಜ್ಞಾನದ್ವಯಂ ನಿರೂಪಯಿತುಮಶಕ್ಯತ್ವಾನ್ನಿರೂಪಣೇ ವಾ ಬ್ರಹ್ಮಣೋ ಹೃದಯೆ ಸ್ಫುರಣಾಸಂಭವಾತ್ ಸ್ವಯಮೇವ ದತ್ವಾ ಶಿಕ್ಷಾರ್ಥಂ ಚತುಃಶ್ಲೋಕೀಮಾಹ- ಅಹಮೇವಾಸಮೇವಾಗ್ರ ಇತಿ । ಯಾದೃಗ್ರೂಪಂ ಭಗವಾನ್ ಜಗತ್ಕರೋತಿ ತಚ್ಛಿಕ್ಷಾಯಾಮ್ ಪ್ರಾರ್ಥಿತಂ, ತತ್ರಾಹ-ಅಹಮೇವ ತದ್ರೂಪೋ ಜಾತಃ ನಾನ್ಯದಿತಿ; ಅನ್ಯಥಾಭಾನಂ ಚ ಮನ್ಮಾಯಯೇತಿ । ಜಡೇ ದೇಹಾದೌಮಧ್ಯೇ ಜೀವಪ್ರತೀತಿಶ್ಚ ಘಟಾದಾವಾಕಾಶ-ಪ್ರತೀತಿವತ್ । ಆಧಾರಧೇಯಭಾವೋ ಬಾಹ್ಯಾಭ್ಯನ್ತರಭೇದಹೇತುಶ್ಚ ಅಹಮೇವೇತಿ । ಸ್ವರೂಪತೋ ಮೂಲಭೂತಂ ಜಗತ್ । ಪ್ರತೀತಿತೋ ಮಾಯಾರೂಪಂ ಅನುಪ್ರವೇಶಕೋ ಜೀವ ಇತಿ ಸರ್ವಂ ಜಗತ್ಸರ್ವಪ್ರಕಾರೇಣಾಹಮೇವೇತಿ ಜ್ಞಾತ್ವಾ ಸ್ವಸ್ವರೂಪಮಪಿ ತಥಾ ಜ್ಞಾತವ್ಯಮ್ । ಇಯಮೇವ ಶಿಕ್ಷಾ। ಏವಂ ಮದ್ರೂಪೋ ಭೂಕ್ತಾ ಮದ್ರೂಪಂ ಚೇಜ್ಜಗತ್ಕರೋತಿ, ತದಾ ಗರ್ವೋ ನ ಭವತೀತಿ ತದ್ಧೇತುಭೂತೋ ಮೋಹೋಽಪಿ ನ ಭವತೀತಿ ಪಂಚಶ್ಲೋಕಾನಾಮರ್ಥಃ । ತತ್ರ ಸರ್ವಂ ಜಗತ್ ಕಥಂ ಭಗವಾನ್? ಇತ್ಯಾಕಾಙ್ಕ್ಷಾಯಾಮ್ ತಜ್ಜಲಾನಿತಿ ಹೇತುಂ ವಿಸ್ತರೇಣ ವದತಿ- ಸೃಷ್ಟೇಃ ಪೂರ್ವಂ ಅಹಮೇವ । 'ಏಕೋ ನಾರಾಯಣ ಆಸೀನ್ನ ಬ್ರಹ್ಮಾ ನ ಚ ಶಂಕರಃ ।' 'ವಾಸುದೇವೋ ವಾ ಇದಮಗ್ರ ಆಸೀನ್ನ ಬ್ರಹ್ಮಾ ನ ಚ ಶಂಕರಃ' ಇತಿ ಶ್ರುತೇಃ ಸೃಷ್ಟೇಃ ಪೂರ್ವಮಹಮೇವ । ಕಿಂಚ, ಮತ್ತೋಽಪಿ ಪೂರ್ವಮಿತಿ ನಾಶಂಕನೀಯಮ್ । ಯಥಾ ಜಗತಃ ಪೂರ್ವಮಹಂ, ಮತ್ತೋಽಪಿ ಪೂರ್ವಮನ್ಯದಿತಿ ತದ್ಯೆವಂ ಭವೇತ್-ಯದಿ ಕದಾಚಿದಪ್ಯಹಂ ನಾಸಂ, ತತ್ತು ಮಮ ನ ಸಮ್ಭವತಿ । ಸದ್ರೂಪೇಣೈವ ನಿರೂಪಣಾತ್ । 'ಸದೇವ ಸೌಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್' ಇತಿ ಶ್ರುತೇಃ ಆಸಮೇವ । ಅಗ್ರೆ ಸೃಷ್ಟೇಃ ಪೂರ್ವಮ್ । 'ಅಸದ್ವಾ ಇದಮಗ್ರ ಆಸೀತ್ತತೋ ವೈ ಸದಜಾಯತ' ಇತ್ಯಾದೀನಾಂ ಪಶ್ಚಾತ್ಪ್ರತೀಯಮಾನಜಗತಃ ಪೂರ್ವಮೇತಾದೃಶರೂಪೇಣಾನವಸ್ಥಿತತ್ವಪ್ರತಿಪಾದಕತ್ವಾತ್; ಅನ್ಯಥಾ, ಅಸತಃ ಸತ್ತಾಭೋಧಕತ್ವೇ ವಿರೋಧಃ। 'ನಾಸತೋ ವಿಧ್ಯತೇ ಭಾವಃ' ಇತಿ ವಾಕ್ಯಾತ್, 'ನಾಸದಾಸೀನ್ನೋ ಸದಾಸೀತ್ತದಾನೀಮ್' ಇತ್ಯಾದೇಸ್ತು ಸ್ಥೂಲಸೂಕ್ಷ್ಮಕಾರ್ಯಪರತ್ವಮ್ । 'ಆಪೋ ವಾ ಇದಮಗ್ರೆ ಸಲಿಲಮಾಸೀತ್' ಇತಿ ತು ಅವಾನ್ತರಕಲ್ಪಾಭಿಪ್ರಾಯೇಣ । ಆಪೋ

ನಾನಾ ವಿಧಾನಿ ಜಲಾನಿ, ಇದಂ ತತ್ಕಾರ್ಯಂ ಚ, ಜಗತ್ಸರ್ವಂ ಸಲೀಲಂ ಪ್ರಲಯೋದಕ ರೂಪಮೇವಾಸೀದಿತ್ಯಾರ್ಥಃ । 'ಅವ್ಯಕ್ತಾದೀನಿ ಭೂತಾನಿ' ಇತಿ ತು ಅವ್ಯಕ್ತರೂಪಂ ಬ್ರಹ್ಮೈವ । ಲೀನತ್ವಕಲ್ಪಕಸ್ಯ ಪಶ್ಚಾದೇವ ಸಿದ್ಧೇಃ ಪಶ್ಚಾದೇವ ಪೂರ್ವಲೀನತ್ವಂ ಸಿಧ್ಯತಿ, ನ ಪೂರ್ವಂ । ಅನೇನ, 'ಪ್ರಕೃತಿಂ ಪುರುಷಂ ಚ' ಇತ್ಯಾಪಿ ನಿರಸ್ತಮ್ । ಮತಾನ್ತರತ್ವಾತ್ । 'ಆಸೀಜ್ಜ್ಞಾನಮಥೋ ಹ್ಯರ್ಥ' ಇತಿ ವಾಕ್ಯವಿರೋಧಾಚ್ಚ । 'ತಮ ಆಸೀತ್' ಇತಿ ತಮೋಽಪಿ ಬ್ರಹ್ಮೈವ । ಸರ್ವತಃ ಸುಪ್ತತ್ವೇವ ಸಾಮ್ಯಾತ್ । ನ ಪ್ರಕೃತಿಃ । 'ಕಿಮಾವರೀವಃ ಕುಹಕಸ್ಯ ಶರ್ಮನ್' ಇತಿ ಕಾರ್ಯಾಶ್ರಯಪ್ರಯೋಜನಾಭಾವಾತ್ ತಸ್ಯಾಃ ಕಾರ್ಯೈಕೋನ್ನೇಯ ಸ್ವರೂಪಾಯಾ ಅಭಾವಾತ್ । ಏವಮನ್ಯಾನ್ಯಪಿ ವಾಕ್ಯಾನಿ ತತ್ತದ್ಭಾವಪ್ರಕಾರೇಣ ಬೋಧಯನ್ತಿ, ಪೂರ್ವಮೇಕರೂಪೆ ಭಗವತಿ ನ ಬಾಧಕಾನಿ ಭವನ್ತಿ । ಅತಏವ ಶ್ರುತಿಸಿದ್ಧತ್ವಾದನ್ಯಾನಿ ತತ್ಕಾಲೇ ನಿಷೇಧತಿ–ನಾನ್ಯದಿತಿ । ಸದಸತೋಃ ಶುತೌ ಪೂರ್ವಸಿದ್ಧತ್ವೇಽಪಿ ನ ತಯೋರನ್ಯತ್ವಮ್ । ತದಾಹ–ಸದಸದಿತಿ । ಸಚ್ಛಬ್ದೇನ ಅಸಚ್ಛಬ್ದೇನ ಚ ಬ್ರಹ್ಮೈವೋಚ್ಯತ ಇತ್ಯರ್ಥಃ । 'ಯೋಽಸ್ಮಾತ್ಪರಸ್ಮಾತ್ ಪರ' ಇತಿ, ಪರಶಬ್ದೇನಾಪಿ ನ ಕಾಲಾದಿರೂಚ್ಯತೆ, ಕಿನ್ತ್ವಹಮೇವ । ತಸ್ಮಾತ್ ಪೂರ್ವಮಹಮೇವೇತಿ ಸಿದ್ಧಮ್ । ಅಭಾವಾಸ್ತ್ವಸ್ಮನ್ಮತೆ ತಿರೋಭಾವಾತಿರಿಕ್ತೋ ನ ಭವತೀತಿ । ತಸ್ಯ ಚ ಭಗವಚ್ಛಕ್ತಿತ್ವಾತ್, 'ಪೂರ್ವವದ್ಧ' ಇತಿ ನ್ಯಾಯೇನ ಶಕ್ತಿಧರ್ಮಾಣಾಮಪಿ ತದೋದ್ಗಮತ್ವಾಭಾವೇನ, ಕಾಲಸ್ಯಾಪಿ ನಿರೂಪಣಾಸಮಯ ಏವ ತಥಾ ವಚನಾತ್ ಪ್ರಕೃತಿ ತುಲ್ಯತ್ವೇನ ಭಗವಾನೇಕಏವ ಸಿದ್ಧ ಇತ್ಯವಿವಾದಮ್ । ಕಿಂಚ, ಪಶ್ಚಾದಹಂ । ಸರ್ವಭವನ ಸಮರ್ಥತ್ಸ್ವರೂಪಾದೇವ ಚೇಷ್ಟಾವತ್ ಪ್ರಾದುರ್ಭಾವಃ । ಕಾಲಸ್ಯ ಪಶ್ಚಾದ್ಗುಣರೂಪೇಣ ಶಕ್ತಿರೂಪೇಣ ಚ ಪಶ್ಚಾತ್ಕಾರ್ಯರೂಪೇಣ । 'ಸ ಆತ್ಮಾನಂ ಸ್ವಯಮಕುರೂತ' ಇತಿ ಶುತೇಃ; ಅಸತಃ ಸತ್ತಾನಂಗೀಕಾರಾಚ್ಚ । 'ಯದೇತತ್' ಇತಿ ಪರಿದೃಶ್ಯಮಾನಂ ಸರ್ವಂ, ಚಕಾರಾತ್ ಅಪರಿದೃಶ್ಯಮಾನಮಪ್ರಸಿದ್ಧಂ ಚ । ಅನೇನ, ಜೀವಾ ಅಪಿ ಸಂಗೃಹೀತಾ । 'ತ್ವಮೇತಚ್ಚ' ಇತಿ ಪಾಠೆ ಜೀವಜಡಾತ್ಮಕಂ ಸರ್ವಮಹಮೇವೇತ್ಯರ್ಥಃ । ಅಯಂ ಮುಖ್ಯೋ ಬ್ರಹ್ಮವಾದಃ । ನ ತು ಪದಾರ್ಥವಿರೋಧೇ ಶಬ್ದೋ ನ ಪ್ರಮಾಣಮ್, ಭಗವಾಂಶ್ಚ ಸರ್ವದೋಷರಹಿತಃ । ವಿಕಾರಾದಯಶ್ಚ ದೋಷಾಃ, 'ಸರ್ವ' ಶಬ್ದೇ ಸಂಕೋಚಾಭಾವಾತ್ ಉಪದೇಶ್ಯಾಭಾವಃ, ಶಾಸ್ತ್ರೋಚ್ಛೇದಶ್ಚ । ಪ್ರಯೋಜನಾಭಾವಾತ್ ಹಿತಾಕರಣಾದಿದೋಷಪ್ರಸಕ್ತಿಃ, ಪುರುಷೋತ್ತ–ಮತ್ವಾಭಾವಶ್ಚ । ತಸ್ಮಾದನೇಕದೋಷದುಷ್ಟತ್ವಾತ್ ಬ್ರಹ್ಮವಾದೋಽನುಪಪನ್ನ ಇತಿ ಚೇತ್ ಮೈವಂ । ಪ್ರತ್ಯಕ್ಷಾದೃಷ್ಟವಿಷಯೇ ಪದಾರ್ಥಃ ಶ್ರುತಿಬೋಧಿತಾಃ । ಪರಸ್ಪರಂ ವಿರುದ್ಧಾಸ್ತೇನೈಕಶೇಷಂ ಭಜನ್ತಿ ಹಿ । ಉಭಯೋರ್ವೈದಿಕತ್ವೇನ ಕಃ ಸ್ಯಾಂದತ್ರ ನಿಯಾಮಕಃ? ವಿಚಾರಕಾಣಾಂ ಬುದ್ಧಿಸ್ತು ಸೋಪಜೀವ್ಯಾ ಶ್ರುತೇಃ ಸದಾ । ಕ್ರಿಯಾವಿಧ್ಯಾಪರತ್ವೇ ತು ವಿಕಲ್ಪೇನೈಕವಾಕ್ಯತಾ । ದುಷ್ಟೋಪ್ಯಾಶ್ರೀಯತೆ ಪಕ್ಷೋ ವಿಕಲ್ಪಾಖ್ಯಃ ಶ್ರುತೇರ್ಬಲಾತ್ । ತಥೈವ ಭಗವದ್ರೂಪಂ, ಯಥಾ ಹಸ್ತಾದಯಃ ಪೃಥಕ್ । ಯಥಾ ಸರ್ವಾವಿರೋಧಃ ಸ್ಯಾತ್, ತಥೈವಾತ್ರ ವಿಚಾರಣಮ್ । ಸರ್ವರೂಪಸಮರ್ಥತ್ವಂ ಅತೋ ಬ್ರಹ್ಮಣಿ ಗೀಯತೇ । ಅನ್ಯಥಾ, ಪ್ರತಿಭಾನಂ ಯದುಚ್ಚನೀಚಾದಿಭೇದೇತಃ । ತದ್ಭಾನಂ ತಸ್ಯ ಕರ್ತ್ತಾ ಚ ಹರಿರೇವ ತಥಾವಿಧಃ । ಯತ್ಕಿಂಚಿದ್ದೂಷಣಂ ತ್ವತ್ರ ದೂಷ್ಯಂ ಚಾಪಿ ಹರಿಃ ಸ್ವಯಂ । ವಿರುದ್ಧಪಕ್ಷಾಃ ಸರ್ವೇಽಪಿ ಸರ್ವಮತ್ರೈವ ಶೋಭತೆ । ಯೋಽವಶಿಷ್ಯೇತ ಸೋಽಸ್ಮ್ಯಹಮಿತಿ । ಉದ್ಭೂತಸ್ಯ ಸರ್ವಸ್ಯ

ತಿರೋಭಾವಪ್ರಾಪಣೆ ಯತ್ತಿರೋಭೂತಂ ನ ಭವತಿ, ತಿರೋಭಾವಸ್ತದಾಶ್ರಯೋರ್ವಾ, ಅಂಶಭೇದೇನ ವಾ, ತದಪ್ಯಹಂ ಅಸ್ಮೀತ್ಯನೇನ ಸರ್ವಏವ ಕ್ರಿಯಾಸ್ತದ್ವಿಷಯಶ್ಚಾಹಂ ಇತಿ ಜ್ಞಾಪಯತಿ ॥೩೨॥

ಭಾವಾನುವಾದ– ಈ ಪ್ರಕಾರ ಹೇಳಿರುವ ಎರಡು ಜ್ಞಾನದ ನಿರೂಪಣೆ ಮಾಡಲು ಯಾರಿಂದಲೂ ಸಹ ಸಾಧ್ಯವಿಲ್ಲದಕಾರಣ ಮತ್ತು ಶ್ರೀಭಗವಂತನ ಮೂಲಕ ಆ ಎರಡು ಜ್ಞಾನಗಳ ನಿರೂಪಣೆಯಾದರೂ ಸಹ ಅದು ಶ್ರೀಬ್ರಹ್ಮನ ಹೃದಯದಲ್ಲಿ ಸ್ಫುರಿತವಾಗುವುದು (ಪ್ರಕಾಶಿಸುವುದು) ಅಸಂಭವವಾದ ಕಾರಣ ಶ್ರೀಭಗವಂತನು ಸ್ವಯಂ ತಾನೇ ಆ ಎರಡು ಜ್ಞಾನಗಳನ್ನು ವರದಾನದ ರೂಪದಲ್ಲಿ ಶ್ರೀಬ್ರಹ್ಮನಿಗೆ ಕೊಟ್ಟನು.

ಈಗ ತೃತೀಯ ಪ್ರಕಾರದ ಜ್ಞಾನ ಅಂದರೆ ಜಗತ್–ರಚನೆಯ ಶಿಕ್ಷಣಕ್ಕಾಗಿ ಶ್ರೀಭಗವಂತನು ಚತುಃಶ್ಲೋಕವನ್ನು (ಈ ನಾಲ್ಕು ಶ್ಲೋಕಗಳನ್ನು) ಹೇಳುತ್ತಿದ್ದಾನೆ. ಶ್ರೀಭಗವಂತನು ಯಾವ ರೂಪದ ಜಗತನ್ನು ನಿರ್ಮಿಸಲು ಅಪೇಕ್ಷಿಸುತ್ತನೋ, ಅದರ ಶಿಕ್ಷಣಕ್ಕಾಗಿಯೇ ಶ್ರೀಬ್ರಹ್ಮದೇವರು ಭಗವಂತನಲ್ಲಿ ಪ್ರಾರ್ಥಿಸಿದರು. ಅದರ ಉತ್ತರದಲ್ಲಿ ಶ್ರೀಭಗವಂತನು 'ಅಹಮೇವ' ಇತ್ಯಾದಿ ಶ್ಲೋಕದ ಮೂಲಕ ಹೇಳುತ್ತಿದ್ದಾನೆ– ನಾನೇ ಜಗತ್–ರೂಪನಾಗಿದ್ದೇನೆ. ಜಗತ್ತು ಯಾವುದೋ ಬೇರೆ ಅನ್ಯ ಪದಾರ್ಥವಲ್ಲ. ಈ ಜಗತ್ತು ಯಾವ ರೂಪದಲ್ಲಿ ಮತ್ತು ವೈಚಿತ್ರವು ಕಾಣಿಸುತ್ತಿದೆಯೋ, ಅದು ನನ್ನ ಮಾಯೆ. ಯಾವ ರೀತಿ ನೀರಿನ ಮಡಿಕೆಯಲ್ಲಿ ಆಕಾಶವು ಪ್ರತಿಬಿಂಬಿಸುತ್ತದೋ, ಅದೇ ರೀತಿ ಜಡ–ದೇಹಾದಿಗಳ ನಡುವೆ ಜೀವಿಯ ಪ್ರತಿಬಿಂಬವು ಮಾಯೆಯಿಂದಾಗಿದೆ. ನೀರಿನ ಮಡಿಕೆ ಮತ್ತು ಆಕಾಶದಲ್ಲಿ ಅಥವಾ ದೇಹ ಮತ್ತು ಜೀವಿಯಲ್ಲಿ ಯಾವ ಆಧಾರ–ಆಶ್ರಯಭಾವವು ಕಾಣಿಸಲ್ಪಡುತ್ತದೆ, ಅಥವಾ ಮಡಿಕೆಯು ಬಾಹ್ಯವೆನ್ನಲಾಗುತ್ತದೆ ಮತ್ತು ಆಕಾಶವು ಮಡಿಕೆಯ ಒಳಗಿರುತ್ತದ ಅಥವಾ ದೇಹ ಬಾಹ್ಯ ಮತ್ತು ಜೀವಿ ಅಂತರಂಗ– ಈ ಬಾಹ್ಯಾಭ್ಯಾಂತರ ಭೇದದ ಕಾರಣ ನಾನೇ ಆಗಿದ್ದೇನೆ. ಅರ್ಥಾತ್ ನಾನೆ ಆಧಾರ–ಆಶ್ರಯ ಮತ್ತು ಬಾಹ್ಯ ಮತ್ತು ಅಂತರಂಗವಾಗಿದ್ದೇನೆ. ಎಲ್ಲವೂ ನಾನೆ. ಸ್ವರೂಪತಃ ಈ ಜಗತ್ತು (ಮೂಲಭೂತವಾಗಿ) ಭಗವಂತನೆ, ಆದರೆ ಇದರ (ಭಿನ್ನ) ಪ್ರತಿಬಿಂಬವು ಮಾಯೆಯಿಂದ ಆಗಿದೆ ಮತ್ತು ಇದರಲ್ಲಿ ಅನುಪ್ರವೇಶ ಮಾಡುವವನು ಜೀವಿ.

ಇದರ ತಾತ್ಪರ್ಯವೇನೆಂದರೆ ಪ್ರವೇಶ ಮತ್ತು ಅನುಪ್ರವೇಶ ಎರಡು ವಸ್ತುಗಳಿವೆ. ಒಂದು ರೂಪದಿಂದ ಭಗವಂತನು ಸರ್ವತ್ರ ದೇಹಾದಿಗಳಲ್ಲಿ ಸ್ಥಿತನಾಗಿದ್ದಾನೆ, ಆದರೆ ಪುನಃ ಅದೇ ಭಗವಂತನು ಜೀವರೂಪ ಧರಿಸಿ ಜಗತ್ತಿನಲ್ಲಿ ಪ್ರವೇಶಿಸುತ್ತಾನೆ, ಆದ್ದರಿಂದ ಇಲ್ಲಿ ಜೀವಿಗೆ ಅನುಪ್ರವೇಶಕ ಎಂದು ಕರೆಯಲಾಗಿದೆ. ಈ ವಿಷಯವು 'ಯಥಾ ಮಹಂತಿ' ಶ್ಲೋಕದಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ. ಈ ಪ್ರಕಾರ ಎಲ್ಲವೂ ಅಂದರೆ ಈ ಜಗತ್ತು ಎಲ್ಲ ರೀತಿಯಿಂದಲು ಭಗವಂತನೇ ಆಗಿದ್ದಾನೆ, ಆದ್ದರಿಂದ

'ಅಹಂ ಅಂದರೆ ನಾನು ಭಗವಂತ ಎಲ್ಲವೂ ನಾನೇ ಆಗಿದ್ದೇನೆ' ಎಂದು ಹೇಳುತ್ತಿದ್ದಾನೆ. ಹೇ ಬ್ರಹ್ಮ! ಈ ಪ್ರಕಾರವಾಗಿ ನೀನು ನನ್ನ ಸ್ವ–ಸ್ವರೂಪ ಅಂದರೆ ಬ್ರಹ್ಮಸ್ವರೂಪದಿಂದ ಅರ್ಥಮಾಡಿಕೊಳ್ಳಬೇಕು. ಇದೇ ಶಿಕ್ಷಣ. ಈ ಪ್ರಕಾರವಾಗಿ ತನಗೆ ತಾನು ಭಗವಂತನ ಸ್ವರೂಪವೆಂದು ತಿಳಿದು ಭಗವತ್–ಸ್ವರೂಪವನ್ನು ಈ ಜಗತ್ತಿಗೆ ಪ್ರಕಟಗೊಳಿಸುವುದರಿಂದ ನಿನಗೆ ಗರ್ವವಾಗುವುದಿಲ್ಲ ಮತ್ತು ಗರ್ವದ ಕಾರಣ ಯಾವ ಮೋಹವುಂಟಗುತ್ತದೋ, ಅಂತಹ ಮೋಹವೂ ಸಹ ಹೊಂದುವುದಿಲ್ಲ. ಇದೇ ಪಂಚ ಶ್ಲೋಕಗಳ (೩೨–೩೬) ಸಮ್ಮಿಲಿತ ತಾತ್ಪರ್ಯ. ಈ ಪೂರ್ವೋಕ್ತ ಅಭಿಪ್ರಾಯವು ಪ್ರಾಥಮಿಕ ಬ್ರಹ್ಮ–ಸೃಷ್ಟಿಯ ಸಂಬಂಧದಲ್ಲಿದೆ.

ಇಲ್ಲಿ ಪ್ರಶ್ನೆ ಉದ್ಭವಿಸುವುದೇನೆಂದರೆ ಭಗವಂತನೇ ಸಂಪೂರ್ಣ ಜಗತ್ತಾಗುವುದು ಹೇಗೆ? ಇದರ ಉತ್ತರದಲ್ಲಿ 'ತಜ್ಜಲಾನಂ'– ಈ ವೇದದ ಪ್ರಮಾಣವನ್ನು ವಿಸ್ತಾರವಾಗಿ ಹೇಳುತ್ತಿದ್ದಾರೆ. ಶ್ರೀಭಗವಂತನು ಮೂಲ ಶ್ಲೋಕದಲ್ಲಿ ಹೇಳುತ್ತಿರುವುದೇನೆಂದರೆ ಸೃಷ್ಟಿಗಿಂತ ಮೊದಲು ನಾನೇ ಇದ್ದೆ ಮತ್ತು ಯಾವುದೂ ಇರಲಿಲ್ಲ. ಶೃತಿಯಲ್ಲೂ ಸಹ ಹೀಗೆ ಹೇಳಲಾಗಿ "(ಸೃಷ್ಟಿಗಿಂತಲು ಮೊದಲು) ಒಬ್ಬ ಶ್ರೀನಾರಾಯಣನು ಮಾತ್ರ ಇದ್ದನು ಮತ್ತು ಬ್ರಹ್ಮ ಮತ್ತು ಶಂಕರರು ಯಾರೂ ಸಹ ಇರಲಿಲ್ಲ", "ಈ ಸಂಪೂರ್ಣ ಜಗತ್ತಿನ ಸೃಷ್ಟಿಗೆ ಮೊದಲು ಶ್ರೀವಾಸುದೇವ ಭಗವಂತನು ಮಾತ್ರ ನೆಲಸಿದ್ದನು ಮತ್ತು ಬ್ರಹ್ಮ ಮತ್ತು ಶಂಕರರು ಯಾರೂ ಸಹ ಇರಲಿಲ್ಲ"– ಈ ವಾಕ್ಯಗಳಿಂದ ಸ್ಪಷ್ಟವಾಗುವುದೇನೆಂದರೆ ಮೊದಲು ಕೇವಲ ನಾನು ಮಾತ್ರ ಇದ್ದೆ. ನನಗಿಂತ ಮೊದಲು ಬೇರೆ ಏನೋಯಿತ್ತು– ಎಂಬ ಈ ರೀತಿಯಾದ ಸಂದೇಹ ಪಡಬಾರದು. ಜತ್ತಿನ ಸೃಷ್ಟಿಗೆ ಮೊದಲು ನಾನೇ ಇದ್ದೆ, ಏಕೆಂದರೆ ನನಗಿಂತಲು ಮೊದಲು ಯಾವುದೇ ಅನ್ಯ ಪದಾರ್ಥದ ಅಸ್ತಿತ್ವದ ಕುರಿತು ಸಂದೇಹವು ಯಾವ ಸಮಯದಲ್ಲಿ ಉಂಟಾಗುವುದೆಂದರೆ ಯಾವಾಗ ನಾನು ಇರುವುದ್ದಿಲ್ಲವೊ ಆಗ, ಆದರೆ ನನ್ನ ವಿಶಯದಲ್ಲಿ ಇದು ಅಸಂಭವ. ವೇದಗಳಲ್ಲಿ ಭಗವಂತನನ್ನು ಸರ್ವದಾ ನೆಲಸಿರುವನೆಂದು ಕರೆಯಲಾಗಿದೆ. ಆದ್ದರಿಂದ ಮೂಲ ಶ್ಲೋಕದಲ್ಲಿ ಹೇಳಿರುವುದೇನೆಂದರೆ ಸೃಷ್ಟಿಯ ಮೊದಲು ಅವಶ್ಯವಾಗಿ ನಾನೇ ನೆಲಸಿದ್ದೆ. ಯಾವ ಸಮಯದಲ್ಲೂ ಸಹ ನಾನು ಇಲ್ಲ ಎಂಬುದೇ ಇಲ್ಲ. ವೇದದ ಒಂದು ಅನ್ಯ ವಚನದಲ್ಲಿ ಹೀಗೆ ಹೇಳಲಾಗಿದೆ– "ಹೇ ಸೌಮ್ಯ! ಸೃಷ್ಟಿಯ ಮೊದಲು ಈ ಸಮಸ್ತ ಜಗತ್ತು ಸದ್ರೂಪ ಅಂದರೆ ಭಗವದ್ರೂಪವಾಗಿತ್ತು ಮತ್ತು ಒಬ್ಬ ಅದ್ವಿತೀಯನಿದ್ದನು" ಅರ್ಥಾತ್ ಭಗವಂತನಿದ್ದನು ಮತ್ತು ಭಗವಂತನನ್ನು ಹೊರತುಪಡಿಸಿ ಅನ್ಯ ಏನೂ ಸಹ ಇರಲಿಲ್ಲ.

"ಈ ಜಗತ್ತು ಮೊದಲು ಅಸತ್ಯವಾಗಿತ್ತು, ಮತ್ತೆ ಅಸತ್ಯದಿಂದ ಸತ್ಯವಾಗಿದ", ಎಂದು ಹೀಗೆ ಏತಕ್ಕಾಗಿ ಶೃತಿಯಲ್ಲಿ ಹೇಳಲಾಗಿದೆ? ಎಂದು ಹೀಗೆ ಪ್ರಶ್ನಿಸಿದರೆ ಇದಕ್ಕೆ ಉತ್ತರದಲ್ಲಿ ಈ ಶೃತಿಯ ತಾತ್ಪರ್ಯವನ್ನು ವಿವರಿಸುವಾಗ ಹೇಳುತ್ತಾರೆ ವರ್ತಮಾನದಲ್ಲಿ ಈ ಜಗತ್ತು ಯಾವ ರೀತಿ ಕಾಣಿಸುತ್ತಿದೆಯೋ, ಅದೇ ರೀತಿ ವ್ಯವಸ್ಥಿತ

ರೂಪದಲ್ಲಿ ಸೃಷ್ಟಿಯ ಮೊದಲು ಇರಲಿಲ್ಲ. ಅದೇ ಸಂಪೂರ್ಣವಾಗಿ ಅಸತ್ಯವಾಗಿದ್ದರೇ ಅದು ಅಸತ್ಯದಿಂದ ಸತ್ಯವು ಉತ್ಪನ್ನವಾಗುವುದಾದರೂ ಹೇಗೆ? ಅಸತ್ಯದಿಂದ ಸತ್ಯದ ಉತ್ಪತ್ತಿಯನ್ನು ನಂಬುವುದಾದರೆ "ನಾಸತೋ ವಿಧ್ಯತೇ ಭಾವಃ ಅರ್ಥಾತ್ ಅಸತ್ಯವು ಎಂದಿಗೂ ಸತ್ಯವಾಗುವುದಿಲ್ಲ"- ಈ ವಚನಕ್ಕೆ ವಿರುದ್ಧವಾಗುವುದು. "ಪ್ರಳಯ ಕಾಲದಲ್ಲಿ ಅಸತ್ಯ ಮತ್ತು ಸತ್ಯ ಎರಡೂ ಇರಲಿಲ್ಲ"- ಈ ಶೃತಿಯ ಅನುಸಾರವಾಗಿ ಅಸತ್ಯ ಮತ್ತು ಸತ್ಯ ಎರಡೂ ಸಂಭವಿಸುವುದನ್ನು ನಿಷೇಧ ಮಾಡಲಾಗಿದೆಯೇ? ಎಂದು ಹೀಗೆ ಪ್ರಶ್ನಿಸಿದರೆ ಇದಕ್ಕೆ ಉತ್ತರದಲ್ಲಿ ಹೇಳುತ್ತಾರೆ ಈ ಶೃತಿಯು ಸ್ಥೂಲ, ಸೂಕ್ಷ್ಮ ಕಾರ್ಯಗಳಿಗೆ ಮಾತ್ರ ನಿಷೇಧ ಎನ್ನಲಾಗಿದೆ. ಇಲ್ಲಿ ಸ್ಥೂಲ ಕಾರ್ಯವನ್ನು ಸತ್ಯ ಎಂದು ಕರೆಯುತ್ತಾರೆ ಮತ್ತು ಸೂಕ್ಷ್ಮ ಕಾರ್ಯವನ್ನು ಅಸತ್ಯ ಎಂದು ಕರೆಯುತ್ತಾರೆ. ಹೀಗೆ ಹೇಳುವುದಾದರೆ "ಈ ಸಂಪೂರ್ಣ ಜಗತ್ತು ಮೊದಲು ಜಲವಾಗಿತ್ತು"- ಈ ಶೃತಿಯಲ್ಲಿ ಸೃಷ್ಟಿಯ ಪೂರ್ವದಲ್ಲಿ ಜಲದ ನಿರೂಪಣೆಯಾಗಿದೆ ಅಲ್ಲವೇ?. ಇದಕ್ಕೆ ಉತ್ತರದಲ್ಲಿ ಅವಾಂತರ (ಮಧ್ಯವರ್ತಿ) ಕಲ್ಪದಲ್ಲಿ ಸೃಷ್ಟಿಗಿಂತ ಮೊದಲು ಈ ಜಗತ್ತು ಪ್ರಳಯ ಜಲದಲ್ಲಿತ್ತು- ಇದೇ ಈ ಶೃತಿಯ ತಾತ್ಪರ್ಯ.

"ಅವ್ಯಕ್ತಾದಿನಿ ಭೂತಾನಿ" ಗೀತೆಯ ಈ ವಚನದಲ್ಲಿ ಅವ್ಯಕ್ತ ಶಬ್ದದಿಂದ ಬ್ರಹ್ಮನ್ ರೂಪವನ್ನು ನಿರ್ದೇಶಿಸಿದ್ದಾರೆ. ಎಲ್ಲಿ-ಎಲ್ಲಿ ಜಗತ್ತಿನ ಯಾವ ಪದಾರ್ಥದಲ್ಲಿ ಲೀನವಾಗುವ ವಿಷಯವನ್ನು ಹೇಳಲಾಗಿದೆಯೋ, ಅಲ್ಲಿಯೂ ಸಹ ಅದೇ ಅಸ್ತಿತ್ವದ ಸಂಬಂಧದಲ್ಲಿ ಹೇಳಲಾಗಿದೆ. ಈ ಜಗತ್ತು ಅವ್ಯಕ್ತದಲ್ಲಿ ಲೀನವಾಗಿದೆ- ಎಂದು ಹೀಗೆ ಹೇಳುವ ತಾತ್ಪರ್ಯವೇನೆಂದರೆ ಮೊದಲು ಅಸ್ತಿತ್ವದಲ್ಲಿತ್ತು ಮತ್ತು ಅನಂತರ ಲೀನವಾಗಿದೆ. ಆದಿಯಿಂದಲೂ ಲೀನವಾಗಿತ್ತು- ಎಂಬ ಅರ್ಥವಲ್ಲ. "ಪ್ರಕೃತಿಂ ಪುರುಷಂ ಚೈವ" ಗೀತೆಯ ಈ ವಚನದಲ್ಲಿ ನಡುವಿನ ಕಾರಣವನ್ನು ನಿರೂಪಣೆ ಮಾಡಲಾಗಿದೆ, ಮತಾಂತರ ಅಂದರೆ ಸಾಂಖ್ಯ ಮತದ ವಿಚಾರವಲ್ಲ, ಏಕೆಂದರೆ ಭಾಗವತದಲ್ಲಿ ಹೇಳಿರುವುದೇನೆಂದರೆ "ಆಸೀತ್ ಜ್ಞಾನಮಯೋ ಹ್ಯರ್ಥಃ ಅರ್ಥಾತ್ ಮೊಟ್ಟಮೊದಲು ಜ್ಞಾನಮಯನಾದ ಪರಬ್ರಹ್ಮನು ಮಾತ್ರ ನೆಲಸಿದ್ದನು." ಅದುದರಿಂದ ಗೀತೆಯ ಸಿದ್ಧಾಂತವು ಇದಕ್ಕೆ ವಿರುದ್ಧವಾಗುವುದಿಲ್ಲ. ಅನ್ಯಥಾ ಈ ಎರಡು ಭಗವತ್- ವಚನಗಳಲ್ಲಿ ವಿರೋಧ ಉಂಟಾಗುವುದಿಲ್ಲ. "ತಮ ಆಸೀತ್"- ಈ ಶೃತಿಯಲ್ಲಿ ಯಾವ ತಮದ ನಿರೂಪಣೆಯಾಗಿದೆಯೋ, ಆ ತಮವೂ ಸಹ ಬ್ರಹ್ಮನೇ ಆಗಿದ್ದಾನೆ, ಪ್ರಕೃತಿಯಲ್ಲ, ಏಕೆಂದರೆ ತಮವು ಸರ್ವದಾ ಸುಪ್ತಿಯಲ್ಲಿರುವ ಕಾರಣ ಅದರದ್ದು ಬ್ರಹ್ಮನೊಂದಿಗೆ ಸಮಾನವಾಗಿರುತ್ತದೆ. 'ಕಿಮಾವರೀವಃ'- ಈ ಶೃತಿಯಲ್ಲೂ ಸಹ ವಿಕಲ್ಪರೂಪದಲ್ಲಿ ಬ್ರಹ್ಮನ ನಿರೂಪಣೆ ಮಾಡಲಾಗಿದೆ. 'ಯಾವ ಪದಾರ್ಥವನ್ನು ಲೀನಗೊಳಿಸಲಾಗಿದೆ ಮತ್ತು ಯಾರ ಸುಖಾರ್ಥವನ್ನು ಲೀನಗೊಳಿಸಲಾಗಿದೆ'- ಈ ಶೃತಿಯಲ್ಲಿ ಪ್ರಕೃತಿಯು ಕಾರಣ ರೂಪದಲ್ಲಿರುವುದನ್ನು ನಿಷೇಧಿಸಲಾಗಿದೆ. ಇದಕ್ಕೆ ಕಾರಣವೇನೆಂದರೆ ಪ್ರಕೃತಿಯನ್ನು ಕಾರ್ಯದ ಆಶ್ರಯವೆಂದು ಕರೆಯುವುದರಿಂದ ಪ್ರಯೋಜನವಾಗುವುದಿಲ್ಲ, ಏಕೆಂದರೆ ಕಾರ್ಯದಿಂದ ಪ್ರಕೃತಿಯ ಅಸ್ತಿತ್ವವೆಂದು

ಭಾವಿಸಲಾಗಿದೆ. ಯಾವಾಗ ಕಾರ್ಯವೇ ಮೊದಲು ಎಂಬುದಲ್ಲದಿರುವಾಗ, ಪ್ರಕೃತಿ ಎಲ್ಲಿಂದ ಉದ್ಭವಿಸುತ್ತದೆ? ಯಾವ ಕಾರ್ಯದಿಂದಲೇ ಅನುಮಾನಿಸಲಾಗುತ್ತದೋ, ಆ ಕಾರ್ಯವು ಹಿಂದೆ ಆಗಿರುವುದಿಲ್ಲ.

ಬೇರೆ–ಬೇರೆ ಎಷ್ಟು ವಚನಗಳಿವೆಯೋ (ಪ್ರಮಾಣಗಳಿವೆಯೋ), ಅವೇಲ್ಲವೂ ಸಹ ಬ್ರಹ್ಮನನ್ನೇ ಕಾರಣರೂಪದಲ್ಲಿ ನಿರೂಪಣೆ ಮಾಡುತ್ತದೆ, ಆದ್ದರಿಂದ ಆ ವಚನ (ಪ್ರಮಾಣ) ಸೃಷ್ಟಿಗಿಂತ ಮೊದಲು ಒಂದೇರೂಪದಿಂದಿರುವ ಬ್ರಹ್ಮನ ಸತ್ಯದಲ್ಲಿ ಬಾಧಕವಾಗುವುದಿಲ್ಲ. ಸೃಷ್ಟಿಯ ಮೊದಲು ಕೇವಲ ಭಗವಂತನೊಬ್ಬನಿದ್ದ– ಈ ಸಿದ್ಧಾಂತವೇ ಶ್ರುತಿಸಿದ್ಧವಾಗಿದೆ, ಆದ್ದರಿಂದ ಆ ಸಮಯದಲ್ಲಿ ಅನ್ಯ ಪದಾರ್ಥಗಳನ್ನು ಮೂಲ ಶ್ಲೋಕದಲ್ಲಿ ನಿಷೇಧಿಸಲಾಗಿದೆ– 'ನಾನ್ಯತ್' ಅರ್ಥಾತ್ ಭಗವಂತನನ್ನು ಹೊರತುಪಡಿಸಿ ಬೇರೆ ಏನೂ ಇರಲಿಲ್ಲ. ಅದಾಗ್ಯೂ ವೇದಗಳಲ್ಲಿ ಸತ್ ಮತ್ತು ಅಸತ್ತಿನ ನಿರೂಪಣೆ ಮಾಡಲಾಗಿದೆ, ಹೀಗಾಗಿ ಆ ಭಗವಂತನಿಂದ ಪೃಥಕವಾಗಿರಲಿಲ್ಲ, ಆದರೆ ಬ್ರಹ್ಮರೂಪವಿತ್ತು. ಆದ್ದರಿಂದ ಹೀಗೆ ಹೇಳಲಾಗಿದೆ 'ಸದಸತ್ಪರಮ್' ಅಂದರೆ ಸತ್ಯ ಮತ್ತು ಅಸತ್ಯ – ಇವೆರಡರಿಂದ 'ಪರ' ಅರ್ಥಾತ್ ಶ್ರೇಷ್ಠ ಕಾಲ ಇತ್ಯಾದಿಗಳೂ ಸಹ ಬ್ರಹ್ಮನಿಂದ ಪೃಥಕವಾಗಿರಲಿಲ್ಲ, ಬ್ರಹ್ಮನ ಅತಿರಿಕ್ತವಾಗಿ ಏನು ಇರಲಿಲ್ಲ. ಏನೆಲ್ಲ ಇತ್ತು, ಅದೂ ಸಹ ನಾನೆ– ಎಂಬುದನ್ನು ದೃಢಪಡಿಸಲಾಗಿದೆ.

"ಏನು ಇರಲಿಲ್ಲ"– ಎಂದು ಹೇಳುವುದಾದರೆ ಸೃಷ್ಟಿಗಿಂತ ಮೊದಲು ನ್ಯೂನತೆಯನ್ನು ಒಪ್ಪಿಕೊಳ್ಳಲಾಗುವುದೆ? ಎಂದು ಹೀಗೆ ಪ್ರಶ್ನಿಸಿದರೆ, ಇದಕ್ಕೆ ಉತ್ತರದಲ್ಲಿ ಹೇಳುತ್ತಾರೆ– ವೇದ, ವೇದಾಂತ ಸಿದ್ಧಾಂತದ ಅನುಸಾರವಾಗಿ ಅಪ್ರಕಟದಿಂದ ಪೃಥಕವಾಗಿ ನ್ಯೂನತೆಯು ಯಾವುದೇ ಪದಾರ್ಥದ್ದಲ್ಲ. ಅಪ್ರಕಟವೇ ಸರಿ ಎಂದು ಹೇಳುವುದಾದರೆ, ಅಥವಾ ಅಪ್ರಕಟವನ್ನು ಸೃಷ್ಟಿಯ ಪೂರ್ವವೆಂದು ಒಪ್ಪಿಕೊಳ್ಳಲಾಗುವುದು,– ಇದಕ್ಕೆ ಉತ್ತರದಲ್ಲಿ ಹೇಳುತ್ತಾರೆ ಪ್ರಕಟ ಮತ್ತು ಅಪ್ರಕಟವು ಆ ಬ್ರಹ್ಮನದ್ದೆ ಶಕ್ತಿಯಾಗಿದೆ ಮತ್ತು 'ಪೂರ್ವವದ್ವಾ' ಇದರ ಅನುಸಾರವಾಗೆ ಸೂಚಿಸುತ್ತಿರುವುದೇನೆಂದರೆ ಬ್ರಹ್ಮನ ಶಕ್ತಿ ಮತ್ತು ಬ್ರಹ್ಮನ ಧರ್ಮವೂ ಸಹ ಸೃಷ್ಟಿಗಿಂತಲು ಮೊದಲು ಹೊರಬಂದಿರಲಿಲ್ಲ. 'ಮೊದಲು' ಎಂದು ಹೇಳುವುದರಿಂದ ಕಾಲದ ಯಾವ ಸತ್ಯದ ಅರಿವಾಗುತ್ತದೋ, ಅದನ್ನೂ ಸಹ ನಿರೂಪಣಸಮಯದ ಕಾಲದಿಂದ ಹಿಡಿದು ಅರ್ಥಮಾಡಿಕೊಳ್ಳಬೇಕು. ಕಾಲದ ಸೃಷ್ಟಿಯೂ ಸಹ ಪ್ರಕೃತಿಯಂತೆ ಅವಾಂತರ (ಮಧ್ಯವರ್ತೀ) ಸೃಷ್ಟಿ, ಆದ್ದರಿಂದ ಈಗ ಇದು ವಿವಾದರಹಿತವಾಗಿ ಅರ್ಥವಾಗುವುದೇನೆಂದರೆ ಸೃಷ್ಟಿಯ ಪೂರ್ವದಲ್ಲಿ ಕೇವಲ ಭಗವಂತನೊಬ್ಬನಿದ್ದ ಎಂಬುದು.

ಈಗ ಸೃಷ್ಟಿಯ ಸ್ಥಿತಿಯಲ್ಲಿ ಈ ಜಗತ್ತು ಯಾವ ಸ್ವರೂಪದಲ್ಲಿದೆ? ಇದಕ್ಕೆ ಉತ್ತರದಲ್ಲಿ ಹೇಳುತ್ತಾರೆ– 'ಪಶ್ಚಾದಹಂ' ಅರ್ಥಾತ್ ಸೃಷ್ಟಿಯಾದ ನಂತರವೂ ಸಹ ನಾನೇ ಇದ್ದೇನೆ. ಈ ಸಂಪೂರ್ಣ ಜಗತ್ತು ನನ್ನ ಸ್ವರೂಪ. ನನ್ನ ಸ್ವರೂಪವೇ ಎಲ್ಲವೂ ಆಗುವುದಕ್ಕೆ ಸಾಮರ್ಥ್ಯವಿರುತ್ತದೆ, ಆದ್ದರಿಂದ ಎಲ್ಲದಕಿಂತ ಮೊದಲ

ಪ್ರಯತ್ನ ರೂಪವಾಗಿ ಕಾಲದ ಆವಿರ್ಭಾವವಾಗಿದೆ. ಮತ್ತೆ ನನ್ನ ಆ ಸ್ವರೂಪವೇ ಸತ್, ಚಿತ್ ಮುಂತಾದ ಗುಣ ರೂಪಗಳಿಂದ, ಮೋಹಿನೀ ಪ್ರಕೃತಿ ಇತ್ಯಾದಿ ಶಕ್ತಿ ರೂಪಗಳಿಂದ ಮತ್ತು ಪುನಃ ಈ ಅಸ್ತಿತ್ವದ ಜಗತ್ತಿನ (ಕಾರ್ಯ) ರೂಪಗಳಿಂದ ಪ್ರಾದುರ್ಭಾವವಾಗಿದೆ. "ಆ ಭಗವಂತನು ತನ್ನ ಸ್ವರೂಪವನ್ನೇ ವಿವಿಧ ರೂಪಗಳಲ್ಲಿ ಪ್ರಕಟಿಸಿದ್ದಾನೆ"- ಈ ವಿಷಯವನ್ನು ಶೃತಿವಚನದಲ್ಲಿ ಹೇಳಲಾಗಿದೆ. ಅಸತ್ ಪದಾರ್ಥವು ಎಂದಿಗೂ ಸಹ ಸತ್ಯವಾಗುವುದಿಲ್ಲ. ಮೊಲ ಸಿಂಹ ಆಗುವುದು ಅಸತ್ಯ, ಅದು ಎಂದಿಗೂ ಸತ್ಯವಾಗುವುದಿಲ್ಲ, ಆದ್ದರಿಂದ "ಭಗವಂತನೇ ಈ ಜಗತ್ತು ಮುಂತಾದವು ಎಲ್ಲವನ್ನು ಅವನೇ ಆಗಿದ್ದಾನೆ"- ಈ ವಿಚಾರವು ಸರಿಯಾಗಿದೆ. "ಯದೆತಚ್ಚ ಅಂದರೆ ಈ ದೃಶ್ಯಮಾನ ಜಗತ್ತೂ ಸಹ ನಾನೇ ಆಗಿದ್ದೇನೆ", 'ಚ' ಕಾರದ ಪ್ರಯೋಗದಿಂದ ಯಾವ ಅವ್ಯಕ್ತವಿದೆಯೋ ಮತ್ತು ಅಪ್ರಸಿದ್ಧವಾದ ಕಾರಣ ಯಾವುದು ಉಳಿದಿದೆಯೋ, ಅದನ್ನೂ ಸಹ ತೆಗೆದುಕೊಳ್ಳಲಾಗಿದೆ, ಅಂದರೆ ಆ ಎಲ್ಲವೂ ಸಹ ನಾನೇ ಆಗಿದ್ದೇನೆ. ಇದರಲ್ಲಿ ಜೀವಿಯನ್ನೂ ಸಹ ಲೆಕ್ಕಿಸಲಾಗಿದೆ. 'ತ್ವಮೇತಚ್ಚ'- ಎಂಬ ಪಾಠದಿಂದ ಜೀವಿ-ಜಡ ರೂಪಿ ಸಮಸ್ತ ಜಗತ್ತೇ ನಾನೇ ಆಗಿದ್ದೇನೆ, ಎಂದು ಅರ್ಥ ಮಾಡಿಕೊಳ್ಳಬೇಕು. ಇದು ಮುಖ್ಯ ಬ್ರಹ್ಮ ವಾದ.

ಪದಾರ್ಥಗಳ ಸ್ಥಿತಿ ಮತ್ತು ಶಬ್ದದ ಆಧಾರದಲ್ಲಿ ವಿರೋಧ ಉಂಟಾದರೆ ಶಬ್ದವು ಯಾವ ರೀತಿ ಆಧಾರಿತವಾಗುತ್ತದೆ? ಎಂದು ಈ ರೀತಿಯಾದ ಪ್ರಶ್ನೆಯನ್ನು ಕೇಳುವುದಾದರೇ, ಅದಕ್ಕೆ ಉತ್ತರದಲ್ಲಿ ಹೇಳುತ್ತಾರೆ, ಆದ್ದರಿಂದ 'ಅಹಮೇವಾಸಮೇವಾಗ್ರೆ'- ಈ ಶಬ್ದದ-ಆಧಾರವೂ ಸಹ ಆಧಾರವಾಗಲಾರದು. ಅರ್ಥಾತ್ ಶ್ರೀಭಗವಂತನು ಸರ್ವ ದೋಷ ರಹಿತನಾಗಿದ್ದಾನೆ ಮತ್ತು ಜಗತ್ತಿನಲ್ಲಿ ಒಳಗೊಂಡ ವಿಕಾರ ಇತ್ಯಾದಿ ದೋಷಗಳುಂಟು. ಜಗತ್ತನ್ನು ಭಗವಂತನೆಂದು ನಂಬುವುದರಿಂದ ಭಗವಂತನಲ್ಲಿ ದೋಷ ಉಂಟಾಗಬಹುದು. ಮತ್ತೊಂದು ಆಪತ್ತು ಇದಾಗಬಹುದೇನೆಂದರೆ ಯಾವಾಗ ಸರ್ವ ಅಂದರೆ ನಿಸಂಕೋಚವಾಗಿ ಸಂಪೂರ್ಣ ವಿಶ್ವವನ್ನು ಬ್ರಹ್ಮ ಎಂದು ಒಪ್ಪಿಕೊಳ್ಳಲಾಗುವುದೋ ಆಗ ಉಪದೇಶ ನೀಡಲು ಯೋಗ್ಯರಾದವರು ಯಾರೂ ಸಹ ಇರುವುದಿಲ್ಲ. ಅಥವಾ ಯಾವಾಗ ಸಮಸ್ತವು ಭಗವಂತನು ಎಂದಾಗುವುದೋ ಮತ್ತು ಯಾವಾಗ ಉಪದೇಶ ನೀಡುವವನೇ ಇರುವುದಿಲ್ಲವೋ ಆಗ ಶಾಸ್ತ್ರದ ಅಪೇಕ್ಷೆಯೂ ಇರುವುದಿಲ್ಲ, ಈ ಕಾರಣ ಶಾಸ್ತ್ರವು ನಾಶವಾಗುತ್ತದೆ. ಪ್ರಯೋಜನದ ಅಭಾವದಲ್ಲಿ ಒಳಿತು ಮಾಡದಿರುವ ದೋಷವೂ ಸಹ ಸರ್ವತ್ರ ಹಬ್ಬುತ್ತದೆ. ಎಲ್ಲರೂ ಭಗವಂತನಾಗಿ ಹೋದರೆ ಯಾವ ಒಬ್ಬ ಪುರುಷೋತ್ತಮನೂ ಇರುವುದಿಲ್ಲ. ಆದ್ದರಿಂದ ಅನೇಕ ದೋಷಗಳಿಂದ ದೂಷಿತವಾಗಿರುವ ಕಾರಣ ಈ ಬ್ರಹ್ಮವಾದವನ್ನು ಒಪ್ಪಿಕೊಳ್ಳಲು ಯೋಗ್ಯವಾದದ್ದಲ್ಲ.

ಈ ಪ್ರಕಾರದ ಆಶಂಕೆಗಳ ಉತ್ತರದಲ್ಲಿ ಹೇಳುತ್ತಾರೆ ಎಲ್ಲಿ ಮನುಷ್ಯನ ಪ್ರತ್ಯಕ್ಷ ಜ್ಞಾನವು ತಲಪುವುದಿಲ್ಲವೋ, ಅಲ್ಲಿ ಶೃತಿಯ ಹೇಳಿಕೆಯ ಅನುಸಾರವಾಗಿಯೇ

ಪದಾರ್ಥಗಳ ವ್ಯವಸ್ಥೆಯನ್ನು ಒಪ್ಪಿಕೊಳ್ಳಲು ಉಚಿತ. ವೇದದ "ತದೇ ಜತಿ ತನ್ನೇಜತಿ" ಇತ್ಯಾದಿ ವಚನಗಳಲ್ಲಿ ಒಬ್ಬನೇ ಬ್ರಹ್ಮನಲ್ಲಿ ಪರಸ್ಪರ ವಿರುದ್ಧ ಧರ್ಮವನ್ನು ಹೇಳಲಾಗಿದೆ, ಆದ್ದರಿಂದ ವೇದಾನುಯಾಯಿಗೆ ಒಂದೇ ಧರ್ಮದಲ್ಲಿ ವಿರುದ್ಧ ಧರ್ಮವನ್ನೂ ಸಹ ಒಪ್ಪಿಕೊಳ್ಳಲಾಗುವುದು, ಏಕೆಂದರೆ ಅವೇರಡೂ ಧರ್ಮವು ವೇದದ ಮುಕಾಂತರವೇ ವಿವರಿಸಲ್ಪಟ್ಟಿದೆ. ಅನುಕೂಲ ಧರ್ಮವು ಮುಖ್ಯವಾದದ್ದು ಮತ್ತು ವಿರುದ್ಧ ಧರ್ಮವು ಗೌಣ್ಯವಾದದ್ದು. ನಮ್ಮ ಬುದ್ಧಿಯಿಂದ ಮಾಡಲಾದ ವ್ಯವಸ್ಥೆಯು ಪ್ರಮಾಣವಾಗಲಾರದು, ಏಕೆಂದರೆ ಪ್ರತ್ಯಕ್ಷ-ಗಮ್ಯ ವಿಷಯದಲ್ಲಿ ಮಾತ್ರ ಮನುಷ್ಯ-ಬುದ್ಧಿಯ ವ್ಯವಸ್ಥೆ ನಡೆಯುತ್ತದೆ. ಬ್ರಹ್ಮ ಮತ್ತು ಬ್ರಹ್ಮನ ಧರ್ಮ ಪ್ರತ್ಯಕ್ಷ ಗೋಚರವಾಗುವುದಿಲ್ಲ, ಆದ್ದರಿಂದ ಈ ವಿಷಯದಲ್ಲಿ ಗೌಣ ಮತ್ತು ಮುಖ್ಯ ಭಾವದ ವಿಚಾರವನ್ನು ಯಾರು ಮಾಡುತ್ತಾರೆ? ಬ್ರಹ್ಮನ ವಿಷಯದಲ್ಲಿ ವಿಚಾರ ಮಾಡುವವರ ಬುದ್ಧಿಯು ಸರ್ವದಾ ವೇದದ ವಾಕ್ಯಗಳಲ್ಲಿಯೇ ಆಶ್ರಯ ಪಡೆದಿರುತ್ತದೆ.

'ಉದಿತೆ ಜಹೋತಿ' 'ಅನುದಿತೆ ಜಹೋತಿ', 'ಅತಿರಾತ್ರೆ ಷೋಢಶಿನಂ ಗೃಹ್ಣಾತಿ', 'ನಾತಿರಾತ್ರೆ ಷೋಢಶೀನಂ ಗೃಹ್ಣಾತಿ'- ಈ ವಿರುದ್ಧ ವಾಕ್ಯಗಳು ಯಾವ ರೀತಿ ಶಾಖಾಂತರ ಕರ್ಮವೆಂದು ತಿಳಿದು ವ್ಯವಸ್ಥೆ ಮಾಡಿಕೊಡಲಾಗಿದೆಯೋ, ಅದೇ ರೀತಿ ಈ ವಿಷಯದಲ್ಲೂ ಸಹ ಈ ಎಲ್ಲ ವಾಕ್ಯಗಳನ್ನು ಉಪಾಸನಾಪರವೆಂದು ತಿಳಿದು ಪ್ರಮಾಣದ ಸಮಾನವೆಂದು ಒಪ್ಪಿಕೊಳ್ಳಲಾಗಿ, ವಿರುದ್ಧ ಧರ್ಮವನ್ನು ಏತಕ್ಕಾಗಿ ಒಪ್ಪಿಕೊಳ್ಳಲಾಗುವುದು? ಎಂದು ಪ್ರಶ್ನಿಸುವುದಾದರೆ, ಅದಕ್ಕೆ ಉತ್ತರದಲ್ಲಿ ಹೇಳುತ್ತಾರೆ ಈ ವಚನಗಳನ್ನು ಉಪಾಸನಾಪರವೆಂದು ತಿಳಿದರೂ ಸಹ ವಿರುದ್ಧ ಧರ್ಮವನ್ನು ಮಿಥ್ಯ ಅಥವಾ ಉಪಾಧಿರೂಪದಲ್ಲಿ ತಿಳಿಯಲಾಗದು, ಏಕೆಂದರೆ ವೇದವು ಅದನ್ನು ವಿಶೇಷಕರ ಬ್ರಹ್ಮ ಹಾಗೂ ಸತ್ಯ ಎಂದು ತಿಳಿಯಲಾಗಿದೆ. ವಿರುದ್ಧ ಧರ್ಮವನ್ನು ಉಪಾಧಿರೂಪದಲ್ಲಿ ತಿಳಿಯುವುದರಿಂದ ಅಥವಾ ಕಲ್ಪಿತವೆಂದ ತಿಳಿಯುವುದರಿಂದ ಶೃತಿಗಳು ಅಪ್ರಾಮಾಣಿಕವಾಗುತ್ತದೆ ಮತ್ತು ಉಪಾಧಿಯನ್ನು ಬ್ರಹ್ಮನಿಂದ ಪೃಥಕವೆಂದು ಒಪ್ಪಿಕೊಂಡರೆ ದ್ವೈತವನ್ನು ಒಪ್ಪಿಕೊಂಡಿರುವುಂತಾಗುವುದು.

ಏನಾದರೂ ಉಪಾಧಿಯನ್ನು ಮಿಥ್ಯವೆಂದು ತಿಳಿದರೆ ಮತ್ತೆ ಅದು ವಿರುದ್ಧ ದರ್ಮ ಬ್ರಹ್ಮನಲ್ಲಿಯೇ ಸ್ಥಿತವಾದದ್ದೆಂದು ತಿಳಿಯಲಾಗುತ್ತದೆ. ಆದ್ದರಿಂದ ಶೃತಿಯನ್ನು ಸ್ವತಂತ್ರ ಪ್ರಮಾಣವೆಂದು ತಿಳಿದು ಇತ್ಯರ್ಥ ಮಾಡುವುದೇ ಸರಿ. 'ನಾತಿರಾತ್ರೆ' ಇತ್ಯಾದಿ ಪೂರ್ವದ ವಿರುದ್ಧ ಶೃತಿಗಳನ್ನೇ ಬಲವಾದ ಪ್ರಮಾಣವೆಂದು ತಿಳಿದು ಈ ರೀತಿ ಅಡ್ಡಗೋಡೆಯಂತೆ ವಿಕಲ್ಪ ಪಕ್ಷವೆಂದು ಅರ್ಥಮಾಡಿಕೊಳ್ಳಲಾಗಿದೆ ಹಾಗೂ ಇತ್ಯರ್ಥ ಮಾಡಲಾಗಿದೆ, ಅದೇ ಪ್ರಕಾರ ಇಲ್ಲೂ ಸಹ 'ತದೇಜತಿ' ಇತ್ಯಾದಿ ವೇದವಾಕ್ಯಗಳನ್ನು ಸ್ವತಂತ್ರ ಪ್ರಮಾಣವೆಂದು ತಿಳಿದು ಬ್ರಹ್ಮನನ್ನು ಸಮಸ್ತ ವಿರುದ್ಧ ಧರ್ಮಗಳ ಆಶ್ರಯವೆಂದು ಒಪ್ಪಿಕೊಳ್ಳಲೇಬೇಕು. ಮನುಷ್ಯನ ದೇಹದಲ್ಲಿರುವ ಹಸ್ತ ಇತ್ಯಾದಿ ಪ್ರತ್ಯೇಕ ಅಂಗಗಳು ಪರಸ್ಪರವಾಗಿ ವಿರುದ್ಧರೂಪದಲ್ಲಿರುತ್ತದೆ, ಆದರೂ ಪ್ರತ್ಯಕ್ಷ ಬಲದಿಂದ

ಅದನ್ನು ಒಬ್ಬ ಮನುಷ್ಯನೆಂದು ಒಪ್ಪಿಕೊಳ್ಳಲ್ಪಡುತ್ತದೆ. ಅದೇ ಪ್ರಕಾರವಾಗಿ ಶ್ರುತಿಯ ಬಲದಿಂದ ಬ್ರಹ್ಮನನ್ನೂ ಸಹ ವಿರುದ್ಧ ಧರ್ಮಗಳ ಆಶ್ರಯವೆಂದು ಒಪ್ಪಿಕೊಳ್ಳುವುದೇ ಸರಿ. ಭಗವಂತನು ತನ್ನ (ಭಗವಂತನ) ರೂಪದಲ್ಲಿ ಅವಸ್ಥಿತನಾಗಿದ್ದರೂ ಸಹ ಜಗದ್ರೂಪನಾಗುತ್ತಾನೆ– ಇದು ನಿಜ, ಏಕೆಂದರೆ ಶೃತಿಯ ಅನುಸಾರವಗಿ ಯಾವ ವಿಚಾರದಿಂದ ಯಾವುದೇ ಯೋಗ್ಯವಾದ ವಚನಗಳಿಗೆ ವಿರೋಧ ಮತ್ತು ಎಲ್ಲವನ್ನು ಸಮನ್ವಯವಾಗಿರುವುದೋ, ಅಂತಹ ವಿಚಾರವನ್ನೇ ವಿಚಾರವೆಂದು ಕರೆಯಲಾಗುತ್ತದೆ. 'ಯಃ ಸರ್ವಶಕ್ತಿ' ಇತ್ಯಾದಿ ವಚನಗಳಲ್ಲಿ ಶ್ರೀಭಗವಂತನನ್ನು ಸರ್ವಸಮರ್ಥನೆಂದು ಕರೆಯಲಾಗಿದೆ. ಈ ಸರ್ವಶಕ್ತಿತತ್ವವೇ ಶ್ರೋತ ನಿರ್ಣಯ. ಶ್ರೀಭಗವಂತನನ್ನು ಸರ್ವಶಕ್ತಿಸಂಪನ್ನನೆಂದು ಅರ್ಥಮಾಡಿಕೊಳ್ಳುವುದರಿಂದ ಎಲ್ಲ ವಿರುದ್ಧ ವಾಕ್ಯಗಳು ಮತ್ತು ಧರ್ಮಗಳ ವ್ಯವಸ್ಥೆಯು ತನ್ನಾತಾನೇ ಸರಿಯಾಗುತ್ತದೆ.

ಬ್ರಹ್ಮನ ಸ್ವರೂಪದಲ್ಲಿ ಏನೆಲ್ಲ ಅನ್ಯಥಾ ಗೋಚರವಾಗುತ್ತದೋ, ಅಂದರೆ ಏನೆಲ್ಲ ಶ್ರೇಷ್ಠ–ನೀಚ ಎಂಬ ಭೇದಭಾವ ಅರಿಯಲಾಗುತ್ತದೋ, ಆ ಎಲ್ಲ ಅರಿವು ಬ್ರಹ್ಮನೇ ಆಗಿದ್ದಾನೆ. ಅದನ್ನು ತೋರಿಸುವವನೂ ಸಹ ಭಗವಾನ್ ಶ್ರೀಹರಿಯೇ ಆಗಿದ್ದಾನೆ, ಏಕೆಂದರೆ ಶ್ರೀಹರಿಯ ಸ್ವರೂಪವೇ ಆ ರೀತಿ ಇದೆ. ನಾವು ನಮ್ಮ ದೃಷ್ಟಿಯಿಂದ ಈ ಜಗತ್ತಿನಲ್ಲಿ ಯಾವುದನ್ನೆಲ್ಲ ದೂಷಣೆ ಅಥವಾ ದೂಷಿತ ಪದಾರ್ಥಗಳು ಗೋಚರಿಸುತ್ತವೋ, ಅವೂ ಸ್ವಯಂ ಭಗವಾನ್ ಶ್ರೀಹರಿಯೇ ಆಗಿದ್ದಾನೆ. ಹಾಗಿದ್ದರೂ ಸಹ ಅವನು ನಿರ್ದೋಷ ಮತ್ತು ಸರ್ವಸಮರ್ಥನಾಗಿದ್ದಾನೆ.

ಎಷ್ಟು ವಿರುದ್ಧ ಪಕ್ಷಗಳಿವೆಯೋ, ಅವೇಲ್ಲವು ಈ ಪರಬ್ರಹ್ಮನಲ್ಲಿ ಶೋಭಿತವಾಗಿವೆ. ಇದರಿಂದಾಗಿ ಎಲ್ಲವೂ ಸುಂದರವಾಗುತ್ತದೆ. ಈ ರೀತಿಯಾಗಿ ಉತ್ಪತ್ತಿ, ಸ್ಥಿತಿ ಮತ್ತು ಪ್ರಳಯ ಈ ಮೂರು ಸ್ಥಿತಿಗಳಲ್ಲು ಒಬ್ಬನೇ ಬ್ರಹ್ಮನಿದ್ದಾನೆ. ಈ ಬ್ರಹ್ಮವಾದವನ್ನು ದೃಢಪಡಿಸಿ ಈಗ ಹೇಳುತ್ತಾರೆ "ಯೋಽವಶಿಷ್ಯೆತ ಸೋಽಸ್ಮ್ಯಹಮ್" ಅರ್ಥಾತ್ ಈ ಮೂರು ಸ್ಥಿತಿಗಳ ನಂತರ ಯಾವುದು ಉಳಿದಿರುತ್ತದೋ, ಅದೂ ಸಹ ನಾನೆ ಆಗಿದ್ದೇನೆ.

ಪ್ರಕಟಿತ ಎಲ್ಲ ವಿಷಯದಲ್ಲು ಗೋಪ್ಯವು ಪ್ರಾಪ್ತವಾಗುತ್ತದೆ. ಆದರೆ ಯಾವ ಗೋಪ್ಯವು ಇರುವುದಿಲ್ಲ ಅಥವಾ ಅಂತರಂಗವು ಯಾವುದರ ಆಶ್ರಯದಲ್ಲಿರುತ್ತದೋ ಅಥವಾ ಅಂತರಂಗವು ಯಾವುದರ ಅಂಶಭೇದದಲ್ಲಿದೆಯೋ, ಅದೂ ಸಹ ನಾನೇ ಆಗಿದ್ದೇನೆ. ಇದರಿಂದ ಎಲ್ಲ ಕ್ರಿಯೆಗಳು ಮತ್ತು ಅದರ ವಿಷಯವೂ ಸಹ ನಾನೇ ಆಗಿದ್ದೇನೆ– ಇದು ಜ್ಞಾಪಿತವಾಗುತ್ತದೆ.॥೩೨॥

ತಥ್ಯ–

ಓಂ ಆತ್ಮಾ ವಾ ಇದಮೇಕ ಏವಾಗ್ರ ಆಸೀನ್ನಾನ್ಯತ್ ಕಿಂಚನ ಮಿಷತ್ ।
ಸ ಐಕ್ಷತ ಲೋಕಾನ್ನು ಸೃಜಾ ।

(ಐತರೆಯ ಉಪ ೧/೧)

ಈ ವಿಶ್ವ–ಸೃಷ್ಟಿಯ ಮೊದಲು ಕೇವಲ ಪರಮಾತ್ಮನೊಬ್ಬನಿದ, ಅರ್ಥಾತ್ ಎಲ್ಲವೂ ಭಗವಂತನೊಂದಿಗೆ ಏಕೀಭೂತ (ಐಕ್ಯ) ವಾಗಿತ್ತು. ಆ ಸಮಯ ಬಹಿರಂಗ ಮಾಯಾಶಕ್ತಿ ಮತ್ತು ತಟಸ್ಥ ನಾಮಕ ಜೀವಶಕ್ತಿ ಪರಮಾತ್ಮನಲ್ಲಿಯೇ ಲೀನವಾಗಿತ್ತು ಮತ್ತು ಚಿತ್–ಶಕ್ತಿ ಸದಾ ಏಕಭಾವದಿಂದ ಅಂದರೆ ನಿತ್ಯ ರೂಪದಲ್ಲೇ ಲೀಲಾ ಸಂಪನ್ನವಾಗಿದ್ದಿತು. ಬಾಹ್ಯ ಕ್ರಿಯಾಯುಕ್ತ ಅನ್ಯಯಾವುದು ಸಹ ಇರಲಿಲ್ಲ. ಆದ್ದರಿಂದ ಆ ಸರ್ವಜ್ಞ ಪರಮಾತ್ಮನು ಅನಾದಿ–ಬಹಿರ್ಮುಖ ಜೀವಿಗಳ ಭೋಗಾದಿಗಳಿಗಾಗಿ ಸ್ವರ್ಗಾದಿ ಲೋಕಗಳನ್ನು ಸೃಷ್ಟಿಸಲು ವಿಚಾರ ಮಾಡಿದನು.

ಅಹಮೇಕಃ ಪ್ರಥಮಮಾಸಂ ವರ್ತಾಮಿ ಚ ಭವಿಷ್ಯಾಮಿ ।

(ಅಥರ್ವಾಶಿಖಾ)

ಕೇವಲ ನಾನೊಬ್ಬನೆ ಮೊದಲು ನೆಲಸಿದ್ದೆ, ಈ ಸಮಯವು ನೆಲಸಿದ್ದೇನೆ ಮತ್ತು ಅನಂತರವು ಸಹ ನೆಲಸಿರುತ್ತೇನೆ।

ಆತ್ಮೈವೇದಮಗ್ರ ಆಸೀತ್ ಪುರುಷವಿಧಃ, ಸೋಽನುವೀಕ್ಷ್ಯ
ನಾನ್ಯದಾತ್ಮನೋಽಪಶ್ಯತ್, ಸೋಽಹಮಸ್ಮೀತ್ಯಗ್ರೆ ವ್ಯಹರತ್ ।

(ಬೃ. ಆ. ಉ. ೧/೪/೧)

ಈ ವಿಶ್ವದ ಸೃಷ್ಟಿಯ ಪೂರ್ವದಲ್ಲಿ ಏಕಮಾತ್ರ ಪರಮಾತ್ಮನಿದ್ದನು. ಅವನು ಪುರುಷಾಕಾರದಲ್ಲಿ ಅವಸ್ಥಿತನಾಗಿದ್ದನು. ಆ ಪುರುಷನು ನಿರಂತರ ಎಲ್ಲೆಡೆ ನೋಡಿದರೂ ಸಹ ತನಗೆ ಅತಿರಿಕ್ತ ಅನ್ಯ ಯಾವುದೇ ವಸ್ತುವನ್ನು ನೋಡಲಿಲ್ಲ. ಆಗ ಅವನು ಎಲ್ಲದಕ್ಕಿಂತ ಮೊದಲು "ಕೇವಲ ನಾನೊಬ್ಬನಿದ್ದೇನೆ"– ಈ ವಾಕ್ಯವನ್ನು ಉಚ್ಚಾರ ಮಾಡಿದನು.

ಓಂ ಅಥ ಪುರುಷೋ ವೈ ನಾರಾಯಣೋಽಕಾಮಯತ ತತಃ ಪ್ರಜಾಸೃಜೆಯೇಸತಿ ಪ್ರಜಾ ಸೃಜೆಯೆರನ್. ನಾರಾಯಣಾದ್ ಬ್ರಹ್ಮ ಜಾಯತೆ. ನಾರಾಯಣಾದಿಂದ್ರಾ ಜಾಯಂತೆ ನಾರಾಯಣಾದ್ದ್ವಾದಶಾದಿತ್ಯಾ ರುದ್ರಾಃ ಸರ್ವಾ ದೇವತಾ ಸರ್ವೇ ಋಷಯಃ ಸರ್ವಾಣಿ ಭೂತಾನಿ ನಾರಾಯಣಾದೇವ ಸಮುತ್ಪದ್ಯಂತೆ ನಾರಾಯಣೆ ಪ್ರಲೀಯಂತೆ. ಅಥ ನಿತ್ಯೋ ದೇವ ಏಕೋ ನಾರಾಯಣೋ ಬ್ರಹ್ಮಾ ಚ ನಾರಾಯಣಃ ಶಿವಶ್ಚ ನಾರಾಯಣಃ ಶಕ್ರಶ್ಚ ನಾರಾಯಣಃ ಸರ್ವೇ ಋಷಯಶ್ಚ ನಾರಾಯಣಃ ಅಧಶ್ಚ ನಾರಾಯಣಃ ಉರ್ಧ್ವಶ್ಚ ನಾರಾಯಣಃ ಮೂರ್ತಾಮೂರ್ತಶ್ಚ ನಾರಾಯಣಃ ಅಂತರ್ಬಹಿಶ್ಚ ನಾರಾಯಣಃ । ನಾರಾಯಣಃ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಂ ॥

(ನಾರಾಯಣೋಪನಿಷತ್ ೧–೨)

ಭಗವಾನ್ ಶ್ರೀನಾರಾಯಣನು ನಿಶ್ಚಯವಾಗಿ ಎಲ್ಲರ ಶರೀರಗಳಲ್ಲಿ ಶಯನಿಸುವ ಅಂತರ್ಯಾಮಿ ಆತ್ಮ. ತದನಂತರ ಅವನು ಸಂಕಲ್ಪಿಸಿದನು– "ನಾನು ಜೀವಿಗಳನ್ನು ಸೃಷ್ಟಿಸುವೆ". ಆದ್ದರಿಂದ ಅವನು ಎಲ್ಲವನ್ನು ಸೃಷ್ಟಿಸಿದನು. ಶ್ರೀನಾರಾಯಣನಿಂದಲೇ

ಬ್ರಹ್ಮ, ಇಂದ್ರ ಮತ್ತು ಹನ್ನೆರಡು ಆದಿತ್ಯರು ಉತ್ಪನ್ನರಾದರು. ಹನ್ನೊಂದು ರುದ್ರ, ಸಮಸ್ತ ದೇವತೆಗಳು ಮತ್ತ ಋಷಿ ಮತ್ತು ಎಲ್ಲ ಪ್ರಾಣಿಗಳೂ ಸಹ ಶ್ರೀನಾರಾಯಣನಿಂದಲೇ ಉತ್ಪನ್ನವಾದರು ಮತ್ತೆ ಎಲ್ಲವು ಎಲ್ಲರು ಶ್ರೀನಾರಾಯಣನಲ್ಲಿಯೇ ಲೀನವಾಗುತ್ತಾರೆ.

ಒಬ್ಬ ಭಗವಾನ್ ಶ್ರೀಮನ್ನಾರಾಯಣನೇ ನಿತ್ಯ. ನಾರಾಯಣನೇ ಬ್ರಹ್ಮ. ಶಿವನೂ ಸಹ ನಾರಾಯಣನೇ ಆಗಿದ್ದಾನೆ. ನಾರಾಯಣನೇ ಇಂದ್ರ. ಎಲ್ಲ ಋಷಿಗಳೂ ಸಹ ನಾರಾಯಣನೆ. ಕೆಳಗೂ ನಾರಾಯಣ. ಮೇಲೆಯೂ ನಾರಾಯಣ. ಏನೆಲ್ಲ ಮೂರ್ತ (ಅಂದರೆ ರೂಪ ಧಾರಣೆ ಮಾಡಿರುವ) ಮತ್ತು ಅಮೂರ್ತ (ಅಂದರೆ ರೂಪ ಧಾರಣೆ ಮಾಡದಿರುವ), ಎಲ್ಲವೂ ನಾರಾಯಣನೆ. ಒಳಗೂ ಮತ್ತು ಹೊರಗೂ ಸಹ ನಾರಾಯಣನೆ. ಏನೇಲ್ಲ ಆಗಿದೆಯೋ ಮತ್ತು ಏನೆಲ್ಲ ಆಗುತ್ತಿರುವುದೋ ಮತ್ತು ಆಗಬಹುದಾದದ್ದು ಇದೆಯೋ, ಅವೇಲ್ಲವು ಭಗವಾನ್ ಶ್ರೀನಾರಾಯಣನೇ ಆಗಿದ್ದಾನೆ.

ಅಹಮಾದಿರ್ಹಿ ದೇವಾನಾಂ ಮಹರ್ಷೀಣಾಂಚ ಸರ್ವಶಃ ।

(ಶ್ರೀಗೀತ ೧೦/೨)

ಎಲ್ಲ ರೀತಿಯಿಂದಲೂ ನಾನೇ ದೇವತೆಗಳಿಗೆ ಮತ್ತು ಮಹರ್ಷಿಗಳಿಗೆ ಆದಿ ಕಾರಣನು.

ಯೋ ಮಾಮಜಾನಾದಿಂಚ ವೇತ್ತಿ ಲೋಕಮಹೇಶ್ವರಮ್ ।
ಅಸಮ್ಮೂಢಃ ಸ ಮರ್ತೇಷು ಸರ್ವಪಾಪೈಃ ಪ್ರಮುಚ್ಯತೆ ॥

(ಶ್ರೀಗೀ ೧೦/೩)

ಯಾವ ವ್ಯಕ್ತಿ ನನ್ನನ್ನು ಅನಾದಿ, ಜನ್ಮರಹಿತನು ಮತ್ತು ಎಲ್ಲ ಲೋಕಗಳ ಮಹೇಶ್ವರನ ರೂಪದಲ್ಲಿ ಅರಿಯುತ್ತಾನೋ, ಅವನು ಮನುಷ್ಯರಲ್ಲಿ ಮೋಹಶೂನ್ಯನಾಗಿ ಎಲ್ಲ ಪಾಪಗಳಿಂದ ವಿಮುಕ್ತನಾಗುತ್ತಾನೆ.

ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ ।
ಇತಿ ಮತ್ವಾ ಭಜನ್ತೇ ಮಾಂ ವುಧಾ ಭಾವಸಮನ್ವಿತಾಃ ॥

(ಶ್ರೀಗೀತ ೧೦/೮)

ನಾನು ಎಲ್ಲದರ ಉತ್ಪತ್ತಿಯ ಕಾರಣನು, ನನ್ನಿಂದಲೇ ಎಲ್ಲ ಕಾರ್ಯಗಳು ಪ್ರವೃತ್ತವಾಗುತ್ತದೆ– ಈ ಪ್ರಕಾರವಾಗಿ ಅರಿತುಕೊಂಡ ಬುದ್ಧಿವಂತ ವ್ಯಕ್ತಿಯು ಭಾವಯುಕ್ತನಾಗಿ ನನ್ನನ್ನು ಭಜಿಸುತ್ತಾನೆ.

ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ ।
ಅಹಮಾದಿಶ್ಚ ಮಧ್ಯಂಚ ಭೂತಾನಾಮನ್ತ ಎವ ಚ ॥

(ಶ್ರೀಗೀ ೧೦/೨೦)

ಹೇ ಗುಡಾಕೇಶ! ನಾನು ಎಲ್ಲ ಜೀವಿಗಳ ಹೃದಯದಲ್ಲಿ ಸ್ಥಿತನಾಗಿರುವ

ಅಂತರ್ಯಾಮಿಯಾಗಿದ್ದೇನೆ ಹಾಗೂ ನಾನೇ ಎಲ್ಲ ಜೀವಿಗಳ ಉತ್ಪತ್ತಿ, ಸ್ಥಿತಿ ಮತ್ತು ಪ್ರಳಯದ ಕಾರಣ.

ಶ್ರೀಲ ಭಕ್ತಿಸಿದ್ಧಾಂತ ಸರಸ್ವತೀ ಠಾಕುರ್ 'ಪ್ರಭುಪಾದ್'

'ವಸ್ತು'ವಿನ ಪರಿಚಯಕ್ಕಾಗಿ ನಾವು ದೇಶ ಮತ್ತು ಕಾಲದ ಸಹಾಯವನ್ನು ಗ್ರಹಿಸುತ್ತೇವೆ. ಯಾವ ಪಾತ್ರದ ನಿರ್ದೇಶಿಸಲಾಗುತ್ತದೆ, ದಿಶೆ, ದೇಶ ಹಾಗೂ ಕಾಲದ ಒಳಗೆ (ಅನುಸಾರವಾಗಿ) ಅದು ಎಲ್ಲಿ ಅವಸ್ಥಿತವಾಗಿದೆಯೋ, ಅದನ್ನು ನಿರೂಪಣೆ ಮಾಡುವುದು ಅವಶ್ಯಕವಾಗುತ್ತದೆ. ಭಗವತ್–ವಸ್ತು ಯಾವ ಕಾಲದಲ್ಲಿ ಉದಿತವಾಗುತ್ತದೆ, ಎಷ್ಟು ದಿನ ಅಸ್ತಿತ್ವದಲ್ಲಿರುತ್ತದೆ ಮತ್ತು ಅದು ಯಾವ ಕಾಲದಲ್ಲಿ ಅಪ್ರಕಟವಾಗುವುದು ಮುಂತಾದವುಗಳು ಕಾಲದ ಆಶ್ರಯವನ್ನು ಪಡೆದು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗುತ್ತದೆ. ಕಾಲವೇ ವರ್ತಮಾನದ ಪೂರ್ವವನ್ನು 'ಭೂತ'ಕಾಲ ಮತ್ತು ವರ್ತಮಾನದ ನಂತರವಾಗುವುದನ್ನು 'ಭಾವಿಷ್ಯ'ಕಾಲ ಎಂದು ಕರೆಯಲಾಗುತ್ತದೆ. ಭೂತ–ವರ್ತಮಾನ–ಭವಿಷ್ಯ– ಈ ಮೂರು ಪ್ರಕಾರದ ವಿಭಾಗವು ಸಾಧಾರಣವಾಗಿ ನಮ್ಮ ಆಧಾರದ ವಿಷಯವಾಗಿದೆ. ಪ್ರಾರಂಭ, ಸ್ಥಿತಿ ಮತ್ತು ಲಯ– ಪ್ರಕೃತಿಯ ಮೂರು ಪ್ರಕಾರದ ಗುಣಗಳ ಕ್ರಿಯೆ. ರಜೋಗುಣದಿಂದ ಪ್ರಾರಂಭ, ಸತ್ವಗುಣದಿಂದ ಸ್ಥಿತಿ ಮತ್ತು ತಮೋಗುಣದಿಂದ ವಿನಾಶ ಅಥವಾ ಲಯವಾಗುತ್ತದೆ.

'ಖಂಡ'ಕಾಲದ ಅತಿ ಸೂಕ್ಷ್ಮಾಂಶವು ನಿಮಿಷ, ಯಾವ ರೀತಿ ಕಾಷ್ಠ ಮತ್ತು ಪಲ ಇತ್ಯಾದಿಯ ಮೂಲಕ ಅಳೆಯಲಾಗುತ್ತದೆ. ವಿಪಲ, ಪಲ ಇತ್ಯಾದಿ ಸೂಕ್ಷ್ಮಕಾಲದಿಂದ ದಂಡ, ಅಹಃ(ದಿನ)–ರಾತ್ರಿ, ಮಾಸ, ವರ್ಷ, ಯುಗ, ಮಹಾಯುಗ, ಕಲ್ಪ, ಪರಾರ್ಧ ಮುಂತಾದ ಉತ್ತರೋತ್ತರ ಬೃಹತ್ ಖಂಡಕಾಲದ ಪ್ರಮಾಣ ಮಾಡಲಾಗುತ್ತದೆ. ಭಗವತ್–ವಸ್ತುವನ್ನು ಯಾವಾಗ ಖಂದಕಾಲದ ಅಂತರ್ಗತ ಪರಿಮಿತಿ ಮಾಡಲಾಗುತ್ತದೋ, ಆಗ ಅದು ಪ್ರಕೃತಿಯ ಅಧೀನ ವಸ್ತು–ವಿಶೇಷದಲ್ಲಿ ಪರಿಣಿತವಾಗಿಬಿಡುತ್ತದೆ. ಆದರೆ ಭಗವತ್–ವಸ್ತು ಪ್ರಾಕೃತವಲ್ಲ, ಆದಗ್ಯೂ ಖಂಡಕಾಲದ ಅಧೀನದಲ್ಲಿ ಅದರ ಹುಟ್ಟು, ಸ್ಥಿತ ಮತ್ತು ವಿನಾಶವಾಗುವುದಿಲ್ಲ. ಪ್ರಾಕೃತ ದೃಶ್ಯ ಜಗತ್ತಿನ ವಸ್ತುಗಳ ಅನ್ಯತಮ (ಶ್ರೇಷ್ಠತಮ) ಜ್ಞಾನದಿಂದ ಜೀವಿಯ ಮೂಲಕ ಭಗವಂತನನ್ನು ಮಾಯಿಕ ವಸ್ತು ಎಂದು ತಿಳಿಯುವುದು ಒಂದು ನೈಸರ್ಗಿಕ ಪ್ರವೃತ್ತಿಯಾಗಿದೆ. ಹರಿ–ವಿಮುಖ ಜಗತ್ತಿನದ್ದು ಇದೇ ರೀತಿ ಯಾದ ಸ್ವಭಾವ. ಕೃಷ್ಣೋನ್ಮುಖವಾದರೆ ಜೀವಿಯ ಈ ಪ್ರತಿಕೂಲ ಸ್ವಭಾವವು ದೂರವಾಗುತ್ತದೆ ಮತ್ತು ಆ ಶ್ರೀಭಗವಂತನು ಬ್ರಹ್ಮನಿಗೆ ತನ್ನ ಸ್ವರೂಪವನ್ನು ತಿಳಿಸುತ್ತ ಹೀಗೆ ಹೇಳುತ್ತಿದ್ದಾನೆ– "ನಾನು ಕಾಲ–ಗೋಚರವು ಉದಿತವಾಗುವ ಮೊದಲಿನಿಂದಲೂ ಅವಸ್ಥಿತನಾಗಿದ್ದೆ; ಕಾಲದ–ವಿಚಾರದಲ್ಲಿ ನಾನು ವರ್ತಮಾನ ಕಾಲದಲ್ಲಿದ್ದೇನೆ ಮತ್ತು ಕಾಲ–ವಿಚಾರವು ಗತಿಸಿದನಂತರ ಏನೆಲ್ಲ ಉಳಿದಿರುತ್ತದೋ– ಅದು ಸಹ ನಾನೆ. ನಾನು ಕಾಲದ ಮೂಲಕ ಸೀಮಿತ, ಮಾಯಿಕ, ನಶ್ವರ ವಸ್ತು–ವಿಶೇಷನಲ್ಲ. ನಾನು ನಿರ್ವಿಶೇಷವಾದಿಗಳ ಧಾರಣೆಯ

ಉಪಯೋಗಿ ಅಖಂಡ ಕಾಲಮಾತ್ರನಲ್ಲ, ಕಾಲಕ್ಕೂ ಸಹ ನಾನೆ ಆಶ್ರಯನು. ಕಾಲವು ನನ್ನನ್ನು ಸೀಮಿತಗೊಳಿಸಿ ಮಾಯಿಕ–ವಸ್ತು–ವಿಶೇಷದಲ್ಲಿ ಪರಿಣತವಾಗಲು ಅಸಮರ್ಥವಾಗಿದೆ, ಏಕೆಂದರೆ ಕಾಲ–ಧರ್ಮದಲ್ಲಿ ನಾನು ಆ ಶಕ್ತಿಯನ್ನು ಕೊಡಲಿಲ್ಲ. 'ನಾನು ಏನಾಗಿದ್ದೇನೆ'– ಅನ್ನುವುದರಲ್ಲಿ ಕಾಲಧರ್ಮವು ನನ್ನನ್ನು ಭೇದಿಸಲಾರದು".

'ದಿಕ್' (ದಿಶೆ) ಯಿಂದ ದೇಶ ನಿರೂಪಿತವಾಗುತ್ತದೆ. ಪೂರ್ವ ಮತ್ತು ಅದರ ವಿಪರೀತದ ನಂತರ, ದಿಕ್–ನಿರೂಪಣೆಯ ಮುಂತಾದವು ವಿಭಾಗವಾಗಿದೆ. ಸಮ್ಮುಖ, ಪ್ರಾಕ, ಅಗ್ರ ಇತ್ಯಾದಿ ಧಾರಣೆಯ ಮೂಲಕ ಪೂರ್ವ ದಿಕ್ಕು ನಿರೂಪಿತವಾಗುತ್ತದೆ ಮತ್ತು ಅದರ ವಿಪರೀತ ಅಥವಾ ಪ್ರತಿಕೂಲ ವೃತ್ತಿಯು ಪಶ್ಚಿಮ ದಿಕ್ಕಿನಲ್ಲಿ ಅಧಿಷ್ಠಿತವಾಗುತ್ತದೆ. ಪ್ರಾಕ್ (ಪೂರ್ವ) ಮತ್ತು ಪಶ್ಚಿಮ ದಿಕ್ಕುಗಳ ವಿಭಾಗವಾದರೆ ಮಾತ್ರ ದಕ್ಷಿಣ ಮತ್ತು ಉತ್ತರ ದಿಕ್ಕುಗಳ ಪರಿಚಯವು ಆವಶ್ಯಕ. ದಕ್ಷಿಣವನ್ನು ಪ್ರಾಥಮಿಕ–ಜ್ಞಾನದಲ್ಲಿ ನಿರೂಪಣೆ ಮಾಡುತ್ತ ಅನಂತರ ಉತ್ತರದ ಧಾರಣೆಯಾಗುತ್ತದೆ. ಕಾಲಗತ ವಿಚಾರವು ದೇಶ–ನಿರೂಪಣೆಯ ಭಾಷೆಯಲ್ಲಿ ನ್ಯೂನಾಧಿಯನ್ನು ಆಶ್ರಯಿಸುತ್ತದೆ. ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ ಇತ್ಯಾದಿಯೊಂದಿಗೆ ಕಾಲಗತ ಧಾರಣ ಸಂಬಂಧವಿಶಿಷ್ಟವಾದದ್ದು. ಪೂರ್ವ ಮತ್ತು ದಕ್ಷಿಣ ಹಾಗೇ ಎರಡು ದಿಶೆಯ ನಡುವೆ ಸ್ಥಿತವಾದ ಪ್ರದೇಶ 'ವಿದಿಕ್' ಹೆಸರಿನಿಂದ ಪ್ರಸಿದ್ಧವಾಗಿದೆ. ಆದ್ದರಿಂದ ಹಿಂದೆ ವಿವರಿಸಲಾದ ನಾಲ್ಕು ದಿಶೆಗಳ ಅಂತರದ ನಡುವಿನ ದಿಕ್ಕುಗಳು– ನಾಲ್ಕು ವಿದಿಶೆಗಳ ಹೆಸರಿನಿಂದ ಪ್ರಸಿದ್ಧವಾಗಿದೆ. ಈ ರೀತಿ ದಿಶೆ ಮತ್ತು ವಿದಿಶೆಗಳ ಸಂಖ್ಯೆ ಎಂಟು. ಇದಕ್ಕೆ ಅತಿರಿಕ್ತವಾಗಿ ದೇಶದ ಧಾರಣೆಯಲ್ಲಿ 'ಊರ್ಧ್ವ' (ಉಚ್ಚ) ಮತ್ತು 'ಅಧಃ' (ನಿಮ್ನ) ದೇಶ ವಿಚಾರದಿಂದ ದಿಶೆಗಳ ಸಂಖ್ಯೆ ಸಾಧಾರಣವಾಗಿ ಹತ್ತು ಎಂದು ಅರ್ಥಮಾಡಿಕೊಳ್ಳಲಾಗುತ್ತದೆ

ಖಂಡ ಅವಕಾಶದ (ಸ್ಥಾನದ) ಅಣುತ್ವ ವಿಚಾರದಿಂದ ತ್ರಸರೇಣು (ಅಂದರೆ ಸೂರ್ಯನ ಕಿರಣಗಳಲ್ಲಿ ವ್ಯಾಪ್ತವಾದ ಪರಮಾಣುವಿನ ಛತಗಳ ಅಂಶ–hexatom), ರೇಣು (೮–ತ್ರಸರೇಣು), ಯವ ಇತ್ಯಾದಿ ಸಂಜ್ಞೆಗಳು ಮಾನವ–ಧಾರಣೆಗೆ ಸಹಾಯ ಮಾಡುತ್ತದೆ. ಈ ಅಣುಪ್ರದೇಶವು ಸಂಪೂರ್ಣವಾಗಿ ವಿತಸ್ತಿ, ಕ್ರೋಶ, ಯೋಜನ ಇತ್ಯಾದಿ ಸಂಖ್ಯಾಗತ ಭಾವಗಳನ್ನು ಆಲಂಬಿಸಿ ವೃದ್ಧಿ ಪ್ರಾಪ್ತಗೊಳಿಸಿತ್ತ ಮಿತದಿಂದ ಪರಾರ್ಧದ ನಡುವೆ ಹೋಗಿ ಅನಂತದಲ್ಲಿ ಪ್ರವೇಶಿಸುತ್ತವೆ. ದಿಶೆಗಳ ಧಾರಣೆ ತ್ರಸರೇಣು–ಯೋಜನೆಯ ಸಮಾನವಲ್ಲ. ಪ್ರಮಾಣದ ಅವಕಾಶವನ್ನು ಪ್ರಧಾನ ಮಾಡುವ ಕಾರಣ ದಿಶೆಯನ್ನು 'ಆಕಾಶ' ಎಂದು ಕರೆಯಲಾಗುತ್ತಿದೆ. ಈ ಆವಕಾಶವೇ ದಿಶೆಗತ ಪರಿಮಿತಿಯಲ್ಲಿ ಬದ್ಧವಾಗಿದೆ. ದಿಶೆಗಳ ಸಂಖ್ಯಾಗತ ಪರಿಣಾಮವು ಸಾಧಾರಣವಾಗಿ ನಾಲ್ಕು ಭಾಗಗಳಲ್ಲಿ ವಿಭಾವಾಗಿದೆ ಹಾಗೂ ಇದರಲ್ಲಿ ಪ್ರತಿಯೊಂದನ್ನು ಮೂರು ಭಾಗವನ್ನಾಗಿ ಮಾಡಿದರೆ ಹನ್ನೆರಡು ಭಾಗಗಳಾಗುತ್ತದ್ದೆ. ಈ ಹನ್ನೆರಡು ಭಾಗಗಳಲ್ಲಿ ವೃತ್ತವನ್ನು ವಿಭಾಗ ಮಾಡಿದರೆ ಅದು 'ಚಕ್ರಾಕಾರ'ವು ನಿರ್ದಿಷ್ಟವಾಗುತ್ತದೆ. ಚಕ್ರದ ಸಂಸ್ಥಾನವೇ

ಕ್ರಮೇಣ ಹೆಚ್ಚಾಗುತ್ತ ಕ್ಷಿತಿ-ವೃತ್ತದವರೆಗು (ಎಲ್ಲಿ ಆಕಾಶ ಮತ್ತು ಭೂಮಿ ಸೇರಿರುವಂತೆ ಕಾಣಲ್ಪಡುತ್ತದೋ ಅಲ್ಲಿಯರೆಗು) ಹೋಗುತ್ತದೆ, ಎಲ್ಲಿಯವರೆಗು ನೋಡುವವನ ದೃಷ್ಟಿ ಲಕ್ಷಿಸಲಾಗುತ್ತದೋ ಅಲ್ಲಿಯವರೆಗು. ಆಕಾಶವು ಅನಂತವಾದದ್ದು ಮತ್ತು ಈ ಅನಂತತ್ವವನ್ನು ವಿಚಾರ ಮಾಡುತ್ತ ವೃತ್ತ-ವ್ಯಾಸಾರ್ಧವು (Diameter of a Circle) ಸ್ಥೂಲಭಾವದಿಂದ ೨೨/೭ ಆದರೂ ಸಹ ಅನಂತ ಸಂಬಂಧದಲ್ಲಿ ೨೨/೭ ಭಾಗದಷ್ಟು ಹೊರತಾಗಿ ಎಲ್ಲಿ ೨೨ ರಷ್ಟುಭಾಗ ಅನಂತವಿದೆಯೋ, ಅಲ್ಲಿ ೭ ರಷ್ಟು ಭಾಗದ ಪ್ರಮಾಣವೂ ಸಹ ಅನಂತವಾದದ್ದೇ ಎನ್ನಲಾಗಿದೆ.

ದೇಶ-ವಿಚಾರದಿಂದ ಭಗವತ್-ಧಾಮ, ಭಗವತ್-ಶರೀರ ಇತ್ಯಾದಿಯನ್ನು ಅಳೆಯಲು ಕುತೂಹಲ ಉಂಟಾದರೆ ಯಾವುದಾದರು ಸಾಂತ (ಸೀಮಿತ) ವಸ್ತುವನ್ನು ಮತ್ತು ಯಾವುದಾದರೂ ಅನಂತ (ಅಸೀಮ) ವಸ್ತುವನ್ನು ಭಗವಂತ ಎಂದು ನಿರ್ದಿಷ್ಟಗೊಳಿಸುತ್ತಾರೆ. ಪಕೃತಿಯ ಅಂತರಾಳದಲ್ಲಿ ಯಾವುದು ಮಿತ ಮತ್ತು ಅನಂತವು ನೆಲೆಸಿದಿಯೋ, ಅದರ ಮೂಲಕ ಭಗವತ್-ವಸ್ತು ವೈಕುಂಠದಲ್ಲಿ ಇದ್ದರೆ ಅದೇ ರೂಪದಲ್ಲಿ ಅಳೆಯಲು ಯೋಗ್ಯವಾದದ್ದಲ್ಲ. ಶ್ರೀಭಗವಂತನ ಆಧಾರ ಪ್ರಾಕೃತ ದಿಶೆ ಮತ್ತು ದೇಶದ ಸಮಾನ ಇಂದ್ರಿಯಗಳ ಮೂಲಕ ಗ್ರಹಿಸುವಂತಹ ವಸ್ತುವಲ್ಲ. ಇಂದ್ರಿಯಗಳು ಯಾವ ವಸ್ತುವನ್ನು ಗ್ರಹಿಸುತ್ತದೋ, ಅದನ್ನು 'ಸತ್' ಶಬ್ದದಿಂದ ಕರೆಯಲ್ಪಡುತ್ತದೆ ಮತ್ತು ಯಾವುದನ್ನು ಗ್ರಹಿಸಲು ಅಸಮರ್ಥ್ಯವಾಗಿದೆಯೋ, ಅದು 'ಅಸತ್' ರೂಪಧಾರಣೆ ಮಾಡುತ್ತದೆ. ಶ್ರೀಭಗವಂತನು ಪ್ರಾಕೃತ ಇಂದ್ರಿಯಗಳ ಮೂಲಕ ಗ್ರಾಹ್ಯ ಅಥವಾ ಪ್ರಾಕೃತ ಇಂದ್ರಿಯಗಳ ಮೂಲಕ ಅಗ್ರಾಹ್ಯ ನಿರ್ವಿಶೇಷ ವಸ್ತು ವಿಶೇಷನಲ್ಲ. ಅವನು ಇದಕ್ಕಿಂತಲೂ ಅತ್ಯಂತ ಶ್ರೇಷ್ಠ ವಸ್ತು. ಅವನಿಂದಲೇ ಇಂದ್ರಿಯ-ಜ್ಞಾನದಿಂದ ತಿಳಿಯಲ್ಪಡುವ ವಸ್ತುಗಳ ಕರ್ಮ-ಸತ್ವಗತ ಅಧಿಷ್ಠಾನ. ಆದ್ದರಿಂದಲೇ ಇಂದ್ರಿಯಗಳು ಸಮಸ್ತ ಕಾರಣಗಳ ಕಾರಣ, ವಸ್ತುವನ್ನು ಅಲಕ್ಷ್ಯಮಾಡಿ ತನ್ನ-ತನ್ನ ಪೃತಕ ಅಸ್ತಿತ್ವ ಸ್ಥಾಪನೆ ಮಾಡಲು ಅಸಮರ್ಥವಾಗಿದೆ. ಇಂದ್ರಿಯ-ಗ್ರಾಹ್ಯ ವಸ್ತು 'ಸತ್' ಅಥವಾ 'ಅಸತ್' ವಸ್ತು ಭಗವಂತನಲ್ಲ ಹಾಗೂ ಆ ವಸ್ತು ಭಗವಂತನಿಂದ ಸ್ವತಂತ್ರವೂ ಅಲ್ಲ. ಅದು ಭಗವತ್-ವಸ್ತುವೂ ಸಹ ಅಲ್ಲ, ಭಗವತ್-ವಸ್ತುವಿನಿಂದ ಅದಕ್ಕೆ ಸ್ವತಂತ್ರ ಅಸ್ತಿತ್ವವೂ ಸಹ ಇಲ್ಲ. ಇಂದ್ರಿಯ-ಜ್ಞಾನದಲ್ಲಿ ಏಕಕಾಲ ವಿರುದ್ಧ ಧರ್ಮಗಳ ಸ್ಥಾನ ಪ್ರಾಪ್ತಿಯಾಗುವುದಿಲ್ಲ. ಆದ್ದರಿಂದ ಪಾಕೃತ ಜಗತ್ತಿನಲ್ಲಿ ಭಗವತ್-ವಸ್ತುವನ್ನು ಮಾತ್ರ ಪಾಕೃತವೆಂದು ಒಪ್ಪಿಕೊಳ್ಳುವುದು ಸರಿಯಲ್ಲ, ಹಾಗೂ ಪಾಕೃತ ವಸ್ತು ಮಾತ್ರವು ಭಗವಂತನೊಂದಿಗೆ ಸಂಬಂಧವಿರುವುದಿಲ್ಲ- ಎಂದು ಹೀಗೆ ಯೋಚಿಸುವುದೂ ಸಹ ಯೋಗ್ಯವಾದದ್ದಲ್ಲ. ಆದ್ದರಿಂದ ಶ್ರೀಭಗವಂತನು ಬ್ರಹ್ಮದೇವರಿಗೆ ಹೀಗೆ ಉಪದೇಶ ನೀಡಿದ್ದಾರೆ- ಸಮಸ್ತ ದಿಶೆಗಳ-ದೇಶಗಳ ಆಶ್ರಯನಾದ ಭಗವಂತನು ದಿಶೆಗಳ ಮತ್ತು ದೇಶಗಳ ಮೂಲಕ ಪರಿಚಯನಾಗುವನಲ್ಲ. ಸಮಸ್ತ ಕಾಲ-ದೇಶದ ಅಪರಿಚಯಿತ್ವವನ್ನು ತಿಳಿಸಲೆಂದೇ ಯಾವ ಪಾತ್ರದ 'ಯಾವತ್ವ' (ಎಷ್ಟು ಆವಶ್ಯಕತೆ) ವಿವರಿಸಲಾಗಿದೆಯೋ, ಅದನ್ನು ಉಪದೇಶ ಮಾಡಲೆಂದೆ 'ಅಹಮೇವ' ಶ್ಲೋಕದ

ಪ್ರವೃತ್ತಿ.

ನಿರ್ವಿಶೇಷವಾದಿಗಳು ಯಾವ 'ಬ್ರಹ್ಮ' ಶಬ್ದದಲ್ಲಿ ಚೇತನದ ಪೂರ್ಣತೆಯನ್ನು ಆರೋಪಿಸುತ್ತಾರೋ, ಆ ಬ್ರಹ್ಮವಾದಿಗಳೆ ಪೂರ್ಣತೆಯ ಆರೋಪ ಮಾಡಲು ಹೋಗಿ ಚೇತನದ ವೈಶಿಷ್ಟ್ಯತೆಯನ್ನೇ ಧ್ವಂಸಮಾಡಿಬಿಡುತ್ತಾರೆ. ಅದ್ವಯಜ್ಞಾನದ ವೈಶಿಷ್ಟ್ಯಯು ಪರಿತ್ಯಕ್ತವಾಗುವುದರಿಂದ ಕೇವಲಾದ್ವೈತ–ವಿಚಾರವೇ ಉಳಿಯುತ್ತದೆ. ಕೇವಲಾದ್ವೈತವಾದಿ ಜಡಜಗತ್ತಿನಲ್ಲಿ ದ್ವೈತದ ಪರಿಚಯದ ನಿರೂಪಣೆಮಾಡುತ್ತ ಸಂಪೂರ್ಣ ಭೇದಗಳನ್ನು ನಿಷೇಧಗೊಳಿಸಲು ತಾತ್ಪರ್ಯದಲ್ಲಿ ಪ್ರವೃತ್ತನಾಗಿ ನಿರ್ವಿಶೇಷವನ್ನೇ ಭೇದ–ವಿರುದ್ಧ ಅದ್ವಯಜ್ಞಾನವನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಅವರು ಒಂದು ಬಾರಿಯೂ ಸಹ ಹೀಗೆ ವಿಚಾರಮಾಡುವುದಿಲ್ಲ– ಅಂತಹ ಭೇದರಹಿತ ಅದ್ವಯಜ್ಞಾನವು ಈ ಭೇದ–ಜಗತ್ತಿನದ್ದೆ ಒಂದು ಪ್ರಕಾರದಿಂದ ಭೇದಮಾತ್ರವು– ಅದು ವಾಸ್ತವಿಕವಾಗಿ ಅದ್ವಯಜ್ಞಾನವಲ್ಲ ಎಂದು ವಿಚಾರಮಾಡುವುದಿಲ್ಲ. ವಿಶೇಷರಹಿತವಾದಂತಯೇ ಯಾವ ಸ್ಥಿತಿ ಪ್ರಾಪ್ತವಾಗುತ್ತದೋ, ಅದೂ ಸಹ ವಿಶೇಷ–ವೈಶಿಷ್ಟ್ಯದ ಅನ್ಯ ಸ್ಥಿತಿ. ಆದ್ದರಿಂದ ನಿರ್ವಿಶೇಷವಾದದ ಉದ್ದೇಶವು ಎಲ್ಲಿಯವರೆಗು ಸಫಲತೆ ಪ್ರಾಪ್ತಿಸಿಕೊಂಡಿದೆ? ಇದರಿಂದ ಕುತರ್ಕದಲ್ಲಿ ಮುಳುಗಿ ವಾದಿಸುವ ಅದ್ವೈತವಾದಿಗಳು ತಮ್ಮ ಭ್ರಾಂತ ದ್ವೈತ–ತಿಳುವಳಿಕೆಯ ಮೂಲಕವೇ ಅದರ ಅಕರ್ಮಣತೆಯನ್ನು (ವ್ಯರ್ಥತೆಯನ್ನು) ಅರ್ಥಮಾಡಿಕೊಳ್ಳುತ್ತಾರೆ.

ಈ ದೃಶ್ಯಮಾನ ಜಗತ್ತಿನಲ್ಲಿ ಕಾಲ ಮತ್ತು ಆಕಾಶದ ಅಖಂಡ ಗೋಚರದ ಸಮಾನ ವಿಶೇಷರಹಿತವಾದರೆ (ನಿರ್ವಿಶೇಷವಾದರೆ) ಅಥವಾ ವಿಚಿತ್ರತಾ–ಜ್ಞಾಪಕ ಭಾವದ ತ್ಯಾಗಮಾಡಿದರೆ ಅದೂ ಸಹ ದೇಶ–ಕಾಲದಂತೆ ತೃತೀಯ (ವಸ್ತು) ಪಾತ್ರದ ರೂಪದಲ್ಲಿ ನಿರ್ದಿಷ್ಟವಾಗುತ್ತದೆ. ಜಡ ದೇಶ, ಕಾಲ ಮತ್ತು ಪಾತ್ರ ಪ್ರಕೃತಿಯಿಂದ ಪುಷ್ಟ ಜಡದ್ರವ್ಯವಿಶೇಷವಾಗಿದೆ. ಆದ್ದರಿಂದ ಯಾವ ವಸ್ತು ಸ್ವತಃ ಇಚ್ಛೆಯಿಂದ ಪ್ರೇರಿತವಾಗಿ ತನ್ನದೇ ಅಧಿಷ್ಠಾನವನ್ನು ಸ್ಥಾಪನೆ ಮಾಡಿಕೊಳ್ಳುವುದರಲ್ಲಿ ಅಸಮರ್ಥವಾಗಿದೆಯೋ, ಅದು ಜಡದ್ರವ್ಯವಿಶೇಷ ಅಚಿತ್ ಪದಾರ್ಥ ಅಥವಾ ಜಡದಂತೆ ಅದರ ಅಹಂಕಾರದ ಧಾರಣೆ ಇರುವುದಿಲ್ಲ. ಪ್ರಕೃತಿ ಸಂಪೂರ್ಣ ಜಗತ್ತಿನ ಏಕಮಾತ್ರ ಸಂತತಿ (ಜನ್ಮನೀಡುವ) ಆದಕಾರಣ ಅದೂ ಸಹ ಅದ್ವಯಜ್ಞಾನದ ಅಧಿಷ್ಠಾನದಲ್ಲಿ ತನ್ನ ಸ್ವಯಮತ್ವವನ್ನು ಸ್ಥಿರಪಡಿಸಿ ಅದರ ವಿಷಯವನ್ನು ವಿವರಿಸುವಲ್ಲಿ ಅಸಮರ್ಥವಾಗಿದೆ, ಆದ್ದರಿಂದ ಅದನ್ನು ಅಚಿತ್ ಪ್ರಕೃತಿ ಎನ್ನಲಾಗುತ್ತದೆ. ಚಿತ್– ಪ್ರಕೃತಿಯ ಅಧಿನಾಯಕ–ಸೂತ್ರದಿಂದ ಶ್ರೀಚೈತನ್ಯದೇವರು 'ನಾನು' ಎಂಬ ಶಬ್ದದ ಪ್ರಯೋಗವನ್ನು ಮಾಡುತ್ತಾರೆ, ಅದರ ಮೂಲಕ ಅದನ್ನು ಅಚಿತ್–ವಸ್ತು ಮತ್ತು ಅದ್ವಯಜ್ಞಾನದ ಅತಿರಿಕ್ತ ವಸ್ತುವಿನ ರೂಪದಲ್ಲಿ ಒಪ್ಪಿಕೊಳ್ಳಲಾಗುವುದಿಲ್ಲ.

ಪ್ರಸ್ತುತ ಶ್ಲೋಕದಲ್ಲಿ ಯಾವ 'ಅಹಂ' ಶಬ್ದದ ಪ್ರಯೋಗ ಮಾಡಲಾಗಿದಯೋ, ಅದು ಸ್ಪಷ್ಟಪಡಿಸುವುದೇನೆಂದರೆ ಆ 'ಅಹಂ' ಪದದ ವಕ್ತಾರನು 'ಮೂರ್ತ' ಅಥವಾ

ರೂಪವಿಶಿಷ್ಟನಾಗಿದ್ದಾನೆ. 'ಮೂರ್ತ' ಎಂದು ಕರೆಯುವುದರಿಂದಲೇ ಅವನು ಪ್ರಕೃತಿಗೆ ಒಳಗೊಂಡ ನಶ್ವರರೂಪ ವಿಶಿಷ್ಟ ಇಂದ್ರಿಯ–ಗ್ರಾಹ್ಯ ದೃಶ್ಯ ಪದಾರ್ಥನಲ್ಲ. ಅವನು ಅಧೋಕ್ಷಜ ಮೂರ್ತ (ರೂಪ), ಅಕ್ಷಜ (ಇಂದ್ರಿಯ–ಗ್ರಾಹ್ಯ) ರೂಪದೊಂದಿಗೆ ಸಮಸ್ತ ವಿಷಯಗಳಲ್ಲಿ ಅವನ ಸಾದೃಶ್ಯವಿದ್ದರೂ ಸಹ ಅವನು ಅಕ್ಷಜ ರೂಪನಲ್ಲ, ಆದರೆ ನಿತ್ಯ ಮೂರ್ತನು. ಹಾಗೂ ಕಾಲದ ಮೂಲಕ ಕ್ಷುಬ್ಧ, ಅನಿತ್ಯ, ಅಮೂರ್ತ ದಿಶೆಗಳಲ್ಲಿ ವಿಭಾಗವಾದ ವಸ್ತುವಿನೊಂದಿಗೆ ವಿಲಕ್ಷಣ ಧರ್ಮ ವಿಶಿಷ್ಟನಾಗಿದ್ದಾನೆ. ಆದ್ದರಿಂದ ಪ್ರಸ್ತುತ ಶ್ಲೋಕದಲ್ಲಿ ಸಮಸ್ತ ಆಕಾರಗಳಲ್ಲಿ ಹಾಗೂ ಸಮಸ್ತ ಅಂಶಗಳ ಅಂಶ ಸ್ವರೂಪನಾದ ಭಗವಂತನ ಯಾವ ರೂಪವು ನಿರ್ದಿಷ್ಟವಾಗಿದೆಯೋ, ಅದು ಸೀಮಿತವಾದ ಜಡ ರೂಪದಿಂದ ವಿಲಕ್ಷಣವಾದದ್ದು– ಇದನ್ನು ತಿಳಿಸಲೆಂದೆ ಅವನ ವಿಶೇಷ ರೂಪವನ್ನು ವಿವರಿಸಲಾಗಿದೆ. ಭಗವಂತನು ಎಲ್ಲರ ಹಾಗೂ ಎಲ್ಲದರ ಆಶ್ರಯವಾದ ಕಾರಣ ಪ್ರಾಕೃತ–ಗುಣ ವಿಶೇಷಗಳಿಂದ ಪೃಥಕನಾಗಿ ಅನಂತಗುಣ ವಿಶೀಷ್ಟನಾಗಿದ್ದಾನೆ. ಅವನು ಅನಂತ ರೂಪಗಳ ರೂಪ ಮತ್ತು ಅನಂತ ಗುಣಗಳ ಗುಣ ವಸ್ತುವಾಗಿದ್ದಾನೆ. ಅವನು ಅನಂತ ನಶ್ವರ ಕರ್ಮಗಳ ಕರ್ತನಿಂದ ವಿಲಕ್ಷಣನಾಗಿ ಆತ್ಮ–ಕರ್ಮದ ಕರ್ತನು. ಅವನ ಪ್ರತಿಷ್ಠೆ, ಅವನ ಸಂಜ್ಞೆ (ನಾಮ), ಅವನ ರೂಪ, ಗುಣ ಮತ್ತು ಲೀಲೆಗಳು ಭಿನ್ನವಾದ ಸಾಧಾರಣ ವೃತ್ತಿ–ವಿಶೇಷಕ್ಕೆ ಸಮಾನವಾಗಿ ಕಂಡುಬಂದರೂ ಸಹ ಅವನು ಪ್ರಾಕೃತ ಧಾರಣೆಯಿಂದ ವಿಲಕ್ಷಣನಾಗಿದ್ದಾನೆ. ಅವನ ಇಂತಹ ವಿಲಕ್ಷಣತೆಯ ನಿರ್ದೇಶವು ಅಕ್ಷಜ ಮಾಯಿಕ–ವೃತ್ತಿಯ ಮೂಲಕ ಅಸಂಭವವಾದದ್ದು.

ಆದ್ದರಿಂದ ಮಾಯೆ ಯಾವ ವಸ್ತು ಹಾಗೂ ಆ ಒಂದು (ಅದ್ವಿತೀಯ) ವಸ್ತುವಿನೊಂದಿಗೆ ಮಾಯೆಯ ಸಂಬಂಧವೇನು'– ಇದನ್ನು ತಿಳಿಸಲೆಂದೆ ಆ ಒಂದು ವಸ್ತುವಿನೊಂದಿಗೆ ವಸ್ತುವಿನ ಮಾಯೆಯ ವೈಶಿಷ್ಟ್ಯತೆಯನ್ನು ಸ್ಥಾಪನೆ ಮಾಡಲೆಂದೇ 'ಋತೇಽರ್ಥಂ' ಶ್ಲೋಕದ ಅವತರಣಿಕೆಯಾಗಿದೆ. ಮಾಯಿಕ ಧಾರಣೆಯಲ್ಲಿ ಲಬ್ಧವಾದ ಕ್ರಿಯೆಯ ವಿಪರೀತ ಅಧೋಕ್ಷಜ ಧರ್ಮ ಮತ್ತು ಆ ಧರ್ಮದಲ್ಲಿ ಅಧಿಷ್ಠಿತ 'ಅಹಂ' ವಸ್ತು ವೈಕುಂಠ. ಮಾಯಿಕ ಧರ್ಮದ ವಿಸ್ತಾರದಿಂದ ಪೂರ್ಣ ಪ್ರಕೃತಿಯ ಮೂಲಕ ಪೂರ್ಣಪುರುಷನ ಅನುಭವವನ್ನು ಸವಿದರೆ ಮಾಯಾ–ಮೋಹಿತ ಜೀವಿ ಪೂರ್ಣವಸ್ತುವಿನ ದರ್ಶನದಿಂದ ವಂಚಿತವಾಗುತ್ತದೆ. ಮಾಯೆಯ ಭೋಕ್ತ ಜೀವಿ ಯಾವ ಪ್ರಾಕೃತ 'ಅಹಮ್' ಜ್ಞಾನದಿಂದ ವಿಮೂಢವಾಗಿರುತ್ತದೋ, ಅದು ಅವನ ತನ್ನ 'ಅಹಂ'ನ ಜಡಭೋಗ ಕಾಮನೆಯಾಗಿರುತ್ತದೆ, ಆದ್ದರಿಂದ ಆ ಜೀವಿ ಅಹಂಕಾರ–ತತ್ವದ ರೂಪದಲ್ಲಿ ತನ್ನನ್ನು ತಾನು ನಿರ್ದಿಷ್ಟಗೊಳಿಸುತ್ತಾನೆ. ಸ್ವರೂಪ–ವಿಸ್ಮೃತಿಯ ಫಲದಿಂದಲೇ ಜೀವಿ ತನ್ನನ್ನು ತಟಸ್ಥ ನಾಮದ ಮಾಯಾಶಕ್ತಿಯಿಂದ ಶ್ರೇಷ್ಠತೆಯನ್ನು ತಿಳಿಯದೆ ತನ್ನನ್ನು ತಾನು ಮಾಯಿಕ ವಿಚಾರದಿಂದ ಶಕ್ತಿವಂತನಾಗುವ ದುರಾಶೆಯನ್ನು ಪೋಷಣೆ ಮಾಡುತ್ತಾನೆ. ಅದು ಅವನ ತನ್ನ ವಿಷಯದಲ್ಲಿ ಗೌಣ ಪ್ರಾಪ್ತಿಮಾತ್ರವು. ಶಕ್ತಿವಂತನ ಶಕ್ತಿ, ಪರಮಾತ್ಮನ ಆತ್ಮ ಇತ್ಯಾದಿ ಶುದ್ಧ–ಧಾರಣೆಯಿಂದ

ರಹಿತನಾಗುವುದರಿಂದಲೇ ಜೀವಿ ತಮೋ–ಗುಣದ ಮೂಲಕ ಭ್ರಾಂತನಾಗಿ ಗೌಣ ಅರಿವಿಗಾಗಿ ಬಾಧ್ಯನಾಗುತ್ತಾನೆ. ಆ ಸಮಯದಲ್ಲಿ ಭಗವಂತನ ಸ್ವರೂಪ, ತದ್ರೂರವೈಭವ, ಜೀವಿ ಮತ್ತು ಪ್ರಧಾನ– ಈ ನಾಲ್ಕು ಪ್ರಕಾರದ ಭೇದಾಧಿಷ್ಠಾನದಲ್ಲಿ ದ್ವಂದ್ವ ಅಭೇದವಾದದ ಅಚಿಂತ್ಯತೆಯನ್ನು ಅವನು ಅರ್ಥಮಾಡಿಕೊಳ್ಳಲಾರ. ಅಚಿಂತ್ಯಭೇದಾಭೇದ–ತತ್ವದ ಅರಿವಿನ ಅಭಾವದಿಂದಲೇ ಜೀನಿ ಮಾಯಾಬದ್ಧನಾಗಿ ವಿವಿಧ ಪ್ರಕಾರದಿಂದ ಪತಿತನಾಗುತ್ತಾನೆ. ಇದರಿಂದ ಜೀವಿ ಈ ರೀತಿ ಪಥಭ್ರಷ್ಟನಾಗದಿರಲಿ, ಇದಕ್ಕಾಗಿ ಶ್ರೀಭಗವಂತನು ಬ್ರಹ್ಮನಿಗೆ ಈ ಎರಡು ಶ್ಲೋಕಗಳಲ್ಲಿ ತನ್ನ ಪರಿಚಯವನ್ನು ಹಾಗೂ ತನ್ನ ಮಾಯೆಯ ಪರಿಚಯವನ್ನು ಕೊಟ್ಟಿದ್ದಾನೆ. ಜೀವಿ ಮಾಯೆಯನ್ನು ತಟಸ್ಥವೆಂದು ತಿಳಿಯದೆ ಕೇವಲ 'ವೈಕುಂಠ'ದ ರೂಪದಲ್ಲೇ ಭಾವಿಸಿದರೆ, ಅದು ಹುಚ್ಚರ ಪ್ರಲಾಪ–ವಚನಕ್ಕೆ ಸಮಾನವಾದ ಕಾಲ್ಪನಿಕವಾಗುತ್ತದೆ.

'ಅಹಂ' ಶಬ್ದವಾಚ್ಯವು ಭಗವಂತನ ನಡುವೆ ಸ್ವರೂಪಾದಿ ಭೇದದಿಂದ ಅವನದ್ದೇ ಆದ ಯಾವ ಉಕ್ತ ನಾಲ್ಕು ಪ್ರಕಾರದ ಪ್ರಕಾಶಗಳುಂಟೋ, ಅದನ್ನು ಪರಸ್ಪರ ಒಂದೇ ವೃತ್ತಿಯಿಂದ ಯುಕ್ತವಾದದ್ದು ಎಂದು ಭಾವಿಸುವುದು ಮಾಯಾವಾದಿಗಳ ಧರ್ಮ.

ಮಾಯಾವಾದಿಗಳು ಜಡಜಗತ್ತಿನ 'ಅಹಂ'ನೊಂದಿಗೆ ಅಪ್ರಾಕೃತ ಭಗವಂತನ 'ಅಹಂ' ಸಮಾನವಾಗಿ ಭಾವಿಸುತ್ತಾರೆ. ಈ ಪ್ರಕಾರದ ಧಾರಣೆಯು ಶುದ್ಧ ದ್ವೈತ–ಜ್ಞಾನದ ವಿರುದ್ಧವಾಗಿದೆ. ಅದ್ವಯಜ್ಞಾನದಲ್ಲಿ ಸ್ಥಿತರಾದರೆ ಅವರು ಜಡವಿಚಿತ್ರ ಲೀಲಾಮಯ ಭೇದಾಭೇದ ವಸ್ತುವಿನ ಜಟಿಲತೆಯ ಚಿಂತಾ–ಧಾರೆಯಿಂದ ಮುಕ್ತರಾಗುತ್ತಾರೆ. ನಿರ್ವಿಶೇಷ–ಬ್ರಹ್ಮ ಎಂದಿಗೂ 'ಅಹಂ' ಶಬ್ದದಿಂದ ನಿರ್ದಿಷ್ಟವಾಗುವುದಿಲ್ಲ. 'ಅಹಂ' ಶಬ್ದದಿಂದ ನಿರ್ದಿಷ್ಟವಸ್ತು 'ತ್ವಂ' ಶಬ್ದವಾಚ್ಯ ವಸ್ತು (ಜೀವಿ) ಮತ್ತು 'ತತ್' ಶಬ್ದವಾಚ್ಯ ವಸ್ತುವಿನಿಂದ (ಪರಬ್ರಹ್ಮನಿಂದ) ತನ್ನ ವೈಶಿಷ್ಟ್ಯವನ್ನು ನಿತ್ಯಕಾಲವು ರಕ್ಷಿಸುತ್ತದೆ.

ಅಪ್ರಾಕೃತ 'ಅಹಂ' ಶಬ್ದವಾಚ್ಯ ಭಗವಂತನು ಪ್ರಾಕೃತ ಜಗತ್ತಿನ ವಸ್ತು–ವಿಶೇಷನಲ್ಲ, ಆದ ಕಾರಣ ಜನ್ಮ–ಸ್ಥಿತ–ಭಗ್ನಾದಿಯ ಅಧೀನನಲ್ಲ. ಹಿಂದೆ ವಿವರಿಸಿದ ಚಿನ್ಮಯ ಪಾತ್ರ ಕಾಲಾತೀತ ಮತ್ತು ಅಚಿತ್–ಅನುಭವದ ಅತೀತ ಸ್ಥಿತಿ (ಕ್ರಿಯೆ)ಯಾಗಿದ್ದಾನೆ. ಸ್ವಯಂ ತಾನು ಅಚಿತ್ ಅನುಭವಕ್ಕೆ ಅತೀತನೆಂದು ತಿಳಿಸಲೆಂದು ಅವನು ಅಧೋಕ್ಷಜ ಹಾಗೂ ಕಾಲಾತೀತ ರೂಪದಲ್ಲಿ ನಿತ್ಯಕಾಲ ಸ್ಥಿತನಾಗಿರುತ್ತಾನೆ, ಅಥವಾ ಸನಾತನನಾಗಿದ್ದಾನೆ. ಪ್ರಾಕೃತ ಧಾರಣೆಯ ಅಂತರ್ಗತವಾಗಿ ಅವನ ಸ್ಥಾನವಿಲ್ಲ, ಆದ್ದರಿಂದ ಅವನು 'ವೈಕುಂಠ'ನಾಗಿದ್ದಾನೆ. ಅವನ ಅಧೋಕ್ಷಜತ್ವ, ಸನಾತನತ್ವ ಹಾಗೂ ವೈಕುಂಠತ್ವವು ಮಾಯವಾದಿಗಳ ವಿಚಾರದಿಂದ ಅವು ನಿತ್ಯವೂ ಪೃಥಕವಾಗಿರುತ್ತದೆ. ನಿರ್ವಿಶೇಷವಾದಿಗಳಿಗೆ ಅವನ ವಿಶೇಷ–ಧರ್ಮವನ್ನು ಎಲ್ಲ ಸಮಯದಲ್ಲು ಅಪಮಾನ ಅಥವಾ ಉಪೇಕ್ಷೆ ಮಾಡಲಾಗುವುದಿಲ್ಲ. ನಿರ್ವಿಶೇಷವಾದಿಗಳು ಕೆಲವೊಮ್ಮೆ ಅವನ ಸೀಮಿತ, ಪ್ರಾಕೃತ ಕಲ್ಪನೆಯ ಮೂರ್ತಿಯನ್ನು ತಮ್ಮ ಕಾಮನೆಗಳ ತೃಪ್ತಿಗಾಗಿ ಕರ್ತೃಸತ್ವಗತ

(Doer) ಅಧಿಷ್ಠಾನರಹಿತವಾಗಿ ಅರ್ಥಮಾಡಿಕೊಳ್ಳುತ್ತಾರೆ ಮತ್ತು ಕೆಲವೊಮ್ಮೆ ಅಜ್ಞಾನಯುಕ್ತರಾಗಿ ಲೋಕ ವಂಚನೆಯ ಉದ್ದೇಶದಿಂದ ಸ್ವೀಕಾರ ಮಾಡಲೆಂದು ಹೊಣೆಗಾರರಾಗುತ್ತಾರೆ. ನಿರ್ವಿಶೇಷವಾದಿಗಳು ಆಗಾಗ ಹೇಳುವುದೇನೆಂದರೆ ನಿರ್ವಿಶೇಷ-ವಸ್ತು ಮಿಥ್ಯ ಆರೋಪವಶದಿಂದ ತನ್ನ ರೂಪದ ಕಲ್ಪನೆ ಮಾಡಿಕೊಂಡು ಸಾಧಕರಿಗೆ ಸಹಾಯ ಮಾಡುತ್ತದೆ ಹಾಗೂ ನಿರ್ವಿಶೇಷದ ಪರದೆಯಲ್ಲೇ ಸಮಸ್ತ ಜಡವಿಶೇಷ ಧರ್ಮದಲ್ಲೇ ಸ್ಥಿತವಾಗಿರುತ್ತದೆ. ಈ ಕಥನವೇ ಆ ಜಡ ನಿರ್ವಿಶೇಷವಾದಿಗಳ 'ಕೂಪ-ಮಂಡೂಕ' ಧರ್ಮವನ್ನು ನಿರ್ಧಿಷ್ಟಗೊಳಿಸುತ್ತದೆ. ಇಂತಹ ಧರ್ಮವನ್ನು ತ್ಯಾಗಮಾಡಿದರೆ ಮಾತ್ರ ಅನರ್ಥವು ದೂರವಾಗುತ್ತದೆ ಮತ್ತು ಆಗಲೇ ಶ್ರೀಭಗವಂತನ ನಿತ್ಯಸ್ವರೂಪದ ಸಾಧನೆಮಾಡಲಾಗುತ್ತದೆ.

ಶ್ರೀಭಗವಂತನ ಸ್ವರೂಪ ಜಡನಿರ್ವಿಶೇಷ ಅಥವಾ ಜಡಸವಿಶೇಷವಲ್ಲ ಮತ್ತು ಕಾಲ-ದೇಶದ ಮೂಲಕ ವಿಭಾಗವಾಗುವ ಮಾಯಿಕ ವಸ್ತುಮಾತ್ರವೂ ಅಲ್ಲ. ಶ್ರೀಭಗವಂತನು ಅಪ್ರಾಕೃತ ವಸ್ತು, ಆದ್ದರಿಂದ ಪ್ರಾಕೃತ ಕಾಲಧರ್ಮವು ಅವನಲ್ಲಿ ಆರೋಪವಾಗುವುದಿಲ್ಲ ಹಾಗೂ ಪ್ರಾಕೃತ ಸದ್ಧರ್ಮವು ಅರ್ಥಾತ್ ಕಾಲಾಧೀನ ನಶ್ವರ ಅಧಿಷ್ಠಾನವೂ ಸಹ ಅವನಲ್ಲಿ ಆರೋಪಿಸಲಾಗುವುದಿಲ್ಲ. ಅವನ ವಿಶೇಷ ಆಕಾರವು ಚಿದಾನಂದಾಕಾರವಾದ ಕಾರಣ ಅವನಲ್ಲಿ ಪ್ರಾಕೃತ ಜಡಭಾವ ಅರೋಪಿಸಲಾಗದು. ಅವನನ್ನು ಕಾರಣರೂಪದಲ್ಲಿ ಪ್ರಾಕೃತ 'ಅಸತ್' ಎಂದೂ ಸಹ ಹೇಳಲಾಗದು. ರೂಪಾದಿ ಪ್ರಾಕೃತ ಸ್ಥೂಲ ಆಕಾರದಲ್ಲಿ ಮತ್ತು ಅರೂಪಾದಿ ಪ್ರಾಕೃತ ನಿರಾಕಾರದಲ್ಲಿಯೂ ಸಹ ಅವನು ಬದ್ಧನಾಗಿಲ್ಲ. ಅವನು ಜಡಾಕಾರ ಹಾಗೂ ಜಡರೂಪಕ್ಕೆ ಅತೀತ ಚಿನ್ಮಯ ಆಕಾರದಿಂದ ಯುಕ್ತನಾಗಿದ್ದಾನೆ ಹಾಗೂ ಚಿದ್ದೇಶದಲ್ಲಿ ನೆಲಸಿದ್ದಾನೆ. ಚಿದ್ದೇಶದ ಸಮಗ್ರತೆಯು ಅವನ ಅಂಶವಿಶೇಷ. ಮೂರುವರೆ ಕೈಗಳ ವಿಶಿಷ್ಟ ಅಪ್ರಾಕೃತ ಚಿತ್-ವಿಗ್ರಹದ ಅಣುವಿನಿಂದ ವ್ಯಾಪಕವಾದ ವೈಕುಂಠವು ಪರವ್ಯೋಮ ಪ್ರಕಟಿತವಾಗಿದೆ. ಅಚಿತ್-ಪರಮಾಣುವಿನ ಸಮಷ್ಟಿ ಯಾವ ರೀತಿ ಅಚಿತ್ ಬ್ರಹ್ಮಾಂಡವನ್ನು ಪ್ರಕಾಶಿತಗೊಳಿಸುತ್ತದೋ, ಅದೇ ರೀತಿ ಅಚಿತ್ ಧರ್ಮವನ್ನು ಅಲ್ಲಿ ಆರೋಪಿಸಲಾಗುವುದಿಲ್ಲ. ಯಾವ ರೀತಿ ಮೂರ್ಖನ ಸ್ವಾಧೀನತೆಯ ಅಭಾವದಿಂದ ಉಪಾಂತಕವಿಲ್ಲದ ರಾಜ್ಯದಲ್ಲೂ ಸಹ ಕಳವಳ ಉಂಟಾಗುತ್ತದೆ, ಅಮಿಶ್ರವಾದ ಮನಸ್ಸಿನಲ್ಲಿ ಹಾಗೆ ಮನಸ್ಸಿನ-ಕಳವಳವು ಉಂಟಾಗುವುದಿಲ್ಲ ಹಾಗೂ ಆ ರೀತಿಯಾಗುವ ಸುಯೋಗವೂ ಸಹ ಇಲ್ಲ. ತ್ರಿಗುಣತಪ್ತ ಅವಿಧ್ಯಾಗ್ರಸ್ತ ಜೀವಿಯ ತ್ರಿಗುಣಾಧೀನ ದಾಸ್ಯವು ಯಾವ ರೀತಿ ಹೇಯವಾಗುತ್ತದೋ, ಆ ರೀತಿಯಾದ ಹೇಯ-ಜ್ಞಾನದಲ್ಲಿ ಭಗವತ್-ಸೇವೆಗೆ ಸ್ಥಾನ ಪ್ರದಾನ ಮಾಡುವಾಗ ಜೀವಿಯ ಸ್ವಾಭಾವಿಕ ಆಸ್ತಿಕ್ಯ-ವೃತ್ತಿಯು ಉದಯವಾಗುವುದಿಲ್ಲ. ಬದ್ಧಜೀವಿಯ ಧಾರಣೆಯಲ್ಲಿ ಸ್ಥೂಲ ಮತ್ತು ಸೂಕ್ಷ್ಮದ ಅತೀತ ಸಮಸ್ತ ಕಾರಣಗಳ ಕಾರಣವಾದ ಬ್ರಹ್ಮನ್ ಭಗವಂತನಿಂದ ಪೃಥಕವಾದದ್ದಲ್ಲ. ಬ್ರಹ್ಮ ಭಗವಂತನ ಅಸಮ್ಯಕ್ ಪ್ರಕಾಶವಾದದ್ದು. ಭಗವಂತನಿಂದ ಬ್ರಹ್ಮನ್ ಪೃಥಕವಲ್ಲ, ಆದರೆ ಸತ್-ಅಸತ್ ಇವುಗಳಿಂದ

ಪೃಥಕವಾಗಿದೆ. ಭಗವಂತನಿಂದಲೇ ಬ್ರಹ್ಮನ ಪ್ರತಿಷ್ಠೆ ಇರುವುದು.

'ಅಹಂ' ಶಬ್ದದಿಂದ ಪರಮಾತ್ಮನ ಅಂತರಾಳದಲ್ಲಿ (ಒಳಗೆ) ಜೀವಾತ್ಮಗಳ ಜನನವಾಗುತ್ತದೆ. ವಿಚಾರದ ದೃಷ್ಟಿಯಿಂದ ಅಚಿತ್ ಜಗತ್ತಿನಿಂದ ಜೀವಾತ್ಮ ಅಥವಾ ಬ್ರಹ್ಮ ಚೇತನವು ಬೃಹತ್ತಾಗಿದೆ. ಪ್ರಕೃತಿ ಜಡ. ಈಶ್ವರ ಮತ್ತು ಜೀವಿಯು ಚೇತನ-ಧರ್ಮಯುಕ್ತವಾದ ಕಾರಣ ಅದು ವಿಜಾತೀಯ ಪ್ರಕೃತಿಯ ಪರಿಚಯದಿಂದ ಸ್ವತಂತ್ರ-ಧರ್ಮಯುಕ್ತ ಸಮಚೇತನ ಧಾರ್ಮಿಕವಾಗಿದೆ. ಒಂದು ಭಗವಂತ, ಪರಮಾತ್ಮ ಹಾಗೂ ಸ್ವಾಮಿ (ಪ್ರಭು) ಹಾಗೂ ಮತ್ತೊಂದು ಅಣು, ಜೀವಾತ್ಮ ಮತ್ತು ದಾಸ. ಒಂದೇ ಮರದಲ್ಲಿ ಕುಳಿತಿರುವ ಎರಡು ಪಕ್ಷಿಗಳು ಸ್ವಾಮಿ-ಸೇವಕ ಭಾವದಿಂದ ಸಿತ್ಥವಾಗಿದ್ದರು ಇದು ನಿತ್ಯ ಜಗತ್ತಿನಲ್ಲಿ ನಿತ್ಯ ನೆಲಸಿರುತ್ತದೆ, ಹಾಗೂ ಆ ಧರ್ಮದಿಂದ ಚ್ಯುತ ಅಣುಚಿತ್ ಜೀವಿಯ ವಿಜಾತಿಯತೆಯ ಬಿನ್ನತೆಯಲ್ಲಿ ಪತನವಾದರೆ ಆಗ ಅದು (ಜೀವಿ) ಸೇವ್ಯ (ಸ್ವಾಮಿ)-ವಿಮುಖತೆ ಅಥವಾ ಭೋಗ ಅಥವಾ ಕರ್ಮದಲ್ಲಿ ಪ್ರವೃತ್ತಿಯಾಗಿಬಿಡುತ್ತದೆ. ಭಗವತ್-ಸೇವಯ ಕರ್ಮವು ಅನಾದಿಯಾದದ್ದು. ಭಗವತ್-ಬಹಿರ್ಮುಖವು ವಿನಾಶಕ್ಕೆ ಯೋಗ್ಯವಾದದ್ದು. ಸೇವೋನ್ಮುಖತೆ ಹಾಗೂ ಬಹಿರ್ಮುಖತೆಯು ಅದ್ವಯ-ಬುದ್ಧಿ ಅಂದರೆ ಭಕ್ತಿಯಲ್ಲಿ ಬೃಹತ್ವ ಹಾಗೂ ಅಣುತ್ವ ಎನ್ನಲಾಗಿದೆ.

'ಅಹಂ' ಶಬ್ದದಲ್ಲಿ ಪರಿಕರಾದಿಗಳು ಒಳಗೊಂಡಿರುತ್ತವೆ. ಎಲ್ಲಿ 'ಅಹಂ' ಶಬ್ದ-ವಾಚ್ಯ ವಸ್ತುವಿನ ಸ್ವತಂತ್ರ ಇಚ್ಛೆಗೆ ವಿರುದ್ಧವಾದ 'ಅನಹಂ' ವಿಚಾರದಲ್ಲಿ ಅರಿವುಂಟಾಗುತ್ತದೋ, ಅಲ್ಲೇ ಪರಮಾತ್ಮಾಧೀನ ಜೀವಾತ್ಮನ ದುರ್ವೃತ್ತತೆ (ದುಶ್ಚರಿತ್ರತೆ) ಅಥವಾ ಸೇವಾವಿಮುಖತೆ ಅಥವಾ ಅನಾತ್ಮ-ಪರಿಚಯದ ಆಕಾಂಕ್ಷೆಯು ಕಾಣಿಸಲ್ಪಡುತ್ತದೆ. ಭಗವಂತ ಮತ್ತು ಜೀವಿ ಒಂದು ತಾತ್ಪರ್ಯದಲ್ಲಿ ಅದ್ವಯ ಜ್ಞಾನದಲ್ಲಿ ಸ್ಥಿತರಾಗಿದ್ದಾರೆ, ಆದ್ದರಿಂದ ಜೀವಿ ಕೃಷ್ಣದಾಸ. ಕೃಷ್ಣನ ಸೇವಾ ವಿಮುಖತೆಯೇ ಅವನನ್ನು (ಜೀವಿಯನ್ನು) ಬೇರ್ಪಡಿಸಿ ಅವನಲ್ಲಿ ಗುಣವ್ಯಕ್ತ ಜಗತ್ತಿನಲ್ಲಿ ಭ್ರಮಿಸಲು ಇಚ್ಛಿಸುವಂತೆ ಪ್ರೇರೇಪಿಸುತ್ತದೆ.॥೩೨॥

ಶ್ರೀನಿವಾಸಾಚಾರ್ಯಪಾದರು

ಅಹಮೇವ ಪೂರ್ವೋಕ್ತ-ಮಹಾನುಭಾವೋ ಗೋಪಾಲರೂಪೀ ಅಗ್ರೇ ಸರ್ವಲೋಕ ಮುಕುಟಮಣೌ ಶ್ರೀಗೋಲೋಕಾಖ್ಯೇ ಆಸಮೇವ ಶ್ರೀರಾಸಲೀಲಯಾ ವಿರಾಜಮಾನ ಏವಾವತಿಷ್ಠಮ್, ಅಸು ದೀಪ್ತೌ ಅತ್ರ । ನಾನ್ಯದಿತ್ಯಾದಿ-ಸತ್ ಸದ್ರಕ್ಷಾರ್ಥಮಸುರವಧಾದಿ, ಅಸತ್ ಪ್ರಾಕೃತ ದರ್ಶನಾದಿ, ಪರಂ ನಿಜಗೃಹಿಣೀಷು ಗೋಪೀಷು ಪರಕೀಯ-ಭಾವಮ್ । ತದೇವಂ ಮದ್ವಿನಾ (ಯತ್ ಏತಚ್ಚ) ಜಗದಾದಿಸರ್ವಂ ಕೇ ಕುರ್ವನ್ತಿ?- ತತ್ರಾಹ ಪಶ್ಚಾದಹಂ-ಸರ್ವಲೋಕಮೂಲೆ ಮೂಲಾಧಾರೆ ಸಂಕರ್ಷಣ-ಕಮಠಾದಿರೂಪೇಣ, ಯೋಽವಶಿಷ್ಯೇತ ಸರ್ವಲೋಕಮಧ್ಯೇ ವಿಲಾಸ-ಪುರುಷ-ಗುಣಾವತಾರ-ಲೀಲಾವತಾರಾವೇಶ-ಪ್ರಭಾವ-ವೈಭವ-ಪದ್ಮನಾಭ-ಕ್ಷೀರೋದಶಾಯಿ-ಪ್ರಭೃತಯೋಽಶಕಲಾ ಮಮ ಸರ್ವಂ ವಿಧಾಸ್ಯಂತಿ,

ಕಾರ್ಯಕಾರಣಯೋರಭೇದಾತ್; ಪರಂಚ ಸ್ವಯಮ್ ಅಹಂ ಗೋಕುಲೇ ಸರ್ವಂ ಕರಿಷ್ಯಾಮೀತಿ ಭಾವಃ ॥೩೨॥

ಭಾವಾನುವಾದ- ನಾನು ಅರ್ಥಾತ್ ಪೂರ್ವದಲ್ಲಿ ಹೇಳಿದ ಮಹಾನುಭಾವ ಗೋಪಲರೂಪನಾದ ನಾನೆ ಮೊದಲು ಸರ್ವಲೋಕ-ಚೂಡಾಮಣಿ ಶ್ರೀಗೋಲೋಕ ಹೆಸರಿನ ಧಾಮದಲ್ಲಿ ಶ್ರೀರಾಸಲೀಲೆಯಲ್ಲಿ ವಿರಾಜಮಾನನಾಗಿದ್ದೆ. ಆ ಸಮಯದಲ್ಲಿ ಬೇರೆ ಯಾವುದೇ 'ಸತ್-ಅಸತ್ಪರಂ' ಯಾವುದೇ ಕಾರ್ಯವಿರಲಿಲ್ಲ. ಪ್ರಸ್ತುತ ಶ್ಲೋಕದ 'ಸತ್' ಶಬ್ದದಿಂದ ಸಾಧುಜನರ ರಕ್ಷಣೆಗಾಗಿ ಅಸುರ-ವಧೆ ಇತ್ಯಾದಿ, 'ಅಸತ್' ಶಬ್ದದಿಂದ ಪ್ರಾಕೃತ ದರ್ಶನ ಇತ್ಯಾದಿಯನ್ನು ಮತ್ತು 'ಪರ' ಶಬ್ದದಿಂದ ಭಗವಂತನು ತನ್ನ-ಪ್ರಿಯತಮ ಗೋಪಿಯರ ಪರಕೀಯಭಾವವನ್ನು ಗ್ರಹಿಸುವಂತಹದ್ದು.

ಇಲ್ಲಿ ಪ್ರಶ್ನೆ ಉದ್ಭವವಾಗಬಹುದೇನೆಂದರೆ ಶ್ರೀಹರಿ ಸರ್ವದಾ ಗೋಲೋಕ ರಾಸಲೀಲೆಯಲ್ಲಿ ನಿಮಗ್ನರಾಗಿರುತ್ತಾರೆ, ಆಗ ಜಗತ್ತು ಇತ್ಯಾದಿ ಸೃಷ್ಟಿ-ಸ್ಥಿತಿ-ಲಯದ ಕಾರ್ಯವನ್ನು ಯಾರು ಮಾಡುತ್ತಾರೆ? ಇದಕ್ಕೆ ಉತ್ತರದಲ್ಲಿ ಹೇಳುತ್ತಾರೆ- ನಾನೇ ಸಮಸ್ತ ಲೋಕಗಳ ಮೂಲ ಅರ್ಥಾತ್ ಮೂಲಧಾರಣ ಪಾತಾಳದಲ್ಲಿ ಸಂಕರ್ಷಣ-ಕಚ್ಛಪಾದಿ ರೂಪದಲ್ಲಿ ನೆಲೆಸಿದ್ದು ಪೃಥ್ವಿಯನ್ನು ಧಾರಣೆ ಹಾಗೂ ಪೋಷಣೆ ಮಾಡುತ್ತೇನೆ. ಗೋಲೋಕ ಮತ್ತು ಪಾತಾಳದ ಮಧ್ಯವರ್ತಿ (ಬೀಜ) ಬೇರೆ-ಬೇರೆ ಸಮಸ್ತ ಲೋಕಗಳಲ್ಲು ಸಹ ನಾನೇ ನನ್ನ ವಿಲಾಸ, ಪುರುಷ, ಗುಣಾವತಾರ, ಲೀಲಾವತಾರ, ಪ್ರಾಭವ, ವೈಭವ, ಪದ್ಮನಾಭ, ಕ್ಷೀರೋದಶಾಯೀ ಇತ್ಯಾದಿಯಲ್ಲಿ ಅಂಶ-ಕಲಾ ರೂಪದಲ್ಲಿ ಅವಸ್ಥಿತನಾಗಿ ಸಮಸ್ತ ಕಾರ್ಯಗಳ ಸಮಾಧಾನ ಮಾಡುತ್ತೇನೆ. ತಾತ್ಪರ್ಯ ಇದೇನೆಂದರೆ ವೇದಾಂತ-ಮತದಲ್ಲಿ ಕಾರ್ಯ ಮತ್ತು ಕಾರಣವು ಅಭಿನ್ನವಾದ ಕಾರಣ ವಿಲಾಸ ಇತ್ಯಾದಿಯ ಮೂಲಕ ಯಾವ ಕಾರ್ಯ ಸಂಪನ್ನವಾಗುತ್ತದೋ, ಅದರಲ್ಲಿಯೂ ಸಹ ಸ್ವಯಂಭಗವಂತನ ಶಕ್ತಿಯ ಪ್ರೇರಣೆಯು ಕಾರಣ ರೂಪದಲ್ಲಿ ಇರುತ್ತದೆ. ಆದ್ದರಿಂದ ವಾಸ್ತವದಲ್ಲಿ ಶ್ರೀಭಗವಂತನೇ ಮುಖ್ಯ ಕರ್ತನು, ಅನ್ಯ ಎಲ್ಲವೂ ಗೌಣ ಅಥವಾ ಪ್ರಯೋಜ್ಯ-ಕರ್ತ. ಇದಕ್ಕೆ ಅತಿರಿಕ್ತವಾಗಿ ನಾನು ಸ್ವಯಂ ಗೋಕುಲದಲ್ಲಿ ಎಲ್ಲವನ್ನು ಮಾಡುತ್ತೇನೆ- ಇದೇ ಭಾವ. ॥೩೨॥

ಪಂಚಮ-ಶ್ಲೋಕ

ಚತುಃಶ್ಲೋಕಿಯಲ್ಲಿ ಒಳಗೊಂಡ ದ್ವಿತೀಯ ಶ್ಲೋಕ- ಹಿಂದೆ ವಿವರಿಸಿದ ಭಗವತ್-ಜ್ಞಾನವನ್ನು ವ್ಯತಿರೇಕ ರೂಪದಲ್ಲಿ ತಿಳಿಸುವುದಕ್ಕಾಗಿ ಶ್ರೀಭವಂತನ ಮೂಲಕ ಮಾಯೆಯ ಲಕ್ಷಣದ ನಿರೂಪಣೆ

ಋತೇರ್ಥಂ ಯತ್ ಪ್ರತೀಯೆತ ನ ಪ್ರತೀಯೆತ ಚಾತ್ಮನಿ ।
ತದ್ವಿಧ್ಯಾದಾತ್ಮನೋ ಮಾಯಾಂ ಯಥಾಭಾಸೋ ಯಥಾ ತಮಃ ॥

(ಶ್ರೀಮದ್ಭಾ ೨/೯/೩೩)

ಅನ್ವಯ

ಅರ್ಥಂ ಋತೇ (ವಾಸ್ತವ ಪ್ರಯೋಜನ ತತ್ತ್ವಕ್ಕೆ ಅತಿರಿಕ್ತವಾಗಿ) ಯತ್ (ಏನಾದರೂ) [ಸಹ] ಪ್ರತೀಯೇತ (ಗೋಚರವಾಗುತ್ತದೋ) ಚ (ಮತ್ತು) [ಸತ್ಯಾಯುಕ್ತವಾದರೂ ಸಹ] ಆತ್ಮನಿ (ನನ್ನ ಅಧಿಷ್ಠಾನದಲ್ಲಿ) ನ ಪ್ರತೀಯೆತ (ಯಾವುದು ಗೋಚರಿಸುವುದಿಲ್ಲವೋ) ತತ್ ಆತ್ಮನಃ (ಅದು ಸಹ ನನ್ನ) ಮಾಯಾಂ ವಿಧ್ಯಾತ್ (ಮಾಯೇ ಎಂದು ತಿಳಿದುಕೋ) [ನನ್ನ ಮಾಯೆಯು ಎರಡು ಪ್ರಕಾರವಾಗಿದೆ-] ಯಥಾ ಆಭಾಸಃ (ಯಾವ ರೀತಿ ಕನ್ನಡಿ ಇತ್ಯಾದಿಗಳಲ್ಲಿ ಎರಡು ಚಂದ್ರಗಳು ಗೋಚರವಾಗುವುದು ವಾಸ್ತವ ನಿಜಾಂಶಕ್ಕೆ ಅತಿರಿಕ್ತವಾಗಿ ಗೋಚರಿಸುತ್ತದೆ ಅಥವಾ ಆಭಾಸ ಸ್ಥಾನೀಯವಾದ ಜೀವ-ಮಾಯೆ) [ಮತ್ತು] ಯಥಾ ತಮಃ (ಯಾವ ರೀತಿ ಸತ್ಯವಾದರು ಸಹ ಕೆಲವು ಗೋಚರವಾಗುವುದಿಲ್ಲವೋ ಹೇಗೆಂದರೆ ರಾಹು ಗ್ರಹ-ಮಂಡಲದಲ್ಲಿ ಇದ್ದರೂ ಸಹ ಕಾಣಿಸುವುದಿಲ್ಲ ಅಥವಾ ಅಂಧಕಾರ ಸ್ಥಾನೀಯ ಗುಣ-ಮಾಯೆ) ॥೩೩॥

ಅನುವಾದ

ವಾಸ್ತವ ಪ್ರಯೋಜನ ತತ್ತ್ವಕ್ಕೆ ಅತಿರಿಕ್ತವಾಗಿ ಯಾವುದೆಲ್ಲ ಗೋಚರವಾಗುವುದೋ ಅಥವಾ ಸತ್ವ ಯುಕ್ತವಾದರೂ ಸಹ ನನ್ನ ಅಧಿಷ್ಠಾನದಲ್ಲಿ ಯಾವುದು ಗೋಚರವಾಗುವುದಿಲ್ಲವೋ, ಅದೂ ಸಹ ನನ್ನ ಮಾಯೆ ಎಂದು ಅರ್ಥಮಾಡಿಕೋ. ಉದಾಹರಣೆಗೆ- ಯಾವ ರೀತಿ ಎರಡು ಚಂದ್ರಮ ಇಲ್ಲದಿದ್ದರೂ ಸಹ ಕನ್ನಡಿಯಲ್ಲಿ ಎರಡು ಚಂದ್ರಮಗಳ ಪ್ರತಿರೂಪ ಕಾಣಿಸುತ್ತದೋ, ಅಥವಾ ಯಾವ ರೀತಿ ರಾಹು ಗ್ರಹ-ಮಂಡಲವು ನೆಲಸಿದ್ದರೂ ಸಹ ಕಾಣಿಸುವುದಿಲ್ಲವೋ, ಅದೇ ರೀತಿ. ಭಾವಾರ್ಥ ಏನೆಂದರೆ ಜ್ಯೋತಿರ್ಮಯ ವಸ್ತುವಿನ ದರ್ಶನದ ಸಮಯದಲ್ಲಿ ಆಭಾಸ ಮತ್ತು ಅಂಧಕಾರದ ದರ್ಶನವು ಯಾವುದೂ ಸಹ ಆಗುವುದಿಲ್ಲ ಮತ್ತು ಆಭಾಸ ಅಥವಾ ಅಂಧಕಾರದ ದರ್ಶನಕಾಲದಲ್ಲಿ ಜ್ಯೋತಿರ್ಮಯ ವಸ್ತುವಿನ ದರ್ಶನವೂ ಸಹ ಆಗುವುದಿಲ್ಲ; ಹಾಗೂ ಆಭಾಸ ಮತ್ತು ಅಂಧಕಾರದ ಕರ್ತೃತ್ವ-ಸತ್ವದಲ್ಲಿ ಜ್ಯೋತಿರ್ಮಯ ವಸ್ತುವಿಗೆ ಅತಿರಿಕ್ತವಾಗಿ

ಸ್ವತಂತ್ರವಿರುವುದಿಲ್ಲ. ಶ್ರೀಭಗವಂತನು ಜ್ಯೋತಿರ್ಮಯ ವಸ್ತು– ಅವನ ಮಾಯೆ ಎರಡು ಪ್ರಕಾರಗಳಾಗಿವೆ–ಆಭಾಸ 'ಸ್ಥಾನೀಯ ಜೀವ–ಮಾಯೆ ಮತ್ತು ತಮ–ಸ್ಥಾನೀಯ ಗುಣ–ಮಾಯೆ. ಎರಡೂ ಸಹ ಶ್ರೀಭಗವಂತನ ಆಶ್ರಿತವಾದರೂ ಸಹ ಭಗವತ್–ಅಂತರಂಗ–ಪರಿಚಯದಲ್ಲಿ ಜೀವಿ ಮತ್ತು ಮಾಯೆಯ ಪರಿಚಯದ ಅಭಾವವುಂಟು ಮತ್ತು ಜೀವಿ ಮತ್ತು ಮಾಯಿಕ ಪರಿಚಯದಲ್ಲೂ ಸಹ ಭಗವತ್–ಪರಿಚಯವು ಆಗುವುದಿಲ್ಲ. ॥೩೩॥

ಶ್ರೀಭಕ್ತಿವಿನೋದ ಠಾಕುರ್

(ಶ್ರೀಭಗವಂತನು ಹೇಳುತ್ತಾನೆ–) ಮತವಾದಿಗಳು ನನ್ನ ಅಚಿಂತ್ಯಶಕ್ತಿಯನ್ನು ಅರಿಯದ ಕಾರಣ ಅದರ ಸಂಬಂಧದಲ್ಲಿ 'ಅಸ್ತಿ', 'ನಾಸ್ತಿ' ಇತ್ಯಾದಿ ನಾನಾ ಪ್ರಕಾರದ ಊಹೆ–ಕಲ್ಪನೆಗಳನ್ನು ಮಾಡಿಕೊಳ್ಳುತ್ತಾರೆ. ಅದೂ ಸಹ ನನ್ನ ಪ್ರಭಾವವೆ. ಒಂದು ಪರಾಶಕ್ತಿ ಮಾಯೆಯೇ ನನ್ನ ಅಚಿಂತ್ಯಶಕ್ತಿ. ಇದರದ್ದು ಎರಡು ಸ್ಥಿತಿಗಳಿವೆ– ಸ್ವರೂಪ–ಸ್ಥಿತಿ ಮತ್ತು ತಟಸ್ಥ–ಸ್ಥಿತಿ. ಜಗತ್ತಿನ ಸೃಷ್ಟಿಯಲ್ಲಿ ತಟಸ್ಥ–ಸ್ಥಿತಿಯು ಅಣು ಮತ್ತು ಛಾಯೆ ರೂಪದಲ್ಲಿ ಎರಡು ಪ್ರಕಾರವಗಿದೆ. ಅಣು–ತಟಸ್ಥಾಶಕ್ತಿಯನ್ನು ಕೆಲವು ಶಾಸ್ತ್ರಗಳಲ್ಲಿ 'ಜೀವಶಕ್ತಿ' ಎಂದು ಕರೆಯುತ್ತಾರೆ, ಆದರೂ ನಾನು ಅದರನ್ನು 'ಪರಾ ಪ್ರಕೃತಿ' ಎಂದು ಕರೆಯುತ್ತೇನೆ. ಛಾಯಾ ತಟಸ್ಥ ಶಕ್ತಿಯು ಅಚಿತ್ ಮಾಯಾಶಕ್ತಿಯ ಹೆಸರಿನಿಂದ ವಿಖ್ಯಾತವಾಗಿದೆ. ಅದರ ಮತ್ತೊಂದು ಹೆಸರು 'ಬಹಿರಂಗಶಕ್ತಿ' ಎನ್ನಲಾಗಿದೆ. ಚಿತ್ ಧರ್ಮಾದಿಯ ಪ್ರಕಾಶ ಸ್ವರೂಪಶಕ್ತಿಯನ್ನು 'ಚಿತ್–ಶಕ್ತಿ' ಅಥವಾ 'ಅಂತರಂಗಶಕ್ತಿ' ಎಂದು ಕರೆಯುತ್ತಾರೆ. 'ಮಾಯಾ' ಎಂದರೆ ಪ್ರಧಾನವಾಗಿ ನನ್ನ ಪರಾಶಕ್ತಿ ಎಂದು ಅರ್ಥಮಾಡಿಕೊ. ಈ ಮಾಯಾ ಪೂರ್ಣ ಸಂಸಾರದಲ್ಲಿ ಸ್ವರೂಪಶಕ್ತಿಯ ಪರಿಚಯವು ರಹಸ್ಯವಾಗಿರುತ್ತದೆ ಮತ್ತು ಅಚಿತ್ ಮಾಯಾಶಕ್ತಿಯ ಪರಿಚಯವೇ ವ್ಯಾಪ್ತವಾಗಿರುತ್ತದೆ. ಆದ್ದರಿಂದ 'ಮಾಯಾ' ಎಂದು ಹೇಳುವುದರಿಂದ ಅಚಿನ್ಮಾಯಾ ಅಂದರೆ ಛಾಯಾ–ತಟಸ್ಥಾಶಕ್ತಿ ಎಂದೇ ತಿಳಿಯಲಾಗುತ್ತದೆ. ನಾನು ಮೂಲ ಮಾಯಾಶಕ್ತಿಯ ವಿಷಯದಲ್ಲಿ ನಿನಗೆ ತಿಳಿಸಿಕೊಡುತ್ತಿದ್ದೇನೆ. ನಾನು ಚೈತನ್ಯಸ್ವರೂಪ ಆತ್ಮ ಪುರುಷನು. ಹದಿನೆಂಟು ತತ್ವಗಳಲ್ಲಿ ಪುರುಷ, ಪ್ರಕೃತಿ ಮತ್ತು ಅರ್ಥ– ಈ ಮೂರು ಪ್ರಕಾರದ ತತ್ವ ವಿಭಾಗವಾಗಿದೆ. ಆತ್ಮ ಮತ್ತು ಪ್ರಕೃತಿಯನ್ನು ಹೊರತುಪಡಿಸಿ ಎಲ್ಲ ಇಪತ್ತೆಂಟು ತತ್ವಗಳನ್ನೇ 'ಅರ್ಥ' ಎಂದು ಕರೆಯುತ್ತಾರೆ. ಅರ್ಥವನ್ನು ತೊರೆಯುವುದರಲ್ಲಿ ಯಾವುದು ನನ್ನಿಂದ (ಭಗವತ್–ಸ್ವರೂಪದಿಂದ) ಪೃಥಕ ಚಿಂತನೀಯವಾಗುತ್ತದೋ, ಮತ್ತು ಆತ್ಮ–ತತ್ವದಲ್ಲಿ (ಭಗವಂತನಲ್ಲಿ) ಯಾವ ಸ್ವರೂಪ–ಗೋಚರವಾಗುವುದಿಲ್ಲವೋ, ಅದೇ ಮಾಯೆ. ಅದಾಗ್ಯೂ ಆತ್ಮ–ವಸ್ತು ಹಾಗೂ ಮಾಯೆಯನ್ನು ಬಿಟ್ಟು ಬೇರೆ ಯಾವುದೆಲ್ಲ ತತ್ವಗಳಿವೆಯೋ– ಅದೆಲ್ಲವೂ ವಸ್ತುಪ್ರಾಯವಾಗಿದೆ. ಆದರೆ ಮಾಯೆಯೂ ಸಹ ವಸ್ತುವಲ್ಲ, ವಸ್ತು ಕೇವಲ ಆತ್ಮ ಅಥವಾ ಪುರುಷ ಆಗಿರುತ್ತದೆ ಮತ್ತು ಮಾಯೆ ಆ ಆತ್ಮದ ಶಕ್ತಿಮಾತ್ರವಷ್ಟೆ. ವಸ್ತುವಿನಲ್ಲಿ ಈ ಮಾಯೆಯು ಎರಡು ಪ್ರಕಾರ ಪರಿಚಯವಾಗು– 'ಆಭಾಸ'ವು ಇದರ ಪ್ರಥಮ

ಪರಿಚಯ ಮತ್ತು 'ತಮ' ಇದರ ದ್ವಿತೀಯ ಪರಿಚಯ. ಜೀವಿಯೇ ಶಕ್ತಿಯ ಆಭಾಸ ಪರಿಚಯ. ಚಿತ್-ಶಕ್ತಿಯು ಅಣು-ತಟಸ್ಥ ಸ್ಥಿತಿಯಲ್ಲಿ ಆಭಾಸರೂಪವು ಜೀವಿ, ಆದ್ದರಿಂದ ಇದರ ಚಿತ್-ಪರಿಚಯ. ತಮ ಅಚಿತ್-ಮಾಯಾಶಕ್ತಿಯ ಪರಿಚಯವಾದದ್ದು- ಅದರಿಂದಲೇ ಜಡಜಗತ್ತು ಉತ್ಪನ್ನವಾಗಿದೆ. ಈ ರೀತಿ ಶಕ್ತಿ-ತತ್ವವನ್ನು ತಿಳಿದುಕೊಂಡರೆ ಪರಬ್ರಹ್ಮಸ್ವರೂಪದ ತತ್ವಜ್ಞಾನದ ಹೆಸರು 'ವಿಜ್ಞಾನ' ಎಂದು ಅರ್ಥಮಾಡಿಕೊಳ್ಳಬಹುದು. (ಶ್ರೀಭಾಗವತಾರ್ಕಮರೀಚಿಮಾಲಾ ೧೦/೫).

ಹಿಂದಿನ ಶ್ಲೋಕದಲ್ಲಿ ಪರಮತತ್ವದ ಸ್ವರೂಪಜ್ಞಾನವನ್ನು ವಿವರಿಸಲಾಗಿದೆ. ಆದರೆ ಎಲ್ಲಿಯವರೆಗು ಸ್ವರೂಪದಿಂದ ಇತರ (ಭಿನ್ನ) ತತ್ವ ಜ್ಞಾನದ ಮೂಲಕ ಸ್ವರೂಪತತ್ವದ ಜ್ಞಾನವನ್ನು ದೃಢಪಡಿಸುವುದಿಲ್ಲವೋ, ಅಲ್ಲಿಯವರೆಗೂ ಅದು 'ವಿಜ್ಞಾನ'ವಾಗುವುದಿಲ್ಲ. ಸ್ವರೂಪತತ್ವದಿಂದ ಇತರ (ಭಿನ್ನ) ತತ್ವದ ಹೆಸರು 'ಮಾಯೆ'. ಅದೇ ಮಾಯಾತತ್ವದ ಜ್ಞಾನವು ಪ್ರಸ್ತುತ ಶ್ಲೋಕದಲ್ಲಿ ವಿವರಿಸಲಾಗಿದೆ. ಸ್ವರೂಪತತ್ವವೇ 'ಅರ್ಥ' ಅಂದರೆ ಯಥಾರ್ಥ ತತ್ವ. ಈ ತತ್ವದಿಂದ ಹೊರಗೆ ಯಾವುದು ಪರಿಚಯವಾಗುತ್ತದೋ ಮತ್ತು ಈ ಸ್ವರೂಪತತ್ವದಲ್ಲಿ ಯಾವುದು ಪರಿಚಯವಾಗುವುದಿಲ್ಲವೋ, ಅದನ್ನೇ ಆತ್ಮತತ್ವದ ಮಾಯಾ-ವೈಭವ ಎಂದು ಅರ್ಥಮಾಡಿಕೋ. ಸಹಜವಾಗಿ ಇದು ಅರ್ಥವಾಗದಿರುವ ಕಾರಣ ಇದಕ್ಕೆ ಎರಡು ಪ್ರಾದೇಶಿಕ ಉದಾಹರಣೆಯನ್ನು ಕೊಡಲಾಗುತ್ತಿದೆ. ಸ್ವರೂಪತತ್ವವನ್ನು ಸೂರ್ಯನ ಸಮಾನವೆಂದು ಅರ್ಥಮಾಡಿಕೊ. ಸೂರ್ಯನಿಂದ (ಭಿನ್ನ) ತತ್ವವು ಎರಡು ರೂಪಗಳಲ್ಲಿ ಪರಿಚಯವಾಗುತ್ತದೆ- ಮೊದಲ ರೂಪ ಆಭಾಸ, ಮತ್ತೊಂದು ರೂಪ ತಮಸ್ಸು. ಸೂರ್ಯನ ಪ್ರತಿಬಿಂಬವು ಜಲದಿಂದ ಅನ್ಯ ಸ್ಥಾನಗಳಲ್ಲಿ ಬೀಳುತ್ತದೆ, ಅದನ್ನು ಆಭಾಸವೆಂದು ಕರೆಯುತ್ತಾರೆ. ಸೂರ್ಯನ ಪ್ರಭಾವವು ಯಾವ ದಿಕ್ಕಿನಲ್ಲಿ ಕಾಣಿಸುವುದಿಲ್ಲವೋ, ಅದನ್ನು ತಮಸ್ಸು ಅರ್ಥಾತ್ ಕತ್ತಲು ಎಂದು ಕರೆಯುತ್ತಾರೆ. ಚಿತ್-ಜಗತ್ತು ಭಗವತ್-ಸ್ವರೂಪದ (ಸೂರ್ಯನ) ಕಿರಣಸ್ವರೂಪ. ಅದರ ಸಾದೃಶ್ಯತೆಯನ್ನು ಅವಲಂಬಿಸುವ (ಪರ ನಿರ್ಭರ) ಆಭಾಸ-ಸ್ವರೂಪವು ಮಾಯಾ-ವೈಭವ, ಇದೇ ಆಭಾಸದ ಉದಾಹರಣೆ. ಚಿತ್-ತತ್ವದಿಂದ ದೂರಚಲಿಸುವ ಅಂಧಕಾರವೇ ಮಾಯಾ ವೈಭವ- ಇದು ದ್ವಿತೀಯ ಉದಾಹರಣೆ. ತಾತ್ಪರ್ಯವೇನೆಂದರೆ ಆತ್ಮತತ್ವ ಮತ್ತು ಮಾಯಾತತ್ವದ ಪರಸ್ಪರ ಎರಡು ಪ್ರಕಾರದ ಸಂಬಂಧವುಂಟು. ಮೊದಲನೆಯ ಸಂಬಂಧವು ಆತ್ಮಸ್ವರೂಪಕ್ಕೆ ಅತಿರಿಕ್ತವಾಗಿ ಭಿನ್ನ ಸ್ವರೂಪದಲ್ಲಿ ಯಾವುದು ಪ್ರಕಾಶಿಸುತ್ತದೋ, ಅದು ಮಾಯೆ ಮತ್ತು ಆತ್ಮಸ್ವರೂಪದಿಂದ ದೂರಚಲಿಸುವ ಅನಾತ್ಮ-ಅಜ್ಞಾನವೂ ಸಹ ಮಾಯೆ ಎನ್ನಲಾಗಿದೆ. (ಶ್ರೀಚೈತನ್ಯಚರಿತಾಮೃತ ಲೀಲೆಯ ೧/೫೪ ಅಮೃತಪ್ರವಾಹ-ಭಾಷ್ಯ) ॥೩೩॥

ಶ್ರೀವಿಶ್ವನಾಥ ಚಕ್ರವರ್ತೀಪಾದರು

ಕಿಂಚ, ಜೀವಸ್ಯ ಪರಮಾತ್ಮಜ್ಞಾನ-ವಿಜ್ಞಾನೇ ಪ್ರತಿ ಮಾಯಾ ಖಲ್ವಂಶೇನಾನುಕೂಲಾ-

ಪ್ರತಿಕೂಲಾ ಚ ಭವತಿ । ವಿಜ್ಞಾತೇ ಚ ಪರಮಾತ್ಮನಿ ಮಯಿ ಯೋಗಮಾಯೈವಾಧಿಕರೋತಿ; ಸಾ ಖಲ್ವನುಕೂಲೈವೇತಿ ತೇ ದ್ವೇ ಅವಶ್ಯನಿರೂಪನೀಯೇ ಇತಿ ಜ್ಞಾಪಯನ್, '*ಯಥಾತ್ಮಮಾಯಾಯೋಗೇನ*' (ಶ್ರೀಮದ್ಭಾ ೨/೯/೨೬) ಇತ್ಯನೇನ ವ್ಯಂಜಿತಸ್ಯ ತವ ಮಾಯಾ ಯೋಗಮಾಯಾ ಚ ಕೀದೃಶೀ? ಇತಿ ಪ್ರಶ್ನೋತ್ತರಂ ತನ್ತ್ರೇಣೈವ ಕ್ರಮೇಣಾಹ- ಋತೇಽರ್ಥಮಿತಿ । ಯದ್ಯತಃ ಅರ್ಥಂ ಸತ್ಯಂ ವಸ್ತು ವಿನಾ ನ ಪ್ರತೀಯೇತ, ಕಿನ್ತ್ವರ್ಥಃ ಸತ್ಯಂ ವಸ್ತ್ವೇವ ಪ್ರತೀಯೆತ ಇತ್ಯಾರ್ಥಃ; ತಥಾ, ಯತಃ ಅರ್ಥಂ ವಿನಾ ಪ್ರತೀಯೇತ- ಅರ್ಥೋ ನ ಪ್ರತೀಯೆತ, ಕಿನ್ತ್ವನರ್ಥಃ ಪ್ರತೀಯೆತೇತ್ಯಥಃ । ತತ್ತಾಮ್ ಆತ್ಮನಿ ಸ್ವಸ್ಮಿನ್ ಮುಕ್ತೋ- ಬದ್ಧಶ್ಚ ಜೀವ ಆತ್ಮನೋ ಮಮ ಮಾಯಾಂ ಕ್ರಮೇಣ ವಿಧ್ಯಾ-ಅವಿಧ್ಯೇತಿ ವೃತ್ತಿದ್ವಯಾಂ ಮಾಯಾಖ್ಯಾಂ ಶಕ್ತಿಂ ವಿಧ್ಯಾತ್ ಜಾನೀಯಾತ್ । ವಿಧ್ಯಾಯಾ ದೃಷ್ಟಾನ್ತಃ- ಯಥಾಭಾಸೋ ದೀಪಾದಿಪ್ರಕಾಶಃ । ದೀಪಾದಿಪ್ರಕಾಶಾದ್ಯಥಾ ಗೃಹೇ ವಿದ್ಯಮಾನೋ ಘಟಪಟಾದಿರರ್ಥ ಏವ ಪ್ರತೀಯತೇ, ನ ತು ದೀಪಾನಯನಾತ್ ಪೂರ್ವಂ ಸಂಭಾವಿತೋ ಘಟಪಟಾದ್ಯಭಾವಃ ತಥಾ ಸರ್ಪವೃಶ್ಚಿಕಾದಿರಾಗನ್ತುಕಶ್ಚ ಭಜಕಾರಣಮನರ್ಥಃ ಪ್ರತೀಯತೆ, ಏವಮೇವ (ಏವಂಚ) ವಿದ್ಯಾಯಾ ಹೇತೋರ್ಮುಕ್ತೇನ ಜೀವೇನ ಸ್ವಸ್ಮಿನ್ನಿತ್ಯಸಂಬಂಧಂ ಜ್ಞಾನಾದಿಕಮೇವ ಪ್ರತೀಯತೆ, ನ ತ್ವವಿದ್ಯಾದಶಾಯಾಮಿವ ತದಭಾವಃ, ನಾಪಿ ಸ್ವಸ್ಮಿನ್ನಸಂಭಂಧೋ ದೇಹ-ದೈಹಿಕ-ಶೋಕಮೋಹಾದಿಕಶ್ಚ ಪ್ರತೀಯತೆ । ಅವಿದ್ಯಾಯಾ ದೃಷ್ಟಾನ್ತಃ 'ಯಥಾ ತಮೋಽನ್ಧಕಾರಃ । ಅನ್ಧಕಾರಾದ್ಯಥಾ ಸ್ವಗೃಹೇ ವಿದ್ಯಮಾನೋ ಘಟಪಟಾದಿರರ್ಥೋ ನ ಪ್ರತೀಯತೆ, ಕಿನ್ತ್ವವಿದ್ಯಮಾನೋಽಪಿ ಸಂಭಾವ್ಯಮಾನಃ ಸರ್ಪಚೌರಾದಿಕೋ ಭಯಕಾರಣಮನರ್ಥಃ ಪ್ರತೀಯತೆ, ಏವಮೇವಾವಿದ್ಯಾಯಾ ಹೇತೋರೇವ ಬದ್ಧೇನೆ ಜೀವೇನ ಸ್ವಸ್ಮಿನ್ ನಿತ್ಯಸಂಬಂಧಿತಯಾ ವರ್ತಮಾನಮಪಿ ಜ್ಞಾನಾನಂದಾದಿಕಂ ನ ಪ್ರತೀಯತೇ, ಕಿನ್ತು, ಸ್ವಸ್ಮಿನ್ನಸನ್ನಪಿ ಸ್ವಸಮ್ಬನ್ಧಿತ್ವೇನ ವರ್ತಮಾನೋ ದೇಹದೈಹಿಕ-ಶೋಕ- ಮೋಹಾದಿರೇವ ಪ್ರತೀಯತೆ । ತೇನ ಕುಸುಮಶೃಂಗಾದೀನಾಂ ಸತ್ಯತ್ವೇಽಪಿ ಆಕಾಶ- ಶಶಾದೀನಾಂ ತತ್ಸಮ್ಬನ್ಧಾಭಾವಾದೇವ ಆಕಾಶಕುಸುಮಮಲೀಕಂ ಶಶಶೃಂಗಮಲೀಕಮಿತಿ ಯತೋಚ್ಯತೆ, ತಥೈವ ದೇಹಾನಂ ತದ್ಧರ್ಮಾನಾಂ ಶೋಕಮೋಹಸುಖದುಃಖಾದೀನಾಂಚ ಪ್ರಾಧಾನಿಕತ್ವಾತ್ ಸತ್ಯತ್ವೇಽಪಿ ಜೀವಸ್ಯ ತತ್ಸಮ್ಬನ್ಧಾಭಾವಾದೇವ ದೇಹಾದಯೋ ಮಿಥ್ಯಾಭೂತಾ ಇತಿ ಶಾಸ್ತ್ರೇಷೂಚ್ಯತೇ । ಜೀವಸ್ಯ ಮಿಥ್ಯಾಭೂತೋಽಪಿ ದೇಹಸಂಬಂಧಃ ಖಲ್ವವಿದ್ಯಾಯಾ ಕಲ್ಪಯತೆ, ವಿದ್ಯಯಾ ಲುಪ್ಯತೆ ಇತಿ, ವಿದ್ಯಾವಿದ್ಯಯೋರ್ದೃಷ್ಟಾನ್ತಾವಾಭಾಸತಮಸೀ ಇತ್ಯತ್ರ- 'ಛಾಯಾತಪೌ ಯತ್ರ ನ ಗೃಧ್ರಪಕ್ಷೌ' (ಶ್ರೀಮದ್ಭಾ ೮/೫/೨೭) ಇತ್ಯಷ್ಟಮಸ್ಕನ್ಧ ಏವ ಪ್ರಮಾಣಂ ಜ್ಞೇಯಮ್ । ಕೇಚಿತ್ತು- 'ತಮೋದೃಷ್ಟಾನ್ತೋಽ ಯಮಾವರಣಾಂಶ ಏವ, ಆವರಣವಿಕ್ಷೇಪಯೋಸ್ತು ದೃಷ್ಟಾನ್ತಾಃ ಸರ್ಪವ್ಯಾಘ್ರಭೂತಾವೇಶಾದ್ಯಾ ಜ್ಞೇಯಾಃ' ಇತ್ಯಾಹುಃ; ತೇಽಪಿ ತಾಮಸತ್ವಾತ್ತಃಶಬ್ದೇನೈವ ಗ್ರಾಹ್ಯಾ ಇತ್ಯಪರೇ । ಏವಂ ಜೀವೇ ಸಾರ್ವದಿಕ್ ವಿದ್ಯಮಾನವಸ್ತುಪ್ರತ್ಯಾಯನಮವಿದ್ಯಮಾನವಸ್ತ್ವಪ್ರತ್ಯಾಯನಂ ಚೇತ್ಯವಿದ್ಯಾಯಾ ಧರ್ಮಾವರಣ-ವಿಕ್ಷೇಪಶಬ್ದಾಭ್ಯಾಮುಚ್ಯತೆ । ಅಥಾರ್ಥಶಬ್ದಸ್ಯ ಧನವಾಚಿತ್ವಾತ್ ಶ್ಲೇಷೇಣ ಭಾಗ್ಯಪ್ರಾಪ್ತಸ್ವೀಯಬಹುಧನೋ ವಣಿಗಿವ ವಿದ್ಯಾಲಬ್ಧಜ್ಞಾನಾನಂದೋ ಮುಕ್ತಃ ಸಂಪ್ರನ್ನತ್ವೇನ ನಿರೂಪ್ಯತೆ, ತಥಾ ಅಭಾಗ್ಯಾನಧಿಗತಸ್ವೀಯಧನೋ ವಣಿಗಿವಾವಿದ್ಯಾವೃತಜ್ಞಾನಾನಂದೋ

ಬದ್ಧಜೀವೋ ದರಿದ್ರತ್ವೇನೇತಿ ಜ್ಞೇಯಮ್ । ಏವಂ ವಿದ್ಯಾಯಾ ತ್ವಂ– ಪದಾರ್ಥಸ್ಯ ಜೀವಾತ್ಮನೋಽನುಭವೋ ಭವತಿ, ನ ತು ತತ್ಪದಾರ್ಥಸ್ಯ ಪರಮಾತ್ಮನಃ ತಸ್ಯ ನಿರ್ಗುಣತ್ವಾನ್ನಿರ್ಗುಣಯಾ ಭಕ್ತ್ಯೈವಾಪರೋಕ್ಷಾನುಭವಃ ಸಂಭವೇತ್, '*ಭಕ್ತ್ಯಾಹಮೇಕಯಾ ಗ್ರಾಹ್ಯಃ*' (ಶ್ರೀಮದ್ಭಾ ೧೧/೧೪/೨೧) ಇತಿ ಭಗವದುಕ್ತೇಃ । ಕಿಂಚ, '*ಕೈವಲ್ಯಂ ಸಾತ್ತ್ವಿಕಂ ಜ್ಞಾನಂ*' (ಶ್ರೀಮದ್ಭಾ ೧೧/೨೫/೨೪) ಇತಿ ಭಗವದುಕ್ತೇಃ, ದೇಹಾದಿ–ವ್ಯರಿರಿಕ್ತಾತ್ಮಜ್ಞಾನರೂಪಾ ಯೇಯಂ ವಿದ್ಯಾ, ತಸ್ಯಾಃ ಸತ್ತ್ವಗುಣತ್ವಾದನ್ಯಾ ಗುಣಾತೀತಸ್ಯ ಪರಮಾತ್ಮನೋ ನೈವಾನುಭವಃ, ಪ್ರತ್ಯುತಾಸ್ಯಾ ಅಪ್ಯಪಾಯ ಏವ । ಯದುಕ್ತಂ ಭಗವತಾ (ಶ್ರೀಮದ್ಭಾ ೧೧/೨೫/೩೦, ೩೨)– '*ದ್ರವ್ಯಂ ದೇಶಃ ಫಲಂ ಜ್ಞಾನಂ ಕರ್ಮ ಚ ಕಾರಕಃ । ಶ್ರದ್ಧಾರವ್ಥಾಕೃತಿರ್ನಿಷ್ಠಾ ತ್ರೈಗುಣ್ಯಃ ಸರ್ವ ಏವ ಹಿ । ಯೇನೇಮೇ ನಿರ್ಜಿತಾಃ ಸೌಮ್ಯ, ಗುಣಾ ಜೀವೇನ ಚಿತ್ತಜಾಃ । ಭಕ್ತಿಯೋಗೇನ ಮನ್ನಿಷ್ಠೋ ಮದ್ಭಾವಾಯ ಪ್ರಪದ್ಯತೇ ॥*' ಇತಿ । ನನು, ತರ್ಹಿ ಮುಕ್ತಜೀವೇನ ಪರಮಾತ್ಮನೋಽಪರೋಕ್ಷಾನುಭವಾರ್ಥಂ ಭಕ್ತಿಃ ಕುತೋ ಲಭ್ಯತಾಮ್? ಉಚ್ಯತೇ– ಜ್ಞಾನಾದಿಕಾರಿಣಃ ಸಾಂಖ್ಯ–ಯೋಗ–ತಪ–ಆದಿಭಿರ್ಭಕ್ತಿಮಿಶ್ರೈರೇವ ಜನಿತಯಾ ವಿದ್ಯಯಾ ಅವಿದ್ಯಾನಿವರ್ತ್ತಿಕಯಾ ಪ್ರಥಮಂ ತ್ವಂ–ಪದಾರ್ಥನುಭವಃ । ತತಸ್ತಸ್ಯಾವಿದ್ಯಾತೋ ವಿಮುಕ್ತಸ್ಯ ನಿರನ್ಧನಾಗ್ನಿನ್ಯಾಯೇನ ವಿದ್ಯಾಯಾ ಅಪ್ಯುಪರಮತಾರತಮ್ಯೇನ ಪೂರ್ವಸಿದ್ಧ–ಭಕ್ತಿಚಂದ್ರಕಲಾಯಾಸ್ತದುಪರಾಗ–ವಿಚ್ಯುತಾಯಾಸ್ತತ ಉದ್ಗಮತಾರತಮ್ಯಮ್ । ತಯೈವ ಭಕ್ತ್ಯಾ ಪುನಃ ಪುನರಭ್ಯಸ್ತಯಾ ತತ್ಪದಾರ್ಥಸ್ಯ ಪರಮಾತ್ಮನೋಽನುಭವತಾರತಮ್ಯಮ್ । ಯದುಕ್ತಂ ಭಗವತಾ ಗೀತಾಸು (೧೮/೫೪)– '*ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಙ್ಕ್ಷತಿ । ಸಮಃ ಸರ್ವೇಷೂ ಭೂತೇಷು ಮದ್ಭಕ್ತಿಂ ಲಭತೇ ಪರಾಮ್ ॥*' ಇತಿ । ಪರಾಂ ಪೌರ್ವಕಾಲೀಕಗುಣೀಭಾವರಾಹಿತ್ಯಾತ್ ಶ್ರೇಷ್ಠಾಂ ಕೇವಲಾಂ ವಾ । ತತಶ್ಚ (ಶ್ರೀಗೀ ೧೮/೫೫)– '*ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ ।*' ಇತ್ಯುಕ್ತೇರ್ಜಾತಿಪ್ರಮಾಣಾಭ್ಯಾಮಲ್ಪೀಯಸ್ಯಾ ತಥಾ ಭಕ್ತ್ಯಾ ನಿರ್ವಿಶೇಷ–ಬ್ರಹ್ಮಣ ಏವಾನುಭವ, ನತ್ವನನ್ತ–ಚಿದ್ವಿಶೇಷಬ್ರಹ್ಮಣೋ ಭಗವತಃ । ಯಥಾ– ಅಲ್ಪತೇಜಸ್ವಿ–ಚಕ್ಷುಕೇಣ ಜನೇನ ಮಣಿಮಯೀ ಮುರ್ತ್ತಿ ಸಾಮಾನ್ಯತಸ್ತೇಜೋಮಯ್ಯೇವ ದೃಶ್ಯತೇ, ನ ತು ಮುಖ ನಾಸಿಕಾನೇತ್ರಕರ್ಣಾದಿವಿಶೇಷಮಯೀ । ತತಶ್ಚ ವಿದ್ಯಾಯಾಃ ಸಾಮಸ್ತ್ಯೇನೈವೋಪರಮೇ ಜೀವಬ್ರಹ್ಮೈಕ್ಯಮ್ । ಯದುಕ್ತಂ ತತ್ರೈವ (ಶ್ರೀಗೀ ೧೮/೫೫)– 'ತತೋ ಮಾಂ ತತ್ವತೋ ಜ್ಞಾತ್ವಾ ವಿಶತೇ ತದನನ್ತರಮ್ ॥' ಇತಿ । ಯಾ ತು ಚಿಚ್ಛಕ್ತಿವೃತ್ತೀನಾಂ ಸಾರಭೂತಾ ಕೃಪಾವಿಲಾಸರೂಪಾ ಪರಮೋಕ್ತಮಾ ಶುದ್ಧಾ ಭಕ್ತಿರ್ಜಾತಿಪ್ರಮಾಣಾಭ್ಯಾಮತ್ಯಧಿಕಾ ಸಾ ಪ್ರಬಲಾ, ಪರಮಸ್ವತಂತ್ರಾ, ಗುಣದೋಷಾದಿಕಮಪ್ಯಗಣಯಂತೀ, ಬದ್ಧೇಽಪಿ ಜೀವೆ ರಕ್ಷಸಪುಲಿನ್ದಪುಕ್ಕಶಾದೌ ದೂರಾಚಾರೇಽಪಿ ಯದೃಚ್ಛಯೈವೋದಯತೆ, ವಿಪ್ರೇ–ಸನ್ನ್ಯಾಸಿನಿ–ಮುಕ್ತೇಽಪಿ ನೋದಯತೆ, ತಯೈವಾದಿದ್ಯಾಪರ್ಯಂತ–ಸಮಸ್ತಕ್ಲೇಶ–ಧ್ವಂಸಃ । ಯದುಕ್ತಮ್ (ಶ್ರೀಮದ್ಭಾ ೩/೨೫/೩೩)– '*ಜರಯತ್ಯಾಶು ಯಾ ಕೋಷಂ ನಿಗೀರ್ಣಮನಲೋ ಯಥಾ*' ಇತಿ । ತಯೈವಾನನ್ತಚಿದ್ವಿಶೇಷಸ್ಯ ಭಗವತೋಽಪ್ಯಪರೋಕ್ಷಾನುಭವೋ ಭವೇತ್ । ಯಥಾ– ಬಹುತರತೇಜಸ್ವಿ–ಸ್ವಚಕ್ಷುಷ್ಕೇಣ ಜನೇನ ಸಾಮಾನ್ಯತಸ್ತೇಜೋಮಯೀ ವಿಶೇಷತಶ್ಚ ಮುಖನಾಸಿಕಾನೇತ್ರಕರ್ಣಾದಿಸೌಂದರ್ಯಮಯೀ ಚ ಮುರ್ತ್ತಿರ್ಭದ್ರೇಣೈವ ದೃಶ್ಯತ ಇತಿ

। ತದೇವಂ ಭಕ್ತಿರ್ದ್ವಿವಿಧಾ–ನಿರ್ಗುಣ ಗುಣಮಯೀ ಚ । ತತ್ರಾದ್ಯಯಾ, ಪಾಕದಶಾಯಾಂ ಪ್ರೇಮಭಕ್ತಿಸಂಜ್ಞಯಾ ಭಗವದ್ವಶೀಕಾರಃ, ಸಚ್ಚಿದಾನಂದಮಯ ಭಗವದ್ರೂಪಗುಣಲೀಲಾವ ಾಧುರ್ಯಾನುಭವಶ್ಚ । ದ್ವಿತೀಯಯಾ, ಸಾತ್ವಿಕ್ಯಾ ಸತ್ವಗುಣಾದ್ವಿಚ್ಯುತಯೈವ ನಿರ್ವಿಶೇಷ ಬ್ರಹ್ಮಸುಖಾನುಭವಮಾತ್ರಮಿತಿ । ತಸ್ಮಾದ್–ಬ್ರಹ್ಮಸುಖಾನುಭವ–ದಶಾತಃ ಪೂರ್ವಸ್ವೇವ ದಶಾಸು ಜೀವೇಷು ಮಾಯಾಯಾ ಅಧಕಾರ ಇತಿ ಸಿದ್ಧಮ್ । 'ಸತ್ಯಮೇವ ಪ್ರತೀತಂ ಸ್ಯಾದ್'ಯತೋಽಸತ್ಯಂ ತಥಾ ಯತಃ ತದ್ವಿದ್ಯಾದಾತ್ಮನೋ ಮಾಯಾಂ ಯಥಾಭಾಸೋ ಯಥಾ ತಮಃ'– 'ಇತ್ಯನುಕ್ತೇರಿತ್ಯನ್ಯಸ್ಮಿನ್ನರ್ಥೇಽಪ್ಯಾಶಯ ಈಕ್ಷತೇ । ಋತೇಽರ್ಥ–ಶಬ್ದೌ ಪರಿವೃತ್ಯಸಹಾವರ್ಪಿತೌ ಯತಃ । ಸ ಚಾರ್ಥೋ ಯಥಾ–ಬ್ರಹ್ಮಾನುಭವವತ್ಸ್ವಪಿ ಜನೇಷು ನಾನಾವಿಧೇಷು ಯಾ ಸ್ಪಷ್ಟಮಧಿಕರೋತಿ ಭಗವದಿಚ್ಛಾವಶಾತ್ ತ್ವದೀಯಸ್ವರೂಪರೂಪ ಗುಣಲೀಲಾಪ್ರಕಾಶಾಚರಣ–ಧುರಂಧರಾ ಸ್ವರೂಪಭೂತಾ ಶಕ್ತಿಸ್ತಸ್ಯಾ ಯೋಗಮಾಯಾಯಾ ಅಪಿ ಲಕ್ಷಣಂ ತಂತ್ರೇಣೈವಾಹ– 'ಋತೆ' ಇತಿ, ಆತ್ಮನಿ ಪರಮಾತ್ಮನಿ ಮಯಿ ಋತೇ ಜ್ಞಾತೇ ಸತಿ, ಅರ್ತೇರ್ಗತ್ಯರ್ಥತ್ವೇನ ಜ್ಞಾನಾರ್ಥತ್ವಾತ್ ಸಾಕ್ಷಾದನುಭೂತೆ ಸತೀತ್ಯರ್ಥಃ ।

'ಯದ್'–ಇತಿ ಇನ್ ಗತೌ ಶಾತ್ರನ್ತಂ; ತಪ್ತದೇನೈವ ಯತ್ತದಸ್ಯಾಕ್ಷೇಪಾತ್ । ಯತಃ ಅರ್ಥಂ–ಯತ್ ಪ್ರಯೋಜನಂ ಪ್ರಾಪ್ನುವದ್ವಸ್ತು ಅಪ್ರಾಕೃತಂ ಪ್ರಾಕೃತಂಚ, ಪ್ರತೀಯೇತ–ಯಯಾ ಪ್ರಕಾಶಿತಂ ಸತ್ ಸಪ್ರಯೋಜನಂ ವಸ್ತು ಪರಮಾತ್ಮಸಾಕ್ಷಾತ್ಕಾರವತಾ ಜನೇನ ಸಾಕ್ಷಾದನುಭೂಯೇತ್ಯರ್ಥಃ । ಯತಃ ಸಕಾಶಾತ್ ನ ಪ್ರತೀಯೇತ ಚ– ಯಯಾ ಆವೃತಂ ತದೈವ ವಾ ಸಮಯಾಂತರೇ ವಾ ನ ಪ್ರತೀಯೇತೇತ್ಯರ್ಥಃ । ತಾಂ ಆತ್ಮನೋ–ಭಗವತೋ ಮಮ ಮಾಯಾಂ ಯೋಗಮಾಯಾಖ್ಯಾಮನ್ತರಂಗಂ ಶಕ್ತಿಂ ವಿದ್ಯಾತ್ ಜಾನೀಯಾತ್ । ಮಾಯಯಾ ಪ್ರಯೋಜನಂ ವಿನೈವಾವ್ರಿಯತೆ, ಯೋಗಮಾಯಯಾ ತು ಪ್ರಯೋಜನಮುದ್ದಿಶ್ಯೈವೇತಿ ವಿವೇಚನೀಯಮ್ । ಯಥಾಭಾಸೋ ಯಥಾತಮ ಇತಿ– ಆಭಾಸೇನ ದೀಪಾದಿನಾ ಪ್ರಕಾಶಿತಂ ಘಟಪಟಾದಿಕಂ ಯಥಾ ಪ್ರತೀಯೇತ ತಮಸಾ ಆವೃತಂ ತನ್ನಾನುಭೂಯೇತ ಚ । ತಥೈವ ಸಾ ಮದಿಚ್ಛಾವಶಾದಾಭಾಸತಮೋ–ಧರ್ಮವತೀ ಯೋಗಮಾಯೇತ್ಯರ್ಥಃ । ಉದಾಹರಣನ್ತು ಯಥಾ– ಐಶ್ವರ್ಯದರ್ಶನೇಽಪಿ ಪ್ರೇಮಸಂಕೋಚಭಾವಜ್ಞಾಪನಾರ್ಥಂ ಭಗವತ್ಕುಕ್ಷೌ ಯಯಾ ಪ್ರಕಾಶಿತಂ ಪ್ರಾಕೃತಂ ವಿಶ್ವಮಪ್ರಾಕೃತಂ ಗೋಕುಲ–ಯಶೋದಾ–ಕೃಷ್ಣಾದಿಸ್ವರೂಪಂಚ ಯಯಾ ಮೋಹಿತಾ ಶ್ರೀಯಶೋದಾ ಸಾಕ್ಷಾದನುಬಭೂವ, ಕ್ಷಣಾನ್ತರೇ ಚ ಯಯಾ ಆವರಣಾನ್ನಾನುಬಭೂವ ಚ । ಯಥಾ–ಚೈಶ್ವರ್ಯಾನುಭೂತ್ಯಾ ಪ್ರೇಮಸಂಕೋಚಜ್ಞಾಪನಾರ್ಥಂ ಯಯಾ ಪ್ರಕಾಶಿತಂ ವಿಶ್ವರೂಪಂ ಪರಮಾತ್ಮಸ್ವರೂಪಂಚಾರ್ಜುನಃ ಸಾಕ್ಷಾದನುಬಭೂವ, ತತ್ರೈವ ವರ್ತಮಾನಮಪಿ ಕೃಷ್ಣಸ್ವರೂಪಂ ಯಯಾ ಆವರಣಾನ್ನಾನುಬಭೂಬ, ಸಮಯಾನ್ತರೇ ಚ ಯಯಾಚ್ಛಾದಿತಂ ವಿಶ್ವರೂಪಾದಿಕಂ ನಾನುಬಭೂವ, ದ್ವಿಭುಜಂ ಶ್ರೀಕೃಷ್ಣಮೇವಾನುಬಭೂವ। ಅತ್ರೈಕದೈವ ಏಕಸ್ಯ ಸ್ವರೂಪಸ್ಯ ಪ್ರಕಾಶನ–ಮನ್ಯಸ್ಯಾವರಣಮಿತಿ ಪೂರ್ವತೋ ವಿಶೇಷಃ । ಯಥಾ ಮಂಜುಮಹಿಮದರ್ಶನಯಾ ಬ್ರಹ್ಮಣ ಈಶ್ವರತ್ವಾಭಿಮಾನ–ನಿವರ್ತ್ತನಾರ್ಥಂ ಯಯಾ ಆವರಣ–ಪ್ರಕಾಶನಾಭ್ಯಾಂ ಲೀಲಾಪರಿಕರ–ವತ್ಸಬಾಲಾದ್ಯದರ್ಶನಕೃಷ್ಣಸ್ವರೂ ಪಭೂತ–ವತ್ಸಬಾಲಾದಿ–ದರ್ಶನ–ತದದರ್ಶನ–ಚತುರ್ಭುಜಾದಿದರ್ಶನ–ತದದರ್ಶನ–

ಶ್ರೀಕೃಷ್ಣಸ್ವರೂಪದರ್ಶನಾನಿ ಪ್ರಾಪ, ಯಯಾ ಮೋಹಿತಃ ಪರಮೇಷ್ಠೀ । ಅತ್ರೈಕಸ್ಮಿನ್ನೇವ ಪರಮೇಷ್ಠಿನಿ ವಿವಿಧಸ್ವರೂಪಾವರಣಪ್ರಕಾಶನಯೋಃ ಪೌನಃಪುನ್ಯಮಿತಿ ವಿಶೇಷಃ । ಯಥಾ ಚ– 'ಭಗವದ್ವಪುಃ ಸ್ವರೂಪತ ಏವ ಪರಿಚ್ಛಿನ್ನಮಪರಿಚ್ಛಿನ್ನಂ ಚಾತರ್ಕ್ಯಮ್' ಇತಿ ಜ್ಞಾನಾರ್ಥಂ ತಥಾ 'ಕೇವಲಭಜನಶ್ರಮಸ್ತಜ್ಜನ್ಯಾ ಭಗವತ್ಕೃಪಾ ಚೇತ್ಯುಭಾಭ್ಯಾಮೇವ ಭಗವದ್ವಶೀಕಾರ' ಇತಿ ಜ್ಞಾಪನಾರ್ಥಂಚ ದಾಮಬಂಧಲೀಲಾಯಾಂ ಯುಗಪದೇವ ಯಯೋದಾಕೃಷ್ಣಯೋರಭೀಪ್ಸಿತೇ ಬಂಧನಾಬಂಧನೇ ವಿಭೂತ್ವಸ್ಯ ಯುಗಪದೇವಾವರಣಪ್ರಕಾಶನಾಭ್ಯಾಂ ವೇಷ್ಟಯನ್ತ್ಯಾ ಕಿಂಕಿಣ್ಯಾ ದ್ವಚ್ಯಂಗುಲನ್ಯೂನ–ದಾಮ್ನಾ ಚಾವೇಷ್ಟಯತಾ ಸೂಚಿತೆ ದರ್ಶಯನ್ತ್ಯಾಪಿ ವಸ್ತುತಃ ಕೃಷ್ಣಸ್ಯೈವಾಭೀಪ್ಸಿತಮಬಂಧನಂ ಸಾಧಯಂತ್ಯಾ ಯಯಾ ಮೋಹಿತಾ ವ್ರಜೇಶ್ವರೀ ವಿಸ್ಮಯರಸಂ ಕ್ಷಣಮನುಬಭೂವ । ಪಶ್ಚಾತ್ತಸ್ಯಾ ಅಪ್ಯಭೀಪ್ಸಿತಂ ಕೃಷ್ಣಸಮ್ಮತ್ಯಾ ಸಾಧಯಿತುಂ ವಿಭೂತ್ವಂ ಯಯಾ ಖಲ್ವಾವೃತಮೇವೇತ್ಯತಃ ಸಾ ಕೃಷ್ಣಂ ಬಬಂಧೈವ । ತತ್ರೈಕದೈವೈಕಸ್ಯೈವ ವಿಭೂತ್ವಸ್ಯಾವರಣಪ್ರಕಾಶನೇ ಇತಿ ಪೂರ್ವಪೂರ್ವತೋ ವಿಶೇಷಃ । ಯಥಾ ಚ ಪ್ರತಿಸ್ವನಿಮಂತ್ರಣಾದಿಸಿಧ್ಯರ್ಥಂ ಶ್ರುತದೇವ–ಬಹುಲಾಶ್ವ–ರುಕ್ಮಿಣೀ–ಸತ್ಯಭಾಮಾದಿ ಗೃಹಸ್ಥಿತಸ್ಯ ತಸ್ಯ ತತ್ತತ್ಸ್ವರೂಪಸ್ಯ ಯಯೈವ ಯುಗಪದೇವಾವರಣಪ್ರಕಾಶನಾಭ್ಯಾಂ ತತ್ರ ತತ್ರ ಲೀಲಾಸಿದ್ಧಿರ್ವ್ಯಾಖ್ಯಾಸ್ಯತೆ । ಅತ್ರ ಶ್ರುತದೇವ–ಬಹುಲಾಶ್ವಾದಿ–ವ್ಯಕ್ತಿಭೇದಮಪೇಕ್ಷ್ಯೆವಾವರಣ–ಪ್ರಕಾಶನಯೋರ್ಯೌಗಪದ್ಯಂ ಪೂರ್ವತ್ರೈಕಸ್ಯಾಂ ಯಶೋದಾ–ಯಾಮೇವೇತಿ ವಿಶೇಷಃ । ಸಾ ಖಲು ಯೋಗಮಾಯೈವ ನ ತು ಮಾಯಾ; ತಯಾ ಮೋಹಿತಾನಾಮಪಿ ತೇಷಾಂ ಪರಮಾತ್ಮಸಾಕ್ಷಾತ್ಕಾರದರ್ಶನಾತ್ । ಸ ಚ ಪರಮಾತ್ಮಸಾಕ್ಷಾತ್ಕಾರೋ ಭಕ್ತಿಮಿಶ್ರಜ್ಞಾನವತಾಮವಿದ್ಯಾವಿದ್ಯಯೋರುಪರಾಮೆ ಸತಿ ತಥೈವಾವತಾರಸಮಯೇ ಕೃಷ್ಣಂ ಪ್ರೀತ್ಯಾ ಪಶ್ಯತಾಂ ತತ್ಕೃಪಾವಿಷಯೀಭೂತತ್ವಾದಪ್ರೇಮವತಾಮಪಿ, ಅನ್ಯದಾ ತು, ಪ್ರೇಮವತಾಮೇವ ಕೃಷ್ಣ–ರಾಮಾದಿ–ಸಾಕ್ಷಾತ್ಕಾರೋ ಭಾಗವತ್ ಮತೇನೋಚ್ಯತೆ । ತೇಷು ಯೋಗಮಾಯೈವಾಧಿಕರೋತಿ, ನ ತು ಮಾಯಾ । ಕೃಷ್ಣಂ ತದೀಚ್ಛಯಾ ಪಶ್ಯತಾಮಪಿ ಕಂಸಾದೀನಾಂ ದ್ವೇಷಲಕ್ಷಣಾನ್ತಃಕರಣದೋಷಾದೇವ ನ ಪರಮಾತ್ಮ–ಸಾಕ್ಷಾತ್ಕಾರೋ । ಯಥಾ–ಮತ್ಸ್ಯಣ್ಡಿಕಾಂ ಭುಂಜಾನಾನಾಮಪಿ ಪಿತ್ತದೂಷಿತರಸನಾನಾಂ ನ ಮತ್ಸ್ಯಣ್ಡಿಕಾಸ್ವಾದಾನುಭವಃ; ತೇಷು ಮಾಯೈವಾಧಿಕರೋತಿ, ನ ತು ಯೋಗಮಾಯಾ । ಮಾಯಾಶಕ್ತಿಶ್ಚ ಯೋಗಮಾಯೋತ್ಥಾ ತಸ್ಯಾ ವಿಭೂತಿರೇವ । ತದುಕ್ತಂ ನಾರದಪಂಚರಾತ್ರೆ ಶ್ರುತಿವಿದ್ಯಾಸಂವಾದೆ– '*ಅಸ್ಯಾ ಆವತಿಕಾಶಕ್ತಿರ್ಮಹಾಮಾಯಾಖಿಲೇಶ್ವರೀ । ಯಯಾ ಮಗ್ಧಂ ಜಗತ್ ಸರ್ವಂ ಸರ್ವದೇಹಾಭಿಮಾನಿನಂ ।*' ಇತಿ । ಭಗವತಾ ಸ್ವಸ್ವರೂಪತ್ವೇನಾಭಿಮನ್ಯಮಾನಾ ಸ್ವಸ್ವರೂಪಾತ್ ಪೃಥಗ್ಭೂತಾ ಸತೀ ಮಾಯಾಶಾಕ್ತಿಜಡೈವ । ಯಥಾ–ಸರ್ಪಸ್ಯ ಸ್ವರೂಪಭೂತಾಪಿ ತ್ವಕ್‌ತೇನ ತ್ಯಕ್ತಾ ಚೇತ್ತತಃ ಪೃಥಗ್ಭೂತಂ ಕಂಚುಕಂ ಜಡಂ ಸ್ಯಾತ್ । ತಥಾಚೋಕ್ತಂ ಶ್ರುತಿಭಿಃ (ಶ್ರೀಮದ್ಭಾ ೧೦/೮೭/೩೮)– '*ತ್ವಮುತ ಜಹಾಸಿ ತಾಮಹಿರಿವ ತ್ವಚಮಾತ್ತಭಗಃ*' ಇತಿ । ಸಾ ಚ ಮಾಯಾ ತ್ರಿವಿಧಾ–ಪ್ರಧಾನಮವಿದ್ಯಾ ವಿದ್ಯಾ ಚ; ಪ್ರಧಾನಸ್ಯ ಲಕ್ಷಣಂ ಜಾಯನ್ತೆಯೋಪಾಖ್ಯಾನೆ ವಕ್ಷ್ಯತೆ– '*ಪ್ರಧಾನೇನೋಪಾಧಯಃ ಸೃಷ್ಟಃ, ಸ ಚಾಸತ್ಯ ಏವ । ವಿದ್ಯಯಾ ತದಧ್ಯಾಸಧ್ವಂಸ ।*' ಇತಿ ತಿಸೃಣಾಂ ಶಕ್ತೀನಾಂ ಕಾರ್ಯಮ್; ತತ್ತನ್ಮಯಂ ಜಗದಿದಮಂಶೇನ ಸತ್ಯಮಂಶೇನಾಸತ್ಯಮ್; ತಥಾ ಜೀವಾನಾಂ ನಿತ್ಯತ್ವಾತ್ ಭಗವನ್ನಿಕೇತನಾದಿ–ಭಕ್ತ್ಯುಪಕರಣಾನಾಂ ನಿರ್ಗುಣತ್ವಾಚ್ಚಾಂಶೇನ ನಿತ್ಯತ್ವಮಪಿ

ವಾದಿಭಿರ್ಯಥಾ ಸ್ವಮತಂ ನಾನಾರೂಪತಯಾ ನಿರೂಪಿತಮ್– '*ಕಾರ್ಯಂ ಪ್ರಾಧಾನಿಕಂ ಸತ್ಯಂ ಕಾರ್ಯಮಾವಿದ್ಯಕಂ ಮೃಷಾ । ನಿತ್ಯಂ ತದ್ಭಕ್ತಿಸಂಬಂಧಮಿದಂ ತತ್ರಿತಯಾತ್ಮಕಮ್ ॥೧॥ ಪ್ರಾಧಾನಿಕಾಃ ಸ್ಯುರ್ದೇಹಾಸ್ತದ್ಧರ್ಮಾ ಆವಿಧ್ಯಕಾಃ ಪುನಃ । ಜೀವೇಷು ತತ್ತತ್ಸಂಬಂಧೋ ಭಕ್ತಿಶ್ಚೇನ್ನಿರ್ಗುಣಾಶ್ಚ ತೇ ॥೨॥ ಚಿಜ್ಜೀವಮಾಯಾ ನಿತ್ಯಾಃ ಸ್ಯುಸ್ತಿಸ್ರಃ ಕೃಷ್ಣಸ್ಯ ಶಕ್ತಯಃ । ತದ್ ವೃತ್ತಯಶ್ಚ ತಾಭಿಃ ಸ ಭಾತ್ಯೇಕಃ ಪರಮೇಶ್ವರಃ ॥೩॥ ಕಾರ್ಯಕಾರಣಯೋರೈಕ್ಯಾಚ್ಛಕಿ ಶಕ್ತಿಮತೋರಪಿ । ಏಕಮೇವಾದ್ವಯಂ ಬ್ರಹ್ಮ ನೇಹ ನಾನಾಸ್ತಿ ಕಿಂಚನ ॥೪॥ ಭಕ್ತಾನಾಮೇವ ಸಿದ್ಧಾನ್ತಶ್ಚತುಃಶ್ಲೋಕೀಯಮೀಲಿತಾ । ಶೀಲಿತಾ ಭವತಾದ್ಭಕ್ತೈಸ್ತೈರೇವ ನ ಕಿಲಾಪರೈಃ*' ಇತಿ ॥೩೩॥

ಭಾವಾನುವಾದ– ಜೀವಿಯ ಪರಮಾತ್ಮ–ಸಂಬಂಧಿತ ಜ್ಞಾನ ಮತ್ತು ವಿಜ್ಞಾನದ ಪ್ರತಿಯಾಗಿ ಮಾಯಾ ಅಂಶದ ಅನುಕೂಲ ಮತ್ತು ಅಂಶದ ಪ್ರತಿಕೂಲವಿರುತ್ತದೆ. ಆದರೆ ಪರಮಾತ್ಮರೂಪವಾದ ನನ್ನ ವಿಜ್ಞಾನವು ಪ್ರಾಪ್ತಿಯಾಗುವುದರಿಂದ ಕೇವಲ ಯೋಗಮಾಯಾ ಮಾತ್ರವೇ ಆ ಜೀವಿಯಲ್ಲಿ ಅಧಿಕಾರ ಮಾಡುತ್ತದೆ ಮತ್ತು ಆ ಸಮಯದಲ್ಲಿ ಕೇವಲ ಆ ಅನುಕೂಲವು ಮಾತ್ರವೇ ಇರುತ್ತದೆ. ಆದ್ದರಿಂದ ಮಾಯಾ ಮತ್ತು ಯೋಗಮಾಯಾ ಎರಡನ್ನು ನಿರೂಪಣೆ ಮಾಡುವುದು ಅವಶ್ಯವಾಗಿದೆ. ಇದನ್ನು ತಿಳಿಸಲೆಂದು– "ಯಥಾ ಆತ್ಮಮಾಯಾಯೋಗೇನ" ಅರ್ಥಾತ್ "ಯಾವ ರೀತಿ ನೀವು ನಿಮ್ಮ ಮಾಯಾಶಕ್ತಿಯ ಪ್ರಭಾವದಿಂದ ಈ ವಿಶ್ವದ ಸೃಷ್ಟಿ, ಪಾಲನೆ ಮತ್ತು ಸಂಹಾರ ಮಾಡುವಿರಿ, ಆ ವಿಷಯದಲ್ಲಿ ನನಗೆ ಬುದ್ಧಿ ಪ್ರಸಾದಿಸಿರಿ"– ಮುಂತಾದ ಶ್ಲೋಕದಲ್ಲಿ ಶ್ರೀಬ್ರಹ್ಮನ ಮೂಲಕ ಕೇಳಲಾದ ಪ್ರಶ್ನೆ– ನಿಮ್ಮ ಮಾಯಾ ಮತ್ತು ಯೋಗಮಾಯೆಯು ಯಾವ ರೀತಿಯಾಗಿದೆ'– ಇದಕ್ಕೆ ಉತ್ತರದಲ್ಲಿ ಶ್ರೀಭಗವಂತನು ವಿಸ್ತಾತರಪೂರ್ವಕವಾಗಿ ಕ್ರಮವಾಗಿ 'ಋತೇಽರ್ಥಂ' ಇತ್ಯಾದಿ ಪದವನ್ನು ಹೇಳುತ್ತಿದ್ದಾರೆ. 'ಅರ್ಥಂ' ಎಂದು ಹೇಳುವುದರಿಂದ ಸತ್ಯವಸ್ತುವಿನ ಬೋಧವಾಗುತ್ತದೆ, ಯಾವುದರಿಂದ ಆ ಸತ್ಯವಸ್ತುವಿಗೆ ಅತಿರಿಕ್ತವಾಗಿ ಬೇರೆ ಯಾವುದೂ ಸಹ ಪರಿಚಯವಾಗುವುದಿಲ್ಲ, ಆದರೆ ಸತ್ಯವಸ್ತು ಮಾತ್ರವೇ ಪರಿಚಯವಾಗುತ್ತದೆ– ಇದು ಮೊದಲ ಅರ್ಥ. ಅದೇ ರೀತಿ ಎಲ್ಲಿ ಅರ್ಥ (ಸತ್ಯವಸ್ತು) ಪರಿಚಯವಾಗುವುದಿಲ್ಲ, ಆದರೆ ಅನರ್ಥವೇ ಪರಿಚಯವಾಗುವುದೋ– ಇದು ಎರಡನೆಯ ಅರ್ಥ. 'ತತ್'–ಅದನ್ನು 'ಆತ್ಮನಿ' ಅರ್ಥಾತ್ ಪರಮಾತ್ಮರೂಪವಾದ ನನ್ನ 'ಮಾಯಾಂ' ಅಂದರೆ ಕರ್ಮದಿಂದ ವಿದ್ಯೆ ಮತ್ತು ಅವಿದ್ಯೆ– ಈ ಎರಡು ಪ್ರಕಾರದ ವೃದ್ಧಿಗಳಿಂದ ಯುಕ್ತವಾದ ಮಾಯಾ ಎಂಬ ಹೆಸರಿನ ಶಕ್ತಿಯನ್ನು ತಿಳಿದುಕೋ.

ಇದರಲ್ಲಿ ವಿದ್ಯೆಯ ಉದಾಹರಣೆ– ಜ್ಯೋತಿ ಅರ್ಥಾತ್ ದೀಪ ಇತ್ಯಾದಿ ಪ್ರಕಾಶ. ದೀಪಾದಿಯ ಪ್ರಕಾಶದ ಮೂಲಕ ಯಾವ ರೀತಿ ಮನೆಯಲ್ಲಿ ಸ್ಥಿತವಾದ ಮಡಿಕೆ–ವಸ್ತ್ರ ಮುಂತಾದ ವಸ್ತುಗಳು ಗೋಚರವಾಗುತ್ತದೆ, ಆದರೆ ಆ ಸಮಯದಲ್ಲಿ ದೀಪ ಇತ್ಯಾದಿಗಳನ್ನು ತರುವ ಮೊದಲು ಅಲ್ಲಿ ಕಲ್ಪಿತ ಮಡಿಕೆ–ವಸ್ತ್ರ ಇತ್ಯಾದಿ ವಸ್ತುಗಳ ಅಭಾವದೊಂದಿಗೆ ಸರ್ಪ, ಚೇಳು ಇತ್ಯಾದಿ ರೀತಿಯಾದ ಹಿಂಸಕ ಪ್ರಾಣಿಗಳು

ಮತ್ತು ಆಗಾಂತಕನ (ಕಳ್ಳನ) ಆಗಮನದ ಭಯಕ್ಕೆ ಕಾರಣವಾದಂತಹ ಯಾವ ಅನರ್ಥಗಳಿವೆಯೋ– ಈ ಎಲ್ಲವು ಗೋಚರವಾಗುವುದಿಲ್ಲ. ಅದೇ ರೀತಿ ಈ ವಿದ್ಯೆಯ ಕಾರಣದಿಂದಲೇ ಮುಕ್ತ ಜೀವಿಗಳಿಗೆ ತಮ್ಮ ಸ್ವರೂಪದಲ್ಲಿ ನಿತ್ಯ ಸ್ಥಿತವಾಗ್ಗಿರುವ ಜ್ಞಾನಾದಿಗಳದ್ದೇ ಅರಿವು ಉಂಟಾಗುತ್ತದೆ, ಆದರೆ ಅವಿದ್ಯೆ–ದಿಶೆಯಂತೆ ಆ ಜ್ಞಾನಾದಿಯ ಅಭಾವವು ಪರಿಚಯವಾಗುವುದಿಲ್ಲ. ಇಲ್ಲಿಯವರೆಗೂ ತಮ್ಮ ಸ್ವರೂಪದಿಂದ ಸಂಬಂಧರಹಿತವಾದ ದೇಹ, ದೈಹಿಕ, ಶೋಕ, ಮೋಹಾದಿಗಳದ್ದೂ ಸಹ ಗೋಚರವಾಗುವುದಿಲ್ಲ.

ಅವಿದ್ಯೆಗೆ ಉದಾಹರಣೆ– ತಮಸ್ಸು ಅರ್ಥಾತ್ ಅಂಧಕಾರ. ಯಾವ ರೀತಿ ಅಂಧಕಾರದಲ್ಲಿ ತನ್ನ ಮನೆಯಲ್ಲಿರುವ ಮಡಿಕೆ–ವಸ್ತ್ರಗಳು ವಸ್ತುಗಳು ಕಾಣಿಸಲ್ಪಡುವುದಿಲ್ಲವೋ, ಆಗ ಸರ್ಪ, ಕಳ್ಳ ಮುಂತಾದ ಅನಿಷ್ಠಕರವಾದ ವಸ್ತುಗಳು ಇಲ್ಲದಿದ್ದರೂ ಸಹ ಅವು ಇರಬಹುದೆಂಬ ಭಾವನೆ, ಇದಕ್ಕೆ ಕಾರಣ 'ಭಯ' ಮತ್ತು ಭಯದ ಕಾರಣವನ್ನೇ 'ಅನರ್ಥ'ದ ರೂಪದಲ್ಲಿ ಅರ್ಥಮಾಡಿಕೊಳ್ಳಲಾಗುತ್ತದೆ. ಸರಿಯಾಗಿ ಇದೇ ರೀತಿ ಅವಿದ್ಯಾವಶದಿಂದ ಬದ್ಧ ಜೀವಿಗಳಿಗೆ ತಮ್ಮಲ್ಲಿ ನಿತ್ಯ–ಸಂಬಂಧದಲ್ಲಿರುವ ಜ್ಞಾನ–ಆನಂದ ಇತ್ಯಾದಿಗಳು ಗೋಚರವಾಗುವುದಿಲ್ಲ, ಆದರೆ ತಮ್ಮ ಸ್ವರೂಪದಲ್ಲಿ ಇಲ್ಲದಿದ್ದರೂ ಸಹ ಬದ್ಧಜೀವಿಗಳಿಗೆ ತಮ್ಮ ಸಂಬಂಧದಲ್ಲಿರುವ ದೇಹ, ದೈಹಿಕ, ಶೋಕ, ಮೋಹ ಇತ್ಯಾದಿಗಳು ಗೋಚರಿಸುತ್ತವೆ. ಕುಸುಮ, ಶೃಂಗ(ಕೊಂಬು) ಮುಂತಾದ ವಸ್ತುಗಳು ಸತ್ಯವಾದದ್ದು, ಆದರೆ ಆಕಾಶ ಹಾಗೂ ಮೊಲ ಇದರೊಂದಿಗೆ ಯಾವುದೇ ಪ್ರಕಾರದ ಸಂಬಂಧವಿಲ್ಲದಿರುವ ಕಾರಣ ಆಕಾಶ–ಕುಸುಮ ಹಾಗೂ ಮೊಲ–ಶೃಂಗ ಮಿಥ್ಯ ಎನ್ನಲಾಗಿದೆ. ಅದೇ ರೀತಿ ದೇಹ ಮತ್ತು ದೇಹದ ಧರ್ಮ, ಶೋಕ, ಮೋಹ, ಸುಖ–ದುಃಖ ಮುಂತಾದವು ಪ್ರಧಾನ ಸಂಬಂಧವಿರುವ ಕಾರಣ ಅಸ್ತಿತ್ವದಲ್ಲಿದ್ದರೂ ಸಹ ಆ ಎಲ್ಲವು ಜೀವಿಯ ಸ್ವರೂಪದೊಂದಿಗೆ ಸಂಬಂಧವಿರುವುದಿಲ್ಲ ಆದಕಾರಣ ಶಾಸ್ತ್ರಗಳಲ್ಲಿ ದೇಹಾದಿಯನ್ನು ಮಿಥ್ಯ ಎಂದು ಹೇಳಲಾಗಿದೆ. ಜೀವಿಗೆ ದೇಹ ಸಂಬಂಧವು ಮಿಥ್ಯವಾಗಿದ್ದರೂ ಸಹ ಅದು ಅವಿದ್ಯೆಯ ಮೂಲಕ ಕಲ್ಪಿತವಾಗುತ್ತದೆ ಹಾಗೂ ವಿದ್ಯೆಯ ಮೂಲಕ ನಷ್ಟವಾಗುತ್ತದೆ. ಈ ವಿದ್ಯೆ ಹಾಗೂ ಅವಿದ್ಯೆಗೆ ಉದಾರಣೆ ಎಂದರೆ ಬೆಳಕು ಮತ್ತು ತಮಸ್ಸು (ಕತ್ತಲು). ಈ ಸ್ಥಳದಲ್ಲಿ (ಶ್ರೀಮದ್ಭಾ ೮/೫/೨೭) "ಯಾವ ಶ್ರೀಭಗವಂತನಲ್ಲಿ ಜೀವ–ಪಕ್ಷಪಾತಿ ಛಾಯೆ (ಅವಿದ್ಯೆ) ಮತ್ತು ಆತಪ (ಬಿಸಿಲು ಅರ್ಥಾತ್ ಅದನ್ನು ಚದರಿಸುವ ವಿದ್ಯೆ) ಯಾವುದೂ ಸಹ ಇರುವುದಿಲ್ಲವೋ, ಹಾಗೂ ಯಾರು ಮೂರು ಯುಗಗಳಲ್ಲಿಯೂ ಆವಿರ್ಭವಿಸಿದ್ದಾನೋ, ನಾವು ಅವನ ಶ್ರೀಚರಣಗಳಲ್ಲಿ ಶರಣಾಗುತ್ತೇವೆ" ಅರ್ಥಾತ್ ಶ್ರೀಬ್ರಹ್ಮನ ಈ ವಚನವನ್ನು ಪ್ರಮಾಣ ರೂಪದಲ್ಲಿ ಅರ್ಥಮಾಡಿಕೊಳ್ಳಬೇಕು.

ಕೆಲವರು ಹೀಗೆ ಹೇಳುತ್ತಾರೆ– ಇಲ್ಲಿಯವರೆಗು 'ತಮ' ಅರ್ಥಾತ್ ಅಂಧಕಾರದ ಈ ಉದಾಹರಣೆ ಮಾಯೆಯ ಆವರ್ಣ–ಅಂಶಮಾತ್ರಮಾಗಿದೆ. ಆವರ್ಣ ಮತ್ತು

ವಿಕ್ಷೇಪದ ದೃಷ್ಟಾಂತದಲ್ಲಿ ಸರ್ಪ, ಹುಲಿ ಮತ್ತು ಭೂತದ ಆವೇಶ ಮುಂತಾದುವುಗಳನ್ನು ತಿಳಿದುಕೊಳ್ಳಬೇಕು. ಇನ್ನೂ ಕೆಲವರು ಹೇಳುತ್ತಾರೆ- ಅದೂ ಸಹ ಮಾಯೆಯ ತಮೋಗುಣದ ಕಾರ್ಯವಾದ ಕಾರಣ ಆ 'ತಮ' ಶಬ್ದದ ಮೂಲಕವೇ ಅರ್ಥಮಾಡಿಕೊಳ್ಳಬೇಕು. ಈ ಪ್ರಕಾರವಾಗಿ ಜೀವಿಗೆ, ಸರ್ವತ್ರ ನೆಲಸಿರುವ ವಸ್ತುವಿನ ಅಪ್ರತ್ಯಾಯನ (ಅಪರಿಚಯ) ಹಾಗೂ ಅವಿಧ್ಯಮಾನ ವಸ್ತುವಿನ ಪ್ರತ್ಯಾಯನ (ಪರಿಚಯ)- ಈ ಎರಡು ಅವಿದ್ಯೆಗಳದ್ದೇ ಧರ್ಮವೆನ್ನಲಾಗಿದೆ ಮತ್ತು ಅದನ್ನು ಆವರ್ಣ ಮತ್ತು ವಿಕ್ಷೇಪ ಎಂಬ ಶಬ್ದಗಳ ಮೂಲಕ ಕರೆಯಲ್ಪಡುತ್ತವೆ.

ತದನಂತರ, 'ಅರ್ಥ' ಶಬ್ದವು ಧನ-ವಾಚಕವಾದ ಕಾರಣ ಶ್ಲೇಷ ಉಕ್ತಿಯಿಂದ ತನ್ನ ಬಹುಭಾಗ್ಯದ ಬಲದಿಂದ ಪ್ರಸಿದ್ಧವಾದ ಧನಪ್ರಾಪ್ತ ವ್ಯಾಪಾರಿಯಂತೆ ವಿದ್ಯಾಬಲದ ಮೂಲಕ ಜ್ಞಾನ ಮತ್ತು ಆನಂದ ಪ್ರಾಪ್ತವಾದ ಮುಕ್ತ ಜೀವಿ ಯಾವ ಪ್ರಕಾರ ಧನವಂತನ ರೂಪದಲ್ಲಿ ನೆಲೆಗೊಳ್ಳುತ್ತಾನೋ, ಅದೇ ಪ್ರಕಾರವಾಗಿ ಭಾಗ್ಯಹೀನತೆಯ ಕಾರಣದಿಂದ ಧನ ಪ್ರಾಪ್ತಿಸಿಕೊಳ್ಳುವುದರಲ್ಲಿ ಅಸಮರ್ಥನಾದ ವ್ಯಾಪಾರಿಯಂತೆ ಅವಿದ್ಯೆ ಮೂಲಕ ಬದ್ಧಜೀವಿಗೆ ಜ್ಞಾನ ಮತ್ತು ಆನಂದವು ಆವೃತ್ತವಾಗಿರುತ್ತದೆ, ಹಾಗೆ ಬದ್ಧಜೀವಿ ದರಿದ್ರನ ರೂಪದಲ್ಲಿ ನೆಲೆಗೊಳ್ಳುತ್ತಾನೆ- ಎಂದು ಅರ್ಥಮಾಡಿಕೊಳ್ಳಬೇಕು. ಈ ರೀತಿ ವಿದ್ಯೆಯ ಮೂಲಕ 'ತ್ವಂ-ಪದಾರ್ಥ' ಅಂದರೆ ಕೇವಲ ಜೀವಾತ್ಮನ (ಜೀವಿ ಹಾಗೂ ಜಗತ್-ಸಂಬಂಧದ ವಸ್ತುವಿನ) ಅನುಭವ ಮಾತ್ರ ಉಂಟಾಗುತ್ತದೆ, ಆದರೆ 'ತತ್-ಪದಾರ್ಥ' ಅಂದರೆ ಪರಮಾತ್ಮನ ಅನುಭವವು ಉಂಟಾಗುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಪರಮಾತ್ಮನು ನಿರ್ಗುಣನು, ಆದ್ದರಿಂದ ನಿರ್ಗುಣ ಭಕ್ತಿಯ ಮೂಲಕವೇ ಅವನ ಅಪರೋಕ್ಷ (ಸಾಕ್ಷಾತ್) ಅನುಭವವು ಸಂಭವಿಸಬಹುದು. ಶ್ರೀಮದ್ಭಾಗವತದಲ್ಲಿ(೧೧/೧೪/೨೧) ಭಗವಂತನು ಹೀಗೆ ಹೇಳಿದ್ದಾನೆ- "ನಾನು ಕೇವಲ ಅನನ್ಯ ಭಕ್ತಿಯ ಮೂಲಕ ಮಾತ್ರವೇ ಪ್ರಾಪ್ತನಾಗುತ್ತೇನೆ". ಹಾಗೂ (ಶ್ರೀಮದ್ಭ ೧೧/೨೫/೨೪) "ದೇಹಾದಿಯ ಅತಿರಿಕ್ತವಾದ ಆತ್ಮ-ಸಾಕ್ಷಾತ್ಕಾರರೂಪ ಜ್ಞಾನವನ್ನು ಸಾತ್ವಿಕ ಜ್ಞಾನ ಎಂದು, ದೇಹಾದಿಯನ್ನು ಆತ್ಮದ ರೂಪದಲ್ಲಿ ತಿಳಿಸಿಕೊಡುವ ಜ್ಞಾನವನ್ನು ರಾಜಸಿಕವೆಂದು ಹಾಗೂ ಜಾಗತಿಕ ಪದಾರ್ಥದ ಜ್ಞಾನ ಅಂದರೆ ಅದರಲ್ಲಿ ಮಮತೆಯ ಭಾವವನ್ನು ತಾಮಸಿಕ ಜ್ಞಾನ ಎಂದು ಕರೆಯಲ್ಪಡುತ್ತದೆ. ಆದರೆ ಪರಮಾತ್ಮ-ಭಾವದ ಅನುಭವವನ್ನು ಶಾಸ್ತ್ರಜ್ಞರು ನಿರ್ಗುಣ ಜ್ಞಾನದ ಹೆಸರಿನಿಂದ ದೃಢಪಡಿಸುತ್ತಾರೆ." -ಮುಂತಾದವನ್ನು ಶ್ರೀಭಗವಂತನು ಹೇಳಿರುವುದರ ಅನುಸಾರವಾಗಿ ದೇಹಾದಿಯ ಅತಿರಿಕ್ತ ಆತ್ಮಜ್ಞಾನರೂಪಿಣಿಯಾದ ವಿದ್ಯೆ ಸಾತ್ವಿಕವಾದದ್ದು, ಆದ್ದರಿಂದ ಅದರ ಮೂಲಕ ಗುಣಾತೀತ ಪರಮಾತ್ಮನ ಅನುಭವವು ಏನಾದರೂ ಆಗದಿದ್ದರೆ, ಅದು ವಿದ್ಯೆಯದ್ದೇ ಲೋಪವಾಗಿಬಿಡುತ್ತದೆ. ಈ ಪ್ರಕಾರವಾಗಿ ಶ್ರೀಭಗವಂತನು ಉದ್ಧವನಿಗೆ ಹೇಳುತ್ತಾನೆ-

ದ್ರವ್ಯಂ ದೇಶಃ ಫಲಂ ಕಾಲೋ ಜ್ಞಾನಂ ಕರ್ಮಂ ಚ ಕಾರಕಃ ।
ಶ್ರದ್ಧಾವಸ್ಥಾಕೃತಿರ್ನಿಷ್ಠಾ ತ್ರೈಗುಣ್ಯಃ ಸರ್ವ ಏವ ಹಿ ॥

ಯೇನೇಮೇ ನಿರ್ಜಿತಾಃ ಸೌಮ್ಯ ಗುಣಾ ಜೀವೇನ ಚಿತ್ತಜಾಃ ।
ಭಕ್ತಿಯೋಗೇನ ಮನ್ನಿಷ್ಠೋ ಮದ್ಭಾವಾಯ ಪ್ರಪದ್ಯತೇ ॥
(ಶ್ರೀಮದ್ಭಾ ೧೧/೨೫/೩೦, ೩೨)

ಅರ್ಥಾತ್ "ನನ್ನಲ್ಲಿ ನಿರ್ಗುಣ ಭಕ್ತಿ ಮತ್ತು ಶ್ರದ್ಧೆ ಇತ್ಯಾದಿಯನ್ನು ಹೊರತುಪಡಿಸಿ ಪವಿತ್ರ ಹಿತಕರ ದ್ರವ್ಯ; ವನ ಮತ್ತು ಗ್ರಾಮ ಇತ್ಯಾದಿ ದೇಶ; ಸಾತ್ವಿಕ ಸುಖ ಇಂತಹ ಫಲ; ನಿರಪೇಕ್ಷೆಯ ಭಾವದಿಂದ ತನ್ನ ಕರ್ಮದ ಮೂಲಕ ಕರ್ಮ–ಮಿಶ್ರ–ಭಕ್ತಿಯೊಂದಿಗೆ ನನ್ನ ಭಜನೆಯಿಂದ ಸತ್ವಗುಣದ ಮೂಲಕ ರಜೋ ಹಾಗೂ ತಮೋಗುಣದ ಕ್ರಿಯೆಗಳು ಮರೆಯಾದರೆ ಜ್ಞಾನ; ಶಮ (ಮನೋನಿಗ್ರಹ), ದಮ ಹಾಗೂ ಸುಖಾದಿಯ ಸಂವೃದ್ಧಿಯ ಕಾಲ; ಸಾತ್ವಿಕ, ರಾಜಸಿಕ ಹಾಗೂ ತಾಮಸಿಕ– ಈ ಮೂರು ಪ್ರಕಾರದ ಜ್ಞಾನ; ನನ್ನಲ್ಲಿ ಅರ್ಪಣರೂಪದಲ್ಲಿ ಕರ್ಮ; ಸಂಗ–ರಹಿತ ಸಾತ್ವಿಕ ಕರ್ತಾ; ಸಾತ್ವಿಕ, ರಾಜಸ ಮತ್ತು ತಾಮಸ– ಈ ಮೂರು ಪ್ರಕಾರದ ಶ್ರದ್ಧೆ; ಜಾಗರಣ–ಸ್ವಪ್ನ–ಸುಷುಪ್ತಿ– ಈ ಮೂರು ಪ್ರಕಾರದ ಅವಸ್ಥೆ; ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ ಮುಂತಾದ ಸ್ಥಾವರದವರೆಗು ಆಕೃತಿ; ಸತ್ವ ಇತ್ಯಾದಿ ಗುಣದ ಅಧಿಕತೆಯಿಂದ ಉದಿತವಾಗುವ ಸ್ವರ್ಗ, ನರಕ ಇತ್ಯಾದಿಯ ಪ್ರಾಪ್ತಿಯ ನಿಷ್ಠೆ ಅರ್ಥಾತ್ ಗತಿ– ಈ ಎಲ್ಲವೂ ತ್ರಿಗುಣಾತ್ಮಕವಾದದ್ದು. ಹೇ ಪ್ರಿಯದರ್ಶನ ಉದ್ಧವ! ಪುರುಷನ ಗುಣ–ಕರ್ಮವಶದಿಂದ ಈ ಎಲ್ಲ ಕಾಮ–ಕ್ರೋಧಾದಿರೂಪ ಸಂಸಾರದ ಕಾರಣ ಸಮೂಹವು ದೆದೀಪ್ಯಮಾನವಾಗಿರುತ್ತದೆ. ಯಾವ ಜೀವಿ ನನ್ನಲ್ಲಿ ಏಕಾಂತಿಕ ನಿಷ್ಠೆಯ ಕಾರಣದಿಂದ ಕೇವಲ–ಭಕ್ತಿಯೋಗದ ಮೂಲಕ ತನ್ನ ಮನಸ್ಸಿನಲ್ಲಿ ಉದಿತವಾಗುವ ಗುಣಗಳನ್ನು ಜಯಿಸಲು ಸಮರ್ಥನಾಗುತ್ತಾನೋ, ಆ ಜೀವಿಯೇ ನನ್ನ ಭಾವ ಅರ್ಥಾತ್ ಪಾರ್ಷದತ್ವರೂಪ ಮೋಕ್ಷವನ್ನು ಪ್ರಾಪ್ತಿಸಿಕೊಳ್ಳುವಲ್ಲಿ ಸಮರ್ಥನಾಗುತ್ತಾನೆ.'

ಆಗ ಮತ್ತೆ ಮುಕ್ತಜೀವಿ ಪರಮಾತ್ಮನ ಅಪರೋಕ್ಷ ಅನುಭವಕ್ಕಾಗಿ ಯಾವ ರೀತಿಯಿಂದ ಭಕ್ತಿ ಪ್ರಾಪ್ತಿಸಿಕೊಳ್ಳಬಹುದು? ಎಂದು ಹೀಗೆ ಪ್ರಶ್ನಿಸಬಹುದು, ಈ ಪ್ರಶ್ನೆಗೆ ಉತ್ತರದಲ್ಲಿ ವಿವರಿಸುತ್ತಾರೆ– ಜ್ಞಾನಾಧಿಕಾರಿಗಳಿಗೆ ಭಕ್ತಿ–ಮಿಶ್ರಿತ ಸಾಂಖ್ಯ–ಯೋಗ–ತಪ ಇತ್ಯಾದಿಯಿಂದ ಉದಿತವಾಗುವ ಅವಿದ್ಯಾ–ನಿನಾಶಿನಿ ವಿದ್ಯೆಯ ಮೂಲಕ ಪ್ರಥಮವಾಗಿ 'ತ್ವಂ' ಪದಾರ್ಥದ ಅನುಭವ ಉಂಟಾಗುತ್ತದೆ. ತದನಂತರ ಇಂಧನದ ಅಭಾವದಿಂದ ಯಾವ ರೀತಿ ಬೆಂಕಿಯು ಆರಿಹೋಗುತ್ತದೋ, ಅದೇ ರೀತಿ ಅವಿದ್ಯೆಯಿಂದ ವಿಮುಕ್ತ ಜೀವಿಯ ವಿದ್ಯೆಯೂ ಕ್ರಮೇಣ ನಿವೃತ್ತವಾಗುತ್ತದೆ. ಅದೇ ನಿವೃತ್ತಿಯ ತಾರತಮ್ಯ–ಕ್ರಮದಿಂದ ಗ್ರಹಣದಿಂದ ಮುಕ್ತವಾದ ಚಂದ್ರಕಲೆಯ ಉದ್ಗಮದಂತೆ ಪೂರ್ವಸಿದ್ಧ ಭಕ್ತಿಯು ಕ್ರಮೇಣ ಪ್ರಕಟಿತವಾಗುತ್ತದೆ ಹಾಗೂ ವರ್ಧಿಸುತ್ತದೆ. ಅದೇ ಭಕ್ತಿಯ ಪುನಃ–ಪುನಃ ಅನುಶೀಲನಯೆ ಮೂಲಕವೇ 'ತತ್' ಪದಾರ್ಥವು ಪರಮಾತ್ಮನ ಅನುಭವದ ತಾರತಮ್ಯವು ಸಿದ್ಧಿಸುತ್ತದೆ. ಶ್ರೀಗೀತೆಯಲ್ಲಿ (೧೮/೫೪) ಶ್ರೀಭಗವಂತನು ಹೀಗೆ ಹೇಳಿದ್ದಾನೆ– 'ಬ್ರಹ್ಮನಲ್ಲಿ ಸ್ಥಿತನಾದ ಪ್ರಸನ್ನಚಿತ್ತ

ವ್ಯಕ್ತಿ ಎಂದಿಗೂ ಶೋಕಿಸುವುದೂ ಇಲ್ಲ ಮತ್ತು ಆಕಾಂಕ್ಷೆಪಡುವುದು ಇಲ್ಲ. ಅವನು ಸಮಸ್ತ ಭೂತಗಳಲ್ಲಿ ಸಮದರ್ಶಿಯಾಗಿ ಪ್ರೇಮಲಕ್ಷಣಯುಕ್ತ ನನ್ನ ಪರಾಭಕ್ತಿಯನ್ನು ಪ್ರಾಪ್ತಿಸಿಕೊಳ್ಳುತ್ತಾನೆ'. ಇಲ್ಲಿ 'ಪರಾ' ಶಬ್ದದ ಅರ್ಥ ಪೂರ್ವಕಾಲದ ಅಂದರೆ ಮಾಯೆಯ ಗುಣ–ದೋಷದ ಅಭಾವವಶದಿಂದ 'ಶ್ರೇಷ್ಠ' ಅಥವಾ 'ಪರಿಪೂರ್ಣ' ಎನ್ನಲಾಗಿದೆ.

ಅನಂತರ, "ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ವತಃ । ಅರ್ಥಾತ್ ನಾನು ಯಾವ ರೂಪದಲ್ಲಿ ಹಾಗೂ ಯಾವ ಸ್ವಭಾವದಿಂದ ಯುಕ್ತನಾಗಿದ್ದೇನೋ, ಜೀವಿ ಅದನ್ನು ಕೇವಲ ಭಕ್ತಿಯ ಮೂಲಕ ಮಾತ್ರ ಅರ್ಥಮಾಡಿಕೊಳ್ಳಬಲ್ಲ" (ಶ್ರೀಗೀತ ೧೮/೫೫)– ಇತ್ಯಾದಿ ಹೇಳಿಕೆಗಳಿಂದ ಜಾತಿಪ್ರಮಾಣ ಮೂಲಕ ಅಲ್ಪೀಭೂತ ಅಂದರೆ ಜ್ಞಾನಮಿಶ್ರ ಭಕ್ತಿಯ ಮೂಲಕ ನಿರ್ವಿಶೇಷ ಬ್ರಹ್ಮನದ್ದೇ ಅನುಭವವಾಗುತ್ತದೆ, ಆದರೆ ಅನಂತ ಚಿತ್–ವಿಶೇಷ ಬ್ರಹ್ಮ–ಶ್ರೀಭಗವಂತನ ಅನುಭವವು ಆಗುವುದಿಲ್ಲ. ಯಾವ ರೀತಿ ಅಲ್ಪ ದೃಷ್ಟಿಯ ಕಣ್ಣಿನ ವ್ಯಕ್ತಿ ರತ್ನಕಚಿತ ಮೂರ್ತಿಯನ್ನು ಕೇವಲ ಸಾಮಾನ್ಯ ತೇಜೋಮಯದ ರೂಪದಲ್ಲಿ ದರ್ಶನ ಮಾಡುತ್ತಾನೆ, ಅವನಿಗೆ ಮುಖ, ಮೂಗು, ಕಣ್ಣು ಇತ್ಯಾದಿ ವಿಭಿನ್ನ ಅವ್ಯಯಗಳೊಂದಿಗೆ ಯುಕ್ತವಾದ ದರ್ಶನವಾಗುವುದಿಲ್ಲ. ಅದೇ ರೀತಿ ಸಮಸ್ತ ವಿದ್ಯೆಗಳು ನಿವೃತ್ತವಾದರೆ ಯಾವ ನಿರ್ಗುಣ ಭಾವವು ಪ್ರಕಟಿತವಾಗುತ್ತದೋ, ಅದು ಭಕ್ತಿಯ ಬಲದಿಂದ ನಿರ್ವಿಶೇಷ ಬ್ರಹ್ಮಾನುಭವದ ಯಾವ ಪೂರ್ಣತೆಯು ಪ್ರಾಪ್ತವಾಗುತ್ತದೋ– ಅದನ್ನೇ 'ನಿರ್ವಾಣ' ಎಂಬ ಶಬ್ದದಿಂದ ಕರೆಯಲ್ಪಡುವ ಜೀವ–ಬ್ರಹ್ಮೈಕತ್ವ. ಪುನಃ ಇದೇ ಶ್ಲೋಕದ ಮತ್ತೊಂದು ಬೇರೆ ಚರಣದಲ್ಲಿ ಕಾಣಿಸಲ್ಪಡುತ್ತದೆ– "ತತೋ ಮಾಂ ತತ್ವತೋ ಜ್ಞಾತ್ವಾ ವಿಶತೆ ತದನಂತರಮ್ । ಅರ್ಥಾತ್ ತದನಂತರ ನನ್ನಲ್ಲಿ ಸಂಬಂಧಿತವಾದ ವಸ್ತುಜ್ಞಾನದಿಂದ ಜೀವಿ ನನ್ನಲ್ಲಿ ಪ್ರವೇಶ ಮಾಡುತ್ತಾನೆ ಅರ್ಥಾತ್ ನನ್ನನ್ನು ಪ್ರಾಪ್ತಿಸಿಕೊಳ್ಳುತ್ತಾನೆ."

ಆದರೆ, ಶ್ರೀಭಗವಂತನ ಚಿತ್–ಶಕ್ತಿಯ ವೃತ್ತಿಗಳ ಸಾರಭೂತವು ಭಗವತ್–ಕೃಪಾ–ವಿಲಾಸ–ರೂಪ, ಪರಮೋತ್ತಮ, ಎರಡೂ ಜಾತಿ–ಪ್ರಮಾಣಗಳ (ಅಂದರೆ ಗೀತೆಯ ಹಿಂದಿನ ಎರಡು ಶ್ಲೋಕಗಳ) ಅತೀತವಾದ ಯಾವ ಶುದ್ಧಭಕ್ತಿ ಇದೆಯೋ, ಅದೇ ಪ್ರಬಲವಾದದ್ದು, ಪರಮ ಸ್ವತಂತ್ರ ಹಾಗೂ ಗುಣ–ದೋಷಗಳನ್ನು ಎಣಿಸದಿರುವಂತಹದ್ದು. ಈ ಭಕ್ತಿಯು ರಾಕ್ಷಸರು, ಪುಂಡರು, ಅಂಜುಬುರುಕರು ಇತ್ಯಾದಿ ದುರಾಚಾರಿಗಳಾದ ಬದ್ಧ ಜೀವಿಗಳಲ್ಲೂ ಸಹ ತನ್ನ ಇಚ್ಛೆಯ ಅನುಸಾರವಾಗಿ ಉದಿತವಾಗಬಹುದು, ಇನ್ನೂ ಕೆಲವೊಮ್ಮೆ ಮಹಾತ್ಯಾಗಿ ಅತ್ಯಂತ ಮುಕ್ತ ಶ್ರೇಷ್ಠ ವಿಪ್ರರಿಗೂ ಸಹ ಉದಿತವಾಗದಿರಬಹುದು. ಈ ಭಕ್ತಿಯ ಮೂಲಕವೇ ಅವಿದ್ಯೆಯವರೆಗು ಸಮಸ್ತ ಕ್ಲೇಶಗಳನ್ನು ಧ್ವಂಸ ಮಾಡಬಹುದು, ಶ್ರೀಮದ್ಭಾಗವತದಲ್ಲಿ (೩/೨೫/೩೩) ಭಗವಾನ್ ಶ್ರೀಕಪಿಲದೇವರು ಹೀಗೆ ಹೇಳುತ್ತಾರೆ– "ಹೊಟ್ಟೆಯಲ್ಲಿರುವ ಅಗ್ನಿಯು ಯಾವ ರೀತಿ ತಿಂದ ಅನ್ನವನ್ನು

ಅರಗಿಸಿ ಜೀರ್ಣ ಮಾಡುತ್ತದೋ, ಅದೇ ರೀತಿ ಭಕ್ತಿಯೂ ಸಹ ಅವಿದ್ಯೆಯಿಂದ ಉತ್ಪನ್ನವಾದ ವಾಸನಾಮಯ ಲಿಂಗಶರೀರವನ್ನು ನಾಶ ಮಾಡುತ್ತದೆ." ಈ ಭಕ್ತಿಯ ಬಲದಿಂದ ಮಾತ್ರ ಅನಂತ ಚಿತ್-ವಿಲಾಸಮಯ ಶ್ರೀಭಗವಂತನನ್ನೂ ಸಹ ಅದೇ ಪ್ರಕಾರ ಅಪರೋಕ್ಷ (ಪ್ರತ್ಯಕ್ಷ) ಅನುಭವವಾಗುತ್ತದೆ, ಹೇಗೆಂದರೆ ಅತ್ಯಂತ ತೇಜ ದೃಷ್ಟಿಯಿಂದ ಯುಕ್ತನಾದ ವ್ಯಕ್ತಿಯು ಅಲ್ಪ ಬೆಳಕಿನಲ್ಲು ಹಾಗೂ ವಿಶೇಷವಾಗಿ ಸುಸಜ್ಜಿತ ಮುಖ, ಮೂಗು, ಕಣ್ಣು, ಕಿವಿ ಇತ್ಯಾದಿ ಅಂಗ ಸೊಗಸಿನಿಂದ ಯುಕ್ತವಾದ ಸೌಂದರ್ಯಮಯ ಮೂರ್ತಿಯ ಸಂಪೂರ್ಣ ದರ್ಶನ ಮಾಡುತ್ತಾನೆ.

ಭಕ್ತಿ ಎರಡು ಪ್ರಕಾರವಾಗಿದೆ- ನಿರ್ಗುಣ ಮತ್ತು ಗುಣಮಯಿ. ಇದರಲ್ಲಿ ಮೊದಲನೆಯ ನಿರ್ಗುಣ ಭಕ್ತಿಯು ತನ್ನ ಪರಿಪಕ್ವ (ಸಿದ್ಧವಾದ) ದಿಶೆಯಲ್ಲಿ 'ಪ್ರೇಮಭಕ್ತಿ' ಎಂದು ಕರೆಯಲ್ಪಡುತ್ತದೆ. ಈ ಪ್ರೇಮಭಕ್ತಿಯ ಮೂಲಕವೇ ಶ್ರೀಭಗವಂತನ ವಶೀಕರಮಯಿಯವಾದ ಸಚ್ಚಿದಾನಂದಮಯ ಭಗವಂತನ ರೂಪ, ಗುಣ, ಲೀಲೆ ಹಾಗೂ ಮಾಧುರ್ಯದ ಅನುಭವವಾಗುತ್ತದೆ. ಎರಡನೆಯದಾದ ಗುಣಮಯಿ ಭಕ್ತಿಯು ಸಾತ್ವಿಕ ಭಕ್ತಿಯ ಮೂಲಕ ಸತ್ವ-ಗುಣದಿಂದ ವಿಮುಕ್ತವಾಗುವುದರಿಂದ ಮಾತ್ರ ನಿರ್ವಿಶೇಷ-ಬ್ರಹ್ಮಸುಖಕದ ಅನುಭವವಾಗುತ್ತದೆ. ಆದ್ದರಿಂದ ಬ್ರಹ್ಮಸುಖಾನುಭವ ಸ್ಥಿತಿಯ ಪೂರ್ವ ಸ್ಥಿತಿಯಲ್ಲೇ ಜೀವಿಗಳ ಮೇಲೆ ಮಾಯೆಯ ಅಧಿಕಾರವು ಅಂದರೆ ಮುಕ್ತಿಗೆ ಮೊದಲೇ ಬದ್ಧಾವಸ್ಥೆ ಇರುತ್ತದೆ. "ಸತ್ಯಮೇವ ಪ್ರತೀತಂ ಸ್ಯಾದ್ ಯತೋಽಸತ್ಯಂ ತಥಾ ಯತಃ ತದ್ವಿದ್ಯಾತ್ಮನೋ ಮಾಯಾಂ ಯಥಾಭಾಸೋ ಯಥಾ ತಮಃ" ಅರ್ಥಾತ್ ಯಾವ ಕಾರಣದಿಂದ ಸತ್ಯದಂತೆ ಅಸತ್ಯವೂ ಸಹ ಕಾಣಿಸಲ್ಪಡುತ್ತದೋ, ಅದು ನನ್ನ ಆಭಾಸರೂಪ ಹಾಗೂ ತಮೋರೂಪ ಮಾಯೆ ಎಂದು ಅರ್ಥಮಾಡಿಕೊ"- ಈ ರೀತಿಯಾದ ಉಕ್ತಿ ಇಲ್ಲವಾದ ಕಾರಣ ಇದಕ್ಕೆ ಅತಿರಿಕ್ತವಾಗಿ ಅನ್ಯ ಅರ್ಥದಲ್ಲೂ ಸಹ ಅಭಿಪ್ರಾಯ ನೋಡಲಾಗುತ್ತದೆ, ಏಕೆಂದರೆ 'ಋತೆ' ಹಾಗೂ 'ಅರ್ಥ' ಶಬ್ದವು 'ಪರಿವೃತ್ತಿ' (ಒಂದು ಅರ್ಥಾಲಂಕಾರವು ಯಾವುದರಲ್ಲಿ ಒಂದು ವಸ್ತುವನ್ನು ಕಂಡು ಬೇರೆ ಅನ್ಯವನ್ನು ಗ್ರಹಿಸುವುದು ಅಂದರೆ ಅದಲು-ಬದಲಾಗಿ ಅರ್ಥಮಾಡಿಕೊಳ್ಳುವುದು) ಹೀಗೆ ಆಗದಿರುವ ಕಾರಣವನ್ನು ಕೊಟ್ಟಿದ್ದಾರೆ. ನಾನಾ ಪ್ರಕಾರದ ಬ್ರಹ್ಮಾನುಭವಶೀಲ ಜನರಲ್ಲಿಯೂ ಸಹ ಯಾವ ಶಕ್ತಿಯು ಸ್ಪಷ್ಟವಾಗಿ ತನ್ನ ಅಧಿಕಾರವವನ್ನು ಸ್ಥಾಪಿಸಿಕೊಳ್ಳುತ್ತದೆ ಹಾಗೂ ಶ್ರೀಭಗವಂತನ ಯಾವ ಸ್ವರೂಪಭೂತ ಶಕ್ತಿ ಭಗವಂತನ ಇಚ್ಛೆಯಂತೆ ಭಗವಂತನ ಸ್ವರೂಪ, ರೂಪ, ಗುಣ ಹಾಗೂ ಲೀಲೆಗಳ ಪ್ರಕಟಣೆ ಹಾಗೂ ಅದರ ಆವರ್ಣದ ಏಕಮಾತ್ರ ಅಧಿಕಾರಣಿಯಾಗಿ ಇರುವಳೋ, ಶ್ರೀಭಗವಂತನು ಆ ಯೋಗಮಾಯೆಯ ಲಕ್ಷಣವನ್ನೂ ಸಹ 'ಋತೆ' ಶ್ಲೋಕದಲ್ಲಿ ವಿವರವಾಗಿ ವರ್ಣಿಸುತ್ತಿದ್ದಾರೆ.

ಆತ್ಮ ಅರ್ಥಾತ್ ಪರಮಾತ್ಮರೂಪಿ ನನ್ನನ್ನು 'ಋತೆ' ಅರ್ಥಾತ್ ಅರ್ಥಮಾಡಿಕೊಂಡರೆ (ಇಲ್ಲಿ ಋ-ಧಾತುವಿನ ಗತ್ಯರ್ಥಕ ಹೇತುವು ಜ್ಞಾನಾರ್ಥದಲ್ಲಿ ವ್ಯವಹಾರವಾಗುತ್ತದೆ)

ಅರ್ಥಾತ್ ಸಾಕ್ಷಾತ್ ಅನುಭವವಾದರೆ– ಇದೇ ಅರ್ಥ. ಈ ಸಂದರ್ಭದಲ್ಲಿ 'ಶತೃ' ಪದದ ಮೂಲಕ 'ಯತ್' ಪದದ ಆಕ್ಷೇಪವಾಗಿದೆ ಹಾಗೂ ಈ ಕಾರಣದಿಂದ ಗತ್ಯರ್ಥಕ 'ಇಣ್' ಧಾತು 'ಶತೃ' ಪ್ರತ್ಯೇಕವಾದರೆ 'ಯತ್' ಪದವು ಹುಟ್ಟಿದೆ. 'ಯತಃ' ಅರ್ಥಂ' ಅರ್ಥಾತ್ ಯಾವ ಶಕ್ತಿಯ ಕಾರಣ ಅರ್ಥವು ಅಂದರೆ ಪ್ರಯೋಜನ ಅಥವಾ ಪ್ರಾಪ್ತ ವಸ್ತುವು ಅಪ್ರಾಕೃತ ಹಾಗೂ ಪ್ರಾಕೃತ ಎರಡು ರೂಪಗಳಲ್ಲಿ ತಿಳಿಯಲಾಗುತ್ತದೋ, ಅಂದರೆ ಯಾವ ಶಕ್ತಿಯ ಮೂಲಕ ಪ್ರಕಟಗೊಂಡು ಪ್ರಯೋಜನ ಸಹಿತ ವಸ್ತುವನ್ನು ಪರಮಾತ್ಮನ ಸಾಕ್ಷಾತ್ಕಾರ ಪಡೆದ ವ್ಯಕ್ತಿ ಸಾಕ್ಷಾತ್ ಅನುಭವನ್ನು ಪಡೆಯುತ್ತಾನೆ. ಹಾಗೂ ಯಾವ ಶಕ್ತಿಯ ಹತ್ತಿರ ಆ ಪ್ರಯೋಜನ–ವಸ್ತುವಿನ ಅರಿವು ಇಲ್ಲವೋ, ಅರ್ಥಾತ್ ಯಾವ ಶಕ್ತಿಯ ಮೂಲಕ ಆವೃತ್ತವಾದ ಕಾರಣ ಆ ಸಮಯದಲ್ಲಿ ಅಥವಾ ಅನ್ಯ ಸಮಯದಲ್ಲಿ ಪ್ರಯೋಜನ ವಸ್ತುವಿನ ಅರಿವು ಇರುವುದಿಲ್ಲವೋ– ಅದೇ ಮಾಯೆ ಎನ್ನಲಾಗಿದೆ. ಅದನ್ನು 'ಆತ್ಮನಃ'– ನನ್ನ ಯೋಗಮಾಯಾ ಎಂಬ ಹೆಸರಿನ ಅಂತರಂಗಶಕ್ತಿಯನ್ನು ಅರ್ಥಮಾಡಿಕೊಳ್ಳಬೇಕು. ಈ ಸ್ಥಾನದಲ್ಲಿ ವಿವೇಚನೆಯ ವಿಷಯವೇನೆಂದರೆ ಮಾಯೆಯ ಮೂಲಕ ಯಾವ ಆವರ್ಣವಿದೆಯೋ, ಅದು ಪ್ರಯೋಜನದ ಹೊರತಾಗಿಯೇ ವ್ಯಕ್ತವಾಗುತ್ತದೆ, ಯೋಗಮಾಯೆಯ ಮೂಲಕ ಯಾವ ಆವರ್ಣವಿದೆಯೋ, ಅದು ಪ್ರಯೋಜನವನ್ನು ಉದ್ದೇಶಿಸಿ ಸಿದ್ಧವಾಗುತ್ತದೆ. ಜ್ಯೋತಿ (ಬೆಳಕು) ಅಂದರೆ ದೀಪ ಇತ್ಯಾದಿಯ ಮೂಲಕ ಕಾಣಲ್ಪಡುವ ಮಡಿಕೆ, ವಸ್ತ್ರ ಇತ್ಯಾದಿ ದ್ರವ್ಯಗಳು ಯಾವ ರೀತಿ ಕಾಣಿಸಲ್ಪಡುತ್ತದೋ, ತಮಸ್ಸು (ಅಂಧಕಾರ) ಮೂಲಕ ಆವೃತವಾದಾಗ ಅದು ಆ ರೀತಿಯಾದ (ಬೆಳಕಿನ) ಅನುಭವವಾಗುವುದಿಲ್ಲ. ಸರಿಯಾಗಿ ಅದೇ ರೀತಿಯಿಂದಲೆ ಆ ಮಾಯೆ ನನ್ನ ಇಚ್ಛೆಯಂತೆ ಪ್ರಕಾಶ (ಬೆಳಕು)– ತಮೋಧರ್ಮದಿಂದ ಯುಕ್ತವಾದ ಯೋಗಮಾಯೆ.

ಇದಕ್ಕೆ ಉದಾಹರಣೆ ಎಂದರೆ– ಯಾವ ರೀತಿ ಐಶ್ವರ್ಯದ ದರ್ಶನ ಮಾಡುವಾಗಲೂ ಸಹ ಪ್ರೇಮದ ಸಂಕೋಚ ಭಾವವನ್ನು ತಿಳಿದುಕೊಳ್ಳಲು ಶ್ರೀಮತಿ ಯಶೋದಾ ಮಾತೆಯು ಯೋಗಮಾಯೆಯ ಮೂಲಕ ಮೋಹಿತಳಾಗಿ ಶ್ರೀಕೃಷ್ಣನ ಉದರದಲ್ಲಿ ಯೋಗಮಾಯಾ ಮೂಲಕ ಪ್ರಕಟಿತವಾದ ಪ್ರಾಕೃತ ವಿಶ್ವ ಹಾಗೂ ಅಪ್ರಾಕೃತ ಗೋಕುಲ, (ಸ್ವಯಂ) ಯಶೋದಾ ಹಾಗೂ ಶ್ರೀಕೃಷ್ಣ ಮುಂತಾದ ಸ್ವರೂಪದ ಸಾಕ್ಷಾತ್ ಅನುಭವ ಪಡೆದುಕೊಂಡಿದ್ದಳು ಹಾಗೂ ಕ್ಷಣಕಾಲದನಂತರ ಯೋಗಮಾಯಾ ಮೂಲಕ ಆವೃತವಾದ ನಂತರ ಅವಳು ಆ ಅನುಭವವನ್ನು ಮತ್ತೆ ಅನುಭವಿಸಲಾಗಲಿಲ್ಲ.

ಇಲ್ಲಿ ಮತ್ತೊಂದು ವಿಚಾರದ ಮಾತಿದೆ, ಐಶ್ವರ್ಯದ ಅನುಭವದಿಂದ ಪ್ರೇಮದ ಸಂಕೋಚ ಭಾವವನ್ನು ಅರ್ಥಮಾಡಿಕೊಳ್ಳಲು ಹೇಗೆ ಅರ್ಜುನನು ಯೋಗಮಾಯಾ ಮೂಲಕ ಪ್ರಕಟಿತವಾದ ವಿಶ್ವರೂಪ ಮತ್ತು ಪರಮಾತ್ಮನ ಸ್ವರೂಪದ ಸಾಕ್ಷಾತ್ ಅನುಭವ ಪಡೆದುಕೊಂಡಿದ್ದನು, ಆದರೆ ಯೋಗಮಾಯೆಯ ಆವರ್ಣವಶದಿಂದ

ಅವನು ಶ್ರೀಕೃಷ್ಣಸ್ವರೂಪವನ್ನು ಸರಿಯಾಗಿ ಅದೇ ಸ್ಥಾನದಲ್ಲಿ ವರ್ತಮಾನ (ಉಪಸ್ಥಿತವಾಗಿರುವುದನ್ನು) ಕಂಡರೂ ಸಹ ಅನುಭವಿಸಲಾಗಲಿಲ್ಲ. ಮಾಯೆಯ ಪ್ರಭಾವದಿಂದ ಮತ್ತೆ ಪುನಃ ಇತರ ಸಮಯದಲ್ಲಿ ಮರೆಯಾದ ವಿಶ್ವರೂಪವನ್ನು ಅನುಭವಿಸಲಾಗಲಿಲ್ಲ ಕೇವಲ ದ್ವಿಭುಜ ಶ್ರೀಕೃಷ್ಣನನ್ನು ಮಾತ್ರ ಕಾಣಲ್ಪಟ್ಟನು. ಇಲ್ಲಿ ಒಂದೇ ಸಮಯದಲ್ಲಿ ಒಂದು ಸ್ವರೂಪದ ಪ್ರಕಟಣೆ ಹಾಗೂ ಅನ್ಯ ಸ್ವರೂಪದ ಆವರ್ಣವಾಗಿದೆ– ಇದೇ ಮುಂಚಿನಿಂದ ಪರದ ವಿಶೇಷತೆ.

ಹೀಗಾಗಿ ಶ್ರೀಭಗವಂತನ ಮಧುರತೆಯ ಮಹಿಮೆಯ ದರ್ಶನದ ಮೂಲಕ ಬ್ರಹ್ಮದೇವರು ತಾನು ಈಶ್ವರನೆಂಬ ಅಭಿಮಾನವು ದೂರ ಮಾಡಲೆಂದು ಮಾಯಾ–ಮೋಹಿತ ಪರಮೇಷ್ಠಿ ಬ್ರಹ್ಮದೇವರಿಗೆ ಮಾಯೆಯ ಆವರ್ಣ ಮತ್ತು ಪ್ರಕಾಶ– ಈ ಎರಡು ಕಾರ್ಯಗಳ ಮೂಲಕ ಶ್ರೀಕೃಷ್ಣನ ಲೀಲಾ–ಪರಿಕರ ವತ್ಸ–ಬಾಲಕಾದಿ ಅದರ್ಶನ, ಕೃಷ್ಣಸ್ವರೂಪದಲ್ಲೇ ವತ್ಸ–ಬಾಲಕ ಮುಂತಾದ ದರ್ಶನ ಮತ್ತು ಪುನಃ ಅದರ್ಶನವಾಗಿ, ಚತುರ್ಭುಜ–ಸ್ವರೂಪಾದಿಯ ದರ್ಶನ ಮತ್ತೆ ಅದರ್ಶವಾಗಿ ಮತ್ತೆ ಅಂತ್ಯದಲ್ಲಿ ಶ್ರೀಕೃಷ್ಣರೂಪದ ದರ್ಶನ ಪ್ರಾಪ್ತವಾಯಿತು. ಇಲ್ಲಿ ವಿಶೇಷವೇನೆಂದರೆ ಒಬ್ಬ ಬ್ರಹ್ಮನ ಸಮ್ಮುಖದಲ್ಲೇ ವಿವಿಧ ಸ್ವರೂಪಗಳ ಆವರ್ಣ ಹಾಗೂ ಪ್ರಕಾಶಕಾರ್ಯವು ಪುನಃ–ಪುನಃ ಅನುಷ್ಠಿತವಾಯಿತು.

ಪುನಃ ಮತ್ತೊಂದು ಪ್ರಕಾರ ಯಾವ ರೀತಿ ಶ್ರೀಭಗವಂತನ ಶರೀರ ಸ್ವರೂಪತಃ ವ್ಯಕ್ತ, ಅವ್ಯಕ್ತ ಹಾಗೂ ಅಖಂಡವಾದದ್ದು ಮತ್ತು ಅದೇ ರೀತಿ ಮತ್ತೊಂದು ಶುದ್ಧ ಶ್ರೀಕೃಷ್ಣ–ಭಜನೆಯ ಅನುಶೀಲನೆ ಹಾಗೂ ಅದರ ಫಲಸ್ವರೂಪದಿಂದ ಉದಿತವಾಗುವ ಭಗವತ್–ಕೃಪೆ ಇವೆರಡರ ಮೂಲಕ ಶ್ರೀಭಗವಂತನು ವಶನಾಗುತ್ತಾನೆ, ಈ ವಿಷಯವನ್ನು ಹೇಳಲೆಂದೇ ಶ್ರೀಕೃಷ್ಣನ ದಾಮಬಂಧನ ಲೀಲೆಯಲ್ಲಿ ಯೋಗಮಾಯೆಯಿಂದ ಎರಡು ಕಾರ್ಯವಾಯಿತು– ಶ್ರೀಕೃಷ್ಣನ ವಿಭೂತಿಯ (ವ್ಯಾಪಕತೆಯ) ಆವರ್ಣ ಹಾಗೂ ಪ್ರಕಾಶಕಾರ್ಯದ ಮೂಲಕ ಶ್ರೀಕೃಷ್ಣನನ್ನು ಒರಳಿಗೆ ಕಟ್ಟಲು ಹೋದಾಗ ಹಗ್ಗವು ಸರಿಯಾಗಿ ಎರಡು ಅಂಗುಲದಷ್ಟು ಅಳತೆ ಕಡಿಮೆಯಾಗಲು ಕಾರಣ ಬಂಧನವಾಗಬಾರದೆಂದು, ಯಾವುದರಿಂದ ಒಂದೇ ಸಮಯದಲ್ಲಿ ಶ್ರೀಯಶೋದಾ ಹಾಗೂ ಶ್ರೀಕೃಷ್ಣನ ಅಭಿಲಾಷಿತ ಬಂಧನ–ಅಬಂಧನ ಲೀಲೆಯು ಸೂಚಿತವಾಗುತ್ತದೆ. ಇದನ್ನು ತೋರಿಸಿದರೂ ಸಹ ವಾಸ್ತವಿಕವಾಗಿ ಶ್ರೀಕೃಷ್ಣನ ಅಭಿಲಾಷಿತ ಅಬಂಧನ (ಬಂಧನವನ್ನು ಸ್ವೀಕಾರ ಮಾಡದಿರುವ ಅಭಿಪ್ರಾಯವು) ಸಾಧಿಸಿ ಯೋಗಮಾಯೆಯು ಮಾತಾ ಯಶೋದೆಯನ್ನು ಕ್ಷಣಕಾಲಕ್ಕೆ ವಿಸ್ಮಯರಸದ ಅನುಭವ ಮಾಡಿಸುತ್ತಾಳೆ. ಅನಂತರ ಮಾತಾ ಯಶೋದೆಯ ಅಭಿಲಾಷೆಯಂತೆ ಬಂಧನವನ್ನು ಸಾಧಿಸಲೆಂದೆ ಶ್ರೀಕೃಷ್ಣನ ಅನುಮತಿಯಿಂದ ಯೋಗಮಾಯೆಯ ಮೂಲಕ ಅವನ ವಿಭೂತ್ವವು ಒಳಿತಾದಮೇಲೆ ಶ್ರೀಯಶೋದೆ ಅವನನ್ನು ಬಂಧಿಸಿದಳು. ಇಲ್ಲಿ ಒಂದೇ ಸಮಯದಲ್ಲಿ ಒಂದೇ ವಸ್ತುವಿನ ವಿಭೂತ್ವದ ಅವರ್ಣ ಹಾಗೂ ಪ್ರಕಟಣೆ– ಎರಡು ಸಂಭವಿಸಿದೆ,

ಇದೇ ಈ ಉದಾರಣೆಯು ಪೂರ್ವ–ಪೂರ್ವದ ಉದಾಹರಣೆಗಳಿಗಿಂತಲೂ ವಿಶೇಷವಾಗಿದೆ.

ಇದೇ ರೀತಿ ಆ ಯೋಗಮಾಯಾ ಶಕ್ತಿಯ ಏಕಕಾಲಿಕ ಆವರ್ಣ ಹಾಗೂ ಪ್ರಕಾಶಕಾರ್ಯದ ಮೂಲಕ ತನ್ನಲ್ಲಿ ನಿಮಂತ್ರಣಾದಿಯ ಸಿದ್ಧಿಗಾಗಿ ಶೃತದೇವ, ಬಹುಲಾಶ್ವ, ರುಕ್ಮಿಣಿ ಹಾಗೂ ಸತ್ಯಭಾಮಾ ಮುಂತಾದವರ ಗೃಹಗಳಲ್ಲಿ ಅನೇಕ ರೂಪಗಳಲ್ಲಿ ವಿರಾಜಿತ ಶ್ರೀಕೃಷ್ಣನ ಆ ಎಲ್ಲ ಸ್ವರೂಪಗಳಲ್ಲಿ ಆ ಎಲ್ಲ ಸ್ಥಾನಗಳಲ್ಲಿ ಲೀಲಾ ಸಿದ್ಧಿಯ ವ್ಯಾಖ್ಯಾಯನವನ್ನು (ದಶಮ–ಸ್ಕಂಧದಲ್ಲಿ) ಮಾಡಲಾಗಿದೆ. ಇಲ್ಲಿ ವಿಶೇಷವೇನೆಂದರೆ ಶೃತದೇವ ಮತ್ತು ಬಹುಲಾಶ್ವ ಮುಂತಾದ ವಿಭಿನ್ನ ವ್ಯಕ್ತಿಗಳನ್ನು ಅಪೇಕ್ಷಿಸಿ ಯೋಗಮಾಯೆಯ ಆವರ್ಣ ಹಾಗೂ ಪ್ರಕಾಶಕಾರ್ಯವು ಏಕಕಾಲದಲ್ಲಿ (ಒಂದೇ ಸಮಯದಲ್ಲಿ) ಮಾಡಲಾಗಿದೆ, ಹಿಂದೆ ವರ್ಣಿಸಲಾದ ಉದಾಹರಣೆಯಲ್ಲಿ ಈ ಕೇವಲ ಶ್ರೀ ಯಶೋದಾ–ಮಾತೆಗೋಸ್ಕರವೇ ಆಗಿದೆ.

ಅದು ನಿಶ್ಚಯವಾಗಿ ಯೋಗಮಾಯೆ– ಆದರೆ (ಬಹಿರಂಗ) ಮಾಯೆಯಲ್ಲ, ಏಕೆಂದರೆ ಇಲ್ಲಿ ವ್ಯಕ್ತವಾಗುವುದೇನೆಂದರೆ ಈ ಯೋಗಮಾಯೆಯ ಮೂಲಕ ಮೋಹಿತವಾದರೂ ಸಹ ಅವರಿಗೆ (ಶ್ರೀ ಯಶೋದಾ, ಬ್ರಹ್ಮ, ಶೃತದೇವ ಮುಂತಾದವರಿಗೆ) ಕೇವಲ ಪರಮಾತ್ಮನ ಸಾಕ್ಷಾತ್ಕಾರವು ಪ್ರಾಪ್ತವಾಗುತ್ತದೆ. ಆದರೆ, ಭಕ್ತಿಮಿಶ್ರ–ಜ್ಞಾನಪಂಥಗಳ ಅವಿದ್ಯೆ ಮತ್ತು ವಿದ್ಯೆಯು ನಿವೃತ್ತಿಯಾದ ನಂತರವೇ ಅವರಿಗೆ ಪರಮಾತ್ಮನ ಸಾಕ್ಷಾತ್ಕಾರವಾಗುತ್ತದೆ. ಅದೇ ರೀತಿ ಭಗವದವತಾರದ ಸಮಯದಲ್ಲಿ ಶ್ರೀಕೃಷ್ಣನ ಪ್ರೀತಿಪೂರ್ವಕ ದರ್ಶನ ಪಡೆಯುವವರಿಗೆ ಹಾಗೂ ಅವನ (ಶ್ರೀಕೃಷ್ಣನ) ಕೃಪೆಗೆ ವಶರಾಗುವ ಕಾರಣ ಅವನಲ್ಲಿ ಪ್ರೀತಿ ಇಲ್ಲದ ವ್ಯಕ್ತಿಗಳಿಗೂ ಸಹ ಪರಮಾತ್ಮ–ಸಾಕ್ಷಾಕ್ತಾರವಾಗುತ್ತದೆ. ಆದರೆ ಇತರ ಸಮಯಗಳಲ್ಲಿ ಅಂದರೆ ಲೀಲೆ ಅಪ್ರಕಟ ಕಾಲದಲ್ಲಿ ಪ್ರೇಮಿ ಭಕ್ತರ ಮೂಲಕವೇ ಶ್ರೀಕೃಷ್ಣ, ಶ್ರೀರಾಮಾದಿಯ ಸಾಕ್ಷಾತ್ಕಾರವು ಸಾಧ್ಯ ಎಂದು ಭಾಗವತ–ಮತದಲ್ಲಿ ಹೇಳಲಾಗಿದೆ. ಇವರ (ಪ್ರೇಮಿ ಭಕ್ತರ) ಮೇಲೆ ಯೋಗಮಾಯೆಯದ್ದೇ ಅಧಿಕಾರವಿರುತ್ತದೆ, (ಬಹಿರಂಗ) ಮಾಯೆಯದ್ದಲ್ಲ. ಶ್ರೀಕೃಷ್ಣನ ಇಚ್ಛೆಯಂತೆ ಅವನ ದರ್ಶನ ಮಾಡುವ ಕಂಸಾದಿ ಅಸುರರಿಗೆ ಕೃಷ್ಣ–ದ್ವೇಷ–ಲಕ್ಷಣಯುಕ್ತವಾದ ಅಂತಃಕಾರಣದ ದೋಷದ ಕಾರಣದಿಂದ ಶ್ರೀಕೃಷ್ಣನ ದರ್ಶನ ಪಡೆದರೂ ಸಹ ಅವರಿಗೆ ಪರಮಾತ್ಮ–ಸಾಕ್ಷಾತ್ಕಾರವು ಉಂಟಾಗುವುದಿಲ್ಲ. ಇದು ಹೇಗೆಂದರೆ ಮಿಶ್ರ ಭಕ್ಷಣಕಾರಿ ಜನರ ಪಿತ್ತ–ದೂಷಿತ ನಾಲಿಗೆಯಲ್ಲಿ ಸಿಹಿ ಮಿಶ್ರಿತ ಸ್ವಾದದ ಅನುಭವವಾಗುವುದಿಲ್ಲ. ಇಂತಹ ಜನರಲ್ಲಿ ಮಾಯೆಯದ್ದೇ ಅಧಿಕಾರವಿರುತ್ತದೆ, ಯೋಗಮಾಯೆಯದ್ದಲ್ಲ. ವಾಸ್ತವದಲ್ಲಿ ಮಾಯಾಶಕ್ತಿ ಯೋಗಮಾಯೆಯಿಂದಲೇ ಉತ್ಪನ್ನವಾಗುತ್ತದೆ ಹಾಗೂ ಅವನ ವಿಭೂತಿರೂಪ. ಹೇಗೆಂದರೆ, ನಾರದ–ಪಂಚರಾತ್ರದ ಶೃತಿ–ವಿದ್ಯೆ ಸಂವಾದದಲ್ಲಿ ಹೀಗೆ ಹೇಳಿದೆ– "ಅಸ್ಯಾ ಆವರಿಕಾ ಶಕ್ತಿ ಮಹಾಮಾಯಾಖಿಲೇಶ್ವರೀ । ಯಯಾ ಮುಗ್ಧಂ ಜಗತ್

ಸರ್ವಂ ಸರ್ವದೇಹಾಭಿಮಾನಿನಮ್ ॥ ಅರ್ಥಾತ್ ಈ ಯೋಗಮಾಯೆಯ ಆವರ್ಣ ಶಕ್ತಿಯೇ ಮಹಾಮಾಯೆಯಾಗಿದ್ದಾಳೆ. ಅವಳು ಎಲ್ಲರ ಈಶ್ವರಿಯಾಗಿದ್ದಾಳೆ ಹಾಗೂ ಸಮಸ್ತ ಜಗತ್ತನ್ನು ಹಾಗೂ ಸಮಸ್ತ ದೇಹಾಭಿಮಾನಿಗಳನ್ನು ವಿಮುಗ್ಧಗೊಳಿಸುತ್ತಾಳೆ."

ಶ್ರೀಭಗವಂತನ ಮೂಲಕ ತನ್ನ ಸ್ವರೂಪದಲ್ಲಿ ಅರ್ಥಾತ್ ತನ್ನ ಅಂತರಂಗದ ರೂಪದಲ್ಲಿ ಅಭಿಮಾನಿಸುವ ಕಾರಣ ಯೋಗಮಾಯೆ ಚಿನ್ಮಯಿಯಾಗಿದ್ದಾಳೆ ಹಾಗೂ ಸ್ವೇಚ್ಛಾವಶವಾಗಿ ಯಾವುದು ತನ್ನ ಅಂತರಂಗ ರೂಪದಲ್ಲಿ ಒಪ್ಪಿಕೊಳ್ಳುವುದಿಲ್ಲವೋ, ಹಾಗೂ ಇದರಿಂದಾಗಿ ಭಗವಂತನ ಸ್ವರೂಪದಿಂದ ಬೇರ್ಪಟ್ಟಿರುತ್ತದೋ, ಅದೇ ಜಡ ಮಾಯಾಶಕ್ತಿ (ಅಂದರೆ ಶ್ರೀಭಗವಂತನ ಅಂತರಂಗಶಕ್ತಿಯಾದ ಯೋಗಮಾಯೆಯ ಅಧೀನದಲ್ಲಿರುವ ಹಾಗೂ ಅದರ ಅಂಶ ರೂಪವಾಗಿರುವ ಈ ಜಡ ಬಹಿರಂಗ ಮಾಯಾಶಕ್ತಿ). ಇದಕ್ಕೆ ಉದಾಹರಣೆ ಎಂದರೆ– ಯಾವ ರೀತಿ ಹಾವಿನ ಪೊರೆ ಹಾವಿನ ದೇಹದಲ್ಲಿದರೆ ಮಾತ್ರ ಅದೇ ಏನಾದರೂ ಹಾವಿನ ದೇಹದಿಂದ ಬೇರ್ಪಟ್ಟರೆ ಆಗ ಅದು ಕೇವಲ ಜಡ ಪದಾರ್ಥವಷ್ಟೆ. ದಶಮ–ಸ್ಕಂಧದಲ್ಲಿ ಶೃತಿಗಳೂ ಸಹ ಹೀಗೆ ಸ್ತುತಿಸಿದೆ (ಶ್ರೀಮದ್ಭಾ ೧೦/೮೭/೩೮)– "ಹೇ ಭಗವಂತ! ನೀನು ಷಡೈಶ್ವರ್ಯಶಾಲಿ, ಸರ್ಪದ ಪೊರೆ ಪರಿತ್ಯಕ್ತವಾಗುವಂತೆ ನೀನು ನಿನ್ನ ಬಹಿರಂಗ ಮಾಯಾಶಕ್ತಿಯನ್ನು ದೂರದಿಂದಲೇ ಪರಿತ್ಯಾಗ ಮಾಡುವೆ."

ಈ ಮಾಯಾ ಮೂರು ಪ್ರಕಾರವಾದದ್ದು– ಪ್ರಧಾನ, ಅವಿದ್ಯೆ ಮತ್ತು ವಿದ್ಯೆ. ಜಯನ್ತೇಯ ಉಪಾಖ್ಯಾನದಲ್ಲಿ ಪ್ರಧಾನದ ಲಕ್ಷಣವನ್ನು ಈ ರೀತಿ ವರ್ಣಿಸಿದ್ದಾರೆ– "ಪ್ರಧಾನದ ಮೂಲಕವೇ ಉಪಾಧಿಗಳು ಸೃಷ್ಟಿಯಾಗುತ್ತವೆ ಹಾಗೂ ಅವೆಲ್ಲವು ಸತ್ಯವಾದದ್ದು. ಅವಿದ್ಯೆಯ ಮೂಲಕ ಜೀವಿಯ ಅಧ್ಯಾಸ ಅಥವಾ ಭ್ರಾಂತ ಬುದ್ಧಿಯು (ಒಂದು ವಸ್ತುವನ್ನು ಬೇರೆ ವಸ್ತುವಾಗಿ ಅರ್ಥಮಾಡಿಕೊಳ್ಳುವುದು) ಸೃಷ್ಟಿಯಾಗುತ್ತದೆ, ಅದು ಮಿಥ್ಯವಾದದ್ದು; ಆದರೆ ವಿದ್ಯೆ ಆ ಅಧ್ಯಾಸವನ್ನು ಧ್ವಂಸ ಮಾಡುತ್ತದೆ."– ಇದೇ ಮೂರು ಶಕ್ತಿಗಳ ಕಾರ್ಯ. ಈ ಮೂರು ಪ್ರಕಾರದ ಶಕ್ತಿಗಳಿಂದ ಆದ ಈ ಜಗತ್ತು ಲವಲೇಶ ಸತ್ಯ ಮತ್ತು ಲವಲೇಶ ಮಿಥ್ಯ. ಜೀವಿಗಳ ನಿತ್ಯತೆಯ ಕಾರಣದಿಂದ ಹಾಗೂ ಭಗವತ್–ಧಾಮ ಇತ್ಯಾದಿ ಭಕ್ತಿ–ಉಪಕರಣಗಳ ನಿರ್ಗುಣತೆಯ ಕಾರಣ ಜಗತ್ತಿನ ಲವಲೇಶ ನಿತ್ಯವನ್ನೂ ಸಹ ಮತವಾಧಿಗಳು ತಮ್ಮ–ತಮ್ಮ ಮನಾನುಸಾರವಾಗಿ ನಿರೂಪಣೆ ಮಾಡಿದ್ದಾರೆ. ಹೀಗೆ– "ಪ್ರಧಾನದ ಕಾರ್ಯ ಸತ್ಯ, ಅವಿದ್ಯೆಯ ಕಾರ್ಯ ಮಿಥ್ಯ. ಚಿತ್, ಜೀವ, ಮಾಯೆ– ಇವು ಭಗವತ್–ಶಕ್ತಿ ತ್ರಯಾತ್ಮಕ ವಿಶ್ವ ಭಗವತ್–ಭಕ್ತಿ–ಸಂಬಂಧದಿಂದ ನಿತ್ಯವಾದದ್ದು. ದೇಹ ಪ್ರಧಾನಿಕವಾದದ್ದು, ಅಂದರೆ ಪ್ರಧಾನದಿಂದ ಉತ್ಪನ್ನವಾಗುತ್ತದೆ ಹಾಗೂ ದೇಹದ ಧರ್ಮ ಅವಿದ್ಯಕವಾದದ್ದು ಅಂದರೆ ಅವಿದ್ಯೆಯಿಂದ ಉತ್ಪನ್ನವಾಗುತ್ತದೆ. ಜೀವಿಗಳಲ್ಲೂ ಸಹ ಅದೇ ಪ್ರಕಾರದ ಸಂಬಂಧವು ನೆಲಸಿರುತ್ತದೆ, ಆದರೆ ಭಕ್ತಿ ಇದ್ದಲ್ಲಿ ಅವೇಲ್ಲವೂ ನಿರ್ಗುಣವಾಗಿಬಿಡುತ್ತವೆ. ಚಿತ್, ಜೀವಿ ಹಾಗೂ ಮಾಯೆ ಶ್ರೀಕೃಷ್ಣನ ಮೂರು

ಶಕ್ತಿಗಳಾಗಿವೆ ಹಾಗೂ ಅವನ ವೃತ್ತಿಗಳು ನಿತ್ಯವಾದದ್ದು. ಇವನ ಮೂಲಕ ಅಲ್ಲೆ ಒಬ್ಬ ಪರಮೇಶ್ವರನು ಪ್ರಕಟಿತನಾಗುತ್ತಾನೆ. ಕಾರ್ಯ ಮತ್ತು ಕಾರಣದಲ್ಲಿ ಒಂದೇ ಆದ ಕಾರಣ ಶಕ್ತಿ ಹಾಗೂ ಶಕ್ತಿವಂತನಲ್ಲಿ ಅಭೇದತ್ವವಿದೆ. ಒಂದು ಅದ್ವಯಜ್ಞಾನ ವಸ್ತು ಬ್ರಹ್ಮನ ಏಕಮಾತ್ರ ಭಕ್ತರುಗಳ ಸಿದ್ಧಾಂತವಿದೆ, ಕೇವಲ ಭಕ್ತರೊಬ್ಬರೇ ಈ ಚತುಃಶ್ಲೋಕವನ್ನು ಸ್ತುತಿಸುವುದು ಹಾಗೂ ನಿರಂತರ ಅನುಶೀಲನೆ ಮಾಡುವುದು, ಅನ್ಯ ಅಂದರೆ ಅಭಕ್ತರು ಮಾಡುವುದಿಲ್ಲ.” ॥೩೩॥

ಶ್ರೀಕೃಷ್ಣದಾಸ ಕವಿರಾಜ ಗೋಸ್ವಾಮಿಪಾದರು

ಎಇ ಸಬ ಶಬ್ದೆ ಹಯ– ‘ಜ್ಞಾನ’–’ವಿಜ್ಞಾನ’–ವಿವೇಕ ।
ಮಾಯಾ–ಕಾರ್ಯ, ಮಾಯಾ ಹೈತೆ ಆಮಿ– ವ್ಯತಿರೇಕ ॥

ಯೈಛೆ ಸೂರ್ಯೆರ ಸ್ಥಾನೇ ಭಾಸಯೆ ‘ಆಭಾಸ’ ।
ಸೂರ್ಯ ಬಿನಾ ಸ್ವತಃ ತಾರ ನಾ ಹಯ ಪ್ರಕಾಶ ॥

ಮಾಯಾತೀತ ಹೈಲೇ ಹಯ ಆಮಾರ ‘ಅನುಭವ’ ।
ಎಇ ‘ಸಂಬಂಧ’–ತತ್ತ್ವ ಕಹಿಲ್ಲೂ, ಶುನ ಆರ ಸಬ ॥

(ಚೈ. ಚ. ಮ. ೨೫/೧೧೪–೧೧೬)

ಭಾವಾನುವಾದ– (ಭಗವಾನ್ ಶ್ರೀಕೃಷ್ಣ ಹೇಳಿದನು)– ಈ ಎಲ್ಲ ಶಬ್ದಗಳ ಮೂಲಕ ‘ಜ್ಞಾನ’ ಮತ್ತು ‘ವಿಜ್ಞಾನ’ದ ವಿವೇಕ ಉಂಟಾಗುತ್ತದೆ. ನಾನು ಮಾಯೆ ಮತ್ತು ಅದರ ಕಾರ್ಯಗಳಿಂದ ಭಿನ್ನನಾಗಿದ್ದೇನೆ, ಅಂದರೆ ಅದರಿಂದ ಸಂಬಂಧರಹಿತನಾಗಿದ್ದೇನೆ.

ಯಾವ ರೀತಿ ಎಂದಿಗೂ ಸೂರ್ಯನು ನೆಲಸಿರುವಾದ ಅವನ ‘ಛಾಯೆ’ಯು ಗೋಚರವಾಗುತ್ತದೆ, ಆದರೇ ಆ ಛಾಯೆಯ ಪ್ರಕಾಶವು ಸೂರ್ಯನಿಲ್ಲದೇ ಸ್ವತಂತ್ರ ರೂಪವಾಗಿರುವುದು ಎಂದಿಗೂ ಸಾಧ್ಯವಿಲ್ಲ

ಮಾಯೆಯಿಂದ ಅತೀತರಾದರೇ ಮಾತ್ರ ನನ್ನ ಅನುಭವವಾಗುತ್ತದೆ, ಈ ರೀತಿ ನಾನು ‘ಸಂಬಂಧ’–ತತ್ವವನ್ನು ವಿವರಿಸಿದ್ದೇನೆ. ಈಗ ಈ ಚತುಃಶ್ಲೋಕಿಯ ಅಂತರ್ಗತ ಮತ್ತು ಎಲ್ಲ ಅಂದರೆ ಅಭಿಧೇಯ ಮತ್ತು ಪ್ರಯೋಜನದ ವಿಷಯವನ್ನು ಗ್ರಹಿಸು. ॥೩೩॥

ಶ್ರೀಜೀವ ಗೋಸ್ವಾಮಿಪಾದರು

ಅಥ ಯಥಾನುಭಾವತ್ವಮುಪದಿಶಂಸ್ತಾದೃಶರೂಪಾದಿ–ವಿಶಿಷ್ಟಸ್ಯಾತ್ಮನೋ ವ್ಯತಿರೇಕ–ಮುಖೇನ ವಿಜ್ಞಾಪನಾರ್ಥಂ ಮಾಯಾಲಕ್ಷಣಮಾಹ–ಋತೇಽರ್ಥಮಿತ್ಯಾದಿ । ಅರ್ಥಂ ಪರಮಾರ್ಥಭೂತಂ ಮಾಂ ವಿನಾ ಯತ್ ಪ್ರತೀಯೇತ–ಮತ್ಪ್ರತೀತೌ ತತ್ಪ್ರತೀತ್ಯಭಾವಾತ್ ಮತ್ತೋ ಬಹಿರೇವ ಯಸ್ಯ ಪ್ರತೀತಿರಿತ್ಯರ್ಥಃ । ಯಚ್ಚಾತ್ಮನಿ ನ ಪ್ರತೀಯೇತ–ಯಸ್ಯ ಚ ಮದಾಶ್ರಯತ್ವಂ ವಿನಾ ಸ್ವತಃ ಪ್ರತೀತಿರ್ನಾಸ್ತಿ । ತಥಾಲಕ್ಷಣಂ ವಸ್ತು ಆತ್ಮನೋ ಮಮ

ಪರಮೇಶ್ವರಸ್ಯ ಮಾಯಾಮ್–ಜೀವಮಾಯಾ–ಗುಣಮಾಯೇತಿ ದ್ವಯಾತ್ಮಿಕಾಂ ಮಾಯಾಖ್ಯಶಕ್ತಿಂ ವಿದ್ಯಾತ್ । ಅತ್ರ ಶುದ್ಧಜೀವಸ್ಯಾಪಿ ಚಿದ್ರೂಪತ್ವಾವಿಶೇಷೇಣ ತದೀಯ–ರಶಿಮಸ್ಥಾನೀಯತ್ವೇನ ಚ ಸ್ವಾನ್ತಃಪಾತ ಏವ ವಿವಕ್ಷಿತಃ । ಅತ್ರಾಸ್ಯ ದ್ವಯಾತ್ಮಕತ್ವೇನಾಭಿಧಾನಂ ದೃಷ್ಟಾಂತ–ದ್ವೈಧೇನ ಲಕ್ಷ್ಯತೆ। ತತ್ರ ಜೀವ ಮಾಯಾಖ್ಯಸ್ಯ ಪ್ರಥಮಾಂಶಸ್ಯ ತಾದೃಶತ್ವಂ ದೃಷ್ಟಾನ್ತೇನ ಸ್ಪಷ್ಟಯನ್ನಸಂಭಾವನಾಂ ನಿರಸ್ಯತಿ–ಯಥಾಭಾಸ ಇತಿ । ಆಭಾಸೋ ಜ್ಯೋತಿರ್ಬಿಂಬಸ್ಯ ಸ್ವೀಯಪ್ರಕಾಶಾತ್ ವ್ಯವಹಿತಪ್ರದೇಶೋ ಕಥಾಂಚಿದುಚ್ಛಲಿತ–ಪ್ರತಿಚ್ಛವಿವಿಶೇಷಃ । ಸ ಯಥಾ ತಸ್ಮಾದ್ ಬಹಿರೇವ ಪ್ರತೀಯತೆ, ನ ಚ ತಂ (ಬಿಂಬಂ) ವಿನಾ ತಸ್ಯ (ಆಭಾಸಸ್ಯ) ಪ್ರತೀತಿಸ್ತಥಾ ಸಾಪೀತ್ಯರ್ಥಃ । ಅನೇನ, ಪ್ರತಿಚ್ಛವಿ–ಪರ್ಯಾಯಾಭಾಸಧರ್ಮತ್ವೇನ ತಸ್ಯಾಭಾಸಾಖ್ಯತ್ವಮಪಿ ಧ್ವನಿತಮ್ । ಅತಸ್ತತ್ಕಾರ್ಯಸ್ಯಾಪ್ಯಾಭಾಸಾಖ್ಯತ್ವಂ ಕ್ವಚಿತ್ (ಶ್ರೀಮದ್ಭಾ ೨/೧೦/೭)– *'ಆಭಾಸಶ್ಚ ನಿರೋಧಶ್ಚ'* ಇತ್ಯಾದೌ। ಅತ್ರ ಸ ಯಥಾ ಕ್ವಚಿದತ್ಯಂತೋದ್ಭಟಾತ್ಮಾ ಸ್ವಚಾಕ್‌ಚಿಕ್ಯಚ್ಛಟಾ–ಪತಿತನೇತ್ರಾಣಾಂ ಜನಾನಾಂ ನೇತ್ರಪ್ರಕಾಶಮಾವೃಣೋತಿ, ತಮಾವೃತ್ಯ ಚ ಸ್ವೇನ ಅತ್ಯಂತೋದ್ಭಟತೇಜಸ್ತ್ವೇನೈವ ದ್ರಷ್ಟೃನೇತ್ರಂ ವ್ಯಾಕುಲಯನ್ ಸ್ವೋಪಕಣ್ಠೆ ವರ್ಣಶಾಬಲ್ಯಮುದ್ಗಿರತಿ, ಕದಾಚಿತ್ತದೇವ ಪೃಥಗ್ಭಾವೇನ ನಾನಾಕಾರತಯಾ ಪರಿಣಮಯತಿ, ತಥೇಯಮಪಿ ಜೀವಜ್ಞಾನಮಾವೃಣೋತಿ; ಸತ್ವಾದಿ–ಗುಣ–ಸಾಮ್ಯರೂಪಾಂ ಗುಣಮಾಯಾಖ್ಯಾಂ ಜಡಾಂ ಪ್ರಕೃತಿಮುದ್ಗಿರತಿ, ಕದಾಚಿತ್ ಪೃಥಗ್ಭೂತಾನ್ ಸತ್ವಾದಿಗುಣಾನ್ ನಾನಾಕಾರತಯಾ ಪರಿಣಮಯತಿ ಚೇತ್ಯಾದ್ಯಪಿ ಜ್ಞೇಯಮ್ । ತದುಕ್ತಮ್ (ವಿಷ್ಣು ಪುರಾಣ ೧/೨೨/೫೪)– *'ಏಕದೇಶಸ್ಥಿತಸ್ಯಗ್ನೆ–ರ್ಜ್ಯೋತ್ಸ್ನಾ ವಿಸ್ತಾರಿಣೀ ಯಥಾ । ಪರಸ್ಯ ಬ್ರಹ್ಮಣೋ ಮಾಯಾ ತಥೇದಮಖಿಲಂ ಜಗತ್ ॥'* ತಥಾ ಚಾಯುರ್ವೇದವಿದಃ (ಶಾರ್ಙ್ಗಧರ ಸಂಹಿತಾಯಾಂ ಪೂ.ಖ. ೫ಮ ಅ. ೪೮, ೪೯)– *'ಜಗದ್ ಯೋನೇರನಿಚ್ಛಸ್ಯ ಚಿದಾನಂದೈಕರೂಪಿಣಃ । ಪುಂಸೋಽಸ್ತಿತ ಪ್ರಕೃತಿರ್ನಿತ್ಯಾ ಪ್ರತಿಚ್ಛಾಯೇವ ಭಾಸ್ವತಃ ॥ ಅಚೇತನಾಪಿ ಚೈತನ್ಯಯೋಗೇನ ಪರಮಾತ್ಮನಃ । ಅಕರೋದ್ವಿಶ್ವಮಖಿಲಮನಿತ್ಯಂ ನಾಟಕಾಕೃತಿಮ್ ॥'* ಇತಿ । ತದೇವಂ ನಿಮಿತ್ತಾಂಶೋ ಜೀವಮಾಯಾ, ಉಪಾದಾನಂಶೋ ಗುಣಮಾಯೇತ್ಯಗ್ರೇಽಪಿ ವಿವೇಚನೀಯಮ್ । ಅಥೈವಂ ಸಿದ್ಧಂ ಜೀವಮಾಯಾಖ್ಯಂ ಗುಣಮಾಯಾಖ್ಯಂ ದ್ವಿತೀಯಮಪ್ಯಂಶಂ ದೃಷ್ಟಾಂತೇನ ಸ್ಪಷ್ಟಯತಿ– ಯಥಾ ತಮ ಇತಿ; ತಮಃ ಶಬ್ದೇನಾತ್ರ ಪೂರ್ವೋಕ್ತಂ ತಮಃಪ್ರಾಯಂ ವರ್ಣಶಾಬಲ್ಯಮುಚ್ಯತೆ । ತದ್‌ಯಥಾ ತನ್ಮೂಲಜ್ಯೋತಿಷ್ಯಸದಪಿ ತದಾಶ್ರಯತ್ವಂ ವಿನಾ ನ ಸಂಭವತಿ, ತದ್ವದಿಯಮಪೀತಿ; ಅಥವಾ, ಮಾಯಾಮಾತ್ರನಿರೂಪಣ ಏವ ಪೃಥಗ್ದೃಷ್ಟಾನ್ತದ್ವಯಮ್ । ತತ್ರಾಭಾಸದೃಷ್ಟಾನ್ತೋ ವ್ಯಾಖ್ಯಾತಃ । ತಮೋದೃಷ್ಟಾನ್ತಶ್ಚ–ಯಥಾನ್ಧಕಾರೋ ಜ್ಯೋತಿಷೋಽನ್ಯತ್ರೈವ ಪ್ರತೀಯತೆ, ಜ್ಯೋತಿರ್ವಿನಾ ಚ ನ ಪ್ರತೀಯತೆ; ಜ್ಯೋತಿರಾತ್ಮನಾ ಚಕ್ಷುಷೈವ ತತ್ಪ್ರತೀತೇರ್ನ ಪೃಷ್ಠಾದಿನೇತಿ ತಥೇಯಮಪೀತಿ ಜ್ಞೇಯಮ್ । ತತಶ್ಚಾಂಶದ್ವಯನ್ತು ಪ್ರವೃತ್ತಿಭೇದೇನೈವೋಹ್ಯಮ್, ನ ತು ದೃಷ್ಟಾನ್ತಭೇದೇನ । ಪ್ರಾಕ್ತನದೃಷ್ಟಾನ್ತದ್ವೈಧಾಭಿಪ್ರಾಯೇಣ ತು ಪೂರ್ವಸ್ಯಾ ಆಭಾಸಪರ್ಯಾಯಚ್ಛಾಯಾ–ಶಬ್ದೇನ ಕ್ವಚಿತ್ ಪ್ರಯೋಗಃ । ಉತ್ತರಸ್ಯಾಸ್ತಮಃಶಬ್ದೇನೈವ ಚೇತಿ; ಯಥಾ (ಶ್ರೀಮದ್ಭಾ ೩/೨೦/೧೮)– *'ಸಸರ್ಜ ಛಾಯಯಾಽವಿದ್ಯಾಂ ಪಂಚಪರ್ವಾಣಮಗ್ರತಃ'* ಇತ್ಯತ್ರ । ಯಥಾ ಚ (ಶ್ರೀಮದ್ಭಾ ೧೦/೧೪/೧೧)– *'ಕ್ವಾಹಂ ತಮೋಮಹದಹಮ್'* ಇತ್ಯಾದೌ

ಪೂರ್ವತ್ರಾವಿದ್ಯಾವಿದ್ಯಾಖ್ಯ-ನಿಮಿತ್ತಶಕ್ತಿವೃತ್ತಿಕತ್ವಾಜ್ಜೀವವಿಷಯಕತ್ವೇನ ಜೀವಮಾಯಾತ್ವಮ್; ಉತ್ತರತ್ರ ಸ್ವೀಯತತ್ತದ್ಗುಣಮಯ-ಮಹ-ದದ್ಯುಪಾದಾನಶಕ್ತಿವೃತ್ತಿಕತ್ವಾದ್ಗುಣಮಾಯಾತ್ವಮ್ । ತಥಾ 'ಸಸರ್ಜ' ಇತ್ಯಾದೌ ಛಾಯಾಶಕ್ತಿಂ ಮಾಯಾಮವಲಂಬ್ಯ ಸೃಷ್ಟ್ಯಾರಂಭೆ ಬ್ರಹ್ಮಾ ಸ್ವಯಮ್-ವಿದ್ಯಾಮಾವಿರ್ಭಾವಿತವಾನಿತ್ಯರ್ಥಃ (ಶ್ರೀಮದ್ಭಾ ೧೧/೧೧/೩)- 'ವಿದ್ಯಾವಿದ್ಯೇ *ಮಮ ತನು ವಿದ್ಧ್ಯುದ್ಧವ ಶರೀರಿಣಾಮ್ । ಬನ್ಧಮೋಕ್ಷಕರೀ ಆದ್ಯೆ ಮಾಯಯಾ ಮೇ ವಿನಿರ್ಮಿತೆ ॥*' ಇತ್ಯುಕ್ತತ್ವಾತ್ । ಅನಯೋರಾವಿರ್ಭಾವಭೇದಶ್ಚ ಶ್ರೂಯತೆ । ತತ್ರ ಪೂರ್ವಸ್ಯಾಃ ಪಾದ್ಮೆ (ಉ. ಖ. ೧೩/೨೩೦, ೨೩೧) ಶ್ರೀಕೃಷ್ಣಸತ್ಯಭಾಮಾ-ಸಂವಾದೀಯ ಕಾರ್ತ್ತಿಕಮಾಹಾತ್ಮ್ಯೆ ದೇವಗಣಕೃತ-ಮಾಯಾಸ್ತುತೌ- '*ಇತಿ ಸ್ತುವಂತಸ್ತೆ ದೇವಾಸ್ತೇಜೋಮಂಡಲ-ಸಂಸ್ಥಿತಮ್ । ದದೃಶುರ್ಗಗನೆ ತತ್ರ ತೇಜೋವ್ಯಾಪ್ತದಿಗಂತರಮ್ ॥ ತನ್ಮಧ್ಯಾದ್ಭಾರತೀಂ ಸರ್ವೇ ಶುಶ್ರುವುರ್ವ್ಯೋಮಚಾರಿಣೀಮ್ । ಅಹಮೇವ ತ್ರಿಧಾ ಭಿನ್ನಾ ತಿಷ್ಠಾಮಿ ತ್ರಿವಿಧೈರ್ಗುಣೈಃ ॥*' ಇತ್ಯಾದಿ । ಉತ್ತರಸ್ಯಾಃ ಪಾದ್ಮೋತ್ತರಖಂಡೆ (೯೧/೫೧)- '*ಅಸಂಖ್ಯಂ ಪ್ರಕೃತಿಸ್ಥಾನಂ ನಿವಿಡಧ್ವಾನ್ತಮವ್ಯಯಮ್ ।*' ಇತಿ । ವಿದ್ಯಾದಿತಿ ಪ್ರಥಮಪುರುಷನಿರ್ದೇಶಸ್ಯಾಯಂ ಭಾವಃ- ಅನ್ಯಾನ್ ಪ್ರತ್ಯೇವ ಖಲ್ವಯಮುಪದೇಶಃ- 'ತ್ವನ್ತು ಮದ್ದತ್ತಶಕ್ತ್ಯಾ ಸಾಕ್ಷಾದೇವಾನುಭವನ್ನಸಿ' ಇತಿ । ಏವಂ ಮಾಯಿಕ ದೃಷ್ಟಿಮತೀತ್ಯೈವ ರೂಪಾದಿವಿಶಿಷ್ಟಂ ಮಾಮನುಭವೇದಿತಿ । ವ್ಯತಿರೇಕ-ಮುಖೇನಾನುಭಾವನಸ್ಯಾಯಂ ಭಾವಃ- ಶಬ್ದೇನ ನಿರ್ದ್ಧಾರಿತಸ್ಯಾಪಿ ಮತ್ಸ್ವ-ರೂಪಾದೇರ್ಮಾಯಾಕಾರ್ಯಾ-ವೇಶೇನೈವಾನುಭವೋ ನ ಭವತಿ, ತತಸ್ತದರ್ಥಂ ಮಾಯಾತ್ಯಾಜನಮೇವ ಕರ್ತ್ತವ್ಯಮಿತಿ । ಎತೇನ ತದವಿನಾಭಾವಾತ್ ಪ್ರೇಮಾಪ್ಯನುಭಾವಿತ ಇತಿ ಗಮ್ಯತೆ । (ಕ್ರಮ-ಸಂದರ್ಭ) ॥೩೩॥

ಪರಮಪುರುಷಾರ್ಥಭೂತಂ ಮಾಮೃತೆ- ಮದ್ದರ್ಶನಾದನ್ಯತ್ರೈವ ಯತ್ ಪ್ರತೀಯೇತ, ಯಚ್ಚಾತ್ಮನಿ ನ ಪ್ರತೀಯೆತ- ಮಾಂ ವಿನಾ ಸ್ವತಃ ಪ್ರತೀತಿರಪಿ ಯಸ್ಯ ನಾಸ್ತೀತ್ಯರ್ಥಃ; ತದ್ವಸ್ತು ಆತ್ಮನೋ ಮಮ ಪರಮೇಶ್ವರಸ್ಯ ಮಾಯಾಂ ವಿದ್ಯಾತ್ । ಅತ್ರ ದೃಷ್ಟಾನ್ತಃ- ಯಥಾಽಭಾಸಃ ಪ್ರತಿಬಿಮ್ಬರಶಿಮಃ; ಯಥಾ ಚ ತಮಸ್ತಿಮಿರಮಿತಿ । ತತ್ರಾಭಾಸ್ಯ ತಾದೃಶತ್ವಂ ಸ್ಪಷ್ಟಮೇವ । ತಮಸೋಽಪಿ ಜ್ಯೋತಿರ್ದರ್ಶನಾದನ್ಯತ್ರೈವ ಪ್ರತೀತೇರ್ಜ್ಯೋತಿರಾತ್ಮಕಂ ಚಕ್ಷುರ್ವಿನಾ ಚಾಪ್ರತೀತೇರಿತಿ । (ಶ್ರೀಭಗವತ್-ಸಂದರ್ಭ ೧೦೫ ಪರಿಚ್ಛೇದ) ॥೩೩॥

ಭಾವಾನುವಾದ- ತದನಂತರ ಹೀಗೆ ರೂಪಾದಿಯಿಂದ ಯುಕ್ತ ಪರಮಾತ್ಮನ ವಿಷಯದಲ್ಲಿ ವ್ಯತಿರೇಕವಾಗಿ ತಿಳಿಸಲೆಂದು ಶ್ರೀಭಗವಂತನು ಈ ಶ್ಲೋಕದಲ್ಲಿ ಮಾಯೆಯ ಲಕ್ಷಣವನ್ನು ಹೇಳುತ್ತಿದ್ದಾನೆ. 'ಅರ್ಥಂ' ಅಂದರೆ ಪರಮಾರ್ಥಭೂತನಾದ ನನ್ನನ್ನು ಹೊರತುಪಡಿಸಿ 'ಯತ್ ಪ್ರತೀಯೆತ' ಅರ್ಥಾತ್ ನನ್ನ ಪರಿಚಯದಲ್ಲಿ ಯಾವ ವಸ್ತುವಿನ ಪರಿಚಯದ ಅಭಾವವಿರುತ್ತದೋ, ಅದು ನನ್ನ ಬಹಿರಂಗದಲ್ಲಿ ಮಾತ್ರ ಇದು ಗೋಚರವಾಗುತ್ತದೆ. ಮತ್ತು "ಯತ್ ಚ ಆತ್ಮನಿ ನ ಪ್ರತೀಯೇತ"- ಪರಮಾತ್ಮನಲ್ಲಿ ಯಾವುದು ಕಾಣಿಸಲ್ಪಡುವುದಿಲ್ಲವೋ ಅರ್ಥಾತ್ ಯಾರ ಆಶ್ರಯವಿಲ್ಲದೆ ಯಾವುದು ಸ್ವತಃ ಗೋಚರಿಸುವುದಿಲ್ಲವೋ- ಈ ಲಕ್ಷಣದಿಂದ ಯುಕ್ತವಾದ ವಸ್ತುವನ್ನು ನನ್ನ ಅಂದರೆ ಪರಮಾತ್ಮ ಪರಮೇಶ್ವರನ ಮಾಯಾ ಅರ್ಥಾತ್ ಜೀವಮಾಯಾ ಮತ್ತು

ಗುಣಮಾಯಾ– ಈ ಎರಡು ಪ್ರಕಾರದ ಮಾಯೆಯನ್ನು ಅರ್ಥಮಾಡಿಕೊ. ಇದರಲ್ಲಿ ಶುದ್ಧಜೀವಿ ಕೇವಲ ಚಿತ್–ರೂಪನಾಗಿದ್ದಾನೆ ಮತ್ತು ಪರಮಾತ್ಮ ಪರಮೇಶ್ವರನ ಕಿರಣ–ಸ್ಥಾನವಾದ ಕಾರಣ ಸ್ವಯಂ ಪರಮಾತ್ಮನಲ್ಲಿಯೇ ಅವನು ಸ್ಥಿತನಾಗಿದ್ದಾನೆ– ಇಲ್ಲಿಯವರೆಗು ಶ್ರೀಭಗವಂತನು ಈ ವಿಷಯವನ್ನು ಹೇಳಲು ಇಚ್ಛಿಸುತ್ತಿದ್ದಾನೆ.

ಪುನಃ ಈ ಭಗವತ್–ಮಾಯಾದ ಈ ದ್ವಿ–ರೂಪ–ಗತವಾದ ಯಾವ ನಾಮವಿದೆಯೋ, ಅದನ್ನು ಎರಡು ಪ್ರಕಾರದ ಉದಾಹರಣೆಗಳಿಂದ ತಿಳಿಸಲಾಗುತ್ತಿದೆ. ಅದರಲ್ಲಿ 'ಜೀವಮಾಯಾ' ಹೆಸರಿನ ಪ್ರಥಮಾಂಶವನ್ನು ಉದಾಹರಣೆಯ ಮೂಲಕ ಸ್ಪಷ್ಟಪಡಿಸುವಾಗ ಅದರ ಅಸಾಧ್ಯತೆಯನ್ನು 'ಯಥಾಭಾಸಃ' ಎಂಬ ಪದದ ಮೂಲಕ ದೂರಮಾಡುತ್ತಿದ್ದಾರೆ. 'ಆಭಾಸ' ಎಂದರೆ ಜ್ಯೋತಿರ್ಬಿಂಬದ ತನ್ನ ಪ್ರಕಾಶದಿಂದ ದೂರದಲ್ಲಿ ನೆಲಸಿರುವಂತಹ ವಸ್ತುಗಳ ಪ್ರತಿಚ್ಛಾಯೆ ಗೋಚರವಾಗುತ್ತದೆ, ಅದರದ್ದೇ ಅರಿವಾಗುತ್ತದೆ. ಆ ಆಭಾಸವು ಯಾವ ಪ್ರಕಾರ ಜ್ಯೋತಿರ್ಬಿಂಬದ ಹೊರಗೆ ಮಾತ್ರ ಗೋಚರವಾಗುತ್ತದೋ ಮತ್ತು ಜ್ಯೋತಿರ್ಬಿಂಬವಿಲ್ಲದೆ ಅದರ ಪರಿಚಯವಾಗುವುದಿಲ್ಲ, ಜೀವಮಾಯೆಯೂ ಸಹ ಅದೇ ಪ್ರಕಾರವಾದದ್ದು. ಇದರ ಮೂಲಕ ಪ್ರತಿಬಿಂಬ–ಪರ್ಯಾಯವಾಚಿಕ ಆಭಾಸ–ಧರ್ಮದ ಕಾರಣ ಆ ಜೀವಮಾಯೆಗೆ 'ಆಭಾಸ' ಹೆಸರೂ ಸಹ ಇಂಗಿತವಾಗುತ್ತದೆ. ಆದ್ದರಿಂದ ಹೀಗೆ ಭಾಗವತದಲ್ಲಿ ಹೇಳಲಾಗಿದೆ (ಶ್ರೀಮದ್ಭ ೨/೧೦/೭–) "ಯಾರಿಂದ ಈ ವಿಶ್ವದ ಸೃಷ್ಟಿ (ಅಂದರೆ ಪ್ರಕಾಶ), ಪ್ರಳಯ (ಅಂದರೆ ನಿರೋಧ) ಮತ್ತು ಪ್ರಕಾಶವಾಗುವುದೋ, ಅದು ಪರಂಬ್ರಹ್ಮ ಮತ್ತು ಪರಮಾತ್ಮ ಹೆಸರಿನಿಂದ ಪ್ರಸಿದ್ಧವಾಗಿದೆ ಮತ್ತು ಅವನೇ ಆಶ್ರಯ." ಅದೇ ಪ್ರಕಾರ ಕೆಲವು ಬಾರಿ ಅವನ ಕಾರ್ಯವನ್ನೂ ಸಹ 'ಆಭಾಸ' ಎನ್ನಲಾಗಿದೆ.

ಯಾವ ರೀತಿ ಅತಿ ಉಜ್ವಲ ಜ್ಯೋತಿರ್ಬಿಂಬವು ಕೆಲವು ಬಾರಿ ತನ್ನ ಚಾಕಚಕ್ಯ ಉಜ್ವಲ ಕಾಂತಿಯಿಂದ ಕಣ್ಣುಗಳನ್ನು ದಗ್ದಗೊಳಿಸಿ ನೇತ್ರದ ಪ್ರಕಾಶಾವನ್ನು ಆವರಿಸುತ್ತದೆ ಮತ್ತು ಪುನಃ ತನ್ನ ಅತ್ಯಂತ ಉಜ್ವಲ ತೇಜದ ಮೂಲಕ ಕಾಣುತಿರುವವನ ನೇತ್ರಗಳಿಗೆ ತನ್ನ ಸಮೀಪದಲ್ಲಿರುವ ವಸ್ತುಗಳ ವರ್ಣ–ಜ್ವೈಚಿರ್ಯವನ್ನು ಪ್ರತಿಬಿಂಬಿಸುತ್ತದೆ ಅಥವಾ ಕೆಲವು ಬಾರಿ ಅದರಿಂದಾಗಿ ನಾನಾ ಪ್ರಕಾರದ ಬೇರೆ–ಬೇರೆ ಆಕಾರಗಳಾಗಿ ಗೋಚರವಾಗುವಂತೆ ಮಾಡುತ್ತದೆ, ಅದೇ ರೀತಿ ಈ ಮಾಯೆಯೂ ಸಹ ಜ್ಞಾನವನ್ನು ಆವರಿಸುತ್ತದೆ ಮತ್ತು ಸತ್ವಾದಿ–ಗುಣ–ಸಾಮ್ಯರೂಪ 'ಗುಣಮಾಯಾ' ಎಂಬ ಹೆಸರಿನ ಜಡ ಪ್ರಕೃತಿಯನ್ನು ನಿರ್ಗತ ಅಥವಾ ಪ್ರಕಟಿಸುತ್ತದೆ ಅಥವಾ ಮತ್ತೆ ಕೆಲವೊಮ್ಮೆ ಪೃಥಗ್ಭೂತ ಸತ್ವವಾದಿ ಗುಣಗಳನ್ನು ನಾನಾ ಆಕಾರಗಳಲ್ಲಿ ಪರಿಣತಗೊಳಿಸುತ್ತದೆ– ಇದನ್ನೂ ಸಹ ಅರ್ಥಮಾಡಿಕೊಳ್ಳುವುದು ಅಗತ್ಯ. "ಒಂದು ಸ್ಥಾನದಲ್ಲಿ ಸ್ಥಿತ ಅಗ್ನಿಯ ಪ್ರಭಾವವು ಯಾವ ರೀತಿ ವಿಸ್ತಾರವಾಗುತ್ತದೋ, ಪರಬ್ರಹ್ಮನ ಮಾಯೆಯೂ ಸಹ ಅದೇ ರೀತಿ ಸಮಸ್ತ ಜಗತ್ತಿನಲ್ಲು ವ್ಯಾಪ್ತವಾಗುತ್ತದೆ" ಎಂದು ಹೇಳಲಾಗಿದೆ. ಪುನಃ ಆಯುರ್ವೇದ–ವಿದ್ ಹೇಳುತ್ತದೆ– "ಸೂರ್ಯನ ಪ್ರತಿಚ್ಛಾಯೆಯ ಸಮಾನವಾಗಿ

ಜಗತ್–ಕಾರಣ ಒಂದು ಚಿದಾನಂದರೂಪನಾದ ಪುರುಷನ ನಿತ್ಯ ಪ್ರಕೃತಿಯಿದೆ, ಅದು ಅಚೇತನವಾದರೂ ಸಹ ಪರಮಾತ್ಮನ ಚೇತನ ವ್ಯಕ್ತವಾಗುವ ಮೂಲಕ ಪ್ರಭಾವವತಿಯಾಗಿ ನಾಟ್ಯ ರಂಗ–ಮಂಚದಂತೆ ಸಮಾನ ಸಮಗ್ರ ಅನಿತ್ಯ ವಿಶ್ವದ ಸೃಷ್ಟಿ ಮಾಡುತ್ತದೆ." ಇದೇ ರೀತಿ ನಿಮಿತ್ತಾಂಶ ಜೀವಮಾಯೆಯಾಗಿದೆ ಮತ್ತು ಉತ್ಪನ್ನಾಂಶ ಗುಣಮಾಯೆಯಾಗಿದೆ. ಈ ಎಲ್ಲವನ್ನು ಅನಂತರ ವಿಸ್ತಾರವಾಗಿ ವಿವರಿಸಲಾಗುವುದು.

ತದನಂತರ ಇದೇ ಪ್ರಕಾರದಿಂದ ಸಿದ್ಧ 'ಗುಣಮಾಯಾ' ಎಂಬ ಹೆಸರಿನ ದ್ವಿತೀಯ ಅಂಶವನ್ನೂ ಸಹ 'ಯಥಾ ತಮಃ'ದ ಉದಾಹರಣೆಯ ಮೂಲಕ ಸ್ಪಷ್ಟಪಡಿಸುತ್ತಿದ್ದಾರೆ. ಇಲ್ಲಿ 'ತಮಃ' ಶಬ್ದದ ಮೂಲಕ ಪೂರ್ವ ವಿವರಣೆಯ ತಮಃಪ್ರಾಯ ವರ್ಣಶಾಬಲ್ಯ (ಅರ್ಥಾತ್ ವರ್ಣ–ವೈಚಿತ್ರ್ಯ) ಕಥಿತವಾಗಿದೆ. ಯಾವ ರೀತಿ ಮೂಲ ಜ್ಯೋತಿರ್ಮಯ ಪದಾರ್ಥದಲ್ಲಿ ಸ್ಥಾನವಿಲ್ಲದಿದ್ದರೂ ಸಹ ಮೂಲ ಜ್ಯೋತಿರ್ವಸ್ತುವಿನ ಆಶ್ರಯವಿಲ್ಲದೆ ತಮಃವು ಸ್ವತಃ ಸಂಭವಿಸುವುದಿಲ್ಲವೋ, ಸರಿಯಾಗಿ ಅದೇ ರೀತಿ ಪರಮಾರ್ಥಭೂತ ಭಗವಂತನಿಗೆ ಅತಿರಿಕ್ತವಾಗಿ ಮಾಯೆಯೂ ಸಹ ಸ್ವತಃ ಗೋಚರಿಸುವುದಿಲ್ಲ. ಅಥವಾ ಕೇವಲಮಾತ್ರ ಮಾಯೆಯ ನಿರೂಪಣೆಗಾಗಿಯೇ ಈ ಎರಡು ಪೃಥಕ ಉದಾಹರಣೆಗಳಾಗಿವೆ– ಅದರಲ್ಲಿ 'ಆಭಾಸ'ದ ಉದಾಹರಣೆಯ ವ್ಯಾಖ್ಯಾಯನೆ ನೀಡಲಾಗಿದೆ. ಮತ್ತು 'ತಮ'ದ ಉದಾಹರಣೆಯಲ್ಲಿ– ಯಾವ ರೀತಿ ಜ್ಯೋತಿಯಿಂದ ಅನ್ಯತ್ರ ಅಂಧಕಾರವು ಗೋಚರಿಸುತ್ತದೆ ಮತ್ತು ಜ್ಯೋತಿಯಿಲ್ಲದಿದ್ದರೆ ಸ್ವತಂತ್ರವಾಗಿಯೂ ಸಹ ಅದು ಗೋಚರಿಸುವುದಿಲ್ಲ, ಈ ರೀತಿಯಾದ ಗೋಚರವೂ ಸಹ ಪುನಃ ಜ್ಯೋತಿರ್ಮಯ ಚಕ್ಷುವಿನ ಮೂಲಕ ಮಾತ್ರ ಕಾಣಲಾಗುತ್ತದೆ, ಪೃಷ್ಠ ಇತ್ಯಾದಿ ಇತರ ದೇಹಾಂಗಳ ಮೂಲಕ ಸಾಧ್ಯವಿಲ್ಲ, ಅದೇ ಪ್ರಕಾರದಿಂದ ಈ ಮಾಯೆಯನ್ನೂ ಸಹ ಅರ್ಥಮಾಡಿಕೊಳ್ಳಬೇಕು. ಆದ್ದರಿಂದ ಈ ಎರಡು ಅಂಶಗಳನ್ನು ಪ್ರವೃತ್ತಿ ಭೇದದಿಂದ ಮಾತ್ರ ಅರ್ಥಮಾಡಿಕೊಳ್ಳಬೇಕು, ಉದಾಹರಣೆಯ ಭೇದದಿಂದಲ್ಲ.

ಹಿಂದಿನ ಉದಾಹರಣೆಯ ಎರಡು ಪ್ರಕಾರದ ಅಭಿಪ್ರಾಯದ ಅನುಸಾರವಾಗಿ ಆಭಾಸ ಪರ್ಯಾಯವಾಚಿಕ 'ಛಾಯಾ' ಶಬ್ದದಿಂದ ಕೆಲವು ಪೂರ್ವಶಕ್ತಿಯ (ಜೀವಶಕ್ತಿಯ) ಪ್ರಯೋಗ ಮತ್ತು 'ತಮಃ' ಶಬ್ದದಿಂದ ಕೆಲವು ಬಾರಿ ಪರವರ್ತಿ ಶಕ್ತಿಯ (ಮಹಾಮಾಯಾದ) ಪ್ರಯೋಗ ಮಾಡಲಾಗಿದೆ. ಹೀಗೆ ಶ್ರೀಭಾಗವತದಲ್ಲಿ (೩/೧೦/೧೮) ಶ್ರೀಮೈತ್ರೇಯ ಹೇಳಿದ್ದಾರೆ– "ಶ್ರೀಬ್ರಹ್ಮನು ಪ್ರಥಮವಾಗಿ ಪ್ರಭಾ (ಜ್ಞಾನದ) ಪ್ರತಿಯೋಗಿನಿ ಛಾಯಾ (ಅಬುದ್ಧಿ) ಮುಕಾಂತರ ತಾಮಿಸ್ರ (ಅರ್ಥಾತ್ ದ್ವೇಷ), ಅಂಧತಾಮಿಸ್ರ (ಅಭಿನಿವೇಶ), ತಮಃ (ಅವಿದ್ಯತೆ), ಮೋಹ (ಅಸ್ಮಿತ) ಮತ್ತು ಮಹಾತಮಃ (ರಾಗ)– ಈ ಐದು ಪ್ರಕಾರದ ಅವಿದ್ಯೆಗಳನ್ನು ಸೃಷ್ಟಿಸಿದರು." ಈ ಶ್ಲೋಕದಲ್ಲಿ ಮತ್ತು ಶ್ರೀಭಾಗವತದ (೧೦/೧೪/೧೧) ಶ್ಲೋಕದಲ್ಲಿ ಶ್ರೀಬ್ರಹ್ಮನ ಹೇಳಿಕೆ– "ಹೇ ಭಗವಂತ! ಪ್ರಕೃತಿ, ಮಹತ್–ತತ್ವ, ಅಹಂಕಾರ, ಆಕಾಶ, ಅಗ್ನಿ ಮತ್ತು ಭೂಮಿ ಇದರ ಮೂಲಕ ಸಂವೇಷ್ಟಿತ ಬ್ರಹ್ಮಂಡರೂಪ ಘಟ್ಟದ ನಡುವೆ ವಿತಸ್ತಿತ (೧

ವಿತಸ್ತಿತ=೧೨ ಅಂಗುಲ) ಪ್ರಮಾಣದ ಶರೀರ ಧಾರಣೆ ಮಾಡಿರುವ ನಾನ್ನೆಲ್ಲಿ ಮತ್ತು ಯಾರ ರೋಮಕೂಪರೂಪ ಗವಾಕ್ಷ (ರಂಧ್ರ) ಪಥದಲ್ಲಿ ಅಗಣಿತ ಬ್ರಹ್ಮಾಂಡವು ಪರಮಾಣುವಿನಂತೆ ಚರಿಸುತ್ತಿದೆ, ಅಂತಹ ಮಹಿಮಾನ್ವಿತನಾದ ನೀನೆಲ್ಲಿ!"

ಹಿಂದಿನ ಉದಾಹರಣೆಯಲ್ಲಿ 'ಅವಿದ್ಯ' ಹೆಸರಿನ ನಿಮಿತ್ತ–ಶಕ್ತಿ–ವೃತ್ತಿಯಿಂದ ಯುಕ್ತವಾದ ಕಾರಣ ಜೀವ–ವಿಷಯಕ ರೂಪದಲ್ಲಿ ಜೀವಮಾಯಾತತ್ವವು ಉದಿತವಾಗಿದೆ, ಮತ್ತು ಪರ ದೃಷ್ಟಾಂತದಲ್ಲಿ ಅವೆಲ್ಲವು ಸ್ವೀಯ–ವಿಶೇಷ ಗುಣಮಯ ಮಹದಾದಿ ಉತ್ಪಾದನ–ಶಕ್ತಿ–ವೃತ್ತಿಯಿಂದ ಯುಕ್ತವಾದ ಕಾರಣ ಅದರ ಗುಣಮಾಯಾತತ್ವವು ಉದಿತವಾಗಿದೆ. ಇದೇ ರೀತಿ 'ಸರ್ಸಜ'– ಇತ್ಯಾದಿ ಶ್ರೀಭಾಗವತದ (೩/೨೦/೧೮) ಶ್ಲೋಕದಲ್ಲಿ ಶ್ರೀಬ್ರಹ್ಮನು ಸೃಷ್ಟಿಯ ಆರಂಭದಲ್ಲಿ ಛಾಯಾಶಕ್ತಿ ಮಾಯೆಯನ್ನು ಅವಲಂಬಿಸಿ ಸ್ವಯಂ ಅವಿದ್ಯೆಯನ್ನು ಪ್ರಕಟಗೊಳಿಸಿದ್ದರು, ಏಕೆಂದರೆ ಶ್ರೀಭಾಗವತ (೧೧/೧೧/೩) ಶ್ಲೋಕದಲ್ಲಿ ಶ್ರೀಭಗವಂತನು ಉದ್ಧವನಿಗೆ ಹೀಗೆ ಹೇಳಿದರು– "ಹೇ ಉದ್ಧವ! ಶರೀರಧಾರಿಗಳ ಬಂಧನಕಾರಣವಾದ ಮತ್ತು ಮೋಕ್ಷಕಾರಣವಾದ ನನ್ನ ಅನಾದಿ ಮಾಯಾರೂಪ ಮಹಾಶಕ್ತಿಯ ಮೂಲಕ ಸೃಷ್ಟಿಯಾದ ಈ ವಿದ್ಯೆ ಮತ್ತು ಅವಿದ್ಯೆಯನ್ನು ನನ್ನ ಶಕ್ತಿ ಎಂದು ತಿಳಿದುಕೋ." ಶಾಸ್ತ್ರಗಳಲ್ಲಿ ಈ ಎರಡರ ಆವಿರ್ಭಾವ ಭೇದವನ್ನೂ ಸಹ ಕಾಣಲಾಗುತ್ತದೆ. ಅದರಲ್ಲಿ ಪೂರ್ವವರ್ತಿ (ವಿದ್ಯೆಯ) ಸಂಬಂಧದಲ್ಲಿ ಪದ್ಮಪುರಾಣದಲ್ಲಿ ಶ್ರೀಕೃಷ್ಣ–ಸತ್ಯಭಾಮ–ಸಂವಾದದಲ್ಲಿ ಒಳಗೊಂಡ ಕಾರ್ತಿಕ–ಮಹಾತ್ಮೆಯಲ್ಲಿ ದೇವತೆಗಳ ಮೂಲಕ ಮಾಯೆಯ ಸ್ತವದಲ್ಲಿ ಹೇಳಲಾಗಿದೆ ಈ ಪ್ರಕಾರ ಸ್ತುತಿಸುತ್ತ ದೇವತೆಗಳು ಆಕಾಶದಲ್ಲಿ ತೇಜೋಮಂಡಲದಲ್ಲಿ ಸ್ಥಿತವಾದ ದಿಗ್–ದಿಗಂತರ ವ್ಯಾಪಿತ ತೇಜವನ್ನು ಕಂಡರು ಮತ್ತು ಅದರಿಂದ ಈ ಆಕಾಶವಾಣಿಯನ್ನು ಶ್ರವಣಿಸಿದರು– "ನಾನು ಮೂರು ಭಾಗಗಳಲ್ಲಿ ವಿಭಕ್ತನಾಗಿ ತ್ರಿವಿಧ ಗುಣಗಳೊಂದಿಗೆ ಸ್ಥಿತನಾಗಿದ್ದೇನೆ." ಹಾಗೂ ಮತ್ತೊಂದರ (ಅವಿದ್ಯೆಯ) ಸಂಬಂಧದಲ್ಲಿ ಪದ್ಮೋತ್ತರಖಂಢದಲ್ಲಿ ಹೀಗೆ ವಿವರಣೆಯಿದೆ– "ಪ್ರಕೃತಿಯ ಸ್ಥಾನವು ಅಸಂಖ್ಯ, ನಿಗೂಢ, ಅಂಧಕಾರ ಯುಕ್ತವಾದದ್ದು ಮತ್ತು ಅವ್ಯಯವಾದದ್ದು."

'ವಿದ್ಯಾತ್' (ಅರಿತುಕೋ)– ಮಧ್ಯಮ ಪುರುಷನ ಸ್ಥಾನದಲ್ಲಿ ಪ್ರಥಮ ಪುರುಷನ ನಿರ್ದೇಶದ ಭಾವಾರ್ಥವೇನೆಂದರೆ ಅನ್ಯ ವಿಚಾರದಲ್ಲೂ ಸಹ ಇದೇ ಉಪದೇಶವಿದೆ, ಆದರೆ ನೀನು ನನ್ನ ಮೂಲಕ ಪ್ರಸಾದಿಸಿದ ಶಕ್ತಿಯ ಬಲದಿಂದ ಸಾಕ್ಷಾತ್ ಭಾವದಿಂದಲೇ ಅನುಭವ ಪಡೆದುಕೊ. ಈ ಪ್ರಕಾರದಿಂದ ಮಾಯೆಯ ದೃಷ್ಟಿಯನ್ನು ಅತಿಕ್ರಮಣಿಸಿ ಅಪ್ರಾಕೃತ–ರೂಪಾದಿಯಿಂದ ಯುಕ್ತವಾಗಿ ನನ್ನ ಅನುಭವನ್ನು ಪಡೆಯುವೇ. ವ್ಯತಿರೇಕ ರೂಪದಿಂದ ಅನುಭವದ ಭಾವಾರ್ಥವೇನೆಂದರೆ ಶಬ್ದದ ಮೂಲಕ ನಿರ್ಧಾರಿತವಾದರೂ ಸಹ ನನ್ನ ಸ್ವರೂಪಾದಿಯ ಮಾಯಾ–ಕಾರ್ಯದ ಆವೇಶದ ಮೂಲಕ ಎಂದಿಗೂ ಅನುಭವಾಗುವುದಿಲ್ಲ. ಈ ಪ್ರಕಾರ ನನ್ನ ಅನುಭವದ ಪ್ರೇಮದಿಂದ ಸಂಬಂಧಯುಕ್ತವಾದ ಕಾರಣ ಆ ಪ್ರೇಮವೂ ಸಹ ಅನುಭವಾಗುತ್ತದೆ–

ಹೀಗೆ ಅರ್ಥಮಾಡಿಕೊಳ್ಳಲಾಗುತ್ತದೆ. (ಕ್ರಮ–ಸಂದರ್ಭ) ॥೩೩॥

[ಭಗವತ್–ಸಂದರ್ಭದಲ್ಲಿ ೧೮ ಸಂಖ್ಯಕ್ಕೆ ಅತಿರಿಕ್ತವಾಗಿ ಪುನಃ ೧೦೫ ಸಂಖ್ಯದಲ್ಲಿ ಶ್ರೀಜೀವ ಗೋಸ್ವಾಮಿಪಾದರವರು ಒಂದು ಸಂಕ್ಷಿಪ್ತ ವ್ಯಾಖ್ಯಾಯನವನ್ನು ಬರೆದಿದ್ದಾರೆ–]

ಪರಮ ಪುರುಷಾರ್ಥಭೂತನಾದ ನನ್ನನ್ನು ಹೊರತುಪಡಿಸಿ ಅರ್ಥಾತ್ ನನ್ನ ದರ್ಶನದ ಅತಿರಿಕ್ತವಾಗಿ ಅನ್ಯ ದರ್ಶನದಲ್ಲಿ ಯಾವುದರ ಪರಿಚಯವಾಗುತ್ತದೋ ಮತ್ತು ಯಾವ ಸ್ವರೂಪದಲ್ಲಿ ಪರಿಚಯವಾಗುವುದಿಲ್ಲ ಅಂದರೆ ನನಗೆ ಅತಿರಿಕ್ತವಾಗಿ ಯಾವುದರ ಸ್ವತಃ ಗೋಚರಿಸುವುದಿಲ್ಲವೋ, ಆ ವಸ್ತುವನ್ನು ಆತ್ಮರೂಪಿ ವಿಭಕ್ತಿರೂಪ ಪರಮೇಶ್ವರನ ಮಾಯೇ ಎಂದು ಅರ್ಥಮಾಡಿಕೋ. ಇದಕ್ಕೆ ಉದಾಹರಣೆ– ಯಾವ ರೀತಿ ಆಭಾಸ ಅಂದರೆ ಪ್ರತಿಬಿಂಬ–ಪ್ರಕಾಶವು ಮತ್ತು ಯಾವ ರೀತಿ ತಮಃ ಅಂದರೆ ಅಂಧಕಾರ. ಇದರಲ್ಲಿ ಆಭಾಸದ ಪೂರ್ವೋಕ್ತ ಭಾವ ಸ್ಪಷ್ಟವನ್ನು ಮಾತ್ರ ಅರಿಯಲಾಗುತ್ತದೆ ಮತ್ತು ಅಂಧಕಾರವೂ ಸಹ ಜ್ಯೋತಿರ್ದರ್ಶನದ ಅತಿರಿಕ್ತವಾಗಿ ಅನ್ಯತ್ರವೇ ಗೋಚರಿಸುತ್ತದೆ ಮತ್ತು ಜ್ಯೋತಿರಾತ್ಮದ ಚಕ್ಷುವಿಗೆ ಹೊರತುಪಡಿಸಿ ಅನ್ಯ ಅಂಗಗಳ ಮೂಲಕ ಆ ಅಂಧಕಾರದ ಪರಿಚಯವನ್ನು ಅರ್ಥಮಾಡಿಕೊಳ್ಳಲಾಗುವುದಿಲ್ಲ. (ಭಗವತ್–ಸಂದರ್ಭ)॥೩೩॥

ಶ್ರೀಶ್ರೀಧರ–ಸ್ವಾಮೀಪಾದರು

ಯಥಾತ್ಮಮಾಯಾಯೋಗೇನೇತ್ಯನೇನ ಮಾಯಾಯಾ ಅಪಿ ಪೃಷ್ಟತ್ವಾತ್ ವಕ್ಷ್ಯಮಾಣೋಪ–ಯೋಗಿತ್ವಾಚ್ಚ ಮಾಯಾಮ್ ನಿರೂಪಯತಿ–ಋತೇಽರ್ಥಂ ವಿನಾಪಿ ವಾಸ್ತವಮರ್ಥಂ ಯತ್ಯತಃ ಕಿಮಪ್ಯನಿರುತ್ತಮ್ ಆತ್ಮನ್ಯಧಿಷ್ಠಾನೆ ಪ್ರತೀಯೆತ, ಸದಪಿ ಚ ನ ಪ್ರತೀಯೇತ, ತತ್ ಆತ್ಮನೋ ಮಮ ಮಾಯಾಂ ವಿದ್ಯಾತ್ । ಯಥಾ ಆಭಾಸೋ ದ್ವಿಚಂದ್ರಾದಿರಿತಿ, ಅರ್ಥಂ ವಿನಾ ಪ್ರತೀತೌ ದೃಷ್ಟಾನ್ತಃ – 'ಯಥಾ ತಮಃ' ಇತಿ ಸತೋಽಪ್ರತೀತೌ ತಮೋ ರಾಹುರ್ಯಥಾ ಗ್ರಹಮಂಡಲೆ ಸ್ಥಿತೋಽಪಿ ನ ದೃಶ್ಯತೆ, ತಥಾ ॥೩೩॥

ಭಾವಾನುವಾದ– ಪೂರ್ವದಲ್ಲಿ ವಿವರಿಸಲಾದ ಇಪತ್ತಾರನೇ ಶ್ಲೋಕದಲ್ಲಿ ಮಾಯೆಯ ವಿಷಯವನ್ನು ಕೇಳಲಾಗಿತ್ತು ಮತ್ತು ಅಲ್ಲಿ ಅದರ ಉಪಯೋಗಿತ ವಿವರಣೆ ಕೊಡಲಾಗಿತ್ತು ಈಗ ಇಲ್ಲಿ ಮಾಯೆಯ ನಿರೂಪಣೆ ಮಾಡಲಾಗುತ್ತಿದೆ. ವಾಸ್ತವ ಅರ್ಥ (ಶ್ರೀವಿಷ್ಣು)ವನ್ನು ಹೊರತುಪಡಿಸಿ ಯಾವುದು ನಿಶ್ಚಿತ ರೂಪದಲ್ಲಿ ಹೇಳಲಾಗುವುದಿಲ್ಲವೋ, ಅದೂ ಸಹ ಆತ್ಮದ ಅಧಿಷ್ಠಾನದಲ್ಲಿ ಯಾವ ಕಾರಣದಿಂದ ಗೋಚರವಾಗುತ್ತದೊ ಮತ್ತು ಸತ್ಯವಾದರೂ ಸಹ ಯಾವ ವಾಸ್ತವ–ವಸ್ತು ಶ್ರೀವಿಷ್ಣುವಿನ ಅತಿರಿಕ್ತವಾಗಿ ಗೋಚರವಾಗುವುದಿಲ್ಲವೋ, ಅದನ್ನು ಪರಮಾತ್ಮನ ಅರ್ಥಾತ್ ನನ್ನ ಮಾಯೆಯ ರೂಪದಲ್ಲಿ ಅರ್ಥಮಾಡಿಕೋ. ವಾಸ್ತವ–ವಸ್ತುವಿನ ಅತಿರಿಕ್ತವಾಗಿ ಅನ್ಯ ವಸ್ತುವಿನ ಪರಿಚಯದ ದೃಷ್ಟಾಂತವೆಂದರೆ– ಯಾವ ರೀತಿ ಎರಡು ಚಂದ್ರಮಗಳು ಸತ್ಯವಲ್ಲದಿದ್ದರೂ ಸಹ ದರ್ಶನ–ದೋಷದಿಂದ ಬುದ್ಧಿಯ

ವಿಪರೀತದ ಕಾರಣ ಇಲ್ಲಿ ಎರಡು ಚಂದ್ರಮಗಳಿವೆಯೇ ಎಂದು ಅನಿಸುತ್ತದೆ. ವಾಸ್ತವ–ವಸ್ತುವಿನ ಪರಿಚಯದ ಅಭಾವದ ಉದಾಹರಣೆ– ಯಾವ ರೀತಿ ಘೋರ ಅಂಧಕಾರದಿಂದ ಆವೃತವಾದ ಮನೆಯ ಒಳಗೆ ಮಡಿಕೆ–ವಸ್ತ್ರಾದಿಗಳು ಇದ್ದರೂ ಸಹ ಅದನ್ನು ನೋಡಲಾಗುವುದಿಲ್ಲ, ಅಂಧಕಾರವನ್ನೇ ನೋಡಲಾಗುತ್ತದೆ, ಅದೇ ಪ್ರಕಾರ ಎಲ್ಲಿ ಆತ್ಮದ–ಪ್ರಜ್ಞೆ ಇರುವುದೋ, ಅಲ್ಲಿ ದೇಹದ–ಪ್ರಜ್ಞೆ ಇರುವುದಿಲ್ಲ ಮತ್ತು ಎಲ್ಲಿ ಆತ್ಮ–ಪ್ರಜ್ಞೆ ಇಲ್ಲವೋ, ಅಲ್ಲಿ ದೇಹ–ಪ್ರಜ್ಞೆ ಇರುತ್ತದೆ. ಅಥವಾ ಯಾವ ರೀತಿ ತಮಃ ಅರ್ಥಾತ್ ರಾಹು ಗ್ರಹ–ಮಂಡಲದಲ್ಲಿ ನೆಲಸಿದ್ದರೂ ಸಹ ಗ್ರಹ ದರ್ಶನಕಾಲದಲ್ಲಿ ಅದನ್ನು ಕಾಣಲಾಗುವುದಿಲ್ಲ, ಅದೇ ಪ್ರಕಾರ ಭಗವಂತನನ್ನು ಮತ್ತು ಮಾಯೆಯ ಪರಿಚಯವನ್ನು ಅರ್ಥಮಡಿಕೋ. ॥೩೩॥

ಶ್ರೀಮಧ್ವಾಚಾರ್ಯಪಾದರು

ಅರ್ಥವದಿವ ಪ್ರತೀಯತೇ, ನ ಚ ಪರಮಾತ್ಮನ್ಯರ್ಥವತ್ ಪ್ರತೀಯತೆ, ಅರ್ಥಂ ಪ್ರಯೋಜಮ್ಯತೆ । ನ ಹಿ ಜೀವಪ್ರಕೃತಿಭ್ಯಾಮೀಶ್ವರಸ್ಯಾರ್ಥಃ ।

ಮುಖ್ಯತೋ ವಿಷ್ಣುಶಕ್ತಿರ್ಹಿ ಮಾಯಾ–ಶಬ್ದೇನ ಭಣ್ಯತೇ ।
ಉಪಚಾರತಸ್ತು ಪ್ರಕೃತಿರ್ಜೀವಶ್ಚೈವ ಹಿ ಭಣ್ಯತೆ ॥

ಇತಿ ಚ ।

ಯಥಾಭಾಸೋ ಜೀವಃ ।

ಸರ್ವಂ ಪರೆ ಸ್ಥಿತಮಪಿ ನೈವ ತತ್ರೇತಿ ಭಣ್ಯತೆ ।
ಯತೋ ಹರೇರ್ನ ಜೀವೇನ ಜೀವನಂ ನ ಹರೌ ತತಃ ॥
ಜೀವಃ ಪ್ರಕೃತಿರಪ್ಯತ್ರ ಯತೋ ನೈವ ಹಿ ಬನ್ಧಕೃತ್ ।
ಕರ್ಮ ಚಾಫಲದಾತೃತ್ವಾತ್ ಕಾಲಶ್ಚಾಪರಿಣಾಮತ್ವಾತ್ ॥
ಯಥಾ ಛತ್ರಧರಾದ್ಯಾಸ್ತು ರಥಸ್ಥಾ ಅಪಿ ಸರ್ವಶಃ ।
ರಥಿನೋ ನೈವ ಭಣ್ಯನ್ತೆ ಏವಂ ಹರಿಗತಾ ಅಪಿ ॥೩೩॥

ಭಾವಾನುವಾದ– 'ಅರ್ಥ' ಅಂದರೆ ವಾಸ್ತವ ವಸ್ತುವಲ್ಲದಿದ್ದರೂ ಸಹ ಅದು ವಾಸ್ತವ ವಸ್ತುವಿಗೆ ಸಮಾನವಾಗಿ ಗೋಚರಿಸುತ್ತದೆ ಮತ್ತು ಇದು ಪರಮಾತ್ಮನಲ್ಲಿ ಗೋಚರಿಸುವುದಿಲ್ಲ. 'ಅರ್ಥ' ಶಬ್ದದಿಂದ ಪ್ರಯೋಜನದ ಅರಿವುಂಟಾಗುತ್ತದೆ. ಜೀವಿ ಮತ್ತು ಪ್ರಕೃತಿಯ ಮೂಲಕ ಈಶ್ವರನ ಪ್ರಯೋಜನ ಸ್ಥಿತವಾಗುವುದಿಲ್ಲ. ಮತ್ತೆ ಇದನ್ನು ಹೇಳಲಾಗಿದೆ– "ವಿಷ್ಣುಶಕ್ತಿ ಮಾತ್ರ ಪ್ರಧಾನವಾಗಿ 'ಮಾಯಾ' ಶಬ್ದದ ಮೂಲಕ ಅಭಿಹಿತವಾಗಿದೆ. ಗೌಣ ರೂಪದಿಂದ ಅವನ ಮೂಲಕ ಪ್ರಕೃತಿ ಮತ್ತು ಜೀವಿಯನ್ನು ತಿಳಿಯಾಲಾಗುತ್ತದೆ." 'ಆಭಾಸ' ಶಬ್ದದಿಂದ ಜೀವಿಯನ್ನು ಅರ್ಥಮಾಡಿಕೊಳ್ಳಬೇಕು. ಪರಮೇಶ್ವನಲ್ಲಿ ಎಲ್ಲವೂ ಅಡಗಿದ್ದರೂ ಸಹ ಅವನ ಅಂತರಂಗ ಸ್ವರೂಪದಲ್ಲಿ ಆ ಎಲ್ಲ ಗೋಚರಿಸುವುದಿಲ್ಲ. ಜೀವಿಯ ಮೂಲಕ ಶ್ರೀಹರಿಯ ಜೀವನ ಅಂದರೆ

ಅಸ್ತಿತ್ವ ಸಿದ್ಧವಾಗದು, ಆದ್ದರಿಂದ ಶ್ರೀಹರಿಯು ತನ್ನ ಸ್ವರೂಪದಲ್ಲಿ ಜೀವಿಯ ಪರಿಚಯವಾಗುವುದಿಲ್ಲ. ಅದೇ ಪ್ರಕಾರ ಪ್ರಕೃತಿಯು ಶ್ರೀಹರಿಯ ಆಶ್ರಿತವಾದರೂ ಸಹ ಪ್ರಕೃತಿ ಅವನನ್ನು ಬಂಧಿಸಲಾಗದು (ಅವನು ಸಾಂಖ್ಯದ ಪ್ರತಿಪಾಧನೆಯ ಪುರುಷನಲ್ಲ). ಕರ್ಮವು ಅವನ ಅಧೀನದಲ್ಲಿ ಇದ್ದರೂ ಸಹ ಅವನು ಕರ್ಮಫಲದ ಅಧೀನವಾಗುವುದಿಲ್ಲ ಮತ್ತು ಕಾಲ ಅವನ್ನಲ್ಲಿ ಅವಸ್ಥಿತವಾಗಿದ್ದರೂ ಸಹ ಕಾಲದ ಮೂಲಕ ಯಾವುದೇ ಪರಿಣಾಮ ಅಥವಾ ವಿಕಾರ ಹೊಂದುವುದಿಲ್ಲ. ಯಾವ ರೀತಿ ರಥದಲ್ಲಿದ್ದರೂ ಸಹ ಛತ್ರ–ಧಾರಣೆ ಮಾಡುವವನನ್ನು ರಥಿ ಎನ್ನಲಾಗುವುದಿಲ್ಲವೋ, ಅದೇ ರೀತಿ ಜೀವಿಯಂತೆ ಪ್ರಕೃತಿ, ಪ್ರಕೃತ ಕರ್ಮ ಮತ್ತು ಕಾಲವು ಭಗವಾನ್ ಶ್ರೀಹರಿಯ ನಿಜ ಸ್ವರೂಪದಲ್ಲಿ ಸ್ಥಿತವಾಗಿಲ್ಲ. ಅವನು ಈ ಎಲ್ಲದರಿಂದ ಪರ ಅಂದರೆ ಸ್ವತಂತ್ರನು. ॥೩೩॥

ಶ್ರೀವಿಜಯಧ್ವಜ ತೀರ್ಥಪಾದರು

ಅಸ್ವತಂತ್ರಸ್ಯ ಪ್ರಕೃತ್ಯಾದೇಃ ಸ್ವರೂಪಮುಪದಿಶತೀತ್ಯಾಹ– ಋತೇಽರ್ಥಮಿತಿ । ಯದ್ವಸ್ತು ಆಪ್ತಕಾಮಸ್ಯ ಮಮಾರ್ಥಂ ಪ್ರಯೋಜನಮೃತೆ ಸರ್ವತ್ರ ವೇದಾದಿಷು ಪ್ರತೀಯೇತ, ಯಚ್ಚಾತ್ಮನಿ ಮಯಿ ಬಾಧಕಂ ನ ಪ್ರತೀಯೇತ, ನ ಹಿ ಈಶ್ವರಸ್ಯ ಜೀವ ಪ್ರಕೃತಿಭ್ಯಾಮರ್ಥೋಽಬಾಧಶ್ಚ, ಅತಃ ತತ್ಪ್ರಕೃತ್ಯಾದಿ ವಸ್ತು ಆತ್ಮನಃ ಪರಮಾತ್ಮನೋ ಮಾಯಾಂ ವಿದ್ಯಾದಿತ್ಯನ್ವಯಃ । ಮಾಯೇತಿರ್ನೇಂದ್ರಜಾಲಮುಚ್ಯತೆ, ಕಿಂತು ಜೀವ–ಪ್ರಕೃತೀ ಏವೇತ್ಯಾಹ– ಯಥೇತಿ । ಯಥಾಯಥಾರ್ಥತ್ವೇನೈವ ಸತ್ಯತ್ವೇನೈವ ಪ್ರತೀಯಮಾನ ಆಭಾಸೋ ಮಮ ಪ್ರತಿಬಿಂಬಭೂತೋ ಜೀವೊ, ಯಥಾಯಥಾರ್ಥತ್ವೇನೈವತಮೋಗ್ಲಾನಿ ಹೇತುಃ ಮೂಲ–ಪ್ರಕೃತಿಶ್ಚ ಮಾಯೇತ್ಯುಚ್ಯತೆ । *'ಮುಖ್ಯತೋಽವಿಷ್ಣುಶಕ್ತಿರ್ಹಿ ಮಾಯಾಶಬ್ದೇನ ಭಣ್ಯತೆ । ಉಪಚಾರತಸ್ತು ಪ್ರಕೃತಿರ್ಜೀವಶ್ಚೈವ ಹಿ ಭಣ್ಯತೆ ॥'* ಇತಿ ವಚನಾತ್ ಎತದುಕ್ತಂ ಭವತಿ– ಯಥಾಚ್ಛತ್ರಧರಾದ್ಯಾ ರಥಸ್ಥಾ ಅಪಿ ರಥಿನೋಽನೋಚ್ಯತೆ, ತಥಾ ಜೀವ–ಪ್ರಕೃತಿ–ಕರ್ಮ–ಕಾಲಃ ಸದಾಮಯಿವರ್ತಮಾನಾ ಅಪಿ ಜೀವೇನ ಜೀವನಾಭಾವಾತ್, ಪ್ರಕೃತ್ಯಾ ಬಂಧಾಭಾವಾತ್, ಕರ್ಮಣಾ ಫಲಾಭಾವಾತ್, ಕಾಲತಃ ಪರಿಣಾಮಾಭಾವಾಚ್ಚ ಮಯಿಸ್ಥಿತಾ ಇತಿ ನೋಚ್ಯಂತೆ, ಸರ್ವಂ ಪರೇಸ್ಥಿತಮಪಿ ನೈವ ತತ್ರೇತಿ ಭಣ್ಯತೆ– ಇತ್ಯಾದೇರಿತಿ ॥೩೩॥

ಭಾವಾನುವಾದ– ಪ್ರಸ್ತುತ ಶ್ಲೋಕದಲ್ಲಿ ಅಸ್ವತಂತ್ರ ಪ್ರಕೃತಿ ಇತ್ಯಾದಿಯ ಸ್ವರೂಪದ ಉಪದೇಶ ಕೊಡಲಾಗುತ್ತಿದೆ. ಯಾವ ವಸ್ತು ಆಪ್ತಕಾಮ ಅರ್ಥಾತ್ ನನ್ನ ಪ್ರಯೋಜನದಿಂದ ಭಿನ್ನ ರೂಪದಲ್ಲಿ ವೇದಾದಿ ಶಾಸ್ತ್ರಗಳಲ್ಲಿ ಸರ್ವತ್ರ ಗೋಚರಿಸುತ್ತದೆ ಮತ್ತು ಯಾವ ಪರಮಾತ್ಮತತ್ವವು ನನ್ನಲ್ಲಿ ಬಾಧಕ ರೂಪದಲ್ಲಿ ವ್ಯಕ್ತವಾಗುವುದಿಲ್ಲ ಮತ್ತು ಜೀವಿ ಮತ್ತು ಪ್ರಕೃತಿಯಿಂದ ಈಶ್ವರನ ಅರ್ಥವು ಪ್ರತಿಬಂಧಕವಾಗುವುದಿಲ್ಲ ('ಅರ್ಥ–ಪ್ರಯೋಜನ' ಜೀವಿ ಮತ್ತು ಪ್ರಕೃತಿಯ ಮೂಲಕ ವಿರೋಧ ಪ್ರಾಪ್ತವಾಗುವುದಿಲ್ಲ), ಆದ್ದರಿಂದ ಪ್ರಕೃತಿ ಇತ್ಯಾದಿ ಆ ವಸ್ತುವನ್ನು ಪರಮಾತ್ಮನ ಮಾಯೆಯ ರೂಪದಲ್ಲಿ ಅರ್ಥಮಾಡಿಕೋ. ಮಾಯೆಯು ಇಂದ್ರಜಾಲವಲ್ಲ, ಆದರೆ ಅದು ಜೀವಿ ಮತ್ತು

ಪ್ರಕೃತಿಯ–ರೂಪವಾಗಿದೆ– ಇದನ್ನು ವಿವರಿಸುತ್ತಿದ್ದಾರೆ. 'ಯಥಾ' ಅಂದರೆ ಸತ್ಯರೂಪದಲ್ಲಿ ಪ್ರತೀಯಮಾನವಾದ 'ಆಭಾಸ' ಅಂದರೆ ನನ್ನ ಪ್ರತಿಬಿಂಬನಾದ ಜೀವಿ ಮತ್ತು ಯಥಾರ್ಥ 'ತಮ' ಅಂದರೆ ಅವನತಿಗೆ ಕಾರಣ ಮೂಲ–ಪ್ರಕೃತಿ– ಈ ಎರಡು ಮಾಯೆಯ ರೂಪದಲ್ಲಿ ವಿವರಿಸಲಾಗಿದೆ. "ಪ್ರಧಾನವಾಗಿ ವಿಷ್ಣು–ಶಕ್ತಿ 'ಮಾಯಾ' ಶಬ್ದದಿಂದ ವ್ಯಕ್ತವಾಗುತ್ತದೆ, ಆದರೆ ಉಪಚಾರ ಕ್ರಮದಲ್ಲಿ ಅದರ ಮೂಲಕ ಪ್ರಕೃತಿ ಮತ್ತು ಜೀವಿಯೂ ಸಹ ನಿರ್ದಿಷಟವಾಗುತ್ತದೆ." ಯಾವ ರೀತಿ ರಥದಲ್ಲಿದ್ದರೂ ಸಹ ಛತ್ರ–ಧಾರಣೆ ಮಾಡುವವನನ್ನು ರಥಿ ಎಂದು ಕರೆಯಲ್ಪಡುವುದಿಲ್ಲವೋ, ಅದೇ ರೀತಿ ಜೀವಿ, ಪ್ರಕೃತಿ, ಕರ್ಮ ಮತ್ತು ಕಾಲವು ಸರ್ವದಾ ನನ್ನಲ್ಲಿ ನೆಲಸಿದ್ದರೂ ಸಹ ಜೀವಿಯ ಮೂಲಕ ಶ್ರೀಹರಿಯ ಜೀವನದ ಅಭಾವ, ಪ್ರಕೃತಿಯ ಮೂಲಕ ಅವನ ಬಂಧನದ ಅಭಾವ, ಕರ್ಮದ ಮೂಲಕ ಫಲದ ಅಭಾವ, ಕಾಲದಿಂದ ಪರಿಣಾಮದ ಅಭಾವದ ಕಾರಣ ಈ ಎಲ್ಲ ನನ್ನಲ್ಲಿ (ಅಂತರಂಗ ರೂಪದಿಂದ) ಸ್ಥಿತವಾಗಿದೆ– ಎಂದು ಹೇಳಲಾಗುವುದಿಲ್ಲ, ಏಕೆಂದರೆ ಈ ಎಲ್ಲ ಪರಮೇಶ್ವರನಲ್ಲಿ ಸ್ಥಿತವಾಗಿದ್ದರೂ ಸಹ ಅವನಲ್ಲಿ ಇರುವುದಿಲ್ಲ. ॥೩೩॥

ಶ್ರೀವೀರರಾಘವಾಚಾರ್ಯಪಾದರು

ಏವಂ ವಿದಚಿದ್ವಿಲಕ್ಷಣಸ್ಯ ಪರಮಾತ್ಮನಃ ಸ್ವರೂಪಮುಕ್ತಂ, ಅಥಾವರ–ಶಬ್ದೋಕ್ತಮಂಗತಯಾ ಜ್ಞಾತವ್ಯಂ ಚಿದ್ರೂಪಮಾಹ–ಋತೇಽರ್ಥಮಿತಿ । ಅರ್ಥ ನಿರತಿಶಯಪುರುಷಾರ್ಥಭೂತೆ ಚಿತ್ತತ್ತ್ವಮೃತೆ ವಿನಾ ಯಚ್ಚಿದ್ವಸ್ತು ಪ್ರತೀಯೆತ, ಪ್ರಕೃತ್ಯನುಸಂಧಾನ–ವೇಲಾಯಾಮಾತ್ಮಸ್ವರೂಪಂ ನ ಯಥಾವತ್ಪ್ರಕಾಶತ ಇತ್ಯರ್ಥಃ, ಆತ್ಮನಿ ಚೇತನಸ್ವರೂಪೆ ಪ್ರತೀಯಮಾನೆ (ಶ್ರೀಗೀ ೨/೬೮)– 'ಸಾ ನಿಶಾ ಪಶ್ಯತೋ ಮುನೇ' ಇತಿ ನ್ಯಾಯೇನ ಯದಚೇತನಂ ನ ಪ್ರತೀಯೇತ, ತದಾತ್ಮನಃ ಪರಮಾತ್ಮನಃ ಮಾಯಾಂ ವಿದ್ಯಾದಿತ್ಯರ್ಥಃ । ಅನ್ಯತರಸ್ಯ ಪ್ರಕಾಶನೇ ನಾನ್ಯತರಸ್ಯ ಪ್ರಕಾಶನಂ ವಿರುದ್ಧಾಕಾರತ್ವಾದಿತ್ಯಭಿಪ್ರೇತ್ಯ, ತತ್ರ ದೃಷ್ಟಾಂತಮಾಹ– 'ಯಥಾಭಾಸೋ'; ಭಾಸನಂ ಭಾಸುಶಬ್ದೋ ಬಹುವಚನಾನ್ತೋ ವಾ, ನಹಿ ತೇಜಸಿ ತಮೋ ಭಾತಿ, ನ ಚ ತಮಸಿ ತೇಜೋ ಭಾತಿ, ತದ್ವದಿತ್ಯರ್ಥಃ । ಸ್ಥೂಲತ್ವಸೂಕ್ಷ್ಮತ್ವ, ನಿತ್ಯತ್ವಜಡತ್ವಾದಿರುದ್ಧಾಕಾರ ಯೋಗೋಽಭಿಪ್ರೇತಃ ॥೩೩॥

ಭಾವಾನುವಾದ– ಈ ಪ್ರಕಾರ ಚಿತ್–ಅಚಿತ್‌ನಿಂದ ವಿಲಕ್ಷಣವಾದದ್ದು ಪರಮಾತ್ಮತತ್ವದ ಸ್ವರೂಪವೆಂದು ಹೇಳಲಾಗಿದೆ. ಈಗ ಇಲ್ಲಿ 'ಅವರ' ಶಬ್ದದಿಂದ ಲಕ್ಷಿತ ಅಂಗರೂಪದಲ್ಲಿ ಅರ್ಥಮಾಡಿಕೊಳ್ಳುವುದಕ್ಕೆ ಯೋಗ್ಯವಾದಂತಹ ಚಿತ್–ರೂಪವನ್ನು ವಿವರಿಸುತ್ತಿದ್ದಾರೆ. 'ಅರ್ಥ' ಅಂದರೆ ನಿರತಿಶಯ (ಅಸೀಮ) ಪುರುಷಾರ್ಥ ಚಿತ್–ತತ್ವದಿಂದ ಭಿನ್ನವಾದ ಯಾವ ಚಿತ್–ವಸ್ತುವು ಗೋಚರಿಸುವುದೋ, ಅದು ಪ್ರಕೃತಿ–ಅನುಸಂಧಾನ ಕಾಲದಲ್ಲಿ ಆತ್ಮಸ್ವರೂಪದ ಯಥಾವತ್ತಾಗಿ ಪ್ರಕಾಶವಾಗುವುದಿಲ್ಲ ಮತ್ತು ಆತ್ಮ ಚೇತನ–ಸ್ವರೂಪದಲ್ಲಿ ಪ್ರತೀಯಮಾನವಾದರೆ, ಶ್ರೀಗೀತೆಯಲ್ಲಿ (೨/೬೮) ಹೇಳಿರುವ "ಇತರರಿಗೆ ದಿನವು, ತತ್ವದರ್ಶಿ ಮುನಿಗಳಿಗೆ ಅದು ರಾತ್ರಿಯ

ಸಮಾನ"- ಎಂಬ ಈ ನ್ಯಾಯದ ಅನುಸಾರವಾಗಿ ಯಾವುದು ಅಚೇತನ ರೂಪದಲ್ಲಿ ಗೋಚರಿಸುವುದಿಲ್ಲವೋ, ಅಂತಹ ವಸ್ತುವನ್ನು ಪರಮಾತ್ಮತತ್ವದ ಮಾಯೆ ಎಂದು ತಿಳಿದುಕೋ. ಪರಸ್ಪರ-ವಿರುದ್ಧ-ಭಾವಯುಕ್ತವಾದ ಕಾರಣ ಒಂದರ ಪ್ರಕಾಶದಲ್ಲಿ ಅನ್ಯದರ ಪ್ರಕಾಶವಿರುವುದಿಲ್ಲ. ಇದೇ ಅಭಿಪ್ರಾಯದಿಂದ ಇಲ್ಲಿಯವರೆಗು ಉದಾಹರಣೆ ಕೊಡಲಾಗಿದೆ- ಯಾವ ರೀತಿ ತೇಜಸ್ಸಿನಲ್ಲಿ ಅಂಧಕಾರವಿರುವುದಿಲ್ಲವೋ ಅಥವಾ ಅಂಧಕಾರದಲ್ಲಿ ತೇಜಸ್ಸು ಇರುವುದಿಲ್ಲ, ಇದನ್ನೂ ಸಹ ಅದೇ ಪ್ರಕಾರ ಅರ್ಥಮಾಡಿಕೋ. ಸ್ಥೂಲತೆ, ಸೂಕ್ಷ್ಮತೆ, ನಿತ್ಯತೆ ಮತ್ತು ಜಡತೆ ಇತ್ಯಾದಿ ವಿರುದ್ಧ-ಭಾವವನ್ನೇ ಇಲ್ಲಿ ಅಭಿಪ್ರಾಯಿಸಲಾಗಿದೆ.॥೩೩॥

ಶ್ರೀಶುಕದೇವಪಾದರು

ಮಾಯಾಮಾಹ- ಋತೇಽರ್ಥಮಿತಿ । ಯದ್ವಸ್ತು ಆತ್ಮನಿ ಜ್ಞಾನಸ್ವರೂಪೇ ಜ್ಞಾತರಿ ಸತಿ ಜ್ಞೇಯತಯಾ ಪ್ರತೀಯೇತ, ಅರ್ಥಂ ಜ್ಞಾತೃಪದಾರ್ಥಮೃತೇ ತು ನ ಪ್ರತೀಯೇತ, ತದಚೇತನಂ ದ್ರವ್ಯಮ್ ಆತ್ಮನಃ ಪರಮಾತ್ಮನಃ ಮಮ ಮಾಯಾಂ ವಿದ್ಯಾತ್ । ಅಚೇತನಸ್ಯ ಚೇತನಜ್ಞೇಯತಯಾ ಸ್ವರೂಪನಿಶ್ಚಯೇ ದೃಷ್ಟಾಂತಃ- ಯಥಾ ಆಭಾಸಃ ಪ್ರಕಾಶಃ ಯಥಾ ವಾ ತಮೋಽಪ್ರಕಾಶಃ । ಜ್ಞಾತರಿ ಸತ್ಯೇವ ಪ್ರತೀಯತೇ, ನ ತು ತದಭಾವೇ ತದ್ವದಿತ್ಯರ್ಥಃ ॥೩೩॥

ಭಾವಾನುವಾದ- ಈ ಶ್ಲೋಕದಲ್ಲಿ ಶ್ರೀಭಗವಂತನು ಮಾಯಾತತ್ವದ ವರ್ಣನೆ ಮಾಡುತ್ತಿದ್ದಾನೆ. ಯಾವ ವಸ್ತು ಜ್ಞಾನಸ್ವರೂಪ ಮತ್ತು ಜ್ಞಾತಾ (ಆತ್ಮ) ಆಗಿದ್ದರೂ ಸಹ ಜ್ಞೇಯ (ಅಚೇತನ) ರೂಪದಲ್ಲಿ ಗೋಚರವಾಗುತ್ತದೆ, ಆದರೆ ಜ್ಞಾತನನ್ನು ಹೊರತುಪಡಿಸಿ ಗೋಚರವಾಗುವುದಿಲ್ಲ, ಅದೇ ಅಚೇತನ ದ್ರವ್ಯವನ್ನು ಆತ್ಮ ಅಥವಾ ಪರಮಾತ್ಮರೂಪೀಯ ಮಾಯೆ ಎಂದು ಅರ್ಥಮಾಡಿಕೋ. ಅಚೇತನ ಪದಾರ್ಥ ಚೇತನದ ಮೂಲಕ ಜ್ಞೇಯವಾದ ಕಾರಣ ಸ್ವರೂಪ-ನಿಶ್ಚಯದಲ್ಲಿ ದೃಷ್ಟಾಂತವು- ಆಭಾಸ ಅಂದರೆ ಪ್ರಕಾಶ, ಅಥವಾ ತಮಸ್ಸು ಅಂದರೆ ಅಪ್ರಕಾಶ. ಯಾವ ರೀತಿ ಜ್ಞಾತನಾಗಿದ್ದರೆ ಮಾತ್ರ ಗೋಚರಿಸುತ್ತದೆ, ಅದರ ಅಭಾವದಲ್ಲಿ ಅಲ್ಲ, ಅದೇ ರೀತಿ ಪ್ರಕಾಶವಾದರೆ ಮಾತ್ರ ಗೋಚರಿಸುತ್ತದೆ, ಅದರ ಅಭಾವದಲ್ಲಿ ಅಲ್ಲ.॥೩೩॥

ಶ್ರೀವಲ್ಲಭಾಚಾರ್ಯಪಾದರು

ಏವಂ ತಜ್ಜಲಾನೀತಿ ಹೇತುಂ ವಿವಿಚ್ಯ ಸರ್ವಮಾತ್ಮೈವೇತಿ ಪ್ರಮೇಯಂ ವಿನಿಶ್ಚಿತ್ಯ, ಪ್ರಮಾಣವೈಯರ್ಥ್ಯಮಾಶಙ್ಕ್ಯ, ಪ್ರವೃತ್ತಿಸಂಕೋಚಪರತ್ವಾತ್ ಗುಣದೋಷವಿಷಯತ್ವಾತ್ ಸೋಽಪ್ಯೇಕಾ ಭಗವಲ್ಲೀಲೇತಿ ಮಾಯಾಂ ನಿರೂಪಯತಿ- ಋತೇಽರ್ಥಮಿತಿ । ಯದ್ವಸ್ತು ಸ್ವರೂಪೇ ಅನ್ಯಥಾ ಪ್ರತಿಭಾಸತೇ, ತತ್ ಆತ್ಮಾನಾಂ ಜೀವಾನಾಂ ವ್ಯಾಮೋಹಿಕಾ ಯಾ ಮಾಯಾ ಪೂರ್ವಂ ನಿರೂಪಿತಾ ತಸ್ಯಾಃ ಕಾರ್ಯಂ । ಸಾ ಹಿ ಜೀವಂ ವ್ಯಾಮೋಹಯಿತ್ವಾ ತತ್ಸಂಬಂಧಿನಂ ಅನ್ತಕರಣಬುದ್ಧ್ಯಾದಿಕಮಪಿ ವ್ಯಾಮೋಹಯತಿ । ತಥಾ ವ್ಯಾಮೋಹಿತ್ವಾ ಬುದ್ಧಿಃ ಪದಾರ್ಥಾನ್ ಅನ್ಯಥಾ ಮನ್ಯತೇ, ನ ತು ಪದಾರ್ಥಾ ಅನ್ಯಥಾ ಭವನ್ತಿ । ಬುದ್ಧ್ಯರ್ಥಮೇವ ಹಿ ಪ್ರಮಾಣಾನಿ-

ಸಾಧನಾನಿ ಚ । ಕಾನಿಚಿದ್‌ಬುದ್ಧಿಜನಿತ–ದೋಷನಿವರ್ತಕಾನಿ, ಕಾನಿಚಿದ್ಗುಣಾಧಾಯಕಾನಿ । ಮಾಯಾ ಚ ದ್ವಿಧಾ ಭ್ರಮಂ ಜನಯಾತಿ–ವಿದ್ಯಮಾನಂ ನ ಪ್ರಕಾಶಯತಿ, ಅವಿದ್ಯಮಾನಂ ಚ ಪ್ರಕಾಶಯತಿ ದೇಶಕಾಲವ್ಯತ್ಯಾಸೇನ । ತದಾಹ–ಅರ್ಥಮೃತೆ ಯತ್ಪ್ರತೀಯೇತ ನ ಪ್ರತೀಯೇತ ಚ । ಅರ್ಥದರ್ಥಃ, ಅರ್ಥೋ ನ ಪ್ರತೀಯತೆ, 'ಅರ್ಥಮೃತೆ ಪ್ರತೀಯತ' ಇತಿ । ತಸ್ಮಾತ್ತ್ವದಾರ್ಥಾನಾಂ ಯಾಥಾತ್ಮ್ಯಜ್ಞಾಪನಾರ್ಥಂ ಪ್ರಮಾಣಮಿತ್ಯುಕ್ತಂ ಭವತಿ । ನನು, ವಸ್ತ್ವೇವ ಕುತೋ ನ ತಥಾಸ್ತು । ಕೈಶಿಚದ್ವಾದಿಭಿರ್ಜಗತೋ ಮಾಯಿಕತ್ವಸ್ವೀಕಾರಾದಿತಿ ಚೇತ್ । ಭವೇದೇತದೇವಂ ಯದಿ ವಿಚಾರೆ ಪರ್ಯವಸ್ಯತಿ । ಪ್ರಮಾಣಭೂತೋ ವೇದಃ– 'ಸರ್ವಂಖಲ್ವಿದಂ ಬ್ರಹ್ಮ' ಎವೇತ್ಯಾಹ । ಬ್ರಹ್ಮವಿದಾಂ ಪ್ರತೀತಿರಪಿ ತಥಾ ಭ್ರಾಂತಪ್ರತೀತೇಸ್ತು ನಾರ್ಥನಿಯಾಮಕತ್ವಮ್ । ಅನ್ಯಥಾ, ಭ್ರಮದೃಷ್ಟ್ಯಾ ಗೃಹೀತಂ ಜಗದ್ಭ್ರಮರೂಪಮೇವ ಸ್ಯಾತ್ । ಅತೋ ವಿಷಯೆ ವಿಷಯತಾ ಕಾಚಿತ್ಸ್ವೀಕರ್ತವ್ಯಾ ಯಯಾ ದೃಷ್ಟಿಃ ಸವಿಷಯಾ ಭವತಿ । ಅನ್ಯಥಾ ಪದಾರ್ಥಾನಾಂ ಸ್ಥಿರತ್ವಾದ್ ಭ್ರಮದೃಷ್ಟಿರ್ನಿರ್ವಿಷಯಾ ಸ್ಯಾತ್, ಅತೋಽನ್ಯತ್ರೈವ ಸಿದ್ಧಭ್ರಮಿರ್ಮಾಯಯಾ ಪುರಃಸ್ಥಿತೆ ವಿಷಯೇ ಸಮಾನೀಯತೆ ದೃಷ್ಟಾನುರೋಧಿತ್ವಾತ್ತಸ್ಯಾಃ । ಅತೋ ಯಥಾಧಿಕಾರಂ ಜೀವಸೃಷ್ಟಿಂ ಪುರಸ್ಕೃತ್ಯ ವ್ಯಾಮೋಹಿಕಯಾ ಮಾಯಯಾ ವ್ಯತ್ಯಾಸೇನ ಪದಾರ್ಥಾಃ ಸಂಪಾದ್ಯನ್ತೆ । ಏವಂ ಸರ್ವತ್ರ ಜಗತಿ ಸಾ ಬುದ್ಧಿಭ್ರಮಂ ಜನಯತಿ, ಅನ್ಯತ್ರ ಅನ್ಯವಿಷಯತಾಂ ಸಂಪಾದಯತಿ; ವಿಷಯತಾ ಮಾಯಾಜನ್ಯಾ, ವಿಷಯೋ ಭಗವಾನ್ । ಮಾಯಾಯಾಮೇವ ವಿಷಯತಾರೂಪಂ ಭಗವತಃ ಸ್ವರೂಪಂ ಪ್ರಕಟಿತಮಿತಿ । ತದಪಿ ನ ನಿಃಸ್ವಭಾವಮ್ । ಆತ್ಮಶಕ್ತಿತ್ವಾನ್ಮಾಯಾಪಿ ನ ನಿಃಸ್ವಭಾವಾ । ಚಿದ್ವಿಲಾಸತ್ವಾದ್ ಬುದ್ಧೇಃ ಪರಂ ತಾಮೇವ ವ್ಯಾಮೋಹಯತಿ ಯಾವನ್ನಬ್ರಹ್ಮಭಾವಃ । ಸಾ ಹಿ ಭಗವದೀಯೈಃ ಸರ್ವೈರೇವ ಪದಾರ್ಥೈರ್ವಿರುಧ್ಯತೆ । ತೇ ಹಿ ಭಗವದ್ವಿಷಯಕಂ ಜ್ಞಾನಂ ಜನಯನ್ತಿ । ಅತೋ ವಿಷಯತಾ–ಜನಿತಂ ಜ್ಞಾನಂ ಭ್ರಾನ್ತಂ, ವಿಷಯಜನಿತಂ ಪ್ರಮೇತಿ । ಏವಂ, ಯಥಾ ಜಗತಿ ಆತ್ಮನ್ಯಪಿ ತಥೇತ್ಯಾಹ– ಚಾತ್ಮನೀತಿ । ಆತ್ಮನಿ ಚ ವಿದ್ಯಮಾನಂ ಪ್ರಕಾಶಯತಿ, ಅವಿದ್ಯಮಾನಂ ಪ್ರಕಾಶಯತಿ; ನ ತು ಸರ್ವಜನೀನಪ್ರತೀತ್ಯನುರೋಧೇನ ಜಗದ್ರೂಪೋಽಯಂ ವಿಷಯೋ ಬ್ರಹ್ಮಣೋ ಭಿನ್ನ ಏವ ಕುತೋ ನ ಅಂಗೀಕ್ರಿಯತೆ? ತತ್ರಾಹ– ತದ್ವಿದ್ಯಾದಾತ್ಮನೋ ಮಾಯಾಮಿತಿ । ಯಸ್ಮಾತ್ಕಾರಣಾತ್ ಅವಿದ್ಯಮಾನಮೇವ ಬೋಧಯತಿ, ವಿದ್ಯಮಾನಂ ನ ಬೋಧಯತಿ, ತಸ್ಮಾತ್ ಕಾರಣಾತ್ ತಾಂ ಮಾಯಾಮೇವ ವಿದ್ಯಾತ್ । ನ ಹಿ ವಿಷಯಶ್ಚಕ್ಷುರ್ವಾ ಜಡಂ, ನಿಯತಸ್ವಭಾವಂ ಅನ್ಯಥಾ ಪ್ರತೀತಿಹೇತುರ್ಭವತಿ; ತತ್ರ ದೃಷ್ಟಾನ್ತಮಾಹ– 'ಯಥಾಽಭಾಸೋ ಯಥಾ ತಮ' ಇತಿ । ಯಥಾ ದ್ವಿಚಂದ್ರಾದ್ಯಾಭಾಸೋ ಮಾಯಯೈವ ಜನ್ಯತೆ, ನ ತು ಪ್ರತೀತ್ಯನುರೋಧೇನ ಚಂದ್ರದ್ವಯಂ ಕಲ್ಪ್ಯತೆ । ಏವಂ ವಿಷಯತಾಪಿ ಮಾಯಯಾ ಜನ್ಯತೆ, ಬುದ್ಧಿಸ್ತು ಚಿದ್ವಿಲಾಸ ಇತಿ ನ ಮಾಯಾಜನಿತಾ, ಅನ್ಯಥಾ, ಬ್ರಹ್ಮವಿದೋಽಪಿ ಬುದ್ಧಿಸ್ತಥಾ ಸ್ಯಾತ್ । ತತಶ್ಚ ಸರ್ವವಿಪ್ಲವಃ । ಸಾ ಚ ವಿಷಯತಾ ದ್ವಿಧಾ– ಆಚ್ಛಾದಿಕೈಕಾ ಅನ್ಯಥಾಪ್ರತೀತಿಹೇತುಶ್ಚಾಪರಾ । ಸಾ ಉಭಯವಿಧಾಪಿ ಮಾಯಯೈವ ಜನ್ಯತೆ ಯಥಾಭಾಸಃ । ನನು, ಮಾಯಯಾ ಕಥಮೇವಂ ಪದಾರ್ಥಜನಕತ್ವಂ? ವ್ಯಾಮೋಹಜನಕತ್ವಮೇವ ತಸ್ಯಾಃ, ನ ಚ ವಿಷಯಾತಿರಿಕ್ತಾ ವಿಷಯತಾ ಕ್ವಚಿದುಪಲಬ್ಧೇತ್ಯಾಶಙ್ಕ್ಯಾಹ– 'ಯಥಾತಮ' ಇತಿ । ಯಥಾನ್ಧಕಾರಃ ಪದಾರ್ಥಸ್ತೇಜೋಽಭಾವೆ ಜನ್ಯತೆ । ಯತ್ರೈವ ತೇಜೋಽಭಾವಃ,

ತತ್ರೈವಾನ್ಧಕಾರಂ ಜನಯತಿ ಮಾಯಾ । ಇಯಮೇವ ವ್ಯಾಮೋಹಿಕಾ । ಅತಏವ ದಿವಾಭೀತಾನ್ಪ್ರತಿ ನಾನ್ಧಕಾರಂ ಜನಯತಿ । ತೇ ತು ತೇಜೋಽಭಾವಮೇವ ಗೃಹ್ಣನ್ತಿ, ತೇಷಾಂ ದೃಷ್ಟೇಃ ಕೋಮಲತ್ವಾದ್ಬಲವತ್ತೇಜೋ ದೃಷ್ಟಿಪ್ರತಿಬಂಧಕಂ ಭವತಿ, ತದಭಾವೇ ಸುಖೇನ ವಿಷಯಾನ್ ಗೃಹ್ಣನ್ತಿ । ಅಸ್ಮದಾದೀನಾಮಪಿ ತೇಜೋ ನ ವಿಷಯಸಂಸ್ಕಾರಕಂ । ನ ವಾ ಚಕ್ಷುಷಃ, ಕಿಂತು, ತೇಜೋಽಭಾವೇ ಮಾಯಯಾ ತಮೋಜನನಾತ್ ಸೈವ ದೃಷ್ಟ್ಯಾ ವಿಷಯೀ ಕ್ರಿಯತೇ, ನ ತು ವಿಷಯಃ । ಅತಸ್ತಮೋನಿವೃತ್ಯರ್ಥಮೇವ ತೇಜಃ, ತಥೈವ ಲೋಕಪ್ರತೀತಿಃ । ಸಾ ಚ ವಿಷಯತಾ ಚಕ್ಷುಷಾ ಗೃಹ್ಯತೇ, ವಿಷಯಾದ್ಭಿನ್ನತಯಾ ಸ್ವಾತ್ಮಸಾತ್ ಕ್ರಿಯತೇ । ಪರಿಭ್ರಮಣೇ ತಥಾಸಿದ್ಧೇ । 'ಯಥಾ ಹಿ ಭಾನೋರುದಯೊ ನೃಚಕ್ಷುಷಾಮ್' ಇತಿ ವಾಕ್ಯಯೇ ಚಕ್ಷುಃಸಂಬಂಧಿನ ಏವ ತಮಸೋ ನಾಶಕತ್ವಂ। ನ ತು ಸ್ವಭಾವತ ಏವ ಕಿಂಚಿತ್ತಮಃ । ಅನ್ಯಥಾ, ಸ್ಪರ್ಶೇನಾಪಿ ಜ್ಞಾನೇ ತತ್ಪ್ರತಿಬಂಧಕಂ ಸ್ಯಾತ್, ಸ್ಪರ್ಶೇನ ವಾ ತದ್ಗೃಹ್ಯೇತ । ತಮ ಇತಿ ಚ ಉಪಲಕ್ಷಣಂ । ಆದರ್ಶೇ ಚ ಮುಖಂ ಜನಯತಿ, ನ ಚ ಪರಾವೃತ್ತಂ ಚಕ್ಷುರ್ಮುಖಮೇವ ಗೃಹ್ಣಾತೀತಿ ಮನ್ತವ್ಯಂ; ತಥಾ ಸತಿ ದರ್ಪಣಾನ್ತರೆ ಸಾಭಾಸಸ್ಯ ಪ್ರತೀತಿರ್ನ ಸ್ಯಾತ್ । ನ ಚೇದಮೇವ ಮುಖಮುಭಯತ್ರ ಪ್ರತಿಬಿಂಬಿತಮಿತಿ ವಾಚ್ಯಮ್ । ಅಸಮ್ಮುಖದಿಕ್ಸ್ವಾನಾಮಪಿ ಪ್ರತಿಬಿಂಬದರ್ಶನಾತ್ ಅಯಮೇವ ವಾ ಆಭಾಸಃ । ತಸ್ಮಾದ್ದರ್ಪಣೆ ಮುಖಜನನವತ್ ತೇಜೋಽಭಾವೆ ಅಂಧಕಾರಜನನವತ್ ಮಾಯಾಮೋಹಿತ ಪುರುಷಬುದ್ಧಾವಪಿ ವಿಷಯತಾದ್ವಯಂ ಜನಯತೀತ್ಯರ್ಥಃ– ತತ್ರೈಕಾ ಬ್ರಹ್ಮರೂಪತಾಂ ನ ಪ್ರಕಾಶಯತಿ, ಏಕಾ ತು ಜಗದ್ರೂಪಾವಿಷಯತಾ– ತದುಭಯ್ವಾವೃತ್ತ್ಯರ್ಥಂ ಸರ್ವಾಣಿ ಪ್ರಮಾಣಾನೀತಿ ಭಾವಃ ॥೩॥

ಭಾವಾನುವಾದ– ಈ ಪ್ರಕಾರ 'ಸರ್ವಂ ಖಲ್ವಿದಂ ಬ್ರಹ್ಮ' ಈ ವೇದ ವಚನದಲ್ಲಿ ಕೊಟ್ಟಿರುವ 'ತಜ್ಜಲಾನ್'– ಈ ಹೇತುವಿನ ವಿವೇಚನೆ ಮಾಡಿ ಇದನ್ನು ನಿರ್ದಿಷ್ಟಗೊಳಿಸಲಾಗಿದೆ– ಸಂಪೂರ್ಣ ಜಗತ್ತೇ ಪರಬ್ರಹ್ಮ ಮತ್ತು ಈ ಆತ್ಮವೇ ಪ್ರಮೇಯವು. ಆಗ, ಮತ್ತೆ ಈ ವೇದ ಇತ್ಯಾದಿ ಶಾಸ್ತ್ರಗಳನ್ನು ಏತಕ್ಕಾಗಿ ಮಾಡಲಾಗಿದೆ? ಅರ್ಥಾತ್ ಏನಾದರೂ ಎಲ್ಲವೂ ಬ್ರಹ್ಮನೇ ಬ್ರಹ್ಮನಾಗಿದ್ದರೆ ಮತ್ತೆ ಭೇದವನ್ನು ನಿರ್ದೇಶಿಸುವ– "ಇದನ್ನು ಮಾಡು, ಇದನ್ನು ಮಾಡಬೇಡ", "ಇದು ಸರಿ, ಇದು ತಪ್ಪು" ಇತ್ಯಾದಿ ಪ್ರಮಾಣ–ಶಾಸ್ತ್ರವು ವ್ಯರ್ಥವಾಗುತ್ತದೆ ಅಲ್ಲವೆ? ಎಂಬ ಈ ಸಂಶಯ ಉಂಟಾಗಬಹುದು, ಇದಕ್ಕೆ ಉತ್ತರದಲ್ಲಿ ಹೇಳುತ್ತಾರೆ ಇದೂ ಸಹ ಒಂದು ರೀತಿಯಾದ ಶ್ರೀಭಗವಂತನ ಲೀಲೆ (ಆಟ). ಎಲ್ಲವೂ ಬ್ರಹ್ಮನೇ, ಎಲ್ಲವೂ ಒಂದೇ ಆಗಿದ್ದರೇ ಮತ್ತೆ ಐಕ್ಯತ್ವದಲ್ಲಿ ಭಗವತ್–ಲೀಲೆಯೂ ಇರುವುದಿಲ್ಲ ಮತ್ತು ಪ್ರವೃತ್ತಿಯ ಸಂಕೋಚವೂ ಸಹ ಇರುವುದಿಲ್ಲ. ಇದು ಮಾಡಲು ಯೋಗ್ಯವಾದದ್ದು ಮತ್ತು ಇದು ಮಾಡಬಾರದು– ಹೀಗೆ ಪ್ರವೃತ್ತಿಯ ಸಂಕೋಚವಿರಬೇಕು. ಆದ್ದರಿಂದ ಆ ಒಂದು ಬ್ರಹ್ಮ ಸ್ವರೂಪದಲ್ಲೂ ಸಹ ಗುಣ ಮತ್ತು ದೋಷಗಳ ನಿರ್ಮಾಣ ಮಾಡಿ ಭಗವಂತನು ತನ್ನ ಮಾಯೆಯಿಂದಲೇ ಎಲ್ಲ ಪ್ರಕಾರದ ಲೀಲೆಗಳನ್ನು ಪ್ರೇರೇಪಿಸುತ್ತಿದ್ದಾನೆ.

ಈಗ ಅಂತಹ ಮಾಯೆಯ ನಿರೂಪಣೆ ಮಾಡುತ್ತ "ಋತೇಽರ್ಥಮಿತಿ" ಇತ್ಯಾದಿ ಶ್ಲೋಕವನ್ನು ಹೇಳುತ್ತಿದ್ದಾರೆ. ಯಾವ ವಸ್ತು-ಸ್ವರೂಪದಲ್ಲಿ ಅನ್ಯಥಾ ರೂಪದಲ್ಲಿ ಪ್ರಕಾಶಿಸುತ್ತದೋ, ಅದು ಭಗವಂತನ ಮೋಹನೀ ಮಾಯೆ. ಇದು ಜೀವಿಗಳನ್ನು ಮೋಹಿಸುತ್ತದೆ. ವಾಸ್ತವ-ವಸ್ತುವಿನ್ನಲ್ಲಿ ಯಾವುದೆಲ್ಲ ಅನ್ಯ (ವಾಸ್ತವವಲ್ಲದ) ರೂಪದಲ್ಲಿ ಪ್ರಕಾಶಿತಗೋಳ್ಳಿಸುತ್ತದೋ, ಅದು ಈ ಮಾಯೆಯ ಕಾರ್ಯವಾಗಿದೆ. ಈ ಮಾಯೆ ಜೀವಿಯನ್ನು ಮೋಹಿತಗೋಳಿಸಿ ಜೀವಸಂಬಂಧಿ ಅಂತಃಕಾರಣ ಅಂದರೆ ಬುದ್ಧಿ ಇತ್ಯಾದಿಯನ್ನೂ ಸಹ ಮೋಹಿತಗೋಳಿಸುತ್ತದೆ. ಈ ಮಾಯಾ ಮೂಲಕ ಮೋಹಿತವಾದ ಬುದ್ಧಿ ಜಗತ್ತಿನಲ್ಲಿ ಸ್ಥಿತ ಪದಾರ್ಥಗಳ ಅನ್ಯಥಾ ಅರ್ಥಮಾಡಿಕೊಳ್ಳುತ್ತದೆ, ಆದರೆ ಪದಾರ್ಥ ಅನ್ಯಥಾ ಆಗುವುದಿಲ್ಲ. ಬುದ್ಧಿಯನ್ನು ಮೋಕ್ಷ ಕಾರಕವನ್ನಾಗಿ ತೈಯಾರಿಸಲು ವೇದಗಳಲ್ಲಿ ಪ್ರಮಾಣಗಳಿವೆ ಮತ್ತು ವೇದ-ಶಾಸ್ತ್ರೋಕ್ತ ಸಾಧನವೂ ಸಹ ಬುದ್ಧಿಯನ್ನು ತೈಯಾರಿಸಲೇಂದೆ ಆಗಿದೆ. ಎಷ್ಟೇ ಪ್ರಮಾಣ-ಸಾಧನೆಗಳಲ್ಲಿ ಉತ್ಪನ್ನವಾದ ಬುದ್ಧಿಯು ದೋಷಗಳನ್ನು ನಿವೃತ್ತಿಗೊಳಿಸಲೆಂದೆ ಆಗಿದೆ ಮತ್ತು ಎಷ್ಟೇ ಪ್ರಮಾಣ-ಸಾಧನವು ಬುದ್ಧಿಯಲ್ಲಿ ಗುಣಗಳನ್ನು ಸ್ಥಾಪಿಸುವಂತಹದ್ದಾಗಿದೆ. ಈ ಮಾಯೆಯೂ ಸಹ ಬುದ್ಧಿಯಲ್ಲೇ ಎರಡು ಪ್ರಕಾರದ ಭ್ರಮೆಯನ್ನು (ಮರೆವು) ಹುಟ್ಟಿಸುತ್ತದೆ- ವಾಸ್ತವವನ್ನು ಪ್ರಕಾಶಿತಗೊಳಿಸದೆ ಇರುವುದು ಮತ್ತು ಯಾವುದು ಇಲ್ಲವೋ ಅದನ್ನು ಪ್ರಕಾಶಿತಗೊಳಿಸುವುದು. ಯಾವುದೋ ದೇಶದ ಮಾತುನ್ನು ಯಾವುದೋ ಸ್ಥಾನದಲ್ಲಿ ಮತ್ತು ಯಾವುದೋ ಕಾಲದ ಮಾತು ಯಾವುದೋ ಅನ್ಯ ಕಾಲದಲ್ಲಿ ಕಾಣಿಸಿಕೊಡುತ್ತದೆ.

ಇದೇ ವಿಚಾರವನ್ನು ಮೂಲ ಶ್ಲೋಕದಲ್ಲಿ ಹೇಳಲಾಗುತ್ತಿದೆ- "ಅರ್ಥಂ ಋತೇ ಯತ್ ಪ್ರತೀಯೇತ, ನ ಪ್ರತೀಯೇತ ಚ- ಅರ್ಥಾತ್ ವಸ್ತುವಿನಲ್ಲಿ ವಸ್ತುವು ಗೋಚರಿಸದೆ ಅರ್ಥವನ್ನು ಹೊರತುಪಡಿಸಿ ಅನ್ಯ ಬೇರೆ ಏನೋ ಗೋಚರಿಸುವುದು." ಇಂತಹ ಸ್ಥಿತಿಯಲ್ಲಿ ವಸ್ತುಗಳ ಯಥಾರ್ಥವನ್ನು ತೋರಿಸಲೆಂದು ಶ್ರೀಭಗವಂತನು ವೇದಾದಿ ಪ್ರಮಾಣಗಳನ್ನು ರಚಿಸಿದ್ದಾನೆ.

ಈ ವಸ್ತುವನ್ನು ಹೇಗಿದೆಯೋ ಹಾಗೇ ತಿಳಿಯದೇ ಭ್ರಮೆ ಎಂದು ಏತಕ್ಕಾಗಿ ತಿಳಿಯುವುದು, ಆದ್ದರಿಂದಲೇ ವಾದನಕಾರರು ಈ ಜಗತ್ತನ್ನು ಮತ್ತು ಜಗತ್ತಿನಲ್ಲಿ ಒಳಗೊಂಡ ವಸ್ತುವನ್ನು ಮಾಯೆ ಮತ್ತು ಮಿಥ್ಯವೆಂದೇ ತಿಳಿಯುತ್ತಾರೆ? ಎಂದು ಹೀಗೆ ಏನಾದರೂ ಪ್ರಶ್ನಿಸುವುದಾದರೆ, ಇದಕ್ಕೆ ಉತ್ತರದಲ್ಲಿ ಹೇಳುತ್ತಿದ್ದಾರೆ - ಎಲ್ಲದರ ಯಥಾರ್ಥ ಜ್ಞಾನವನ್ನು ನೀಡುವಂತಹ ವೇದವು ಸಂಪೂರ್ಣ ಜಗತ್ತೇ ಬ್ರಹ್ಮ ಎಂದು ಹೇಳುತ್ತಿದೆ ಮತ್ತು ಬ್ರಹ್ಮವಾದಿಗಳ ಅನುಭವವೂ ಸಹ ಇದೇ ರೀತಿ ಇದೆ. ಭ್ರಾಂತ ಮನುಷರಿಗೆ ಯಾವುದು ಕಾಣಿಸುತ್ತಿದೆಯೋ, ಅದನ್ನು ವಸ್ತುವಿನ ಯಥಾರ್ಥವಾಗಿ ಪ್ರಮಾಣ ರೂಪವೆಂದು ಒಪ್ಪಿಕೊಳ್ಳಲಾಗುವುದಿಲ್ಲ. ಏನಾದರೂ ಭ್ರಮದೃಷ್ಟಿಯನ್ನು ಪ್ರಮಾಣವೆಂದು ಒಪ್ಪಿಕೊಂಡರೆ ಜಗತ್ತನ್ನೂ ಸಹ ಭ್ರಮೆಯೆಂದು

ಒಪ್ಪಿಕೊಳ್ಳಲಾಗುವುದು, ಆಗ ಜಗತ್ತನ್ನು ಭ್ರಮೆಯರೂಪದಲ್ಲೇ ಸೇರಿಸಲಾಗುವುದು, ಆದರೆ ಅದು ವಾಸ್ತವದಲ್ಲಿ ಈ ರೀತಿ ಸೇರುವುದಿಲ್ಲ. ಕಾಲಾಂತರ–ದೇಶಾಂತರದಲ್ಲಿ ಜಗತ್ತು ಜಗದ್ರೂಪದಲ್ಲೇ ಸೇರುತ್ತದೆ, ಭ್ರಮೆಯ ರೂಪದಲ್ಲಲ್ಲ. ಆದ್ದರಿಂದ ಜಗದ್ರೂಪ ವಿಷಯದಲ್ಲಿ ಯಾವುದಾದರು ಒಂದು ಮತ್ತೊಂದು ವಿಷಯದ ಆಕಾರ ಸ್ಥಿತವಾಗುತ್ತದೆ ಎಂದು ಅರ್ಥಮಾಡಿಕೊಳ್ಳಲಾಗುತ್ತದೆ. ವಿಷಯದಲ್ಲಿ ಯಾವಾಗ ಯಾವುದಾದರೂ ಅನ್ಯ ವಿಷಯವಾಗಿ ಗೋಚರಿಸುತ್ತದೋ ಮತ್ತು ಯಾವಾಗ ಆ ವಿಷಯವಾಗಿ ಸರಿಯಾದ ವಿಷಯವನ್ನು ದೃಷ್ಟಿಯ ಮೂಲಕ ಗ್ರಹಿಸಲಾಗುತ್ತದೋ, ಆಗ ದೃಷ್ಟಿಯು ಆ ವಿಷಯತ್ವದ ರೂಪದಲ್ಲೇ ವಿಷಯ (ವಸ್ತು) ವನ್ನು ನೋಡುತ್ತದೆ. ಇದನ್ನೇ ಅನ್ಯಥಾ ಪ್ರಕಾಶವೆನ್ನಲಾಗುತ್ತದೆ.

ಹಾಗೆ ಏನಾದರು ಬೇರೆ ವಿಷಯತ್ವವು ಕಣ್ಣಿನ ಮುಂದೆ ಬಾರದಿದ್ದರೆ, ಆಗ ವಸ್ತುವು ಅದರ ಸ್ವರೂಪದಲ್ಲಿ ಸ್ಥಿರವಾದ ಕಾರಣ ಭ್ರಮೆ ದೃಷ್ಟಿಯು ನಿರ್ವಿಷಯವಾದ ರೂಪದಲ್ಲೇ ಇರುತ್ತದೆ, ಅಂದರೆ ಎಲ್ಲೂ ಸಹ ಭ್ರಮೆ ಇರುವುದಿಲ್ಲ. ಅದ್ದರಿಂದ ಇದು ದೃಡವಾಗುವುದೇನೆಂದರೆ ಎಲ್ಲಾದರು ಅನ್ಯತ್ರ ಸ್ಥಿತ ಭ್ರಮೆ ಮಾಯೆಯ ಮೂಲಕ ಸಮಕ್ಷ ಬಂದ ವಸ್ತುವಿನಲ್ಲಿ ಆರೋಪಿಸಲಾಗುತ್ತದೆ, ಏಕೆಂದರೆ ಈ ಮಾಯೆಯು ದೃಷ್ಟಿಯ ಅನುರೋಧ (ತೊಂದರೆ ಪ್ರಧಾನ) ಮಾಡುವಂತಹದ್ದಾಗಿದೆ. ಆದ್ದರಿಂದ ಅಧಿಕಾರದ ಅನುಸಾರವಾಗಿ ಜೀವ–ಸೃಷ್ಟಿಯನ್ನು ಮುಂದ್ದಿಟ್ಟುಕೊಂಡು ಈ ಮೋಹಿನೀ ಮಾಯೆ ವಸ್ತುವನ್ನು ಅದಲು–ಬದಲಾಗಿ ತೋರಿಸುತ್ತದೆ. ಈ ಪ್ರಕಾರವಾಗಿ ಈ ಸಮಸ್ತ ಜಗತ್ತಿನಲ್ಲಿ ಬುದ್ಧಿ ಭ್ರಮೆಯನ್ನು ವ್ಯಾಪಿಸುತ್ತದೆ. ಅರ್ಥಾತ್ ಅನ್ಯತ್ರ ಸ್ಥಿತ ವಿಷಯತ್ವವನ್ನು ಯಾವುದೋ ಅನ್ಯ ವಸ್ತುವಿನಲ್ಲಿ ಆರೋಪಿಸುತ್ತದೆ. ವಿಷಯತ್ವವು ಮಾಯೆಯ ಕಾರಣವಾಗಿದೆ ಮತ್ತು ವಿಷಯ ಶ್ರೀಭಗವಂತನಾಗಿದ್ದಾನೆ. ಹೇಗೆಂದರೆ ಚಿಪ್ಪಿನಲ್ಲಿ ಬೆಳ್ಳಿಯ ಕಾಂತಿ ಇರುತ್ತದೆ. ಬೆಳ್ಳಿಯಲ್ಲಿ ಬೆಳ್ಳಿತ್ವ ಹಾಗೂ ಚಿಪ್ಪಿನಲ್ಲಿ ಚಿಪ್ಪಿನತ್ವವು ವಾಸ್ತವಿಕವಾದದ್ದು. ಚಿಪ್ಪೂ ಸಹ ಭಗವದ್ರೂಪ ಪದಾರ್ಥವೆ ಹಾಗೂ ಬೆಳ್ಳಿಯೂ ಸಹ. ಆದರೆ ಮಾಯೆ ಬೆಳ್ಳಿಯ ಕಾಂತಿಯನ್ನು ಚಿಪ್ಪಿನಲ್ಲಿ ಸೇರಿಸುತ್ತದೆ. ಅನ್ಯತ್ರ ಸ್ಥಿತವಾದ ವಿಷಯತ್ವವನ್ನು ಬೇರೆ ಯಾವುದೋ ವಿಷಯದಲ್ಲಿ ಸೇರುವಂತೆ ಮಾಡುತ್ತದೆ. ಇದೇ ಭ್ರಮೆ ಮತ್ತು ಇದು ಮಾಯೆಯಿಂದಲೇ ಆಗುತ್ತದೆ. ಜಗತ್ತಿನಲ್ಲಿ ಸ್ಥಿತವಾದ ವಸ್ತುಗಳು ಭಗವಂತನಾಗಿದ್ದಾನೆ. ಇದರ ಸ್ವಭಾವವು ಒಂದೇ ರೂಪದಲ್ಲಿ ಸ್ಥಿರವಾಗಿದೆ, ಆದರೆ ವಿಷಯತ್ವವು (ಭ್ರಮೆ) ನಿಃಸ್ವಭಾವವಾದದ್ದು. ಇದು ಸ್ಥಿರವಲ್ಲ. ಹಗ್ಗದಲ್ಲಿ ಸರ್ಪದ ಭ್ರಮೆ ಸ್ವಲ್ಪ ಸಮಯ ಮಾತ್ರವೇ ಇರುತ್ತದೆ, ಏಕೆಂದರೆ ಅದರದ್ದು ಆ (ಸರ್ಪದ) ಸ್ವಭಾವವಲ್ಲ. ಈ ಮಾಯೆಯಲ್ಲೇ ವಿಷಯತ್ವರೂಪ ಭಗವಂತನ ಸ್ವರೂಪ ಪ್ರಕಟಿತವಾಗುತ್ತದೆ, ಆದ್ದರಿಂದ ವಿಷಯತ್ವವು ನಿಃಸ್ವಭಾವವಲ್ಲ ಹಾಗೂ ಭಗವಂತನದ್ದೇ ಶಕ್ತಿಯಾದ ಕಾರಣ ಮಾಯೆಯೂ ಸಹ ನಿಃಸ್ವಭಾವವಲ್ಲ. ಭ್ರಮೆಯನ್ನು ಉತ್ಪನ್ನ ಮಾಡುವುದೇ ಇದರ ಸ್ವಭಾವ. ಬುದ್ಧಿಮಾತ್ರವೇ ಚೈತನ್ಯದ ಪಾತ್ರಸ್ಥಳವಾಗಿದೆ, ಆದರೆ ಈ ಮಾಯೆ ಆ ಬುದ್ಧಿಯನ್ನೇ ಮೋಹಿತಗೊಳಿಸುತ್ತದೆ. ಯಾವಾಗ ಜೀವಿಯಲ್ಲಿ ಬ್ರಹ್ಮಭಾವವು

ಪ್ರಕಾಶಿತವಾಗುತ್ತದೋ, ಆಗ ಈ ಮಾಯೆ ಬುದ್ಧಿಯನ್ನು ಮೋಹಿತಗೊಳಿಸುವುದನ್ನು ಬಿಟ್ಟುಬಿಡುತ್ತದೆ. ಜಗತ್ತಿನಲ್ಲಿ ಸ್ಥಿತವಾದ ಭಗವದಂಶ ವಸ್ತುಗಳು ಭಗವತ್-ವಿಷಯಕ ಜ್ಞಾನವನ್ನು ಹುಟ್ಟಿಸುತ್ತವೆ, ಆದ್ದರಿಂದ ಮೋಹಿನಿ ಮಾಯೆ ಆ ಎಲ್ಲ ವಸ್ತುಗಳ ವಿರುದ್ಧವಾದದ್ದು. ಇದರಿಂದ ಇದು ಅರ್ಥವಾಗುವುದೇನೆಂದರೆ ವಿಷಯತ್ವದಿಂದ (ವಿಷಯವಸ್ತುವಿನಿಂದ) ಹುಟ್ಟುವ ಜ್ಞಾನವು ಭ್ರಮೆಯಾದದ್ದು ಮತ್ತು ವಿಷಯದಿಂದ ಉತ್ಪನ್ನ ಜ್ಞಾನವು ಯಥಾರ್ಥವಾದದ್ದು.

ಈ ರೀತಿ ಹೇಗೆ ಮಾಯೆ ಜಡಜಗತ್ತಿನಲ್ಲಿ ಭ್ರಮೆಯನ್ನು ಉತ್ಪನ್ನ ಮಾಡುತ್ತದೋ, ಆತ್ಮದ ವಿಷಯದಲ್ಲೂ ಸಹ ಅದೇ ರೀತಿ ಮಾಡುತ್ತದೆ. ಆದ್ದರಿಂದ 'ಚಾತ್ಮನಿ' ಇತ್ಯಾದಿ ಪದವನ್ನು ಹೇಳುತ್ತಿದ್ದಾರೆ. ಈ ಮಾಯೆ ಆತ್ಮನಲ್ಲಿ ಸ್ಥಿತವಾದ ವಸ್ತುವನ್ನು ಪ್ರಕಟಿಸುವುದಿಲ್ಲ, ಆದರೆ ಯಾವುದು ಇಲ್ಲವೋ ಅದನ್ನು ಪ್ರಕಾಶಿತಗೊಳಿಸುತ್ತದೆ. ಇಲ್ಲಿ ಒಂದು ಪ್ರಶ್ನೆ ಹುಟ್ಟಬಹುದೇನೆಂದರೆ ಈ ಜಗತ್-ರೂಪ ವಿಷಯವು ಬ್ರಹ್ಮನಿಂದ ಭಿನ್ನ ರೂಪದಲ್ಲಿ ಏತಕ್ಕಾಗಿ ಒಪ್ಪಿಕೊಳ್ಳಲಾಗುವುದಿಲ್ಲ? ಇದಕ್ಕೆ ಉತ್ತರದಲ್ಲಿ ಹೇಳುತ್ತಾರೆ- 'ತದ್ವಿಧ್ಯಾದಾತ್ಮನೋ ಮಾಯಾಂ' ಇತ್ಯಾದಿ. ವಾಸ್ತವದಲ್ಲಿ ಜಗತ್ತು ಬ್ರಹ್ಮರೂಪವಾಗಿದೆ, ಆದರೆ ಇದರ ಈ ರೂಪವು ಪ್ರಕಟಿತವಾಗದೆ ಅನ್ಯಥಾ ರೂಪದಲ್ಲೇ ಪ್ರಕಟಿತವಾಗುತ್ತಿದೆ. ಈ ಎರಡು ಕಾರ್ಯಗಳೂ ಮಾಯೆಯದ್ದೇ ಪ್ರಭಾವವಾಗಿದೆ. ಜಗತ್ತು ಮಿಥ್ಯವಲ್ಲ, ಆದರೆ ಮಾಯೆ ಇದನ್ನು ಮಿಥ್ಯ ಎನ್ನುವುದಾಗಿ ತೋರಿಸುತ್ತಿದೆ, ಸತ್ಯ ಸ್ವರೂಪವೆಂದಲ್ಲ. ಈ ದೋಷವು ವಸ್ತು ಸ್ವರೂಪ ಜಗದ್ರೂಪಿ ಬ್ರಹ್ಮನದ್ದಲ್ಲ, ಆದರೆ ಮಾಯೆಯದ್ದು, ಆದ್ದರಿಂದ ಇದನ್ನು ಮಾಯೆ ಎಂದೇ ಅರ್ಥಮಾಡಿಕೊ. ಈ ಮಾಯೆಯ ದೋಷದಿಂದ ಜಗತ್ತನ್ನು ಬ್ರಹ್ಮನಿಂದ ಭಿನ್ನ ವಸ್ತುವೆಂದು ಅರ್ಥಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ಚಿಪ್ಪಿನಲ್ಲಿನ ಬೆಳ್ಳಿಯಲ್ಲಿ ಯಾವ ಭ್ರಮೆ ಇರುತ್ತದೆ, ಈ ಭ್ರಮೆ-ಜ್ಞಾನದಲ್ಲಿ ಚಿಪ್ಪು ಅಥವಾ ಬೆಳ್ಳಿ ಕಾರಣವಲ್ಲ, ಏಕೆಂದರೆ ಆ ಎರಡು ನಿಶ್ಚಿತ ಸ್ವಭಾವದ್ದು, ಆದ್ದರಿಂದ ಅದು ಭ್ರಮೆಗೆ ಕಾರಣವಾಗುವುದಿಲ್ಲ. ಭ್ರಮೆಗೆ ಕಾರಣ ಕೇವಲ ಮಾಯೆ ಅಷ್ಟೆ.

ಈ ವಿಷಯದಲ್ಲಿ ದೃಷ್ಟಾಂತವನ್ನು ಹೀಗೆ ನೀಡುತ್ತಿದ್ದಾರೆ- "ಯಥಾಭಾಸೋ ಯಥಾ ತಮಃ ।" ಅರ್ಥಾತ್ ಹೇಗೆ ಕೆಲವೊಮ್ಮೆ ಎರಡು ಚಂದ್ರಮಗಳೆಂದು ಭ್ರಮೆಯುಂಟಾಗುತ್ತದೋ, ಅದು ಮಾಯೆಯಿಂದಲೇ ಉಂಟಾಗುತ್ತದೆ. ಎರಡು ಚಂದ್ರ ಕಾಣಿಸಬಹುದು, ಆದರೆ ಇದು ನೈಜ ದೃಷ್ಟಿಗೆ ವಿರುದ್ಧವಾದ ಕಾರಣ ಯಾವುದೇ ಬುದ್ಧಿವಂತ ವ್ಯಕ್ತಿಯೂ ಸಹ ಎರಡು ಚಂದ್ರ ಎಂದು ಒಪ್ಪಿಕೊಳ್ಳುವುದಿಲ್ಲ, ಆದರೆ ಅದನ್ನು ಭ್ರಮೆ ಅಥವಾ ಮಾಯೆ ಎಂದೇ ಅರ್ಥಮಾಡಿಕೊಳ್ಳುತ್ತಾನೆ. ಇದೇ ತರಹ ಜಗತ್ತಿನಲ್ಲಿ ಯಾವ ವಿಷಯತ್ವವು ಕಾಣಿಸಲ್ಪಡುತ್ತದೋ, ಅದು ಮಾಯೆಯಿಂದ ಹುಟ್ಟಿರುವುದು. ಬುದ್ಧಿಯು ಚಿತ್-ವಸ್ತುವಿನ ವಿಲಾಸ ಸ್ಥಾನ, ಆದ್ದರಿಂದ ಅದು ಮಾಯೆಯಿಂದ ಉತ್ಪನ್ನವಾಗುವುದಿಲ್ಲ. ಏನಾದರೂ ಬುದ್ಧಿ ಮಾಯೆಯಿಂದ

ಉತ್ಪನ್ನವಾದರೆ ಬ್ರಹ್ಮಜ್ಞಾನದ ಬುದ್ಧಿಯಲ್ಲೂ ಸಹ ಭ್ರಮೆಯುಂಟಾಗುತ್ತದೆ. ಆದ್ದರಿಂದ ಬುದ್ಧಿ ಮಾಯೆಯ ಕಾರಣವಲ್ಲ, ವಿಷಯತ್ವವೇ ಮಾಯೆಯ ಕಾರಣವಾಗುತ್ತದೆ. ಏನಾದರೂ ಬ್ರಹ್ಮಜ್ಞಾನದ ಅರಿವನ್ನೂ ಸಹ ಭ್ರಮೆ ಎಂದು ತಿಳಿದುಕೊಂಡರೆ ಮತ್ತೆ ಜ್ಞಾನಮಾತ್ರ ಭ್ರಮೆಯಾಗುತ್ತದೆ ಮತ್ತು ಬ್ರಹ್ಮ ಜ್ಞಾನವನ್ನೂ ಸಹ ಭ್ರಮೆ ಎಂದೇ ಅರ್ಥಮಾಡಿಕೊಳ್ಳಲಾಗುತ್ತದೆ. ಆಗ ಸಮಸ್ತ ಪ್ರಕಾರದಿಂದ ವಿಪ್ಲವ ಉಂಟಾಗುತ್ತದೆ ಅರ್ಥಾತ್ ಯಾವುದೂ ಸಹ ಇರುವುದೇ ಇಲ್ಲ.

ಈ ವಿಷಯತ್ವವು ಎರಡು ಪ್ರಕಾರವಾದದ್ದು– ಒಂದು ಆವರ್ಣ ಅರ್ಥಾತ್ ಮರೆಮಾಡುವುದು ಹಾಗೂ ಮತ್ತೊಂದು ಅನ್ಯಥಾ (ಒಂದನ್ನು ಬೇರೆಯೊಂದಾಗಿ) ಕಾಣಿಸುವಂತಹದ್ದು. ಈ ಎರಡು ತರಹದ ವಿಷಯತ್ವವು ಮಾಯೆಯಿಂದಲೇ ಹುಟ್ಟುತ್ತವೆ. ಹೇಗೆ– ಆಭಾಸ–ಪ್ರತಿಬಿಂಬ ಇರುವಂತೆ. ಆಭಾಸರೂಪ ವಿಷಯತ್ವವು ಅನ್ಯಥಾರೂಪದಲ್ಲಿ ಕಾಣಿಸಲ್ಪಡುವಂತಹದ್ದು. ಇಲ್ಲಿ ಒಂದು ಪ್ರಶ್ನೆ ಉಂಟಾಗುವುದೇನೆಂದರೆ ವಿಷಯತ್ವವು ಕೇವಲ ಬುದ್ಧಿಯನ್ನು ಭ್ರಮಿತಗೊಳಿಸುವಂತಹದ್ದಾದ ಕಾರಣ ಅದರಿಂದ ವಸ್ತು ಹೇಗೆ ಉತ್ಪನ್ನವಾಗುತ್ತದೆ? ಆಭಾಸದಲ್ಲೇನೋ ಮತ್ತೊಂದು ವಸ್ತು ಉತ್ಪನ್ನವಾಗುತ್ತದೆ. ಮತ್ತೊಂದು ಶಂಕೆ ಎಂದರೆ ವಿಷಯವನ್ನು ಬಿಟ್ಟು ಎಲ್ಲೂ ಸಹ ವಿಷಯತ್ವವು ಕಾಣಿಸಲ್ಪಡುವುದಿಲ್ಲ. ಅರ್ಥಾತ್ ಮಡಿಕೆಯಲ್ಲೇ ಮಡಿಕೆಯತ್ವವು ಇರುತ್ತದೆ, ಮಡಿಕೆಯನ್ನು ಬಿಟ್ಟು ಮಡಿಕೆಯತ್ವವನ್ನು ಬೇರೆ ಎಲ್ಲೂ ಕಾಣಲಾಗುವುದಿಲ್ಲ. ಇದಕ್ಕೆ ಉತ್ತರದಲ್ಲಿ ಹೀಗೆ ಹೇಳಿದ್ದಾರೆ– 'ಯಥಾ ತಮಃ' ಇತ್ಯಾದಿ ಅರ್ಥಾತ್ ಹೇಗೆ ಅಂಧಕಾರವೋ ಹಾಗೆ. ಈ ಅಂಧಕಾರವು ಸಂಪೂರ್ಣವಾಗಿ ವಿಷಯತ್ವವಾದದ್ದು ಹಾಗೂ ಇದು ಬೆಳಕಿನ ಅಭಾವದಲ್ಲಿ ದೃಷ್ಟಿಗೋಚರವಾಗುತ್ತದೆ. ಇದೂ ಸಹ ಮಾಯೆಯಿಂದಲೇ ಉಪನ್ನವಾದ ವಿಷಯತ್ವ. ಎಲ್ಲಿ ಪ್ರಕಾಶದ ಅಭಾವವಿರುವುದೋ, ಅಲ್ಲಿ ಈ ಮಾಯೆ ತನ್ನ ವಿಷಯತ್ವರೂಪವಾದ ಅಂಧಕಾರವನ್ನು ಹುಟ್ಟಿಸುತ್ತದೆ. ಇದೇ ಮಾಯಾ ಮೋಹವನ್ನು ಉತ್ಪನ್ನ ಮಾಡುವಂತವಳು. ಆದ್ದರಿಂದ ಪ್ರಕಾಶದಿಂದ ಭಯಭೀತವಾಗುವ ಗೂಬೆ ಪಕ್ಷಿಗಳಲ್ಲಿ ಮಾಯೆ ಅಂಧಕಾರವನ್ನು ಹುಟ್ಟಿಸುವುದಿಲ್ಲ. ಗೂಬೆ ಬೆಳಕಿನ ಅಭಾವವನ್ನೇ ಗ್ರಹಿಸುತ್ತದೆ. ಅದರ ದೃಷ್ಟಿ ಕೋಮಲವಾಗಿರುತ್ತದೆ, ಆದ್ದರಿಂದ ಅತ್ಯಾಧಿಕ ಪ್ರಕಾಶವು ಅದರ ದೃಷ್ಟಿಗೆ ಬಾದಕವಾಗುತ್ತದೆ. ಆದ್ದರಿಂದ ಈ ಪಕ್ಷಿ ಪ್ರಕಾಶದ ಅಭಾವದಲ್ಲೂ ವಿಷಯವನ್ನು (ವಸ್ತುಗಳನ್ನು) ಸುಖವಾಗಿ ನೋಡುತ್ತದೆ. ವಸ್ತುಗಳನ್ನು ನೋಡಲ ಪ್ರಕಾಶವು ವಿಷಯವನ್ನು (ವಸ್ತುವನ್ನು) ಸುಧಾರಣೆ ಮಾಡುವುದಿಲ್ಲ ಅಥವಾ ನಮ್ಮ ದೃಷ್ಟಿಯನ್ನು ಸುಧಾರಣೆ ಮಾಡುವುದಿಲ್ಲ. ಅದು ಕೇವಲ ದೃಷ್ಟಿಗೆ ಸಹಕರಿಸುವಂತಹದದ್ದು ಅಷ್ಟೆ. ಆದರೆ ರಾತ್ರಿಯಲ್ಲಿ ಯಾವಾಗ ಬೆಳಕಿನ ಅಭಾವವಿರುತ್ತದೋ, ಆಗ ಮಾಯೆ ಅಲ್ಲಿ ತನ್ನ ವಿಷಯತಾರೂಪ ಅಂಧಕಾರವನ್ನು ಹುಟ್ಟಿಸುತ್ತದೆ, ಆಗ ನಮ್ಮ ದೃಷ್ಟಿ ಆ ಅಂಧಕಾರವನ್ನು ಗ್ರಹಿಸುತ್ತದೆ, ವಸ್ತುವನ್ನಲ್ಲ. ಆದ್ದರಿಂದ ಅಂಧಕಾರವನ್ನು ದೂರ ಮಾಡಲು ಪ್ರಕಾಶದ ಅಪೇಕ್ಷೆ ಇರುತ್ತದೆ ಹಾಗೂ ಈ ಲೋಕದಲ್ಲೂ ಸಹ ಈ ಅನುಭವವು ಇದೇ ಪ್ರಕಾರದಿಂದಲೇ

ಇರುತ್ತದೆ.

ಈ ಅಂಧಕಾರರೂಪ ವಿಷಯಿತ್ವವನ್ನು ಕಣ್ಣುಗಳಿಂದಲೇ ಗ್ರಹಿಸಲ್ಪಡುತ್ತದೆ, ಅನ್ಯ ಬೇರೆ ಇಂದ್ರಿಯಗಳಿಂದಲ್ಲ. ಅರ್ಥಾತ್ ಕಣ್ಣುಗಳು ವಸ್ತುವಿನಿಂದ ಭಿನ್ನ ಅಂಧಕಾರವನ್ನು ಗ್ರಹಿಸುತ್ತದೆ. ಈ ಮಾತು ಭ್ರಮೆಯ ದೃಷ್ಟಾಂತದ ಮೂಲಕ ಸ್ಪಷ್ಟವಾಗುತ್ತದೆ. ನಾವು ನಮ್ಮನ್ನು ನಾವು ಚಕ್ರಹೊಡೆಯುತ್ತ (ಸುತ್ತುಹಾಕುತ್ತ) ಒಮ್ಮೆ ನಿಂತರೆ ಆಗ ನಮ್ಮ ಕಣ್ಣುಮುಂದಿರುವ ಗಿಡ-ಮರಗಳು ಇತ್ಯಾದಿ ಸುತ್ತುತ್ತಿರುವಹಾಗೆ ಕಾಣಿಸುತ್ತದೆ. ಇದರ ಮೂಲಕ ಸ್ಪಷ್ಟವಾಗುವುದೇನೆಂದರೆ ಇಲ್ಲಿ ಗಿಡ-ಮರಗಳು ಇತ್ಯಾದಿ ಸುತ್ತುವುದು ಭಿನ್ನವಾದದ್ದು ಅಂದರೆ ಈ ಎರಡು ವಾಸ್ತವದಲ್ಲಿ ಒಂದಕೊಂದು ಸಂಬಂಧವಿಲ್ಲದಿರುವುದು. ಶಾಸ್ತ್ರದಲ್ಲೂ ಸಹ "ಯಥೈವ ಭಾನೊರುದಯೋ ನೃ ಚಕ್ಷುಷಾಂ" ಮುಂತಾದ ವಚನಗಳಲ್ಲಿ ತಮಸ್ಸನ್ನು ಒಂದು ಭಿನ್ನ ಮಾಯಿಕ ಪದಾರ್ಥವೆಂದು ಒಪ್ಪಿಕೊಳ್ಳಲಾಗಿದೆ ಹಾಗೂ ಅದು ಅಸತ್, ಸತ್ ಅಲ್ಲ. ಈ ತಮಸ್ಸು ಕಣ್ಣಿಗೆ ಸಂಬಂಧಪಟ್ಟದ್ದು ಹಾಗೂ ಸೂರ್ಯ ಉದಯವಾಗುವುದರಿಂದ ಇದರ ನಾಶವಾಗುತ್ತದೆ. ಜಗತ್ತಿನಲ್ಲಿ ಒಳಗೊಂಡ ಅನ್ಯ ವಸ್ತುಗಳಂತ ಸ್ವಭಾವದಿಂದಲೇ ತಮಸ್ಸು ಸತ್ಯ ವಸ್ತುವಲ್ಲ, ಮಾಯೆಯ ಕಾರಣ ಅಸತ್ಯವಾಗಿದೆ. ತಮಸ್ಸು ಏನಾದರೂ ಸತ್ಯ ವಸ್ತುವಾದರೆ ಅದರ ಸ್ಪರ್ಶವೂ ಸಹ ಆಗುತ್ತದೆ ಹಾಗೂ ಆ ಸಮಯ ವಸ್ತುಜ್ಞಾನದ ಪ್ರತಿಬಂಧನವಾಗುತ್ತದೆ, ಆದರೆ ಹಾಗೆ ಆಗುವುದಿಲ್ಲ. ಅಂಧಕಾರದ ಸ್ಪರ್ಶವಾಗುವುದಿಲ್ಲ ಹಾಗೂ ಅದು ಯಾವುದೇ ವಸ್ತುವನ್ನು ಸ್ಪರ್ಶಿಸಲು ಸಮರ್ಥವಾಗಿಲ್ಲ. 'ತಮಸ್ಸಿಗೆ' ಇಲ್ಲಿ ಒಂದು ಪ್ರಕಾರದ ಉದಾಹರಣೆ ತೋರಿಸಲಾಗಿದೆ. ಈ ಪ್ರಕರದಿಂದ ಮತ್ತಷ್ಟು ಅನೇಕ ವಸ್ತುಗಳನ್ನು ಆರಿಸಿಕೊಳ್ಳಬಹುದು- ಅಂದರೆ ಹಾಗೆ ಪ್ರತಿಬಿಂಬವೂ ಒಂದು ಉದಾಹರಣೆ. ಕನ್ನಡಿಯಲ್ಲಿ ನಾವು ನಮ್ಮ ಮುಖವನ್ನು ನೋಡುತ್ತೇವೆ, ಆಗ ಅದು ಮೋಹಿನಿ ಮಾಯೆಯ ನಡುವೆ ಒಂದು ಬೇರೆ ಮುಖವು ಉತ್ಪನ್ನ ಮಾಡಿಬಿಡುತ್ತದೆ. ಎಷ್ಟೇ ಹೇಳಿದರೂ ಯಾವುದೋ ಬೇರೆ ಮುಖವಲ್ಲ ಎಂದರೂ ಸಹ ಮತ್ತೆ ಕಣ್ಣುಗಳ ಕಿರಣಗಳು ಕನ್ನಡಿಗೆ ತಾಕಿ ಹಿಂದಿರುಗಿದರೆ, ಆಗ ತನ್ನ (ಮತ್ತೊಂದು) ಮುಖವನ್ನು ಕಾಣಿಸುತ್ತದೆ. ಮನುಷ್ಯ ತಪ್ಪಾಗಿ ತಿಳಿದು ಬೇರೆ ಮುಖವೆಂದು ತಿಳಿಯುತ್ತಾನೆ, ಆದರೆ ಈ ಅಭಿಪ್ರಾಯವು ಸರಿಯಲ್ಲ. ಎಲ್ಲಿ ಹಿಂದೆ-ಮುಂದೆ ಅಥವಾ ಅಲ್ಲಲ್ಲಿ ಅನೇಕ ಕನ್ನಡಿಗಳನ್ನು ಇಟ್ಟಿರುತ್ತಾರೋ, ಅಲ್ಲಿ ನೂರಾರು ಪ್ರತಿಬಿಂಬವು ಮತ್ತು ಕನ್ನಡಿಯನ್ನು ತಾಕಿ ಅನೇಕ ಮುಖಗಳಾಗಿ ಕಾಣಿಸಲ್ಪಡುತ್ತದೆ. ಆದರೆ ಮುಂದೆ ಇರುವ ಕನ್ನಡಿಯಲ್ಲಿ ತನ್ನ ಕಣ್ಣುಗಳು ಏನಾದರು ತನ್ನ ಮುಖವನ್ನು ನೋಡಿದರೆ, ಆಗ ಒಂದು ಮುಖವೇ ಕಾಣಿಸುವುದು, ಏಕೆಂದರೆ ಮುಖವೇನೋ ಒಂದೇ ಇರುವುದು. ಆದ್ದರಿಂದ ಪ್ರತಿಬಿಂಬ ಒಂದು ಬಿಟ್ಟರೆ ಮಾಯಿಕ ಪದಾರ್ಥವಾದದ್ದು, ಯಾವುದನ್ನು ಮಾಯೆಯು ಉತ್ಪನ್ನ ಮಾಡುತ್ತದೋ ಹಾಗೂ ಅದು ಅಸತ್ಯವಾದದ್ದು. ಈ ವಸ್ತು ಯಾವ ತರಹದ್ದೆಂದರೇ ಅಸತ್ಯವಾಗಿದ್ದರೂ ಸಹ ವಾಸ್ತವದಲ್ಲಿ ಕಾಣಿಸಲ್ಪಡುತ್ತದೆ. ಆದ್ದರಿಂದಲೇ ಇದನ್ನು ಆಭಾಸ ವಸ್ತು ಎಂದು ಹೇಳಲಾಗಿದೆ. ಆದ್ದರಿಂದ ಹೇಳಬೇಕಾದದ್ದು ಏನೆಂದರೆ

ಕನ್ನಡಿಯನ್ನು ನೋಡುವಾಗ ದ್ವಿತೀಯ ಮುಖ ಉತ್ಪನ್ನವಾಗುವಂತೆ, ಅಥವಾ ಬೆಳಕಿನ ಅಭಾವದಿಂದ ಅಂಧಕಾರವು ಹುಟ್ಟುವಂತೆ ಭಗವಂತನ ಮಾಯಾ ಮೋಹಿತ ಪುರುಷನ ಬುದ್ಧಿಯಲ್ಲಿ ಎರಡು ಪ್ರಕಾರದ ವಿಷಯತ್ವವು ಹುಟ್ಟಿಸುತ್ತದೆ– (೧) ಆವರ್ಣ (ಮರೆಮಾಡುವುದು), (೨) ಅನ್ಯಥಾ ಭಾಸ. ಇದರಲ್ಲಿ ಒಂದು ವಿಷಯತ್ವ ವಸ್ತುವಿನ ಬ್ರಹ್ಮ ರೂಪತ್ವವನ್ನು ಪ್ರಕಟಿತವಾಗಲು ಬಿಡುವುದಿಲ್ಲ ಹಾಗೂ ಮತ್ತೊಂದು ಜಗದ್ರೂಪಕ್ಕೆ ಅನ್ಯಥವಾಗಿಸುತ್ತದೆ (ಬೇರೆಯಾಗಿ ತೋರಿಸುತ್ತದೆ). ಈ ಎರಡು ತರಹದ ಮಾಯೆಯಿಂದ ಉತ್ಪನ್ನವಾಗುವ ವಿಷಯತ್ವವನ್ನು ದೂರ ಮಾಡಲೆಂದೇ ವೇದ–ಶಾಸ್ತ್ರಾದಿಯನ್ನು ಪ್ರಮಾಣ ಮಾಡಲಾಗಿದೆ ॥೩॥

ತಥ್ಯ–ಸ್

ಯೇ ಚೈವ ಸಾತ್ವಿಕಾ ಭಾವಾ ರಾಜಸಾಸ್ತಾಮಸಾಶ್ಚ ಯೇ ।
ಮತ್ತ ಏವೇತಿ ತಾನ್ ವಿದ್ಧಿ ನ ತ್ವಹಂ ತೇಷು ತೇ ಮಯಿ ॥

ತ್ರಿಭಿರ್ಗುಣಮಯೈರ್ಭಾವೈರೇಭಿಃ ಸರ್ವಮದಿಃ ಜಗತ್ ।
ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಮ್ ॥

ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।
ಮಾಮೇವ ಯೇ ಪ್ರಪಧ್ಯಂತೆ ಮಾಯಾಮೇತಾಂ ತರಂತಿ ತೇ ॥
(ಶ್ರೀಗೀತ ೭/೧೨–೧೪)

ಎಷ್ಟೇ ಸಾತ್ವಿಕ, ರಾಜಸಿಕ ಹಾಗೂ ತಾಮಸಿಕ ಭಾವಸಮೂಹವಿವಯೋ, ಅವೇಲ್ಲವು ನನ್ನ ಪ್ರಕೃತಿಯ ಗುಣಕಾರ್ಯವಾಗಿವೆ. ನಾನು ಆ ಎಲ್ಲ ಗುಣಗಳಿಂದ ಸ್ವತಂತ್ರನಾಗಿದ್ದೇನೆ, ಆದರೆ ಅವೆಲ್ಲವೂ ನನ್ನ ಶಕ್ತಿಯ ಅಧೀನವಾಗಿದೆ.

ಈ ಮೇಲಿನ ಮೂರು ವಿಧದ ಗುಣಮಯ ಭಾವಗಳ ಮೂಲಕ ಸಂಪೂರ್ಣ ಜಗತ್ತು ಮೋಹಿತವಾಗಿದೆ. ಆದ್ದರಿಂದ ಜನರು ತ್ರಿಗುಣಾತೀತ ಹಾಗೂ ಅವಿನಾಶಿಯಾದ ನನ್ನನ್ನು ಅರಿಯರು.

ಈ ಜೀವ–ವಿಮೋಹಿನಿ ಹಾಗೂ ತ್ರಿಗುಣಾತ್ಮಿಕವಾದ ನನ್ನ ಬಹಿರಂಗಶಕ್ತಿಯು ನಿಶ್ಚಯವಾಗಿಯೂ ದುಸ್ತರವಾದದ್ದು (ಅರ್ಥಾತ್ ಇದರಿಂದ ಪಾರಾಗುವುದು ಬಹಳ ಕಠಿಣ), ಆದರೆ ಯಾರು ನನ್ನಲ್ಲಿ ಆಶ್ರಯವನ್ನು ಪಡೆಯುವರೋ, ಅವರು ಈ ಮಾಯೆಯನ್ನು ಸಹಜವಾಗಿ ದಾಟಬಲ್ಲರು.

ಭಕ್ತಿಯೋಗೇನ ಮನಸಿ ಸಮ್ಯಕ್ ಪ್ರಣಿಹಿತೇಽಮಲೇ ।
ಅಪಶ್ಯತ್ ಪುರುಷಂ ಪೂರ್ಣ ಮಾಯಾಂಚ ತದಪಾಶ್ರಯಾಮ್ ॥

ಯಯಾ ಸಮ್ಮೋಹಿತೋ ಜೀವ ಆತ್ಮನಂ ತ್ರಿಗುಣಾತ್ಮಕಮ್ ।
ಪರೋಽಪಿ ಮನುತೇಽನರ್ಥಂ ತತ್ಕೃತಂಚಾಭಿಪದ್ಯತೆ ॥
(ಶ್ರೀಮದ್ಭಾ ೧/೭/೪–೫)

ಭಕ್ತಿಯೋಗದ ಪ್ರಭಾವದಿಂದ ಶುದ್ಧವಾದ ಮನಸ್ಸನ್ನು ಸಂಪೂರ್ಣವಾಗಿ ಏಕಾಗ್ರತಗೊಳಿಸಿ ಶ್ರೀವ್ಯಾಸದೇವರು ಕಾಂತಿ, ಅಂಶ ಹಾಗೂ ಸ್ವರೂಪಶಕ್ತಿಯುಕ್ತ ಪೂರ್ಣಪುರುಷನಾದ ಶ್ರೀಕೃಷ್ಣನನ್ನು ಹಾಗೂ ಅವನ ಹಿಂದೆ ನಾಚುತ ನಿಂತಿರುವ ಅವನ ಆಶ್ರಿತ ಮಾಯೆಯ ದರ್ಶನವನ್ನು ಪಡೆದರು. ಈ ಮಾಯೆಯ ಮೂಲಕ ಜೀವಿಗಳ ಸ್ವರೂಪವು ಆವೃತ ಹಾಗೂ ವಿಕ್ಷಿಪ್ತವಾಗಿಬಿಡುತ್ತದೆ, ಫಲಸ್ವರೂಪ ಜೀವಿ ಸತ್ವ-ರಜಸ್ಸು-ತಮಸ್ಸು- ಈ ಮೂರು ಜಡ ಗುಣಗಳಿಂದ ಅತೀತವಾದರೂ ಸಹ ತನ್ನನ್ನು ಜಡ ದೇಹ, ಮನ ಹಾಗೂ ಬುದ್ಧಿ ಎಂದು ತಿಳಿಯುತ್ತದೆ. ಆ ತ್ರಿಗುಣಾತ್ಮಕ ಅಭಿಮಾನದಿಂದ ಉತ್ಪನ್ನ ಕರ್ತೃತ್ವಾದಿಯ ಕಾರಣದಿಂದ ಜೀವಿ ಸಂಸಾರ ವಾಸವನ್ನು ಅಂದರೆ ಬದ್ಧಾವಸ್ಥೆಯನ್ನು ಪ್ರಾಪ್ತಿಸಿಕೊಳ್ಳುತ್ತದೆ.

ಏಕಮೇವ ಪರಮ್ ತತ್ವ ಸ್ವಾಭಾವಿಕಾಚಿನ್ತ್ಯಶಕ್ತ್ಯಾ ಸರ್ವದೈವಸ್ವರೂಪತ್-
ತದ್ರೂಪವೈಭವ-ಜೀವ-ಪ್ರಧಾನರೂಪೇಣ ಚತುರ್ಧವತಿಷ್ಠತೇ
ಸೂರ್ಯಾಂತರಮಂಡಲಸ್ಥಿತ-ತೇಜ ಇವ ಮಂಡಲ-ತದ್‌ಬಹಿರ್ಗತ-ತದ್ರಶಿಮ-
ತತ್‌ಪ್ರತಿಚ್ಛವಿರೂಪೇಣ ।

(ಭಗವತ್-ಸಂದರ್ಭ ೧೬)

ಪರಮತತ್ವ ಎಂಬುದೊಂದಿದೆ. ಅದು ಸ್ವಾಭಾವಿಕ ಅಚಿಂತ್ಯಶಕ್ತಿಸಂಪನ್ನವಾದದ್ದು, ಅದೇ ಶಕ್ತಿಯ ಮೂಲಕ ಅದು ಸರ್ವದಾ ಸ್ವರೂಪ, ತದ್ರೂಪವೈಭವ, ಜೀವ ಹಾಗೂ ಪ್ರಧಾನ- ಈ ನಾಲ್ಕು ರೂಪಗಳಲ್ಲಿ ಪ್ರಕಟಿತವಾಗುತ್ತದೆ. ಈ ವಿಷಯದಲ್ಲಿ ಸೂರ್ಯಮಂಡಲದ ತೇಜಸ್ಸು, ಮಂಡಲ, ಆ ಮಂಡಲದಿಂದ ನಿರ್ಗತ ಸೂರ್ಯ ಕಿರಣಗಳು ಹಾಗೂ ಅದರ ಪ್ರತಿಬಿಂಬ ಅರ್ಥಾತ್ ದೂರಗತಿಯ ಪ್ರತಿಫಲನ- ಇದು ಕಿಂಚಿತ್ ಉದಾಹರಣೆಯ ಸ್ಥಳ. ತಾತ್ಪರ್ಯ ಏನೆಂದರೆ ಈ ನಾಲ್ಕು ಪ್ರಕಾಶಗಳು ಯಾವ ರೀತಿ ನಿತ್ಯವಾಗಿವೆಯೋ, ಅದೇ ರೀತಿ ಪರಮತತ್ವದ ಏಕತ್ವವೂ ಸಹ ನಿತ್ಯವಾಗಿದೆ. ಇವೆರಡು ಪರಸ್ಪರ ನಿತ್ಯ ವಿರುದ್ಧ ಕ್ರಿಯೆಗಳು ಒಂದೇ ಸಮಯದಲ್ಲಿ ಯಾವ ರೀತಿ ಸಂಭವಿಸುತ್ತದೆ? ಇದಕ್ಕೆ ಉತ್ತರದಲ್ಲಿ ಹೇಳುತ್ತಾರೆ- 'ಅಚಿಂತ್ಯ' ಅರ್ಥಾತ್ ಜೀವಿಯ ಬುದ್ಧಿಯಿಂದ ಇದನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯವಾದದ್ದು, ಏಕೆಂದರೆ ಜೀವಿಯ ಬುದ್ಧಿ ಸೀಮಿತವಾದದ್ದು. ಆದರೆ ಪರಮೇಶ್ವರನ ಅಚಿಂತ್ಯಶಕ್ತಿಯ ಮೂಲಕ ಇದು ಅಸಾಧ್ಯವಲ್ಲ.

ಕೃಷ್ಣ-ಸೂರ್ಯಸಮ, ಮಾಯಾ ಹಯ ಅಂಧಕಾರ ।
ಜಾಂಹಾ ಕೃಷ್ಣ, ತಾಂಹಾ ನಾಹಿ ಮಾಯಾರ ಅಧಿಕಾರ ॥

(ಚೈ.ಚ.ಮ. ೨೨/೩೧)

ಶ್ರೀಕೃಷ್ಣನು ಸೂರ್ಯನಿಗೆ ಸಮಾನನು ಹಾಗೂ ಮಾಯಾ ಅಂಧಕಾರಕ್ಕೆ ಸಮಾನನು. ಎಲ್ಲಿ ಶ್ರೀಕೃಷ್ಣರೂಪ ಸೂರ್ಯನಿರುವನೋ, ಅಲ್ಲಿ ಮಾಯಾರೂಪ ಅಂಧಕಾರದ ಶಕ್ತಿ ಇರುವುದಿಲ್ಲ.

ನ ತ್ರ ಸೂರ್ಯೋ ಭಾತಿ ನ ಚಂದ್ರ ತಾರಕಂ,
ನೇಮಾ ವಿಧ್ಯುತೋ ಭಾಂತಿ ಕುತೋಽಯಮಗ್ನಿಃ ।
ತಮೇವ ಭಾಂತಮನುಭಾತಿ ಸರ್ವಂ,
ತಸ್ಯ ಭಾಸಾ ಸರ್ವಮಿದಂ ವಿಭಾತಿ ॥

(ಕಠ.ಉ. ೨/೨/೧೫)

ಆ ಸ್ವಪ್ರಕಾಶನಾದ ಪರಬ್ರಹ್ಮನನ್ನು ಸೂರ್ಯ–ಚಂದ್ರ, ನಕ್ಷತ್ರಗಳು ಹಾಗೂ ವಿಧ್ಯುತ್ ಇತ್ಯಾದಿಯು ಪ್ರಕಾಶಿತಗೊಳಿಸಲು ಅಸಮರ್ಥವಾಗಿದೆ, ಹಾಗಿರುವಾಗ ಅಗ್ನಿಯ ಮಾತೇಕೆ? ಆದರೆ ಆ ಸ್ವಪ್ರಕಾಶ–ಪರಬ್ರಹ್ಮನ ಆಶ್ರಯ ಪಡೆದು ಸೂರ್ಯ ಇತ್ಯಾದಿ ದೀಪ್ತಶಾಲಿ ವಸ್ತುಗಳು ಪ್ರಕಾಶಿತವಾಗುತ್ತದೆ, ಅದೇ ಪರಬ್ರಹ್ಮನ ಅಂಗಕಾಂತಿಯಿಂದ ಈ ಸಮಸ್ತ ಜಗತ್ತು ಪ್ರಕಾಶಗೊಳ್ಳುತ್ತದೆ.

ಬಹಿರಂಗಯಾ ಮಾಯಾಖ್ಯಯಾ ಪ್ರತಿಚ್ಛವಿಗತ–ವರ್ಣಶಾಬಲ್ಯಸ್ಥಾನೀಯ ತದೀಯ–ಬಹಿರಂಗವೈಭವ–ಜಡಾತ್ಮಪ್ರಧಾನರೂಪೇಣ ।

(ಭಗವತ್–ಸಂದರ್ಭ ೧೬)

ಶ್ರೀಭಗವಂತನ ಬಹಿರಂಗಶಕ್ತಿಯನ್ನು 'ಮಾಯಾ' ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಈ ಬಹಿರಂಗಶಕ್ತಿಯ ಉದಾಹರಣೆ ಸೂರ್ಯಮಂಡಲದ ಪ್ರತಿಛಾಯೆ ಅರ್ಥಾತ್ ದೂರಗತ ಪ್ರತಿಫಲದಿಂದ ಉತ್ಪನ್ನವಾಗುವ ವರ್ಣಶಾಬಸ್ಯ ಅಂದರೆ ನಾನಾ ಬಣ್ಣದ ಮಿಶ್ರಣರೂಪಿ ವೈವಿದ್ಯತೆಯ ಸಮಾನವಾದದ್ದು. ಇದೇ ಮಾಯೆಯ ಮೂಲಕ ಅವನ ಬಹಿರಂಗ ವೈಭವ ಅರ್ಥಾತ್ ಜಡರೂಪೀ ಪ್ರಧಾನವು ಪ್ರಕಟಿತವಾದದ್ದು.

ಆಭಾಸೋ ಜ್ಯೋತಿರ್ಬಿಂಬಸ್ಯ ಸ್ವೀಯ–ಪ್ರಕಾಶಾತ್ ವ್ಯವಹಿತಪ್ರದೇಶೋ ಕಥಂಚಿ–ದುಚ್ಛಲಿತ ಪ್ರತಿಚ್ಛವಿ–ವಿಶೇಷ: ।

(ಭಗವತ್–ಸಂದರ್ಭ ೧೭)

ಜ್ಯೋತಿ ಸ್ವರೂಪ ಬಿಂಬದ ತನ್ನ ಪ್ರಕಾಶದಿಂದ ಪೃಥಕ ಪ್ರದೇಶದಲ್ಲಿ ಕಿಂಚಿತ್ ಪ್ರಕಾಶಿತ ಪ್ರತಿಬಿಂಬವನ್ನು ಅರ್ಥಾತ್ ಪತಿಫಲನ ವಿಶೇಷವನ್ನು ಆಭಾಸ ಎಂದು ಕರೆಯುತ್ತಾರೆ.

ಶ್ರೀಭೂದುರ್ಗೇತಿ ಯಾ ಭಿನ್ನಾ ಜೀವಮಾಯಾ ಮಹಾತ್ಮನಃ ।
ಆತ್ಮಮಾಯಾ ತದಿಚ್ಛಾ ಸ್ಯಾದ್ ಗುಣಮಾಯಾ ಜಡಾತ್ಮಿಕಾ ॥

(ಮಹಾಸಂಹಿತೆ)

ಶ್ರೀಭಗವಂತನ ಆ ಮಾಯೇ ಶ್ರೀ, ಭೂ ಹಾಗೂ ದುರ್ಗ ಎಂಬ ಹೆಸರುಗಳಿಂದಲು ಸಹ ಪರಿಚಿತಳು, ಇವಳ ಕಾರ್ಯವು ಕ್ರಮೇಣ ಆತ್ಮಮಾಯಾ ಅಂದರೆ ಭಗವಂತನ ಇಚ್ಛೆ, ಜೀವಿಗಳ ಪ್ರಕಟಣೆ ಹಾಗೂ ತ್ರಿಗುಣಮಯ ಜಡಗತ್ತಿನ ಪ್ರಕಟಣೆಯಾಗಿದೆ.

ಮಾಯಾ ಯೈಛೇ ದುಇ ಅಂಶ–'ನಿಮಿತ್ತ', 'ಉಪಾದನ' ।
ಮಾಯಾ–'ನಿಮಿತ್ತ' ಹೇತು, ಉಪಾದಾನ– 'ಪ್ರಧಾನ' ॥

ಪುರುಷ ಈಶ್ವರ ಐಛೆ ದ್ವಿಮೂರ್ತಿ ಹಇಯಾ ।
ವಿಶ್ವ–ಸೃಷ್ಟಿ ಕರೆ 'ನಿಮಿತ್ತ' 'ಉಪಾದಾನ' ಲಆ ॥

ಆಪನೆ ಪುರುಷ–ವಿಶ್ವೇರ 'ನಿಮಿತ್ತ'– ಕಾರಣ ।
ಅದ್ವೈತ–ರೂಪೆ 'ಉಪಾದಾನ' ಹನ ನಾರಾಯಣ ॥

'ನಿಮಿತ್ತಾಂಶೇ' ಕರೆ ತಂಹೋ ಮಾಯಾತೆ ಈಕ್ಷಣ ।
'ಉಪಾದಾನ' ಅದ್ವೈತ ಕರೆನ ಬ್ರಹ್ಮಾಂಡ–ಸೃಜನ ॥

ನಿಜಸೃಷ್ಟಿಶಕ್ತಿ ಪ್ರಭು ಸಂಚಾರೆ ಪ್ರಧಾನೆ ।
ಈಶ್ವರೇರ ಶಕ್ತ್ಯೆ ತಬೆ ಹಯೆ ತ' ನಿರ್ಮಾಣೆ ॥

ಅದ್ವೈತ–ಆಚಾರ್ಯ– ಕೋಟಿಬ್ರಹ್ಮಾಂಡೇರ ಕರ್ತಾ ।
ಆರ ಏಕ ಏಕ ಮೂರ್ತ್ಯೆ ಬ್ರಹ್ಮಾಣೇರ ಭರ್ತ್ತಾ ॥
(ಚೈ.ಚ.ಆ ೬/೧೪–೨೦)

ಯಾವ ರೀತಿ ಮಾಯೆಯು ಎರಡು ಅಂಶಗಳಾಗಿ ವಿಭಾಗವಾಗಿದೆ– ಒಂದು 'ನಿಮಿತ್ತ' ಹಾಗೂ ಮತ್ತೊಂದು 'ಅಪವರ್ಥನ'. ಇದರಲ್ಲಿ ಮಾಯಾ 'ನಿಮಿತ್ತ' ಕಾರಣ ಹಾಗೂ 'ಪ್ರಧಾನ' 'ಅಪವರ್ಥನ' ಕಾರಣವಾಗಿದೆ.

ಅದೇ ರೀತಿ ಪುರಷನು (ಮಹಾವಿಷ್ಣು) ಸಹ ಎರಡು ಮೂರ್ತಿಯಾಗಿ 'ನಿಮಿತ್ತ' ಹಾಗೂ 'ಅಪವರ್ಥನ'ದ ಮೂಲಕ ವಿಶ್ವವನ್ನು ಸೃಷ್ಟಿಸುತ್ತಾನೆ.

ಪುರುಷ (ಮಹಾವಿಷ್ಣು) ಸ್ವಯಂ ವಿಶ್ವದ 'ನಿಮಿತ್ತ' ಕಾರಣನಾಗಿದ್ದಾನೆ ಹಾಗೂ ನಾರಾಯಣ ಅರ್ಥಾತ್ ಮಾಹಾವಿಷ್ಣು ಅದ್ವೈತಾಚಾರ್ಯರ ರೂಪದಲ್ಲಿ 'ಅಪವರ್ಥನ' ಕಾರಣರಾಗಿದ್ದಾರೆ.

ಭಗವಾನ್ ಮಹಾವಿಷ್ಣು ನಿಮಿತ್ತಾಂಶದಿಂದ ಮಾಯೆಯಲ್ಲಿ ದೃಷ್ಟಿಪಾತ ಮಾಡುತ್ತಾರೆ ಮತ್ತು ಅದ್ವೈತಾಚಾರ್ಯರು ಅಪವರ್ಥನ ಕಾರಣದಿಂದ ಬ್ರಹ್ಮಾಂಡವನ್ನು ಸೃಷ್ಟಿಸುತ್ತಾರೆ.

ಆದರೂ ಸಾಂಖ್ಯಮತದ ಅನುಸಾರ 'ಪ್ರಧಾನ' ಕಾರಣವಾಗಿದೆ, ಆದರೆ ಜಡದಿಂದ ಎಂದಿಗೂ ಸಹ ಜಗತ್ತಿನ ಸೃಷ್ಟಿ ಸಂಭವಿಸುವುದಿಲ್ಲ.

ಶ್ರೀಭಗವಂತನು ತನ್ನ ಸೃಷ್ಟಿಶಕ್ತಿಯನ್ನು ಪ್ರಧಾನದಲ್ಲಿ (ಜಡಶಕ್ತಿಯಲ್ಲಿ) ಬೀರುತ್ತಾನೆ, ಆಗ ಭಗವಂತನ ಶಕ್ತಿಯಿಂದಲೇ ಸೃಷ್ಟಿ–ಕಾರ್ಯವಾಗುತ್ತದೆ.

ಅದ್ವೈತಾಚಾರ್ಯರು ಒಂದು ಸ್ವರೂಪದಲ್ಲಿ ಕೋಟ್ಯಾಂತರ ಬ್ರಹ್ಮಾಂಡಗಳ

ಕರ್ತಾರರಾಗಿದ್ದಾರೆ ಹಾಗೂ ಅನ್ಯ ಸ್ವರೂಪದಲ್ಲಿ ಬ್ರಹ್ಮಾಂಡದ ಭರ್ತಾ-ಭರಣ-ಪೋಷಣಕರ್ತರಾಗಿದ್ದಾರೆ.॥೩೩॥

ಶ್ರೀಭಕ್ತಿಸಿದ್ಧಾಂತ ಸರಸ್ವತೀ ಠಾಕುರ್ 'ಪ್ರಭುಪಾದರು'

"ಅಹಮೇವಾಸಮೇವಾಗ್ರೆ" ಶ್ಲೋಕದಲ್ಲಿ 'ಅಹಮ್' ಶಬ್ದದಿಂದ ಯಾವ ವೈಶಿಷ್ಟ್ಯತೆಯು ನಿರೂಪಿತವಾಗಿದೆಯೋ ಹಾಗೂ ವ್ಯತಿರಿಕ್ತ ಭಾವದಿಂದ ಅದರಲ್ಲಿ ಯಾವುದು ಅವಶಿಷ್ಟತವಾಗಿರುವುದೋ- ಅದೇ 'ಅಹಂ'- ನಹಿನ ರೂಪದಲ್ಲಿ ನಿರ್ದಿಷ್ಟವಾಗಿದೆ. ಈ 'ಅನಹಂ'-ಕ್ರಿಯಾ ವಸ್ತುವಲ್ಲ, ಆದರೆ ವಸ್ತುವಿನ ಶಕ್ತಿಯಾಗಿದೆ. ವಸ್ತುವಿನ ಒಳಗೆ ಅವನ ಸಂಪೂರ್ಣ ಶಕ್ತಿಯ ಅಂತರ್ನಿಹಿತವಾದರೂ ಸಹ ಶಕ್ತಿ ಮತ್ತು ಶಕ್ತಿವಂತನ ನಿತ್ಯ ವೈಶಿಷ್ಟ್ಯತೆಯು ನೆಲಸಿರುತ್ತದೆ. ಯಾವ 'ಅಹಂ' ಶಬ್ದವಿರುವುದೋ, ಅದರ ಹೆಸರೇ 'ಮಾಯೆ'. ಮಾಯೆ ಎರಡು ಪ್ರಕಾರ ಕೆಲಸಮಾಡುತ್ತದೆ- ಒಂದು ಪ್ರಕಾಶಮಯಿ ಹಾಗೂ ಮತ್ತೊಂದು ಅಂಧಕಾರಮಯಿ (ಅಂದರೆ ಜ್ಞಾನ ಮತ್ತು ಅಜ್ಞಾನ). ನಿಮಿತ್ತಾಂಶದಿಂದ ಪ್ರಭಾಸಮಯಿ 'ಜೀವಮಾಯೆ', ನಿಯೋಗಿತಾಂಶದಿಂದ ಅಂಧಕಾರಮಯಿ 'ಗುಣಮಾಯಾ' ದ ಅರಿವಾಗುತ್ತದೆ. ಇದು ವೈಕುಂಠ-ವಸ್ತುವಿನ ಎರಡು ಶಕ್ತಿಗಳಾಗಿವೆ. ವಸ್ತುವಿನ ಅಂತರಂಗಶಕ್ತಿಯನ್ನು 'ಚಿಚ್ಛಕ್ತಿ' ಎಂದು ಕರೆಯುತ್ತಾರೆ ಹಾಗೂ ಆ ಚಿಚ್ಛಕ್ತಿಯಿಂದ ಪ್ರಕಟಿತವಾದ ಅಣುಚಿತ್ ಜೀವಿ ವಿಷ್ಣುವಿನ ಬಹಿರಂಗಶಕ್ತಿಯಿಂದ ಪ್ರಕಟಿತವಾದ ಈ ಪ್ರಾಕೃತ ಜಗತ್ತಿನಲ್ಲಿ ಅಳೆಯುವ (measuring tendency) ಧರ್ಮ ನಶ್ವರ ಭಾವದಿಂದ ಸ್ಥಿತವಾಗಿದೆ. ವೈಕುಂಠದಲ್ಲಿ ಅದು ನಿತ್ಯ ಸಂಸ್ಥಿತ (ಸತ್ವಯುಕ್ತ)ವಾದದ್ದು. ವಿಷ್ಣು ಮತ್ತು ವಿಷ್ಣುಮಾಯೆಯ ನಡುವೆ ಯಾವ ವಿಶೇಷ-ಧರ್ಮವು ಈ ಎರಡರ ಪರಿಚಯವನ್ನು ಕೊಡುತ್ತದೋ, ಆ ವಿಶೇಷ-ಧರ್ಮದ ಉಧ್ಧಿಷ್ಟ-ವಸ್ತು ಹಾಗೂ ಆ ಉಧ್ಧಿಷ್ಟ-ವಸ್ತುವಿನ ಶಕ್ತಿಯ ಸ್ವರೂಪಗತ ಪ್ರಾಪ್ತಿಗಾಗಿಯೇ ಈ ಎರಡು ಶ್ಲೋಕಗಳ ಪ್ರವೃತ್ತಿಯಾಗಿರುವುದು. ಭಗವತ್-ಸ್ವರೂಪದಿಂದ ಬೇರೆ ಯಾವ ವೃತ್ತಿಯ ಪ್ರಾಪ್ತವಾಗುತ್ತದೋ, ಅದೇ ಇಂದ್ರಿಯಜ್ಞಾನದ ಮೂಲಕ ಅಳೆಯಲಾಗುತ್ತದೆ.

ಅಧೋಕ್ಷಜ ಇಂದ್ರಿಯಜ್ಞಾನಕ್ಕೆ ಅತೀತ 'ಅಹಂ' ವಸ್ತುವಿನ ಪರಿಚಯವು ಅತನ್ನಿರಸನಕಾರಿ (ಇದು ಬ್ರಹ್ಮವಲ್ಲ, ಇದು ಬ್ರಹ್ಮವಲ್ಲ- ಎಂದು ಹೇಳುವ) ವ್ಯತಿರೇಕಭಾವದಿಂದ ನಿರ್ವಿಶಿಷ್ಟ (ನಿರ್ವಿಶೇಷ) ಜ್ಞಾನದಲ್ಲಿ ಪ್ರತಿಷ್ಠಿತಗೊಳಿಸುತ್ತಾರೆ. ಭಜನೀಯ ವಸ್ತುವಿನ ಅರಿವಿನ ಅಭಾವದಿಂದ ಪ್ರಾಪ್ತವಾಗುವ ಭೋಕ್ತೃ-ಭಾವ ಹಾಗೂ ಜಗತ್ತನ್ನು ಆಳಬೇಕೆಂಬ ಪ್ರಯಾಸೆ- ಅದು ಮಾಯಿಕ ವೃತ್ತಿ. ಇದರಲ್ಲಿ ನಿಷ್ಕಾಮ ಸೇವಾ-ಪ್ರವೃತ್ತಿಯ ಅಭಾವವಿರುತ್ತದೆ. ಭಜನೀಯ ವಸ್ತುವನ್ನು ಹೊರತು ಪಡಿಸಿ ಬೇರೆ ಅಂತಹ ವಿಮೋಹಿನೀ ಶಕ್ತಿಯ ಅರಿವುಂಟಾಗುವುದು ಸಾಧ್ಯವಿಲ್ಲ. ಪರಮಾತ್ಮನಲ್ಲಿ ಅರ್ಥಾತ್ 'ಅಹಂ' ವಸ್ತುವಿನಲ್ಲಿ ಯಾವುದರ ಅಧಿಷ್ಠಾನವು ಇಲ್ಲವೋ, ಅದೇ ಮಾಯೇ. ವಸ್ತುವಿನ ನಿಮಿತ್ತಾಂಶದ ಅಣುತ್ವ ಜೀವಾಮಾಯೆಯಿಂದ

ಪರಿಮಿತವಾಗುತ್ತದೆ. ವಸ್ತುವಿನ ನಿಯೋಗಿತಾಂಶದ ಅಣುತ್ವವು ಗುಣವ್ಯಕ್ತ ಜಗತ್ತಿನಲ್ಲಿ ಅಚಿತ್ ಪರಮಾಣು ರೂಪದಲ್ಲಿ ವಿಭಜನವಾಗುತ್ತದೆ. ಮಾಯಾಧೀಶನ ನೈಮಿತ್ತಿಕ ಹಾಗೂ ನಿಯೋಗಿತ ಸರ್ವಕಾರಣಗಳ-ಕಾರಣ ವಸ್ತುವಿನ ಮೂಲಕ ಕಾರಣ-ಜಲದಲ್ಲಿ ಈಕ್ಷಣ ರೂಪದಲ್ಲಿ ನಿತ್ಯ ಪ್ರತಿಷ್ಠಿತನಾಗಿದ್ದಾನೆ. ಹಾಗೆ ಚಿನ್ಮಯ ದರ್ಶನ ಮಿಶ್ರ-ಚಿತ್-ಅಚಿತ್-ಧರ್ಮಯುಕ್ತವಲ್ಲ. ಕಾರಣ-ಜಲದಲ್ಲಿ ನೆಲಸಿರುವ ಭಗವಂತನ ಆವಿರ್ಭಾವದಿಂದಲೇ ನಿತ್ಯ ವೈಕುಂಠ ಹಾಗೂ ನಶ್ವರ ಬ್ರಹ್ಮಾಂಡವು ಪ್ರಕಟಿತವಾಗಿದೆ. ವಸ್ತುವಿನ ಶಕ್ತಿ ಮಾಯಾ ಜಗತ್ತಿನಲ್ಲಿ ಎರಡು ಪ್ರಕಾರದ ಆಕಾರದಲ್ಲಿದೆ- ಭೋಕ್ತ ಹಾಗೂ ಭೋಗ್ಯಭಾವದಿಂದ ಅವಸ್ಥಿತವಾಗಿದೆ. ತದ್ರೂಪ-ವೈಭವ-ರಾಜ್ಯದಲ್ಲಿ ಚಿನ್ಮಯೀ ಪ್ರಕೃತಿ ನಿಯೋಗಾಂಶ ಸ್ವರೂಪಶಕ್ತಿಯೊಂದಿಗೆ ಅಭಿನ್ನ ಭಾವದಿಂದ ಸ್ಥಿತವಾಗಿದೆ. ಅಲ್ಲಿ ಶುದ್ಧಜೀವ ಮಾಯೆಯನ್ನು ತನ್ನ ಭೋಕ್ತೃ-ರೂಪದಲ್ಲಿ ಸ್ಥಾಪಿಸುವ ಬದಲಾಗಿ (ಸ್ವಯಂ) ಸಂಧನೀಶಕ್ತಿಯ ಅಂಶವಿಶೇಷವೆಂದು ತಿಳಿದು ಹ್ಲಾದಿನಿಯೊಂದಿಗೆ ಭೇದಾಭೇದದ ಅಸ್ಮಿತೆಯನ್ನು (ಅಹಂಕಾರವನ್ನು) ಸ್ಥಾಪಿಸುತ್ತದೆ. ಅಪ್ರಾಕೃತ ಜಗತ್ತಿನಲ್ಲಿ ಮುಕ್ತ-ಜೀವಿಯ ಮಾಯಿಕ ನಶ್ವರ ಪರಿವರ್ತಶೀಲತೆ ಕಣಿಸುವುದಿಲ್ಲ. ಅಲ್ಲಿ ಭಕ್ತಿ-ಯೋಗಮಾಯೆಯ ಅಧೀನದಲ್ಲಿ ಶಕ್ತಿಗಳು ಭಗವತ್-ಸೇವೆಯಲ್ಲಿ ಸರ್ವದಾ ನಿಯುಕ್ತವಾಗಿರುತ್ತದೆ. ವಸ್ತುಧರ್ಮದ ಪ್ರಭಾವದಿಂದ ಅದು ಅನುಪಮೇಯ, ಹೇಯ, ಸೀಮಿತ, ಅಭಾವ ಇತ್ಯಾದಿ ಯಾವುದೇ ಪ್ರಕಾರದ ಕೆಳಮಟ್ಟ ಸ್ಥಾನವಿರುವುದಿಲ್ಲ. ॥೩೩॥

ಶ್ರೀಶ್ರೀನಿವಾಸಾಚಾರ್ಯಪಾದರು

ನನು, ಇಮಮರ್ಥಂ ಸರ್ವೇ ಕಥಂ ನಾನುಭವನ್ತಿ? ತತ್ರಾಹ- ಋತೇಽರ್ಥಮಿತಿ। ಏತದೇವ ಪರಮಕೌತುಕಂ; ತತ್ ತಾಂ ಭ್ರೂಕ್ಷೇಪೇಣ ಸಕಲಭುವನಂ ನಖರಾಗ್ರ ನರ್ತ್ತಯನ್ತೀಮ್ ಆತ್ಮನೋ ಮಮ ಮಾಯಾಂ ವಿದ್ಯಾತ್। ಋತೇ ಸತ್ಯೇ, ಚಾತ್ಮನಿ ಮಯಿ ಇಮಮ್, ಅರ್ಥಂ ಪರಮಪುರುಷಾರ್ಥರೂಪಂ ಪ್ರೇಮಾಣಂ, ಯತ್ ಯಸ್ಯಾಃ ಪ್ರಭಾವೇನ ನ ಕರೋತಿ, ನಞಃ ಪ್ರಥಮಪದೇನಾನ್ವಯಃ। ಆತ್ಮನಿ ಆತ್ಮೌಪಮ್ಯೇಷು ಸ್ತ್ರೀಪುತ್ರಾದಿಷು ಪ್ರತೀಯೆತ ಕರೋತಿ ಚ; ವೈಪರೀತ್ಯೆ ದೃಷ್ಟಾನ್ತಃ- ಯಥಾಭಾಸಃ ಘಟಾದಿಜ್ಞಾನಃ ನ ಕರೋತಿ, ತಮಸ್ತು ಕರೋತ್ಯೇವ। ಮಮ ಮಾಯೈವ ಆಮತಿಶಯೇನ, ವಿದ್ಯಾತ್ ವಿದ್ಯಾಮತ್ತೀತಿ ॥೩೩॥

ಭಾವಾನುವಾದ- ಈ ಎಲ್ಲ ತತ್ವಗಳ ಅನುಭವವನ್ನು ಎಲ್ಲ ಜನರು ಏತಕ್ಕಾಗಿ ಅನುಭವಿಸಲಾರರು? ಎಂಬ ಜಿಜ್ಞಾಸವು ಉಂಟಾಗಬಹುದು, ಇದಕ್ಕೆ ಉತ್ತರದಲ್ಲಿ ಹೇಳುತ್ತಾರೆ- ಇದೇ ಪರಮ ಕೌತುಕ ಅರ್ಥಾತ್ ಆಶ್ಚರ್ಯಕರವಾದ ವಿಷಯ ಹಾಗೂ ಈ ಕೌತುಕವನ್ನು ನನ್ನ ಮಾಯೆಯ ಪ್ರಭಾವವೆಂದು ಅರ್ಥಮಾಡಿಕೊಳ್ಳಬೇಕು. ಮಾಯೆಯ ಸ್ವರೂಪವನ್ನು ವಿವರಿಸುವಾಗ ಹೇಳುತ್ತಾರೆ- ಯಾವುದು ಕಣ್‌ಹುಬ್ಬು-ಭಂಗಿಯಿಂದಲೇ ಅರವತ್ತಾರು ಭುವನಗಳನ್ನು ನಖಾಗ್ರದಲ್ಲಿ ಕುಣಿಸುತ್ತಿರುತ್ತದೋ, ಅದೂ ನನ್ನ ಮಾಯೆ. ಅದರ ಕಾರ್ಯವೇನೆಂದರೆ- ಸತ್ಯಸ್ವರೂಪ ಪರಮಾತ್ಮನಲ್ಲಿ

ಪರಮ-ಪುರುಷಾರ್ಥವಾದ ಪ್ರೇಮ ಉಂಟಾಗದಂತೆ ಮಾಡುತ್ತದೆ ಹಾಗೂ ಅಸತ್ಯಸ್ವರೂಪ ಆತ್ಮ-ತುಲ್ಯ ಸ್ತ್ರೀ-ಪುತ್ರ ಇತ್ಯಾದಿಯಲ್ಲಿ ಪ್ರೇಮವನ್ನು ಸ್ಥಾಪಿಸುತ್ತದೆ. ಈ ಪ್ರಕಾರದ ವಿಪರೀತತೆಯ ಉದಾಹರಣೆ- ಚಿನ್ಮಯ ವಸ್ತು 'ಆಭಾಸ' ಅಂದರೆ ಹೊಳೆಯುತ್ತಿರುವಾಗ ಮಡಿಕೆ-ಕುಡಿಕೆ ವಸ್ತುಗಳ ಬೇರೆ-ಬೇರೆ ಸತ್ಯದ ಅನುಭವವು ಆಗುವುದಿಲ್ಲ. ಚಿನ್ಮಯ ವಸ್ತುವಿನ ಸಂಬಂಧದಲ್ಲಿ 'ತಮ' ಅರ್ಥಾತ ಅಜ್ಞಾನವಿರುವ ಕಾರಣ ಇದ್ದಂತಹ ಘಟ-ಪಟಾದಿ ಜ್ಞಾನದ ಸಧನೆಯಾಗುತ್ತದೆ ಅರ್ಥಾತ್ ಇಷ್ಟ-ವಸ್ತು ವಿಷಯಯಿಕ ಅಜ್ಞಾನವೇ ಮಡಿಕೆ-ಕುಡಿಕೆಗಳ ಬೇರೆ-ಬೇರೆ ವಸ್ತುಗಳ ಅಸ್ತಿತ್ವದ ಜ್ಞಾನ ಹುಟ್ಟಿಸುತ್ತದೆ. ನನ್ನ ಇದೇ ಮಾಯೆ ವಿಧ್ಯಯನ್ನು ಸಂಪೂರ್ಣವಾಗಿ ಮರೆಮಾಡುತ್ತದೆ. ॥೩೩॥

ಶಷ್ಠ–ಶ್ಲೋಕ

ಚತುಃಶ್ಲೋಕೀ ಅಂತರ್ಗತ ತೃತೀಯ ಶ್ಲೋಕ – ಶ್ರೀಭಗವಂತನ ಮೂಲಕ ತನ್ನ ಚಿತ್–ವಿಲಾಸ ಪಾತ್ರದ ಪ್ರಕಾರ ಅಥವಾ ಪ್ರೇಮದ ರಹಸ್ಯ ಸ್ವರೂಪವಾಗುವ ವರ್ಣನೆ

ಯಥಾ ಮಹಾನ್ತಿ ಭೂತಾನಿ ಭೂತೇಷೂಚ್ಚಾವಚೇಷ್ವನು ।
ಪ್ರವಿಷ್ಟಾನ್ಯಪ್ರವಿಷ್ಟಾನಿ ತಥಾ ತೇಷು ನ ತೇಷ್ವಹಮ್ ॥

(ಶ್ರೀಮದ್ಭಾ ೨/೯/೩೪)

ಅನ್ವಯ

ಯಥಾ ಮಹಾನ್ತಿ ಭೂತಾನಿ (ಯಾವ ರೀತಿ ಪೃಥ್ವಿ, ಜಲ, ಅಗ್ನಿ ಇತ್ಯಾದಿ ಮಹಾಭೂತ) ಉಚ್ಚಾವಚೇಷು (ದೇವ–ದೈತ್ಯ ಇತ್ಯಾದಿ ಉಚ್ಚ–ನೀಚ) ಭೂತೇಷು (ಪ್ರಾಣಿಗಳ ದೇಹಗಳ) ಅನು (ಸೃಷ್ಟಿಯ ತದನಂತರ) ಪ್ರವಿಷ್ಟಾನಿ (ಪ್ರವಿಷ್ಟವಾಗಿದ್ದರು) [ಸಹ] ಅಪ್ರವಿಷ್ಟಾನಿ (ಅಪ್ರವಿಷ್ಟ ರೂಪದಿಂದ) [ಪ್ರಾರಂಭದಿಂದಲೇ ಸ್ವತಂತ್ರ ಕಾರಣ ರೂಪದಿಂದ ನೆಲಸಿರುತ್ತದೆ] ಮತ್ತು (ಅದೇ ಪ್ರಕಾರ) ಅಹಂ (ನಾನು) [ಸಹ] ತೇಷು (ಭೂತಮಯ ಜಗತ್ತಿನಲ್ಲಿ ಹಾಗೂ ಎಲ್ಲ ಪ್ರಾಣಿಗಳಲ್ಲಿ) [ಪ್ರವಿಷ್ಟನಾಗಿದ್ದರು ಸಹ] ನ ತೇಷು (ಅದರಲ್ಲಿ ಅಪ್ರವಿಷ್ಟನಾಗಿದ್ದೇನೆ) ॥೩೪॥

ಅನುವಾದ

ಯಾವ ಪ್ರಕಾರ ಪೃಥ್ವಿ, ಜಲ, ಅಗ್ನಿ ಇತ್ಯಾದಿ ಮಹಾಭೂತಗಳು ದೇವ–ರಾಕ್ಷಸ ಇತ್ಯಾದಿ ಉಚ್ಚ–ನೀಚ ಭೂತಗಳಲ್ಲಿ (ಪ್ರಾಣಿಗಳಲ್ಲಿ) ಪ್ರವೇಶಿಸಿದ್ದರೂ ಸಹ ಅಪ್ರವಿಷ್ಟ ರೂಪದಲ್ಲಿ ಸ್ವತಂತ್ರವಾಗಿ ನೆಲಸಿರುತ್ತದೆ, ಅದೇ ಪ್ರಕಾರ ನಾನೂ ಸಹ ಭೂತಮಯವಾದ ಜಗತ್ತಿನ ಎಲ್ಲ ಪ್ರಾಣಿಗಳಲ್ಲಿ (ಸತ್ತ್ವಾಶ್ರಯರೂಪ ಪರಮಾತ್ಮಭಾವದಿಂದ) ಪ್ರವಿಷ್ಟನಾಗಿದ್ದರು ಸಹ ಪೃಥಕ ಭಗವತ್–ಸ್ವರೂಪದಲ್ಲಿ ಎಲ್ಲರ ಒಳಗೂ ಮತ್ತು ಹೊರಗು ಸ್ಫುರಿತನಾಗುತ್ತೇನೆ ॥೩೪॥

ಶ್ರೀಭಕ್ತಿವಿನೋದ ಠಾಕುರ್

ಈಗ ರಹಸ್ಯತತ್ತ್ವವನ್ನು ಶ್ರವಣಿಸು. ಈ ಜಡಜಗತ್ತು ಮಿಥ್ಯವಲ್ಲ, ಇದು ನನ್ನ ಶಕ್ತಿಯ ಪರಿಣತಿ ಮತ್ತು ನನ್ನ ಸತ್–ರೂಪದಲ್ಲಿ ಒಳಗೊಂಡಿರುವ ಕಾರಣ ಅದು ಸತ್ಯ. ಸತ್ಯವಾದರೂ ಸಹ ಇದರ ಆಗಮಾಪಾಯ (ಪುನಃ–ಪುನಃ ಬರುತ್ತದೆ ಮತ್ತು ಹೋಗುತ್ತದೆ) ಪ್ರಕಾಶ ನಶ್ವರವಾದದ್ದು. ಈ ಜಗತ್ತಿನಲ್ಲಿ ಎಲ್ಲ ಮಹಾಭೂತವು ಉಚ್ಚ–ನೀಚ ಪ್ರಾಣಿಗಳಲ್ಲಿ ಪ್ರವಿಷ್ಟವಾದರೂ ಸಹ ಮಹಾಭೂತ ರೂಪದಲ್ಲಿ ಅವುಗಳಲ್ಲಿ ಪ್ರವಿಷ್ಟವಾಗಿಲ್ಲ. ಅದೇ ಪ್ರಕಾರ ನಾನೂ ಸಹ ಶಕ್ತಿ–ಪರಿಣತ ಜಗತ್ತಿನಲ್ಲಿ ಅನುಪ್ರವಿಷ್ಟನಾಗಿದ್ದರೂ ಸಹ ನನ್ನ ಚಿತ್–ಧಾಮ ಗೋಲೋಕ–ವೃಂದಾವನ ಮತ್ತು

ಪರವ್ಯೋಮಾದಿಗಳಲ್ಲಿ ನನ್ನ ಸ್ವರೂಪದಲ್ಲಿ ಪೂರ್ಣ ರೂಪದಲ್ಲಿ ಸ್ಥಿತನಾಗಿದ್ದೇನೆ. ಜೀವಶಕ್ತಿಯ ಪರಿಣತರೂಪವು ಸಮಸ್ತ ಜೀವಿ ಸ್ವಭಾವಿಕವಾಗಿ ನನ್ನ ದೀನ ದಾಸ. ಅವನ ಒಳಗೆ ಪರಮಾತ್ಮರೂಪದಲ್ಲಿ ಪ್ರವಿಷ್ಟನಾಗಿದ್ದರೂ ಸಹ ನನ್ನ ಚಿತ್-ಧಾಮದಲ್ಲಿ ಪ್ರೇಮ-ಪ್ರಾಪ್ತ ಜೀವಿಗಳೊಂದಿಗೆ ನನ್ನ ಲೀಲೆಗಳು ನಿರಂತರವು ನಡೆಯುತ್ತಿರುತ್ತದೆ. (ಶ್ರೀಭಾವತಾರ್ಕಮರೀಚಿಮಾಲಾ ೧೦/೬).

ಯಾವ ಪ್ರಕಾರ ಸಮಸ್ತ ಮಹಾಭೂತ ಬೃಹತ್ ಮತ್ತು ಕ್ಷುದ್ರ ಭೂತಗಳಲ್ಲಿ (ಪ್ರಾಣಿಗಳಲ್ಲಿ) ಪ್ರವಿಷ್ಟವಾಗಿದ್ದರೂ ಸಹ ಅಪ್ರವಿಷ್ಟ ರೂಪದಲ್ಲಿ ಸ್ವತಂತ್ರ ರೂಪದಿಂದ ಸ್ಥಿತವಾಗಿರುತ್ತದೆ, ಅದೇ ಪ್ರಕಾರ ನಾನು ಪ್ರಾಣೀಮಯ ಜಗತ್ತಿನಲ್ಲಿ ಎಲ್ಲ ಪ್ರಾಣಿಗಳಲ್ಲಿ ಸತ್ತ್ವಾಶ್ರಯರೂಪ ಪರಮಾತ್ಮಭಾವದಲ್ಲಿ ಪ್ರವಿಷ್ಟನಾಗಿದ್ದರೂ ಸಹ ಪೃಥಕ ಭಗವತ್-ರೂಪದಲ್ಲಿ ನಿತ್ಯ ವಿರಾಜಮಾನನಾಗಿರುತ್ತೇನೆ ಮತ್ತು ಭಕ್ತರ ಏಕಮಾತ್ರ ಪ್ರೇಮಸ್ಪದನಾಗಿದ್ದೇನೆ. ತಾತ್ಪರ್ಯವೇನೆಂದರೆ ಈ ಪೃಥ್ವಿ, ಜಲ, ತೇಜ, ವಾಯು ಮತ್ತು ಆಕಾಶ ರೂಪ ಮಹಾಭೂತವು ಪಂಚಾಕೃತವಾಗಿ ಅಂದರೆ ಐದು ಸೇರಿ ಯಾವ ಪ್ರಕಾರ ಸ್ಥೂಲ ಜಗತ್ತನ್ನು ಪ್ರಕಾಶಗೊಳಿಸುತ್ತದೋ ಮತ್ತು ಅದರ ಉಪಕರಣರೂಪದಲ್ಲಿ ಅದರ ನಡುವೆ ಸ್ಥಿತವಾಗಿದ್ದರೂ ಸಹ ಮಹಾಭೂತ-ಸ್ಥಿತಿಯಲ್ಲಿ ಸ್ವತಂತ್ರವಾಗಿದೆಯೋ, ಅದೇ ಪ್ರಕಾರ ಚಿನ್ಮಯ ಪರಮೇಶ್ವರನು ತನ್ನ ಜಡಶಕ್ತಿ ಮತ್ತು ಜೀವಶಕ್ತಿಯ ಮೂಲಕ ಜಗತ್ತನ್ನು ಸೃಷ್ಟಿಸಿ ತನ್ನ ಒಂದು ಅಂಶದಿಂದ ಜಗತ್ತಿನಲ್ಲಿ ಸರ್ವವ್ಯಾಪಿಯಾಗಿದರೂ ಸಹ ತನ್ನ ಚಿತ್-ಧಾಮದಲ್ಲಿ ಪೂರ್ಣ ಚಿತ್-ವಿಗ್ರಹದಲ್ಲಿ ನಿತ್ಯ ವಿರಾಜಮಾನಗಿರುತ್ತಾನೆ. ಪುನಃ ಚಿತ್-ವಿಗ್ರಹದ ಕಿರಣ-ಪರಮಾಣುರೂಪ ಜೀವಿಯು ಶುದ್ಧ ಪ್ರೇಮಮಾರ್ಗ (ರಾಗಮಾರ್ಗ) ಮೂಲಕ ಅವನ ಆಸ್ವಾದನೆ ಮಾಡುತ್ತಾರೆ- ಇದೇ ರಹಸ್ಯ. (ಶ್ರೀಚೈತನ್ಯಚರಿತಾಮೃತ ೧೦/೬)॥೩೪॥

ಶ್ರೀವಿಶ್ವನಾಥ ಚಕ್ರವರ್ತಿಪಾದರು

ಏವಂ ಮಾಯಂ-ಯೋಗಮಾಯಾಂಚ ತನ್ತ್ರೇಣೈವ ಲಕ್ಷಯಿತ್ವಾ, ತಾಭ್ಯಾಮಧಿಕೃತೇಷು ಸಗುಣ-ನಿರ್ಗುಣಲೋಕೇಷು ಬ್ರಹ್ಮಣಾ ಪೃಷ್ಟಂ ಸ್ವಕ್ರೀಡಾಪ್ರಕಾರಂ ತನ್ತ್ರೈಣೈವಾಹ-ಯಥೇತಿ । ಯಥಾ ಮಹಾಭೂತಾನ್ಯಾಕಾಶಾದೀನಿ ಭೂತೇಷು ದೇವಮನುಷ್ಯತಿರ್ಯಗಾದಿಷು ಅನುಪ್ರವಿಷ್ಟಾನಿ ತೇಷುಪಲಭ್ಯಮಾನತ್ವಾತ್ ಅಪ್ರವಿಷ್ಟಾನಿ ಚ ಪೃಥಗ್ವಿದ್ಯಮಾನತ್ವಾತ್, ತಥಾ ತೇಷು ಭೂತಭೌತಿಕೇಷ್ವಹಂ ಪ್ರವಿಷ್ಟಃ ಸನ್ನಪಿ ಪೃಥಕ್ ಶುದ್ಧಸತ್ವಾತ್ಮಕ-ಸ್ವಧಾಮನಿ ವರ್ತಮಾನತ್ವಾದಪ್ರವಿಷ್ಟಶ್ಚಾಸ್ಮಿ । ಕಿಂತು, ಮಹಾಭೂತಾನಾಮಚೇತನತ್ವಾದೇವ ಭೂತೇಷು ಪ್ರವೇಶ ಆಸಂಗರಹಿತಃ, ಮಮ ತು ಚೇತನತ್ವೇऽಪಿ ಆಕಾಶವದಸೌ ಸ್ವಗೃಹೇಷ್ವಲಿಪ್ತ ಏವ ವಸತೀತಿವತ್ ತೇಷು ಸರ್ವೇಷು ಪ್ರವೇಷ-ನಿಯಮನ-ಪಾಲನಾದೀನ್ಯಾಸಂಗರ ಹಿತಾಪೀತ್ಯೇವಂಭೂತಾ ಭೂತೇಷು ಮಾಯಿಕೇಷ್ವಾಸಂಗರಹಿತೈವ ಕ್ರೀಡೇತಿ ಭಾವಃ । ತಥಾ ತೇಷು ಪ್ರಸಿದ್ಧೇಷು ನತೇಷು ಪ್ರಣತಭಕ್ತಜನೇಷು ಪ್ರವಿಷ್ಟೋऽನ್ತಃಕರಣೇಷು ದರ್ಶನಂ ದಾತುಂ, ತಥಾ ಅಪ್ರವಿಷ್ಟಃ ಬಹಿಃಸ್ಥಿತಶ್ಚ ತೇಷಾಂ ನಯನೇಷು ಸ್ವಸೌನ್ದರ್ಯಮರ್ಪಯಿತುಂ, ನಾಸಾಸು

ಸ್ವಸೌರಭ್ಯಂ ಪ್ರವೇಶಯಿತುಂ, ತೈಃ ಸಹೋಕ್ತಿಪ್ರಯುಕ್ತೀ ಕುರ್ವನ್ ತೇಷಾಂ ಕರ್ಣೇಷು ಸ್ವಸೌಸ್ವರ್ಯಾಮೃತಂ ಪೂರಯಿತುಂ, ಸ್ವಪರ್ಶನಾಲಿಂಗನಾದಿ ದಾನೈಸ್ತೇಷಾಮಂಗೇಷು ಸ್ವೀಯಸೌಕುಮಾರ್ಯ ಮಾಧುರ್ಯಾದಿಕಂ ಚಾನುಭಾವಯಿತುಮಿತಿ ತೇಷು ಗುಣಾತೀತ ಭಕ್ತೇಷ್ವನ್ತರ್ಬಹಿರ್ಮರ್ಯಾ ತ್ಯಕ್ತುಮಶಕ್ಯೇಷ್ವಾಸಂಗಸಹಿತೈವ ಮಮ ಕ್ರೀಡೇತಿ ಭಾವಃ ॥೩೪॥

ಭಾವಾನುವಾದ– ಈ ರೀತಿ ಮಾಯೆ ಮತ್ತು ಯೋಗಮಾಯೆಯನ್ನು ವಿಸ್ತಾರವಾಗಿ ನಿರೂಪಣೆಮಾಡಿ, ಶ್ರೀಬ್ರಹ್ಮನ ಮೂಲಕ ಕೇಳಲ್ಪಟ್ಟ ಆ ಮಾಯೆ ಮತ್ತು ಯೋಗಮಾಯೆಯ ಅಧಿಕೃತವಾಗಿ ಸುಗುಣ ಮತ್ತು ನಿರ್ಗುಣ ಲೋಕಗಳಲ್ಲಿ ತನ್ನ ಚಿತ್–ವಿಲಾಸ–ಕ್ರೀಡೆಯ ಪ್ರಕಾರದ ವಿಷಯ ಶ್ರೀಭಗವಂತನು ವಿಸ್ತಾರಪೂರ್ವಕವಾಗಿ 'ಯಥಾ' ಇತ್ಯಾದಿ ಶ್ಲೋಕಗಳಲ್ಲಿ ಹೇಳುತ್ತಿದ್ದಾನೆ. ಯಾವ ರೀತಿ ದೇವ, ಮನುಷ್ಯ ಮತ್ತು ಕೀಳು ಜನ್ಮ (ಪಶು–ಪಕ್ಷಿ) ಮುಂತಾದ ಪ್ರಾಣಿಗಳಲ್ಲಿ ಆಕಾಶ ಇತ್ಯಾದಿ ಮಹಾಭೂತಗಳ ಸತ್ವವು ನೆಲಸಿರುವ ಕಾರಣ ಆ ಎಲ್ಲ ಪ್ರಾಣಿಗಳಲ್ಲಿ ಸಮಸ್ತ ಮಹಾಭೂತ ಅನುಪ್ರವೇಶಮಾಡಿದೆ ಮತ್ತು ಪುನಃ ಪೃಥಕವಾಗಿ ನೆಲಸಿರುವ ಕಾರಣ ಅವು (ಆಕಾಶಾದಿ ಮಹಭೂತವು) ಪ್ರಣಿಗಳಲ್ಲಿ ಅಪ್ರವಿಷ್ಟವಾಗಿಯೂ ಇದೆ, ಅದೇ ಪ್ರಕಾರ ನಾನು ಈ ಪ್ರಾಣಿಗಳು ಮತ್ತು ಭೌತಿಕ ವಸ್ತುಗಳಲ್ಲಿ ಪ್ರವಿಷ್ಟನಾದರೂ ಸಹ ಪೃಥಕ ಶುದ್ಧ–ಸತ್ವಾತ್ಮಕ ತನ್ನ ಧಾಮದಲ್ಲಿ (ಶ್ರೀಗೋಲೋಕ–ವೃಂದಾವನ ಇತ್ಯಾದಿ ಧಾಮದಲ್ಲಿ) ನೆಲೆಸಿರುವ ಕಾರಣ ಈ ಸಮಸ್ತ ಪದಾರ್ಥಗಳಲ್ಲಿ ಅಪ್ರವಿಷ್ಟನಾಗಿರುತ್ತೇನೆ. ಆದರೆ ವಿಚಿತ್ರವೇನೆಂದರೆ ಮಹಾಭೂತಗಳು ಅಚೇತನವಾದ ಕಾರಣ ಸಮಸ್ತ ಪ್ರಾಣಿಗಳಲ್ಲಿ ಅವನ ಪ್ರವೇಶದ ಆಸಕ್ತಿಯಿರುತ್ತದೆ, ಆದರೆ ನನ್ನ ಚೇತನವಾದರೂ ಸಹ "ಆಕಾಶದಂತೆ ನಿರ್ಲಿಪ್ತವಾಗಿಯೇ ಅದು ತನ್ನ ಗೃಹದಲ್ಲಿ ವಾಸಮಾಡುತ್ತದೆ"– ಈ ವಚನದಂತೆ, ಆ ಎಲ್ಲ ಪ್ರಣಿಗಳು ಮತ್ತು ವಸ್ತುಗಳು ನನ್ನ ಪ್ರವೇಶ, ನಿಯಮ ಅಂದರೆ ಶಾಸನ ಮತ್ತು ಪಾಲನೆ ಇತ್ಯಾದಿ ಯಾವ ಕ್ರಿಯೆಗಳಿವೆಯೋ, ಅವೇಲ್ಲವು ಆಸಕ್ತಿರಹಿತವಾದದ್ದು. ಇದೇ ಪ್ರಕಾರದಿಂದ ಪ್ರಾಣಿಗಳು ಮತ್ತು ವಸ್ತುಗಳು ನನ್ನ ಆಸಕ್ತಿರಹಿತ ಲೀಲೆಗಳಾಗುತ್ತವೆ.

ಆದರೆ ಪ್ರಸಿದ್ಧ 'ನತೇಷು' ಅರ್ಥಾತ್ ನಮ್ರ ಭಕ್ತರ ಅಂತರಾಳದಲ್ಲಿ ದರ್ಶನ ಪ್ರಸಾದಿಸಲೆಂದೇ ನಾನು ಅವರಲ್ಲಿ ಪ್ರವೇಶಿಸಿದ್ದೇನೆ. ಹಾಗೂ ಅವರ ಕಣ್ಣುಗಳಿಗೆ ನನ್ನ ಸೌಂದರ್ಯವನ್ನು ತೋರಿಸಲೆಂದು, ಅವರ ನಾಸಿಕದಲ್ಲಿ ನನ್ನ ಅಂಗಗಳ ಸುಗಂಧ ಸೇವಿಸಲೆಂದು, ಅವರೊಂದಿಗೆ ಮಾತುಕತೆ ನಡೆಸುತ್ತ ಅವರ ಕಿವಿಗಳಲ್ಲಿ ನನ್ನ ಮಧುರ ಸ್ವರದ ಅಮೃತದ ಲಹರಿ ಹರಿಸಲೆಂದು, ಸ್ಪರ್ಶ ಮತ್ತು ಆಲಿಂಗನೆ ಇತ್ಯಾದಿ ದಾನ ಮೂಲಕ ಅವರ ಅಂಗಗಳಲ್ಲಿ ನನ್ನ ಸುಖಕರ ಮತ್ತು ಮಾಧುರ್ಯ ಇತ್ಯಾದಿ ಅನುಭವಿಸಲೆಂದು ನಾನು ಅಪ್ರವಿಷ್ಟ ಅಂದರೆ ಹೊರಗೆ ಸ್ಥಿತನಾಗಿರುತ್ತೇನೆ. ನಾನು ಅಂತಹ ಗುಣಾತೀತ ಭಕ್ತರನ್ನು ಪರಿತ್ಯಾಗ ಮಾಡಲು ಅಸಮರ್ಥನು, ಆದ್ದರಿಂದ ಆ ಭಕ್ತರ ಒಳಗು ಮತ್ತು ಹೊರಗು ಪರಮ ಆಸಕ್ತಿ ಸಹಿತವಾದ ನನ್ನ ನಿತ್ಯ ವಿಲಾಸವಿರುತ್ತದೆ– ಈ ಭಾವವಿದೆ. ॥೩೪॥

ಶ್ರೀಕೃಷ್ಣದಾಸ ಕವಿರಾಜ ಗೋಸ್ವಾಮೀಪಾದರು

(ಕ)

ಆಮಾತೆ ಯೇ 'ಪ್ರೀತಿ', ಸೇಇ 'ಪ್ರೇಮ'- 'ಪ್ರಯೋಜನ' ।
ಕಾರ್ಯದ್ವಾರೆ ಕಹಿ ತಾರ 'ಸ್ವರೂಪ'-ಲಕ್ಷಣ ॥

ಪಂಚಭೂತ ಯೈಛೇ ಭೂತೇರ ಭಿತರೇ-ಭಾಹಿರೇ ।
ಭಕ್ತಗಣೇ ಸ್ಫುರಿ ಆಮಿ ಬಾಹಿರೇ-ಅನ್ತರೇ ॥

ಭಕ್ತ ಆಮಾ ಬಾನ್ಧಿಯಾಛೆ ಹೃದಯ-ಕಮಲೆ ।
ಯಾಂಹಾ ನೇತ್ರ ಪಡೇ, ತಾಹಾಂ ದೇಖಯೆ ಆಮಾರೆ ॥
(ಚೈ. ಚ. ಮ. ೨೫/೧೨೨-೧೨೩, ೧೨೫)

(ಖ)

'ವಿಸೃಜತಿ ಹೃದಯಂ ನ ಯಸ್ಯ ಸಾಕ್ಷಾದ್ಧರಿರವಶಾಭಿಹಿತೋऽಪ್ಯಘೌಘನಾಶಃ ।
ಪ್ರಣಯ-ರಸನಯಾ ಧೃತಾಙ್ಘ್ರಿಪದ್ಮಃ ಸ ಭವತಿ ಭಾಗವತಪ್ರಧಾನ ಉಕ್ತಃ ॥'
(ಚೈ. ಚ. ಮ. ೨೫/೧೨೬ ನ ಉದ್ಧೃತ ಶ್ರೀಮದ್ಭಾ೧೦/೩೦/೪)

(ಗ)

'ಗಾಯನ್ತ್ಯ ಉಚ್ಚೈರಮುಮೇವ ಸಂಹತಾ ವಿಚಿಕ್ಯುರುನ್ಮತ್ತಕವದ್ವನಾದ್ವನಮ್ ।
ಪಪ್ರಚ್ಛುರಾಕಾಶವದನ್ತರಂ ಬಹಿರ್ಭೂತೇಷು ಸನ್ತಂ ಪುರುಷಂ ವನಸ್ಪತೀನ ॥'
(ಚೈ. ಚ. ಮ . ೨೫/೧೨೮ ನ ಉದ್ಧೃತ ಶ್ರೀಮದ್ಭಾ ೧೦/೩೦/೪)

(ಘ)

ಸರ್ವದಾ ಈಶ್ವರ-ತತ್ತ್ವ ಅಚಿನ್ತ್ಯಶಕ್ತಿ ಹಯ ॥

ಆಮಿ ತ' ಜಗತೇ ಬಸಿ, ಜಗತ್ ಆಮಾತೆ ।
ನಾ ಆಮಿ ಜಗತೇ ಬಸಿ, ನಾ ಆಮಾ ಜಗತೆ ॥

ಅಚಿನ್ತ್ಯ ಐಶ್ವರ್ಯ ಏಇ ಜಾನಿಹ ಆಮಾರ ।
ಏಇ ತ' ಗೀತಾರ ಅರ್ಥ ಕೈಲ ಪರಚಾರ ॥
(ಚೈ. ಚ. ಆ. ೫/೮೮-೯೦)

(ಚ)

ಅತಏವ ಭಾಗವತೇ ಏಇ 'ತಿನ' ಕಯ ।
ಸಂಬಂಧ-ಅಭಿಧೇಯ-ಪ್ರಯೋಜನ-ಮಯ॥
(ಚೈ. ಚ. ಮ. ೨೫/೧೨೯)

ಭಾವಾನುವಾದ- (ಕ) ನನ್ನಲ್ಲಿ ಯಾವ ಪ್ರೀತಿಯಿದೆಯೋ, ಅದು 'ಪ್ರೇಮ' ರೂಪಿ 'ಪ್ರಯೋಜನ'ವಾದದ್ದು. ಈಗ ನಾನು ಆ ಪ್ರೇಮದ ಸ್ವರೂಪ-ಲಕ್ಷಣವನ್ನು ವ್ಯಾವಹಾರಿಕ ರೂಪದಲ್ಲಿ (ಅಂದರೆ ಅದರ ಕಾರ್ಯಾನುಸಾರ) ಹೇಳುತ್ತೇನೆ.

ಯಾವ ರೀತಿ ಪಂಚಭೂತಗಳು ಸಮಸ್ತ ಪ್ರಾಣಿಗಳ ಹೊರಗು ಮತ್ತು ಒಳಗು ನೆಲಸಿರುತ್ತದೋ, ಅದೇ ರೀತಿ ನಾನೂ (ಭಗವಂತನೂ) ಸಹ ಭಕ್ತರ ಹೊರಗು ಮತ್ತು ಒಳಗು (ಹೃದಯದಲ್ಲಿ) ಸ್ಫುರಿತನಾಗುತ್ತೇನೆ.

ವಿಶುದ್ಧ ಭಕ್ತಜನರು ಪ್ರೇಮರೂಪ ಪಾಶದಿಂದ ನನ್ನನ್ನು ತಮ್ಮ ಹೃದಯದ ಕಮಲಗಳಲ್ಲಿ ಕಟ್ಟಿಹಾಕುತ್ತಾರೆ. ಆದ್ದರಿಂದ ಎಲ್ಲೇ ಅವರ ದೃಷ್ಟಿ ಬಿದ್ದರು, ಅವರು ಎಲ್ಲೆಲ್ಲು ನನ್ನನ್ನೇ ಕಾಣುತ್ತಾರೆ.

(ಖ) ಅಸ್ಸಹಾಯಕ ಸ್ಥಿತಿಯಲ್ಲೂ ಸಹ ಯಾರ ಹೆಸರನ್ನು ಉಚ್ಚರಿಸಿದರೆ ಆ ಉಚ್ಚರಿಸಿದವನ ಸಮಸ್ತ ಪಾಪಗಳನ್ನು ವಿನಾಶಮಾಡುತ್ತಾನೆ, ಅಂತಹ ಶ್ರೀಹರಿ ತನ್ನ ಚರಣಕಮಲಗಳ ಪರಮಪ್ರೇಮದ ಬಂಧನದಲ್ಲಿ ಬಂಧಿಸಿರುವ ಕಾರಣ ಆ ಭಕ್ತರ ಹೃದಯವನ್ನು ಪರಿತ್ಯಾಗಮಾಡಲು ಅಸಮರ್ಥನಾಗಿದ್ದಾನೆ, ಅಂತಹ ಅವನ ಭಕ್ತರನ್ನೇ ಉತ್ತಮ ಭಾಗವತರೆಂದು ಅರ್ಥಮಾಡಿಕೊಳ್ಳಲಾಗುತ್ತದೆ.

(ಗ) ಗೋಪಿಯರು ಪರಸ್ಪರ ಸೇರಿ ಉಚ್ಚ ಸ್ವರದಿಂದ ಕೃಷ್ಣನಾಮವನ್ನು ಹಾಡುತ್ತ ಮತ್ತು ನಿರಂಕುಶರಾಗಿ ಒಂದು ವನದಿಂದ ಮತ್ತೊಂದು ವನಕ್ಕೆ ಹೋಗುತ್ತ ಶ್ರೀಕೃಷ್ಣನನ್ನು ಹುಡುಕುತ್ತಿದ್ದರು. ಶ್ರೀಕೃಷ್ಣನೇನೊ ಆಕಾಶ ಸಮನ ಸಮಸ್ತ ಜಡ-ಚೇತನ ಪದಾರ್ಥಗಳಲ್ಲು ಮತ್ತು ಅದರ ಹೊರಗೂ ಸಹ ಸರ್ವತ್ರ ಒಂದೇ ರಸದಲ್ಲಿ ಸ್ಥಿತನಾಗಿದ್ದಾನೆ. ಆದರೇ ಅವನನ್ನು ನೋಡದೆ ಗೋಪೀಯರು ವನಸ್ಪಪತಿಗಳಲ್ಲಿ ಅರ್ಥಾತ್ ಮರ-ಗಿಡಗಳಲ್ಲಿ ಅವನ ವಿಷಯವನ್ನು ಕೇಳುತ್ತಿದ್ದರು.

(ಘ) ಶ್ರೀಮದ್ಭಗವದ್ಗೀತೆಯಲ್ಲೂ ಸಹ ಮತ್ತೆ-ಮತ್ತೆ ಸೂಚಿಸಲಾಗಿರುವುದೇನೆಂದರೆ ಈಶ್ವರತತ್ವವು ಸರ್ವದಾ ಅಚಿಂತ್ಯಶಕ್ತಿಗಳಿಂದ ಯುಕ್ತವಾದದ್ದು ಎಂದು.

ನಾನು ಜಗತ್ತಿನಲ್ಲಿ ಸ್ಥಿತನಾಗಿದ್ದೇನೆ ಮತ್ತು ಜಗತ್ತು ನನ್ನಲ್ಲಿದೆ, ಆದರೆ ಅದರೊಂದಿಗೆ ಜಗತ್ತಿನಲ್ಲಿ ನಾನೂ ಸ್ಥಿತನಾಗಿಲ್ಲ ಮತ್ತು ಜಗತ್ತೂ ಸಹ ನನ್ನಲ್ಲಿ ಸ್ಥಿತವಾಗಿಲ್ಲ.

ಹೇ ಅರ್ಜುನ! ನೀನು ಇದನ್ನು ನನ್ನ ಅಚಿಂತ್ಯ ಐಶ್ವರ್ಯ ರೂಪದಲ್ಲಿ ಅರ್ಥ ಮಾಡಿಕೋ.-'ಭಗವಾನ್ ಶ್ರೀಕೃಷ್ಣನು ಶ್ರೀಗೀತೆಯಲ್ಲಿ ಈ ಅರ್ಥದ ಪ್ರಚಾರ ಮಾಡಿದನು.

(ಚ) [ಶ್ರೀಚೈತನ್ಯ ಮಹಾಪ್ರಭುಗಳು ಪ್ರಕಾಶಾನಂದ ಸರಸ್ವತೀರವರಿಗೆ ಹೀಗೆ ಹೇಳುತ್ತಾರೆ] ಆದ್ದರಿಂದ ಭಗವಂತನೊಂದಿಗೆ ಸಂಬಂಧ, ಭಕ್ತಿರೂಪವಾದ ಅಭಿಧೇಯ ಹಾಗೂ ಪ್ರೇಮರೂಪವಾದ ಪ್ರಯೋಜನ- ಈ ಮೂರು ವಿಷಯಗಳನ್ನೇ ಶ್ರೀಮದ್ಭಾಗವತದಲ್ಲಿ ವರ್ಣಿಸಿರುವುದು.॥೩೪॥

ಶ್ರೀಜೀವ ಗೋಸ್ವಾಮೀಪಾದರು

ಅಥ ತಸ್ಯೈವ ಪ್ರೇಮ್ಣೋ ರಹಸ್ಯತ್ವಂ ಬೋಧಯತಿ– ಯಥಾ ಮಹಾಂತೀತಿ । ಯಥಾ ಮಹಾಭೂತಾನಿ ಭೂತೇಷ್ವಪ್ರವಿಷ್ಟಾನಿ ಬಹಿಃಸ್ಥಿತಾನ್ಯಪ್ಯನುಪ್ರವಿಷ್ಟಾನ್ಯನ್ತಃಸ್ಥಿತಾನಿ ಭಾನ್ತಿ, ತಥಾ ಲೋಕಾತೀತ-ವೈಕುಂಠಸ್ಥಿತತ್ವೇನಾಪ್ರವಿಷ್ಟೋಽಪ್ಯಹಂ ತೇಷು ತತ್ತದ್ಗುಣ-ವಿಖ್ಯಾತೇಷು ನ ತೇಷು ಪ್ರಣತಜನೇಷು ಪ್ರವಿಷ್ಟೋ ಹೃದಿ ಸ್ಥಿತೋಽಹಂ ಭಾಮಿ । ತತ್ರ ಮಹಾಭೂತಾನಾಮಂಶಭೇದೇನ ಪ್ರವೇಶಾಪ್ರವೇಶೌ, ತಸ್ಯ ತು ಪ್ರಕಾಶಭೇದೇನೇತಿ ಭೇದೇಽಪಿ ಪ್ರವೇಶಾಪ್ರವೇಶಮಾತ್ರಸಾಮ್ಯೇನ ದೃಷ್ಟಾಂತಃ । ತದೇವಂ ತೇಷಾಂ ತಾದೃಗಾತ್ಮವಶಕಾರಿಣೀ ಪ್ರೇಮಭಕ್ತಿರ್ನಾಮ ರಹಸ್ಯಮಿತಿ ಸೂಚಿತಮ್ । ತಥಾ ಚ ಬ್ರಹ್ಮಸಂಹಿತಾಯಾಮ್ (೫/೩೭, ೩೮)– *'ಆನಂದಚಿನ್ಮಯರಸ-ಪ್ರತಿಭಾವಿತಾಭಿಸ್ತಾಭಿರ್ಯ ಏವ ನಿಜರೂಪತಯಾ ಕಲಾಭಿಃ । ಗೋಲೋಕ ಏವ ನಿವಸತ್ಯಖಿಲಾತ್ಮಭೂತೋ ಗೋವಿಂದಮಾದಿಪುರುಷಂ ತಮಹಂ ಭಜಾಮಿ ॥ ಪ್ರೇಮಾಂಜನಚ್ಛುರಿತ-ಭಕ್ತಿವಿಲೋಚನೇನ ಸನ್ತಃ ಸದೈವ ಹೃದಯೇಽಪಿ ವಿಲೋಕಯನ್ತಿ । ತಂ ಶ್ಯಾಮಸುಂದರಮಚಿಂತ್ಯಗುಣಸ್ವರೂಪಂ ಗೋವಿಂದಮಾದಿಪುರುಷಂ ತಮಹಂ ಭಜಾಮಿ ॥'* ಇತಿ । ಅಚಿಂತ್ಯಗುಣಸ್ವರೂಪಮಪಿ ಪ್ರೇಮಾಖ್ಯಂ ಯದಂಜನಂ ತೇನಚ್ಛುರಿತವದುಚ್ಚೈಃ ಪ್ರಕಾಶಮಾನಂ ಭಕ್ತಿರೂಪಂ ವಿಲೋಚನಂ ತೇನೇತ್ಯರ್ಥಃ; (ಶ್ರೀಗೀ ೯/೨೯) *'ಯೇ ಭಜಂತಿ ಚ ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್'* ಇತಿ ಗೀತೋಪನಿಷದಶ್ಚ । ಯದ್ವಾ, ತೇಷು ಯಥಾ ತಾನಿ ಬಹಿಃಸ್ಥಿತಾನಿ ಚಾನ್ತಃಸ್ಥಿತಾನಿ ಚ ಭಾನ್ತಿ, ತದ್ವತ್ ಭಕ್ತೇಷ್ವಪ್ಯಹಮನ್ತರ್ಮನೋವೃತ್ತಿಷು ಬಹಿರಿಂದ್ರಿಯವೃತ್ತಿಷು ಚ ವಿಸ್ಫುರಾಮೀತಿ । ಭಕ್ತೇಷು ಸರ್ವಥಾನನ್ಯವೃತ್ತಿತಾಹೇತುರ್ನಾಮ ಕಿಮಪಿ ಸ್ವಪ್ರಕಾಶಂ ಪ್ರೇಮಾಖ್ಯಮಾನಂದಾತ್ಮಕಂ ವಸ್ತು ಮಮ ರಹಸ್ಯಮಿತಿ ವ್ಯಂಜಿತಮ್ । ತಥೈವ ಶ್ರೀಬ್ರಹ್ಮಣೋಕ್ತಮ್ (ಶ್ರೀಮದ್ಭಾ ೨/೬/೩೪)– *'ನ ಭಾರತೀ ಮೇಽಙ್ಗ ಮೃಷೋಪಲಕ್ಷ್ಯತೇ ನ ವೈ ಕ್ವಚಿನ್ಮೇ ಮನಸೋ ಮೃಷಾ ಗತಿಃ । ನ ಮೇ ಹೃಷೀಕಾಣಿ ಪತನ್ತ್ಯಸತ್ಪಥೇ ಯನ್ಮೇ ಹೃದೌತ್ಕಣ್ಠ್ಯವತಾ ಧೃತೋ ಹರಿಃ ॥'* ಇತಿ । ಯದ್ಯಪಿ ವ್ಯಾಖ್ಯಾನ್ತರಾನುಸಾರೇಣಾಯಂ ಅರ್ಥೋಽಪಲಪನೀಯಃ ಸ್ಯಾತ್ತಥಾಪ್ಯಸ್ಮಿನ್ನೇವಾರ್ಥೇ ತಾತ್ಪರ್ಯಮ್– ಪ್ರತಿಜ್ಞಾಚತುಷ್ಟಯ-ಸಾಧನಾಯೋಪಕ್ರಾನ್ತತ್ವಾತ್ ತದನುಕ್ರಮಗತತ್ವಾಚ್ಚ । ಕಿಂಚ, ತಸ್ಮಿನ್ನರ್ಥೇ ನ ತೇಷ್ವತಿ ಭಿನ್ನಪದಮಪಿ ವ್ಯರ್ಥಂ ಸ್ಯಾತ್– ದೃಷ್ಟಾಂತಸ್ಯೈವ ಕ್ರಿಯಾಭ್ಯಾಮನ್ವಯೋಪಪತ್ತೇಃ । ಅಪಿ ಚ ರಹಸ್ಯಂ ನಾಮ ಹ್ಯೇತದೇವ– ಯತ್ ಪರಮದುರ್ಲಭಂ ವಸ್ತು, ದುಷ್ಟೋದಾಸೀನಜನ-ದೃಷ್ಟಿ-ನಿವಾರಣಾರ್ಥಂ ಸಾಧಾರಣವಸ್ತ್ವಂತರೇಣಾಚ್ಛಾದ್ಯತೇ, ಯಥಾ ಚಿಂತಾಮಣಿಃ ಸಂಪುಟಾದಿನಾ । ಅತಏವ (ಶ್ರೀಮದ್ಭಾ ೧೧/೨೧/೩೫)– *'ಪರೋಕ್ಷವಾದಾ ಋಷಯಃ ಪರೋಕ್ಷಂಚ ಮಮ ಪ್ರಿಯಮ್'* ಇತಿ ಶ್ರೀಭಗವದ್ವಾಕ್ಯಮ್ । ತದೇವ ಚ ಪರೋಕ್ಷಂ ಕ್ರಿಯತೇ– ಯದದೇಯಂ ವಿರಲಪ್ರಚಾರಂ ಮಹದ್ವಸ್ತು ಭವತಿ, ತಸ್ಯೈವಾದೇಯತ್ವಂ ವಿರಲಪ್ರಚಾರತ್ವಂ ಮಹತ್ವಂಚ (ಶ್ರೀಮದ್ಭಾ ೫/೬/೧೮) *'ಮುಕ್ತಿಂ ದದಾತಿ ಕರ್ಹಿಚಿತ್ ಸ್ಮ ನ ಭಕ್ತಿಯೋಗಮ್'* ಇತ್ಯಾದೌ, (ಶ್ರೀಮದ್ಭಾ ೬/೧೪/೫) *'ಮುಕ್ತಾನಾಮಪಿ ಸಿದ್ಧಾನಾಮ್'* ಇತ್ಯಾದೌ, (ಶ್ರೀಮದ್ಭಾ೩/೨೫/೩೨) *'ಭಕ್ತಿಃ ಸಿದ್ಧೇರ್ಗರೀಯಸೀ'* ಇತ್ಯಾದೌ ಚ ಬಹುತ್ರ ವ್ಯಕ್ತಮ್ । ಸ್ವಯಂಚೈತದೇವ ಶ್ರೀಭಗವತಾ

ಪರಮಭಕ್ತಾಭ್ಯಾ-ಮರ್ಜನೋದ್ಧವಾಭ್ಯಾಂ ಕಂಠೋಕ್ತ್ಯೈವ ಕಥಿತಮ್ (ಶ್ರೀಗೀ ೧೮/೬೪) *'ಸರ್ವಗುಹ್ಯತಮಂ ಭೂಯಃ ಶೃಣು ಮೇ ಪರಮಂ ವಚ'* ಇತ್ಯಾದಿನಾ, (ಶ್ರೀಮದ್ಭಾ ೧೧/೧೧/೪೯) *'ಸುಗೋಪ್ಯಮಪಿ ವಕ್ಷ್ಯಾಮಿ'* ಇತ್ಯಾದಿನಾ ಚ । ಇದಮೇವ ರಹಸ್ಯಂ ಶ್ರೀನಾರದಾಯ ಸ್ವಯಂ ಶ್ರೀಬ್ರಹ್ಮಣೈವ ಪ್ರಕಟೀಕೃತಮ್ (ಶ್ರೀಮದ್ಭಾ ೨/೭/೫೧, ೫೨)- *'ಇದಂ ಭಾಗವತಂ ನಾಮ ಯನ್ಮೇ ಭಗವತೋದಿತಮ್ । ಸಂಗ್ರಹೋಽಯಂ ವಿಭೂತೀನಾಂ ತ್ವಮೇತತ್ ವಿಪುಲೀಕುರು ॥ ಯಥಾ ಹರೌ ಭಗವತಿ ನೃಣಾಂ ಭಕ್ತಿರ್ಭವಿಷ್ಯತಿ । ಸರ್ವಾತ್ಮನ್ಯಖಿಲಾಧಾರ ಇತಿ ಸಂಕಲ್ಪ್ಯ ವರ್ಣಯ ॥'* ಇತಿ । ತಸ್ಮಾತ್ ಸಾಧು ವ್ಯಾಖ್ಯಾತಂ ಸ್ವಾಮಿಚರಣೈರಪಿ (ಶ್ರೀಮದ್ಭಾ ೨/೯/೩೦ – ಭಾವಾರ್ಥ-ದೀಪಿಕಾ) 'ರಹಸ್ಯಂ ಭಕ್ತಿಃ' ಇತಿ ॥೩೪॥

ಭಾವಾನುವಾದ- ತದನಂತರ ಪ್ರಸ್ತುತ ಶ್ಲೋಕದಲ್ಲಿ ಆ ಪ್ರೇಮದ ರಹಸ್ಯತ್ವವನ್ನು (ಅರ್ಥಾತ್ ರಹಸ್ಯರೂಪದಲ್ಲಿರುವುದನ್ನು) ತಿಳಿಸುತ್ತಿದ್ದಾರೆ- ಯಾವ ರೀತಿ ಮಹಾಭೂತಸಮ್ಮೂಹ ಪ್ರಾಣಿಗಳಲ್ಲಿ ಅಪ್ರವಿಷ್ಟ ಅಂದರೆ ಅದರ ಹೊರಗೆ ಸ್ಥಿತವಾಗಿದ್ದರೂ ಸಹ ಅದರಲ್ಲಿ ಅನುಪ್ರವಿಷ್ಟವಾಗಿದೆ ಅರ್ಥಾತ್ ಅದರ ಒಳಗೆ ಅವಸ್ಥಿತವಾಗಿ ಪ್ರಕಾಶಮಾನವಾಗಿದೆ, ಅದೇ ಪ್ರಕಾರ ನಾನು ಲೋಕಾತೀತ ವೈಕುಂಠದಲ್ಲಿ ಸ್ಥಿತನಾಗಿರುವ ಕಾರಣ ಅಪ್ರವಿಷ್ಟವಾಗಿದ್ದರೂ ಸಹ ಆ ಎಲ್ಲ ಗುಣಗಳಿಂದ ಗುಣವಂತ ನಮ್ರ ಭಕ್ತರ ಹೃದಯದಲ್ಲಿ ಸ್ಥಿತನಾಗಿ ನೆಲಸಿದ್ದೇನೆ. ಇಲ್ಲಿ ಮಹಾಭೂತಗಳ ಪ್ರವೇಶ ಮತ್ತು ಅಪ್ರವೇಶ ಮಹಾಭೂತಗಳ ಅಂಶ ಭೇದದಿಂದಾಗುತ್ತದೆ, ಆದರೆ ಭಗವಂತನ ಪ್ರವೇಶ ಮತ್ತು ಅಪ್ರವೇಶವು ಭಗವಂತನ ಪ್ರಕಾಶ ಭೇದದಿಂದಾಗುತ್ತದೆ. ಎರಡರಲ್ಲೂ ಇದೇ ರೀತಿಯಾದ ಭೇದವಿದ್ದರೂ ಸಹ ಇಲ್ಲಿ ಕೇವಲ ಪ್ರವೇಶ ಮತ್ತು ಅಪ್ರವೇಶರೂಪ ಕ್ರಿಯಾವಶವಾದ ಸಮಾನತೆಯ ಉದಾಹಣೆಯನ್ನು ಕೊಡಲಾಗಿದೆ. ಈ ಪ್ರಕಾರದಿಂದ ಆ ಭಕ್ತರ ಈ ರೀತಿ ಆತ್ಮವಶೀಕಾರಕ (ಭಗವಂತನನ್ನು ವಶೀಭೂತ ಮಾಡುವಂತಹ) 'ಪ್ರೇಮಭಕ್ತಿ' ಎಂಬ ಹೆಸರಿನ ರಹಸ್ಯವನ್ನು ಸೂಚಿಸಲಾಗಿದೆ. ಈ ರೀತಿ ಬ್ರಹ್ಮಸಂಹಿತದಲ್ಲಿ (೫/೩೭-೩೮) ಹೇಳಲಾಗಿದೆ- "ಆನಂಧ ಚಿನ್ಮಯರಸದ ಮೂಲಕ ಪ್ರತಿಭಾವಿತವಾದ ಅವನ ಚಿತ್-ರೂಪದ ಅನುರೂಪ ಅರವತ್ನಾಲ್ಕು ಕಲೆಗಳಿಂದ ಯುಕ್ತವಾದ ಯಾವ ಹ್ಲಾದಿನೀಶಕ್ತಿರೂಪ ಶ್ರೀರಾಧಾ ಮತ್ತು ಅವರ ಕಾಯವ್ಯೂಹರೂಪ ಸಖಿಯರಿದ್ದಾರೆ, ಅವರೊಂದಿಗೆ ಅಖಿಲಾತ್ಮಭೂತನಾದ ಶ್ರೀಗೋವಿಂದನು ನಿತ್ಯ ತನ್ನ ಗೋಲೋಕಧಾಮದಲ್ಲಿ ವಾಸಿಸುತ್ತಾನೆ, ಆ ಆದಿಪುರುಷ ಶ್ರೀಗೋವಿಂದನನ್ನು ನಾನು ಭಜಿಸುತ್ತೇನೆ. ಪ್ರೇಮರೂಪವಾದ ಅಂಜನ ಮೂಲಕ ರಂಜಿತ ಭಕ್ತಿ-ಚಕ್ಷುಗಳಿಂದ ಯುಕ್ತ ಸಾಧುಜನರು ಯಾವ ಅಚಿಂತ್ಯಗುಣಗಳಿಂದ ಯುಕ್ತವಾದ ಶ್ಯಾಮಸುಂದರ ಶ್ರೀಕೃಷ್ಣನ ತಮ್ಮ ಹೃದಯದಲ್ಲಿ ಅವಲೋಕನೆ ಮಾಡುತ್ತಾರೋ, ಆ ಆದಿಪುರುಷ ಶ್ರೀಗೋವಿಂದನನ್ನು ನಾನು ಭಜಿಸುತ್ತೇನೆ." ಅರ್ಥಾತ್ ಅಚಿಂತ್ಯಗುಣಸ್ವರೂಪನಾಗಿದ್ದರೂ ಸಹ ಅಂಜನಲಿಪ್ತ ಕಣ್ಣಿನ ಸಮಾನ ಅತ್ಯಾಧಿಕ ಪ್ರಕಾಶಮಾನವಾದ 'ಪ್ರೇಮ' ಎಂಬ ಹೆಸರಿನ ಯಾವ ಭಕ್ತಿರೂಪ

ಚಕ್ಷುವಿದೆಯೋ, ಅಂತಹ ಚಕ್ಷುವಿನ ಮೂಲಕ ಮಾತ್ರ ಶ್ರೀಕೃಷ್ಣನ ದರ್ಶನವಾಗುತ್ತದೆ. ಶ್ರೀಗೀತೆಯಲ್ಲೂ(೯/೨೯) ಸಹ ಹೀಗೆ ಹೇಳಲಾಗಿದೆ– "ಯಾರು ನನ್ನನ್ನು ಭಕ್ತಿಪೂರ್ವಕವಾಗಿ ಭಜಿಸುತ್ತಾರೊ, ಅವರಿಗೆ ನನ್ನಲ್ಲಿ ಆಸಕ್ತಿ ಇರುತ್ತದೆ ಮತ್ತು ನಾನೂ ಸಹ ಅವರಲ್ಲಿ ಆಸಕ್ತನಾಗಿರುತ್ತೇನೆ."

ಅಥವಾ ಸಮಸ್ತ ಮಹಾಭೂತವು ಯಾವ ಪ್ರಕಾರ ಪ್ರಾಣಿಗಳ ಹೊರಗು ಮತ್ತು ಒಳಗು ಸ್ಥಿತವಾಗಿ ಪ್ರಕಾಶಮಾನವಾಗಿರುತ್ತದೋ, ಅದೇ ಪ್ರಕಾರ ನಾನೂ ಸಹ ಭಕ್ತರ ಅಂತರ್ಮನೋವೃತ್ತಿ (ಅಂತರಾಳದಲ್ಲಿ) ಮತ್ತು ಹೊರಗಿನ ಇಂದ್ರಿಯವೃತ್ತಿಗಳಲ್ಲಿ ಸ್ಫುರಿತನಾಗುತ್ತೇನೆ. ಭಕ್ತರಲ್ಲಿ ಸರ್ವದಾ ಅನನ್ಯವೃತ್ತಿಯ ಕಾರಣ ಯಾವುದೆಲ್ಲ ಸ್ವಪ್ರಕಾಶ 'ಪ್ರೇಮ' ಎಂಬ ಹೆಸರಿನ ಆನಂದಾತ್ಮಕ ವಸ್ತುವಿದೆ, ಅದು ನನ್ನ ರಹಸ್ಯ– ಇದನ್ನು ಸೂಚಿಸಲಾಗಿದೆ. ಶ್ರೀಬ್ರಹ್ಮದೇವರೂ ಸಹ ಇದೇ ರೀತಿ ಹೇಳಿದ್ದಾರೆ (ಶ್ರೀಮದ್ಭಾ ೨/೬/೩೪) "ಹೇ ನಾರದ! ನಾನು ಭಕ್ತಿಪೂರ್ವಕ ಹೃದಯದಲ್ಲಿ ಶ್ರೀಹರಿಯ ಧ್ಯಾನ ಮತ್ತು ಧಾರಣೆ ಮಾಡಿದ್ದೇನೆ, ಆದ್ದರಿಂದ ನನ್ನ ವಚನ ಮತ್ತು ಮನಸ್ಸಿನ ವೃತ್ತಿ ಎಂದಿಗೂ ಸಹ ಮಿಥ್ಯವಾಗುವುದಿಲ್ಲ ಮತ್ತು ಇಂದ್ರಿಯಗಳೂ ಸಹ ಅಸತ್ಯ ಪಥದಲ್ಲಿ ಮತ್ತೆ ಓಡುವುದಿಲ್ಲ." ಆದರೂ ಅನ್ಯ ಪ್ರಕಾರದ ಅಂದರೆ ಜ್ಞಾನಮೂಲದ ವ್ಯಾಖ್ಯಾನದ ಅನುಸಾರವಾಗಿ ಈ ಅರ್ಥವನ್ನು ಮುಚ್ಚಿಡಲಾಗುತ್ತದೆ, ಅದ್ದರಿಂದ ಈ ಅರ್ಥವೇ ಇದರ ತಾತ್ಪರ್ಯ. ಇದಕ್ಕೆ ಕಾರಣವೇನೆಂದರೆ ಯಾವ ಆರು ಪ್ರಕಾರದ ತಾತ್ಪರ್ಯ ನಿರ್ಣಯದ ಲಕ್ಷಣವನ್ನು ತಿಳಿಸಲಾಗಿರುವುದೋ, ಅದರಲ್ಲಿ ಚತುಃಶ್ಲೋಕೀಯ ಉಪಕ್ರಮ ಅರ್ಥಾತ್ ಶ್ರೀಭಗವಂತನ ಮೂಲಕ ನೀಡಲ್ಪಟ್ಟ ನಾಲ್ಕು ಪ್ರಕಾರದ ಪ್ರತಿಜ್ಞೆಗಳನ್ನು (ಶ್ರೀಮದ್ಭಾ ೨/೯/೩೦ ಜ್ಞಾನ, ವಿಜ್ಞಾನ, ರಹಸ್ಯ ಮತ್ತು ತದಂಗದ) ಸಾಧನಕ್ಕಾಗಿ ಈ ಶ್ಲೋಕದ ಸೂಚನೆ. ಹಾಗೂ ಹೇಳಿರುವ ಜ್ಞಾನಪರ ಅರ್ಥದಿಂದ 'ನ ತೇಷು' ಈ ವಿಭಾಗಪದವು ವ್ಯರ್ಥವಾಗುತ್ತದೆ, ಏಕೆಂದರೆ ಈ ಉದಾಹರಣೆಯಲ್ಲಿ 'ಅಪ್ರವಿಷ್ಟ' ಮತ್ತು 'ಪ್ರವಿಷ್ಟ" ಈ ಎರಡು ಕ್ರಿಯೆಗಳ ಮೂಲಕ ಮಾತ್ರ ಅನ್ವಯಿಸಿರುವ ವಿಚಾರವಾಗುತ್ತದೆ. ಮತ್ತೊಂದು ವಿಚಾರವಿರುವುದೇನೆಂದರೆ ಯಾವ ರೀತಿ ಚಿಂತಾಮಣಿ ಇಡುವ ಡಬ್ಬಿಯಲ್ಲಿ ಮುಚ್ಚಳವಿರುತ್ತದೆಯೋ, ಅದೇ ರೀತಿ 'ರಹಸ್ಯ' ಎಂಬ ಹೆಸರಿನ ಯಾವ ಈ ಪರಮ ದುರ್ಲಭ ವಸ್ತುವಿದೆ, ಅದನ್ನು ದುಷ್ಟ ಮತ್ತು ಉದಾಸೀನ ಜನರ ದೃಷ್ಟಿಯಿಂದ ದೂರವಿರಿಸಲೆಂದೇ ಅನ್ಯ ಸಾಧಾರಣ ವಸ್ತುವಿನ ಮೂಲಕ ಮುಚ್ಚಿಡಲಾಗಿದೆ. ಆದ್ದರಿಂದ ಶ್ರೀಮದ್ಭಾಗವತದಲ್ಲಿ (೧೧/೨೧/೩೫) ಹೀಗೆ ಶ್ರೀಭಗವಂತನ ವಚನವಿರುವುದು– "ಹೇ ಋಷಿಗಳೇ! ಪರೋಕ್ಷ ವಾದವೇ ನನಗೆ ಪ್ರಿಯವಾದದ್ದು." ಯಾವ ವಸ್ತು ಆದೇಯವಾದದ್ದೋ (ಸ್ವೀಕಾರಾರ್ಹವಾದದ್ದು), ಯಾವುದರ ಪ್ರಚಾರ ವಿರಳವಾಗಿದೆಯೋ ಮತ್ತು ಯಾವುದು ಮಹತ್ಕರ (ಮಹಾನ್) ಆಗಿದೆಯೋ, ಅದನ್ನು ಪರೋಕ್ಷ ಮಾಡಲಾಗುತ್ತದೆ. ಈ ಭಕ್ತಿಯೋಗವೂ ಸಹ ಆದೇಯವಾದದ್ದು, ವಿರಳ–ಪ್ರಚಾರ ಮತ್ತು ಮಹತ್ಕರವಾದದ್ದು. ಹೀಗೆ ಶ್ರೀಮದ್ಭಾಗವತದಲ್ಲಿ (೫/೬/೧೮) ಭಗವಂತನೇ ಸ್ವತಃ ಹೇಳಿದ್ದಾನೆ– "ನಾನು

ಕೆಲವು ಬಾರಿ ಮುಕ್ತಿಯನ್ನೂ ಸಹ ಬಹಳ ಸುಲಭವಾಗಿ ಪ್ರಸಾದಿಸುತ್ತೇನೆ, ಆದರೆ ಭಕ್ತಿಯೋಗವನ್ನು ಅಷ್ಟು ಸಹಜವಾಗಿ ಯಾರಿಗೂ ಪ್ರಸಾದಿಸುವುದಿಲ್ಲ." ಹಾಗೂ (ಶ್ರೀಮದ್ಭಾ ೬/೧೪/೫) "ಕೋಟಿ-ಕೋಟಿ ಮುಕ್ತ ಹಾಗೂ ಸಿದ್ಧಪುರುಷರಲ್ಲೂ ಸಹ ಪ್ರಶಾಂತಾತ್ಮ ನಾರಯಾಣ-ಪಾರಾಯಣ ಭಕ್ತರು ಅತಿ ವಿರಳ (ಕಡಿಮೆ)." ಹಾಗೂ (ಶ್ರೀಮದ್ಭಾ ೩/೨೫/೩೨) "ಭಕ್ತಿಯು ಮುಕ್ತಿಗಿಂತಲೂ ಪರಮಶ್ರೇಷ್ಟವಾದದ್ದು." ಇತ್ಯಾದಿ ಎಲ್ಲೆಲ್ಲು ವ್ಯಕ್ತವಾಗಿದೆ. ಮತ್ತು ಸ್ವಯಂ ಶ್ರೀಭಗವಂತನೂ ಸಹ ಇಬ್ಬರು ಪರಮ ಭಕ್ತರ- ಅರ್ಜುನ ಮತ್ತು ಉದ್ಧವರಿಗೆ ಕ್ರಮವಾಗಿ ಶ್ರೀಗೀತಾ ಮತ್ತು ಶ್ರೀಮದ್ಭಾಗವತದಲ್ಲಿ ತಮ್ಮ ಮುಖಕಮಲದಿಂದ ಇದೇ ವಿಷಯವನ್ನು ಹೇಳಿದ್ದಾರೆ- "ಪುನಃ ನನ್ನ ಸರ್ವಗುಹ್ಯತಮ (ಅರ್ಥಾತ್ 'ನನ್ನಲ್ಲಿ ಶರಣಾಗತನಾಗು' ಎಂಬುವ) ವಚನವನ್ನು ಕೇಳು" (ಶ್ರೀಗೀತ ೧೮/೬೪), ಮತ್ತು "ಅತಿ ಗೋಪನೀಯವಾದರೂ ಸಹ ನಾನು ನಿನಗೆ ಹೇಳುತ್ತಿದ್ದೇನೆ" (ಶ್ರೀಮದ್ಭಾಗ ೧೧/೧೧/೪೯)- ಇತ್ಯಾದಿ. ಸ್ವಯಂ ಬ್ರಹ್ಮದೇವರೂ ಸಹ ಶ್ರೀನಾರದರಿಗೆ ಈ ರಹಸ್ಯವನ್ನು ಹೀಗೆ ಹೇಳಿದ್ದಾರೆ, ಯಥಾ (ಶ್ರೀಮದ್ಭಾ ೨/೭/೫೧-೫೨)- "ಹೇ ನಾರದ! ನಿನ್ನ ಹತ್ತಿರ ನಾನು ಏನೆಲ್ಲ ಹೇಳಿದ್ದೇನೋ, ಇದರ ಹೆಸರು ಭಾಗವತ-ಶಾಸ್ತ್ರ" ಭಗವಾನ್ ಶ್ರೀವಿಷ್ಣು ಇದನ್ನು ನನ್ನ ಬಳಿ ಪ್ರಕಟಿಸಿದ್ದಾರೆ, ಇದರಲ್ಲಿ ಭಗವಂತನ ಲೀಲೆಗಳನ್ನು ಸಂಕ್ಷೇಪವಾಗಿ ವರ್ಣಿಸಿಲಾಗಿದೆ, ಈಗ ನೀನು ಇದನ್ನು ವಿಸ್ತಾರವಾಗಿ ವರ್ಣನೆ ಮಾಡು. ಯಾವ ಪ್ರಕಾರದಿಂದ ಎಲ್ಲರ ಆಧಾರಸ್ವರೂಪ ಸರ್ವಾತ್ಮ ಭಗವಾನ್ ಶ್ರೀಹರಿಯಲ್ಲಿ ಮನುಷ್ಯರ ಭಕ್ತಿ ಉದಿತವಾಗುತ್ತದೋ, ನೀನು ಅದನ್ನು ಸ್ಥಿರಪಡಿಸಿ ಆ ಭಗವಂತನ ಲೀಲೆಗಳನ್ನು ವರ್ಣನೆ ಮಾಡು." ಆದ್ದರಿಂದ ಶ್ರೀಧರಸ್ವಾಮಿಪಾದರವರು 'ರಹಸ್ಯ' ಎಂಬ ಶಬ್ದದ ಯಾವ ಭಕ್ತಿ-ಅರ್ಥವನ್ನು ಹೇಳಿರುವರೋ, ಅದು ಅತ್ಯಂತ ಸುಂದರವಾದದ್ದು.॥೩೪॥

ಶ್ರೀಶ್ರೀಧರ-ಸ್ವಾಮೀಪಾದರು

ಯಥಾಭಾಸ ಇತ್ಯೇತತ್ ಸ್ಪಷ್ಟಯತಿ- ಯಥಾ ಮಹಾಭೂತಾನಿ ಭೌತಿಕೇಷು ಅನು ಸೃಷ್ಟೇರನನ್ತರಂ ಪ್ರವಿಷ್ಟಾನಿ, ತೇಷು ಉಪಲಭ್ಯಮಾನತ್ವಾತ್; ಅಪ್ರವಿಷ್ಟಾನಿ ಚ ಪ್ರಾಗೇವ ಕಾರಣತಯಾ ತೇಷ್ವವಿದ್ಯಮಾನತ್ವಾತ್; ತಥಾ ತೇಷು ಭೂತಭೌತಿಕೇಷ್ವಹಮ್, ನ ಚ ತೇಷ್ವಹಮ್ । ಏವಮ್ಭೂತಾ ಮಮ ಸತ್ತೇತ್ಯರ್ಥಃ ॥೩೪॥

ಭಾವಾನುವಾದ- ಹಿಂದಿನ ಶ್ಲೋಕದಲ್ಲಿ ಸ್ಪಷ್ಟಪಡಿಸಲಾದ 'ಯಥಾಭಾಸ' ವಿಚಾರವನ್ನೇ ಈ ಶ್ಲೋಕದಲ್ಲಿ ಮರುಸ್ಪಷ್ಟೀಕರಿಸುತ್ತಿದ್ದಾರೆ. ಸೃಷ್ಟಿಯ ನಂತರ ಯಾವ ಪ್ರಕಾರ ಮಹಾಭೂತಸಮ್ಮೂಹವು ಭೌತಿಕ ದೇಹಾದಿ ವಸ್ತುಗಳಲ್ಲಿ ಪ್ರವಿಷ್ಟ ಅಥವಾ ವ್ಯಾಪ್ತವಾಗಿರುತ್ತದೆ, ಏಕೆಂದರೆ ಆ ವಸ್ತುಗಳಲ್ಲಿ ಮಹಾಭೂತಸಮ್ಮೂಹದ ಅಸ್ತಿತ್ವವಿರುತ್ತದೆ, ಮತ್ತು ಮೊದಲಿನಿಂದಲೂ ಕಾರಣ ರೂಪದಿಂದ ಅದರಲ್ಲಿ ಸ್ಥಿತವಾಗಿಲ್ಲದಿರುವ ಕಾರಣ ಯಾವ ಪ್ರಕಾರ ಮಹಾಭೂತಸಮ್ಮೂಹ ಅಪ್ರವಿಷ್ಟ ಅರ್ಥಾತ್ ಸ್ವತಂತ್ರ ರೂಪದಲ್ಲೂ ಸಹ ನೆಲಸಿರುತ್ತದೆ, ಅದೇ ಪ್ರಕಾರ ಈ ಸಮಸ್ತ

ಪ್ರಾಣಿಗಳಲ್ಲಿ ನನ್ನ ಅಂತರ್ಯಾಮಿ ರೂಪದಲ್ಲಿ ಪ್ರವಿಷ್ಟ ಅಂದರೆ ವ್ಯಕ್ತವಾಗಿದ್ದರೂ ಸಹ ವಾಸ್ತವವಾಗಿ ನಾನು ಅವುಗಳಲ್ಲಿ ಆಬದ್ಧನಾಗದೆ ಸ್ವತಂತ್ರ ರೂಪದಲ್ಲಿ ನಿತ್ಯವು ವಿರಾಜಮಾನನಾಗಿರುತ್ತೇನೆ– ನನ್ನ ಸತ್ಯವನ್ನು ಈ ಪ್ರಕಾರ ಅರ್ಥಮಾಡಿಕೋ.॥೩೪॥

ಶ್ರೀಮಧ್ವಾಚಾರ್ಯಪಾದರು

ಯಥಾ ಮಹಾನ್ತಿ ಭೂತಾನಿ ಶರೀರೇಷು ಬಹಿಸ್ತಥಾ ।
ಏವಂ ಹರಿಶ್ಚ ಭೂತೇಷು ಬಹಿಶ್ಚ ವ್ಯಾಪ್ತಿ–ಹೇತುತಃ ।
ತಸ್ಮಾತ್ತತ್ಸಥೋ ನ ತತ್ಸ್ಥಶ್ಚ ಪ್ರೋಚ್ಯತೇ ಹರಿರೀಶ್ವರಃ ।

ಇತಿ ॥೩೪॥

ಭಾವಾನುವಾದ– ಯಾವ ರೀತಿ ಮಹಾಭೂತಗಳು ಪ್ರಣಿಗಳ ದೇಹದ ಒಳಗೂ ಮತ್ತು ಹೊರಗೂ ಸ್ಥಿತವಾಗಿರುತ್ತದೋ, ಅದೇ ರೀತಿ ಶ್ರೀಹರಿಯೂ ಸಹ ವಿಭೂತ್ವ ಮತ್ತು ಅಣುತ್ವದ ಕಾರಣ ಪ್ರಾಣಿಗಳ ಒಳಗು ಮತ್ತು ಹೊರಗೂ ಸ್ಥಿತನಾಗಿದ್ದಾನೆ. ಆದ್ದರಿಂದ ಪರಮೇಶ್ವನಾದ ಶ್ರೀಹರಿಯನ್ನು ತನ್ನ ಒಳಗೂ ಮತ್ತು ಹೊರಗೂ ಎರಡರಲ್ಲಿ ಸ್ಥಿತನೆಂದು ಹೇಳಲಾಗುತ್ತದೆ. ॥೩೪॥

ಶ್ರೀವಿಜಯಧ್ವಜ ತೀರ್ಥಪಾದ

ಭಗವಾನ್ ಸ್ವವ್ಯಾಪ್ತಿಂ ಸೋದಾಹರಣಮುಪದಿಶತೀತ್ಯಾಹ– ಯಥಾ ಮಹಾನ್ತೀತಿ । ಯಥಾ ಮಹಾನ್ತಿ ಪಂಚಭೂತಾನಿ ಉಚ್ಚಾವಚೇಷುಭೂತೇಷು ಸ್ವಕಾರ್ಯಶರೀರೇಷು ಪ್ರವಿಷ್ಟಾನಿ ವರ್ತತೆ, ತತೋಽಪ್ಯಧಿಕವ್ಯಾಪ್ತಿ ಸದ್ಭಾವಾತ್ ತೇಷ್ವಪ್ರವಿಷ್ಟಾನಿ ಚ, ತಥಾ ಅಹಮಪ್ಯನನ್ತದೇಶಕಾಲವ್ಯಾಪೀ ತೇಷು ಭೂತೇಷು ಪ್ರವಿಷ್ಟಃ, ತೇಭ್ಯೋ ಬಹಿರಪಿ ಸ್ಥಿತತ್ವಾತ್ ತೇಷು ನ ಪ್ರವಿಷ್ಟಶ್ಚ– ಯಥಾಮಹಾನ್ತಿ ಭೂತಾನಿಶರೀರೇಷು ಬಹಿಸ್ತಥೇತ್ಯಾದೇಃ ॥೩೪॥

ಭಾವಾನುವಾದ– ಶ್ರೀಭಗವಂತನು ಉದಾಹರಣೆಯೊಂದಿಗೆ ತನ್ನ ವ್ಯಾಪ್ತಿಯ ಉಪದೇಶವನ್ನು ಮಾಡುತ್ತಿದ್ದಾನೆ. ಯಾವ ರೀತಿ ಪಂಚಮಹಾಭೂತಗಳು ಉಚ್ಚ–ನೀಚ ಪ್ರಾಣಿಗಳಲ್ಲಿ ಅಂದರೆ ತಮ್ಮ–ತಮ್ಮ ಕಾರ್ಯರೂಪ ಶರೀರಗಳಲ್ಲಿ ಪ್ರವಿಷ್ಟವಾಗಿರುತ್ತದೆ, ಮತ್ತು ಅದಕ್ಕಿಂತಲು ಅಧಿಕ ಹೊರಗೆ ವ್ಯಾಪ್ತಿಯು ಸತ್ಯವಾದ ಕಾರಣ ಅದು ಪಂಚಮಹಾಭೂತ ಆ ಪ್ರಾಣಿಗಳಲ್ಲಿ ಅಪ್ರವಿಷ್ಟ ಅಂದರೆ ಅದರ ಹೊರಗೂ ಸಹ ಇರುತ್ತದೆ, ಅದೇ ರೀತಿ ನಾನೂ ಸಹ ಅನಂತ–ದೇಶ–ಕಾಲ–ವ್ಯಾಪಿಯಾಗಿದ್ದರೂ ಸಹ ಆ ಎಲ್ಲ ಭೂತಗಳಲ್ಲಿ ಪ್ರವಿಷ್ಟನಾಗಿದ್ದೇನೆ ಮತ್ತು ಅದರ ಹೊರಗೂ ಸಹ ನೆಲಸಿರುವ ಕಾರಣ ಅದರಲ್ಲಿ ಅಪ್ರವಷ್ಟನಾಗಿದ್ದೇನೆ. ॥೩೪॥

ಶ್ರೀವೀರರಾಘವಾಚಾರ್ಯಪಾದರು

ಏವಂ ಪರಸ್ಪರವಿಲಕ್ಷಣಂ ಚಿದಚಿತ್ಸ್ವರೂಪಮುಕ್ತಂ, ಅಥ ಏತಯೋಃ ಸ್ವಸ್ಯಾನುಪ್ರವೇಶೇನ ತತ್ಪ್ರಶಾಸನರೂಪಂ ಪಾಲನಂ , ತದ್ಭೂತ ದೋಷಾಸ್ಪರ್ಶಂಚಾಹ– ಯಥೇತಿ । ಮಹಾನ್ತಿ ಭೂತಾನೀ ಆಕಾಶವಾಯುತೇಜಾಂಸಿ ಯಥೋಚ್ಚಾವಚೇಷು ನಾನಾವಿಧೇಷು ಭೂತೇಷು

ಭೌತಿಕೇಷು ಘಟಾದಿಷು ಪ್ರವಿಷ್ಟಾನ್ಯಪ್ರವಿಷ್ಟಾನ್ಯೇವ- ಘಟಾದಿಗತಭೇದಚ್ಛೇದನಾದ್ಯಸ್ಪೃಷ್ಟತ್ವಾತ್, ತಥಾ ಅಹಮಪಿ ತೇಷು ಚೇತನಾಚೇತನೇಷು ಆತ್ಮತಯಾನುಪ್ರವಿಷ್ಟೋಽಪಿ ತೇಷು ನ ಪ್ರವಿಷ್ಟಃ, ನ ತದ್ವತದೋಷೈಃ ಸ್ಪೃಷ್ಟ ಇತ್ಯರ್ಥಃ । ಯದ್ವಾ, ಪರಿಚ್ಛನ್ನ ಚೇತನಾಚೇತನ ವಸ್ತ್ವನುಪ್ರವೇಶೇಪಿ ಸ್ವಸ್ಯಾಪರಿಚ್ಛಿನ್ನತ್ವಂ ಸದೃಷ್ಟಾನ್ತಮಾಹ- ಯಥೇತಿ । ಅಪ್ರವಿಷ್ಟಾನಿ ಬಹಿರಪಿ ಸಂತಿ, ತಥಾ ಅನ್ತರ್ಬಹಿಶ್ಚ ತತ್ಸರ್ವಂ ವ್ಯಾಪ್ಯೇತಿ ಪ್ರಕಾರೇಣ ತೇಷು ಪ್ರವಿಷ್ಟೋಽಹಂ ನ ತೇಷ್ವೇವ, ಬಹಿರಪಿ ವ್ಯಾಪ್ತ ಇತ್ಯರ್ಥಃ । ಏವಂ ಅಪರಿಚ್ಛಿನ್ನತ್ವ ಪ್ರತಿಪಾದನೇನ *'ಯಾವಾನಹಂ'* ಇತ್ಯೇತತ್ಸ್ಪಷ್ಟೀಕೃತಂ; *'ಅಹಮೇವಾಸಂ'* ಇತ್ಯತ್ರ ಜಗತ್ಕಾರಣತ್ವ, ತದಾಕ್ಷಿಪ್ತ ಚೇತನಾಚೇತನವೈಲಕ್ಷಣಿಯ-ಸಾರ್ವಜ್ಞ್ಯ-ಸರ್ವಶಕ್ತಿತ್ವಾದಿ ಪ್ರತಿಪಾದನೇನ *'ಯಥಾಭಾವಃ'* ಇತ್ಯೇತತ್ಸ್ಪಷ್ಟೀಕೃತಂ; *'ಋತೇಽರ್ಥಂ'* ಇತ್ಯಾದಿನಾ ಪರಮಾತ್ಮಶರೀರಭೂತಸ್ಯ ಪರಸ್ಪರವಿಲಕ್ಷಣ ಚೇತನಾಚೇನಸ್ವರೂಪ ಪ್ರತಿಪಾದನೇನ *'ಯದ್ರೂಪ'* ಇತಿ ಸ್ಪಷ್ಟೀಕೃತಂ; *'ತಥಾತೇಷು'* ಇತ್ಯನೇನ ಚೇತನಾಚೇತನಯೋಃ ಪರಮಾತ್ಮಶರೀರತ್ವ ಪ್ರತಿಪಾದನಾತ್ ಶರೀತಗತಾ ಧರ್ಮಾ ಜೀವಾತ್ಮನಸ್ತಚ್ಛರೀರಗತ ಬಾಲತ್ವಯುವತ್ವಾದಯ ಇವ ಮಚ್ಛರೀರಭೂತ ಚೇತನಾಚೇತನ ದ್ವಾರಾ ಮಮೈವ ಧರ್ಮಾ ಇತಿ ಪ್ರತೀತೇಃ *'ಯದ್ಗುಣ'* ಇತ್ಯಭಿವ್ಯಂಜಿತಮ್; *'ಅಹಮೇವಾಸಂ'* ಇತ್ಯನೇನ ಸ್ರಷ್ಟೃತ್ವ-ಪಾಲಕತ್ವಸಂಹರ್ತೃತ್ವರೂಪ ಜಗದ್ವಯಾಪಾರರೂಪ ಕರ್ಮ ಪ್ರತಿಪಾದನೇನ *'ಯತ್ಕರ್ಮಕ'* ಇತ್ಯಭಿವ್ಯಕ್ತೀಕೃತಮ್ ॥೩೪॥

ಭಾವಾನುವಾದ- ಈ ಪ್ರಕಾರ ಪರಸ್ಪರ ವಿಲಕ್ಷಣ ಚಿತ್-ಅಚಿತ್ ಸ್ವರೂಪವನ್ನು ವಿವರಿಸಲಾಗಿದೆ. ಅನಂತರ ಶ್ರೀಭಗವಂತನು ಈ ಎರಡರಲ್ಲಿ ತನ್ನ ಅನುಪ್ರವೇಶದ ಮೂಲಕ ಅದರ ಅಧಿಕಾರರೂಪದ ಪಾಲನೆ ಮತ್ತು ಅದರಿಂದ ಉತ್ಪನ್ನವಾಗುವ ದೋಷದ ಅಸ್ಪರ್ಶತೆಯನ್ನೂ ಸಹ ತಿಳಿಸುತ್ತಿದ್ದಾರೆ. ಆಕಾಶ, ವಾಯು ಮತ್ತು ತೇಜಸ್ಸು ಇತ್ಯಾದಿ ಎಲ್ಲ ಮಹಾಭೂತವು ಯಾವ ರೀತಿ ಉಚ್ಚ-ನೀಚ ವಿಭಿನ್ನ ಪ್ರಾಣಿಗಳಲ್ಲಿ ಮತ್ತು ಮಡಿಕೆ ವಸ್ತ್ರಾದಿ-ಭೌತಿಕ ಪದಾರ್ಥಗಳಲ್ಲಿ ಪ್ರವಿಷ್ಟವಾಗಿದ್ದರೂ ಸಹ ಘಟಾದಿಯ ಭೇದ ಮತ್ತು ಛೇದನಾದಿ ದೋಷಗಳಿಂದ ಅಸ್ಪೃಷ್ಟವಾದ ಕಾರಣ ಅದರಲ್ಲಿ ಅಪ್ರವಿಷ್ಟವಾಗಿದೆ, ಅದೇ ರೀತಿ ನಾನು ಸಹ ಆ ಎಲ್ಲ ಚೇತನ ಮತ್ತು ಅಚೇತನಸಮ್ಮೂಹದಲ್ಲಿ ಆತ್ಮರೂಪದಿಂದ ಅನುಪ್ರವಿಷ್ಟನಾಗಿದ್ದರೂ ಸಹ ಆ ಎಲ್ಲದರಲ್ಲಿ ಅಪ್ರವಿಷ್ಟನಾಗಿದ್ದೇನೆ- ಅದರ ದೋಷಗಳ ಮೂಲಕ ಸ್ಪೃಷ್ಟನಾಗಿಲ್ಲ. ಅಥವಾ ಪರಿತ್ಯಕ್ತ ಚೇತನ ಮತ್ತು ಅಚೇತನ ವಸ್ತುಗಳಲ್ಲಿ ಅನುಪ್ರವೇಶ ಮಾಡಿದರೂ ಸಹ ಶ್ರೀಭಗವಂತನು ತನ್ನ ಅಪರಿತ್ಯಕ್ತವನ್ನು ಉದಾಹರಣೆಯೊಂದಿಗೆ ಹೇಳುತ್ತಿದ್ದಾರೆ- ಯಾವ ಪ್ರಕಾರ ಮಹಾಭೂತಸಮ್ಮೂಹವು ಒಳಗು ಮತ್ತು ಹೊರಗು ಸರ್ವತ್ರ ವ್ಯಾಪ್ತವಾಗಿರುವುದೋ, ಅದೇ ಪ್ರಕಾರ ನಾನೂ ಸಹ ಸಮಸ್ತ ಪ್ರಾಣಿಗಳಲ್ಲು ಪ್ರವಿಷ್ಟನಾಗಿದ್ದರೂ ಸಹ ಆ ಎಲ್ಲದರ ಹೊರಗೂ ಸಹ ವ್ಯಾಪ್ತನಾಗಿದ್ದೇನೆ.

ಈ ಪ್ರಕಾರ ಅಪರಿತ್ಯಕ್ತವಾದ ಪ್ರತಿಪಾದನೆಯ ಮೂಲಕ ಶ್ಲೋಕ (೩೧) ದ 'ಯಾವಾನಹಂ' ವಿಷಯವು ಸ್ಪಷ್ಟೀಕೃತವಾಗಿದೆ. 'ಅಹಮೇವಾಸಮ್' ಶ್ಲೋಕ (೩೨) ದಲ್ಲಿ ಜಗತ್ಕಾರಣತ್ವ, ಅದರ ಮೂಲಕ ಆಕ್ಷಿತ ಚೇತನ-ಅಚೇತನ-

ವಿಲಕ್ಷಣತೆ, ಸರ್ವಜ್ಞತೆ, ಸರ್ವಶಕ್ತಿತ್ವ ಇತ್ಯಾದಿ ಪ್ರತಿಪಾದನಪೂರ್ವಕ ಶ್ಲೋಕದಲ್ಲಿ (೩೧) 'ಯಥಾಭಾವಃ' ಸ್ಪಷ್ಟೀಕೃವಾಗಿದೆ. 'ಋತೇ'ರ್ಥಂ' ಶ್ಲೋಕದಲ್ಲಿ (೩೩) ಪರಮಾತ್ಮ–ಶರೀರಭೂತ ತತ್ವದ ಪರಸ್ಪರ ವಿಲಕ್ಷಣ ಚೇತನ–ಅಚೇತನ–ಸ್ವರೂಪದ ಪ್ರತಿಪಾದನೆಯ ಮೂಲಕ (೩೧ನೆಯ ಶ್ಲೋಕದ) 'ಯದ್ರೂರ' ಸ್ಪಷ್ಟೀಕೃವಾಗಿದೆ. ಈ (೩೪) ಶ್ಲೋಕದಲ್ಲಿ 'ತಥಾ ತೇಷು' ಮೂಲಕ ಚೇತನಾಚೇತನದ ಪರಮಾತ್ಮ–ಶರೀರತ್ವ ಪ್ರತಿಪಾದನೆ ಹೇತು ಶರೀರಗತ ಧರ್ಮ ಅಂದರೆ ಜೀವಾತ್ಮದ ಶರೀರಗತವಾದ ಬಾಲ್ಯ, ಯೌವನ ಇತ್ಯಾದಿ ಧರ್ಮಗಳಂತೆ ನನ್ನ ಶರೀರಭೂತ ಚೇತನಾಚೇತನ ಮೂಲಕ ನನ್ನದೇ ಧರ್ಮದ ರೂಪದಲ್ಲಿ ಪ್ರತೀತಿಯಿಂದ (೩೧ನೇ ಶ್ಲೋಕದ) 'ಯದ್ಗುಣ' ಪದ ಸ್ಪಷ್ಟವಾಗಿದೆ. (೩೨ ನೇ ಶ್ಲೋಕದ) 'ಅಹಮೇವಾಸಮ್' ಪದದ ಮೂಲಕ ಸೃಷ್ಟಿ, ಪಾಲನೆ ಮತ್ತು ಸಂಹಾರರೂಪ ಜಗತ್ತು–ಕ್ರಿಯಾರೂಪ ಲೀಲೆಯ ಪ್ರತಿಪಾದನೆಯ ಮೂಲಕ 'ಯತ್ಕರ್ಮಕಃ' (೩೧ ನೇ ಶ್ಲೋಕದ) ಪದ ಸ್ಪಷ್ಟಪಡಿಸಲಾಗಿದೆ.॥೩೪॥

ಶ್ರೀಶುಕದೇವಪಾದರು

ಯಥಾತ್ಮಮಾಯಾಯೋಗೇನ ವಿಶ್ವಂ ವಿಸೃಜನ್ ವಿಲುಮ್ಪನ್ ಭಗವಾನ್ ಕ್ರೀಡತಿ, ತದ್ವಿಷಯಾ ಮನೀಷಾ ಸಂಕ್ಷೇಪತಃ ಚತುರಾನನೇ ಅರ್ಪಿತಾ, ಮಾಯಾ ಚ ದರ್ಶಿತಾ । ಅಥ ವಿಶ್ವಸೃಷ್ಟ್ಯಾದಿಹೇತೋಃ ಆತ್ಮನೋ ವಿಶ್ವಗತದೋಷಾಸ್ಪೃಷ್ಟತ್ವಂ, ಪರಿಚ್ಛಿನ್ನೇಷು ಅನುಪ್ರವಿಷ್ಟಸ್ಯಾಪಿ ಅಪರಿಚ್ಛಿನ್ನತ್ವಂ ಚಾಹ– ಯಥೇತಿ । ಯಥಾ ಮಹಾನ್ತಿ ಭೂತಾನಿ ಖವಾತಾದೀನಿ ಉಚ್ಚಾವಚೇಷು ಭೌತಿಕೇಷು ಘಟಪಟಾದಿಷು ಭೇದಕ್ಲೇದಾದ್ಯರ್ಹೇಷು ಪರಿಚ್ಛಿನ್ನೇಷು ಅನುಸೃಷ್ಟೇರನಂತರಂ ಪ್ರವಿಷ್ಟಾನ್ಯಪಿ ಅಪ್ರವಿಷ್ಟಾನಿ; ಘಟಪಟಾದಿವತ್ ಭೇದಕ್ಲೇದದೋಷಾ–ಸ್ಪೃಷ್ಟತ್ವಾತ್ ಘಟಪಟಾದಿಭಿರನಾವೃತತ್ವಾಚ್ಚ, ತಥಾ ತೇಷು ಮಹಾಭೂತೇಷು ಬ್ರಹ್ಮಾಣ್ಡರೂಪೇಣ ಸ್ಥಿತೇಷು 'ತತ್ಸೃಷ್ಟ್ವಾ ತದೇವಾನುಪ್ರಾವಿಶತ್' ಇತಿ ಶ್ರುತ್ಯುಕ್ತರೀತ್ಯಾ ಅನುಪ್ರವಿಷ್ಟೋಽಸ್ಮಿ, ತಗ್ದತದೋಷಾಸ್ಪೃಷ್ಟತ್ವಾತ್ ತೈರನಾವೃತತ್ವಾಚ್ಚ । ಏವಂ, ಚಿದಚಿದಾತ್ಮಕಂ ಜಗತ್ಕಾರಣಂ ಮಾಂ ಜ್ಞಾತ್ವಾ ಜ್ಞಾನವಿಜ್ಞಾನವಾನ್ ಭವತಿ । ಜ್ಞಾನೇ ಜಾತೇ ಪರಮಮಂಗಲಗುಣಶಕ್ತ್ಯಾದ್ಯಾಶ್ರಯೇ ಜ್ಞೇಯೆ ಭಕ್ತಿಯೋಗೇನ ಕೃತಾರ್ಥೋ ಭವತೀತಿ ಸೂಕ್ಷ್ಮಭಾಗವತಸಿದ್ಧಾಂತಃ ॥೩೪॥

ಭಾವಾನುವಾದ– ಶ್ರೀಭಗವಂತನು ಯಾವ ಭಾವದಿಂದ ಆತ್ಮಮಾಯೆಯ ಯೋಗದಿಂದ ವಿಶ್ವವನ್ನು ವಿಶೇಷಭಾವದಿಂದ ಸೃಷ್ಟಿ ಮತ್ತು ವಿಲೋಪಕರ ಲೀಲೆಗಳನ್ನು ಮಾಡುತ್ತಾನೋ, ಆ ವಿಷಯದಲ್ಲಿ ಶ್ರೀಭಗವಂತನು ಚತುರಾನನ (ಬ್ರಹ್ಮ) ನಿಗೆ ಮನೀಷಾ (ಬುದ್ದಿ) ಕೊಟ್ಟಿದಾರೆ ಹಾಗೂ ತನ್ನ ಮಾಯೆಯನ್ನೂ ಸಹ ತೋರಿಸಲಾಗಿದೆ. ತದನಂತರ ವಿಶ್ವ–ಸೃಷ್ಟಿಗೆ ಕಾರಣ ಸ್ವಯಂ ವಿಶ್ವಗತ ದೋಷದ ಸ್ಪರ್ಶದ ಅಭಾವ ಮತ್ತು ಪರಿಚ್ಛಿನ್ನನಾಗಿ (ಅವ್ಯಕ್ತನಾಗಿ) ವಸ್ತುಗಳಲ್ಲಿ ಅನುಪ್ರವೇಷ ಮಾಡಿದರೂ ಸಹ ತನ್ನ ಅಪರಿಚ್ಛಿನ್ನತೆಯನ್ನು ತಿಳಿಸುತ್ತಿದ್ದಾರೆ. ಯಾವ ರೀತಿ ಆಕಾಶ, ವಾಯು ಮುಂತಾದ ಮಹಾಭೂತಗಳು ಉಚ್ಚ–ನೀಚ ಭೌತಿಕ ಭೇದ–

ಕ್ಲೇಶಗಳ ಯೋಗ್ಯ ಪರಿಚ್ಛಿನ್ನ ಮಡಿಕೆ-ವಸ್ತ್ರಾದಿಗಳಲ್ಲಿ ಅನುಸೃಷ್ಟಿಯ ನಂತರ ಪ್ರವೇಶಿಸಿದರೂ ಸಹ ಮಡಿಕೆ-ವಸ್ತ್ರಗಳಂತೆ ಭೇದ-ಕ್ಲೇಶ-ದೋಷದಿಂದ ಅಸ್ಪೃಷ್ಟ ಹಾಗೂ ಮಡಿಕೆ-ವಸ್ತ್ರಗಳ ಮೂಲಕ ಆವೃತವಾಗದಿರುವ ಕಾರಣ ಅಪ್ರವಿಷ್ಟವಾಗಿದೆ, ಅದೇ ರೀತಿ "ತತ್ಸೃಷ್ಟ್ವಾ ತದೇವಾನುಪ್ರಾವಿಶತ್ ಅರ್ಥಾತ್ ಅದನ್ನು ಸೃಷ್ಟಿ ಮಾಡಿ ಅದರಲ್ಲಿಯೇ ಅನುಪ್ರವೇಶಿಸುತ್ತದೆ"- ಈ ವೇದೋಕ್ತ-ರೀತಿಯ ಅನುಸಾರವಾಗಿ ನಾನು ಬ್ರಹ್ಮಾಂಡ ರೂಪದಲ್ಲಿ ಸ್ಥಿತನಾಗಿ ಮಹಾಭೂತಗಳಲ್ಲಿ ಅನುಪ್ರವೇಶಿಸಿದರೂ ಸಹ ಅದರ ದೋಷಗಳಿಂದ ಅಸ್ಪೃಷ್ಟ ಹಾಗೂ ಅದರ ಮೂಲಕ ಅನಾವೃತನಾಗಿರುವ ಕಾರಣ ಅದರಲ್ಲಿ ಅಪ್ರವಿಷ್ಟಿತನಾಗಿಯೂ ಸಹ ಇದ್ದೇನೆ. ಈ ರೀತಿ ನನ್ನನೇ ಚಿತ್-ಅಚಿದಾತ್ಮಕ ಜಗತ್ತಿನ ಕಾರಣವನ್ನು ತಿಳಿದು ಮನುಷ್ಯನು ಜ್ಞಾನವಂತ ಹಾಗೂ ವಿಜ್ಞಾನವಂತನಾಗುತ್ತಾನೆ. ಜ್ಞಾನಿಯಾಗುವುದರಿಂದ ಪರಮ-ಮಂಗಳ ಗುಣ-ಶಕ್ತಿಯ ಆಶ್ರಯಭೂತನಾದ 'ಜ್ಞೇಯತತ್ತ್ವ'ನಾದ- ನನ್ನಲ್ಲಿ ಪ್ರೇಮಭಕ್ತಿ-ಯೋಗವನ್ನು ಉದಯಿಸಿಕೊಂಡು ಕೃತಾರ್ಥನಾಗುತ್ತಾನೆ- ಇದೇ ಸೂಕ್ಷ್ಮವಾದ ಭಾಗವತ-ಸಿದ್ಧಾಂತ.

ಶ್ರೀವಲ್ಲಭಾಚಾರ್ಯಪಾದರು

ಏವಂ ಪ್ರಮೇಯಂ-ಪ್ರಮಾಣಂ ಚ ನಿರೂಪ್ಯ ವಿಷಯಂ ನಿರೂಪಯತಿ- 'ಯಥಾ ಮಹಾನ್ತಿ ಭೂತಾನಿ' ಇತಿ । ವೇದೇನ ಹಿ ಪ್ರಕಾರದ್ವಯೇನ ಪದಾರ್ಥಾನ್ ನಿರೂಪ್ಯನ್ತೇ- ಸಾಕಾರೋ-ನಿರಾಕಾರಃ; ಸಾವಯವೋ-ನಿರವಯವಃ; ಪೂರ್ಣಃ-ಪರಿಚ್ಛಿನ್ನ ಇತ್ಯಾದಿ ಪ್ರಕಾರೇಣ । ತದುಭಯಮಪಿ ಯಥಾ ವಿಷಯೋ ಭವತಿ ತದರ್ಥಮಿದಮಾರಭ್ಯತೇ । ಅನ್ಯಥಾ ಏಕಪಕ್ಷೋ ವಿಷಯತಾ ಸ್ಯಾತ್, ತಥಾ ಸತಿ ವೇದಾನಾಮಂಶತೇಽಪ್ರಾಮಾಣ್ಯಂ ಭವೇತ್ । ಅತಃ ಸರ್ವವೇದಪ್ರಾಮಾಣ್ಯಸಿದ್ಧಯೇ ಉಭಯವಿಧೋ ವಿಷಯೋ ನಿರೂಪ್ಯತೇ । ಯಥಾ ಮಹಾನ್ತಿ ಭೂತಾನಿ ಆಕಾಶಾದೀನಿ ಭೂತೇಷು ಘಟಾದಿಷು ಉಚ್ಚಾವಚೇಷು ಅನೇಕರೂಪೇಷು ಸ್ಥೂಲಸೂಕ್ಷ್ಮದೀರ್ಘಹ್ರಸ್ವವಕ್ರತ್ವಾದಿ ಭಿನ್ನೇಷು ಕಾರಣತ್ವೇನ ಪ್ರವಿಷ್ಟಾನಿ, ಪುನಃ ಅನುಪ್ರವಿಷ್ಟಾನಿ ಭವನ್ತಿ, ತತೋಽಪ್ಯಪ್ರವಿಷ್ಟಾನಿ ಭವನ್ತಿ । ತಥಾ ಅಹಂ ಸರ್ವತ್ರ ಕಾರಣಭೂತಃ ಸರ್ವತ್ರಾನುಪ್ರವಿಷ್ಟೋಽಪಿ ನ ಕಾರಣಭೂತೋ, ನಾನುಪ್ರವಿಷ್ಟ ಇತ್ಯರ್ಥಃ । 'ತೇಷು' ಇತಿ ಪುನರ್ವಚನಂ ವಾಕ್ಯದ್ವಯಬೋಧಾರ್ಥಮ್; ಅನ್ಯಥಾ, ನಕಾರಃ ಪೂರ್ವವಾಕ್ಯ ಏವ ಸಂಬಧ್ಯೇತ । ಕಾರಣಂ ಹಿ ಕಾರ್ಯೇ ಅನುಪ್ರವಿಶತಿ, ಕಾರ್ಯಂ ಚ ಕಾರಣೇ ಸಮವೇತಮುತ್ಪದ್ಯತೇ; ಅನ್ಯಥಾ, ಪಟಸ್ಯ ನಿರಾಧಾರತೋತ್ಪತ್ತಿ ಸ್ಯಾತ್ । ತಥಾ ಸತಿ ನೋತ್ಪದ್ಯತೆ ಉತ್ಪದ್ಯಮಾನಂ ವಾ ಸರ್ವತ್ರೋತ್ಪದ್ಯೇತ । ಯಥಾ ಘಟೋ ಭಗವಾನ್ ಯಥಾ ಶಬ್ದಃ । ಕುಂಭಕಾರಕೃತ್ಯಾ ಪ್ರಾಕೃತ ಏವ ಘಟ ಉತ್ಪದ್ಯತೆ, ವಿಷಯತಾವತ್ । ನನು ಭಗವದ್ರೂಪಃ ಸಿದ್ಧತ್ವಾತ್ ಶಬ್ದೋಪಿ ತಾಲ್ವೋಷ್ಠಪುಟವ್ಯಾಪಾರೇಣೋತ್ಪದ್ಯಮಾನಃ ಸರ್ವತ್ರೈವ ಶ್ರೋತ್ರೇಷೂತ್ಪದ್ಯತೆ, ಏವಂ ನಿರಾಧಾರಃ ಪಟೋಽಪಿ ಭವೇತ್ । ತಥಾ ಸತಿ ತನ್ತ್ವಾಧಾರತಯಾ ಉತ್ಪನ್ನೇ ಪಟೇ ಯದಿ ತನ್ತವೋ ನ ಪ್ರವಿಶೇಯುಃ, ತದಾ ಪಟೇ ತನ್ತುಪ್ರತೀತಿರ್ನ ಸ್ಯಾತ್; ಜಾಯಮಾನಾ ವಾ ಭ್ರಾಂತಾ ಸ್ಯಾತ್ । ಅಬಾಧಿತತ್ವಾಚ್ಚ ನ ಭ್ರಾಂತಾ । ಶುಷ್ಕಾ ತು ಯುಕ್ತಿಃ ಕ್ವಾಪಿ ಪದಮಲಭಮಾನಾ ಸ್ವಯಮೇವ ಭ್ರಾಂತಾ ಭವತಿ । ಅತಃ

ಏಕಸ್ಯೈವ ಆಧಾರತ್ವಮಾಧೇಯತ್ವಂ ಚ ಕಾರಣಕಾಲೇ–ಕಾರ್ಯಕಾಲೇ ಚ ವ್ಯವಸ್ಥಿತಂ ಭವತಿ । ಏವಂ ಮಹಾಭೂತೇಷು ತ್ರಯಂ– ಆಧಾರತ್ವಂ, ಆಧೇಯತ್ವಂ, ವಿಶೇಷತ ಆಧೇಯತ್ವಮಿತಿ; ತದಾಹ– 'ಪ್ರವಿಷ್ಟಾನ್ಯಪ್ರವಿಷ್ಟಾನಿ' ಇತಿ । ಅಥವಾ, ಮಹಾಭೂತೇಷು ಪಂಚಧಾಕಾರಣತ್ವೇನ, ಪೂರ್ವಮೇವ ತತ್ರ ವಿದ್ಯಮಾನತ್ವೇನ, ಮಹಾಭೂತತ್ವೇನ ಚೇತ್ಯಪ್ರವೇಶಸ್ತ್ರೇಧಾ। ಕಾರಣಪ್ರವೇಶವತ್ಪ್ರವೇಶತ್ವೇನ, ಪೃಥಕ್ ಪ್ರವೇಶತ್ವೇನ ಚ ಪ್ರವೇಶೋ ದ್ವೇಧಾ । 'ತಥಾತೇಷು' ಇತಿ ಪಂಚಧಾಪಿ, 'ನ ತೇಷು' ಇತಿ ಪುನಃ ಪಂಚಧಾ । ಏವಂ ಭಗವತಿ ದಶಾಧಾ ಭವತಿ । ತಥಾ ಸತಿ ಸರ್ವತ್ರ ಜಗತಿ ಭಗವಾನ್ ದಶವಿಧಲೀಲಾಯುಕ್ತೋ ದಶಧಾ ಜ್ಞಾತವ್ಯಾಃ ॥೩೪॥

ಭಾವಾನುವಾದ– ಈ ಪ್ರಕಾರ ಪ್ರಮೇಯ– ಭಗವತ್–ಸ್ವರೂಪ ಮತ್ತು ಪ್ರಮಾಣ– ವೇದಗಳ ನಿರೂಪಣೆ ಮಾಡುತ್ತ ಈಗ ಜಗದ್ರೂಪ ಭಗವಂತನ ನಿರೂಪಣೆಯನ್ನು 'ಯಥಾ ಮಹಂತಿ' ಇತ್ಯಾದಿ ಶ್ಲೋಕದ ಮೂಲಕ ಹೇಳುತ್ತಿದ್ದಾರೆ. ವೇದಗಳಲ್ಲಿ ಎರಡು ಪ್ರಕಾರಗಳಾಗಿ ವಸ್ತುವಿನ ನಿರೂಪಣೆ ಮಾಡಲಾಗಿದೆ. ಸಾಕಾರ–ನಿರಾಕಾರ, ಸಾವಯವ– ನಿರವಯವ, ಪೂರ್ಣ–ಪರಿಚ್ಛಿನ್ನ ಇತ್ಯಾದಿ. ಈ ಎರಡರಲ್ಲಿ (ಪ್ರಕಾರ) ಯಾವ ಪ್ರಕಾರ ಜ್ಞಾನದ ವಿಷಯವಿದೆಯೋ ಅಂದರೆ ಯಾವ ಪ್ರಕಾರದ ನಿರೂಪಣೆಯಿಂದ ಅರ್ಥವಾಗುತ್ತದೋ, ಅದಕ್ಕಾಗಿ ಈ ಪ್ರಸಂಗವನ್ನು ಆರಂಭ ಮಾಡಲಾಗುತ್ತಿದೆ. ಅದೇ ಈ ರೀತಿಯಾದ ನಿರೂಪಣೆ ಮಾಡದಿದ್ದರೆ ಎರಡರಿಂದಲು ಒಂದು ಪಕ್ಷ (ವಸ್ತು) ಮಾಯಿಕವಾಗುತ್ತದೆ. ವೇದವು ವಸ್ತುವಿನ ಎರಡು ಪ್ರಕಾರವನ್ನು ಬ್ರಹ್ಮ ಎನ್ನುತ್ತದೆ, ಅದಾಗ್ಯೂ ಏನಾದರೂ ಸಾಕಾರ ಅಥವಾ ನಿರಾಕಾರದಿಂದ ಯಾವುದಾದರೂ ಒಂದು ಮಾಯಿಕವಾದರೆ ವೇದವೂ ಸಹ ಒಂದು ಅಂಶದಲ್ಲಿ ಅಪ್ರಾಮಾಣಿಕವಾಗಿಬಿಡುತ್ತದೆ. ಆದ್ದರಿಂದ ಸಮಸ್ತ ಪ್ರಕಾರದಿಂದ ವೇದಗಳ ಪ್ರಾಮಾಣಿಕತೆಯ ಸಿದ್ಧಿಗಾಗಿ ಎರಡು ಪ್ರಕಾರದಿಂದ ವಿಷಯ ವಸ್ತುವಿನ ನಿರೂಪಣೆ ಮಾಡುತ್ತಾ 'ಯಥಾ ಮಹಾನ್ತಿ' ಇತ್ಯಾದಿಯನ್ನು ಹೇಳುತ್ತಿದ್ದಾರೆ. ಯಾವ ರೀತಿ ಪೃಥ್ವಿ, ಜಲ, ಅಗ್ನಿ, ಆಕಾಶ ಇತ್ಯಾದಿ ಮಾಹಾಭೂತವು ಉಚ್ಚ–ನೀಚ ಅನೇಕ ಪ್ರಕಾರದಿಂದ ಸ್ಥೂಲ, ಸೂಕ್ಷ್ಮ, ಹ್ರಸ್ವ, ದೀರ್ಘ, ಸರಳ, ವಕ್ರ ಇತ್ಯಾದಿ ವಿಭಿನ್ನ ರೂಪದಿಂದ ಮಡಿಕೆ ಇತ್ಯಾದಿಯಲ್ಲಿ ಕಾರಣ ರೂಪದಿಂದ ಪ್ರವೇಶಿಸಿದೆ ಹಾಗೂ ಪುನಃ ಕಾರ್ಯ ರೂಪದಿಂದ ಅನೇಕ ಪ್ರಕಾರದಿಂದ ಅನುಪ್ರವೇಶಿಸಿದೆ ಮತ್ತು ಪ್ರಥಮವಾಗಿ ಕಾರಣ ರೂಪದಲ್ಲಿ ನೆಲಸಿರುವ ಕಾರಣ ಅಪ್ರವಿಷ್ಟವಾಗಿದೆ (ಅಪ್ರವೇಶ ಸ್ಥಿತಿಯಲ್ಲಿದೆ) ಹಾಗೂ ಅಲ್ಲಲ್ಲಿ ಅನುಪ್ರವಿಷ್ಟ ಸ್ಥಿತಿಯಲ್ಲೂ ಸಹ ಇಲ್ಲ. ಅದೇ ಪ್ರಕಾರದಿಂದಲೇ ನಾನೂ (ಭಗವಂತನೂ) ಸಹ ಸತ್–ಇತ್ಯಾದಿ ಸ್ವರೂಪದಿಂದ ಸರ್ವತ್ರ ನೆಲಸಿದ್ದರೂ ಸಹ ಕಾರಣ ರೂಪದಿಂದ (ತತ್ವ ರೂಪದಿಂದ) ಪ್ರವೇಶಿಸುತ್ತೇನೆ ಹಾಗೂ ಜೀವಾದಿ ರೂಪದಿಂದ ಅನುಪ್ರವೇಶ ಮಾಡುತ್ತೇನೆ. ಆದರೂ ವಾಸ್ತವದಲ್ಲಿ ಮೊದಲನಿಂದಲೂ ಸಹ ಸರ್ವತ್ರ ನೆಲಸಿರುವ ಕಾರಣ ಅನುಪ್ರವಿಷ್ಟನೂ ಅಲ್ಲ, ಹಾಗೂ ಕಾರಣರೂಪನೂ ಸಹ ಅಲ್ಲ. ಪ್ರವೇಶ ಹಾಗೂ ಅನುಪ್ರವೇಶದ ಅನ್ವಯವನ್ನು ತೆಗೆದುಕೊಂಡರೆ ಎರಡು ವಾಕ್ಯಗಳಾಗುತ್ತವೆ, ಆದ್ದರಿಂದ ಪುನಃ ಶಬ್ದವನ್ನು ಹೇಳಲಾಗಿದೆ. ಅಥವಾ ಮಹಾಭೂತ ಹಾಗೂ ಭಗವಂತ

ಎರಡಕ್ಕು ಎರಡು ವಾಕ್ಯಗಳಿವೆ ಹಾಗೂ ಎರಡರಲ್ಲೂ 'ನ' ಕಾರದ ಅನ್ವಯವುಂಟು, ಆದ್ದರಿಂದ ಪುನಃ ಎಂಬ ಶಬ್ದವನ್ನು ಉಚ್ಚರಿಸಲಾಗಿದೆ, ಅನ್ಯಥಾ 'ನ' ಕಾರದ ಅನ್ವಯವು "ಮಹಾಂತಿ ಭೂತಾನಿ" ಎಂಬುದರೊಂದಿಗೆ ಆಗುತ್ತಿತು.

ಕಾರಣವೇ ಕಾರ್ಯದಲ್ಲಿ ಪ್ರವೇಶಿಸುತ್ತದೆ ಹಾಗೂ ಕಾರ್ಯವೂ ಸಹ ಕಾರಣದಲ್ಲಿ ಸೇರಿ ಉತ್ಪನ್ನವಾಗುತ್ತದೆ. ಏನಾದರೂ ನಂತರವೂ ಸಹ ಕಾರ್ಯದಲ್ಲಿ ಕಾರಣದ ಪ್ರವೇಶವಾಗದಿದ್ದರೇ ವಸ್ತ್ರರೂಪ ಕಾರ್ಯದ ಉತ್ಪತ್ತಿಯನ್ನು ನಿರಾಧಾರವೆಂದು ಭಾವಿಸಲಾಗುತ್ತದೆ, ಆದರೆ ಹಾಗಲ್ಲ. ದಾರವು ಕಾರಣ ರೂಪದಿಂದ ಮೊದಲು ನೆಲಸಿರುತ್ತದೆ, ಆದರೆ ವಸ್ತ್ರರೂಪವು ಕಾರ್ಯವಾದರೂ ಸಹ ಅದು ಮತ್ತೆ ಪುನಃ ಪ್ರವೇಶಿಸುತ್ತದೆ. ಮೊದಲು ಅದರ ಕಾರಣರೂಪ ಹಾಗೂ ಕಾರ್ಯವಾದ ನಂತರ ಅದರ ಆಧಾರರೂಪ. ಏನಾದರೂ ಆಧಾರ ರೂಪದಿಂದ ಕಾರಣದ ಅನುಪ್ರವೇಶವಾಗದಿದ್ದರೆ ಬಟ್ಟೆಯ (ವಸ್ತ್ರದ) ಉತ್ಪತ್ತಿ ಆಗುವುದಿಲ್ಲ. ದಾರದಿಂದಲೇ ಬಟ್ಟೆ ಹಾಗೂ ಮಣ್ಣಿನಿಂದಲೇ ಮಡಿಕೆಯು ಉತ್ಪನ್ನವಾಗುವುದು, ಏನಾದರೂ ಈ ನಿಯಮವು ಇಲ್ಲದಿದ್ದರೆ ಆಗ ಮಡಿಕೆ-ವಸ್ತ್ರ ಸರ್ವತ್ರ ಉತ್ಪನ್ನವಾಗುವಂತಾಗುವುದು. ಕಾರಣದಲ್ಲಿ ಕಾರ್ಯವು ಸಮಾನವಾದ ಸಂಬಂಧದಿಂದಲೇ ಉತ್ಪನ್ನವಾಗುತ್ತದೆ. ಆದ್ದರಿಂದ ಹಿಂದೆ ಹೇಳಿದ ನಿಯಮವು ಪ್ರತ್ಯಕ್ಷವಾದದ್ದು, ಅಂದರೆ ಹೇಗೆ ಮಡಿಕೆ ರೂಪಿ ಭಗವಂತನು, ಹಾಗೇ ಶಬ್ದವು. ಶಬ್ದ ಕಾರಣ ರೂಪದಿಂದ ಕಾರ್ಯದಲ್ಲಿ ಮೊದಲಿನಿಂದಲೂ ನೆಲಸಿರುತ್ತದೆ ಹಾಗೂ ಕಾರ್ಯದಲ್ಲಿ ಸೇರಿ ಪ್ರಕಾಶಿತವಾಗುತ್ತದೆ.

ಮಡಿಕೆಯನ್ನು ನಿತ್ಯ ಎಂದು ಹೇಗೆ ಹೇಳಲು ಸಾಧ್ಯ? ಅದನ್ನು ಕುಂಬಾರನು ಬಡಿದ್ದು, ಅದು ನಿತ್ಯವಾಗಿದ್ದರೆ 'ಮಾಡಿದ್ದಾರೆ' ಎಂದು ಹೇಳುವುದಾದರು ಹೇಗೆ? ಎಂದು ಹೀಗೆ ಯಾರಾದರೂ ಪ್ರಶ್ನಿಸಿದರೆ ಅದಕ್ಕೆ ಉತ್ತರದಲ್ಲಿ ಹೇಳುತ್ತಾರೆ ಕುಂಬಾರನೇನೋ ಪ್ರಾಕೃತ ವಿಷಯತಾ ರೂಪಿ, ಅಥವಾ ಸತ್ಯ-ಅಸತ್ಯ ಮಡಿಕೆಯನ್ನು ಮಾಡುತ್ತಾನೆ, ಭಗವದ್ರೂಪ ಮಡಿಕೆಯನ್ನು ಮಾಡುವುದಿಲ್ಲ. ಭಗವದ್ರೂಪ ಮಡಿಕೆಯು ನಿತ್ಯವಾದದ್ದು. ನಿತ್ಯವಾಗಿರುವ ಮಡಿಕೆಯು ಅನಂತರ ಆ ಮಡಿಕೆಯಲ್ಲಿ ಅನುಪ್ರವೇಶ ಮಾಡುತ್ತದೆ. "ಗಣಂ ಯುಗಪದಾ ವಿಶತ್ ತತ್ಸೃಷ್ಟವಾ ತದೇವಾನು ಪ್ರಾವಿಶತ್" ಇತ್ಯಾದಿ ಭಾಗವತ, ವೇದ ಮುಂತಾದ ವಚನಗಳಿಂದ ಇದು ಸ್ಪಷ್ಟವಾಗಿದೆ. ಅದೇ ಪ್ರಕಾರ ಶಬ್ದವೂ ಸಹ ನಿತ್ಯ, ಆದರೆ ತಾಳ, ಗಾನ, ಪುಟ ಮುಂತಾದ ಪ್ರಯತ್ನಗಳಿಂದ ಅಭಿವ್ಯಕ್ತವಾಗುತ್ತ ಸರ್ವತ್ರ ಶ್ರೋತ್ರದಲ್ಲಿ (ಕಿವಿಯಲ್ಲಿ) ಉತ್ಪನ್ನವಾಗುತ್ತದೆ. ಈ ಪ್ರಕಾರದ ಅನುಪ್ರವೇಶ ವಸ್ತ್ರದಲ್ಲಿಯೂ ಸಹ, ಅನ್ಯಥಾ ವಸ್ತ್ರ ನಿರಾಧಾರ ಉತ್ಪನ್ನವಾಗುತ್ತದೆ, ಆದರೆ ಹೀಗೆ ಆಗುವುದಿಲ್ಲ. ಏನಾದರೂ ದಾರಗಳು ಬಟ್ಟೆಯಲ್ಲಿ ಆಧಾರ ರೂಪದಿಂದ ದಾರವು ಪ್ರವೇಶ ಮಾಡದಿದ್ದರೇ ಬಟ್ಟೆಯಲ್ಲಿ ದಾರಗಳ ಪ್ರತೀತಿ ಇರುವುದಿಲ್ಲ, ಆದರೆ ಪ್ರತೀತಿಯು ಇರುತ್ತದೆ. ಅಥವಾ ಭ್ರಮೆ ಎಂದು ಭಾವಿಸಲಾಗುತ್ತದೆ, ಆದರೆ ಹೀಗೂ ಸಹ ಅಲ್ಲ. ಈ ಪ್ರಮಾಣ ಸಿದ್ಧ ವಸ್ತುವನ್ನು ಅಸಿದ್ಧವಾಗಿಸಲು ಏನಾದರೂ

ಪ್ರಯತ್ನಿಸಿದರೆ ಅದು ಭ್ರಮೆಯರೂಪದಲ್ಲಿ ಗೋಚರಿಸುತ್ತದೆ.

ಅದಾಗ್ಯೂ ಬ್ರಾಹ್ಮ ಹಾಗೂ ಪಾದ್ಮ ಎರಡು ಪ್ರಕಾರದ ವಿಶ್ವ ಸೃಷ್ಟಿಗಳು ಭಗವದ್ರೂಪಗಳಾಗಿವೆ, ಆದರೂ ಎರಡು ಭಿನ್ನ-ಭಿನ್ನವಾಗಿವೆ. ಹೇಗೆ ಘಟಿತ ಪಾತ್ರೆ ಹಾಗೂ ಪೂರ್ಣ ಪಾತ್ರೆ. ಅದಾಗ್ಯೂ ಅವೆರಡು ತಾಮ್ರದಿಂದಲೇ ಮಾಡಲಾಗಿವೆ, ಆದರೂ ಭಿನ್ನ-ಭಿನ್ನವಾಗಿವೆ. ವೇದೋಕ್ತ ಬ್ರಹ್ಮ ಜಗತ್ತಿನಲ್ಲಿ ಎರಡು ಕ್ರಮವಿದೆ- ಯುಗಪತ್ (ಏಕಕಾಲಿಕ) ಮತ್ತು ಕ್ರಮಿಕ ಸ್ವರ್ಗ ಹಾಗೂ ಪಾದ್ಮ ಜಗತ್ತಿನಲ್ಲೂ (ಸ್ವರ್ಗದಲ್ಲೂ) ಎರಡು ಭೇದವಿದೆ. ಪೂರ್ಣ ಪಾತ್ರೆಯಂತೆ ಪದ್ಮ ಸ್ವರ್ಗದಲ್ಲಿ ಸ್ವಲ್ಪ ಮಾಯೆಯದ್ದೂ ಸಹ ಅಂಶವಿರುತ್ತದೆ. ಯಾವ ರೀತಿ ಪೂರ್ಣ ಪಾತ್ರದಲ್ಲಿ ಆಕಾರವು ನಿಖರವಾಗಿರುತ್ತದೆ ಹಾಗೂ ಬಾಕಿ ಎಲ್ಲ ಅಂಶವು ತಾಮ್ರ-ತಾಮ್ರವಾಗಿರುತ್ತದೆ, ಅದೇ ರೀತಿ ಪೌರಾಣಿಕ ಪದ್ಮ ಸ್ವರ್ಗದಲ್ಲಿ ಎರಡು ಬೀಜಗಳಿವೆ- ಆತ್ಮ ಹಾಗೂ ಮಾಯೆ. ವೈದಿಕ ಬ್ರಾಹ್ಮ-ಜಗತ್ತಿನಲ್ಲಿ ಮಾಯೆಯ ಯಾವುದೇ ಅಂಶವಿಲ್ಲ, ಎಲ್ಲವೂ ಆಧಾರ-ಆಧೇಯ ಬ್ರಹ್ಮವೇ ಬ್ರಹ್ಮವಾಗಿರುತ್ತವೆ. ಯಾವ ರೀತಿ ಘಟಿತ ಪಾತ್ರಯಲ್ಲಿ ಆಕಾರ ಮುಂತಾದ ಎಲ್ಲವು ಮಡಿಕೆಯಿಂದ (ಮಣ್ಣಿನಿಂದ) ಮಾಡಲಾಗಿರುತ್ತದ್ದೋ, ಅದೇ ರೀತಿ ಬ್ರಾಹ್ಮ-ಜಗತ್ತಿನಲ್ಲಿಯೂ ಸಹ 'ಏಕೋऽಹಂ ಬಹುಸ್ಯಾಂ' ಈ ಇಚ್ಛೆಯಿಂದ ಹಾಗೂ 'ತಸ್ಮಾದ್ವಾ ಎತಸ್ಮಾತ್' ಈ ವಚನಗಳಿಂದ ಕ್ರಮವಾಗಿ ಎಲ್ಲವೂ ಭಗವಂತನೇ ಆಗಿಬಿಡುತ್ತಾನೆ. ಇದರಲ್ಲಿ ಅನ್ಯ ಯಾವುದೇ ಸಂಬಂಧವಿಲ್ಲ. ಇದೇ ಬ್ರಾಹ್ಮ-ಸೃಷ್ಟಿಯಲ್ಲಿ ಬೇರೆ ಯುಗಪತ್ (ಏಕಕಾಲಿಕ) ಸ್ವರ್ಗವುಂಟು. "ಯಥಾಗ್ನೇಃ ಕ್ಷುದ್ರಾಃ", "ತಥಾऽಕ್ಷರಾತ್ ಸಂಭವತೀಹ ವಿಶ್ವಂ" ಮುಂತಾದ ವಚನಗಳಲ್ಲಿ ಬ್ರಾಹ್ಮ ಯುಗಪತ್ ಸ್ವರ್ಗದ ನಿರೂಪಣೆ ನೀಡಲಾಗಿದೆ. ಇದರಲ್ಲಿಯೂ ಸಹ ಬೇರೆ ಯಾವುದೇ ಸಂಬಂಧವೂ ಇಲ್ಲ. ಶುದ್ಧ ಬ್ರಹ್ಮವೇ ಬ್ರಹ್ಮವಾಗಿದೆ.

"ಇದಂ ಸರ್ವಂ ಯದಯಮಾತ್ಮಾ", "ಸರ್ವಂ ಖಲ್ವಿದಂ ಬ್ರಹ್ಮ", 'ಪುರುಷ ಎವದಂ ಸರ್ವಮ್", "ಸ ಆತ್ಮಾನಂ ಸ್ವಯಮಕುರೂತ" ಇತ್ಯಾದಿ ಶ್ರೂತಿಸಮೂಹವು ಕೇವಲ ಬ್ರಹ್ಮನಿಂದಲೇ ವಿಶ್ವದ ಉತ್ಪತ್ತಿ ಎಂದು ಹೇಳುತ್ತಿವೆ. ಶುದ್ಧ ಬ್ರಹ್ಮಮಾತ್ರವಿದೆ.

ಆದರೆ ಪಾದ್ಮ-ಸ್ವರ್ಗವು ಪುರಾಣೋಕ್ತವಾದದ್ದು. ಇದು ಪೂರ್ಣ ಪಾತ್ರೆಯಂತೆ ದ್ವಿಬೀಜವಾದದ್ದು. ಹೇಗೆ ಪಾತ್ರೆಯನ್ನು ಮಾಡುವವನು ಪಾತ್ರೆಯ ಎರಕದ ಅಚ್ಚನ್ನು ಮಾಡಿಕೊಂಡು ದ್ರವೀಭೂತವಾದ ತಾಮ್ರವನ್ನು ಅದರಲ್ಲಿ ತುಂಬುತ್ತಾನೆ ಹಾಗೂ ಅದು ಅಚ್ಚಿನಲ್ಲಿ ಪ್ರವೇಶಿಸಿ ಪಾತ್ರೆಯ ಆಕಾರವು ಧರಿಸುತ್ತದೆ, ಆದ್ದರಿಂದ ಇದರಲ್ಲಿ ಎರಡು ಕಾರಣಗಳಿವೆ- ತಾಮ್ರ ಹಾಗೂ ಎರಕದ ಅಚ್ಚು. ಅದೇ ರೀತಿ ಯಾವಾಗ ಬ್ರಹ್ಮ ತನ್ನ ಮಾಯಾ (ಪ್ರಕೃತಿ) ಶಕ್ತಿಯ ಪ್ರಯೋಗ ಮಾಡುತ್ತಾನೋ, ಆಗ ಈ ವಿಶ್ವದ ಆಕಾರ ಉಂಟಾಗುತ್ತದೆ. ಇದರಲ್ಲಿ ಎರಡು ಬೀಜಗಳಿವೆ- ಬ್ರಹ್ಮ ಹಾಗೂ ಮಾಯೆ. ಇದರಲ್ಲಿ ಸತ್ಯ ಹಾಗೂ ಅಸತ್ಯದ ಬೆರಿಕೆ ಇದೆ. ಈ ವಿಷಯದಿಂದ ಸಂಬಂಧಿಸಿದ "ದ್ವೇ ಅಸ್ಯ ಬೀಜೆ', 'ದ್ವಿಧಾ ಸಮಭವತ್ ಬೃಹತ್", "ಮಾಯಾ

ನಾಮ ಮಹಾಭಾಗ ಯಯೇದಂ ನಿರ್ಮಮೇ ವಿಭುಃ", "ಸದಸದ್ರೂಪಯಾ ಚಾಸೌ ಗುಣಮಯ್ಯಾಗುಣೋವಿಭುಃ" ಇತ್ಯಾದಿ ಪುರಾಣ ವಚನಗಳು ಪ್ರಸಿದ್ಧವಾದದ್ದು. ಈ ರೀತಿ ಮೂರು ಪ್ರಕಾರದ ಸ್ವರ್ಗವುಂಟು. ಇದರದ್ದು ಪಾರಮಾರ್ಥಿಕ ಸ್ಥಿತಿ. ಈಗ ಒಂದು ಅನ್ಯ ವಿಶ್ವವೂ ಸಹ ಯಾವ ಮಾಯಾ-ಮನೋಮಯವಿದೆ ಹಾಗೂ ಅದರ ವಿಷಯದಲ್ಲಿ "ವಿದ್ಧ ಮಾಯಾ ಮನೋಮಯಮ್", "ಮಾಯಾಮಯಂ ವೇದ ಸ ವೇದ ವೇದಮ್" ಮುಂತಾದ ಪುರಾಣ ವಚನಗಳು ಪ್ರಮಾಣಗಳಾಗಿವೆ. ಇದರದ್ದು ಪ್ರತಿಭಾಸಿಕ (ಮಾಯಿಕ) ಅಸ್ತಿತ್ವ, ಅಥವಾ ವಾಚಿಕ ಸ್ಥಿತಿ. ಈ ಜಗತ್ತು ಕೇವಲ ಹೇಳುವಮಾತ್ರವಷ್ಟೆ, ವಾಸ್ತವದಲ್ಲಿ ಇದು ಅಸತ್ಯ. ಈ ತರಹ ನಾಲ್ಕು ಪ್ರಕಾರದ ಜಗತ್ತಿದೆ ಹಾಗೂ ಕೇವಲ ಮೂರು ಪ್ರಕಾರವು ಮಾತ್ರ ಸ್ಥಿತವಾಗಿದೆ- ಇದು ದೃಢವಾಗುತ್ತದೆ.

ಏನಾದರೂ ಆಕಾಶ-ಪುಷ್ಪಾದಿಯ ವಾಚಿಕ ಅಸ್ತಿತ್ವವನ್ನೂ ಸಹ ಸ್ಥಿತವೆಂದು ಸ್ವೀಕಾರ ಮಾಡಿದರೆ ಮತ್ತೆ ನಾಲ್ಕು ಪ್ರಪಂಚ ಮಾತ್ರವೇ ಆಗುತ್ತದೆ ಹಾಗೂ ನಾಲ್ಕೂ ಸ್ಥಿತವಾಗುತ್ತದೆ. ಅದರಲ್ಲಿ ಎರಡು ಪ್ರಪಂಚವು ಉತ್ಕೃಷ್ಟ (ಬ್ರಹ್ಮ) ಸ್ಥಿತವಾದದ್ದು ಆಗುತ್ತದೆ. ಒಂದು ವೈದಿಕ ಬ್ರಾಹ್ಮ ಕಲ್ಪದ ಜಗತ್ತು ಹಾಗೂ ಮತ್ತೊಂದು ಪಾದ್ಮ ಕಲ್ಪದ ಪೌರಾಣಿಕ ಪ್ರಪಂಚ. ಮೂರನೆಯದ್ದು ಪೌರಾಣ ಪ್ರಪಂಚವು ನಿಕೃಷ್ಟ ಮಾಯಿಕ ವ್ಯವಹಾರಿಕ ಅಸ್ತಿತ್ವದ ವಿಶ್ವ. ನಾಲ್ಕನೆಯ ವಿಶ್ವವು ಪರಿಪೂರ್ಣವಾಗಿ ಅಸತ್ಯವಾದದ್ದು, ಇದರ ಅಸ್ತಿತ್ವವು ಕೇವಲ ವಾಚಿಕವಾದದ್ದು. ಆದರೂ ಎಲ್ಲ ಪ್ರಪಂಚಗಳಲ್ಲಿ ಭಗವಂತನ ಅಸ್ತಿತ್ವವು ಯಾವುದಾರೂ ಒಂದು ರೂಪದಲ್ಲಿ ಹಾಗೂ ಅನ್ಯತ್ರ ಯಾವುದಾರೂ ಬೇರೆ ರೂಪದಲ್ಲಿ ನೆಲಸಿರುತ್ತದೆ. ಈ ಮಾತು "ಸಾನುಪ್ರವಿಷ್ಟೋ ಭಗವಾನ್", "ಪರೇಣ ವಿಷಯಾ ಸ್ವೇನ ಮಾಯಯಾ" ಇತ್ಯಾದಿ ಭಾಗವತದಲ್ಲಿ ಪ್ರಸಿದ್ಧವಾಗಿದೆ.

ಆದ್ದರಿಂದ ಒಂದೇ ಒಂದು ಮಹಾಭೂತದ ಆಧಾರತ್ವ-ಆಧಾರಿತ ಹಾಗೂ ವಿಶೇಷ ಆಧಾರಿತ್ವವು ದೃಢವಾಗುತ್ತದೆ. ಕಾರಣಕಾಲದಲ್ಲಿ ಹಾಗೂ ಕಾರ್ಯಕಾಲದಲ್ಲಿ ಪೃಥ್ವಿ ಇತ್ಯಾದಿ ಎಲ್ಲವು ಮಹಾಭೂತಗಳ ಆಧಾರತ್ವ ಹಾಗೂ ಆಧಾರಿತ. ಈ ಪಕ್ಷದಲ್ಲಿ ಸಪ್ತಭೇದವೇ ಆಗುತ್ತದೆ, ಆದ್ದರಿಂದ ಪಕ್ಷಾಂತರದಲ್ಲಿ ಹೇಳುತ್ತಾರೆ 'ಅಥವಾ' ಎಂದು. ಪೃಥ್ವಿ ಮುಂತಾದ ಐದು ಮಹಾಭುತಗಳು ಐದು ಪ್ರಕಾರದಿಂದ ಕಾರಣವಾದದ್ದು, ಆದ್ದರಿಂದ ಅದು ಅಪ್ರವೇಶವಾಗಿದೆ. ಅಲ್ಲೇ ಕಾರ್ಯದಲ್ಲಿ ಮೊದಲಿನಿಂದಲೂ ನೆಲಸಿರುತ್ತದೆ, ಈ ಪ್ರಕಾರದಿಂದಲೂ ಸಹ ಅಪ್ರವೇಶವಾಗಿ ಹಾಗೂ ಸ್ವಯಂ ಮಹಾಭೂತವಾಗಿಯೂ ಆಗಿದೆ, ಆದ್ದರಿಂದ ಅಪ್ರವೇಶವೆಂದು ಹೇಳಲಾಗುತ್ತದೆ. ಈ ಪ್ರಕಾರ ಅಪ್ರವೇಶ ಮೂರು ಪ್ರಕಾರದ್ದಾಗಿದೆ ಹಾಗೂ ಪ್ರವೇಶವು ಎರಡು ಪ್ರಕಾರದ್ದು- ಕಾರಣ ಪ್ರವೇಶ, ಸಹಿತ ಪ್ರವೇಶ ಹಾಗೂ ವಿಶೇಷ ರೂಪದಿಂದ ಪೃಥಕ ಪ್ರವೇಶ. ಇದೇ ರೀತಿ 'ತಥಾತೇಷು'- ಈ ಮೂಲ ಶ್ಲೋಕದ ಕಥನದ ಅನುಸಾರವಾಗಿ ಐದು ಪ್ರಕಾರವಾಗಿದೆ. ಈಗ 'ನ ತೇಷು'ನ ಪದವೂ ಸಹ ಮೂಲ ಶ್ಲೋಕದಲ್ಲಿದೆ.

ಅದರ ಅನುಸಾರವಾಗಿ ಐದು ಅನ್ಯ ಪ್ರಕಾರವಾಗಿಯೂ ಆಗುತ್ತದೆ. ಈ ತರಹ ಯಾವ ರೀತಿ ಐದು ಮಹಾಭೂತವು ಹತ್ತು ಪ್ರಕಾರಗಳಾಗಿ (ಕಾರ್ಯ ಹಾಗೂ ಕಾರಣ) ಸ್ಥಿತವಾಗಿರುತ್ತದೋ, ಅದೇ ಹತ್ತು ಪ್ರಕಾರದಿಂದಲೇ ಭಗವಂತನೂ ಸಹ ಇದ್ದಾನೆ. ಇದರಿಂದ ಇದು ತಿಳಿಯುವುದೇನೆಂದರೆ ಸಂಪೂರ್ಣ ವಿಶ್ವದಲ್ಲಿ ಹತ್ತು ವಿಧದ ಲೀಲಾಯುಕ್ತನಾದ ಭಗವಂತನು ಹತ್ತು ಪ್ರಕಾರದಿಂದ ಜ್ಞಾತವ್ಯನಾಗಿದ್ದಾನೆ. ಈ ರೀತಿ ನಿರೂಪಣೆ ಮಾಡುವುದರಿಂದ ವೇದವು ಯಾವುದೇ ಅಂಶದಲ್ಲಿ ಅಪ್ರಮಾಣಿಕವಾಗುವುದಿಲ್ಲ. ॥೩೪॥

ಶ್ರೀಭಕ್ತಿಸಿದ್ಧಾಂತ ಸರಸ್ವತೀ ಠಾಕುರ್ 'ಪ್ರಭುಪಾದ್'

ಪ್ರಾಕೃತ ಜಗತ್ತಿನ ದೃಷ್ಟಾಂತದಲ್ಲಿ ಮಹಾಭೂತಗಳ ಅಖಂಡಿತ ಮತ್ತು ಖಂಡಿತ ಭಾವದಿಂದ ಅವಸ್ಥಾನ ಮಾಡುವಾಗ ಯಾವ ಪ್ರಕಾರ ಅಧಿಷ್ಠಾನವು ಸ್ವೀಕೃತವಾಗುತ್ತದೋ, ಅದೇ ರೀತಿ ಸಾಧನಭಕ್ತಿಯ ಪ್ರಭಾವದಿಂದ ಉದಿತ–ರತಿಯು ಭಕ್ತರ ಹೃದಯದಲ್ಲಿ ಪ್ರವೇಷಿಸಿ ಅರ್ಥಾತ್ ಅವನ ಪ್ರೇಮದಿಂದ ಹೊಣೆಗಾರನಾಗಿ ವೈಕುಂಠ–ವಸ್ತುವಿನ ಬಾಹ್ಯದರ್ಶನವು ಪ್ರಾಪ್ತವಾಗುವುದಿಲ್ಲ ಹಾಗೂ ಅಂತರ್ದರ್ಶನದಲ್ಲಿ ಭಕ್ತರ ಪ್ರೇಮದಿಂದ ಬಾಧಕರಾಗಿ ಭಕ್ತ–ಹೃದಯದಲ್ಲಿ ಅಧಿಷ್ಠಾನವೂ ಸಹ ಅದೇ ಪ್ರಕಾರವಾಗಿರುತ್ತದೆ. ಭಗವತ್–ವಸ್ತು ಮಾಯೆಯ ವಸ್ತುವಿನ ಒಳಗೆ ವೈಕುಂಠ–ಧರ್ಮದಿಂದ ರಹಿತವಾಗಿ ನೆಲಸಿರುವುದಿಲ್ಲ, ಮತ್ತೆ ಮಾಯೆಯಿಂದ ಮುಕ್ತರಾಗಿ ಸೇವೋನ್ಮುಖವನ್ನು ಪಡೆದುಕೊಂಡಂತಹ ಭಕ್ತರ ಹೃದಯದಲ್ಲಿ ವೈಕುಂಠ–ವಸ್ತುವು ನೆಲಸಿರುತ್ತದೆ– ಹೀಗೆ ಹೇಳುವುದರ ಉದ್ದೇಶದಿಂದ ಲೌಕಿಕ ಉದಾಹರಣೆ ಸ್ವರೂಪ ಮಹಾಭೂತ ಹಾಗೂ ವಿಭಾಗ–ಭೂತಗಳ ಪ್ರವೇಶ ಹಾಗೂ ಅಪ್ರವೇಶದ ಮಾತನ್ನು ಹೇಳಲಾಗಿದೆ. ಬಾಹ್ಯ ಅಕ್ಷಜಜ್ಞಾನದಲ್ಲಿ ವೈಕುಂಠದಲ್ಲಿ ನೆಲಸಿರುವಂತಹ ವಸ್ತು ಯಾವುದೇ ಪ್ರಕಾರದಿಂದಲೂ ಸಹ ಜೀವ–ಸ್ವರೂಪದಲ್ಲಿ ಇರುವುದಕ್ಕೆ ಯೋಗ್ಯವಲ್ಲದಿದ್ದರೂ ಸಹ ಜೀವಿಯ ಪ್ರಾಪ್ತ ವೃತ್ತಿಯು– ಪ್ರೇಮದ ವಿಷಯೀಭೂತವಾಗುತ್ತದೆ.

ಮಹಾಭೂತಗಳ ಅಚಿತ್ ಪದಾರ್ಥಗಳಾಗಿರುವ ಕಾರಣ ಅಂಶದೊಂದಿಗೆ ಪೂರ್ಣದ ಏಕತ್ವ ರೂಪದಲ್ಲಿ ಅನುಭವ ಉಂಟಾಗುವುದಿಲ್ಲ. ಅಚಿತ್ ರಾಜ್ಯದಲ್ಲಿ ಅಖಂಡ ಮಹಾಭೂತಗಳ ಅಸ್ತಿತ್ವವು ಒಂದು ಪ್ರಕಾರದ ವಿಚಾರದಿಂದ ವಿಭಾಗಿತ ಅಚಿತ್ ವಸ್ತು–ವಿಶೇಷದಲ್ಲಿ ಸಮ್ಯಕ್ ರೂಪದಿಂದ ಸ್ಥಿತವಾಗುವುದಿಲ್ಲ, ಆದರೂ ಸಹ ಅಚಿತ್ ನ ಆ–ಆ ಅಂಶಗಳು ಅದರಲ್ಲಿ ಅನುಪ್ರವೇಷಿಸುತ್ತದೆ. ಪೂರ್ಣಭಾವದಿಂದ ಅನುಪ್ರವೇಷದ ವಿಚಾರ ಮಾಡುವುದರಿಂದ ಅಪ್ರವಿಷ್ಟವು ಸ್ಥಿರವಾಗುತ್ತದೆ. ಅದೇ ಪ್ರಕಾರ ಅಣುಚಿತ್ ಜೀವಿಗಳಲ್ಲಿ ವಿಭೂ ಚಿತ್‌ನ ಅನುಪ್ರವೇಶವು ಪ್ರಾಕೃತ ವಿಚಾರದಿಂದ ಅಸಂಭವವಾದರೂ ಸಹ ಭಗವಂತನು ಭಕ್ತರ ಹೃದಯದಲ್ಲಿ ನೆಲಸಿರುತ್ತಾನೆ. ಶ್ರೀಭಗವಂತನ ಭಕ್ತರ ಹೃದಯವು ವೃಂದಾವನ (ಸ್ವರೂಪ)

ಅರ್ಥಾತ್ ಭಗವಂತನ ವೈಕುಂಠ–ಸ್ವರೂಪ–ವೈಭವ (ಅರ್ಥಾತ್ ಕುಂಠರಹಿತ ಸ್ವರೂಪ–ವೈಭವ). ಆ ಸ್ಥಿತಿಯಲ್ಲಿ ಭಕ್ತರ ಹೃದಯದಲ್ಲಿ ಭಗವಂತನ ಪ್ರಕಟನೆ ಸಂಭವಿಸುತ್ತದೆ. ಪುನಃ ವಿಭೂಚಿತ್ ಹಾಗೂ ಅಣುಚಿತ್ ನ ವೈಚಿತ್ರ್ಯದ ವಿಚಾರದಿಂದ ತತ್ವತಃ ಇಂತಹ ಧಾರಣೆ ಅಚಿತ್–ವಿಚಾರದಂತೆ ಅಂಶ–ಅಂಶೀಯ ಭೇದದಿಂದ ಸಮಾನವಾಗಿರುವುದಿಲ್ಲ. ಅಂತರ್ಯಾಮಿ ಸೂಕ್ಷ್ಮ ಭಾವದಿಂದ ವಿಭಾಗಿತ ಅಚಿತ್ ವಸ್ತುಗಳಲ್ಲಿ ಮಹಾಭೂತಗಳ ಅಧಿಷ್ಠಾನವಾಗಿ ಅನುಪ್ರವಿಷ್ಟವಾಗಿರುತ್ತದೆ. ಪುನಃ ಬಾಹ್ಯ ವಿಚಾರದಿಂದ ಮಹಾಭೂತಗಳಲ್ಲಿ ಸಂಪೂರ್ಣವಾಗಿ ಅಪ್ರವೇಶವಾಗಿರುತ್ತದೆ. ಅಣುಚಿತ್ ಜೀವಿ ಅನಂತವನ್ನು ಸೇವಾ ನಿರ್ಮಾಣ ಮಾಡುವುದರಲ್ಲಿ ಸಮರ್ಥವಾಗಿರುತ್ತದೆ, ಇದರಿಂದ ಅವನ ಸೇವಕ–ಭಾವವು ಪರಿವೃತ್ತಿತವಾಗುವುದಿಲ್ಲ. ಆದರೆ ಪ್ರೇಮ–ಪರಿಲುಪ್ತವಾಗಿ ಅದೂ ಸಹ ವೈಕುಂಠದಿಂದ ಅಭಿನ್ನ ರೂಪದಲ್ಲಿ ಅನುಭವವಾಗುತ್ತದೆ. ಈ ಶ್ಲೋಕವು ಪ್ರಯೋಜನ–ವಿಚಾರದಿಂದ ಉದಾಹರಣೆಯಾಗಿದೆ. ಉತ್ಕ್ರಾಂತ (ಉನ್ನತ) ದಿಶೆಯಲ್ಲಿ ಭಗವತ್ ಪ್ರೇಮ–ಸೇವೆ ಪರಾಯಣ ಮಾಡುವ ಜೀವಿಗಳ ಹೃದಯದಲ್ಲಿ ಅನ್ಯ ಯಾವುದೂ ಸಹ ನೆಲಸಿರುವುದಿಲ್ಲ.

ಅನ್ಯೇರ ಹೃದಯ–ಮನ, ಮೋರ ಮನ– ವೃಂದಾವನ,
'ಮನೇ' 'ವನೇ' ಏಕ ಕರಿ' ಜಾನಿ ।
ತಾಹೆ ತೊಮಾರ ಪದದ್ವಯ, ಕರಾಹ ಯದಿ ಉದಯ,
ತಬೆ ತೊಮಾರ ಪೂರ್ಣಕೃಪಾ ಮಾನಿ ॥
(ಚೈ. ಚ. ಮ ೧೩/೧೩೭)

[ಶ್ರೀರಾಧಿಕಾರವರ ಭಾವದಲ್ಲಿ ವಿಭಾವಿತರಾಗಿ ಪ್ರೇಮಪುರುಷೋತ್ತಮ ಶ್ರೀಚೈತನ್ಯ ಮಹಾಪ್ರಭು ಹೇಳುತ್ತಿದ್ದಾರೆ–] "ಅನ್ಯರ ಹೃದಯ ಹಾಗೂ ಮನಸ್ಸು ಒಂದೇ ತಾತ್ಪರ್ಯದಲ್ಲಿದೆ, ಆದರೆ ನನ್ನ ಮನಸ್ಸು ವೃಂದಾವನದಿಂದ ಎಂದಿಗೂ ಸಹ ಬೇರ್ಪಟ್ಟಿಲ್ಲ, ಅರ್ಥಾತ್ ನಾನು ನನ್ನ ಮನಸ್ಸನ್ನು ಹಾಗೂ ವೃಂದಾವನವನ್ನು ಒಂದೇ ಎಂದು ಭಾವಿಸುತ್ತೇನೆ. ಏನಾದರೂ ನೀವು ನಿಮ್ಮ ಎರಡು ಚರಣಕಮಲಗಳನ್ನು ನನ್ನ ಮನರೂಪೀ ವೃಂದಾವನದಲ್ಲಿ ಉದಯಿಸಿದರೆ, ಆಗ ನಾನು ನನ್ನಲ್ಲಿ ನಿಮ್ಮ ಸಂಪೂರ್ಣ ಕೃಪೆ ಎಂದು ಭಾವಿಸುತ್ತೇನೆ."

ಪ್ರಯೋಜನ–ವಿಚಾರದಲ್ಲಿ ಅಚಿಂತ್ಯ ಭೇದಾಭೇದ–ತತ್ವವು ಪ್ರಾಪ್ತವಾಗುತ್ತದೆ, ಇದೇ ಈ ಶ್ಲೋಕದ ಮೂಲಕ ವರ್ಣಿಸಲಾಗಿದೆ.॥೩೪॥

ಶ್ರೀಶ್ರೀನಿವಾಸಾಚಾರ್ಯಪಾದರು

ಪುನರಪಿ ಮಹಾಶಯಃ ಆತ್ಮನೋ ವಿಭೂತ್ವ–ಪರಿಚ್ಛಿನ್ನತ್ವೇ ಲೀಲಾಯಾಃ ಪ್ರಕಟತ್ವಾಪ್ರಕಟತ್ವೇ ದೃಷ್ಟಾಂತೇನ ನಿರೂಪಯತಿ– ಯಥಾ ಮಹಾನ್ತೀತಿ । ಪೃಥಿವ್ಯಪ್ತೇಜೋವಾಯ್ವಾಕಾಶಾನಿ ವಿಭೂನಿ ಪರಿಚ್ಛಿನ್ನಾನಿ ಚ, ಪ್ರಕಟಾನ್ಯಪ್ರಕಟಾನಿ ಚ;

ಪೃಥಿವೀ ವ್ಯಾಪಿಕಾ ಅನಂತಕೋಟಿ-ಬ್ರಹ್ಮಾಣ್ಡಾತ್ಮಿಕಾ, ಪರಿಚ್ಛಿನ್ನಾ ಲೋಷ್ಟ್ರಾದಿರೂಪಾ । ಜಲಂ ವ್ಯಾಪಿ ಕಾರಣಾರ್ಣವರೂಪಂ ಬ್ರಹ್ಮಾಂಡಧಾರಮ್, ಪರಿಚ್ಛಿನ್ನಂ ಕರಕಾದಿರೂಪಮ್ । ತೇಜೋ ವ್ಯಾಪಿ ಸೂಕ್ಷ್ಮಂ ಬ್ರಹ್ಮಾದಿರೂಪಂ, ಪರಿಚ್ಛಿನ್ನಂ ದೀಪಶಿಖಾದಿರೂಪಮ್ । ವಾಯುರ್ವ್ಯಾಪೀ ಸರ್ವಗತಃ, ಪರಿಚ್ಛಿನ್ನೋ ವಾತ್ಯಾದಿರೂಪಃ । ಆಕಾಶಂ ಸರ್ವಗತಃ ವ್ಯಾಪಿ, ಪರಿಚ್ಛಿನ್ನಂ ಘಟಾಕಾಶಾದಿರೂಪಮ್ । ಏವಮಹಂ- *'ನ ಚಾನ್ತರ್ನ ಬಹಿರ್ಯಸ್ಯ ನ ಪೂರ್ವಂ ನಾಪಿ ಚಾಪರಮ್'* (ಶ್ರೀಮದ್ಭಾ ೧೦/೯/೧೩) ಇತ್ಯಾದಿನಾ ವಿಭುಃ । *'ಬಬನ್ಧ ಪ್ರಾಕೃತಂ ಯಥಾ'* (ಶ್ರೀಮದ್ಭಾ ೧೦/೯/೧೪) ಇತ್ಯಾದಿನಾ ಪರಿಚ್ಛಿನ್ನಃ । ಅನಂತಕೋಟಿ ಬ್ರಹ್ಮಾಂಡಾಂತರ್ಯಾಮಿತಯಾ ವಿಭುಃ, ದ್ವಿಭುಜ-ಚತುರ್ಭುಜಾದಿರೂಪತಯಾ ಪರಿಛಿನ್ನಃ । ತಥಾಹಿ- *'ವಿಭೂರಪಿ ಭುಜಯುಗ್ಮೋತ್ಸಂಗಪರ್ಯಾಪ್ತಮೂರ್ತಿಃ'* (ಶ್ರೀಭಕ್ತಿರಸಾಮೃತೆ ೨/೧/೯೮) ಅಚಿಂತ್ಯಾನಂತ-ಶಕ್ತಿತ್ವಾತ್ । ಪರಂ ಪೃಥಿವ್ಯಾದ್ಯಪಂಚೀಕೃತಾಸ್ತನ್ಮಾತ್ರಗಂಧಾದಿ ರೂಪಾಃ ಪ್ರವಿಷ್ಟಾ ಅದೃಶ್ಯಾಃ, ಸೂಕ್ಷ್ಮರೂಪಾಃ ಯೋಗಪ್ರತ್ಯಕ್ಷಾಃ । ಅಪ್ರವಿಷ್ಟಾಶ್ಚ ಸ್ಥೂಲರೂಪಾಃ ಪಂಚೀಕೃತಾ ಮೂರ್ತಿಮತ್ತ್ವಾಚ್ಚ । ತ್ವಮಹಂ ವಿರಾಡಂತರ್ಯಾಮಿತಯಾ ಪ್ರವಿಷ್ಟಃ, ದ್ವಿಭುಜಾದಿರೂಪ್ಯಪ್ರವಿಷ್ಟಃ। ತಥಾಚ ಗೀತೋಪನಿಷದಿ (ವಿಭೂತ್ವೇ) *'ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್'* (ಶ್ರೀಗೀ ೧೦/೪೨), *'ಈಶ್ವರಃ ಸರ್ವಭೂತಾನಾಂ ಹೃದ್ದೇಶೋಽರ್ಜುನ ತಿಷ್ಠತಿ'* (ಶ್ರೀಗೀ ೧೮/೬೧) ಇತ್ಯಾದಿ- *'ಮಾಮೇವ ಯೇ ಪ್ರಪದ್ಯಂತೆ ಮಾಯಾಮೇತಾಂ ತರಂತಿ ತೇ'* (ಶ್ರೀಗೀ ೭/೧೪), *'ಮಾಮಪ್ರಾಪ್ಯೈವ ಕೌಂತೇಯ'* (ಶ್ರೀಗೀ ೧೬/೨೦), ಮಾಂ ಕೃಷ್ಣರೂಪಂ ಪರಿಛಿನ್ನಮ್ । ಪರಂಚ- ಯದ್ವಗೋಹಾಶರೀರಿಣೀ ಆಕಾಶವಾಣ್ಯಾದಿಕಮಪಿ ಶ್ರೂಯತೆ, ತದಪರಿಚ್ಛಿನ್ನಸ್ಯ । ಏವಂ ಮಮ ಲೀಲಾಯಾ ಅಪಿ ಅಪರಿಚ್ಛಿನ್ನತ್ವ-ಪರಿಚ್ಛಿನ್ನತ್ವೇ ಯಥಾ- *'ಸದಾನನ್ತೈಃ ಪ್ರಕಾಶೈಃ ಸ್ವೈರ್ಲೀಲಾಭಿಶ್ಚ ಸ ದೀವ್ಯತಿ'* (ಲಘುಭಾಗವತಾಮೃತೆ ೧/೭೧೫) ಇತ್ಯತ್ರಾನನ್ತ-ಶಬ್ದೇನಾಪರಿಚ್ಛಿನ್ನತ್ವಮ್ । *'ಗೋಕುಲೇ ಮಥುರಾಯಾಂಚ ದ್ವಾರವತ್ಯಾಂ ತತಃ ಕ್ರಮಾತ್'* (ಭಾವಾರ್ಥದೀಪಿಕಾ ೧೦, ಉಪಕ್ರಮಣಿಕಾ ೬) ಇತ್ಯನೇನ ಪರಿಚ್ಛಿನ್ನತ್ವಮ್ । ಕ್ವಚಿತ್ ಪ್ರಕಟತ್ವಂ ಕ್ವಚಿದಪ್ರಕಟತ್ವಮ್; ಯಥಾ- *'ಮಥುರಾ ಭಗವಾನ್ ಯತ್ರ ನಿತ್ಯಂ ಸನ್ನಿಹಿತೋ ಹರಿಃ ।'* (ಶ್ರೀಮದ್ಭಾ ೧೦/೧/೧೮) ಇತ್ಯಾದಿನಾ ಪ್ರಕಟಲೀಲಾಯಾಂ ದ್ವಾರಕಾಯಾಂ *'ಶ್ರಿಯಃಪತಿಃ ಸ್ವಜನ್ಮನಾ ಚಂಕ್ರಮಣೇನ ಚಾಂಚತಿ'* (ಶ್ರೀಮದ್ಭಾ ೧/೧೦/೨೬) ಇತಿ ದ್ವಾರಕಾವಾಸಿವರ್ತ್ತಕಾಲಪ್ರಯೋಗಾತ್ ಗೋಕುಲೇ ಚ ಅಪ್ರಕಟನಿತ್ಯಲೀಲಾ ಸೂಚ್ಯತೆ ಇತಿ ದಿಕ್ ॥೩೪॥

ಭಾವಾನುವಾದ- ಪುನಃ ಮಹಾಶಯ (ಶ್ರೀಕೃಷ್ಣ) ತನ್ನ ಸ್ವರೂಪದ ವಿಭೂತಿ ಮತ್ತು ಪರಿಚ್ಛಿನ್ನತೆ ಹಾಗೂ ಲೀಲೆಯನ್ನು ಪ್ರಕಟಣೆ ಮತ್ತು ಅಪ್ರಕಟಣೆಯ ವಿಷಯಗಳ ಉದಾರಹಣೆಗಳೊಂದಿಗೆ ನಿರೂಪಣೆ ಮಾಡುತ್ತಿದ್ದಾನೆ- ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ ಇತ್ಯಾದಿ ಪಂಚ-ಮಹಾಭೂತಗಳಲ್ಲಿ ಒಂದೇಸಮಯದಲ್ಲಿ ವಿಭೂತ ಮತ್ತು ಪರಿಚ್ಛಿನ್ನ ಹಾಗೂ ಪ್ರಕಟ ಮತ್ತು ಅಪ್ರಕಟ ರೂಪದಲ್ಲಿ ನೆಲಸಿರುತ್ತಾನೆ.

ವಿಭೂ (ಸರ್ವತ್ತ ನೆಲಸಿರುವ) ರೂಪದಲ್ಲಿ ಪೃಥ್ವಿ ಅನಂತಕೋಟಿ ಬ್ರಹ್ಮಾಂಡಗಳಲ್ಲಿ ವ್ಯಾಪ್ತವಾಗಿದೆ ಹಾಗೂ ಲೋಷ್ಟ್ರ (ಮಣ್ಣಿನ ಹಿಂಟೆ) ಮುಂತಾದ

ರೂಪದಲ್ಲಿ ಪರಿಚ್ಛಿನ್ನವಾಗಿದೆ (ಸೀಮಿತ); ವಿಭೂ ರೂಪದಲ್ಲಿ ಜಲವು ಅಂದರೆ ಕಾರಣ–ಸಮುದ್ರವು ಬ್ರಹ್ಮಾಂಡದ ಆಧಾರವಾಗಿದೆ ಹಾಗೂ ಅಲೆಯ ರೂಪದಲ್ಲಿ ಪರಿಚ್ಛಿನ್ನವಾಗಿದೆ; ವಿಭೂವಿನ ರೂಪದಲ್ಲಿ ಅಗ್ನಿಯು ಸೂಕ್ಷ್ಮ, ಬ್ರಹ್ಮ ಮುಂತಾದ ಸ್ವರೂಪವಾಗಿದೆ ಹಾಗೂ ದೀಪ–ಶಿಖೆ ಇತ್ಯಾದಿ ರೂಪಗಳಲ್ಲಿ ಪರಿಚ್ಛಿನ್ನವಾಗಿದೆ; ವಿಭೂ ರೂಪದಲ್ಲಿ ವಾಯು ಎಲ್ಲೆಡೆ ವ್ಯಾಪಿಸಿದೆ ಹಾಗೂ ಬಿರುಗಾಳಿ ಅಥವಾ ಸುಂಟರಗಾಳಿ ರೂಪದಲ್ಲಿ ಪರಿಚ್ಛಿನ್ನವಾಗಿದೆ; ವಿಭೂ ರೂಪದಲ್ಲಿ ಆಕಾಶವೂ ಸಹ ಸರ್ವಗತವಾಗಿ ವ್ಯಾಪಿಸಿದೆ ಹಾಗೂ ಮೇಘಗಳ ರೂಪದಲ್ಲಿ ಪರಿಚ್ಛಿನ್ನವಾಗಿದೆ. ಇದೇ ರೀತಿ ನಾನೂ ಸಹ ವಿಭೂ (ವ್ಯಾಪಕ, ಅಚ್ಯುತ) ಹಾಗೂ ಈ ವಿಷಯದಲ್ಲಿ ಹೀಗೆ ಪ್ರಮಾಣ ಉಂಟು (ಶ್ರೀಮದ್ಭಾ ೧೦/೯/೧೩)– "ಯಾರಲ್ಲಿ ಅಂತರ–ಬಾಹ್ಯ ಎಂಬುದಿಲ್ಲವೋ ಅರ್ಥಾತ್ ಯಾರು ಸರ್ವತ್ರ ವ್ಯಾಪಕನಾಗಿದ್ದಾನೆ ಹಾಗೂ ಯಾರ ಸಂಬಂಧದಲ್ಲಿ ಪೂರ್ವ–ಭವಿಷ್ಯ ಕಾಲ–ವಿಭಾಗವಾಗುವುದಿಲ್ಲ ಅರ್ಥಾತ್ ಯಾರು ಸರ್ವಕಾಲವು ವ್ಯಾಪ್ತನಾಗಿದ್ದಾನೆ", ಇತ್ಯಾದಿ. ವಿಭೂ (ಸರ್ವ ವ್ಯಾಪಕನು) ಆಗಿದ್ದರೂ ಸಹ ನಾನು ಪರಿಚ್ಛಿನ್ನನಾಗಿಬಿಡುತ್ತೇನೆ, ಇದರ ಪ್ರಮಾಣವೂ ಸಹ ಶ್ರೀಮದ್ಭಾಗವತದಲ್ಲಿದೆ (೧೦/೯/೧೪)– "ಮಾತೆ ಯಶೋದೆ ಪ್ರಾಕೃತ ಬಾಲಕನಂತೆ ಅವನನ್ನು ಕಟ್ಟಿಹಾಕುತ್ತಾಳೆ" ಇತ್ಯಾದಿ. ಅನಂತಕೋಟಿ ಬ್ರಹ್ಮಾಂಡದ ಅಂತರ್ಯಾಮಿ ರೂಪದಲ್ಲಿ ನಾನು ವಿಭೂ (ಸರ್ವ ವ್ಯಾಪಕನು) ಆಗಿದ್ದೇನೆ ಹಾಗೂ ದ್ವಿಭುಜ–ಚತುರ್ಭುಜಾದಿ ರೂಪದಲ್ಲಿ ನಾನು ಪರಿಚ್ಛಿನ್ನ (ಸಸೀಮ, ಎಲ್ಲರಿಗೂ ಸಿಲುಕದವ) ನಾಗಿದ್ದೇನೆ. ಶ್ರೀಭಕ್ತಿರಸಾಮೃತಸಿಂಧುವಿನಲ್ಲಿ (೨/೧/೧೯೮) ಹೇಳಿದೆ– "ವಿಭೂ ಆಗಿದ್ದರೂ ಸಹ ಅವನು ಮಾತೆಯ ಎರಡು ಭುಜಗಳ ನಡುವೆ ಅವಳ ಮಡಿಲಿನಲ್ಲಿ ಪೂರ್ಣ ರೂಪದಲ್ಲಿ ಪ್ರಕಾಶಿತನಾಗಿದ್ದಾನೆ." ಅಪರಿಮಿತನಾಗಿದ್ದರೂ ಸಹ ಪರಿಮಿತನಾಗುವುದು ಅವನ ಅಚಿಂತ್ಯ ಅನಂತ ಶಕ್ತಿಯ ಬಲದಿಂದಲೇ ಸಾಧ್ಯವಾಗುತ್ತದೆ.

ಮತ್ತೊಂದು ಕಡೆ, ಪೃಥ್ವಿ ಮುಂತಾದ ಪಂಚಭೂತಗಳು ಯಾವಾಗ ಅಪಂಚೀಕೃತ (ಅಮಿಶ್ರವಾದ) ಸ್ಥಿತಿಯಲ್ಲಿ ತನ್ಮಯ–ಗಂಧಾದಿ ರೂಪದಲ್ಲಿರುತ್ತದೋ, ಆಗ ಅದು ಪ್ರವಿಷ್ಟ ಅರ್ಥಾತ್ ಸೂಕ್ಷ್ಮ ರೂಪದಲ್ಲಿರುವ ಕಾರಣ ಸಾಧಾರಣ ಜನರಿಗೆ ಅದೃಶ್ಯವಾದರೂ ಸಹ ಯೋಗಿಗಳಿಗೆ ಪ್ರತ್ಯಕ್ಷವಾಗುತ್ತದೆ. ಆದರೆ ಮತ್ತೆ ಯಾವಾಗ ಅದು ಪಂಚೀಕೃತ (ಮಿಶ್ರಿತ) ಸ್ಥಿತಿಯಲ್ಲಿ ಸ್ಥೂಲ ರೂಪದಿಂದ ಪ್ರಕಾಶಿತವಾಗಿ ಮೂರ್ತಿ ಧಾರಣೆ ಮಾಡುತ್ತದೆ, ಆಗ ಅದು ಎಲ್ಲರಿಗು ಅಪ್ರವಿಷ್ಟವಾಗುತ್ತದೆ (ಕಾಣಿಸಲ್ಪಡುತ್ತದೆ). ಅಪರಿಮಿತ ಪ್ರಮಾಣವಾದ ಗೀತೆಯಲ್ಲಿ (೧೦/೪೨)– "ನಾನು ನನ್ನ ಒಂದೇ ಅಂಶದಿಂದ ಈ ಸಮಸ್ತ ಜಗತ್ತನ್ನು ಧರಿಸಿ ಸ್ಥಿತನಾಗಿದ್ದೇನೆ." ಹಾಗೂ ಗೀತೆ (೧೮/೬೧)– "ಹೇ ಅರ್ಜುನ! ಸರ್ವಾಂತರ್ಯಾಮಿಯಾದ ಪರಮಾತ್ಮನು ಎಲ್ಲ ಜೀವಿಗಳ ಹೃದಯಗಳಲ್ಲಿ ನೆಲಸಿದ್ದಾನೆ." ಇತ್ಯಾದಿ. ಹಾಗೂ ಪರಿಚ್ಛಿನ್ನತೆಯ ಪ್ರಮಾಣವು ಗೀತೆಯಲ್ಲಿ (೭/೧೪)– "ಯಾರು ಕೇವಲ ನನ್ನ ಆಶ್ರಯವನ್ನೇ ಗ್ರಹಿಸುತ್ತಾರೋ, ಅವರು ಮಾತ್ರ ಆ ಮಾಯೆಯನ್ನು ದಾಟಬಲ್ಲರು." ಹಾಗೂ ಗೀತಾ

(೧೬/೨೦)– "ನನ್ನನ್ನು ಪ್ರಪ್ತಿಸಿಕೊಳ್ಳದಿರುವ ಕಾರಣದಿಂದಲೂ ಸಹ ಅಧಮ ಗತಿ ಪ್ರಾಪ್ತಿಸಿಕೊಳ್ಳುತ್ತಾರೆ." ಇಲ್ಲಿ 'ಮಾಮ್' ಶಬ್ದದಿಂದ ಶ್ರೀಕೃಷ್ಣ ರೂಪದಲ್ಲಿ ಪರಿಚ್ಛಿನ್ನ ಮೂರ್ತಿಯ ಬೋಧವಾಗುತ್ತದೆ.

"ದೈವವಾಣಿಯ ಉಲ್ಲೇಖ ಇತ್ಯಾದಿಯೂ ಸಹ ಅಪರಿಮಿತದ ಪ್ರಮಾಣವಾದದ್ದು. ಇದೇ ರೀತಿ ಶ್ರೀಭಗವಂತನ ಲೀಲೆಯೂ ಸಹ ಅಪರಿಮಿತ ಹಾಗೂ ಪರಿಮಿತವಾದದ್ದು. ಅಪರಿಮಿತದ ಪ್ರಮಾಣವು (ಲಘುಭಾಗವತಾಮೃತ ೧/೭/೧೫ ದಲ್ಲಿ)– "ಶ್ರೀಕೃಷ್ಣನು ನಿತ್ಯಕಾಲ ಅನಂತ ಪ್ರಕಾಶದಲ್ಲಿ ಅಸಾಧಾರಣ ಲೀಲಾವಿನೋದವನ್ನು ಮಾಡುತ್ತಿರುತ್ತಾನೆ" ಇಲ್ಲಿಯವರೆಗು 'ಅನಂತ' ಶಬ್ದವು ಲೀಲೆಯ ಅಪರಿಮಿತ ವಾಚಕ. ಹಾಗೂ "ಅವನು ಗೋಕುಲ, ಮಥುರಾ ಮತ್ತು ದ್ವಾರಕೆಯಲ್ಲಿ ಕ್ರಮವಾಗಿ ಲೀಲಾ ವಿಸ್ತಾರ ಮಾಡುತ್ತಾನೆ." ಭಾವಾರ್ಥದೀಪಿಕಾದ (೧೦ ಉಪಕ್ರಮನಿಕಾ ೬) ಪ್ರಮಾಣದ ಅನುಸಾರ ಲೀಲೆಯ ಪರಿಮಿತವನ್ನೂ ಸಹ ಅರ್ಥಮಾಡಿಕೊಳ್ಳಬೇಕು.

ಪುನಃ ಅಲ್ಲಲ್ಲಿ ಪ್ರಕಟಣೆ ಹಾಗೂ ಆ ಸಮಯ ಅನ್ಯತ್ರ ಅಪ್ರಕಟಣೆಯನ್ನು ಅರ್ಥಮಾಡಿಕೊಳ್ಳಬೇಕು. ಶ್ರೀಮದ್ಭಾಗವತದಲ್ಲಿ (೧೦/೧/೨೮) ಹೀಗೆ ಹೇಳಿದೆ– "ಮಥುರೆಯಲ್ಲಿ ಭಗವಾನ್ ಶ್ರೀಹರಿಯು ನಿತ್ಯ ನೆಲಸಿದ್ದಾನೆ."– ಈ ವಚನದ ಮೂಲಕ ಮಥುರ ಅಂದರೆ ಮಥುರಾಮಂಡಲದಲ್ಲಿ ನಿತ್ಯ ನೆಲಸಿರುವುದರಿಂದ ದ್ವಾರಕೆಯಲ್ಲಿ ಅಪ್ರಕಟ ರೂಪದಲ್ಲಿ ನಿತ್ಯಲೀಲೆಯ ಸೂಚನೆಯಾಗುತ್ತದೆ. ಮತ್ತೆ ಪುನಃ ಶ್ರೀಕೃಷ್ಣನ ಮೂಲಕ ದ್ವಾರಕೆಯಲ್ಲಿ ಸ್ಥಿತನಾದ ಸಮಯದಲ್ಲಿಯೂ ಸಹ ದ್ವಾರಕಾವಾಸಿಗಳು ಹೇಳುವುದು ಇದೇ (ಶ್ರೀಮದ್ಭಾ ೧/೧೦/೨೬)– "ಶ್ರೀಪತಿ ಶ್ರೀಕೃಷ್ಣನು ಜನ್ಮಪಡೆದು ಯದುವಂಶವನ್ನು ಹಾಗೂ ಲೀಲಾ–ವಿನೋದದ ಮೂಲಕ ಮಧುಪುರಿಯನ್ನು ಧನ್ಯವಾಗಿಸುತ್ತಿದ್ದಾನೆ."– ಈ ಪದದಲ್ಲಿ ವರ್ತಮಾನ ಕಾಲದ ಪ್ರಯೋಗವಾಗಿದೆ. ಇದರಿಂದ ಗೋಕುಲದಲ್ಲಿಯೂ ಸಹ ಅಪ್ರಕಟ ನಿತ್ಯಲೀಲೆಯು ಇಂಗಿತವಾಗುತ್ತಿದೆ. ಆದ್ದರಿಂದ ಇದನ್ನು ಸ್ವೀಕರಿಸಬೇಕು, ಶ್ರೀಕೃಷ್ಣನ ಲೀಲಾಮಾತ್ರವೇ ನಿತ್ಯ, ಒಂದು ಸ್ಥಾನದಲ್ಲಿ ಆವಿರ್ಭವಿಸಿದರು ಅನ್ಯತ್ರವೂ ಸಹ ಅಂದರೆ ಅಪ್ರಕಟ–ಪ್ರಕಟದಲ್ಲಿ ಅರ್ಥವಾಗುವ ಲೀಲಾವಿನೋದವು ನಿತ್ಯಕಾಲವೂ ನೆಲಸಿರುತ್ತದೆ. ॥೩೪॥

ಸಪ್ತಮ–ಶ್ಲೋಕ

ಚತುಃಶ್ಲೋಕದಲ್ಲಿ ಒಳಗೊಂಡ ಚತುರ್ಥ ಶ್ಲೋಕ– ಶ್ರೀಭಗವಂತನ ಮೂಲಕ ಭಗವತ್–ಪ್ರೇಮದ ಅಂಗ– ಸಾಧನವು ಅತ್ಯಂತ ರಹಸ್ಯಮಯಿಯವಾದ ಕಾರಣ ಬಹಿರಂಗ ವ್ಯಕ್ತಿಗಳಿಗೆ ಅಗೋಚರ ರೂಪದಲ್ಲೇ ಅದರ ಉಪದೇಶ

ಎತಾವದೇವ ಜಿಜ್ಞಾಸ್ಯಂ ತತ್ತ್ವವಿಜಿಜ್ಞಾಸುತಾತ್ಮನಃ ।
ಅನ್ವಯವ್ಯತಿರೇಕಾಭ್ಯಾಂ ಯತ್ ಸ್ಯಾತ್ ಸರ್ವತ್ರ ಸರ್ವದಾ ॥

(ಶ್ರೀಮದ್ಭಾ ೨/೯/೩೫)

ಅನ್ವಯ

ಆತ್ಮನಃ ತತ್ತ್ವ (ಆತ್ಮತತ್ತ್ವದ) ಜಿಜ್ಞಾಸುನಾ (ಜಿಜ್ಞಾಸು ವ್ಯಕ್ತಿ) [ನನ್ನ ಸ್ವರೂಪತತ್ತ್ವದ] ಅನ್ವಯ (ಅನುವೃತ್ತಿ ಯಾ ವಿಧಿ) [ಮತ್ತು] ವ್ಯರೇಕಾಬ್ಯಾಂ (ವ್ಯಾವೃತ್ತಿ ಅಥವಾ ನಿಷೇಧ ಕ್ರಮದಿಂದ) [ವಿಚಾರ ಮಾಡಿ] ಯತ್ (ಯಾವ ವಸ್ತು) ಸರ್ವತ್ರ (ಸರ್ವತ್ರ) [ಮತ್ತು] ಸರ್ವದಾ (ಸರ್ವದಾ) [ನಿತ್ಯ] ಸ್ಯಾತ್ (ಇರುವುದೋ) ಎತಾವತ್ (ಆ ವಿಷಯದಲ್ಲಿ) ಏವ (ಮಾತ್ರ) ಜಿಜ್ಞಾಸ್ಯಂ (ಪರಿಪ್ರಶ್ನೆ ಮಾಡುತ್ತಾರೆ) ॥೩೪॥

ಅನುವಾದ

ಆತ್ಮತತ್ತ್ವದ ಜಿಜ್ಞಾಸು ನಡೆಸುವ ವ್ಯಕ್ತಿ ಸ್ವರೂಪ–ತತ್ತ್ವದ ಅನುವೃತ್ತಿ ಮತ್ತು ವ್ಯಾವೃತ್ತಿ (ನಿಷೇಧ) ಕ್ರಮದಿಂದ ಅಥವಾ ವಿಧಿ–ನಿಷೇಧದ ಮೂಲಕ ವಿಚಾರ ಮಾಡಿ ಯಾವ ವಸ್ತು ಸರ್ವತ್ರ ಹಾಗೂ ಸರ್ವದಾ ನಿತ್ಯವಾಗಿರುವುದೋ, ಆ ವಿಷಯದಲ್ಲೇ ಪರಿಪ್ರಶ್ನೆಯನ್ನು ಮಾಡುತ್ತಾರೆ ॥೩೪॥

ಶ್ರೀಭಕ್ತಿವಿನೋದ ಠಾಕುರ

ನಾನು ಸ್ವರೂಪ, ಸ್ವರೂಪ–ವೈಭವ, ಜೀವ ಮತ್ತು ಪ್ರಧಾನ ರೂಪದಲ್ಲಿ ಅವಭಾಸಿತ ಅರ್ಥಾತ್ ಕಾಣಿಸಲ್ಪಟ್ಟರೂ ಸಹ ನಿತ್ಯ, ಅಖಂಡ ಹಾಗೂ ಅದ್ವಯತತ್ತ್ವನಾಗಿದ್ದೇನೆ. ಮಾಯಾಬದ್ಧ ಜೀವಿ ಈ ತತ್ತ್ವದ ಪ್ರಾಪ್ತಿಯನ್ನು ಪಡೆಯದಿರುವ ಕಾರಣ ವಿವಿಧ ಪ್ರಕಾರದ ವಿತರ್ಕಗಳನ್ನು ಮಾಡುತ್ತಾನೆ. ಅವನ ಕರ್ತವ್ಯವೇನೆಂದರೆ ನನ್ನ ಕೃಪೆಯಿಂದ ಪ್ರಾಪ್ತವಾದ ಶಾಸ್ತ್ರದ ಅಭಿಧೇಯವನ್ನು ಅನ್ವಯ–ವ್ಯತಿರೇಕ ಅಂದರೆ ವಿಧಿ–ನಿಷೇಧ ಅಥವಾ ವಿಧಿ–ರಾಗದ ಭೇದದಿಂದ ಸದ್ಗುರುವಿನ ಚರಣಗಳಲ್ಲಿ ಜಿಜ್ಞಾಸುವಿನ ಮೂಲಕ ಯಾವ ವ್ಯಕ್ತಿ ಸರ್ವದಾ ಸರ್ವತ್ರ ಸತ್ಯದ ರೂಪದಲ್ಲಿ ಸ್ಥಿರನಾಗಿರುವನೋ, ಅವನ ಸಾಧನೆ ಪ್ರವೃತ್ತವಾಗಲಿ. (ಶ್ರೀಭಾಗವತಾರ್ಕಮರೀಚಿಮಾಲಾ ೧೦/೭).

ಶ್ರೀಮದ್ಭಾಗವತದಲ್ಲಿ ಮಹಾಪ್ರಭು ಶ್ರೀಚೈತನ್ಯದೇವರ ಮತವು ಸಂಪೂರ್ಣವಾಗಿ ಸ್ಥಿತವಾಗಿದೆ. ಭಾಗವತ ಗ್ರಂಥದಲ್ಲಿ ಹದಿನೆಂಟು ಸಾವಿರ ಶ್ಲೋಕಗಳಿವೆ. ಆ ಹದಿನೆಂಟು

ಸಾವಿರ ಶ್ಲೋಕಗಳಲ್ಲಿ ಏನೆಲ್ಲ ಇವೆಯೋ, ಅದರ ಮೂಲವು ಈ ನಾಲ್ಕು ಶ್ಲೋಕಗಳಲ್ಲೇ ತುಂಬಿದೆ. 'ಅಹಮೇವ' ಶ್ಲೋಕದಲ್ಲಿ ಭಗವತ್–ತತ್ವ, ಭಗವತ್–ಸ್ವರೂಪ, ಗುಣ ಹಾಗೂ ಲೀಲೆಗಳನ್ನು ಸಂಕ್ಷೇಪವಾಗಿ ವರ್ಣಿಸಲಾಗಿದೆ; 'ಋತೇ ಅರ್ಥಂ' ಶ್ಲೋಕದಲ್ಲಿ ಭಗವತ್–ಸ್ವರೂಪ–ತತ್ವದಿಂದ ಪೃಥಕ ರೂಪದಲ್ಲಿ ಪ್ರತಿಭಾವಿತ ಮಾಯಾತತ್ವ ಹಾಗೂ ಆ ಮಾಯಾತತ್ವದ ಸಂಬಂಧದಿಂದ ಉದಿತವಾದ ಮಾಯಾಶಕ್ತಿಯ ವಶಕ್ಕೆ ಯೋಗ್ಯವಾದ ಜೀವತತ್ವ ಹಾಗೂ ಜೀವಿಗಳ ಭೋಗಾಯಾತನೆ (ಭೋಗ–ಆವಾಸ) ಜಡತತ್ವದ ವಿಚಾರಣೆ ಮಾಡಲಾಗಿದೆ. ಈ ಎರಡು ಶ್ಲೋಕಗಳಲ್ಲಿ ಸಂಬಂಧಜ್ಞಾನವನ್ನು ಸಂಪೂರ್ಣವಾಗಿ ವಿವರಿಸಲಾಗಿದೆ. 'ಯಥಾ ಮಹಾಂತಿ' ಶ್ಲೋಕದಲ್ಲಿ ಜೀವಿ ಹಾಗೂ ಜಡದಿಂದ ಭಗವತ್–ತತ್ವದ ಅಚಿಂತ್ಯ ಭೇದ–ಅಭೇದವಾದರೂ ಸಹ ಶ್ರೀಭಗವಂತನ ನಿತ್ಯ ಸ್ವರೂಪದ ಪೃಥಕ ಸ್ಥಿತಿ ಹಾಗೂ ಜೀವಿಗಳ ಮೂಲಕ ಅವನ ಚರಣಾಶ್ರಯದ ಕ್ರಮದಿಂದ ಮಹಾಪ್ರೇಮ ಸಂಪತ್–ಲಾಭರೂಪವಾದ ಪರಮ ಪ್ರಯೋಜನವನ್ನು ವಿವರಿಸಲಾಗಿದೆ. 'ಏತಾವದೇವ' ಶ್ಲೋಕದಲ್ಲಿ ಆ ಪರಮ ಪ್ರಯೋಜನವನ್ನು ಪ್ರಾಪ್ತಿಸಿಕೊಳ್ಳುವ ಏಕಮಾತ್ರ ಉಪಾಯವಾದ ಸಾಧನಭಕ್ತಿಯ ಉಲ್ಲೇಖನೆ ನೀಡಲಾಗಿದೆ. ಸಾಧನಭಕ್ತಿಗೆ ಒಳಗೊಂಡ ಪ್ರಾಪ್ತಿ–ಸಾಧಕ ಸಮಸ್ತ ವಿಧಿಗಳಿಗೆ ಅನುಕೂಲ ರೂಪದಿಂದ 'ಅನ್ವಯ' ಎಂದು ವಿವರಿಸಿದ್ದಾರೆ ಹಾಗೂ ಅದರ ಪ್ರಾಪ್ತಿಗೆ ಬಾಧಕವಾದ ಪ್ರತಿಕೂಲವಾದ ಸಮಸ್ತ ಕ್ರಿಯೆಗಳನ್ನು ನಿಷೇಧದಲ್ಲಿ ಪರಿಗಣಿಸಿ ಅದನ್ನು 'ವ್ಯತಿರೇಕ' ಎಂಬ ಶಬ್ದದಿಂದ ವಿವರಿಸಲಾಗಿದೆ. ಸಾಧನತತ್ವದ ಹೆಸರು ಅಭಿಧೇಯ, ಅಂದರೆ ಶಾಸ್ತ್ರದ ಅಭಿಧಾ–ವೃತ್ತಿಕ್ರಮದಿಂದ ಯಾವುದರ ಉಪದೇಶವು ಪ್ರಾಪ್ತವಾಗುತ್ತದೋ, ಅದೇ ಅಭಿಧೇಯ. (ಶ್ರೀಚೈತನ್ಯಚರಿತಾಮೃತ ಇತ್ಯಾದಿ ಲೀಲೆಯ ೧/೫೩–೫೬ ಅಮೃತಪ್ರವಾಹ–ಭಾಷ್ಯ)॥೩೫॥

ಶ್ರೀವಿಶ್ವನಾಥ ಚಕ್ರವರ್ತಿಪಾದರು

ಅಥ *'ಭಗವಚ್ಛಿಕ್ಷಿತಮಹಂ ಕರವಾಣಿ ಹ್ಯತಂದ್ರಿತಃ'* (ಶ್ರೀಮದ್ಭಾ ೨/೯/೨೮) ಇತಿ ಬ್ರಹ್ಮಣಾ ಪ್ರಾರ್ಥಿತಂ ಸ್ವಪ್ರಾಪ್ತಿಸಾಧನಮ್ ಅತಿರಹಸ್ಯತಾದ್ ಬಹಿರಂಗಜನಾಗಮ್ಯ– ತಯೈವಾಹ– ಏತಾವದೇವೇತಿ । ಅತ್ರ ಬಹುತರಶಾಸ್ತ್ರಾನುಸಂಧಾನಮಪಿ ನಾಪೇಕ್ಷಿತವ್ಯಮಿತಿ ಭಾವಃ । ತತ್ವಜಿಜ್ಞಾಸುನಾ ಆತ್ಮನಃ ಸ್ವಸ್ಯ ಶ್ರೇಯಃಸಾಧನತತ್ವಂ ಜ್ಞಾತುಮಿಚ್ಛುನಾ ಜನೇನ ಜಿಜ್ಞಾಸ್ಯಂ ಶ್ರೀಗುರುಚರಣೇಭ್ಯಃ ಶಿಕ್ಷಣೀಯಮಿತ್ಯರ್ಥಃ, ತ್ವಯಾ ತು ಮದನುಗ್ರಹಾದವಗ್ರಮ್ಯತ ಏವೇತಿ ಭಾವಃ । ಕಿಂ ತತ್? ಯತ್ ಶ್ರೇಯಃಸಾಧನೇಷು ಕರ್ಮ–ಜ್ಞಾನ–ಯೋಗ–ಭಕ್ತ್ಯಾದಿಷು ಮಧ್ಯೇ ಅನ್ವಯ–ವ್ಯತಿರೇಕಾಭ್ಯಾಂ ಸ್ಯಾತ್ ಸಿಧ್ಯತಿ ಸ್ಥಿರೀಭವತೀತ್ಯರ್ಥಃ । ಅತ್ರ ತಾವತ್ ಸ್ವರ್ಗಾಪವರ್ಗಾದೇಃ ಕರ್ಮ–ಜ್ಞಾನ–ಯೋಗಾದಿಭಿಃ ಕೇವಲೈರಸಿದ್ಧೇಸ್ತೈರ್ವಿನಾಪಿ ಸಿದ್ಧೇಃ, ಕರ್ಮ–ಜ್ಞಾನ–ಯೋಗಾದಯೋಽನ್ವಯವ್ಯತಿರೇಕಾಭ್ಯಾಂ ನೈವ ಸಾಧನಾನಿ ಸ್ಯುಃ । ತಥಾಹಿ– *'ಕೋ ವಾರ್ಥ ಆಪ್ತೋ ಭಜತಾಂ ಸ್ವಧರ್ಮತಃ'* (ಶ್ರೀಮದ್ಭಾ ೧/೫/೧೭) ಇತಿ, *'ಕ್ಲಿಶ್ಯನ್ತಿ ಯೇ ಕೇವಲ–ಬೋಧಲಬ್ಧಯೇ'* (ಶ್ರೀಮದ್ಭಾ ೧೦/೧೪/೪) ಇತಿ, *'ಪುರೇಹ ಭೂಮನ್ ಬಹವೋಽಪಿ ಯೋಗಿನಃ'* (ಶ್ರೀಮದ್ಭಾ ೧೦/೧೪/೫) ಇತಿ, *'ಯತ್ಕರ್ಮಭಿರ್ಯತ್ ತಪಸಾ'* (ಶ್ರೀಮದ್ಭಾ

೧೧/೨೦/೩೨) ಇತ್ಯಾದೌ ಕರ್ಮಾದಿಭಿರ್ವಿನಾಪಿ *'ಸರ್ವಂ ಮದ್ಭಕ್ತಿಯೋಗೇನ ಮದ್ಭಕ್ತೋ ಲಭತೇಽಂಜಸಾ । ಸ್ವರ್ಗಾಪವರ್ಗಂ ಮದ್ಧಾಮ ಕಥಂಚಿದ್ ಯದಿ ವಾಂಛಿತಿ ॥'* (ಶ್ರೀಮದ್ಭಾ ೧೧/೨೦/೩೩) ಇತಿ । *'ಯಾ ವೈ ಸಾಧನಸಂಪತ್ತಿಃ ಪುರುಷಾರ್ಥ–ಚತುಷ್ಟಯೇ । ತಯಾ ವಿನಾ ತದಾಪ್ನೋತಿ ನರೋ ನಾರಾಯಣಾಶ್ರಯಃ ॥'* ಇತಿ ಮೋಕ್ಷಧರ್ಮೀಯವಚನಂಚ । ಭಕ್ತ್ಯಾ ತು ಕೇವಲಯೈವ ಸರ್ವಾಣಿ ಶ್ರೇಯಾಂಸಿ ಸಿಧ್ಯಂತಿ, ತಯಾ ವಿನಾ ತು ನೈವ ಸಿಧ್ಯಂತೀತಿ ಅನ್ವಯವ್ಯತಿರೇಕಾಭ್ಯಾಂ ಭಕ್ತಿರೇವ ಸರ್ವಶ್ರೇಯಃಸಾಧನತ್ವೇನ ಸ್ಥಿರೀಭವತಿ । ತಥಾಹಿ ಅನ್ವಯೇನ ಯಥಾ (ಶ್ರೀಮದ್ಭಾ ೨/೩/೧೦)– *'ಅಕಾಮಃ ಸರ್ವಕಾಮೋ ವಾ ಮೋಕ್ಷಕಾಮ ಉದಾರಧೀಃ । ತೀವ್ರೇಣ ಭಕ್ತಿಯೋಗೇನ ಯಜೇತ ಪುರುಷಂ ಪರಮ್॥'* ಇತಿ । ಭಕ್ತಿಯೋಗ್ಯಸ್ಯ ಕೇವಲಸ್ಯೈವ ತೀವ್ರತ್ವಂ ನಿರಭ್ರಸೂರ್ಯಸ್ಯೇವೇತಿ ಜ್ಞೇಯಮ್ । ಯಥಾ ವಾ (ಶ್ರೀಮದ್ಭಾ ೧೧/೨೦/೩೨)– *'ಯತ್ ಕರ್ಮಭಿರ್ಯತ್ತಪಸಾ'* ಇತ್ಯಾದಿ; ವ್ಯತಿರೇಕೇಣ, ಯಥಾ (ಶ್ರೀಮದ್ಭಾ ೧೧/೫/೨)– 'ಮುಖಬಾಹೂರೂ–ಪದೇಭ್ಯಃ ಪುರುಷಸ್ಯಾಶ್ರಮೈಃ ಸಹ । ಚತ್ವಾರೋ ಜಜ್ಞಿರೇ ವರ್ಣಾ ಗುಣೈರ್ವಿಪ್ರಾದಯಃ ಪೃಥಕ್ ॥ ಯಃ ಏಷಾಂ ಪುರುಷಂ ಸಾಕ್ಷಾದಾತ್ಮಪ್ರಭವಮೀಶ್ವರಮ್ । ನ ಭಜನ್ತ್ಯವಜಾನನ್ತಿ ಸ್ಥಾನಾದ್ಭ್ರಷ್ಟಾಃ ಪರನ್ತ್ಯಧಃ ॥' ಇತಿ । ಯಥಾ ವಾ (ಶ್ರೀಮದ್ಭಾ ೨/೪/೧೭)– *'ತಪಸ್ವಿನೋ ದಾನಪರಾ ಯಶಸ್ವಿನೋ ಮನಸ್ವಿನೋ ಮಂತ್ರವಿದಃ ಸುಮಂಗಲಾಃ । ಕ್ಷೇಮಂ ನ ವಿಂದನ್ತಿ ವಿನಾ ಯದರ್ಪಣಂ ತಸ್ಮೈ ಸುಭದ್ರಶ್ರವಸೆ ನಮೋ ನಮಃ ।'* ಇತಿ । ತತ್ರ ದೇಶಕಾಲವಿಶೇಷಾಭಾವಮಾಹ– ಸರ್ವತ್ರ ಸರ್ವದೇಶೇಷು ಸರ್ವಾದಿಕಾರಿಷು ಚ, ಸರ್ವದಾ ಸರ್ವೇಷ್ವೇವ ಕಾಲೇಷು ಯತ್ ಸ್ಯಾತ್; ತಥಾಹಿ–ಶುಚಾವೇವ ದೇಶೆ ಶುಚಿ ತತ್ಕಾಲಜೀವೀ ಕರ್ಮ ಕುರ್ಯಾತ್; ಶುದ್ಧಾಂತಃಕರಣಏವ ಜ್ಞಾನಂ ಲಭೇತ, (ಶ್ರೀಮದ್ಭಾ ೩/೨೮/೮)– *'ಶುಚೌ ದೇಶೇ ಪ್ರತಿಷ್ಠಾಪ್ಯ ಸುಖಮಾಸನಮಾತ್ಮನಃ । ಯೋಗೀ ಯೋಗಂ ಯುಂಜೀತ'* ಇತಿ ಕರ್ಮಜ್ಞಾನಾದೀನಾಂ ನ ಸಾರ್ವತ್ರಿಕತಾ । ತಥಾ, ಯತ್ ಕರ್ಮ, ತತ್ ಸನ್ನ್ಯಾಸ–ಭೋಗಪ್ರಾಪ್ತ್ಯವಧಿ; ಯೋಗಃ ಸಿಧ್ಯವಧಿಃ; ಸಾಂಖ್ಯಮಾತ್ಮಜ್ಞಾನಾವಧಿಃ; ಜ್ಞಾನಂ ಮೋಕ್ಷಾವಧೀತಿ ನಾಪಿ ಸಾರ್ವತ್ರಿಕತಾ । ಭಕ್ತೆಸ್ತು ಸಾರ್ವತ್ರಿಕತಾ–ಸಾರ್ವದಿಕ್ತೇ ಅತಿಪ್ರಸಿದ್ಧೇ ಏವ । *'ನ ದೇಶನಿಯಮಸ್ತತ್ರ ನ ಕಾಲನಿಯಮಸ್ತಥಾ । ನೋಚ್ಛಿಷ್ಟಾದೌ ನಿಷೇಧೋಽಸ್ತಿ ಶ್ರೀಹರೇರ್ನಾಮ್ನಿ ಲುಬ್ಧಕಃ ।'* ಇತಿ । *'ತಸ್ಮಾತ್ ಸರ್ವಾತ್ಮನಾ ರಾಜನ್ ಹರಿಃ ಸರ್ವತ್ರ ಸರ್ವದಾ । ಶ್ರೋತವ್ಯಃ ಕೀರ್ತಿತವ್ಯಶ್ಚ ಸ್ಮರ್ತವ್ಯೋ ಭಗವಾನ್ ನೃಣಾಮ್ ॥'* (ಶ್ರೀಮದ್ಭಾ ೨/೨/೩೬) ಇತಿ ಕರ್ಮಿಜ್ಞಾನಿಪ್ರಭೃತಿಷು ಸರ್ವೇಷ್ವಧಿಕಾರಿಷು ಭಕ್ತೇರ್ವ್ಯಾಪ್ತಿರುಕ್ತೈವ । *'ಕಿರಾತಹೂಣಾನ್ಧ್ರ ಪುಲಿನ್ದಪುಕ್ಕಶಾಃ'* (ಶ್ರೀಮದ್ಭಾ ೨/೪/೧೮) ಇತ್ಯಾದಿನಾ ಜಾತಿಚಾಂಡಾಲ–ಕರ್ಮಚಾಂಡಾಲಾದಿಷ್ವಪಿ ದೃಷ್ಟಾ । ತಥಾ ಸರ್ವಾವಸ್ಥಾಸ್ವಪಿ–ಗರ್ಭೆ ಪ್ರಹಲಾದಾದೇಃ; ಬಾಲ್ಯೇ ಧ್ರುವಾದೇಃ; ಯೌವನೇ ಅಂಬರೀಷಾದೇಃ; ವಾರ್ಧ್ಧಕ್ಯೆ ಯಯಾತ್ಯಾದೇಃ; ಮರಣೆ ಅಜಾಮಿಲಾದೇಃ; ನಾರಕಿತಾಯಾಮಪಿ– 'ಮುಚ್ಯತೆ *ಯನ್ನಾಮ್ನ್ಯುದಿತೇ ನಾರಕೋಽಪಿ'* ಇತ್ಯುಕ್ತೇಃ । *'ಯಥಾ ಯಥಾ ಹರೇರ್ನಾಮ ಕೀರ್ತಯಂತಿ ಚ ನಾರಕಾಃ । ತಥಾ ತಥಾ ಹರೌ ಭಕ್ತಿಮುದ್ವಹಂತೋ ದಿವಂ ಯಯುಃ॥'* ಇತಿ ನೃಸಿಂಹಪುರಾಣೋಕ್ತೇಶ್ಚೇತಿ ಭಕ್ತೇರೇವ ಸಾಧನತ್ವಂ ನಿರ್ಧಾರಿತಮ್ । ಅಥ ಪ್ರೇಮಭಕ್ತಿರೂಪಂ ರಹಸ್ಯಮಪಿ ತನ್ತ್ರೈಣೈವಾಹ–ಏತಾವದಿತಿ । ತತ್ವಜಿಜ್ಞಾಸುನಾ ಪುಂಸಾ

ಏತಾವದೇವ ಶ್ರೇಯಃ ಸು ಸ್ವರ್ಗಾಪವರ್ಗಪ್ರೇಮಸು ಮಧ್ಯೇ ಜಿಜ್ಞಾಸ್ಯಮ್ । ಕಿಂ ತತ್? ಯತ್ ಶ್ರೇಯಃ ಆತ್ಮನಃ ಸ್ವಸ್ಯೈವ ಅನ್ವಯಃ-ವ್ಯತಿರೇಕಾಭ್ಯಾಂ ಸರ್ವತ್ರ ಸರ್ವದಾ ಸ್ಯಾತ್ । ತತ್ರ ನ ತಾವತ್ ಸ್ವರ್ಗಪವರ್ಗ್ಯೌ ಸ್ವಾನ್ವಯವ್ಯತಿರೇಕಾಭ್ಯಾಂ ಸಿಧ್ಯತಃ; ಪ್ರೇಮಾ ತು ಸ್ವಸ್ಯೈವಾನ್ವಯ ವ್ಯತಿರೇಕಾಭ್ಯಾಮ್ ಸಿಧ್ಯತಿ । ಪ್ರೇಮ್ಣೋಽಪಿ ಭಕ್ತಿಶಬ್ದವಾಚ್ಯತ್ವಾತ್ ಸಾಧನಭಕ್ತ್ಯೈವ ಸಾಧ್ಯಭಕ್ತೇಃ ಪ್ರೇಮ್ಣಃ ಸಿದ್ಧಿದರ್ಶನಾತ್ ಪ್ರೇಮ್ಣಃ ಸ್ವೇನೈವ ಸಿದ್ಧಿಃ । ಯದುಕ್ತಮ್ (ಶ್ರೀಮದ್ಭಾ ೧೧/೩/೩೧) *'ಭಕ್ತ್ಯಾ ಸಂಜಾತಯಾ ಭಕ್ತ್ಯಾ ವಿಭ್ರತ್ಯುತ್ಪುಲಕಾಂ ತನುಮ್ ।'* ಇತ್ಯತೋ ರಹಸ್ಯ-ತದಂಗ-ಶಬ್ದಾಭ್ಯಾಮುಚ್ಯಮಾನೆ ಪ್ರೇಮಭಕ್ತಿ-ಸಾಧನಭಕ್ತೀತಿ ತನ್ತ್ರೇಣೈವೋಕ್ತೆ । ತತಶ್ಚ ಪ್ರೇಮಭಕ್ತಿ-ಸಾಧನತ್ವೇನೈವ ಭಕ್ತಿಃ ಕರ್ತವ್ಯಾ, ನ ತು ಸ್ವರ್ಗಾಪವರ್ಗಾದಿಸಾಧನತ್ವೇನೇತಿ ಭಗವತಃ ಶಿಕ್ಷಾ ವ್ಯಂಜಿತಾ । *'ಭಗವಚ್ಛಿಕ್ಷಿತಮಹಂ ಕರವಾಣಿ'* (ಶ್ರೀಮದ್ಭಾ ೨/೯/೨೮) ಇತಿ ಬ್ರಹ್ಮಣಾ ಪ್ರಾರ್ಥಿತತ್ವಾತ್ ಶುದ್ಧಸಾಧನಭಕ್ತಿಸಿದ್ಧಯಾ ಪ್ರೇಮಭಕ್ತ್ಯೈವ ಯದ್ರೂಪ ಗುಣಾದಿಮಾಧುರ್ಯರಸಾನುಭವಸ್ತಸ್ಯ ಪ್ರೇಮಭಕ್ತ್ಯನುಭಾವರೂಪತ್ವಾದಿತಿ ವಿಜ್ಞಾನಂ ಸ್ವತ ಏವ ಲಬ್ಧವತೋ ರಹಸ್ಯ-ತದಂಗ-ವಿಜ್ಞಾನಾನಿ ಶ್ಲೋಕೇನಾನೇನೈವೋಕ್ತಾನಿ । ಕಿಂಚ, *'ರಸೋ ವೈ ಸಃ'* (ತೈ.ಉ. ೨/೭/೧) ಇತ್ಯನಂತರಂ *'ಸೈಷಾನಂದಸ್ಯ ಮೀಮಾಂಸಾ ಭವತಿ'* (ತೈ.ಉ. ೨/೮/೧) ಇತಿ ಶ್ರುತೇಃ, ಸರ್ವಶ್ರೇಯೋಽವಧಿರೂಪೋ ರಸಏವ ಮೂರ್ತ್ತ ಏವ, ರಂಗಭೂಮೌ *'ಮಲ್ಲಾನಾಮಶಾನಿಃ'* (ಶ್ರೀಮದ್ಭಾ ೧೦/೪೩/೧೭) ಇತ್ಯಾದ್ಯಾಕಾರಏವ ದರ್ಶಿತಃ; ತಸ್ಯ ಚ ವಿಜ್ಞಾನಮತ್ರೈವ ಶ್ಲೋಕೆ ತಂತ್ರೇಣೋಕ್ತಮ್; ಯಥಾ- ಜಿಜ್ಞಾಸ್ಯೇಷು ಮಧ್ಯೇ ಏತಾವದೇವ ಜಿಜ್ಞಾಸ್ಯ-ಮನುಬುಭೂಷಣೀಯಮ್ । ಕಿಂ ತತ್? ಅನ್ವಯ-ವ್ಯತಿರೇಕಾಭ್ಯಾಂ ಯೋಗಾಯೋಗಾಭ್ಯಾಂ ಸಂಯೋಗ-ವಿಪ್ರಲಂಭಾಭ್ಯಾಂ ಯತ್ ಸ್ಯಾತ್ ಸರ್ವತ್ರ ಸರ್ವಬ್ರಹ್ಮಾಂಡವರ್ತಿನಿ ಶ್ರೀವೃಂದಾವನಾದೌ ದಾಸ-ಸಖಿ-ಗುರು-ಪ್ರೇಯಸೀಷು ಸರ್ವದಾ ನಿತ್ಯಮೇವ ಮಹಾಪ್ರಲಯಸಮಯೇಽಪೀತಿ ದಾಸ್ಯಸಖ್ಯ-ವಾತ್ಸಲ್ಯ-ಶೃಂಗಾರರಸಾನಾಂ ಆಸ್ವಾದನಂ ವ್ಯಂಜಿತಮ್ । ಏವಮತಿರಹಸ್ಯಪ್ರೇಮ ಭಕ್ತಿರಸವ್ಯಂಜಕಃ ಶ್ಲೋಕೋಽಯಂ ಜ್ಞಾನರೂಪಾರ್ಥಂತರೇಣ ಭಗವತೈವಾಚ್ಛಾದಿ-ತಶಿಚನ್ತಾಮಣಿರಿವ ಕನಕಸಂಪುಟೇನ ಬಹಿರಂಗಜನಾಶಕ್ಯೋದ್ಘಾಟನೇನ । ತಥಾ ಚ ಶ್ರುತಿಃ- *'ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುಧಾ ಶ್ರುತೇನ । ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನುಂ ಸ್ವಾಮ್'* (ಕಠಃ ೧/೨/೨೩) ಇತಿ । ತಚ್ಚ ಜ್ಞಾನರೂಪಮರ್ಥಾಂತರಂ ಯಥಾ- ಆತ್ಮನಸ್ತತ್ವಜಿಜ್ಞಾಸುನಾ ಏತಾವದೇವ ಜಿಜ್ಞಾಸ್ಯಮ್ । ಕಿಂ ತತ್? ಯದನ್ವಯವ್ಯತಿರೇಕಾಭ್ಯಾಂ ಸರ್ವತ್ರ ಸರ್ವದಾ ಸ್ಯಾತ್, ತದೇವಾತ್ಮಾ । ತಥಾ ಹ್ಯಾತ್ಮನಃ ಕಾರಣತ್ವೇನ ಜಗತ್ಯನ್ವಯಃ ಜಗತಸ್ತ್ವಾತ್ಮನಿ ವ್ಯತಿರೇಕಃ । ತಥಾ ಚ ಜಾಗ್ರದಾದ್ಯವಸ್ಥಾಸು ತತ್ಸಾಕ್ಷಿತಯಾ ಆತ್ಮನೋಽನ್ವಯಃ, ಆತ್ಮನಿ ತು ಜಾಗ್ರದಾದ್ಯವಸ್ಥಾ ವ್ಯತಿರೇಕ ಇತಿ ॥೩೫॥

ಭಾವಾನುವಾದ- ತದನಂತರ "ನಾನು ಆಲಸ್ಯವನ್ನು ತ್ಯಾಗಮಾಡಿ ಶ್ರೀಭಗವಂತನ ಮೂಲಕ ಉಪದೇಶಿಸಿದ ವಿಷಯವನ್ನು ಪಾಲಿಸುವೆನು"- ಈ ರೀತಿ ಶ್ರೀಮದ್ಭಾಗವತದಲ್ಲಿ (೨/೯/೨೮) ಶ್ರೀಬ್ರಹ್ಮನ ಮೂಲಕ ಪ್ರಾರ್ಥಿತ ಭಗವತ್-ಪ್ರಾಪ್ತಿಯ ಸಾಧನೆ ಅತಿ ರಹಸ್ಯಮಯವಾದ ಕಾರಣ ಬಹಿರಂಗ ವ್ಯಕ್ತಿಗಳಿಗೆ

ಅಗೋಚರವಾಗಿಯೇ ಶ್ರೀಭಗವಂತನು 'ಎತಾವತ್' ಮುಂತಾದ ಶ್ಲೋಕದ ಮೂಲಕ ಬ್ರಹ್ಮದೇವರಿಗೆ ತಿಳಿಸುತ್ತಿದ್ದಾನೆ. 'ಎತಾವತ್' ಅರ್ಥಾತ್ ಈ ವಿಷಯದಲ್ಲಿ ಅನೇಕ ಶಾಸ್ತ್ರಗಳ ಅನುಸಂಧಾನವಾಗಲು ಅಪೇಕ್ಷಿಸಬಾರದು. ತತ್ವ-ಜಿಜ್ಞಾಸು ಅಂದರೆ ತನ್ನ ಶ್ರೇಯಃ ಸಾಧಾನತತ್ವವನ್ನು ತಿಳಿಯಲು ಇಚ್ಛುಕರಾದ ವ್ಯಕ್ತಿಗಳಿಗಾಗಿ ಈ ಸಾಧನ ಜಿಜ್ಞಾಸ್ಯವಾಗಿದೆ ಅರ್ಥಾತ್ ಶ್ರೀಗುರುಚರಣಗಳಲ್ಲಿ ಶಿಕ್ಷಣೀಯವಾಗಿದೆ, ಆದರೆ ನೀನು ಇದನ್ನು ನನ್ನ ಅನುಗ್ರಹದಿಂದಲೇ ಪಡೆದುಕೋ- ಇದೇ ಭಾವಾರ್ಥ. ಜಿಜ್ಞಾಸ್ಯ ಸಾಧನೆ ಎಂದರೇನು? ಇದಕ್ಕೆ ಉತ್ತರದಲ್ಲಿ ಹೇಳುತ್ತಾರೆ- ಕರ್ಮ, ಜ್ಞಾನ, ಯೋಗ ಹಾಗೂ ಭಕ್ತಿ ಇತ್ಯಾದಿ ಸಾಧನೆಗಳಲ್ಲಿ ಯಾವ ಸಾಧನೆಯ ಅನ್ವಯ (ಯಾವುದರ ಅಸ್ತಿತ್ವದ ಮೂಲಕ ಇತರ ವಸ್ತುಗಳ ಅಸ್ತಿತ್ವ) ಹಾಗೂ ವ್ಯತಿರೇಕ (ಯಾವುದರ ಅಪ್ರಕಟದಿಂದ ಇತರವು ಅಪ್ರಕಟವಾಗಿರುವ) ಭಾವದಿಂದ ಸಿದ್ಧ ಅರ್ಥಾತ್ ಸ್ಥಿರವಾಗಿರುತ್ತದೆ. ಇಲ್ಲಿ ಕೇವಲ ಕರ್ಮ, ಜ್ಞಾನ ಹಾಗೂ ಯೋಗಾದಿಗಳ ಮೂಲಕ ಸ್ವರ್ಗ ಹಾಗೂ ಅಪವರ್ಗಾದಿ ನಿರ್ಯಾಣವಾಗುವುದಿಲ್ಲ, ಈ ಉಪಾಯಗಳಿಗೆ ಅತಿರಿಕ್ತವೂ ಸಹ ಸ್ವರ್ಗಾದಿಯ ಪ್ರಾಪ್ತಿಯಾಗುತ್ತದೆ. ಆದ್ದರಿಂದ ಕರ್ಮ-ಜ್ಞಾನ-ಯೋಗಾದಿ ಅನ್ವಯ-ವ್ಯತಿರೇಕ ಭಾವದಿಂದ ಎಂದೆಂದಿಗೂ ಪರಮ ಮಂಗಳದ ಪ್ರಾಪ್ತಿಯ ಸಾಧನೆಯು ಸಾಧ್ಯವಾಗುವುದಿಲ್ಲ. ಹೀಗೆ, ಶ್ರೀಭಾಗವತದಲ್ಲಿ (೧/೫/೧೨) ಹೇಳಲಾಗಿದೆ- "ಹರಿಭಜನೆಯನ್ನು ಪರಿತ್ಯಜಿಸಿ ಕೇವಲ ಸ್ವ-ಧರ್ಮದ ಪಾಲನೆ ಮಾಡುವುದರಿಂದಲೇ ಯಾರಿಗಾದರು ಪ್ರಯೋಜನವು ಸಿದ್ಧಿಸುವುದೇ?" ಅದೇ ರೀತಿ ಶ್ರೀಮದ್ಭಾಗವತ (೧೦/೧೪/೪) ಬ್ರಹ್ಮಸ್ತುತಿಯಲ್ಲಿ ಹೇಳಿದೆ- "ಯಾರು ಪರಮ ಮಂಗಳಮಯ ಮಾರ್ಗರೂಪವಾದ ಶ್ರವಣಾದಿ ಭಕ್ತಿಯನ್ನು ಆದರಿಸದೇ ಕೇವಲ ಜ್ಞಾನ ಪ್ರಾಪ್ತಿಗಾಗಿ ಯಮ, ನಿಯಮಾದಿ ಕಷ್ಟಪೂರ್ಣ ಸಾಧನೆಯನ್ನು ಸ್ವೀಕರಿಸುತ್ತಾರೋ, ಅಂತಹವರ ಪ್ರಯತ್ನಗಳು ಸ್ಥೂಲ ಬತ್ತ ಭೂಸವನ್ನು ಕುಟ್ಟುವ ಸಮಾನ ವ್ಯರ್ಥದ ಶ್ರಮದಲ್ಲೇ ಅಂತ್ಯವಾಗುತ್ತದೆ, ಅಂದರೆ ಅವರಿಗೆ ಕೇವಲ ಶ್ರಮ ಮಾತ್ರವೇ ಲಭಿಸುತ್ತದೆ, ಅಕ್ಕಿಯಲ್ಲ."

ಹಾಗೂ ಶ್ರೀಮದ್ಭಾಗವತದಲ್ಲಿ (೧೦/೧೪/೫) ಹೇಳಲಾಗಿದೆ- "ಪೂರ್ವಕಾಲದಲ್ಲಿ ಈ ಜಗತ್ತಿನಲ್ಲಿ ಎಷ್ಟೋ ಜನ ಯೋಗಿಗಳು ಯೋಗ ಸಾಧನೆಯ ಮೂಲಕ ನಿಮ್ಮ ಜ್ಞಾನವನ್ನು ಪ್ರಾಪ್ತಿಸಿಕೊಳ್ಳದಿರುವ ಕಾರಣ ನಿಮ್ಮಲ್ಲಿ ಸಮಸ್ತ ಕರ್ಮಗಳನ್ನು ಅರ್ಪಿಸಿ ನಿಮ್ಮ ಕಥೆಯ ಶ್ರವಣದಿಂದ ಉದಿತವಾದ ಭಕ್ತಿಯ ಬಲದಿಂದ ನಿಮ್ಮ ತತ್ವವನ್ನು ತಿಳಿದುಕೊಂಡರು ಹಾಗೂ ನಿಮ್ಮ ಉಪದೇಶಕ ಲಕ್ಷಣಾತ್ಮಕ ಪರಮ ಗತಿಯನ್ನು ಪ್ರಾಪ್ತಿಸಿಕೊಂಡರು." ಶ್ರೀಮದ್ಭಾಗವತದಲ್ಲಿ (೧೧/೨೦/೩೨-೩೩) ಹೀಗೆ ಹೇಳಿದೆ- "ಏನಾದರೂ ನಿಷ್ಕಾಮರಾಗಿಯೂ ಸಹ ಭಕ್ತರು ಸ್ವರ್ಗ, ಅಪವರ್ಗ ಹಾಗೂ ವೈಕುಂಠ ಇತ್ಯಾದಿಗಳನ್ನು ಇಚ್ಛಿಸಿದರೆ, ಆಗ ಯಜ್ಞಾದಿ-ಕರ್ಮ, ತಪಸ್ಸು, ಜ್ಞಾನ, ವೈರಾಗ್ಯ, ಯೋಗ, ದಾನ-ಧರ್ಮ ಅಥವಾ ಅನ್ಯ ತೀರ್ಥ ಹಾಗೂ ವ್ರತಾದಿಯ ಮೂಲಕ ಯಾವುದೆಲ್ಲ ಪ್ರಾಪ್ತವಾಗುತ್ತದೋ, ಅವೆಲ್ಲವನ್ನು ಮಾಡದಿದ್ದರೂ ಸಹ ಆ ಎಲ್ಲ ಫಲಗಳನ್ನು ನನ್ನ ಭಕ್ತರು ನನ್ನ ಭಕ್ತಿಯೋಗದ ಮೂಲಕ ಅನಾಯಾಸದಿಂದಲೇ ಪ್ರಾಪ್ತಿಸಿಕೊಳ್ಳುತ್ತಾರೆ."

ಅದೇ ಪ್ರಕಾರ ಮಹಾಭಾರತದ ಮೋಕ್ಷಧರ್ಮದ ವಚನದಲ್ಲಿಯೂ ಸಹ ನೋಡಬಹುದು– "ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷ– ಈ ನಾಲ್ಕು ಪ್ರಕಾರದ ಪುರುಷಾರ್ಥಗಳ ಯಾವ ಸಾಧನ ಸಂಪತ್ತಿದೆ, ಭಗವಾನ್ ಶ್ರೀನಾರಾಯಣನಲ್ಲಿ ಆಶ್ರಿತನಾದ ಮಾನುಷ್ಯನು ಯಾವುದೇ ಸಾಧನೆ ಇಲ್ಲದೇ ಈ ಎಲ್ಲ ಪುರುಷಾರ್ಥಗಳನ್ನು ಪ್ರಾಪ್ತಿಸಿಕೊಳ್ಳುತ್ತಾನೆ." ಕೇವಲ (ಕರ್ಮಜ್ಞಾನಾದಿಶೂನ್ಯ, ಅಕಾರಣೀಯ) ಭಕ್ತಿಯ ಮೂಲಕವೇ ಸಮಸ್ತ ಪ್ರಕಾರದ ಮಂಗಳವೂ ಪ್ರಾಪ್ತಿಯಾಗುತ್ತದೆ, ಆದರೆ ಆ ಭಕ್ತಿಯನ್ನು ಹೊರತುಪಡಿಸಿ ಯಾವುದೇ ಪ್ರಕಾರದ ಮಂಗಳವು ಪ್ರಾಪ್ತಿಸಿಕೊಳ್ಳಲಾಗುವುದಿಲ್ಲ. ಆದ್ದರಿಂದ ಅನ್ವಯ-ವ್ಯತಿರೇಕ ಭಾವದಿಂದ ಭಕ್ತಿಯೂ ಸಮಸ್ತ ಪ್ರಕಾರದ ಶ್ರೇಯಸ್ಸನ್ನು ಪ್ರಸಾದಿಸುವ ಸಾಧನೆಯ ರೂಪದಲ್ಲಿ ಸ್ಥಿರವಾಗಿದೆ. ಅನ್ವಯ-ಭಾವದಿಂದ, ಹೀಗೆ ಶ್ರೀಮದ್ಭಾಗವದಲ್ಲಿ (೨/೩/೧೦)– "ನಿಷ್ಕಾಮನಾಗಿ ಅಥವಾ ಸಮಸ್ತ ಕಾಮನೆಗಳಿಂದ ಯುಕ್ತ ಅಥವಾ ಮೋಕ್ಷದ ಕಾಮನೆಯಿಂದಲೂ ಸಹ ಉದಾರಬುದ್ಧಿಯಿಂದ ಯುಕ್ತ ವ್ಯಕ್ತಿ ತೀವ್ರ (ಏಕಾಂತಿಕ) ಭಕ್ತಿಯೋಗದಿಂದ ಪರಮಪುರುಷ ಶ್ರೀವಿಷ್ಣುವಿನ ಉಪಾಸನೆ ಮಾಡುವನು." ಇಲ್ಲಿ ಕೇವಲ-ಭಕ್ತಿಯೋಗದ ತೀವ್ರತೆಯನ್ನು ಮೇಘದಿಂದ ನಿರ್ಮುಕ್ತ ಸೂರ್ಯನ ಸಮಾನವಾಗಿಯೇ ಅರ್ಥಮಾಡಿಕೊಳ್ಳಬೇಕು ಅಥವಾ ಯಾವ ರೀತಿ ಹಿಂದೆ ವಿವರಿಸಲಾದ 'ಯತ್ ಕರ್ಮಭಿಃ' ಶ್ಲೋಕದಲ್ಲಿ (ಶ್ರೀಮದ್ಭಾ ೨೦/೧೧/೩೨) ಹೇಳಲಾಗಿದೆಯೋ, ಆ ರೀತಿ ಅರ್ಥಮಾಡಿಕೊಳ್ಳಬೇಕು.

ವ್ಯಕ್ತಿರೇಕ ಭಾವದಿಂದ ಶ್ರೀಮದ್ಭಾಗವತದಲ್ಲಿ (೧೧/೫/೨) ಹೇಗೆ– "ವಿರಾಟ್ ಪುರುಷನ ಮುಖ, ಭುಜ, ತೊಡೆ ಹಾಗೂ ಚರಣಕಮಲಗಳಿಂದ ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಗಳಗಳೊಂದಿಗೆ ಬ್ರಾಹ್ಮಣಾದಿ ನಾಲ್ಕು ವರ್ಣಗಳ ಗುಣಾನುಸಾರವಾಗಿ ಬೇರೆ-ಬೇರೆಯಾಗಿ ಉತ್ಪನ್ನವಾಗಿರುವುದು. ಇದರಲ್ಲಿ ಯಾವ ಜನರು ಮೋಹವಶವಾಗಿ ತಮ್ಮ (ಆತ್ಮದ) ಸಾಕ್ಷಾತ್ ಪ್ರಭು ಈಶ್ವರ ಶ್ರೀವಿಷ್ಣುವಿನ ಭಜನೆ ಮಾಡುವುದಿಲ್ಲ ಅಥವಾ ಅವನನ್ನು ಅಲಕ್ಷ್ಯ ಮಾಡುವರೋ, ಅಂತಹವರು ತಮ್ಮ ಸ್ಥಾನದಿಂದ ಭ್ರಷ್ಟರಾಗಿ ಅಧಮಗತಿಗೆ ಇಳಿಯುವರು." ಅಥವಾ ಶ್ರೀಮದ್ಭಾಗವತದಲ್ಲಿ (೨/೪/೧೭) ಹೇಳಲಾಗಿದೆ– "ತಪಸ್ವಿ, ದಾನಶೀಲ, ಮನಸ್ವಿ (ಮುನಿ), ಮಂತ್ರವಿತ್ (ಋಷಿ) ಹಾಗೂ ಸದಾಚಾರಿ ಪುರುಷರೂ ಸಹ ಯಾರು ತಮ್ಮ ತಪಸ್ಸು ಇತ್ಯಾದಿ ಕರ್ಮವನ್ನು ಅರ್ಪಿಸದಿದ್ದರೆ ಮಂಗಳವನ್ನು ಪ್ರಾಪ್ತಿಸಿಕೊಳ್ಳಲಾರರು, ನಾನು ಆ ಸುಮಂಗಳನಾದ ಶ್ರೀಹರಿಯನ್ನು ಮತ್ತೆ-ಮತ್ತೆ ನಮಸ್ಕರಿಸುವೆನು.'

ಈಗ ಭಕ್ತಿಯ ದೇಶ ಹಾಗೂ ಕಾಲ-ವಿಶೇಷದ ಅಭಾವದ (ಅರ್ಥಾತ್ ಭಕ್ತಿದೇವಿ ದೇಶ-ಕಾಲದಿಂದ ಅತೀತಳು) ಸಂಬಂಧದಲ್ಲಿ ಹೇಳುತ್ತಿದ್ದಾರೆ– 'ಸರ್ವತ್ರ' ಅರ್ಥಾತ್ ಸಮಸ್ತ ದೇಶ ಹಾಗೂ ಸಮಸ್ತ ಅಧಿಕಾರಿಗಳಲ್ಲಿ ಹಾಗೂ 'ಸರ್ವದಾ' ಅರ್ಥಾತ್ ಎಲ್ಲ ಸಮಯದಲ್ಲು ಯಾವುದು ಸ್ಥಿರವಾಗಿರುತ್ತದೋ– ಆ ಭಕ್ತಿಯನ್ನೇ ತಿಳಿದುಕೊಳ್ಳಬೇಕು. ಹೇಗೆ– ಯೋಗಿ ಪುರುಷರು ಪವಿತ್ರ ಸ್ಥಾನದಲ್ಲಿ ಸಮಯ ಕಳೆಯುತ್ತ ಪವಿತ್ರ

ಕರ್ಮವನ್ನು ಮಾಡುತ್ತಾರೆ ಹಾಗೂ ಅಂತಃಕರಣದ ಶುದ್ಧವಾದಮೇಲೆ ಅವರಿಗೆ ಜ್ಞಾನ ಪ್ರಾಪ್ತವಾಗಬಹುದು. "ಪವಿತ್ರ ಸ್ಥಾನದಲ್ಲಿ ಸುಖಪೂರ್ವಕ ತಮ್ಮ ಆಸನ ಸ್ಥಾಪಿಸಿಕೊಂಡು ಯೋಗಿಗಳು ಯೋಗಾನುಷ್ಠಾನ ಮಾಡುತ್ತಾರೆ." (ಶ್ರೀಮದ್ಭಾ ೩/೨೮/೮) ಮುಂತಾದ ವಚನೆಗಳಿಂದ ತಿಳಿಯಲಾಗುವುದೇನೆಂದರೆ ಕರ್ಮ–ಜ್ಞಾನಾದಿಗಳು ಸದಾಕಾಲ ನೆಲಸಿರುವುದಿಲ್ಲ. ಈ ಪ್ರಕಾರದ ಯಾವ ಕರ್ಮವಿದೆಯೋ, ಅದು ಸನ್ಯಾಸ ಹಾಗೂ ಭೋಗ ಪ್ರಾಪ್ತಿಯವರೆಗು ಮಾತ್ರವೇ ಯೋಗ್ಯವಾದದ್ದು, ಅನಂತರವಾದ ಪ್ರಾಪ್ತಿಗಳಿಗಲ್ಲ; ಯೋಗದ ಸಾಧನೆಯು ಕೇವಲ ಸಿದ್ಧಿಯವರೆಗು ಮಾತ್ರವೇ ಕೊಂಡುಹೋಗುವಂತಹದ್ದು ಹಾಗೂ ಸಾಂಖ್ಯದ ಸಾಧನೆಯು ಕೇವಲ ಆತ್ಮಜ್ಞಾನದವರೆಗೂ ಮಾತ್ರವೇ ಕೊಂಡುಹೋಗುವಂತಹದ್ದು, ಇದಕ್ಕೆ ನಂತರ ಇವುಗಳ ಯಾವುದೇ ಪ್ರಯೋಜನವಿರುವುದಿಲ್ಲ. ಜ್ಞಾನದ ಸಾಧನೆ ಮುಕ್ತಿಯವರೆಗು, ಆದ್ದರಿಂದ ಅದೂ ಸಹ ಸರ್ವತ್ರ ನೆಲಸಿರುವುದಿಲ್ಲ ಹಾಗೂ ಸನಾತನತೆಯು ಅತ್ಯಂತ ಪ್ರಸಿದ್ಧವಾದದ್ದು. ಹಾಗೆ– "ಶ್ರೀಹರಿನಾಮದಲ್ಲಿ ರುಚಿಯುಕ್ತ ಭಕ್ತರಿಗೆ ಯಾವುದೇ ದೇಶ ಹಾಗೂ ಕಾಲದ ಯಾವುದೇ ತೊಂದರೆ ಇರುವುದಿಲ್ಲ, ಅದೇ ರೀತಿ ಭಗವಂತನ ಉಚ್ಛಿಷ್ಟ (ಪ್ರಸಾದ) ಭಕ್ಷಣೆಯಲ್ಲೂ ಸಹ ಯಾವುದೇ ನಿಷೇಧವಿರುವುದಿಲ್ಲ."

ಶ್ರೀಭಾಗವತದಲ್ಲಿ (೨/೨/೩೬) ಹೀಗೆ ಹೇಳಲಾಗಿದೆ– "ಆದ್ದರಿಂದ ಹೇ ರಾಜನ್! ಮನುಷ್ಯನಿಗೆ ಸರ್ವಾಂತಃಕರಣದಿಂದ ಸರ್ವತ್ರ ಹಾಗೂ ಸರ್ವದಾ ಭಗವಾನ್ ಶ್ರೀಹರಿಯ ಮಹಿಮೆಯನ್ನು ಶ್ರವಣ, ಕೀರ್ತನೆ ಹಾಗೂ ಸ್ಮರಣೆ ಮಾಡುವುದೇ ಕರ್ತವ್ಯ." ಮುಂತಾದ ಶಾಸ್ತ್ರ–ವಾಕ್ಯಗಳಲ್ಲಿ ಕರ್ಮಿ, ಜ್ಞಾನಿ ಹಾಗೂ ಎಲ್ಲ ಅಧಿಕಾರಿಗಳ ಮೇಲೆ ಭಕ್ತಿಯ ಅಧಿಷ್ಠಾನವನ್ನು ಹೇಳಲಾಗಿದೆ, ಅರ್ಥಾತ್ ಈ ಎಲ್ಲದರಲ್ಲು ಭಕ್ತಿಯ ವ್ಯಾಪಕತೆಯನ್ನೇ ಹೇಳಲಾಗಿದೆ. ಶ್ರೀಭಾಗವತ (೨/೪/೧೮)– "ಕಿರಾತಕ, ಅನಾಗರಿಕ, ನೀಚ, ಪುಕ್ಕಶ ಇಂತಹ ಮುಂತಾದ ಪಾಪಿಜನರಲ್ಲೂ ಸಹ ಯಾರ ಆಶ್ರಯವನ್ನು ಪಡೆಯುವುದರಿಂದ ಪರಿಶುದ್ಧರಾಗಿಬುಡುವರೋ, ಆ ಭಗವಂತ ಶ್ರೀಹರಿಗೆ ನಮಸ್ಕರಿಸುವೆ." ಇತ್ಯಾದಿ ವಾಕ್ಯಗಳಲ್ಲಿ ಚಂಡಾಲ–ಕುಲದಲ್ಲಿ ಹುಟ್ಟಿರುವ ಹಾಗೂ ತಮ್ಮ ಕರ್ಮಗಳಿಂದ ಚಂಡಾಲತೆಯನ್ನು ಪ್ರಾಪ್ತಿಸಿಕೊಂಡ ವ್ಯಕ್ತಿಗಳಲ್ಲೂ ಸಹ ಭಕ್ತಿಯಲ್ಲಿ ಅಧಿಕಾರವನ್ನು ಕಾಣಬಹುದಾಗಿದೆ. ಎಲ್ಲ ಸ್ಥನಾಗಳಲ್ಲು ಭಕ್ತಿಯಲ್ಲಿ ಯೋಗ್ಯತೆ ಇರುತ್ತದೆ– ಹೇಗೆ ಗರ್ಭದಲ್ಲಿರುವ ಸಮಯದಲ್ಲಿ ಪ್ರಹ್ಲಾದ, ಬಾಲ್ಯಕಾಲದಲ್ಲಿ ಧ್ರುವ, ಯೌವನದಲ್ಲಿ ಅಂಬರೀಷ, ವೃಧಾಪ್ಯದಲ್ಲಿ ಯಯಾತಿ ಹಾಗೂ ಮೃತ್ಯುಕಾಲದಲ್ಲಿ ಅಜಮಿಳ ಮುಂತಾದವರು ಭಕ್ತಿಯಲ್ಲಿ ಅಧಿಕಾರವನ್ನು ಪಡೆದುಕೊಂಡಿರುವುದನ್ನು ಕಾಣಬಹುದಾಗಿದೆ. ನರಕಾದಿ ಯೋನಿಗಳನ್ನು ಪ್ರಾಪ್ತಿಸಿಕೊಂಡರೂ ಸಹ ಭಕ್ತಿಯನ್ನು ಪಡೆಯಲು ಅಧಿಕಾರವಿರುತ್ತದೆ, ಇಲ್ಲಿ ಹೀಗೆ ಹೇಳಿದೆ– "ಯಾವ ಶ್ರೀಭಗವಂತನ ನಾಮ ಉದಿತವಾದರೆ ನಾರಕೀತ ಅರ್ಥಾತ್ ನರಕದಲ್ಲಿ ಅವಸ್ಥಿತವಾದ ಜೀವಿಗೂ ಸಹ ಮುಕ್ತಿ ಪ್ರಾಪ್ತವಾಗುತ್ತದೆ." ನೃಸಿಂಹಪುರಾಣದಲ್ಲಿಯೂ ಸಹ ಹೀಗೆ ಹೇಳಿದೆ– "ಯಾವ–ಯಾವ ಭಾವಗಳಿಂದ ನರಕಾದಿ ಗಣರು ಹರಿನಾಮ–ಕೀರ್ತನ ಮಾಡುವರೋ,

ಆ-ಆ ಭಾವಗಳ ಅನುರೂಪ ಹರಿ-ಭಕ್ತಿಯನ್ನು ಶಿರದಲ್ಲಿಟ್ಟುಕೊಂಡು ಸ್ವರ್ಗದ ಕಡೆಗೆ ಗಮನಮಾಡುತ್ತಾರೆ."- ಆದ್ದರಿಂದ ಏಕಮಾತ್ರ ಭಕ್ತಿಯನ್ನೇ ಸಾಧನದ ರೂಪದಲ್ಲಿ ಧೃಢೀಕರಿಸಲಾಗಿದೆ.

ತದನಂತರ ಪ್ರಸ್ತುತ ಶ್ಲೋಕದಲ್ಲಿ ಪ್ರೇಮಭಕ್ತಿರೂಪ ರಹಸ್ಯವನ್ನೂ ಸಹ ವಿಸ್ತಾರವಾಗಿ ತಿಳಿಸಲಾಗಿದೆ. ತತ್ವಜಿಜ್ಞಾಸು ಪುರುಷರು ಸ್ವರ್ಗ, ಅಪವರ್ಗ ಹಾಗೂ ಭಗವತ್-ಪ್ರೇಮ ಈ ಶ್ರೇಣಿಯಲ್ಲಿ ಇದರದ್ದೇ (ಅಂದರೆ ಪ್ರೇಮದ) ಜಿಜ್ಞಾಸೆ ಮಾಡುವರು. ಅದು ಯಾವುದು? ಇದಕ್ಕೆ ಉತ್ತರದಲ್ಲಿ ಹೇಳುವರು;- ಅನ್ವಯ-ವ್ಯತಿರೇಕವಾಗಿ ಯಾವುದು ಸರ್ವತ್ರ ಹಾಗೂ ಸರ್ವದಾ ಆತ್ಮಕ್ಕೆ ಮಂಗಳಕಾರಿಯಾಗಿರುವುದು. ಇದರಲ್ಲಿ ಸ್ವರ್ಗ ಹಾಗೂ ಅಪವರ್ಗ ಸ್ವಯಂ ಎಂದಾದರೂ ಅನ್ವಯ ಹಾಗೂ ವ್ಯತಿರೇಕವಾಗಿ ಸ್ಥಿತವಾಗುವುದಿಲ್ಲ, ಆದರೆ ಭಗವತ್-ಪ್ರೇಮ ಸ್ವಯಂ ಅನ್ವಯ ಹಾಗೂ ವ್ಯತಿರೇಕ ಭಾವದಿಂದ ಸ್ಥಿತವಾಗುತ್ತದೆ. ಪ್ರೇಮವೂ ಸಹ ಭಕ್ತಿ-ಶಬ್ದವಾಚ್ಯವು, ಹಾಗೂ ಸಾಧನಭಕ್ತಿಯ ಮೂಲಕವೇ ಸಾಧ್ಯಭಕ್ತಿರೂಪ ಭಗವತ್ ಪ್ರೇಮದ ಸಿದ್ಧಿಯನ್ನು ಕಾಣಬಹುದಾಗಿದೆ, ಆದ್ದರಿಂದ ಪ್ರೇಮವು ತನ್ನ ಮೂಲಕವೇ ಸಿದ್ಧಿಸುತ್ತದೆ. ಯಾವ ರೀತಿ ಶ್ರೀಭಗವತದಲ್ಲಿ (೧೧/೩/೩೧) ಹೇಳಿದೆ- "ಭಾಗವತ ಪುರುಷಗಣರು ಸಾಧನಭಕ್ತಿಯಿಂದ ಉತ್ಪನ್ನವಾಗುವ ಪ್ರೇಮಲಕ್ಷಣ ಭಕ್ತಿಯ ಮೂಲಕ ಸಮಸ್ತ ಪಾಪಗಳನ್ನು ವಿನಾಶವಾಗಿಸುವ ಶ್ರೀಹರಿಯ ಸ್ಮರಣೆ ಮಾಡುತ್ತ ಹಾಗೂ ಪರಸ್ಪರ (ಒಬ್ಬರಿಗೊಬ್ಬರು) ಸ್ಮರಣೆ ಮಾಡಿಕೊಳ್ಳುತ್ತ ಪುಲಕಿತ ಶರೀರ ಧಾರಣೆ ಮಾಡುತ್ತಿರುತ್ತಾರೆ." ಇತ್ಯಾದಿ ವಾಕ್ಯಗಳಲ್ಲಿ 'ರಹಸ್ಯ' ಹಾಗೂ 'ತದಂಗ'- ಈ ಎರಡು ಶಬ್ದಗಳಿಂದ ಈ ಪ್ರೇಮಭಕ್ತಿ ಹಾಗೂ ಸಾಧನಭಕ್ತಿಯನ್ನೇ ವಿಸ್ತಾರವಾಗಿ ತಿಳಿಸಿದ್ದಾರೆ. ಆದ್ದರಿಂದ ಭಗವತ್-ಪ್ರೇಮದ ಸಾಧನರೂಪದಲ್ಲಿ ಭಕ್ತಿ ಮಾಡುವುದೇ ಕರ್ತವ್ಯ, ಸ್ವರ್ಗ-ಅಪವರ್ಗ ಇತ್ಯಾದಿ ಪ್ರಾಪ್ತಿಯ ಸಾಧನವಾಗಿ ಅಲ್ಲ- ಇದೇ ರೂಪದಲ್ಲೇ ಶ್ರೀಭಗವಂತನ ಜ್ಞಾನವು ಸೂಚಿಸಲಾಗುತ್ತಿದೆ. "ನಾನು ಆಲಾಸ್ಯವನ್ನು ತ್ಯಾಗಮಾಡಿ ಭಗವತ್-ಉಪದಿಷ್ಟ ವಿಷಯದ ಪಾಲನೆ ಮಾಡುವೆ." (ಶ್ರೀಮದ್ಭಾ ೨/೯/೨೮)-ಹಿಂದೆ ಶ್ರೀಬ್ರಹ್ಮನ ಈ ಪ್ರಾರ್ಥನೆಯ ಕಾರಣ ಶುದ್ಧ ಸಾಧನಭಕ್ತಿಯಿಂದ ಪ್ರಾಪ್ತವಾಗುವ ಪ್ರೇಮಭಕ್ತಿಯ ಮೂಲಕ ಶ್ರೀಭಗವಂತನ ರೂಪ-ಗುಣ ಇತ್ಯಾದಿ ಮಾಧುರ್ಯರಸದ ಯಾವ ಅನುಭವವಾಗುತ್ತದೆ, ಅದು ಪ್ರೇಮಭಕ್ತಿಯ ಅನುಭವವೇ ಆಗಿದೆ. ಇದರ ಮೂಲಕ ಸ್ವಾಭಾವಿಕ ರೂಪದಲ್ಲಿ (ತಮ್ಮ ತಮ್ಮಲ್ಲೇ) ಈ ವಿಜ್ಞಾನವನ್ನು ಪ್ರಾಪ್ತವಾಗಿಸುವ ಶ್ರೀಬ್ರಹ್ಮನಲ್ಲಿ ರಹಸ್ಯ (ಪ್ರೇಮ ಭಕ್ತಿ) ಹಾಗೂ ತದಂಗದ (ಸಾಧನ ಭಕ್ತಿಯ) ವಿಜ್ಞಾನದ ಮಾತನ್ನು ಪ್ರಸ್ತುತ ಶ್ಲೋಕದಲ್ಲಿ ಹೇಳಲಾಗಿದೆ.

ಮತ್ತೆ, ಏಕೆಂದರೆ "ರಸೋ ವೈ ಸಃ ಅರ್ಥಾತ್ ಅವನು ರಸಸ್ವರೂಪನೇ ಆಗಿದ್ದಾನೆ" (ತೈ.ಉ. ೨/೭/೧), ಈ ಮಂತ್ರದ ನಂತರ "ಅವನೇ ಆನಂದದ ಮೂಲ" (ತೈ. ಉ. ೨/೮/೧) ಇತ್ಯಾದಿ ಶ್ರುತಿ ವಚನಗಳ ಮೂಲಕ ಅವನ ಸಮಸ್ತ ಮಂಗಳವು ಚರಮ-

ರೂಪ, ಅವನು ರಹಸ್ಯಮಯಿಯನು ಹಾಗೂ ಅವನು ಮೂರ್ತಿಮಾನನಾಗಿದ್ದಾನೆ- ಹೀಗೆ ತಿಳಿಸಿಲಾಗಿದೆ. ಶ್ರೀಮದ್ಭಾಗವತದಲ್ಲಿ (೧೦/೪೩/೧೭) ಕಂಸನ ರಂಗಭೂಮಿಯಲ್ಲಿ ಸಮಾಗತವಾಗಿ ಶ್ರೀಕೃಷ್ಣನ ಪ್ರತಿ ಏಕಕಾಲದಲ್ಲಿ ವಿಭಿನ್ನ ಅಧಿಕಾರಗಳ ಮೂಲಕ ಹನ್ನೆರಡು ರಸಗಳಷ್ಟು ಮಾತ್ರ ಅಭಿವ್ಯಕ್ತಿಗಳನ್ನು ಕಾಣಲಾಗುತ್ತದೆ, ಹಾಗೆ- "ಹೇ ರಾಜ! ಆ ಸಮಯದಲ್ಲಿ ಶ್ರೀಕೃಷ್ಣನು ಮಲ್ಲರಿಗೆ ವಜ್ರದಂತೆ, ಮನುಷ್ಯರಿಗೆ ನರೋತ್ತಮನ ರೂಪದಲ್ಲಿ, ಮಧುರ-ರಸ ಪ್ರಿಯ ಸ್ತ್ರೀಯರಿಗೆ ಮೂರ್ತಿಮಾನ ಕಂದರ್ಪನ ರೂಪದಲ್ಲಿ, ಗೋಪರಿಗೆ ಬಾಂಧವನಾಗಿ, ದುಷ್ಟ ರಾಜರುಗಳಿಗೆ ಶಾಸನಕರ್ತನ ಹಾಗೆ, ಮಾತಾ-ಪಿತರುಗಳಿಗೆ ಶಿಶು, ಕಂಸನಿಗೆ ಸಾಕ್ಷಾತ್ ಮೃತ್ಯುವಿನ ರೂಪದಲ್ಲಿ, ಜ್ಞಾನಿಗಳಿಗೆ ವಿರಾಟ್ ಪುರುಷ, ಯೋಗಿಗಳಿಗೆ ಪರಮಾತ್ಮ ಹಾಗೂ ವೃಷ್ಣಿಯರಿಗೆ ಪರಮ-ದೇವತೆಯ ರೂಪದಲ್ಲಿ ಪ್ರತೀತನಾಗಿ ಬಲರಾಮನೊಂದಿಗೆ ರಂಗಭೂಮಿಯಲ್ಲಿ ಪ್ರವೇಶಿಸಿದನು." ಇತ್ಯಾದಿ ಯಾವ ವಿಭಿನ್ನ ಆಕಾರಗಳಲ್ಲಿ (ಪ್ರಕಾಶಗಳಲ್ಲಿ) ದರ್ಶಿತನಾದನೋ, ಅವನೇ ರಸಮಯ ವಸ್ತುವಿನ ವಿಜ್ಞಾನನೆಂದು ಪ್ರಸ್ತುತ ಶ್ಲೋಕದಲ್ಲಿ ಪ್ರಧಾನವಾಗಿ ಹೇಳಲಾಗಿದೆ. ಸಂಪೂರ್ಣ ಜಿಜ್ಞಾಸುಗಳಲ್ಲಿ ಇದನ್ನೇ ಅರ್ಥಮಾಡಿಕೊಳ್ಳುವ ಅಂದರೆ ನಿರಂತರ ವಾಂಛನೀಯ ವಿಷಯವಾಗಿದೆ. ಅದೇನು? ಇದಕ್ಕೆ ಉತ್ತರದಲ್ಲಿ ಹೇಳುತ್ತಾರೆ- ಅನ್ವಯ-ವ್ಯತಿರೇಕ ರೂಪದಲ್ಲಿ ಅರ್ಥಾತ್ ಯೋಗ ಹಾಗೂ ಅಯೋಗ ಕ್ರಮದಿಂದ ಅಥವಾ ಸಂಯೋಗ ಹಾಗೂ ಅಗಲಿಕೆಯ ಭಾವದಿಂದ ಯಾರು 'ಸರ್ವತ್ರ' ಇರುವರೋ, ಅರ್ಥಾತ್ ಸಮಸ್ತ ಬ್ರಹ್ಮಾಂಡಗಳಲ್ಲಿ ಒಳಗೊಂಡ ಶ್ರೀವೃಂದಾವನ ಮುಂತಾದುವುಗಳಲ್ಲಿ ದಾಸ, ಸಖ, ಗುರು ಹಾಗೂ ಪ್ರೇಯಸಿಗಳಲ್ಲಿ ಯಾರು 'ಸರ್ವದಾ' ಅರ್ಥಾತ್ ನಿತ್ಯವೂ ಹಾಗೂ ಇಲ್ಲಿಯವರೆಗೂ ಮಹಾಪ್ರಳಯಕಾಲದಲ್ಲಿಯೂ ಸಹ ನೆಲಸಿರುತ್ತಾನೆ. ಇದರ ಮೂಲಕ ದಾಸ್ಯ, ಸಖ್ಯ, ವಾತ್ಸಲ್ಯ ಹಾಗೂ ಶೃಂಗಾರ ರಸದ ಆಸ್ವಾದನೆಯನ್ನು ಸೂಚಿಸಲಾಗಿದೆ.

ಈ ಪ್ರಕಾರವಾಗಿ ಈ ಶ್ಲೋಕವು ಅತ್ಯಂತ ರಹಸ್ಯಾತ್ಮಕ ಪ್ರೇಮಭಕ್ತಿರಸದ ಸೂಚಕವಾಗಿದೆ. ಸ್ವಯಂ ಶ್ರೀಭಗವಂತನೇ ಬಂಗಾರದ ಪೆಟ್ಟಿಗೆಯೊಳಗಿಟ್ಟಿರುವ ಚಿಂತಾಮಣಿಯಂತೆ ಈ ಶ್ಲೋಕವನ್ನು ಭಕ್ತಿಗೆ ಅತಿರಿಕ್ತವಾದ ಜ್ಞಾನಮೂಲದ ಅನ್ಯ ಅರ್ಥದ ಮೂಲಕ ಮುಚ್ಚಿಡಲಾಗಿದೆ, ಇದರಿಂದ ಬಹಿರಂಗ ಮೂರ್ಖ ವ್ಯಕ್ತಿಗಳು ಇದನ್ನು ತೆರೆಯಲು ಅಸಮರ್ಥರಾಗಿರುವರು. ಆದ್ದರಿಂದ ಕಠೋಪನಿಷದ್ (೧/೨/೨೩)ನಲ್ಲಿ ಹೀಗೆ ಹೇಳಲಾಗಿದೆ- "ಅನೇಕ ಶಾಸ್ತ್ರಗಳಲ್ಲಿ ಪ್ರವೀಣನಾಗುವುದರಿಂದ, ಮೇಧಾ ಅಥವಾ ಹೆಚ್ಚು ಶಾಸ್ತ್ರಗಳ ಶ್ರವಣದ ಮೂಲಕ ಪರಮಾತ್ಮನನ್ನು ಪ್ರಾಪ್ತಿಸಿಕೊಳ್ಳಲಾಗುವುದಿಲ್ಲ. ಅವನು (ಪರಮಾತ್ಮನು) ಯಾರ ಮೇಲೆ ಕೃಪೆತೋರಿಸುವನೋ, ಆ ಸೌಭಾಗ್ಯವಂತನಾದ ಜೀವಿಗೆ ಮಾತ್ರವೇ ಅವನನ್ನು ಪ್ರಾಪ್ತಿಸಿಕೊಳ್ಳಲು ಸಾಧ್ಯವಾಗುತ್ತದೆ ಹಾಗೂ ಅವನ ಹತ್ತಿರ ಮಾತ್ರವೇ ಅವನು (ಭಗವಂತನು) ತನ್ನ ಅಪ್ರಾಕೃತ ಸ್ವರೂಪವನ್ನು ಪ್ರಟಿತಗೊಳಿಸುತ್ತಾನೆ."

ಈ ಶ್ಲೋಕದ ಜ್ಞಾನಮೂಲವು ಅನ್ಯ ವ್ಯಾಖ್ಯಾಯಿನುವು ಈ ಪ್ರಕಾರವಾಗಿದೆ– "ಆತ್ಮತತ್ವದ ಜಿಜ್ಞಾಸು ವ್ಯಕ್ತಿ ಇದನ್ನೇ ಜಿಜ್ಞಾಸು ನಡೆಸುವನು." ಅದು ಯಾವುದು? ಅನ್ವಯಿ–ವ್ಯಕ್ತಿರೇಕ ಸ್ವರೂಪದಿಂದ ಸರ್ವತ್ರ ಹಾಗೂ ಸರ್ವದಾ ವಿಧ್ಯಮಾನವಿರುತ್ತದೋ, ಅದೇ ಆತ್ಮ. ಹಾಗೂ ಆತ್ಮದ ಕಾರಣ ರೂಪದಲ್ಲಿ ಜಗತ್ತಿನಿಂದ ಅನ್ವಯವಾಗಿದೆ ಹಾಗೂ ಕಾರ್ಯರೂಪಿಯು ಜಗತ್ತಿನಿಂದ ಕಾರಣರೂಪಿ ಆತ್ಮನಲ್ಲಿ ವ್ಯತಿರೇಕವಾಗಿದೆ. ಹಾಗೂ ಎಚ್ಚರಿಕೆ ಇತ್ಯಾದಿ ಸ್ಥಿತಿಗಳ ಸಾಕ್ಷಿಯಾಗಿ ಆತ್ಮದ ಅನ್ವಯವಿದೆ, ಆದರೆ ಆತ್ಮನಲ್ಲಿ ಜಾಗ್ರತೆ ಇತ್ಯಾದಿ ಸ್ಥಿತಿಗಳು ವ್ಯತಿರೇಕವಾಗಿರುತ್ತದೆ. ॥೩೫॥

ಶ್ರೀಕೃಷ್ಣದಾಸ ಕವಿರಾಜ ಗೋಸ್ವಾಮಿಪಾದರು

'ಅಭಿಧೇಯ' ಸಾಧನಭಕ್ತಿರ ಶುನಹ ವಿಚಾರ ।
ಸರ್ವ–ಜನ–ದೇಶ–ಕಾಲ–ದಶಾತೇ ವ್ಯಾಪ್ತಿ ಯಾರ ॥

'ಧರ್ಮಾದಿ' ವಿಷಯೇ ಯೈಛೆ ಏ 'ಚಾರಿ' ವಿಚಾರ ।
ಸಾಧನ–ಭಕ್ತಿ–ಎಇ ಚಾರಿ ವಿಚಾರೇರ ಪಾರ ॥

ಸರ್ವ–ದೇಶ–ಕಾಲ–ದಶಾಯ ಜನೇರ ಕರ್ತವ್ಯ ।
ಗುರು–ಪಾಶೋ ಸೇಯಿ ಭಕ್ತಿ ಪ್ರಷ್ಟವ್ಯ, ಶ್ರೋತವ್ಯ ॥
(ಚೈ. ಚ. ಮ .೨೫/೧೧೮–೧೨೦)

ಭಾವಾನುವಾದ– ಈಗ ನೀನು ನನ್ನಿಂದ 'ಅಭಿಧೇಯ' ಅರ್ಥಾತ್ ಸಾಧನಭಕ್ತಿಯ ವಿಚಾರವನ್ನು ಕೇಳು, ಇದರ ವ್ಯಾಪ್ತಿಯು ಸಮಸ್ತ ವ್ಯಕ್ತಿಗಳಲ್ಲಿ, ದೇಶ, ಕಾಲ ಹಾಗೂ ದಿಶೆಗಳಲ್ಲಿದೆ.

ಧರ್ಮ ಇತ್ಯಾದಿ ವಿಷಯಗಳಲ್ಲಿ ವ್ಯಕ್ತಿ, ದೇಶ, ಕಾಲ ಹಾಗೂ ಸ್ಥಿತಿಗಳಲ್ಲಿ– ಈ ನಾಲ್ಕರ ವಿಚಾರ ಮಾಡಲಾಗುತ್ತದೆ, ಆದರೆ ಸಾಧನಭಕ್ತಿ ಈ ನಾಲ್ಕು ವಿಚಾರಗಳಿಗಿಂತಲೂ ಅತೀತವಾದದ್ದು.

ಆದ್ದರಿಂದ ಸಮಸ್ತ ದೇಶ, ಕಾಲ ಹಾಗೂ ದಿಶೆಗಳಲ್ಲಿ ವ್ಯಕ್ತಿಯ ಕರ್ತವ್ಯವೇನೆಂದರೆ ಸದ್ಗುರುವಿನ ಹತ್ತಿರ ಆ ಭಕ್ತಿಯ ಸಂಬಂಧದಲ್ಲಿ ಪ್ರಶ್ನಿಸುವುದು ಹಾಗೂ ಈ ವಿಷಯದಲ್ಲಿ ಅವರಿಂದ ಶ್ರವಣಮಾಡುವುದು.॥೩೫॥

ಶ್ರೀಜೀವ ಗೋಸ್ವಾಮೀಪಾದರು

ಅಥ ಕ್ರಮಪ್ರಾಪ್ತಂ ರಹಸ್ಯಪರ್ಯಂತಸಾಧಕತ್ವಾತ್ ರಹಸ್ಯತ್ವೇನೈವ ತದಂಗಮುಪದಿಶತಿ– ಎತಾವದೇವೇತಿ । ಆತ್ಮನೋ ಮಮ ಭಗವತಸ್ತತ್ವಜಿಜ್ಞಾಸುನಾ ಪ್ರೇಮರೂಪಂ ಯಾಥಾರ್ಥ್ಯ ರಹಸ್ಯಮನುಭವಿತುಮಿಚ್ಛುನಾ ಎತಾವದೇವ ಜಿಜ್ಞಾಸ್ಯಂ–ಶ್ರೀಗುರುಚರಣೇಭ್ಯಃ ಶಿಕ್ಷಣೀಯಮ್ । ಕಿಂ ತತ್? ಯದೇಕಮೇವ ವಸ್ತು ಅನ್ವಯ–ವ್ಯತಿರೇಕಾಭ್ಯಾಂ ವಿಧಿ–ನಿಷೇಧಾಭ್ಯಾಂ ಸದಾ ಸರ್ವತ್ರ ಸ್ಯಾದಿತ್ಯುಪಪದ್ಯತೆ । ತತ್ರಾನ್ವಯೇನ ಯಥಾ (ಶ್ರೀಮದ್ಭಾ ೭/೭/೫೫)–

'ಏತಾವಾನೇವ ಲೋಕೇಽಸ್ಮಿನ್' ಇತ್ಯಾದಿ; (ಶ್ರೀಗೀ ೧೮/೬೧) *'ಈಶ್ವರಃ ಸರ್ವಭೂತಾನಾಮ್'* ಇತ್ಯಾದಿ; (ಶ್ರೀಗೀ ೧೮/೩೫) *'ಮನ್ಮನಾ ಭವ ಮದ್ಭಕ್ತಃ'* ಇತ್ಯಾದಿ ಚ । ವ್ಯತಿರೇಕೇಣ ಯಥಾ (ಶ್ರೀಮದ್ಭಾ ೧೧/೫/೨)– *'ಮುಖಬಾಹೂರೂಪಾದೇಭ್ಯಃ'* ಇತ್ಯಾದಿ; (ಶ್ರೀಮದ್ಭಾ ೩/೯/೧೦) *'ಋಷಯೋಽಪಿ ದೇವ ಯುಷ್ಮತ್ ಪ್ರಸಂಗವಿಮುಖಾ ಇಹ ಸಂಸರನ್ತಿ'* ಇತ್ಯಾದಿ; (ಶ್ರೀಗೀ ೭/೧೫) *'ನ ಮಾಂ ದುಷ್ಕೃತಿನೋ ಮೂಢಾ'* ಇತ್ಯಾದಿ; (ಪಾದ್ಮೆ) *'ಯಾವಜ್ಜನೋ ಭವತಿ ನೋ ಭುವಿ ವಿಷ್ಣುಭಕ್ತಿ'* ಇತ್ಯಾದಿ ಚ । ಕುತ್ರ ಕುತ್ರೋಪಪದ್ಯತೇ? ಸರ್ವತ್ರ–ಶಾಸ್ತ್ರ–ಕರ್ತೃ–ದೇಶ–ಕರಣ–ದ್ರವ್ಯ–ಕ್ರಿಯಾ–ಕಾರ್ಯ–ಫಲೇಷು ಸಮಸ್ತೇಷ್ವೇವ । ತತ್ರ ಸಮಸ್ತಶಾಸ್ತ್ರೇಷು ಯಥಾ ಸ್ಕಾಂದೆ ಬ್ರಹ್ಮನಾರದ–ಸಂವಾದೆ– *'ಸಂಸಾರೇಽಸ್ಮಿನ್ ಮಹಾಘೋರೆ ಜನ್ಮಮೃತ್ಯು ಸಮಾಕುಲೆ । ಪೂಜನಂ ವಾಸುದೇವಸ್ಯ ತಾರಕಂ ವಾದಿಭಿಃ ಸ್ಮೃತಮ್ ॥'* ಇತಿ । ತತ್ರಾಪ್ಯನ್ವಯೇನ ಯಥಾ (ಶ್ರೀಮದ್ಭಾ ೨/೨/೩೪)– *'ಭಗವಾನ್ ಬ್ರಹ್ಮ ಕಾರ್ತ್ಸ್ನ್ಯೇನ ತ್ರಿರನ್ವೀಕ್ಷ್ಯ ಮನೀಷಯಾ । ತದಧ್ಯವಸ್ಯತ್ ಕೂಟಸ್ಥೋ ರತಿರಾತ್ಮನ್ ಯತೋ ಭವೇತ್ ॥'* ಇತ್ಯಾದಿ; ತಥಾ ಪಾದ್ಮೆ ಸ್ಕಂದೆ ಲೈಂಗೇ ಚ– *'ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ । ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ ॥'* ಇತಿ । ವ್ಯತಿರೇಕೋದಾಹರಣಮ್ (ಗಾರುಡೆ)– *'ಪಾರಂ ಗತೋಽಪಿ ವೇದಾನಾಂ ಸರ್ವಶಾಸ್ತ್ರಾರ್ಥವೇದ್ಯಪಿ । ಯೋ ನ ಸರ್ವೇಶ್ವರೆ ಭಕ್ತಸ್ತಂ ವಿದ್ಯಾತ್ ಪುರುಷಾಧಮಮ್ ॥'* ಇತ್ಯಾದಿಕಂ ಸರ್ವತ್ರಾವಗಂತವ್ಯಮ್ । ತಚ್ಚಾನ್ತೇ ದರ್ಶಯಿಷ್ಯತೆ; ಏಕಾದಶೇ ಚ (ಶ್ರೀಮದ್ಭಾ೧೧/೧೧/೧೮)– *'ಶಬ್ದಬ್ರಹ್ಮಣಿ ನಿಷ್ಣಾತೋ ನ ನಿಷ್ಣಯಾತ್ ಪರೆ ಯದಿ । ಶ್ರಮಸ್ತಸ್ಯ ಶ್ರಮಫಲೋ ಹ್ಯಧೇನುಮಿವ ರಕ್ಷತಃ॥'* ಇತಿ । ಸರ್ವಕರ್ತೃಷು ಯಥಾ (ಶ್ರೀಮದ್ಭಾ ೨/೭/೪೬)– *'ತೇ ವೈ ವಿದನ್ತ್ಯತಿತರನ್ತಿ ಚ ದೇವಮಾಯಾಂ ಸ್ತ್ರೀಶೂದ್ರಹೂಣಶಬರಾ ಅಪಿ ಪಾಪಜೀವಾಃ । ಯದ್ಯದ್ಭುತಕ್ರಮಪರಾಯಣಶೀಲ– ಶಿಕ್ಷಾಸ್ತಿರ್ಯಗ್ಜನಾ ಅಪಿ ಕಿಮು ಶ್ರುತಧಾರಣಾ ಯೇ ॥'* ಇತಿ; ಗಾರುಡೇ ಚ– *'ಕೀಟ–ಪಕ್ಷಿ–ಮೃಗಾಣಾಂಚ ಹರೌ ಸನ್ನ್ಯಸ್ತಚೇತಸಾಮ್ । ಊರ್ಧ್ವಮೇವ ಗತಿಂ ಮನ್ಯೇ ಕಿಂ ಪುನರ್ಜ್ಞಾನಿನಾಂ ನೃಣಾಮ್ ॥'* ಇತಿ । ತತ್ರೈವ ಸದಾಚಾರೆ ದುರಾಚಾರೆ; ಜ್ಞಾನಿನ್ಯಜ್ಞಾನಿನಿ; ವಿರಕ್ತೇ ರಾಗಿಣಿ; ಮುಮುಕ್ಷೌ ಮುಕ್ತೆ; ಭಕ್ತ್ಯಸಿದ್ಧೆ ಭಕ್ತಿಸಿದ್ಧೆ; ತಸ್ಮಿನ್ ಭಗವತ್ಪಾರ್ಷದತಾಂ ಪ್ರಾಪ್ತೆ, ತಸ್ಮಿನ್ನಿತ್ಯಪಾರ್ಷದೇ ಚ ಸಾಮಾನ್ಯೇನ ದರ್ಶನಾದಪಿ ಸಾರ್ವತ್ರಿಕತಾ । ತತ್ರ ಸದಾಚಾರೆ ದುರಾಚಾರೆ ಚ ಯಥಾ (ಶ್ರೀಗೀ ೯/೩೦)– *'ಅಪಿ ಚೇತ್ ಸುದುರಾಚಾರೋ ಭಜತೇ ಮಾಮನನ್ಯಭಾಕ್ । ಸಾಧುರೇವ ಸ ಮನ್ತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥'* ಇತಿ। ಸದಾಚಾರಸ್ತು ಕಿಂ ವಕ್ತವ್ಯ ಇತ್ಯಪೆರರ್ಥಃ । ಜ್ಞಾನಿನ್ಯಜ್ಞಾನಿನಿ ಚ (ಶ್ರೀಮದ್ಭಾ ೧೧/೧೧/೩೩) *'ಜ್ಞಾತ್ವಾಜ್ಞಾತ್ವಾಥ ಯೇ ವೈ ಮಾಮ್'* ಇತ್ಯಾದಿ; (ಬೃಹನ್ನಾರದೀಯೆ) *'ಹರಿರ್ಹರತಿ ಪಾಪಾನಿ ದುಷ್ಟಚಿತ್ತೈರಪಿ ಸ್ಮೃತಃ'* ಇತಿ । ವಿರಕ್ತೆ ರಾಗಿಣಿ ಚ (ಶ್ರೀಮದ್ಭಾ ೧೧/೧೪/೧೮)– *'ಬಾಧ್ಯಮಾನೋಽಪಿ ಮದ್ಭಕ್ತೋ ವಿಷಯೈರಜಿತೇಂದ್ರಿಯಃ । ಪ್ರಾಯಃ ಪ್ರಗಲ್ಭಯಾ ಭಕ್ತ್ಯಾ ವಿಷಯೈರ್ನಾಭಿಭೂಯತೇ ॥'* ಇತಿ । ಅಬಾಧ್ಯಮಾನಸ್ತು ಸುತರಾಂ ನಾಭಿಭೂಯತ ಇತ್ಯಪೇರರ್ಥಃ । ಮುಮುಕ್ಷೌ ಮುಕ್ತೇ ಚ (ಶ್ರೀಮದ್ಭಾ ೧/೨/೨೬) *'ಮುಮುಕ್ಷವೋ ಘೋರರೂಪಾನ್'* ಇತ್ಯಾದಿ; (ಶ್ರೀಮದ್ಭಾ –೧/೭/೧೦) *'ಆತ್ಮಾರಾಮಾಶ್ಚ ಮುನಯಃ'* ಇತ್ಯಾದಿ ಚ । ಭಕ್ತ್ಯಸಿದ್ಧೇ ಭಕ್ತಿಸಿದ್ಧೇ ಚ (ಶ್ರೀಮದ್ಭಾ ೬/೧/೧೫) *'ಕೇಚಿತ್*

ಕೇವಲಯಾ ಭಕ್ತ್ಯಾ ವಾಸುದೇವಪರಾಯಣಾಃ' ಇತ್ಯಾದಿ; (ಶ್ರೀಮದ್ಭಾ ೧೧/೨/೫೩) *'ನ ಚಲತಿ ಭಗವತ್ಪದಾರವಿಂದಾಲ್ಲವ–ನಿಮಿಷಾರ್ಧಮಪಿ ಸ ವೈಷ್ಣವಾಗ್ರ್ಯಃ'* ಇತಿ ಚ । ಭಗವತ್ಪಾರ್ಷದತಾಂ ಪ್ರಾಪ್ತೇ (ಶ್ರೀಮದ್ಭಾ–/೪/೬೭) *'ಮತ್ಸೇವಯಾ ಪ್ರತೀತಂ ತೇ'* ಇತ್ಯಾದಿ। ನಿತ್ಯಪಾರ್ಷದೇ (ಶ್ರೀಮದ್ಭಾ ೩/೧೫/೨೨) *'ವಾಪೀಷು ವಿದ್ರುಮ–ತಟಾಸ್ವಮಲಾಮೃತಾಪ್ಸು'* ಇತ್ಯಾದಿ । ಸರ್ವೇಷು ವರ್ಷೇಷು, ಭುವನೇಷು, ಬ್ರಹ್ಮಾಂಡೇಷು ತೇಷಾಂ ಬಹಿಶ್ಚ ತೈಸ್ತೈಃ ಶ್ರೀಭಗವದುಪಾಸನಾಯಾಃ ಕ್ರಿಯಮಾಣಾಯಾಃ ಶ್ರೀಭಾಗವತಾದಿಷು ಪ್ರಸಿದ್ಧಿಃ ಸಿದ್ಧೈವೇತಿ ಸರ್ವದೇಶೋದಾಹರಣಂ ಜ್ಞೇಯಮ್ । ಸರ್ವೇಷು ಕರಣೇಷು ಯಥಾ– *'ಮಾನಸೇನೋಪಚಾರೇಣ ಪರಿಚರ್ಯ ಹರಿಂ ಮುದಾ । ಪರೇ ವಾಙ್ಮನಸಾಽಗಮ್ಯಂ ತಂ ಸಾಕ್ಷಾತ್ ಪ್ರತಿಪೇದಿರೇ ॥'* ಇತಿ । ಏವಂಭೂತವಚನೇ ಹಿ ಅಸ್ತು ತಾವದ್ಬಹಿರಿಂದ್ರಿಯೇಣ, ಮನಸಾ ವಚಸಾಪಿ ತತ್ಸಿದ್ಧಿರಿತಿ ಪ್ರಸಿದ್ಧಿಃ । ಸರ್ವದ್ರವ್ಯೇಷು ಯಥಾ (ಶ್ರೀಮದ್ಭಾ೧೦/೧೮/೪)– *'ಪತ್ರಂ ಪುಷ್ಪಂ ಫಲಂ ತೋಯಂ ಮೇ ಭಕ್ತ್ಯಾ ಪ್ರಯಚ್ಛತಿ'* ಇತ್ಯಾದಿ । ಸರ್ವಕ್ರಿಯಾಸು ಯಥಾ (ಶ್ರೀಮದ್ಭಾ ೧೧/೨/೧೨)– *'ಶ್ರುತೋಽನುಪಠಿತೋ ಧ್ಯಾತ್ ಆದೃತೋ ವಾನುಮೋದಿತಃ । ಸದ್ಯಃ ಪುನಾತಿ ಸದ್ಧರ್ಮೋ ದೇವವಿಶ್ವದ್ರುಹೋಽಪಿ ಹಿ ॥'* ಇತಿ; (ಶ್ರೀಗೀ ೯/೨೭) *'ಯತ್ ಕರೋಷಿ ಯದಶ್ನಾಸಿ'* ಇತ್ಯಾದಿ । ಏವಂ ಭಕ್ತ್ಯಾಭಾಸೇಷು ಭಕ್ತ್ಯಾಭಾಸಾಪರಾಧೇಷ್ವಪಿ ಅಜಾಮಿಲಮೂಷಿಕಾದಯೋ ದೃಷ್ಟಾಂತಾಃ ಗಮ್ಯಾಃ । ಸರ್ವೇಷು ಕಾರ್ಯೇಷು ಯಥಾ (ಸ್ಕಾಂದೇ)– *'ಯಸ್ಯ ಸ್ಮೃತ್ಯಾ ಚ ನಾಮೋಕ್ತ್ಯಾ ತಪೋಯಜ್ಞಕ್ರಿಯಾದಿಷು । ನ್ಯೂನಂ ಸಂಪೂರ್ಣತಾಮೇತಿ ಸದ್ಯೋ ವಂದೇ ತಮಚ್ಯುತಮ್॥'* ಇತಿ। ಸರ್ವಫಲೇಷು ಯಥಾ (ಶ್ರೀಮದ್ಭಾ ೨/೩/೧೦)– *'ಅಕಾಮಃ ಸರ್ವಕಾಮೋ ವಾ'* ಇತ್ಯಾದಿ; ತಥ (ಶ್ರೀಮದ್ಭಾ ೪/೩೧/೧೪) *'ಯಥಾ ತರೋರ್ಮೂಲನಿಷೇಚನೇನ'* ಇತ್ಯಾದಿವಾಕ್ಯೇನ ಶ್ರೀಹರಿಪರಿಚರ್ಯಾಯಾಂ ಕ್ರಿಯಮಾಣಾಯಾಂ ಸರ್ವೇಷಾಮನ್ಯೇಷಾಮಪಿ ದೇವಾದಿನಾಮುಪಾಸನಾ ಸ್ವತ ಏವ ಭವತೀತ್ಯತೋಽಪಿ ಸಾರ್ವತ್ರಿಕತಾ । ಯಥೋಕ್ತಂ ಸ್ಕಾಂದೆ ಶ್ರೀಬ್ರಹ್ಮನಾರದಸಂವಾದೇ– *'ಅರ್ಚಿತೇ ದೇವದೇವೇಶೆ ಶಂಖಚಕ್ರಗದಾಧರೆ । ಅರ್ಚಿತಾಃ ಸರ್ವದೇವಾಃ ಸ್ಯುರ್ಯತಃ ಸರ್ವಗತೋ ಹರಿಃ ॥'* ಇತಿ । ಏವಂ ಯೋ ಭಕ್ತಿಂ ಕರೋತಿ, ಯದ್ಗವಾದಿಕಂ ಭಗವತೆ ದೀಯತೆ, ಯೇನ ದ್ವಾರಭೂತೇನ ಭಕ್ತಿಃ ಕ್ರಿಯತೆ, ಯಸ್ಮೈ ಶ್ರೀಭಗವತ್‌ಪ್ರೀಣನಾರ್ಥಂ ದೀಯತೆ, ಯಸ್ಮಾದ್ಗವಾದಿಕಾತ್ ಪಯಆದಿಕಮಾದಾಯ ಭಗವತೆ ನಿವೇದ್ಯತೆ, ಯಸ್ಮಿನ್ ದೇಶಾದೌ ಕುಲೇ ವಾ ಕಶ್ಚಿದ್ಭಕ್ತಿಮನುತಿಷ್ಠತಿ, ತೇಷಾಮಪಿ ಕೃತಾರ್ಥತ್ವಂ ಪುರಾಣೇಷು ದೃಶ್ಯತ ಇತಿ 'ಕಾರಕ'–ಗತಾಪಿ । ಏವಂ ಸಾರ್ವತ್ರಿಕತ್ವಂ ಸಾಧಿತಮ್ ।

ಸದಾತನತ್ವಮಪ್ಯಾಹ–ಸರ್ವದೇತಿ । ತತ್ರ ಸರ್ಗಾದೌ ಯಥಾ (ಶ್ರೀಮದ್ಭಾ೧೧/೧೪/೩)– *'ಕಾಲೇನ ನಷ್ಟಾ ಪ್ರಲಯೇ ವಾಣೀಯಂ ವೇದಸಂಜ್ಞಿತಾ'* ಇತಿ । ಸರ್ಗಮಧ್ಯೇ ತು ಬಹುತ್ರೈವ । ಚತುರ್ವಿಧ–ಪ್ರಲಯೇಷ್ವಪಿ (ಶ್ರೀಮದ್ಭಾ ೩/೭/೩೭) *'ತತ್ರೇಮಂ ಕ ಉಪಾಸೀರನ್'* ಇತಿ ವಿದುರಪ್ರಶ್ನೆ । ಸರ್ವೇಷು ಯುಗೇಷು ಯಥಾ (ಶ್ರೀಮದ್ಭಾ ೧೨/೩/೫೨)– *'ಕೃತೇ ಯದ್‌ಧ್ಯಾಯತೋ ವಿಷ್ಣುಂ ತ್ರೇತಾಯಾಂ ಯಜತೋ ಮಖೈಃ । ದ್ವಾಪರೆ ಪರಿಚರ್ಯಾಯಾಂ ಕಲೌ ತದ್ಧರಿಕೀರ್ತನಾತ್ ॥'* ಇತಿ । ಕಿಂ ಬಹುನಾ?– *'ಸಾ ಹಾನಿಸ್ತನ್ಮಹಚ್ಛಿದ್ರಂ ಸ ಮೋಹಃ ಸ ಚ ವಿಭ್ರಮಃ । ಯನ್ಮುಹೂರ್ತಂ ಕ್ಷಣಂ*

ವಾಪಿ ವಾಸುದೇವಂ ನ ಚಿಂತಯೇತ್ ॥' ಇತ್ಯಪಿ ವೈಷ್ಣವೇ । ಸರ್ವಾವಸ್ಥಾಸ್ವಪಿ– ಗರ್ಭೇ ಶ್ರೀನಾರದಕಾರಿತ–ಶ್ರವಣೇನ ಶ್ರೀಪ್ರಹ್ಲಾದೇ ಪ್ರಸಿದ್ಧಮ್; ಬಾಲ್ಯೇ ಶ್ರೀಧ್ರುವಾದಿಷು; ಯೌವನೇ ಶ್ರೀಮದ್ ಅಂಬರೀಷಾದಿಷು; ವಾರ್ಧಕ್ಯೇ ಖಟ್ವಾಂಗ–ಯಯಾತಿ–ಧೃತರಾಷ್ಟ್ರಾದಿಷು; ಮರಣೇ ಅಜಾಮಿಲಾದಿಷು; ಸ್ವರ್ಗಿತಾಯಾಂ ಶ್ರೀಚಿತ್ರಕೇತ್ವಾದಿಷು; ನಾರಕಿತಾಯಾಮಪಿ– *'ಯಥಾ ಯಥ ಹರೇರ್ನಾಮ ಕೀರ್ತಯಂತಿ ಸ್ಮ ನಾರಕಾಃ । ತಥಾ ತಥಾ ಹರೌ ಭಕ್ತಿಮುದ್ವಹನ್ತೋ ದಿವಂ ಯಯುಃ ॥'* ಇತಿ ನೃಸಿಹಂಪುರಾಣೇ । ಅತಏವೋಕ್ತಂ ದುರ್ವಾಸಸಾ (ಶ್ರೀಮದ್ಭಾ ೯/೪/೬೨)– *'ಮುಚ್ಯೇತ ಯನ್ನಾಮ್ನ್ಯುದಿತೇ ನಾರಕೋಽಪಿ'* ಇತಿ; ಯಥಾ (ಶ್ರೀಮದ್ಭಾ ೨/೧/೧೧) 'ಏತಾನ್ನಿರ್ವಿದ್ಯಮಾನಾನಾಮ್' ಇತ್ಯಾದಾವಪಿ ಸರ್ವಾವಸ್ಥೋದಾಹೃತಿಃ ।

ಅಥ ತತ್ರ ತತ್ರ ವ್ಯತಿರೇಕೋದಾಹರಣಾನಿ ಚ ಕಿಯಂತಿ ದರ್ಶ್ಯಂತೇ– *'ಪಾರಂ ಗತೋಽಪಿ ವೇದಾನಾಂ ಸರ್ವಶಾಸ್ತ್ರಾರ್ಥವೇದ್ಯಪಿ । ಯೋ ನ ಸರ್ವೇಶ್ವರೇ ಭಕ್ತಸ್ತಂ ವಿದ್ಯಾತ್ ಪುರುಷಾಧಮಮ್ ॥'* ಇತಿ; *'ಕಿಂ ವೇದೈಃ ಕಿಮು ಶಾಸ್ತ್ರೈರ್ವಾ ಕಿಂ ವಾ ತೀರ್ಥನಿಷೇವಣೈಃ । ವಿಷ್ಣುಭಕ್ತಿವಿಹೀನಾನಾಂ ಕಿಂ ತಪೋಭಿಃ ಕಿಮಧ್ವರೈಃ ॥'* ಇತ್ಯಾದಿ; 'ಕಿಂ ತಸ್ಯ ಬಹುಭಿಃ ಶಾಸ್ತ್ರೈಃ ಕಿಂ ತಪೋಭಿಃ ಕಿಮಧ್ವರೈಃ । ವಾಜಪೇಯ–ಸಹಸ್ರೈರ್ವಾ ಭಕ್ತಿರ್ಯಸ್ಯ ಜನಾರ್ದನೇ ॥' ಇತ್ಯಾದಿ ಗಾರುಡ–ಬೃಹನ್ನಾರದೀಯ–ಪಾದ್ಮವಚನಾನಿ; ತಥಾ (ಶ್ರೀಮದ್ಭಾ೨/೪/೧೭) *'ತಪಸ್ವಿನೋ ದಾನಪರಾ ಯಶಸ್ವಿನೋ ಮನಸ್ವಿನೋ ಮಂತ್ರವಿದಃ ಸುಮಂಗಲಾಃ । ಕ್ಷೇಮಂ ನ ವಿಂದಂತಿ ವಿನಾ ಯದರ್ಪಣಂ ತಸ್ಮೈ ಸುಭದ್ರಶ್ರವಸೇ ನಮೋ ನಮಃ ॥'*, (ಶ್ರೀಮದ್ಭಾ ೫/೧೯/೨೪) *'ನ ಯತ್ರ ವೈಕುಂಠಕಥಾಸುಧಾಪಗಾ ನ ಸಾಧವೋ ಭಾಗವತಾಸ್ತದಾಶ್ರಯಾಃ । ನ ಯತ್ರ ಯಜ್ಞೇಶಮಖಾ ಮಹೋತ್ಸವಾಃ ಸುರೇಶಲೋಕೋಽಪಿ ನ ವೈ ಸ ಸೇವ್ಯತಾಮ್ ॥'*, (ಶ್ರೀಮದ್ಭಾ ೧೦/೫೯/೪೧) *'ಯಯಾಚ ಆನಮ್ಯ ಕಿರೀಟಕೋಟಿಭಿಃ'* ಇತ್ಯಾದಿ; (ಶ್ರೀಮದ್ಭಾ ೩/೨೯/೧೩) *'ಸಾಲೋಕ್ಯಸಾರ್ಷ್ಟಿ–ಸಾರೂಪ್ಯಸಾಮೀಪ್ಯ–'* ಇತ್ಯಾದಿ । (ಶ್ರೀಮದ್ಭಾ ೭/೭/೫೨) *'ನ ದಾನಂ ನ ತಪೋ ನೇಜ್ಯಾ'* ಇತ್ಯಾದಿ; (ಶ್ರೀಮದ್ಭಾ ೧/೫/೧೨; ೧೨/೧೨/೫೩) *'ನೈಷ್ಕರ್ಮ್ಯಮಪ್ಯಚ್ಯುಮಭಾವವರ್ಜಿತಮ್'* ಇತ್ಯಾದಿ; (ಶ್ರೀಮದ್ಭಾ ೩/೧೫/೪೮) 'ನಾತ್ಯನ್ತಿಕಂ ವಿಗಣಯಂತ್ಯಪಿ ತೇ ಪ್ರಸಾದಮ್' ಇತ್ಯಾದಯಃ ।

ಅಥ ಸರ್ವತ್ರ ಸರ್ವದಾ ಯದುಪಪದ್ಯತ ಇತಿ ಯೋಜನಿಕಾರ್ಥೋ ಯುಗಪದ್ಯಥಾ (ಶ್ರೀಮದ್ಭಾ ೨/೨/೩೬)– *'ತಸ್ಮಾತ್ ಸತ್ವಾತ್ಮನಾ ರಾಜನ್ ಹರಿಃ ಸರ್ವತ್ರ ಸರ್ವದಾ'* ಇತ್ಯಾದಿ । ಅನ್ವಯ–ವ್ಯತಿರೇಕಾಭ್ಯಾಂ ಸರ್ವತ್ರ ಸದಾ ಯದುಪಪದ್ಯತ ಇತ್ಯತ್ರ ಯಥಾ (ಪಾದ್ಮೆ)– *'ಸ್ಮರ್ತವ್ಯಃ ಸತತಂ ವಿಷ್ಣುಃ'* ಇತ್ಯಾದಿ । ಸಾಕಲ್ಯೇಽಪಿ ಯಥಾ (ಶ್ರೀಮದ್ಭಾ ೨/೨/೩೩)– *'ನ ಹ್ಯತೋಽನ್ಯಃ ಶಿವಃ ಪನ್ಥಾಃ'* ಇತ್ಯುಪಕ್ರಮ್ಯ ತದುಪಸಂಹಾರೆ (ಶ್ರೀಮದ್ಭಾ ೨/೨/೩೬) *'ತಸ್ಮಾತ್ ಸರ್ವಾತ್ಮನಾ ರಾಜನ್ ಹರಿಃ ಸರ್ವತ್ರ ಸರ್ವದಾ । ಶ್ರೋತವ್ಯಃ ಕೀರ್ತಿತವ್ಯಶ್ಚ ಸ್ಮರ್ತವ್ಯೋ ಭಗವಾನ್ ನೃಣಾಮ್ ॥'* ಇತಿ; ಅತ್ರ ನೃಣಾಂ ಜೀವಾನಾಮ್; (ಶ್ರೀಮದ್ಭಾ ೧೦/೮೧/೨೦) *'ಇತಿ ನೃಗತಿಂ ವಿವಿಚ್ಯ ಕವಯಃ'* ಇತಿವತ್ । ಏತದುಕ್ತಂ ಭವತಿ– ಯತ್ ಕರ್ಮ, ತತ್–ಸನ್ನ್ಯಾಸಭೋಗಶರೀಪ್ರಾಪ್ತ್ಯವಧಿ; ಯೋಗಃ – ಸಿದ್ಧ್ಯವಧಿ; ಸಾಂಖ್ಯಮ್– ಆತ್ಮಜ್ಞಾನಾವಧಿ; ಜ್ಞಾನಂ– ಮೋಕ್ಷಾವಧಿ; ತಥಾ ತತ್ತದ್ಯೋಗ್ಯತಾದಿಕಾನಿ

ಚ ಸರ್ವಾಣಿ । ಏವಂಭೂತೇಷು ಕರ್ಮಾದಿಷು ಶಾಸ್ತ್ರಾದಿ-ವ್ಯಭಿಚಾರಿತಾ ಚ ಜ್ಞೇಯಾ । ಹರಿಭಕ್ತೇಸ್ತ್ವನ್ವಯ-ವ್ಯತಿರೇಕಾಭ್ಯಾಂ ಸದಾ ಸರ್ವತ್ರ ತತ್ತನ್ಮಹಿಮ-ಭರುಪಪನ್ನತ್ವಾತ್ ತಥಾಭೂತಸ್ಯ ರಹಸ್ಯಸ್ಯಾಂಗತ್ವಂ ಯುಕ್ತಮ್; ಅತೋ ರಹಸ್ಯಸ್ಯಾಂಗತ್ವೇನ ಚ ಜ್ಞಾನ-ರೂಪಾರ್ಥನ್ತರಾಚ್ಛನ್ನತಯೈವೇದನುಕ್ತಮಿತಿ । ತಥಾಪ್ಯಾತ್ಮವಿದ್ಯಯೈವಾನ್ಯಾರ್ಥ-ಸಂಗೋಪನಾದಸೌ ಸಾಧನಭಕ್ತಿರಪಿ ಕ್ವಚಿದ್ಬಾಹ್ಯಂ ಬ್ರಹ್ಮಜ್ಞಾನಾದಿ-ಸಾಧನಂ ಸ್ಯಾದಿತಿ ಗಮ್ಯತೇ । ತತ್ರೇಯಂ ಪ್ರಕ್ರಿಯಾ-ಸಾಧನಭಕ್ತೇಃ ಸಾರ್ವತ್ರಿಕತ್ವಾತ್ ಸದಾತನತ್ವಾಚ್ಚ । ಪ್ರಥಮಂ ಸಾ ಗುರೋರ್ಗ್ರಾಹ್ಯಾ, ತತಸ್ತದನುಷಂಗಿಕಂ ಭಕತಿ । ತತೋ ಭೂಯಶ್ಚ ತಥಾಭೂತತ್ವಾದ್ಭಕ್ತಿರನುವರ್ತತ ಏವ (ಶ್ರೀಗೀ ೧೮/೫೪)- *'ಬ್ರಹ್ಮಭೂತಃ ಪ್ರಸನ್ನಾತ್ಮಾ'* ಇತ್ಯಾದಿಭ್ಯಃ, (ಶ್ರೀಮದ್ಭಾ ೧/೭/೧೦) *'ಆತ್ಮಾರಾಮಾಶ್ಚ ಮುನಯಃ'* ಇತ್ಯಾದಿಭ್ಯಶ್ಚ । ತದೈವ ಭಗವಜ್ಜ್ಞಾನವಿಜ್ಞಾನೇ ಚೇತಿ । ತಸ್ಮಾತ್ ಜ್ಞಾನ-ವಿಜ್ಞಾನ-ರಹಸ್ಯ-ತದಂಗಾನಾಮುಪದೇಶೇನ ಚತುಃಶ್ಲೋಕ್ಯಾ ಅಪಿ ಸ್ವಯಂ ಭಗವಾನೇವೋಪದಿಷ್ಟಃ । ಅತ್ರ (ಶ್ರೀಮದ್ಭಾ ೨/೯/೯) *'ತಸ್ಮೈ ಸ್ವಲೋಕಂ ಭಗವಾನ್ ಸಭಾಜಿತಃ'* ಇತಿ ಭಗವಚ್ಛಬ್ದೇನ; (ಶ್ರೀಮದ್ಭಾ ೨/೯/೧೪) *'ದದರ್ಶ ತತ್ರಾಖಿಲಸಾತ್ವತಾಂ ಪತಿಮ್'* ಇತ್ಯತ್ರ; (ಗೋ. ತಾ. ಪೂ .೨೯) *'ಪರಾರ್ದ್ಧಾಂತೇ ಸೋಽಬುಧ್ಯತ ಗೋಪವೇಶೋ ಮೇ ಪುರಸ್ತಾದಾವಿರ್ಬಭೂವ'* ಇತಿ ತಾಪನೀಶ್ರುತ್ಯಾದ್ಯನುಕೂಲಿತ-ಶ್ರೀಕೃಷ್ಣತ್ವ-ಲಿಂಗೇನ ಚಾಸ್ಯ ವಕ್ತುಃ ಶ್ರೀಭಗವತ್ತ್ವಮೇವ ಸ್ಪಷ್ಟಮ್ । ನ ಜಾತು ತದಂಶಭೂತ-ನಾರಾಯಣಾಖ್ಯ-ಗರ್ಭೋದಶಾಯಿಪುರುಷತ್ವಮ್ । ಅತಏವಾಸ್ಯ ಮಹಾಪುರಾಣಸ್ಯಾಪಿ ಶ್ರೀಭಾಗವತಮಿತ್ಯೇವಾಖ್ಯಾ । ತಥೈವೋಕ್ತಮ್ (ಶ್ರೀಮದ್ಭಾ ೧೨/೧೩/೧೯)- *'ಕಸ್ಮೈ ಯೇನ ವಿಭಾಷಿತೋಽಯಮತುಲೋ ಜ್ಞಾನಪ್ರದೀಪಃ ಪುರಾ'* ಇತ್ಯಾದೌ ಪುರಾ-ಶಬ್ದೇನ ಭಗವದ್ವಕ್ತೃತ್ವ-ಮೇವೋಕ್ತಮ್; (ಶ್ರೀಮದ್ಭಾ ೨/೬/೪೨)- *'ಆದ್ಯೋಽವತಾರಃ ಪುರುಷಃ ಪರಸ್ಯ'* ಇತಿ ದ್ವಿತೀಯೇಽಭಿಧಾನಾತ್ । ಅತಃ (ಶ್ರೀಮದ್ಭಾ ೧೨/೧೩/೧೦) 'ಇದಂ ಭಗವತಾ ಪೂರ್ವಂ ಬ್ರಹ್ಮಣೇ ನಾಭಿಪಂಕಜೇ । ಸ್ಥಿತಾಯ ಭವಭೀತಾಯ ಕಾರುಣ್ಯಾತ್ ಸಂಪ್ರಕಾಶಿತಮ್ ॥' ಇತ್ಯತ್ರಾಪಿ ಭಗವಚ್ಛಬ್ದಃ ಪ್ರಯುಕ್ತಃ; ಶ್ರೀನಾಭಿಪಂಕಜೇ ಸ್ಥಿತಂ ಬ್ರಹ್ಮಾಣಂ ಪ್ರತಿ ಸ್ವಯಂಭಗವತಾ ತತ್ರೈವ ವ್ಯಾಪಿಮಹಾವೈಕುಂಠೇ ಪ್ರಕಾಶ್ಯೇದಂ ಪುರಾಣಂ ಪ್ರಕಾಶಿತಮಿತ್ಯರ್ಥಃ । ಅನುಗತಂ ಚೈತದ್ದ್ವಿತೀಯ ಸ್ಕಂಧೇತಿಹಾಸಸ್ಯೇತಿ ॥೩೫॥

ಭಾವಾನುವಾದ- ಅನಂತರ ಶ್ರೀಭಗವಂತನು ಜ್ಞಾನ, ವಿಜ್ಞಾನ ಇತ್ಯಾದಿಯನ್ನು ಕ್ರಮವಾಗಿ ಪರಮರಹಸ್ಯ ಅರ್ಥಾತ್ ಈ ಭಗವತ್-ಪ್ರೇಮದ ಅಂಗವಾದ-ಸಾಧನಭಕ್ತಿಯ ಉಪದೇಶವನ್ನು ನೀಡುತ್ತಿದ್ದಾನೆ. ಈ ಸಾಧನಭಕ್ತಿಯು ರಹಸ್ಯಮಯಿ ಪ್ರಯೋಜನದ ಸಾಧಕವಾದ ಕಾರಣ ಸ್ವಯಂ ರಹಸ್ಯಪೂರ್ಣವಾಗಿದೆ. 'ಆತ್ಮದ ತತ್ತ್ವಜಿಜ್ಞಾಸು' ಶಬ್ದದಿಂದ ಪರಮಾತ್ಮರೂಪಿ ನನ್ನ ಭಗವಂತನ ಯಥಾರ್ಥ ಅನುಭವವನ್ನು ಪಡೆಯಲು ಅಭಿಲಾಷಿತ ವ್ಯಕ್ತಿಗಳಿಗಾಗಿ ಇದೇ ಜಿಜ್ಞಾಸ್ಯ ಅರ್ಥಾತ್ ಶ್ರೀಗುರುಚರಣಗಳಲ್ಲಿ ಶಿಕ್ಷಣೀಯವಾಗಿದೆ. ಅದು ಏನೂ' ಇದಕ್ಕೆ ಉತ್ತರದಲ್ಲಿ ಹೇಳುತ್ತಾರೆ- ಒಂದು ಅದ್ವಿತೀಯ ವಸ್ತುವಾಗಿ ಅನ್ವಯ-ವ್ಯತಿರೇಕ ರೂಪದಲ್ಲಿ ಅರ್ಥಾತ್ ವಿಧಿ-ನಿಷೇಧ ಕ್ರಮದಿಂದ ಯಾರಲ್ಲಿ ಸರ್ವದಾ-ಸರ್ವತ್ರ ಸ್ಥಿರನಾಗಿರುತ್ತಾನೋ.

ಅವನಲ್ಲಿ ಅನ್ವಯರೂಪದಲ್ಲಿ ಸ್ಥಿರವಾದ ಪ್ರಮಾಣ ಶ್ರೀಮದ್ಭಾಗವತ (೭/೭/೫೫) ಶ್ಲೋಕದಲ್ಲಿ ಹೇಳಲಾಗಿದೆ– "ಯಾವುದನ್ನು ಪ್ರಾಪ್ತಿಸಿಕೊಂಡರೆ ಸರ್ವತ್ರವು ಶ್ರೀವಿಷ್ಣುವಿನ ದರ್ಶನಪ್ರಾಪ್ತವಾಗುತ್ತದೋ, ಅಂತಹ ಏಕಾಂತಿಕ ಗೋವಿಂದ–ಭಕ್ತಿಯೇ ಈ ಲೋಕದಲ್ಲಿ ವ್ಯಕ್ತಿಗಳ ಪರಮ–ಸ್ವಾರ್ಥದ ರೂಪದಲ್ಲಿ ಹೇಳಲಾಗಿದೆ." ಗೀತೆಯಲ್ಲಿ (೧೮/೬೧) ಹೀಗೆ ಹೇಳಲಾಗಿದೆ– "ಹೇ ಅರ್ಜುನ ! ಸಮಸ್ತ ಪ್ರಾಣಿಗಳ ಹೃದಯಗಳಲ್ಲಿ ನಾನು ಈಶ್ವರ ಅಥವಾ ಪರಮಾತ್ಮ ಅಂತರ್ಯಾಮೀ ರೂಪದಲ್ಲಿ ಸ್ಥಿತನಾಗಿದ್ದೇನೆ." ಮತ್ತೆ ಪುನಃ ಗೀತೆಯಲ್ಲಿ (೧೮/೬೫) ಹೇಳಲಾಗಿದೆ– "ನನ್ನಲ್ಲಿ ನಿನ್ನ ಮನಸ್ಸನ್ನು ಸಮರ್ಪಿಸು, ನನ್ನ ಭಗವತ್–ಸ್ವರೂಪದ ಚಿಂತನೆಯನ್ನು ಮಾಡು, ನನ್ನನ್ನು ನಮಸ್ಕರಿಸು" ಇತ್ಯಾದಿ.

ವ್ಯತಿರೇಕವಾಗಿ ಸ್ಥಿರತೆಯ ಪ್ರಮಾಣ ಶ್ರೀಮದ್ಭಾಗವತದಲ್ಲಿ (೧೧/೫/೨) ಹೀಗೆ ಹೇಳಲಾಗಿದೆ– "ವಿರಾಟ್–ಪುರುಷನ ಮುಖ, ಬಾಹು, ತೊಡೆ ಹಾಗೂ ಪಾದಗಳಿಂದ ಬ್ರಹ್ಮಚರ್ಯಾದಿ ಆಶ್ರಮಗಳೊಂದಿಗೆ ಗುಣ–ವಿಭಾಗದ ಕ್ರಮದಿಂದ ವಿಪ್ರಾದಿ ನಾಲ್ಕು ವರ್ಣಗಳ ಉತ್ಪತ್ತಿಯಾಗಿದೆ. ಇದರಿಂದ ಯಾವ ವ್ಯಕ್ತಿ ಸಾಕ್ಷಾತ್ ಆತ್ಮನ ಪ್ರಭು ಈಶ್ವರನಾದ ಶ್ರೀವಿಷ್ಣುವಿನ ಭಜನೆಯನ್ನು ಮಾಡುವುದಿಲ್ಲವೋ ಅಥವಾ ಅವನನ್ನು ಅಗೌರವಿಸುತ್ತಾನೋ, ಅವನು ತನ್ನ ಸ್ಥಾನದಿಂದ ಭ್ರಷ್ಟನಾಗಿ ಅಧಮನಾಗಿ ಪತೀತನಾಗುತ್ತಾನೆ." ಶ್ರೀಮದ್ಭಾಗವತದಲ್ಲಿ (೩/೯/೧೦) ಹೀಗೆ ವಿವರಿಸಿದೆ– "ಹೇ ದೇವ ! ವಿವೇಕಿ, ಜ್ಞಾನಿ, ಋಷಿಗಳೂ ಸಹ ನಿಮ್ಮ ಪ್ರಸಂಗದಿಂದ ವಿಮುಖರಾಗಿ ಸಂಸಾರದಲ್ಲಿ ಅಲೆದಾಡುತ್ತಿರುತ್ತಾರೆ" ಹಾಗೂ "ಎಲ್ಲಿಯವರೆಗೂ ಜಗತ್ತಿನಲ್ಲಿ ಮಾನುಷ್ಯನು ವಿಷ್ಣುಭಕ್ತನಾಗುವುದಿಲ್ಲವೋ" ಇತ್ಯಾದಿ.

ಈಗ ಪ್ರಶ್ನೆ ಏನೆಂದರೆ, ಈ ಭಕ್ತಿಯ ಸ್ಥಾನ ಎಲ್ಲೆಲ್ಲಿದೆ? ಇದಕ್ಕೆ ಉತ್ತರದಲ್ಲಿ ಹೇಳುತ್ತಾರೆ– ಸರ್ವತ್ರ ಅರ್ಥಾತ್ ಯಾವ ಶಾಸ್ತ್ರ, ಯಾರು ಕರ್ತೃ, ಯಾವ ದೇಶ, ಯಾವ ಇಂದ್ರಿಯ, ಯಾವ ದ್ರವ್ಯ, ಯಾವ ಕ್ರಿಯೆ, ಯಾವ ಕರ್ಮಫಲಾದಿ, ಸಮಸ್ತ ವಿಷಯಗಳಲ್ಲಿ ಈ ಭಕ್ತಿಯ ಅವಸ್ಥಾನವನ್ನು ಕಾಣಲಾಗುತ್ತದೆ. ಇದರಲ್ಲಿ ಸಮಸ್ತ ಶಾಸ್ತ್ರಗಳಲ್ಲಿ ಭಕ್ತಿಯ ಅವಸ್ಥಾನದ ಪ್ರಮಾಣ ಸ್ಕಂದಪುರಾಣದಲ್ಲಿ ಬ್ರಹ್ಮ–ನಾರದ–ಸಂವಾದದಲ್ಲಿ ಹೀಗೆ ಹೇಳಲಾಗಿದೆ– "ಈ ಜನ್ಮ–ಮೃತ್ಯುವಿನಿಂದ ಪರಿಪೂರ್ಣ ಮಹಾಭಯಂಕರ ಸಂಸಾರದಲ್ಲಿ ಭಗವಾನ್ ಶ್ರೀವಾಸುದೇವನ ಯಾವ ಪೂಜೆ ಇರುವುದೋ, ವಿಚಾರಕರ ಮತದಲ್ಲಿ ಕೇವಲ ಅದರ ಮೂಲಕವೇ ಎಲ್ಲರೂ ಸಂಸಾರದಿಂದ ರಕ್ಷಣೆಯನ್ನು ಪಡೆಯಬಹುದಾಗಿದೆ." ಮತ್ತೆ ಪುನಃ ಅದರಲ್ಲೂ ಅನ್ವಯಕ್ರಮದಿಂದ ಭಕ್ತಿಯ ಅವಸ್ಥಾನವಿದೆ, ಹೇಗೆಂದರೆ ಶ್ರೀಮದ್ಭಾಗವತದಲ್ಲಿ (೨/೨/೩೪) ಹೀಗೆ ಹೇಳಲಾಗಿದೆ– "ಭಗವಾನ್ ಬ್ರಹ್ಮದೇವರು ಏಕಾಗ್ರಮನಸ್ಸಿನಿಂದ ಮೂರು ಬಾರಿ ಸಮಸ್ತ ವೇದಗಳ ವಿಚಾರ ಮಾಡಿದ್ದಾರೆ ಹಾಗೂ ಇದರ ಅನುಷ್ಠಾನದ ಫಲದಿಂದ ಭಗವಾನ್ ಶ್ರೀಹರಿಯ ಮೇಲೆ ಎಲ್ಲರಿಗೂ ರತಿ ಉಂಟಾಗುತ್ತದೆ, ಆ

ಭಕ್ತಿಯೋಗವನ್ನೇ ಏಕಮಾತ್ರ ಅನ್ವೇಷಣೀಯ ರೂಪದಲ್ಲಿ ಸ್ಥಿರಪಡಿಸಲಾಗಿದೆ." ಪದ್ಮ, ಸ್ಕಂದ ಹಾಗೂ ಲಿಂಗ ಪುರಾಣದಲ್ಲಿಯೂ ಸಹ ಹೀಗೆ ಹೇಳಲಾಗಿದೆ– "ಸಂಪೂರ್ಣ ಶಾಸ್ತ್ರಗಳನ್ನು ಸೇರಿಸಿ ಓದಿ ಹಾಗೂ ಮತ್ತೆ-ಮತ್ತೆ ವಿಚಾರಮಾಡುವುದರಿಂದ ಯಾವ ಸಿದ್ಧಾಂತವು ಸ್ಥಿರವಾಗುವುದು ಏನೆಂದರೆ ಶ್ರೀನಾರಾಯಣನೇ ಸರ್ವದಾ ಧ್ಯೇಯ ವಸ್ತು ಎಂಬುದು ತಿಳಿಯುತ್ತದೆ." ವ್ಯತಿರೇಕ ರೂಪದಿಂದ ಶಾಸ್ತ್ರಗಳಲ್ಲಿ ಭಕ್ತಿಯ ಅವಸ್ಥಾನದ ಉದಾಹರಣೆ, ಹಾಗೂ ಗರುಡಪುರಾಣದಲ್ಲಿ ಹೇಳಿದೆ– 'ಸಮಸ್ತ ವೇದಗಳಲ್ಲಿ ಪಾರಂಗತ ಹಾಗೂ ಸಮಸ್ತ ಶಾಸ್ತ್ರಗಳನ್ನು ತಿಳಿದಿದ್ದರೂ ಸಹ ಒಬ್ಬ ವ್ಯಕ್ತಿ ಸರ್ವೇಶ್ವರ ಶ್ರೀವಿಷ್ಣುವಿನ ಭಕ್ತನಲ್ಲದಿದ್ದರೆ ಅಂತಹವನನ್ನು ಪುರುಷರಲ್ಲಿ ಅಧಮನೆಂದು ಅರ್ಥಮಾಡಿಕೊಳ್ಳಬೇಕು." ಎಂದಿಗೂ ಈ ಪ್ರಕಾರವಾಗಿಯೇ ಅರ್ಥಮಾಡಿಕೊಳ್ಳಬೇಕು ಹಾಗೂ ಅಂತ್ಯದಲ್ಲಿಯೂ ಸಹ ಹೀಗೆ ಕಾಣಿಸಿಕೊಳ್ಳುತ್ತದೆ. ಶ್ರೀಮದ್ಭಾಗವತದಲ್ಲಿ (೧೧/೧೧/೧೮) ಹೀಗೆ ಹೇಳಿದೆ– "ಶಬ್ದಬ್ರಹ್ಮರೂಪ ವೇದದಲ್ಲಿ ಪಾರಂಗತನಾಗಿದ್ದರೂ ಸಹ ಅವನಿಗೆ ಏನಾದರೂ ಪರಮೇಶ್ವರ ಶ್ರೀವಿಷ್ಣುವಿನಲ್ಲಿ ರತಿ ಇಲ್ಲದಿದ್ದರೆ, ಆಗ ಬಂಜೆ ಗೋವಿನ ಪಾಲಕನಂತೆ ಅವನ ಶ್ರಮವೆಲ್ಲವೂ ವ್ಯರ್ಥ."

ಎಲ್ಲ ಕರ್ತರಲ್ಲೂ ಭಕ್ತಿಗೆ ಸ್ಥಾನವಿರುತ್ತದೆ, ಶ್ರೀಮದ್ಭಾಗವದಲ್ಲಿ (೨/೭/೪೬) ಹೇಳಿದೆ– "ಯಾರು ಶ್ರೀಭಗವಂತನ ರೂಪ-ಗುಣ-ಲೀಲೆಗಳನ್ನು ಶ್ರವಣ-ಸ್ಮರಣಾದಿಗಳನ್ನು ಮಾಡುತ್ತಾರೋ, ಅವರ ಮಾತೇಕೆ, ಇಲ್ಲಿಯವರೆಗು ಸ್ತ್ರೀ, ಶೂದ್ರ, ಹೂಣ, ಕಿರಾತಕ, ಇತರ ಪಾಪಜನ್ಮದ ಜೀವಿ ಹಾಗೂ ಪಶು-ಪಕ್ಷಿ ಮುಂತಾದ ಕೀಳು-ಜನ್ಮದ ಜೀವಿಗಳೂ ಸಹ ಏನಾದರೂ ಭಗವತ್-ಭಕ್ತರ ಸ್ವಭಾವದ ಅನುಸರಣೆಮಾಡಿದರೆ, ಆಗ ಅವರೂ ಸಹ ಭಗವಂತನ ದೈವೀ ಮಾಯೆಯನ್ನು ಅರ್ಥಮಾಡಿಕೊಂಡು ಸಂಸಾರ-ಸಾಗರದಿಂದ ಉತ್ತೀರ್ಣರಾಗುತ್ತಾರೆ." ಗರುಡಪುರಾಣದಲ್ಲಿ ಹೇಳಿದೆ– "ಶ್ರೀಹರಿಯ ಮೇಲೆ ಮನಸ್ಸನ್ನಿಟ್ಟಂತಹ ಜ್ಞಾನಿಗಳ ಮಾತೇಕೆ, ಕೀಟ-ಪಕ್ಷಿ-ಪಶುಗಳಿಗೂ ಸಹ ಊರ್ಧ್ವಗತಿ ಪ್ರಾಪ್ತವಾಗುತ್ತದೆ, ಹೀಗೆ ವಿಚಾರ ಮಾಡುತ್ತೇನೆ." ಇದರಲ್ಲೂ ಸಹ ಸದಾಚಾರಿ ಹಾಗೂ ದುರಾಚಾರಿ, ಜ್ಞಾನಿ ಹಾಗೂ ಅಜ್ಞಾನಿ, ವಿರಕ್ತ ಮತ್ತು ಆಸಕ್ತ, ಮುಕ್ತಾಭಿಲಾಷಿ ಹಾಗೂ ಮುಕ್ತ, ಸಾಧಕ ಹಾಗೂ ಸಿದ್ಧ ಹಾಗೂ ಅಧಿಕಾರ-ಪ್ರಾಪ್ತವಾದವ ಮತ್ತು ನಿತ್ಯ-ಅಧಿಕಾರಿ ಮುಂತಾದವರು ಎಲ್ಲರಲ್ಲೂ ಸಾಮಾನ್ಯ ಭಾವದಿಂದ ನೋಡಿದರೂ ಸಹ ಭಕ್ತಿಯು ಸರ್ವತ್ರ ನೆಲಸಿರುವುದು ಅರ್ಥವಾಗುತ್ತದೆ.

ಇವರಲ್ಲಿ ಸದಾಚಾರಿ ಹಾಗೂ ದುರಾಚಾರಿ ವ್ಯಕ್ತಿಗಳಲ್ಲಿ ಭಕ್ತಿಯ ನೆಲೆ ಇರುತ್ತದೆ, ಹೀಗೆ ಗೀತೆಯಲ್ಲಿ (೯/೩೦) ಹೇಳಿದೆ– "ಬಾಹ್ಯ-ದೃಷ್ಟಿಯಿಂದ ಶ್ರೀಭಗವಂತನ ಅನನ್ಯಭಜನೆಯಲ್ಲಿ ನಿರತನಾಗಿರುವವನಲ್ಲಿ ದುರಾಚಾರವು ಕಾಣಿಸಲ್ಪಟ್ಟರೂ ಸಹ ಅವನನ್ನು ದುರಾಚಾರಿ ಎಂದು ಭಾವಿಸದೆ ಸಾಧು ಎಂದೇ ಭಾವಿಸಬೇಕು, ಏಕೆಂದರೆ ಅವನ ಸಮಸ್ತ ಪ್ರಯತ್ನಗಳು ಸಂಯಮ ರೂಪದಲ್ಲಿ ಭಗವಂತನಿಗಾಗಿ ಆಗಿರುತ್ತದೆ." ಹೀಗೆ ದುರಾಚಾರಿ ವ್ಯಕ್ತಿಯಲ್ಲೂ ಸಹ ಭಗವತ್-ಭಕ್ತಿ ಇರುತ್ತದೆ, ಅಂದರೆ ಆಗ

ಸದಾಚಾರಿಯ ವಿಷಯದಲ್ಲಿ ಮತ್ತಷ್ಟು ಅಧಿಕವಾಗಿ ಏನೂ ಹೇಳುವುದು", ಇದೇ 'ಅಪಿ' ಶಬ್ದದ ತಾತ್ಪರ್ಯ. ಜ್ಞಾನಿ ಹಾಗೂ ಅಜ್ಞಾನಿ ವ್ಯಕ್ತಿಗಳಲ್ಲಿಯೂ ಸಹ ಭಕ್ತಿ ನೆಲಸಿರುತ್ತದೆ, ಹಾಗೂ ಶ್ರೀಮದ್ಭಾಗವತದಲ್ಲಿ (೧೧/೧೧/೩೩)– "ನನ್ನ ವೈಕುಂಠ–ಸ್ವಭಾವ, ಸ್ವರೂಪ ಹಾಗೂ ಸಚ್ಚಿದಾನಂದಮಯತೆಯನ್ನು ಯಾರೇ ತಿಳಿದಿರಲಿ ಅಥವಾ ತಿಳಿಯದೇ ಇರಲಿ, ಯಾರು ಅನನ್ಯ ಭಾವದಿಂದ ನನ್ನನ್ನು ಭಜಿಸುತ್ತಾರೋ, ಅವರು ಪರಮ ಭಕ್ತರ ರೂಪದಲ್ಲಿ ಗುರುತಿಸಲ್ಪಡುತ್ತಾರೆ.' ಹಾಗೂ ಬೃಹನ್ನಾರದೀಯಪುರಾಣದಲ್ಲಿಯೂ ಸಹ ಹೀಗೆ ಹೇಳಿರುವುದು– "ದುಷ್ಪ್ರವೃತ್ತಿಯುಕ್ತ ಮನುಷ್ಯನ ಮೂಲಕ ಅನುಷ್ಠಿತ ಪಾಪರಾಶಿಯನ್ನೂ ಸಹ ಶ್ರೀಹರಿ ನಾಶಮಾಡಿಬಿಡುತ್ತಾನೆ."– ಇತ್ಯಾದಿ ಶ್ಲೋಕವು ಇದರ ಪ್ರಮಾಣ. ವಿರಕ್ತ ಹಾಗೂ ಆಸಕ್ತ ಪುರುಷರಲ್ಲೂ ಸಹ ಭಕ್ತಿಯಲ್ಲಿ ಸ್ಥಾನವಿರುತ್ತದೆ, (ಶ್ರೀಮದ್ಭಾ ೧೧/೧೪/೧೮)– "ಉತ್ಕೃಷ್ಟ ಭಕ್ತನ ಮಾತು ದೂರವಿರಲಿ, ಪ್ರಾಕೃತ ಭಕ್ತನೂ ಸಹ ಏನಾದರೂ ಇಂದ್ರಿಗಳಲ್ಲಿ ವಿಜಯ ಪ್ರಾಪ್ತಿಸಿಕೊಳ್ಳಲಾಗದ ಕಾರಣ ವಿಷಯ–ಭೋಗಗಳಲ್ಲಿ ಆಕರ್ಷಿತನಾಗಿರುತ್ತಾನೆ, ಆಗಿದ್ದರೂ ಸಹ ತೀವ್ರ ಭಕ್ತಿಯ ಪ್ರಭಾವದಿಂದ ಆ ವಿಷಯಗಳ ಭೋಗದಿಂದ ಅವನು ಅಭಿಭೂತ (ಪೀಡಿತ)ನಾಗುವುದಿಲ್ಲ." ವಿಷಯಗಳಲ್ಲಿ ಆಕರ್ಷಿತ ಮನುಷ್ಯರಲ್ಲೂ ಸಹ ಯಾವಾಗ ಭಕ್ತಿಯ ಸ್ಥಾನ ಉಂಟಾಗುತ್ತದೋ, ಆಗ ವಿಷಯಗಳಲ್ಲಿ ವಿರಕ್ತನಾದ ವ್ಯಕ್ತಿ ಭಕ್ತಿಯ ಪ್ರಭಾವದಿಂದ ವಿಷಯಗಳ ಮೂಲಕ ಎಂದಿಗೂ ಪೀಡಿತನಾಗುವುದಿಲ್ಲ– ಇಲ್ಲಿ 'ಅಪಿ' ಶಬ್ದದ ತಾತ್ಪರ್ಯ ಇದೇ.

ಮುಕ್ತಾಸಕ್ತ ಹಾಗೂ ಮುಕ್ತನಲ್ಲಿ ಭಕ್ತಿಯ ಅಧಿಷ್ಠಾನವಿರುತ್ತದೆ, ಹೀಗೆ (ಶ್ರೀಮದ್ಭಾ. ೧/೨/೨೬)– "ಮುಕ್ತಾಸಕ್ತ ವ್ಯಕ್ತಿ ವಿಕಟಾಕಾರ ಭೂತನಾಥ ಇತ್ಯಾದಿ ದೇವತೆಗಳ ಪೂಜೆಯನ್ನು ತ್ಯಾಗಮಾಡಿ ದೋಷರಹಿತನಾಗಿ ಶ್ರೀನಾರಾಯಣನ ಶಾಂತಮೂರ್ತಿ ಅವತಾರಗಳ ಉಪಾಸನೆಯನ್ನು ಮಾಡುತ್ತಾನೆ." ಹಾಗೂ (ಶ್ರೀಮದ್ಭಾ೧/೭/೧೦)– "ಶ್ರೀಹರಿ ಹೇಗೆ ಗುಣಶಾಲಿಯಾಗಿರುವನೆಂದರೆ ಆತ್ಮಾರಾಮನಾದ ಮುನಿಯು ಜೀವನ್ಮುಕ್ತನಾಗಿದ್ದರೂ ಸಹ ಕ್ರಮಸ್ಥಾಪಿತ ಶ್ರೀಭಗವಂತನ ಅಹೈತುಕಿ ಭಕ್ತಿಯಲ್ಲಿ ತೊಡಗಿರುತ್ತಾನೋ ಹಾಗೆ." ಸಾಧಕ ಹಾಗೂ ಸಿದ್ಧರಲ್ಲೂ ಸಹ ಭಕ್ತಿಯ ಅಧಿಷ್ಠಾನವಿರುತ್ತದೆ, ಹೀಗೆ (ಶ್ರೀಮದ್ಭಾಗ ೬/೧/೧೫)– "ಯಾರು–ಯಾರಿಗೆ ಶ್ರೀವಾಸುದೇವನಲ್ಲಿ ಆಸಕ್ತಿಯುಳ್ಳವರಾಗಿರುತ್ತಾರೋ ಅವರು, ಯಾವ ರೀತಿ ಸೂರ್ಯನ ಪ್ರಭಾವದಿಂದ ದಟ್ಟವಾಗಿ ತುಂಬಿಕೊಂಡಿರುವಂತಹ ಕತ್ತಲು ಚದುರಿಹೋಗುತ್ತದೋ, ಅದೇ ರೀತಿ ಅವರು ಕೇವಲ ಭಕ್ತಿಯ ಪ್ರಭಾವದಿಂದ ಅಭದ್ರರಾಶಿಯನ್ನು ಕಳೆದುಕೊಳ್ಳುತ್ತಾರೆ." ಶ್ರೀಮದ್ಭಾಗವತದಲ್ಲಿ (೧೧/೨/೫೩) ಹೇಳಲಾಗಿದೆ– "ಶ್ರೀಹರಿಯ ಚರಣಕಮಲಗಳಿಗೆ ಅತಿರಿಕ್ತವಾಗಿ ಈ ಸಂಸಾರದಲ್ಲಿ ಅನ್ಯ ಯಾವುದೇ ಸಾರವಸ್ತು ಇಲ್ಲ, ಇಂತಹ ಅಕುಂಠಿತ ಬುದ್ಧಿಯಿಂದ ಯುಕ್ತನಾಗಿ ಯಾರು ತ್ರಿಲೋಕ ರಾಜ್ಯ ಪ್ರಾಪ್ತವಾಗುವ ಸಂಭಾವನೆ ಇದ್ದರೂ ಸಹ ಶ್ರೀಭಗವಂತನಲ್ಲಿ ಆಸಕ್ತಿಯುಳ್ಳ ಮನಸ್ಸಿನಿಂದ ದೇಹಧಾರಿಗಳ ಏಕಮಾತ್ರ ಆರಾಧ್ಯನಾದ ಅವನ

(ಭಗವಂತನ) ಚರಣಕಮಲಗಳಿಂದ ಕ್ಷಣಕಾಲವೂ ಸಹ ವಿಚಲಿತನಾಗುವುದಿಲ್ಲವೋ, ಅಂತಹ ವ್ಯಕ್ತಿಯನ್ನೇ ಉತ್ತಮ–ಭಾಗವತನ ರೂಪದಲ್ಲಿ ಅರ್ಥಮಾಡಿಕೊಳ್ಳಲಾಗುತ್ತದೆ." ಶ್ರೀಭಗವಂತನ ಸ್ನೇಹವನ್ನು ಪ್ರಾಪ್ತಿಸಿಕೊಂಡ ವ್ಯಕ್ತಿಯಲ್ಲಿ ಭಕ್ತಿಯ ಅಧಿಷ್ಠಾನವು ಇರುತ್ತದೆ, (ಶ್ರೀಮದ್ಭಾ ೯/೪/೬೭)– "ನನ್ನ ಸೇವೆಯಲ್ಲಿ ಪರಿಪೂರ್ಣಬಯಕೆಯನ್ನು ಹೊಂದಿರುವಂತಹ ಭಕ್ತಗಣರು ಅನ್ಯ ಕಾಲ ಮೂಲಕ ಕ್ಷೋಭಿತ ನಶ್ವರ ವಸ್ತುತುಗಳ ಮಾತೇಕೆ, ನನ್ನ ಸೇವಯ ಪ್ರಭಾವದಿಂದ ಪ್ರಾಪ್ತವಾಗುವ ಸಾಲೋಕ್ಯ ಮುಂತಾದ ನಾಲ್ಕು ಪ್ರಕಾರದ ಮುಕ್ತಿಯನ್ನೂ ಸಹ ತ್ಯಜಿಸುತ್ತಾರೆ." ನಿತ್ಯ–ಸಂಬಂಧದಲ್ಲಿ ಭಕ್ತಿಯ ಉದಾಹರಣೆ, ಹೀಗೆ (ಶ್ರೀಮದ್ಭಾ ३/೧೫/೨೨)– "ಹೇ ದೇವತೆಗಳೇ! ಆ ವೈಕುಂಠದಲ್ಲಿ ಲಕ್ಷ್ಮೀದೇವಿಯು ಪರಿಚಾರಿಕೆಯರೊಂದಿಗೆ ಹವಳ–ಮಣಿಮಯ ತಟ ಹಾಗೂ ಅಮೃತಮಯ ನಿರ್ಮಲ ಜಲಯುಕ್ತ ಸರೋವರದ ತೀರದಲ್ಲಿ ತಮ್ಮ ಆನಂದಮಯ–ಉಪವನದಲ್ಲಿ ಪರಮೇಶ್ವರ ಶ್ರೀನಾರಾಯಣನ ಪೂಜೆಯನ್ನು ಮಾಡುತ್ತ ಕನ್ನಡಿಯಲ್ಲಿ ಪತಿಬಿಂಬಿತವಾದ ತನ್ನ ಕುರುಳುಕೂದಲು ಹಾಗೂ ಉನ್ನತ ನಾಸಿಕದಿಂದ ಯುಕ್ತ ಸುಂದರವಾದ ಮುಖಕಮಲದ ದರ್ಶನ ಮಾಡುತ್ತ ಅವರ ಮುಖವು ಶ್ರೀಭಗವಂತನ ಮೂಲಕ ಚುಂಬಿತವಾಗುತ್ತಿದೆ ಎಂದು ಭಾವಿಸುತ್ತಿದ್ದಾರೆ." ಇತ್ಯಾದಿ.

ಭಾರತ ಮುಂತಾದ ಸಮಸ್ತ ದೇಶಗಳಲ್ಲಿ, ಸಮಸ್ತ ಭುವನದಲ್ಲಿ, ಎಲ್ಲ ಬ್ರಹ್ಮಾಂಡಗಳಲ್ಲಿ ಹಾಗೂ ಅದಕ್ಕೂ ಈಚೆ ಇರುವಂತಹ ಸವತ್ರವೂ ಆ–ಆ ಸ್ಥಾನಗಳ ನಿವಾಸಿಗಳ ಮೂಲಕ ಶ್ರೀಭಗವಂತನ ಉಪಾಸನೆ ಅನುಷ್ಠಾನವಾಗುತ್ತಿರುವುದಾಗಿ ಶ್ರೀಭಾಗವತ ಮುಂತಾದ ಶಾಸ್ತ್ರಗಳಲ್ಲಿ ಉಲ್ಲೇಖನೆ ಉಂಟು– ಇದನ್ನೇ ಎಲ್ಲ ನಿಟ್ಟಿನಲ್ಲೂ ಭಕ್ತಿಯ ಸ್ಥಾನದ ಉದಾಹರಣೆಯನ್ನು ಅರ್ಥಮಾಡಿಕೊಳ್ಳಬೇಕು.

ತದನಂತರ ಎಲ್ಲ ಇಂದ್ರಿಯಗಳ ಮೂಲಕ ಭಕ್ತಿಯ ಅನುಷ್ಠಿತವಾಗುವ ಪ್ರಮಾಣ, ಹಾಗೂ (ಪೂರಣಾಂತರ)– "ಬ್ರಹ್ಮಾದಿ ಶ್ರೇಷ್ಠ ದೇವತೆಗಳು ಮಾನಸ ಉಪಚಾರದ ಮೂಲಕ ಪರಮ ಸುಖದಿಂದ ಶ್ರೀಹರಿಯನ್ನು ಪ್ರಾರ್ಥನೆ ಮಾಡಿ ವಚನ ಹಾಗೂ ಮನಸ್ಸಿಗೆ ಅಗೋಚರ ಭಗವಂತನನ್ನು ಸಾಕ್ಷಾತ್ ರೂಪದಲ್ಲಿ ಪ್ರಾಪ್ತಿಸಿಕೊಂಡರು." ಈ ಪ್ರಕಾರದಿಂದ ಬಾಹ್ಯ ಇಂದ್ರಿಯ, ಮನಸ್ಸು ಹಾಗೂ ವಚನದ ಮೂಲಕವೂ ಸಹ ಭಕ್ತಿಯು ಸಿದ್ಧಿಸುತ್ತದೆ, ಹೀಗೆ ಪ್ರಸಿದ್ಧಿ ಇದೆ.

ಎಲ್ಲ ದ್ರವ್ಯಗಳಲ್ಲು ಭಕ್ತಿಯ ಪ್ರಮಾಣವನ್ನು, ಹೀಗೆ ಶ್ರೀಮದ್ಭಾ (೧೦/೮೧/೪) ಹಾಗೂ ಗೀತೆಯಲ್ಲಿ (೯/೨೬) ಹೇಳಿದೆ– "ಪ್ರಯತಾತ್ಮ (ಜಿತೇಂದ್ರಿಯ) ಭಕ್ತಗಣರು ನನಗೆ ಭಕ್ತಿಪೂರ್ವಕವಾಗಿ ಎಲೆ, ಪುಷ್ಪ, ಹಣ್ಣು ಹಾಗೂ ಜಲ ಇನ್ನಿತರ ಏನನ್ನೇ ಸಮರ್ಪಿಸಲಿ, ಅದನ್ನು ನಾನು ಅತ್ಯಂತ ಸ್ನೇಹಪೂರ್ವಕವಾಗಿ ಸ್ವೀಕರಿಸುತ್ತೇನೆ." ಎಲ್ಲ ಕ್ರಿಯಗಳಲ್ಲೂ ಸಹ ಭಕ್ತಿಯ ಅಧಿಷ್ಠಾನವಿರುತ್ತದೆ, ಹೀಗೆ (ಶ್ರೀಮದ್ಭಾ ೧೧/೨/೧೨) "ಈ ಭಾಗವತ–ಧರ್ಮ ಎಂಬುದು ಎಂತಹ ವಸ್ತು ಅಂದರೆ, ಇದನ್ನು ಕಿವಿಗಳಿಂದ

ಕೇಳಲು, ವಾಣಿಯಿಂದ ಉಚ್ಚರಿಸಲು, ಮನಸ್ಸಿನಿಂದ ಚಿಂತಿಸಲು, ಹೃದಯದಿಂದ ಸ್ವೀಕಾರ ಮಾಡುವುದರಿಂದ ಅಥವಾ ಯಾರಾದರೂ ಇದನ್ನು ಪಾಲಿಸಲು ಪ್ರಯತ್ನಿಸುತ್ತಿರುವವರು ಅದರ ಅನುಮೋದನೆ ಮಾಡುವುದರಿಂದಲೇ ಅದೇ ಕ್ಷಣ ಎಲ್ಲರನ್ನೂ ಪವಿತ್ರಗೊಳಿಸಿಬಿಡುತ್ತದೆ, ಅಂತಹವನು ಬೇಕಾದರೆ ದೇವದ್ರೋಹಿ ಹಾಗೂ ಸಮಸ್ತ ಸಂಸಾರದ ದ್ರೋಹಿಯೇ ಆಗಿರಬಹುದು." ಗೀತೆಯಲ್ಲಿ (೯/೨೭) ಹೀಗೆ ಹೇಳಿದೆ– "ನೀನು ಏನೆಲ್ಲ ಕಾರ್ಯವನ್ನು ಮಾಡುವೆಯೋ, ಏನೆಲ್ಲ ಭಜನೆಯನ್ನು ಮಾಡುವೆಯೋ, ಏನೆಲ್ಲ ಹೋಮವನ್ನು ಮಾಡು, ಏನೇ ದಾನವನ್ನು ಮಾಡುವೆಯೋ, ಅದನ್ನೆಲ್ಲವನ್ನು ನನಗೆ ಸಮರ್ಪಿಸು." ಇತ್ಯಾದಿ. ಇದೇ ರೀತಿ ಭಕ್ತಿಯ ಆಭಾಸ ಹಾಗೂ ಭಕ್ತಿಯ ಅಪರಾಧ ಇತ್ಯಾದಿಯಿಂದಲೂ ಸಹ ಭಕ್ತಿಯು ಸಿದ್ಧಿಸುತ್ತದೆ, ಈ ವಿಷಯದಲ್ಲಿ ಅಜಾಮಿಳ ಹಾಗೂ ಮೂಷಿಕ ಮುಂತದವರ ಉದಾಹರಣೆಗಳಿಂದ ಅರ್ಥಮಾಡಿಕೊಳ್ಳಬಹುದು. ಎಲ್ಲ ಕಾರ್ಯಗಳಲ್ಲು ಭಕ್ತಿಯ ಅಧಿಷ್ಠಾನವಿರುತ್ತದೆ, ಹೇಗೆ– "ಯಾರ ಸ್ಮರಣೆ ಹಾಗೂ ನಾಮಸಂಕೀರ್ತನೆಯ ಪ್ರಭಾವದಿಂದ ತಪ, ಯಜ್ಞ, ಕ್ರಿಯೆ ಮುಂತಾದುವುಗಳಲ್ಲಿ ಏನೆಲ್ಲ ನ್ಯೂನತೆ ಇರುತ್ತದೋ, ಅವು ಶೀಘ್ರದಲ್ಲೇ ಪೂರ್ಣತೆಯನ್ನು ಪಡೆದುಕೊಳ್ಳುತ್ತದೆ, ಆ ಭಗವಾನ್ ಶ್ರೀಅಚ್ಯುತನನ್ನು ನಾನು ನಮಸ್ಕರಿಸುತ್ತೇನೆ.'

ಎಲ್ಲ ಕಾಮನೆಗಳ ಫಲ ಅರ್ಥಾತ್ ಸಿದ್ಧಿಗಳಲ್ಲೂ ಸಹ ಭಕ್ತಿಯ ಅವಸ್ಥಾನವಿರುತ್ತದೆ, ಹೀಗೆ (ಶ್ರೀಮದ್ಭಾ೨/೩/೧೦) ದಲ್ಲಿ ಹೇಳಿದೆ– "ಉದಾರ–ಬುದ್ಧಿಯುಕ್ತ ವ್ಯಕ್ತಿ ಏನಾದರೂ ಅವನು ನಿಷ್ಕಾಮನಾಗಿರಬಹುದು, ಸಮಸ್ತ ಕಾಮನೆಗಳಿಂದ ಯುಕ್ತನಾಗಿರಬಹುದು ಅಥವಾ ಮೋಕ್ಷವನ್ನು ಬಯಸುತ್ತಿರುವಂತವನಾಗಿ ಇರಬಹುದು– ಅವನು ತೀವ್ರ ಭಕ್ತಿಯೋಗದಿಂದ ಪರಮ ಪುರುಷ ಭಗವಂತನ ಆರಾಧನೆ ಮಾಡುತ್ತಿರಲಿ.' ಮತ್ತೆ ಪುನಃ (ಶ್ರೀಮದ್ಭಾ ೪/೩೧/೧೪)ದಲ್ಲಿ ಹೇಳುತ್ತಾರೆ– "ವೃಕ್ಷದ ಬುಡವನ್ನು ತೇವಮಾಡಿದರೆ ಯಾವರೀತಿ ಅದರ ತೊಗಟೆ, ಶಾಖೆ ಹಾಗೂ ಉಪಶಾಖೆ ಮುಂತಾದ ಎಲ್ಲಕ್ಕೂ ಪೋಷಣೆಯಾಗುತ್ತದೋ, ಹಾಗೂ ಭೋಜನದ ಮೂಲಕ ಪ್ರಾಣವು ತೃಪ್ತಿಯಾಗುವುದರಿಂದ ಯಾವರೀತಿ ಎಲ್ಲ ಇಂದ್ರಿಯಗಳೂ ತೃಪ್ತವಾಗುತ್ತವೋ, ಅದೇ ಪ್ರಕಾರ ಸರ್ವೇಶ್ವರನಾದ ಶ್ರೀಅಚ್ಯುತನಿಗೆ ಪೂಜೆ ಮಾಡುವುದರಿಂದ ಎಲ್ಲ ದೇವತೆಗಳ ಪೂಜೆ ತಾನಾಗಿಯೇ ಆಗಿಬಿಡುತ್ತದೆ." ಮುಂತಾದ ಶಾಸ್ತ್ರ ವಚನಗಳಿಂದ ಪ್ರಮಾಣಿತವಾಗುವುದೇನೆಂದರೆ ಶ್ರೀಹರಿಯ ಸೇವೆ (ಪ್ರಾರ್ಥನೆ) ಮಾಡುವುದರಿಂದ ಅನ್ಯ ಸಮಸ್ತ ದೇವತೆಗಳ ಉಪಾಸನೆಯು ಸ್ವತಃ ಆಗಿಬಿಡುತ್ತದೆ. ಈ ಉದಾಹರಣೆಯಿಂದಲೂ ಸಹ ಭಕ್ತಿಯ ಸಾರ್ವತ್ರಿಕತೆ ಅರ್ಥಾತ್ ಸಮಸ್ತ ಸ್ಥಾನಗಳು ಹಾಗೂ ಪರಿಸ್ಥಿತಿಗಳಲ್ಲಿ ಸಂಬಂಧವು ಅರ್ಥವಾಗುತ್ತದೆ. ಸ್ಕಂದಪುರಾಣದ ಬ್ರಹ್ಮ–ನಾರದ–ಸಂವಾದದಲ್ಲಿ ಹೀಗೆ ಹೇಳಲಾಗಿದೆ– "ದೇವದೇವೇಶನಾದ ಶಂಖ–ಚಕ್ರ–ಗದಾ–ಪದ್ಮಧಾರಿ ಶ್ರೀವಿಷ್ಣುವಿಗೆ ಅರ್ಚನೆ ಮಾಡುವುದರಿಂದ ಸಮಸ್ತ ದೇವತೆಗಳಿಗೂ ಸಹ ಅರ್ಚನೆ ಮಾಡಿದಂತಾಗುತ್ತದೆ, ಏಕೆಂದರೆ ಎಲ್ಲರೂ ಅವನಲ್ಲಿಯೇ

ಅಂತರ್ಗತರಾಗಿದ್ದಾರೆ." ಈ ರೀತಿ ಯಾರು ಭಜನೆಯನ್ನು ಮಾಡುತ್ತಾರೋ (ಕರ್ತ), ಶ್ರೀಭಗವಂತನ ಸೇವಗಾಗಿ ಯಾರು ಗೋವು ಇತ್ಯಾದಿಗಳನ್ನು ಕೊಡಲಾಗುವುದು (ಕರ್ಮ), ಯಾವ ಉಪಾಯದ ಮೂಲಕ ಭಕ್ತಿ ಮಾಡಲಾಗುವುದೋ (ಕಾರಣ), ಶ್ರೀಭಗವಂತನ ಪ್ರೀತಿಗಾಗಿ ಯಾವುದನ್ನು ಅರ್ಪಿಸುತ್ತಾರೋ (ಸಂಪ್ರದಾನ), ಹಸು ಇತ್ಯಾದಿ ಪಶುಗಳಿಂದ ಹಾಲು ಇತ್ಯಾದಿಗಳ ಮೂಲಕ ಭಗವಂತನಿಗೆ ನೈವೇದ್ಯ ಮಾಡಲಾಗುವುದು (ಅಪಾದಾನ), ಯಾವ ದೇಶ ಇತ್ಯಾದಿ ಅಥವಾ ಕುಲದಲ್ಲಿ ಯಾರಾದರೂ ಭಕ್ತಿಯ ಅನುಷ್ಠಾನ ಮಾಡುವುದು (ಧರ್ಮಸ್ಥಾನ) ಈ ಮುಂತಾದ ಎಲ್ಲದರ ಸಾರ್ಥಕತೆಯು ಪುರಾಣಗಳಲ್ಲಿ ನೋಡಬಹುದಾಗಿದೆ. ಇದರಿಂದಾಗಿ ಕರ್ತ (ನು), ಕರ್ಮ (ವನ್ನು), ಕಾರಣ (ದಿಂದ, ದ ಮೂಲಕ), ಸಂಪ್ರದಾನ (ಕ್ಕಾಗಿ), ಅಪಾದಾನ (ದಿಂದ), ಧರ್ಮಸ್ಥಾನ (ದಲ್ಲಿ, ದಿಂದ)- ಮುಂತಾದ ಎಲ್ಲ ಕಾರಕರಲ್ಲೂ ಭಕ್ತಿಯ ಅವಸ್ಥಾನವು ಕಾಣಿಸಲ್ಪಡುತ್ತದೆ. ಈ ಪ್ರಕಾರವಾಗಿ ಭಕ್ತಿಯ ಸಾರ್ವತ್ರಿಕತೆಯು ಸಾಬೀತಾಗಿದೆ.

'ಸರ್ವದಾ' ಶಬ್ದದ ಮೂಲಕ ಭಕ್ತಿ ಸನಾತವಾಗಿದೆ, ಇದನ್ನೂ ಸಹ ಹೇಳುತ್ತಿದ್ದಾರೆ. ಈ ವಿಷಯದಲ್ಲಿ ಸೃಷ್ಟಿಯ ಪೂರ್ವದಲ್ಲಿ ಭಕ್ತಿಯು ನೆಲಸಿತ್ತು ಎಂಬುದಕ್ಕೆ ಪ್ರಮಾಣವಾಗಿದೆ, ಹಾಗೂ (ಶ್ರೀಮದ್ಭಾ ೧೧/೧೪/೩) "ನಾನು ಬ್ರಾಹ್ಮ-ಕಲ್ಪದ ಪ್ರಾರಂಭದಲ್ಲಿ ಬ್ರಹ್ಮನಿಗೆ ಯಾವ ಉಪದೇಶವನ್ನು ನೀಡಿದ್ದೇನೋ, ಅದೇ ವೇದರೂಪ ವಾಣಿ ಪ್ರಳಯಕಾಲದಲ್ಲಿ ಕಾಲ-ಧರ್ಮದಿಂದ ನಷ್ಟವಾಗಿತ್ತು." ಸೃಷ್ಟಿಯ ನಡುವಿನಲ್ಲಿ ಅನೇಕ ಸ್ಥಾನಗಳಲ್ಲಿ, ಇಲ್ಲಿಯವರೆಗೂ ನಾಲ್ಕು ಪ್ರಕಾರದ ಪ್ರಳಯಗಳಲ್ಲೂ ಸಹ ಭಕ್ತಿಯು ನೆಲಸಿರುವುದನ್ನು ಕೇಳಬಹುದು. ಈ ರೀತಿ ಶ್ರೀಮದ್ಭಾಗವತದಲ್ಲಿ (೩/೭/೩೭) ಹೇಳಲಾಗಿದೆ- "ಪ್ರಳಯ-ಕಾಲದಲ್ಲಿ ಶ್ರೀಭಗವಂತನು ಶಯನಿಸುವಾಗ ಚಾಮರ-ವ್ಯಜನ ಮಾಡುವ ಸೇವಕರಂತೆ ಯಾರು ಅವನ ಸೇವೆ ಮಾಡುತ್ತಾರೆ ಹಾಗೂ ಯಾರೂ ಸುಪ್ತವಾಗಿರುತ್ತಾರೆ?" ಎಲ್ಲ ಯುಗಗಳಲ್ಲು ಭಕ್ತಿಯು ನೆಲಸಿರುತ್ತದೆ, ಶ್ರೀಮದ್ಭಾಗವತದಲ್ಲಿ (೧೨/೩/೫೨) ಹೀಗೆ ವಿವರಣೆ ಇದೆ- "ಸತ್ಯಯುಗದಲ್ಲಿ ಧ್ಯಾನ ಮಾಡುವವರಿಗೆ, ತ್ರೇತಾಯುಗದಲ್ಲಿ ಯಜ್ಞಾನುಷ್ಠಾನವನ್ನು ಮಾಡುವವರಿಗೆ, ದ್ವಾಪರದಲ್ಲಿ ಸೇವೆ ಮಾಡುವವರಿಗೆ ಯಾವುದು ಪ್ರಾಪ್ತವಾಗುತ್ತದೋ, ಆ ಎಲ್ಲವನ್ನು ಕಲಿಕಾಲದಲ್ಲಿ ಕೇವಲ ಹರಿ-ಸಂಕೀರ್ತನೆಯ ಮೂಲಕವೇ ಪ್ರಾಪ್ತಿಸಿಕೊಳ್ಳಬಹುದಾಗಿದೆ." ಮತ್ತೆ ಅಧಿಕವೇನಿದೆ? ವಿಷ್ಣುಪುರಾಣದಲ್ಲೂ ಸಹ ಹೀಗೆ ಹೇಳಲಾಗಿದೆ- "ಯಾವ ಕ್ಷಣದಲ್ಲಿ ಶ್ರೀವಾಸುದೇವನ ಸ್ಮರಣೆಯಾಗುವುದಿಲ್ಲವೋ, ಆ ಕ್ಷಣವೇ ಜೀವಿಗೆ ವಾಸ್ತವಿಕ ವಿಷಮ ಕ್ಷಯ, ಮಹಾದೋಷ, ಮೋಹ ಹಾಗೂ ವಿಭ್ರಮೆಯಾಗುತ್ತದೆ." ಎಲ್ಲ ಸ್ಥಾನಗಳಲ್ಲು ಭಕ್ತಿ ಮಾಡಲಾಗುತ್ತದೆ, ಯಾವ ರೀತಿ ಗರ್ಭದಲ್ಲಿರುವ ಸಮಯದಲ್ಲಿ ಶ್ರೀನಾರದರ ಮುಖದಿಂದ ಹರಿ-ಕಥೆಯ ಶ್ರವಣಿಸಿದ ಪ್ರಹ್ಲಾದ ಮಹಾರಾಜರ ಹೃದಯದಲ್ಲಿ ಭಕ್ತಿ ಪ್ರಕಟವಾಗಿತ್ತು- ಇದು ಪ್ರಸಿದ್ಧವಾದದ್ದು; ಬಾಲ್ಯಕಾಲದಲ್ಲಿ ಧ್ರುವ ಮುಂತಾದವರು, ಯೌವನಕಾಲದಲ್ಲಿ ಅಂಬರೀಷ ಮುಂತಾದವರು, ವೃದ್ಧಾವಸ್ಥೆಯಲ್ಲಿ

ಧೃತರಾಷ್ಟ್ರ, ಮೃತ್ಯುಕಾಲದಲ್ಲಿ ಅಜಾಮಿಳ ಹಾಗೂ ಸ್ವರ್ಗ–ಪ್ರಾಪ್ತಿಕಾಲದಲ್ಲಿ ಚಿತ್ರಕೇತು ಮಹಾರಾಜ ಮುಂತಾದವರಲ್ಲೂ ಸಹ ಭಗವತ್–ಭಕ್ತಿಯನ್ನು ಕಾಣಬಹುದಾಗಿದೆ. ನರಕ ಪ್ರಾಪ್ತಿಯಲ್ಲೂ ಸಹ ಭಕ್ತಿ ಕೇಳಬಹುದಾಗಿದೆ, ನೃಸಿಂಹಪುರಾಣದಲ್ಲಿ ಹೀಗೆ ಹೇಳಿದೆ– "ಯಾವ–ಯಾವ ಭಾವದಿಂದ ನರಕದ ಜನರು ಹರಿನಾಮ–ಸಂಕೀರ್ತನ ಮಾಡುವರೋ, ಆ–ಆ ಭಾವದಿಂದ ಅವರು ಹರಿಭಕ್ತಿಯನ್ನು ಶಿರದಲ್ಲಿಟ್ಟುಕೊಂಡು ಸ್ವರ್ಗಕ್ಕೆ ತೆರಳುತ್ತಾರೆ." ಆದ್ದರಿಂದ ದುರ್ವಾಸ ಮುನಿಗಳು ಹೀಗೆ ಹೇಳಿದ್ದಾರೆ (ಶ್ರೀಮದ್ಭಾ ೯/೪/೬೨)– "ಯಾರ ನಾಮವನ್ನು ಉಚ್ಚಾರಣೆ ಮಾಡುವುದರಿಂದ ನರಕ ವಾಸಿ ಜೀವಿಗಳೂ ಸಹ ಮುಕ್ತಿಯನ್ನು ಪ್ರಾಪ್ತಿಸಿಕೊಳ್ಳುತ್ತಾರೆ." ಹಾಗೂ (ಶ್ರೀಮದ್ಭಾ ೨/೧/೧೧) ದಲ್ಲಿ ಹೇಳಲಾಗಿದೆ– "ಯಾವ ಜನರು ಲೋಕ ಅಥವಾ ಪರಲೋಕದಲ್ಲಿ ಯಾವುದೇ ವಸ್ತುವಿನ ಕಾಮನೆ ಮಾಡುವರೋ, ಅಥವಾ ಇದಕ್ಕೆ ವಿಪರೀತವಾಗಿ ಸಂಸಾರದಲ್ಲಿ ದುಃಖವನ್ನು ಅನುಭವಿಸಿ ಇದರಿಂದ ಯಾರು ವಿರಕ್ತರಾಗಿದ್ದಾರೋ ಅಥವಾ ಯಾರು ನಿರ್ಭಯ ಮೋಕ್ಷಪದವನ್ನು ಬಯಸುವರೋ, ಅಂತಹ ಸಾಧಕರಿಗಾಗಿ ಹಾಗೂ ಯೋಗಸಂಪನ್ನ ಸಿದ್ಧ ಜ್ಞಾನಿಗಳಿಗಿಯೂ ಸಹ ಸಮಸ್ತ ಶಾಸ್ತ್ರಗಳ ನಿರ್ಣಯವೇನೆಂದರೆ ಎಲ್ಲ ಸ್ಥಾನಗಳಲ್ಲು ಭಕ್ತಿಯ ಯೋಗ್ಯತೆಯ ದೃಷ್ಟಾಂತಗಳನ್ನು ಕಾಣಬಹುದಾಗಿದೆ.

ಮತ್ತೆ ಪುನಃ ಆ ಎಲ್ಲ ಸ್ಥಾನಗಳಲ್ಲಿ ಕೆಲವು ವ್ಯತಿರೇಕ ಉದಾಹರಣೆಗಳನ್ನೂ ಸಹ ಕಾಣಿಸಲ್ಪಡುತ್ತದೆ, ಗರುಡಪುರಾಣದಲ್ಲಿ ಹೀಗೆ ವಿವರಣೆ ಇದೆ– "ಒಬ್ಬನು ಸಮಸ್ತ ವೇದಗಳಲ್ಲಿ ಪಾರಗಂತ ಹಾಗೂ ಎಲ್ಲ ಶಾಸ್ತ್ರಗಳ ಅರ್ಥದಲ್ಲಿ ಅಭಿನ್ನನಾಗಿದ್ದರೂ ಸಹ ಅವನು ಏನಾದರೂ ಸರ್ವೇಶ್ವರ ಶ್ರೀವಿಷ್ಣುವಿನ ಭಕ್ತನಲ್ಲದಿದ್ದರೇ ಆಗ ಆ ವ್ಯಕ್ತಿಯನ್ನು ಅಧಮನು ಎಂದೇ ತಿಳಿಯಬೇಕು." ಬೃಹನ್ನಾರದೀಯಪುರಾಣದಲ್ಲಿಯೂ ಸಹ ಹೀಗೆ ಹೇಳಿದೆ,– "ವಿಷ್ಣುಭಕ್ತಿಹೀನ ಮನುಷ್ಯರಿಗೆ ನಾಲ್ಕು ವೇದಗಳ ಪಾಠ, ಶಾಸ್ತ್ರ ಇತ್ಯಾದಿಗಳ ಅನುಶೀಲನೆ, ತೀರ್ಥ ಸೇವೆ, ತಪಸ್ಸು ಹಾಗೂ ಯಜ್ಞ ಅನುಷ್ಠಾನ ಇತ್ಯಾದಿಗಳನ್ನು ಮಾಡುವುದರಿಂದ ಪ್ರಯೋಜನವೇನಿದೆ?" (ಶ್ರೀಮದ್ಭಾ ೨/೪/೧೭) ದಲ್ಲಿಯೂ ಸಹ ಹೀಗೆ ಹೇಳಲಾಗಿದೆ– "ತಪಸ್ವಿ, ದಾನಶೀಲ, ಯಶಸ್ವಿ, ಮನಸ್ವಿ, ಮಂತ್ರವಿತ್ ಹಾಗೂ ಸದಾಚಾರಿ ವ್ಯಕ್ತಿಗಳೂ ಸಹ ತಮ್ಮ ಕರ್ಮ ಇತ್ಯಾದಿಗಳನ್ನು ಸಮರ್ಪಣೆ ಮಾಡದಿದ್ದರೆ ಮಂಗಳವನ್ನು ಪ್ರಾಪ್ತಿಸಿಕೊಳ್ಳಲಾಗುವುದಿಲ್ಲ, ಆ ಸುಮಂಗಳ ಕೀರ್ತನಾದ ಶ್ರೀಭಗವಂತನಿಗೆ ನಾನು ಮತ್ತೆ–ಮತ್ತೆ ಪ್ರಣಾಮಗಳನ್ನು ಮಾಡುವೆನು." ಶ್ರೀಮದ್ಭಾಗವತದಲ್ಲಿ (೫/೧೯/೨೪) ಹೀಗೆ ಹೇಳಿದೆ– "ಎಲ್ಲಿ ವೈಕುಂಠನ ಹರಿಕಥಾರೂಪ ಸುಧಾ (ಅಮೃತದ) ಮಂದಾಕಿನಿಯು ಪ್ರವಾಹಿತವಾಗುವುದಿಲ್ಲವೋ, ಅಲ್ಲಿ ಭಗವಂತನಲ್ಲಿ ಆಶ್ರಿತರಾದ ಸಾಧು ಭಾಗವತಗಣರು ಇರುವುದಿಲ್ಲ, ಎಲ್ಲಿ ಯಜ್ಞೇಶ್ವರ ಶ್ರೀವಿಷ್ಣುವಿನ ಮಹೋತ್ಸವ–ಪೂಜೆ ಮುಂತಾದವುಗಳು ಆಗುವುದಿಲ್ಲವೋ, ಆ ಸ್ಥಳವು ಬ್ರಹ್ಮಲೋಕವೇ ಆಗಿದ್ದರೂ ಸಹ ಅದನ್ನು ಬಯಸಬೇಡ."

ಶ್ರೀಮದ್ಭಾಗವತದಲ್ಲಿ (೧೦/೫೯/೪೧) ಹೇಳಿದೆ- "ಯಾವ ಇಂದ್ರನು ತಲೆ ತಗ್ಗಿಸಿ ತನ್ನ ಕಿರೀಟ ತುದಿಯಿಂದ ಭಗವಾನ್ ಶ್ರೀಕೃಷ್ಣನ ಶ್ರೀಚರಣಗಳನ್ನು ಸ್ಪರ್ಶಿಸಿ ತನ್ನ ಅಭೀಷ್ಟ ಸಿದ್ಧಿಗಾಗಿ ಯಾಚಿಸಿದ್ದರು, ಅಹೋ! ಅವರೇ ಈಗ ಅದೇ ಶ್ರೀಭಗವಂತನೊಂದಿಗೆ ಯುದ್ಧ ಮಾಡುತ್ತಿದ್ದಾರೆ. ಆದ್ದರಿಂದ ದೇವತೆಗಳ ಐಶ್ವರ್ಯ-ಮಧಕ್ಕೆ ಧಿಕ್ಕಾರ." ಶ್ರೀಮದ್ಭಾವತದಲ್ಲಿ (೩/೨೯/೧೩)- "ನಾನು ನನ್ನ ನಿಷ್ಕಾಮ ಭಕ್ತರಿಗೆ ಸಾಲೋಕ್ಯ, ಸಾರ್ಷ್ಟಿ, ಸಾಮೀಪ್ಯ, ಸಾರೂಪ್ಯ ಹಾಗೂ ಸಾಯುಜ್ಯ- ಈ ಐದು ಪ್ರಕಾರದ ಮುಕ್ತಿಗಳನ್ನು ಕೊಡಲು ಬಯಸಿದರೂ ಸಹ ಅವರು ನನ್ನ ಸೇವಗೆ ಅತಿರಿಕ್ತವಾಗಿ ಮತ್ತೇನನ್ನೂ ಸಹ ಗ್ರಹಿಸುವುದಿಲ್ಲ." ಶ್ರೀಮದ್ಭಾಗವತದಲ್ಲಿ (೭/೭/೫೨)- "ನಿಷ್ಕಾಮ ಭಕ್ತಿಯ ಮೂಲಕ ಶ್ರೀಹರಿ ಯಾವ ಪ್ರಕಾರ ಪ್ರಸನ್ನನಾಗುತ್ತಾನೋ, ಹಾಗೆ ದಾನ, ತಪಸ್ಸು, ಅರ್ಚನೆ, ಶೌಚ ಅಥವಾ ವ್ರತ ಇತ್ಯಾದಿಗಳ ಮೂಲಕ ಆ ಪ್ರಕಾರವಾಗಿ ಪ್ರಸನ್ನನಾಗುವುದಿಲ್ಲ, ಏಕೆಂದರೆ ಅವನ ಸೇವೆಗೆ ಅತಿರಿಕ್ತವಾಗಿ ಮತ್ತೇನೇ ಇರಲಿ, ಅದೇಲ್ಲವೂ ಕೇವಲ ವಿಡಂಬನಮಾತ್ರವಷ್ಟೆ." ಶ್ರೀಮದ್ಭಾಗವತದಲ್ಲಿ (೧/೫/೧೨) ಹೇಳಲಾಗಿದೆ- "ವಿಷ್ಣುಭಕ್ತಿ ಇಲ್ಲದ ನಿರೂಪಾಧಿಕ ಜ್ಞಾನವು ನಿಷ್ಕಾಮವಾದರೂ ಸಹ ಯಾವಾಗ ಅಧಿಕ ಶೋಭೆಯನ್ನು ಪಡೆಯುವುದಿಲ್ಲವೋ, ಆಗ ಸಾಧನ ಹಾಗೂ ಫಲಕಾಮದಲ್ಲಿ ದುಃಖ ಸ್ವರೂಪದ ಯಾವ ಕರ್ಮವಿದೆಯೋ, ಅದು ಅಕಾಮವಾದರೂ ಸಹ ಭಗವಂತನ ಚರಣಗಳಲ್ಲಿ ಅರ್ಪಿತವಾಗದಿದ್ದರೇ ಯಾವ ರೀತಿ ಶೋಭೆಯನ್ನು ಪಡೆದುಕೊಳ್ಳುತ್ತದೆ?" ಶ್ರೀಮದ್ಭಾಗವತದಲ್ಲಿ (೩/೧೫/೪೮) ಹೀಗೆ ವರ್ಣನೆ ಇದೆ- "ಹೇ ಭಗವಾನ್! ನಿಮ್ಮ ಲೀಲಾಕಥೆಯು ಅತ್ಯಂತ ಪವಿತ್ರ ಹಾಗೂ ಕೀರ್ತನೀಯವಾದದ್ದು. ಯಾವ ಬುದ್ಧಿವಂತ ವ್ಯಕ್ತಿಯು ನಿಮ್ಮ ಶ್ರೀಚರಣಕಮಲಗಳಲ್ಲಿ ಆಶ್ರಿತನಾಗಿ ಆ ಲೀಲಾಕಥೆಗಳ ರಸದ ಆಸ್ವಾದನೆಯನ್ನು ಅನುಭವಿಸುತ್ತಾನೋ, ಅವನು ಆ ಭೋಗಮೂಲಕ ಹಾಗೂ ಭಯಜನಕ, ತುಚ್ಛ ಇಂದ್ರಾದಿ-ದೇವ-ಪದವಿಯ ಮಾತೇಕೆ, ನಿಮ್ಮ ಅತ್ಯಂತಿಕ ಕೃಪಾರೂಪದ ಯಾವ ಮುಕ್ತಿ ಇದೆಯೋ, ಅದನ್ನೂ ಸಹ ನಿರಾಕರಿಸುತ್ತಾನೆ." ಮುಂತಾದ ಅನೇಕ ಶ್ಲೋಕಗಳಲ್ಲಿ ವ್ಯಕ್ತಿರೇಕ ಪ್ರಮಾಣವು ಕಾಣಿಸಲ್ಪಡುತ್ತದೆ.

ತದನಂತರ "ಸವತ್ರ ಸರ್ವದಾ ಯಾವುದು ದೃಢವಾಗಿದೆ", ಈ ವಾಕ್ಯದಲ್ಲಿ 'ಸರ್ವತ್ರ' ಹಾಗೂ 'ಸರ್ವದಾ' ಈ ಎರಡು ಶಬ್ದಗಳ ಸಂಯೋಗವು ಒಂದೇಸಮಯದಲ್ಲಿ ನಿರೂಪಣೆಯಾಗಿದೆ; ಶ್ರೀಮದ್ಭಾಗವತದಲ್ಲಿ (೨/೨/೩೬) ಹೀಗೆ ಹೇಳಲಾಗಿದೆ- "ಆದ್ದರಿಂದ ಜೀವಿಗಳಿಗೆ ಎಲ್ಲ ಸಮಯದಲ್ಲಿ, ಎಲ್ಲ ದೇಶಗಳಲ್ಲಿ, ಎಲ್ಲ ಅಂತಃಕರಣದಿಂದ ಶ್ರೀಹರಿಯ ಶ್ರವಣ, ಕೀರ್ತನೆ ಹಾಗೂ ಸ್ಮರಣೆ ಮಾಡುವುದೇ ಕರ್ತವ್ಯ." ಪುನಃ "ಅನ್ವಯ-ವ್ಯತಿರೇಕ ಭಾವದಿಂದ ಸರ್ವತ್ರ ಹಾಗೂ ಸರ್ವದಾ ಯಾವುದು ದೃಢಪಡಿಸುತ್ತದೋ"- ಈ ವಿಷಯದಲ್ಲಿ ಪ್ರಮಾಣವುಂಟು, ಹಾಗೂ ಪದ್ಮಪುರಾಣದಲ್ಲಿ- "ನಿರಂತರ ಶ್ರೀವಿಷ್ಣುವಿನ ಸ್ಮರಣೆಯನ್ನು ಮಾಡು ಹಾಗೂ ಎಂದಿಗೂ ಅವನನ್ನು ಮರೆಯಬೇಡ" ಇತ್ಯಾದಿ. ಎಲ್ಲರಿಗೂ ಭಕ್ತಿಯ ಅನುಷ್ಠಾನದ

ಪ್ರಮಾಣವನ್ನು ಹೀಗೆ ಶ್ರೀಮದ್ಭಾಗವತದಲ್ಲಿ (೧೦/೮೭/೧೬) ಹೇಳಲಾಗಿದೆ– "ಕವಿಗಣ ಮನುಷ್ಯರ ಗತಿಯ ವಿಚಾರ ಮಾಡುವಾಗ ನಿಮ್ಮ ಶ್ರೀಚರಣಗಳ ಸೇವೆಯನ್ನೇ ವೈದಿಕ ಧರ್ಮದ ರೂಪದಲ್ಲಿ ಧೃಢಪಡಿಸುತ್ತಾರೆ." ಈ ಶ್ಲೋಕದಂತೆ ಶ್ರೀಮದ್ಭಾಗವತದ (೨/೨/೩೩)– "ಇದಕ್ಕಿಂತಲೂ ಬೇರೆ ಯಾವುದೇ ಶ್ರೇಷ್ಠ ಪಥವಿಲ್ಲ" ಈ ಶ್ಲೋಕದಿಂದ ಆರಂಭಿಸಿ ಶ್ರೀಮದ್ಭಾಗವತದಲ್ಲಿ (೨/೨/೩೬)– "ಆದ್ದರಿಂದ ಜೀವಿಗಳಿಗೆ ಎಲ್ಲ ಸಮಯದಲ್ಲು, ಎಲ್ಲ ನಿಟ್ಟಿನಲ್ಲು, ಸರ್ವ ಅಂತಃಕರಣದಿಂದ ಕೇವಲ ಶ್ರೀಹರಿಯ ಶ್ರವಣ, ಕೀರ್ತನೆ ಹಾಗೂ ಸ್ಮರಣೆ ಮಾಡುವುದೇ ಕರ್ತವ್ಯ." ಈ ಶ್ಲೋಕದವರೆಗು 'ಮನುಷ್ಯರ' ಶಬ್ದ ವ್ಯಾಪ್ತಿ– ಅರ್ಥದಲ್ಲಿ "ಜೀವಿಗಳಿಗಾಗಿ" ತಿಳಿಸಲಾಗುತ್ತಿದೆ. ಹೀಗೂ ಸಹ ಹೇಳಲಾಗಿದೆ– ಕರ್ಮಿಗಳ ಯಾವ ಕರ್ಮವಿದೆ– ಅದು ಕೇವಲ ಅವನ ವೈರಾಗ್ಯ ಅಥವಾ ಪರಲೋಕದಲ್ಲಿ ಭೋಗಮಯ ಶರೀತ ಪ್ರಾಪ್ತಿಯವರೆಗು ಮಾತ್ರವೇ ಸೇರುತ್ತದೆ; ಯೋಗಿಗಳ ಯೋಗವು– ಸಿದ್ಧಿಯವರೆಗೂ ಮುಟ್ಟುತ್ತದೆ; ಪ್ರಕೃತಿವಾದಿಯ ಸಾಂಖ್ಯವು– ಆತ್ಮಜ್ಞಾನದ ಅವಿದ್ಯೆಯವರೆಗೂ ಮುಟ್ಟುತ್ತದೆ; ಜ್ಞಾನಿಗಳ ಜ್ಞಾನವು– ಮೋಕ್ಷದವರೆಗೂ ತಲಪುತ್ತದೆ. ಈ ಪ್ರಕಾರವಾಗಿ ಶಾಸ್ತ್ರಗಳಲ್ಲಿ ಕರ್ಮ–ಜ್ಞಾನ–ಯೋಗ ಮುಂತಾದ ಅನುಷ್ಠಾನದಲ್ಲಿ ಯಾವುದಾದರೂ ಒಂದು ದೋಷ ಅಥವಾ ತ್ರುಟಿಯು ಕಾಣಿಸಲ್ಪಡುತ್ತದೆ, ಆದರೆ ಹರಿಭಕ್ತಿಯಲ್ಲಿ ಹಾಗಲ್ಲ. ಅನ್ವಯ–ವ್ಯತಿರೇಕ ಭಾವದಿಂದ ಸರ್ವತ್ರ, ಸರ್ವದಾ ಆ ಎಲ್ಲ ಮಹಿಮೆಗಳ ಮೂಲಕ ಪ್ರತಿಪಾದಿಸುವ ಕಾರಣ ಇಂತಹ ರಹಸ್ಯ ಅರ್ಥಾತ್ ಪ್ರೇಮಭಕ್ತಿಯ ಅಂಗತ್ವದ ಉಪಯುಕ್ತವೇ ಆಗಿದೆ. ಆದ್ದರಿಂದ ರಹಸ್ಯ ಅರ್ಥಾತ್ ಪ್ರೇಮಭಕ್ತಿಯ ಅಂಗ (ಸಾಧನಭಕ್ತಿ ವಿಷಯ) ಆದ ಕಾರಣ ಈ ಶ್ಲೋಕವೂ ಸಹ ರಹಸ್ಯಮಯವಾಗಿದೆ ಅರ್ಥಾತ್ ಜ್ಞಾನಮೂಲಕ ಅನ್ಯ ಅರ್ಥಗಳ ಮೂಲಕ ಅವಿತುಕೊಂಡಿರುವ ರೂಪದಲ್ಲೇ ಹೇಳಲಾಗಿದೆ.

ಅದಾಗ್ಯೂ ಆತ್ಮವಿದ್ಯೆಯ ಮೂಲಕ ಅನ್ಯ ಅರ್ಥದ ಸಂಗೋಪನದ ಕಾರಣ ಈ ಸಾಧನಭಕ್ತಿಯೂ ಅಲ್ಲಲ್ಲಿ ಬಾಹ್ಯ ಬ್ರಹ್ಮಜ್ಞಾನ ಇತ್ಯಾದಿಯ ಸಾಧನವಾಗಬಹುದಾಗಿದೆ– ಎಂದು ಹೀಗೆ ಅರ್ಥಮಾಡಿಕೊಳ್ಳಲಾಗುತ್ತದೆ. ಆದ್ದರಿಂದ ಇಂತಹ ಪ್ರಕ್ರಿಯೆ ಇದೆ– ಸಾಧನಭಕ್ತಿಯ ಸರ್ವ ಸ್ಥಿರತ್ವ ಹಾಗೂ ಸನಾತನವಾದ ಕಾರಣ ಅದು ಮೊದಲು ಶ್ರೀಗುರುವಿನ ಹತ್ತಿರ ಗ್ರಹಣೀಯವಾದದ್ದು, ತದನಂತರ ಅದರ ಅನುಷ್ಠಾನದಿಂದ ಪ್ರಥಮವಾಗಿ ವೈರಾಗ್ಯ, ಸ್ವಾಭಾವಿಕ ಆತ್ಮಜ್ಞಾನ ಹಾಗೂ ವಿಜ್ಞಾನರೂಪ ಬಾಹ್ಯ ಸಾಧನವು ಉಪಸ್ಥಿತವಾಗುತ್ತದೆ, ಆದ್ದರಿಂದ ಹೀಗೆ ಪ್ರಾಪ್ತವಾದ ಜ್ಞಾನವು ಪ್ರಾಸಂಗಿಕವಾಗುತ್ತದೆ. ಈ ರೀತಿ ಆಗುವುದರಿಂದ ಅದೇ ಜ್ಞಾನವು ಕೇವಲ ಭಕ್ತಿಯನ್ನು ಮಾತ್ರ ಅನುಸರಣೆ ಮಾಡುತ್ತದೆ, ಏಕೆಂದರೆ ಗೀತೆಯಲ್ಲಿ (೧೮/೫೪) ಹೀಗೆ ವಿವರಣೆ ಇದೆ– "ಬ್ರಹ್ಮನಲ್ಲಿ ಅವಸ್ಥಿತನಾದ ಪ್ರಸನ್ನಚಿತ್ತ ವ್ಯಕ್ತಿಯು ಶೋಕಿಸುವುದೂ ಇಲ್ಲ ಹಾಗೂ ಏನನ್ನೂ ಬಯಸುವುದಿಲ್ಲ. ಅವನು ಎಲ್ಲವನ್ನು (ವಸ್ತುಗಳನ್ನು ಹಾಗೂ ಪ್ರಾಣಿಗಳನ್ನು) ಸಮದೃಷ್ಟಿಯಿಂದ ಕಾಣುವಂತವನಾಗಿ ಪ್ರೇಮಲಕ್ಷಣಯುಕ್ತವಾದ ನನ್ನ ಭಕ್ತಿಯನ್ನು ಪ್ರಾಪ್ತಿಸಿಕೊಳ್ಳುತ್ತಾನೆ." ಶ್ರೀಮದ್ಭಾಗವತದಲ್ಲಿ (೧/೭/೧೦) ಹೇಳಿದೆ– "ಶ್ರೀಹರಿ

ಎಂತಹ ಗುಣಶಾಲಿ ಎಂದರೆ ಆತ್ಮಾರಾಮ ಮುನಿಯು ಜೀವನ್ಮುಕ್ತನಾಗಿದ್ದರೂ ಸಹ ಆ ನಿಯಮಾನ್ವಿತ ಶ್ರೀಭಗವಂತನಲ್ಲಿ ಅಹೈತುಕ ಭಕ್ತಿಯನ್ನು ಮಾಡುತ್ತಾನೆ." ಆಗ ಶ್ರೀಭಗವಂತನ ಜ್ಞಾನ ಹಾಗೂ ವಿಜ್ಞಾನವು ಪ್ರಾಪ್ತವಾಗುತ್ತದೆ. ಆದ್ದರಿಂದ ಜ್ಞಾನ, ವಿಜ್ಞಾನ, ರಹಸ್ಯ ಹಾಗೂ ಅದರ ಅಂಗದ ಉಪದೇಶದ ಮೂಲಕ ಈ ಚತುಃಶ್ಲೋಕದಲ್ಲೂ ಸಹ ಶ್ರೀಭಗವಂತನನ್ನೇ ವರ್ಣಿಸಿದ್ದಾರೆ.

ಶ್ರೀಮದ್ಭಾಗವತಲ್ಲಿ (೨/೯/೯) ಹೀಗೆ ಹೇಳಲಾಗಿದೆ- "ಅನಂತರ ಭಗವಾನ್ ಶ್ರೀನಾರಾಯಣನು ಬ್ರಹ್ಮನ ತಪಸ್ಸಿನಿಂದ ಪ್ರಸನ್ನನಾಗಿ ಅವರಿಗೆ ತನ್ನ ಧಾಮ ವೈಕುಂಠದ ದರ್ಶನವನ್ನು ಮಾಡಿಸಿದರು." ಈ ಶ್ಲೋಕದಲ್ಲಿ ಹೇಳಿರುವ 'ಭಗವಾನ್' ಶಬ್ದದ ಮೂಲಕ ಹಾಗೂ ಶ್ರೀಮದ್ಭಾಗವತ (೨/೯/೧೪) ಶ್ಲೋಕದಲ್ಲಿ- "ಆ ವೈಕುಂಠದಲ್ಲಿ ಅವರು ಸಮಸ್ತ ಭಕ್ತರ ಪ್ರಭು ವಿಭೂ ಭಗವಂತನ ತನ್ನ ಸಹೋದ್ಯೋಗಿಗಳ ಮೂಲಕ ಪರಿವೇಷ್ಟಿತ ರೂಪದಲ್ಲಿ ದರ್ಶನ ಪಡೆದರು." ಈ ವಚನದಲ್ಲಿ 'ಭಗವಾನ್' ಶಬ್ದದಿಂದ, "ಪರಾರ್ಧದ (ಬ್ರಹ್ಮನ ಆಯುವಿನಲ್ಲಿ ಅರ್ಧ) ಅಂತ್ಯದಲ್ಲಿ ಅವರು ಪ್ರತಿಬದ್ಧರಾಗಿ ಗೋಪವೇಶದಲ್ಲಿ ನನ್ನ ಮುಂದೆ ಆವಿರ್ಭವಿಸಿದರು"- ಈ ತಾಪನೀ-ಶ್ರುತಿಯ ಸಹಾಯದಿಂದ ಶ್ರೀಕೃಷ್ಣತ್ವವು ಸೂಚಿತವಾದ್ದರಿಂದ ವಕ್ತಾರನು ಸ್ವಯಂ ಶ್ರೀಭಗವಂತನೇ ಆಗಿದ್ದಾನೆ- ಇದು ಸ್ಪಷ್ಟವಾಗುತ್ತದೆ. ಆದ್ದರಿಂದ ಈ ಮಹಾಪುರಾಣದ ಹೆಸರು 'ಶ್ರೀಮದ್ಭಾಗವತ'; ಹೀಗೆ ಶ್ರೀಮದ್ಭಾಗವತದಲ್ಲಿ (೧೨/೧೩/೧೯) ಹೇಳಿದೆ- "ಮೊದಲು ಬ್ರಹ್ಮಕಲ್ಪದ ಆದಿಯಲ್ಲಿ ಶ್ರೀಭಗವಂತನು ಯಾವ ಬ್ರಹ್ಮನ ಹೃದಯದಲ್ಲಿ ಈ ಭಾಗವತರೂಪ ದಿವ್ಯ ಭಗವತ್-ತತ್ವ-ಜ್ಞಾನದ ಜ್ಯೋತಿಯನ್ನು ಪ್ರಜ್ವಲಿಸಿದ್ದನೋ, ಅದೇ ಅಶೋಕ-ಅಭಯ-ಅಮೃತ ಪರಮ ಸತ್ಯವನ್ನು ನಾವು ಧ್ಯಾನಿಸುತ್ತೇವೆ." ಈ ವಾಕ್ಯದಲ್ಲಿ 'ಪುರಾ' ಶಬ್ದದ ಮೂಲಕ ಶ್ರೀಭಗವಂತನೇ ಸ್ವಯಂ ವಕ್ತಾರನಾಗಿರುವುದನ್ನು ಹೇಳಲಾಗಿದೆ, ಏಕೆಂದರೆ ಶ್ರೀಮದ್ಭಾಗತದಲ್ಲಿ (೨/೬/೪೨) ಹೀಗೆ ಹೇಳಿದೆ- "ಈ ಪರಮೇಶ್ವರನಾದ ಶ್ರೀಕೃಷ್ಣನೇ ಪ್ರಥಮ ಪುರುಷಾವತಾರ ಕಾರಣಾರ್ಣವಶಾಯಿ ಆಗಿದ್ದನು"- ಇಂತಹ ನಾಮವು ಕಾಣಿಸಲ್ಪಡುತ್ತದೆ. ಆದ್ದರಿಂದ ಶ್ರೀಮದ್ಭಾಗವತದ (೧೨/೧೩/೧೦) ಈ ಶ್ಲೋಕದಲ್ಲಿ- "ಪೂರ್ವಕಾಲದಲ್ಲಿ ಈ ಶ್ರೀಮದ್ಭಾಗವತವನ್ನು ಶ್ರೀಭಗವಂತನು ಭವ ಸಂಸಾರದಿಂದ ಭಯಭೀತರಾದ ಜೀವಿಗಳ ಮಂಗಳಕ್ಕಾಗಿ ಪರಮ ಕರುಣಾಪೂರ್ವಕ ಪದ್ಮಯೋನಿ (ಕಮಲದಲ್ಲಿ ಜನಿಸಿದ) ಬ್ರಹ್ಮನ ಹತ್ತಿರ ಪ್ರಕಟಿಸಿದ್ದರು." ಈ ವಾಕ್ಯದಲ್ಲಿಯೂ ಸಹ 'ಭಗವಂತ' ಶಬ್ದದ ಪ್ರಯೋಗವಾಗಿದೆ, ಅರ್ಥಾತ್ ಸ್ವಯಂ ಶ್ರೀಭಗವಂತನೇ ಅದೇ ಸ್ಥಾನದಲ್ಲೇ ಅಮಿತ ಮಹಾವೈಕುಂಠ ಪ್ರಕಾಶಕರ ನಾಭಿಕಮಲದಲ್ಲಿ ಅವಸ್ಥಿತನಾದ ಬ್ರಹ್ಮನಲ್ಲಿ ಈ ಭಾಗವತ ಪುರಾಣವನ್ನು ಪ್ರಕಾಶಿತಗೊಳಿಸಿದನು. ಹೀಗೆ ಅರ್ಥ ದ್ವಿತೀಯ-ಸ್ಕಂಧದ ಇತಿಹಾಸದ ಅನುಸಾರವೂ ಆಗಿದೆ. ॥೩೫॥

ಶ್ರೀಶ್ರೀಧರ-ಸ್ವಾಮೀಪಾದರು

ಸಾಧನಮಾಹ-ಆತ್ಮನಸ್ಯತ್ವಜಿಜ್ಞಾಸುನಾ ಎತಾವದೇವ ಜಿಜ್ಞಾಸ್ಯಂ ವಿಚಾರ್ಯಮ್ । ತದೇವಾಹ- ಅನ್ವಯಃ ಕಾರ್ಯೇಷು ಕಾರಣತ್ವೇನಾನುವೃತ್ತಿಃ, ಕಾರಣಾವಸ್ಥಾಯಾಂಚ ತೇಭ್ಯೋ ವ್ಯತಿರೇಕಃ । ತಥಾ ಜಾಗ್ರದಾದ್ಯವಸ್ಥಾಸು ತತ್ತತ್ಸಾಕ್ಷಿತಯಾನ್ವಯಃ । ವ್ಯತಿರೇಕಶ್ಚ ಸಮಾಧ್ಯಾದೌ । ಏವಮನ್ವಯವ್ಯತಿರೇಕಾಭ್ಯಾಂ ಯತ್ ಸ್ಯಾತ್ ಸರ್ವತ್ರ ಸರ್ವದಾ ಚ, ತದೇವಾತ್ಮೇತಿ ॥೩೫॥

ಭಾವಾನುವಾದ- ಈಗ ಶ್ರೀಭಗವಂತನು ಸಾಧನೆಯ ಮಾತನ್ನು ವಿವರಿಸುತ್ತಿದ್ದಾನೆ, ಅರ್ಥಾತ್ ಆತ್ಮತತ್ವದ ಜಿಜ್ಞಾಸು ವ್ಯಕ್ತಿಯ ಯಾವ ಜಿಜ್ಞಾಸ್ಯ ಅರ್ಥಾತ್ ವಿಚಾರಣೀಯ ವಿಷಯವಿರುತ್ತದೋ, ಅದನ್ನು ಹೇಳುತ್ತಿದ್ದಾನೆ. ಕಾರಣದ ರೂಪದಲ್ಲಿ ಕಾರ್ಯಗಳಲ್ಲಿ ಯಾವುದು ಅನುಸಾರಣೆ ಮಾಡಬೇಕೋ, ಅದನ್ನು ಅನ್ವಯವೆಂದು ಹೇಳಲಾಗಿದೆ ಹಾಗೂ ಕಾರ್ಯಗಳಿಂದ ಕಾರಣಾವಸ್ಥೆಯಲ್ಲಿ ಯಾವುದನ್ನು ತಿಳಿಯಲಾಗುತ್ತದೋ, ಅದನ್ನು ವ್ಯತಿರೇಕವೆಂದು ಹೇಳಲಾಗಿದೆ. ಅದೇ ರೀತಿ ಜಾಗ್ರತ ಇತ್ಯಾದಿ ಸ್ಥಿತಿಗಳಲ್ಲಿ ಆ-ಆ ಸ್ಥಿತಿಗಳ ಸಾಕ್ಷೀರೂಪದಲ್ಲಿ ಅನ್ವಯ ಹಾಗೂ ಸಮಾಧಿ ಇತ್ಯಾದಿಗಳಲ್ಲಿ ವ್ಯತಿರೇಕ- ಈ ಪ್ರಕಾರವಾಗಿ ಅನ್ವಯ-ವ್ಯತಿರೇಕ ರೂಪದಲ್ಲಿ ಯಾವುದು ಸರ್ವತ್ರ ಹಾಗೂ ಸದೈವ ಸ್ಥಿತವಾಗಿರುತ್ತದೋ, ಅದನ್ನೇ 'ಆತ್ಮ'ದ ರೂಪದಲ್ಲಿ ಅರ್ಥಮಾಡಿಕೊಳ್ಳಬೇಕು.॥೩೫॥

ಶ್ರೀಮಧ್ವಾಚಾರ್ಯಪಾದರು

ಅನ್ಯಭಾವಾಭಾವಕಾಲದೇಶೆ ತದ್ವಿದ್ಯಮಾನಾವಿದ್ಯಮಾನ-ಶಕ್ತಿಮಾನ್ ಚೇತ್ ಅನ್ವಯ-ವ್ಯತಿರೇಕೌ ॥೩೫॥

ಭಾವಾನುವಾದ- ಅನ್ಯ ಭಾವ ಹಾಗೂ ಅಭಾವಪೂರ್ಣ ಕಾಲ ಹಾಗೂ ದೇಶಗಳಲ್ಲಿ ಅವನು ಮಾತ್ರವೇ ವ್ಯಕ್ತ ಹಾಗೂ ಅವ್ಯಕ್ತಮಾನ ಶಕ್ತಿವಂತನಾಗಿದ್ದನು- ಇದೇ ಅನ್ವಯ ಹಾಗೂ ವ್ಯತಿರೇಕ ಭಾವ.॥೩೫॥

ಶ್ರೀವಿಜಯಧ್ವಜ ತೀರ್ಥಪಾದರು

ಉಕ್ತ ವ್ಯಾಪ್ತಿ ಸ್ಫುಟೀಕರಣಪೂರ್ವಕಂ ಉಪದೇಶಂ ಉಪಸಂಹರತಿ-ಎತಾವದಿತಿ । ಯದ್ವಸ್ತು ಸರ್ವತ್ರ ಸರ್ವದೇಶೆ, ಸರ್ವದಾ ಸರ್ವಸ್ಮಿನ್ಕಾಲೆ ಚ ಅನ್ವಯ-ವ್ಯತಿರೇಕಾಭ್ಯಾಂ ಅವಸ್ತ್ವನ್ವಿತಾನನ್ವಿತ ದೇಶ-ಕಾಲಸ್ವರೂಪಾಭ್ಯಾಂ ವ್ಯಾಪ್ತಂ ಸ್ಯಾತ್, ಎತಾವದೇವ ಮತ್ಸ್ವರೂಪಂ ಆತ್ಮನಃ ಪರಮಾತ್ರನಃ ತತ್ವಜಿಜ್ಞಾಸುನಾ ತ್ವಯಾ ಜಿಜ್ಞಾಸ್ಯಂ ವಿಚಾರ್ಯಮ್ ಸ್ಯಾತ್ ಇತ್ಯನ್ವಯಃ । ಅನೇನ ವಸ್ತ್ವಂತರ ಸದ್ಭಾವಾಸದ್ಭಾವರೂಪಾಭ್ಯಾಮ್ ಅನ್ವಯವ್ಯತಿರೇಕಾಭ್ಯಾಂ ಸರ್ವದೇಶ-ಕಾಲಯೋಃ ಏಕಪ್ರಕಾರೇಣ ಗುಣಕ್ರಿಯಾ ಅಭಿವ್ಯಾಪ್ತಮಿತಿ ವಿಚಾಯರ್ಮಿತಿ ಉಕ್ತಂ ಭವತಿ ॥೩೫॥

ಭಾವಾನುವಾದ- ಈಗ ಹೇಳಿರುವ ವ್ಯಾಪ್ತಿಯ ವಿಷಯವನ್ನು ಸ್ಪಷ್ಟಪಡಿಸುತ್ತ

ಶ್ರೀಭಗವಂತನು ತನ್ನ ಉಪದೇಶವನ್ನು ಉಪಸಂಹಾರ ಮಾಡುತ್ತಿದ್ದರೆ. ಯಾವ ವಸ್ತು ಸರ್ವದೇಶ ಹಾಗೂ ಸಮಸ್ತ ಕಾಲದಲ್ಲಿ ಅನ್ವಯ ಹಾಗೂ ವ್ಯತಿರೇಕ ರೂಪದಿಂದ ಅರ್ಥಾತ್ ಅವಸ್ತುವಿನಿಂದ ಅನ್ವಿತ (ಕಾರ್ಯದ ಕಾರಣದಲ್ಲಿ ಸ್ಥಿತ) ವಾಗಿ ದೇಶ ಹಾಗೂ ಕಾಲದ ಸ್ವರೂಪದಿಂದ ವ್ಯಾಪ್ತವಾಗಿದೆ, ಹೀಗೆ ನನ್ನ ಸ್ವರೂಪದ ಪರಮಾತ್ಮಾದ ತತ್ವಜಿಜ್ಞಾಸು ನಿನ್ನ ಮೂಲಕ ವಿಚಾರಿಸಲ್ಪಡುವುದು ಉಚಿತವಾದದ್ದು. ಇದರ ಮೂಲಕ ಅನ್ಯ ವಸ್ತು ಅನ್ವಯ ಅರ್ಥಾತ್ ಸತ್–ಭಾವ ಹಾಗೂ ವ್ಯಕ್ತಿರೇಕ ಅರ್ಥಾತ್ ಅಸತ್–ಭಾವ ರೂಪದಿಂದ ಸರ್ವದೇಶ–ಕಾಲದಲ್ಲಿ ಒಂದು ಪ್ರಕಾರದ ಗುಣ ಹಾಗೂ ಕ್ರಿಯೆಯಿಂದ ಅಭಿವ್ಯಾಪ್ತವಾಗಿದೆ– ಹೀಗೆ ವಿಚಾರಣೀಯವಾಗಿದೆ ಹಾಗೂ ಇಲ್ಲಿ ಇದೇ ಮಾತನ್ನು ಹೇಳುತ್ತಿದ್ದಾರೆ.॥೩೫॥

ಶ್ರೀವೀರರಾಘವಾಚಾರ್ಯಪಾದರು

ಪುನಶ್ಚ ಪ್ರಕೃತಿಪುರುಷ–ವಿಲಕ್ಷಣ ಈಶ್ವರಸ್ವರೂಪಂ ಸಂಗ್ರಹೇಣ ವಕ್ಷ್ಯನ್ ತಸ್ಯೈವ ಜಿಜ್ಞಾಸ್ಯತ್ವಮಾಹ–ಎತಾವದಿತಿ । ಆತ್ಮನಃ ಪರಮಾತ್ಮನಃ, ತತ್ವಂ ಸ್ವರೂಪಂ, ಜಿಜ್ಞಾಸುನಾ ಜ್ಞಾತುಮಿಚ್ಛುನಾ, ಎತಾವದೇವ ಪರಸ್ಪರವಿವಿಕ್ತಸ್ವಭಾವ ಚಿದಚಿದನ್ತರಾತ್ಮಭೂತ್ ಭಗವತ್ಸ್ವರೂಪಮೇವ, ಅನ್ವಯವ್ಯತಿರೇಕಾಭ್ಯಾಂ ಅಯೋಗಾನ್ಯಯೋಗವ್ಯವಚ್ಛೇದಾಭ್ಯಾಂ ಜಿಜ್ಞಾಸ್ಯಂ ಇತ್ಯರ್ಥಃ । ಏವಂ, ಜಿಜ್ಞಾಸ್ಯಮೇವೇತ್ಯನ್ವಯಃ, ನಾನ್ಯಜಿಜ್ಞಾಸ್ಯಮಿತಿ ವ್ಯತಿರೇಕಃ; ಯದ್ವಾ, ಅನ್ವಯಾತ್ ಸದ್ಭಾವಾಚ್ಚಿದಚಿಚ್ಛರೀರಕ ಪರಮಾತ್ಮನ ಏವ ಕಾರ್ಯಾತ್ಮನಾ ಕಾರಣಾತ್ಮನಾ ಚ ಸದ್ಭಾವಾದ್; ವ್ಯತಿರೇಕಾಚ್ಚಿದಚಿಚ್ಛರೀರಕ ಪರಮಾತ್ಮಾ ಅತಿರಿಕ್ತ ವಸ್ತ್ವನ್ತರಾಭಾವಾತ್ । ಏವಂಭೂತ ಪರಮಾತ್ಮವಿಜ್ಞಾನೇನ ಸರ್ವವಿಜ್ಞಾನಾತ್ ಜ್ಞಾತವ್ಯಾನ್ತರಾಭಾವಾತ್ ಎತಾವದೇವ ಜಿಜ್ಞಾಸ್ಯಮಿತ್ಯರ್ಥಃ । ಪ್ರಾಧಾನ್ಯೇನ ಜ್ಞೇಯಂ ಭಗವತ್ಸ್ವರೂಪಂ, ಚೇತನಮಚೇತನಂ ಚ ತದ್ವಿಭೂತಿಭೂತಮಿತಿ ತದ್ಜ್ಞಾನಸ್ಯ ಭಗವಜ್‌ಜ್ಞಾನೇ ಅಂತರ್ಭಾವಾತ್ ಆತ್ಮನಸ್ತತ್ವಂ ಇತ್ಯುಕ್ತಂ । ಸಂಗ್ರಹೇಣ ಪ್ರಕೃತಿಪುರುಷ ವೈಲಕ್ಷಣ್ಯಮಾಹ–ಯತ್ಸ್ಯಾದಿತಿ । ಯದಾತ್ಮನಸ್ತತ್ವಂ ಮತ್ಸ್ವರೂಪಂ ಸರ್ವದಾ ಸ್ಯಾತ್ ಇತ್ಯಚಿದ್ವ್ಯಾವೃತ್ತಿಃ; ಅಚಿದಪಿ ಪ್ರತಿಕ್ಷಣಪರಿಣಾಮಿತ್ವೇನ ಪಿಣ್ಡತ್ವ–ಘಟತ್ವ–ಕಪಾಲತ್ವ–ಚೂರ್ಣತ್ವ–ರಜತ್ವ–ಅಣುತ್ವಾ–ದ್ಯವಸ್ಥಾಸು ಪೂರ್ವಪೂರ್ವಾವಸ್ಥಾನಾಂ ಸದ್ದ್ರವ್ಯಸ್ಯೋತ್ತರೋತ್ತರಾವಸ್ಥಾ ಪ್ರಾಪ್ತ್ಯಭಾವಾತ್ 'ಸರ್ವದಾಽಸ್ತಿ' ಶಬ್ದಾನರ್ಹತ್ವಾತ್ । 'ಸರ್ವತ್ರ' ಇತಿ ಜೀವವ್ಯಾವೃತ್ತಿಃ; ತಸ್ಯಾವಿಕೃತತ್ವೇನ 'ಸರ್ವದಾ ಸ್ಯಾತ್' ಇತಿ ವಕ್ತುಂ ಶಕ್ಯತ್ವೇಪಿ *'ಬಾಲಾಗ್ರಶತಭಾಗಸ್ಯ'* ಇತ್ಯಾದ್ಯುಕ್ತಪ್ರಕಾರೇಣ ಜೀವಸ್ವರೂಪಸ್ಯ ಅಣುಪರಿಮಾಣತ್ವೇನ 'ಸರ್ವತ್ರ ಸ್ಯಾತ್' ಇತಿ ವಕ್ತುಮಶಕ್ಯತ್ವಾತ್ । ಏವಂ, ಅವಿಕಾರಿತ್ವಾನತ್ವಕಥನೇನ *'ಸತ್ಯಂ ಜ್ಞಾನಮನಂತಂ ಬ್ರಹ್ಮ'* ಇತ್ಯುಕ್ತ ಬ್ರಹ್ಮಸ್ವರೂಪಲಕ್ಷಣಮಭಿಹಿತಂ ಭವತಿ ॥೩೫॥

ಭಾವಾನುವಾದ– ಪುನಃ ಪ್ರಕೃತಿ ಮತ್ತು ಪುರುಷನಿಂದ ವಿಲಕ್ಷಣವಾದ ಈಶ್ವರ–ಸ್ವರೂಪವನ್ನು ಏಕವಾಗಿ ಹೇಳಲು ಹೋಗಿ ಶ್ರೀಭಗವಂತನು ಹೇಳುತ್ತಿರುವುದು ಇದೇ ಜಿಜ್ಞಾಸ್ಯವನ್ನೆ. ಪರಮಾತ್ಮ–ಸ್ವರೂಪವನ್ನು ತಿಳಿಯಲು ಇಚ್ಛುಕರಾದ ವ್ಯಕ್ತಿಗಳು "ಏತಾವದೇವ–ಇಲ್ಲಿಯವರೆಗು" ಅರ್ಥಾತ್ ಪರಸ್ಪರ ವಿವಿಕ್ತ–ಸ್ವಭಾವ ಚಿದಚಿತ್–

ಅಂತರಾತ್ಮಭೂತ ಭಗವತ್–ಸ್ವರೂಪವನ್ನೇ ಅನ್ವಯ–ವ್ಯತಿರೇಕ ರೂಪದಲ್ಲಿ ಅರ್ಥಾತ್ ಆಯೋಗ–ಅನ್ಯಯೋಗ–ವಿಯೋಗದ ಮೂಲಕ ತಿಳಿಯಲು ಬಯಸುವರು. ಈ ರೀತಿ ಯಾವುದು ಜಿಜ್ಞಾಸ್ಯವುಂಟು, ಅದೇ ಅನ್ವಯ ಹಾಗೂ ಅನ್ಯ ಬೇರೆ ಯಾವುದು ಅಜಿಜ್ಞಾಸ್ಯವುಂಟೋ, ಅದೇ ವ್ಯತಿರೇಕ. ಅಥವಾ ಚಿದಚಿತ್–ಶರೀರಮಯ ಪರಮಾತ್ಮನ ಕಾರ್ಯ ಹಾಗೂ ಕಾರಣಾತ್ಮದ ಮೂಲಕ ಸತ್–ಭಾವ ಅರ್ಥಾತ್ ಅನ್ವಯಭಾವ; ಚಿದಚಿತ್ ಶರೀರಕ ಪರಮಾತ್ಮನಿಂದ ಅತಿರಿಕ್ತವಾಗಿ ಅನ್ಯ ವಸ್ತುವಿನ ಅಭಾವದ ಕಾರಣ ವ್ಯತಿರೇಕ ಭಾವವಾಗಿರುತ್ತದೆ. ಈ ಪ್ರಕರದ ಪರಮಾತ್ಮ–ವಿಜ್ಞಾನದ ಮೂಲಕ ಸಮಸ್ತವೂ ವಿಜ್ಞಾನ (ಬೋಧ) ವಾಗುವ ಕಾರಣ ಹಾಗೂ ಇದಕ್ಕೆ ಅತಿರಿಕ್ತವಾಗಿ ಅನ್ಯ ಯಾವುದೇ ಅರಿವಿನ ಅಭಾವದ ಕಾರಣ ಇಲ್ಲಿಯವರೆಗು ಜಿಜ್ಞಾಸ್ಯವಾಗಿರುತ್ತದೆ. ಪ್ರಧಾನವಾಗಿ ಭಗವತ್–ಸ್ವರೂಪವೇ ಜ್ಞೇಯವಾದದ್ದು, ಚೇತನ ಹಾಗೂ ಅಚೇತನ ಎಲ್ಲವೂ ಕೇವಲ ಅವನ ವಿಭೂತಿಯಿಂದ ಮಾತ್ರವೇ ಉತ್ಪನ್ನವಾಗುತ್ತದೆ. ಆದ್ದರಿಂದ ಈ ಎಲ್ಲ ಜ್ಞಾನವು ಭಗವತ್–ಜ್ಞಾನದಲ್ಲಿ ಒಳಗೊಂಡಿದೆ. ಆದ್ದರಿಂದ ಅದನ್ನು ಆತ್ಮತತ್ವ ಎಂದು ಕರೆಯಲಾಗಿದೆ.

ಒಮ್ಮೆಲೆಗೆ ಪ್ರಕೃತಿ–ಪುರುಷನ ವಿಲಕ್ಷಣತೆಯನ್ನು ಹೇಳುತ್ತಿದ್ದಾರೆ– "ಯಾವ ಆತ್ಮತತ್ವ ಅರ್ಥಾತ್ ನನ್ನ ಯಾವ ಸ್ವರೂಪವು ಸರ್ವದಾ ನೆಲಸಿರುತ್ತದೆ"– ಇದರ ಮೂಲಕ ಅಚಿತ್ ನಿರತವಾಗಿದೆ, ಏಕೆಂದರೆ ಅಚಿತ್ ಪ್ರತಿಕ್ಷಣ ಬದಲಾವಣೆಗೆ ಯೋಗ್ಯವಾದ್ದರಿಂದ ಪಿಂಡ, ಘಟ, ಕಪಾಲ, ಚೂರ್ಣ, ರಜ, ಅಣು ಇತ್ಯಾದಿ ಸ್ಥಿತಿಗಳಲ್ಲಿ ಪೂರ್ವ–ಪೂರ್ವ ಸ್ಥಿತಿಗಳ ಸತ್–ದ್ರವ್ಯದ ವರ್ಧನೆಯ ಸ್ಥಿತಿ ಪ್ರಾಪ್ತಿಯ ಅಭಾವದ ಕಾರಣ 'ಸರ್ವದಾ ಸ್ಥಿತವಾಗಿರುತ್ತದೆ' ಎಂಬ ಶಬ್ದಕ್ಕೆ ಅಯೋಗ್ಯವಾದದ್ದು. ಇಲ್ಲಿ 'ಸರ್ವತ್ರ' ಶಬ್ದದಿಂದ ಜೀವಿ ವ್ಯಾವೃತ್ತ (ವರ್ಜಿತ) ವಾಗಿದೆ, ಏಕೆಂದರೆ ಯಾವುದು ಅವಿಕೃತವಾಗುವ ಕಾರಣ 'ಸರ್ವದಾ ನೆಲಸಿರುತ್ತದೆ' ಎಂದು ಹೇಳಲು ಯೋಗ್ಯವಾದರೂ ಸಹ "*ಬಾಲಾಗ್ರಶತಭಾಗಸ್ಯ* ಅರ್ಥಾತ್ ಒಂದು ಕೂದಲಿನ ತುದಿಯ ಹತ್ತು–ಸಾವಿರ ಭಾಗದಲ್ಲಿ ಒಂದು ಭಾಗದಷ್ಟು ಸಮಾನವಾದ ಅತಿ ಸೂಕ್ಷ್ಮವಾದದ್ದು ಜೀವಿ" ಇತ್ಯಾದಿ ಶ್ರುತಿಯ ಅನುಸಾರ ಜೀವ–ಸ್ವರೂಪದ ಅಣು–ಪ್ರಮಾಣವಿರುವ ಕಾರಣ 'ಸರ್ವತ್ರ ನೆಲಸಿರುತ್ತದೆ' ಎಂದು ಹೇಳಲು ಅಯೋಗ್ಯವಾಗಿದೆ. ಆದ್ದರಿಂದ 'ಅವಿಕಾರ' (ವಿಕಾರ ರಹಿತ) ಆದರೂ ಸಹ 'ಅನಂತ' ಎಂದು ಹೇಳುವ ಕಾರಣ, ಶ್ರುತಿಯಲ್ಲಿ ಹೇಳಿರುವ "ಸತ್ಯಂ ಜ್ಞಾನಮನಂತಂ ಬ್ರಹ್ಮ"– ರೂಪಿ ಬ್ರಹ್ಮಸ್ವರೂಪದ ಲಕ್ಷಣವನ್ನೇ ಹೇಳಲಾಗಿದೆ.॥೩೫॥

ಶ್ರೀಶುಕದೇವಪಾದರು

ಅಥ ಸ್ವಾನುಗ್ರಹಸಾಧ್ಯಮುಪಾಯಮಾಹ– ಎತಾವದೇವೇತಿ । ಸರ್ವಕಾರ್ಯೋಪಾದಾನ– ತಯಾನ್ವಯಃ ಅನುವೃತ್ತಿಃ, ಆಧಾರತ್ವಕರ್ತೃತ್ವಾದಿನಾ ನಿಮಿತ್ತಕಾರಣತಯಾ ವ್ಯತಿರೇಕೋऽನನುವೃತ್ತಿಃ; ಏವಮ್ವಿಧಾಭ್ಯಾಂ '*ತದಾತ್ಮಾನಂ ಸ್ವಯಮಕುರುತ*' ಇತಿ

ಶ್ರುತಿಪ್ರೋಕ್ತಾಭ್ಯಾಂ ಅನ್ವಯ–ವ್ಯತ್ತಿರೇಕಾಭ್ಯಾಂ ಯತ್ ಸರ್ವತ್ರ ಸರ್ವದಾ ಚ ಸ್ಯಾತ್, ಎತಾವದೇವಾತ್ಮನಃ ಪರಮಾತ್ಮನಃ ಮಮ ತತ್ವಜಿಜ್ಞಾಸುನಾ ಮಮ ತತ್ವಂ ಜ್ಞಾತುಮಿಚ್ಛುನಾ ಜಿಜ್ಞಾಸ್ಯಂ ಮಮ ಜ್ಞಾನಾರ್ಥಂ ವಿಚಾರ್ಯಮಿತ್ಯಾರ್ಥಃ । ಅನ್ಯಸ್ಯ ಸ್ವಾತಂತ್ರೇಣ ಜಿಜ್ಞಾಸ್ಯತ್ವಾಭಾವಾತ್, *'ಯದ್ವಿಜ್ಞಾನೇನ ಸರ್ವಂ ವಿಜ್ಞಾತಂ ಭವತೀ'* ಇತಿ ಶ್ರುತೇಃ ॥೩೫॥

ಭಾವಾನುವಾದ– ಈಗ ಇಲ್ಲಿ ಶ್ರೀಭಗವಂತನು ತನ್ನ ಅನುಗ್ರಹವನ್ನು ಪ್ರಾಪ್ತಿಸಿಕೊಳ್ಳುವ ಉಪಾಯವನ್ನು ತಿಳಿಸಿಕೊಡುತ್ತಿದ್ದಾನೆ– ಸಮಸ್ತ ಕಾರ್ಯಗಳ ಉಪಾದಾನ ರೂಪದಲ್ಲಿ ಅನ್ವಯ–ಅನುವೃತ್ತಿಯಾಗಿದೆ; ಆಧಾರತ್ವ–ಕರ್ತೃತ್ವಾದಿ ನಿಮಿತ್ತ ಕಾರಣ ರೂಪದಲ್ಲಿ ವ್ಯತಿರೇಕ–ಅನಾನುವೃತ್ತಿಯಾಗಿದೆ. ಈ ರೀತಿ "ತದಾತ್ಮಾನಂ ಸ್ವಯಮಕುರುತ ಅರ್ಥಾತ್ ತನ್ನನ್ನು ತಾನೇ ಪ್ರಕಟಿಸಿಕೊಂಡನು"– ವೇದೋಕ್ತ ರೀತಿಯ ಅನುಸಾರವಾಗಿ ಅನ್ವಯ–ವ್ಯಕ್ತಿರೇಕ ರೂಪದಿಂದ ಯಾರು ಸರ್ವತ್ರ ಹಾಗೂ ಸರ್ವದಾ ನೆಲಸಿರುತ್ತಾರೋ– ಅಲ್ಲಿಯವರೆಗು ಪರಮಾತ್ಮರೂಪಿ ನನ್ನ ತತ್ವವನ್ನು ತಿಳಿಯಲು ಇಚ್ಛುಕ ವ್ಯಕ್ತಿಯ ಮೂಲಕ ಜಿಜ್ಞಾಸ್ಯವಿರುತ್ತದೆ ಅರ್ಥಾತ್ ನನ್ನ ಜ್ಞಾನವನ್ನು ಪ್ರಾಪ್ತಿಸಿಕೊಳ್ಳಲು ವಿಚಾರಣೀಯವಾದದ್ದು. ಇದಕ್ಕೆ ಕಾರಣವೇನೆಂದರೆ "ಯದ್ ವಿಜ್ಞಾನೇನ ಸರ್ವಂ ವಿಜ್ಞಾತಂ ಭವತಿ ಅರ್ಥಾತ್ ಯಾರನ್ನು ತಿಳಿಯುವುದರಿಂದ ಸಮಸ್ತವೂ ಗೋಚರವಾಗುತ್ತದೆ"– ಇದನ್ನು ವೇದ–ವಚನದ ಅನುಸಾರವಾಗಿ ಅನ್ಯ ಯಾವುದೇ ವಿಷಯದ ಸ್ವತಂತ್ರ ರೂಪದಲ್ಲಿ ಜಿಜ್ಞಾಸು ಮಾಡುವ ಆವಶ್ಯಕತೆ ಇಲ್ಲ. ॥೩೫॥

ಶ್ರೀವಲ್ಲಭಾಚಾರ್ಯಪಾದರು

ಏವಂ ಪ್ರಮೇಯಂ ಪ್ರಮಾಣಂ ವಿಷಯಂ ಚ ನಿರೂಪ್ಯ ನಿರೂಪ್ಯಾನ್ತರಶಂಕಾಂ ವಾರಯನ್ ತ್ರಿಷ್ವಪ್ಯುಪಪತ್ತಿಂ ವದತಿ–ಎತಾವದೇವ ಜಿಜ್ಞಾಸ್ಯಮಿತಿ; ನಿರೂಪಣಂ ತು ಜಿಜ್ಞಾಸಾನುರೋಧೇನ । ಜಿಜ್ಞಾಸಾ ತು ತ್ರಿಷ್ವೇವ ನ ತು ಶಾಸ್ತ್ರಾಂತರವತ್ ಷೋಡಶಧಾ । ತಸ್ಯಾತ್ಮೋಪಯೋಗಾಭಾವಾತ್ ಆತ್ಮಾರ್ಥಮೇವ ಹಿ ಜಿಜ್ಞಾಸ್ಯಮ್; ತದಾಹ–ತತ್ವಜಿಜ್ಞಾಸುತಾತ್ಮನಃ ಇತಿ । ಪ್ರಮೇಯಂ ಜ್ಞಾನಂ, ಪ್ರಮಾಣಂ ವೈರಾಗ್ಯಂ, ವಿಷಯೋ ದಶವಿಧಾ ಲೀಲಾಭಕ್ತಿಃ । ಆತ್ಮನಸ್ತ್ವೇತಾವದೇವೋಪಯುಜ್ಯತೆ, ಅನ್ಯತ್ತುದೇಹಾದ್ಯರ್ಥಂ । ಏವಂ ನಿರೂಪ್ಯಾಂತರಂ ನಿರಾಕೃತ್ಯ ತ್ರಿಷ್ವಪ್ಯುಪಪತ್ತಿಮಾಹ– ಅನ್ವಯವ್ಯತಿರೇಕಾಭ್ಯಾಂ ಯತ್ಸ್ಯಾತ್ಸರ್ವತ್ರ ಸರ್ವದೇತಿ । ಅನ್ವಯ–ವ್ಯತಿರೇಕಾಭ್ಯಾಂ ಇತ್ಯುಪಪತ್ತಿಃ; 'ಯತ್' ಇತ್ಯಾದಿ ತ್ರಯಮುದ್ದೇಶ್ಯಂ । ತತ್ರ ಸರ್ವಂ ಭಗವಾನ್ ಕಥಂ? ಇತಿ ಆಕಾಂಕ್ಷಾಯಾಂ– ಅನ್ವಯವ್ಯತಿರೇಕಾಭ್ಯಾಂ ಇತಿ । ಸರ್ವತ್ರ ಭಗವತೋಽನ್ವಯೋಽಸ್ತಿ– ಘಟಃ ಸನ್, ಪಟಃ ಸನ್, ಭಾಸತ ಇತಿ ಪ್ರಿಯಮಿತಿ ಚ, ಸರ್ವತ್ರೈವೈಕಸ್ಯಾನ್ವಾಯಃ; ಅನ್ಯಥಾ, ಏಕ ಶಬ್ದಾನುವೃತ್ತಿಃ ಪ್ರತೀತ್ಯನುವೃತ್ತಿರ್ವಾ ನ ಸ್ಯಾತ್ । ವಿಶೇಷೇಣ ಅತಿರಿಚ್ಯತ ಇತಿ ವ್ಯತಿರೇಕಃ । ಘಟಾದಿಭ್ಯಃ ಕಿಮತಿರಿಚ್ಯತೇ? ಘಟಸ್ತು ಘಟಾನ್ನಾತಿರಿಚ್ಯತೇ, ತಥಾ ಪಟಃ ಪಟಾತ್; ಕಿಂತು, ಸತ್ ಘಟಾದಪ್ಯತಿರಿಚ್ಯತೆ ಪಟಾದಪಿ । ಏವಂ, ಸರ್ವತ್ರ ಯತ್ಸರ್ವಂ ಸತ್ಸರ್ವಸ್ಮಾದತಿರಿಚ್ಯತೆ, ತದ್‌ಬ್ರಹ್ಮೈವ । ನನು, ಏಕಮೇವ ಬ್ರಹ್ಮತ್ವ ಸಾಧಕಮಸ್ತು, ಕಿಂ ದ್ವಾಭ್ಯಾಂ?

ಇತಿ ಚೆನ್ನ, ಅನ್ವಯೇನ ಬ್ರಹ್ಮತ್ವಂ ನ ಸಿಧ್ಯತಿ । ಜಗತಿ ಜಗತೋಽಪ್ಯನ್ವಯಾತ್ । ಯದ್ಯಪಿ ಘಟಾದೇರ್ವ್ಯತಿರಿಚ್ಯತೇ ಜಗತ್, ತಥಾಪಿ ಜಗತೋ ನ ವ್ಯತಿರಿಚ್ಯತೆ । ಖಪುಷ್ಪಾದಿಕಂ ತು ಜಗತ್ತೋ ವ್ಯತಿರಿಚ್ಯತೆ, ಪರಂ ನಾನ್ವೇತಿ । ಸತ್ ಜಗತೋ ವ್ಯತಿರಿಚ್ಯತೆ; ಭಗವತೋಽಪಿ ಸತ್ವಾತ್, ಕಾರಣಸ್ಯಾಪಿ ಸತ್ವಾತ್ । ಅತೋ ಯಸ್ಯಾನ್ವಯವ್ಯತಿರೇಕೌ, ತದೇವ ಸರ್ವಂ; ಕಿಂಚ, ಯತ್ಸರ್ವತ್ರ ಸ್ಯಾತ್ । ಯದ್ವಾ, ಸರ್ವದಾ ದೇಶಕಾಲೌ ಯಸ್ಯ ಪರಿಚ್ಛೇದಕೌ ನ ಭವತಃ । ತತ್ರಾಪ್ಯನ್ವಯವ್ಯತಿರೇಕಾಭ್ಯಾಮ್ । ಮಾಯಯಾ ಹ್ಯನ್ವಯೇನ ಪರಿಚ್ಛಿದ್ಯತೇ । ನ ಹಿ ಮಾಯಾವಿಷಯೆ ಆಭಾಸೆ ಸದನ್ವಯೋಽಸ್ತಿ । ನ ಚಾಭಾಸಃ ಸತೋ ನ ವ್ಯತಿರಿಚ್ಯತೆ ಸ್ವಸ್ಯೈವಾಽಸತ್ವಾತ್ । ಭಗವಾಂಸ್ತು ಮಾಯಾಯಾಮಪ್ಯಸ್ತಿ, ಅತಿರಿಕ್ತೇಽಪಿ ಏವಂ ಕಾಲೇಽಪಿ । ವಿಷಯೇ ಘಟೇ ಸತ್ಕಾರಣಂ–ಸತ್ಕಾರ್ಯಂ–ಸದಾಧಾರಃ– ಸದಾರ್ಥೇಯಮ್ ಸತ್ವೇಽಪ್ಯತಿರಿಕ್ತತಾ । ನ ಹಿ ಮೃದೇವ ಘಟಃ । ತದಾ ಮೃದವಸ್ಥಾಯಾಮಪಿ ಘಟಪ್ರತೀತಿಃ ಸ್ಯಾತ್; ಘಟಶಬ್ದಪ್ರಯೋಗಶ್ಚ । ಏವಂ ಕಾರ್ಯೇ ಸರ್ವದಾ ಪಂಚಧಾ ಭಗವಾನನ್ವೇತಿ, ಪಂಚಧಾ ಚ ವ್ಯತಿರಿಚ್ಯತೇ । ಘಟೋ ಹಿ ಪಟಾದಿಭ್ಯೋ ವ್ಯತಿರಿಚ್ಯತೇ, ಕಾರಣಾದಪಿ ವ್ಯತಿರಿಚ್ಯತೇ, ಘಟಾನ್ತರಾದಪಿ ವ್ಯತಿರಿಚ್ಯತೇ, ಆವಿರ್ಭಾವಾತ್ತಿರೋಭಾವಾಚ್ಚ ವ್ಯತಿರಿಚ್ಯತೇ । ಘಟಸ್ಯ ಹ್ಯಾವಿರ್ಭಾವಸ್ತಿರೋಭಾವಶ್ಚ । ಅತ ಏಕಸ್ಮಿನ್ ಘಟೇ ಆವಿರ್ಭಾವ–ತಿರೋಭಾವಾಭ್ಯಾಂ ದಶದಾ ಭಗವಾನಸ್ತಿತ । ಏವಂ, ಸರ್ವತ್ರ ದಶಲೀಲಾಯುಕ್ತೋಭಗವಾನ್; ಅನೇನ ಸ್ವರೂಪಂ ಭಗವಾನ್ । ದೇಶಪ್ರತೀತಿಸ್ತು ಮಾಯಿಕೀ, ಕಾಲಪ್ರತೀತಿಸ್ತು ಲೀಲಾಯಾ । ಏವಂ, ದೇಶಕಾಲವಸ್ತ್ವಪರಿಚ್ಛಿನ್ನಂ; ದೇಶಕಾಲವಸ್ತುರೂಪಂ ಚ 'ಅಹಮೇವ' ಇತಿ– ಏತಾವದೇವ ಜಿಜ್ಞಾಸ್ಯಂ; ಇದಮೇವ ಉಪಪತ್ಯಾ ವಿಚಾರಿತಂ । ಉತ್ಪತ್ಯಾ ಚ, 'ಪುರುಷ ಏವೇದಂ ಸರ್ವಂ', 'ಏತಸ್ತಿಮಧಿತಿಷ್ಠತ' ಇತಿ । ಉದ್ದೇಶೋ ಚ 'ನ ಯತೋಸ್ತಿಕಿಂಚಿತ್', 'ಪ್ರಾದೇಶಮಾತ್ರಂ ಪುರುಷಂ ವಸನ್ತಂ' ಇತಿ ಚ । ಏವಂ ಭಗವತೋ ಬ್ರಹ್ಮಣಃ ಶಿಕ್ಷಾನಿರೂಪಿತಾ । ಬ್ರಹ್ಮರೂಪಂ ಜಗಜ್ಜ್ಞಾತವ್ಯಂ, ಜಗತೋ ವ್ಯತಿರಿಚ್ಯತ ಇತಿ ನ ತತ್ರಾಸಕ್ತಿಃ ಕರ್ತವ್ಯಾ । ಏಕಸ್ಮಿನ್ನಪಿ ಪದಾರ್ಥೇ ಸರ್ವಲೀಲಾಸಹಿತೋ ಭಗವಾನಸ್ತೀತಿ ಚ, ದೇಶಕಾಲವಸ್ತುರೂಪಃ ಸನ್ ದೇಶಕಾಲವಸ್ತುಭ್ಯೋ ವ್ಯತಿರಿಚ್ಯತ ಇತಿ ॥೩೫॥

ಭಾವಾನುವಾದ– ಈ ಪ್ರಕಾರದಿಂದ ಭಗವತ್–ಸ್ವರೂಪದ, ವೇದಗಳ ಹಾಗೂ ವಿಷಯ ಜಗದ್ರೂಪ ಭಗವಂತನ ನಿರೂಪಣೆ ಮಾಡಿ ಯಾವುದು ನಿರೂಪಣೆ ಮಾಡಲು ಉಳಿದಿರುವುದೋ, ಅದರ ಆಶಂಕೆಯನ್ನು ದೂರ ಮಾಡಲೆಂದು ಪ್ರಮೇಯ, ಪ್ರಮಾಣ ಹಾಗೂ ವಿಷಯ ಈ ಮೂರರಲ್ಲಿ ಯುಕ್ತಿಪೂರ್ವಕವಾಗಿ ಹೇಳುತ್ತಿದ್ದಾರೆ– "ಏತಾವತೇವ ಜಿಜ್ಞಾಸಮ್ ಅರ್ಥಾತ್ ಜಿಜ್ಞಾಸೆಯ ಅನುಸಾರವಾಗಿಯೇ ವಸ್ತುವಿನ ನಿರೂಪಣೆ ಮಾಡಲಾಗಿದೆ." ಇಲ್ಲಿ ಶ್ರೀಭಾಗವತ–ಶಾಸ್ತ್ರದಲ್ಲಿ ಹೇಳಿರುವ ಪ್ರಮೇಯಾದಿ ಮೂರು ವಸ್ತುಗಳದ್ದೇ ಜಿಜ್ಞಾಸೆಯನ್ನು ಮಾಡಲಾಗಿದೆ, ಅನ್ಯ ಮೋಹದ ಶಾಸ್ತ್ರಗಳಂತೆ ಹದಿನಾರು ವಸ್ತುಗಳದ್ದು ಮಾತ್ರವೇ ಅಲ್ಲ, ಏಕೆಂದರೆ ಹದಿನಾರು ವಸ್ತುಗಳ ಜಿಜ್ಞಾಸ್ಯದಿಂದ ಆತ್ಮಕ್ಕೆ ಯಾವುದೇ ಉಪಯೋಗವಿಲ್ಲ. ಎಲ್ಲತರಹದ ಜಿಜ್ಞಾಸ್ಯವು (ವಿಚಾರಣೀಯ) ಆತ್ಮಕ್ಕಾಗಿಯೇ ಆಗಿರಬೇಕು. ಆದ್ದರಿಂದ ಹೇಳುತ್ತಾರೆ– "ತತ್ವ ಜಿಜ್ಞಾಸುನಾತ್ಮನಃ ।" (೧) ಜ್ಞಾನದ ಸಾಧನೆಯಾಗುವದರಿಂದ, ಜ್ಞಾನದ ವಿಷಯವಾಗುವುದರಿಂದ

ಹಾಗೂ ಜ್ಞಾನರೂವಾಗುವುದರಿಂದ ಭಗವಂತನ ಸ್ವರೂಪವೇ ಪ್ರಮೇಯವು. ಇಲ್ಲಿ ಪ್ರಮೇಯ ಶಬ್ದದಿಂದ ಭಗವತ್-ಸ್ವರೂಪವನ್ನು ತೆಗೆದುಕೊಳ್ಳಲಾಗಿದೆ ಅರ್ಥಾತ್ ಭಗವತ್-ಸ್ವರೂಪದ ಉಪಯೋಗ ಜ್ಞಾನರೂಪದಿಂದ ಆಗುತ್ತದೆ. (೨) ಪ್ರಮಾಣ ಅರ್ಥಾತ್ ವೇದ ಹಾಗೂ ವೇದೋಕ್ತ ಸಾಧನ ಯಜ್ಞಾದಿ ವೇದ ಕರ್ಮದ ಕುರಿತು ಪ್ರತಿಪಾದಿಸುತ್ತಾರೆ ಹಾಗೂ ಭಗವದ್ಭಕ್ತರಿಗೆ ಕಾಮ್ಯಾದಿ ಕರ್ಮಗಳಿಂದ ವೈರಾಗ್ಯವಿರುತ್ತದೆ, ಆದ್ದರಿಂದ ವೈರಾಗ್ಯ-ಉಪಯುಕ್ತವಾಗುವುದರಿಂದ ವೇದಾದಿ ಪ್ರಮಾಣವನ್ನು ಇಲ್ಲಿ ವೈರಾಗ್ಯ ಶಬ್ದದಿಂದ ಹೇಳಲಾಗಿದೆ, ಹಾಗೂ (೩) ವಿಷಯ ಶಬ್ದದಿಂದ ದಶವಿಧ ಲೀಲೆಯಲ್ಲಿ ಭಕ್ತಿ (ಸ್ನೇಹ) ಎಂದು ಹೇಳಲಾಗಿದೆ. ಸಂಪೂರ್ಣ ವಿಶ್ವವೇ ವಿಷಯ, ಇದು ವಿರುದ್ಧ ಧರ್ಮಗಳ ಆಧಾರ. ಈ ಹತ್ತು ಪ್ರಕಾರದ ಲೀಲೆಗಳ ಭಕ್ತಿಯಲ್ಲಿ ಉಪಯುಕ್ತವಾಗುತ್ತದೆ. ಆದ್ದರಿಂದ ವಿಷಯ ಶಬ್ದದಿಂದ ವಿಶ್ವರೂಪ ದಶವಿಧ ಭಗವತ್-ಲೀಲೆಗಳ ಭಕ್ತಿ ಎಂದು ಹೇಳಲಾಗಿದೆ. ಆತ್ಮದ ಉದ್ಧಾರದಲ್ಲಿ ಈ ಮೂರರ ಪ್ರಯೋಜನವಿದೆ ಹಾಗೂ ಅನ್ಯ ಬೇರೆ ಯಾವುದೆಲ್ಲ ಶಾಸ್ತ್ರೋಕ್ತ ಸಾಧನಾದಿಗಳಿವೆಯೋ, ಆ ಎಲ್ಲವು ದೇಹಾದಿಯ ಪ್ರಯೋಜನಕಾರಿಯಾಗಿದೆ. ಈ ಪ್ರಕಾರದ ಈ ಪ್ರಮೇಯಾದಿಯ ನಿರೂಪಣೆಯಿಂದಲೇ ಅನ್ಯ ಶಾಸ್ತ್ರೋಕ್ತ ಸಾಧನ ಇತ್ಯಾದಿಯನ್ನು ನಿರಾಕರಿಸಿ ಈ ಮೂರರ ವಿಷಯದಲ್ಲಿ ಯುಕ್ತಿಯ ನಿರೂಪಣೆಯನ್ನು ಮಾಡುತ್ತಿದ್ದಾರೆ- "ಅನ್ವಯವ್ಯತಿರೇಕಾಭ್ಯಾಂ" ಇತ್ಯಾದಿ. ಅನ್ವಯ-ವ್ಯತಿರೇಕ- ಇದು ಯುಕ್ತಿ ಹಾಗೂ 'ಯತ್' ಪ್ರಮೇಯ, ಪ್ರಮಾಣ ಹಾಗೂ ವಿಷಯ ಮೂರರ ಉದ್ದೇಶದಿಂದ ಹೇಳಲಾಗಿದೆ. "ಅನು ಎತಿ ಇತಿ ಅನ್ವಯಃ" ಅರ್ಥಾತ್ ವಸ್ತುವಿನೊಂದಿಗೆ ಯಾವುದು ಸಂಬಂಧವಿದೆಯೋ, ಅದು ಅನ್ವಯ ಹಾಗೂ ಯಾವುದು ಎಲ್ಲದರಿಂದ ಪೃಥಕವಾಗಿದೆಯೋ, ಅದು ವ್ಯತಿರೇಕ.

ಈ ವಿಶ್ವದಲ್ಲಿ ವಾಸ್ತವ ತತ್ತ್ವ ಯಾವುದು? ಇದಕ್ಕೆ ಉತ್ತರ ಇಷ್ಟೆ, ಯಾವ ತತ್ತ್ವ ಈ ಸಮಸ್ತ ವಿಶ್ವದೊಂದಿಗೆ ಯುಕ್ತವಾಗಿರುವುದೋ ಹಾಗೂ ಯಾವುದು ಇದಕ್ಕಿಂತಲೂ ಸಹ ಶ್ರೇಷ್ಠವಾಗಿ ನೆಲಸಿರುವುದೋ, ಆ ತತ್ತ್ವವೇ ವಾಸ್ತವ ತತ್ತ್ವ. ಇದೇ ಈ ಸಿದ್ಧಾಂತವನ್ನು ಅರ್ಥಮಾಡಿಕೊಳ್ಳಲು ಯೋಗ್ಯವಾದದ್ದು. ಭಗವಂತನು ಪರಬ್ರಹ್ಮ ಸಚ್ಚಿದಾನಂದನು. ಇದನ್ನು ವೇದದಿಂದ ತಿಳಿಯಲಾಗುವಂತಹದ್ದು. ಸತ್-ಚಿತ್-ಆನಂದ- ಈ ಮೂರರಲ್ಲಿ ಮೊದಲು 'ಸತ್' ರೂಪ ಭಗವಂತನ ಸಂಬಂಧದಲ್ಲಿಯೇ ಹೇಳುತ್ತಿದ್ದಾರೆ. ಈ ವಿಶ್ವದಲ್ಲಿ ಸತ್'ನ ಅನ್ವಯವುಂಟು ಅರ್ಥಾತ್ ಈ ಸತ್ ಭಗವಂತನು ಎಲ್ಲರೊಂದಿಗೆ ಯುಕ್ತನಾಗಿರುತ್ತಾನೆ. ಅರ್ಥಾತ್ ಮಣ್ಣಿದೆ, ಬಟ್ಟೆ ಇದೆ, ಜಲವಿದೆ, ವಸ್ತುವಿದೆ ಮುಂತಾದ ಸಂಪೂರ್ಣ ಜಗತ್ತಿನೊಂದಿಗೆ 'ಇದೆ' 'ಇದೆ' ಎಂಬ ಪದವು ಅನ್ವಯವಾಗುತ್ತಿದೆ. ಹಾಗೆ ಕೇವಲ ಸತ್ ಮಾತ್ರವೇ ಅಲ್ಲ, ಅದರೊಂದಿಗೆ ಚಿತ್ ಹಾಗೂ ಆನಂದವೂ ಸಹ ಅನ್ವಯವಾಗುತ್ತದೆ. ಎಲ್ಲ ವಸ್ತುವಿನಲ್ಲೂ ಜ್ಞಾನ ಹಾಗೂ ಪ್ರಿಯತೆ ಯುಕ್ತವಾಗಿರುತ್ತದೆ. ಸತ್-ಚಿತ್-ಆನಂದ ಈ ಮೂರರದ್ದೇ ಸಮಸ್ತ ಜಾಗತಿಕ ವಸ್ತುಗಳಲ್ಲಿ ಅನ್ವಯವಾಗುತ್ತದೆ (ಸಂಬಂಧವಾಗಿರುತ್ತದೆ). ಈ

ರೀತಿ ಸರ್ವತ್ರ ಸಚ್ಚಿದಾನಂದ ಭಗವಂತನದ್ದೇ ಅನ್ವಯವಿರುತ್ತದೆ. ಈ ಅನ್ವಯದಿಂದ ಅರ್ಥವಾಗುವುದೇನೆಂದರೆ ಸಂಪೂರ್ಣ ಜಗತ್ತು ಸಚ್ಚಿದಾನಂದಮಯವಾದ್ದದು. ಹಾಗೆ ಏನಾದರೂ ಜಗತ್ತು ಭಗವದ್ರೂಪವಲ್ಲದಿದ್ದರೇ ಸತ್-ಚಿತ್ ಇತ್ಯಾದಿ ಪದದೊಂದಿಗೆ ಸಂಬಂಧವಿರುತ್ತಿರಲಿಲ್ಲ ಹಾಗೂ ಅದರ ಅನುಭವವೂ ಸಹ ಆಗುತ್ತಿರಲಿಲ್ಲ.

ತನ್ನ ವಿಶೇಷಕ್ಕಿಂತಲೂ ಸಹ ಯಾವುದು ಎಲ್ಲದಕ್ಕಿಂತ ಅಧಿಕವಾಗಿರುತ್ತದೋ, ಅದು ವ್ಯತಿರೇಕವಾದದ್ದು. ಈಗ ವಿಚಾರಮಾಡಬಹುದಾಗಿರುವುದು ಏನೆಂದರೆ, ಮಡಿಕೆ-ವಸ್ತ್ರ ಇತ್ಯಾದಿಗಳಿಗಿಂತ ಜಗತ್ತಿನಲ್ಲಿ ಅಧಿಕವಾಗಿ ಏನಿರುತ್ತದೆ? ಮಣ್ಣಿಗಿಂತಲೂ ಮಡಿಕೆ ಅಧಿಕವಾಗಿಲ್ಲ ಹಾಗೂ ನೂಲುಗಿಂತಲೂ ಬಟ್ಟೆ ಅಧಿಕವಾಗಿಲ್ಲ, ಆದರೆ ಸತ್ವವೇ ಮಡಿಕೆಗಿಂತಲೂ ಅಧಿಕವಾಗಿರುವುದು. 'ಘಟಃ ಸನ್ ಪಟಃ ಸನ್' ಅರ್ಥಾತ್ ಮಡಿಕೆ ಇದೆ, ವಸ್ತ್ರವಿದೆ. ಇಲ್ಲಿ ಮಡಿಕೆಗಿಂತಲೂ ಹೆಚ್ಚಾಗಿ ಸತ್ವವೇ ಹೆಚ್ಚು. (ತುಂಬಿದ ಪಾತ್ರೆ, ಕೊಡ, ಬಾವಿ, ನದಿಗಳಿಗಿಂತಲೂ ಮಿಕ್ಕನೀರೇ ಹೆಚ್ಚು) ಈ ರೀತಿ ಯಾವ ವಸ್ತು ಸರ್ವತ್ರ ಎಲ್ಲದಕ್ಕಿಂತಲೂ ಅಧಿಕವಾಗಿ ಇರುವುದೋ, ಅದೇ ಬ್ರಹ್ಮ. ಆದ್ದರಿಂದ ಬ್ರಹ್ಮನೇ ಸರ್ವತ್ರ ಅನ್ವಯ ಹಾಗೂ ಬ್ರಹ್ಮನೇ ಎಲ್ಲದಕಿಂತಲೂ ವ್ಯಾಪ್ತನಾದವನು, ಆದ್ದರಿಂದ ಸಮಸ್ತ ವಸ್ತುಗಳಲ್ಲಿ ತತ್ವ ಬ್ರಹ್ಮನೇ ಆಗಿದ್ದಾನೆ.

ಇಲ್ಲಿ ಪ್ರಶ್ನೆ ಉದ್ಭವಿಸುವುದೇನೆಂದರೆ ಬ್ರಹ್ಮತತ್ವವನ್ನು ಸಿದ್ಧಿಸಿಕೊಳ್ಳಲು ಒಂದು ಅನ್ವಯವೇ ಹೆಚ್ಚಾಗಿದೆ, ಆದರೆ ಮತ್ತೆ ಎರಡನ್ನು (ಅನ್ವಯ ಮತ್ತು ವ್ಯತಿರೇಕ) ಏತಕ್ಕಾಗಿ ಹೇಳುತ್ತಿದ್ದಾರೆ? ಇದಕ್ಕೆ ಉತ್ತರದಲ್ಲಿ ಹೇಳುತ್ತಾರೆ, ಕೇವಲ ಅನ್ವಯದಿಂದ ಮಾತ್ರ ಜಗತ್ತಿನ ಬ್ರಹ್ಮತತ್ವವು ಪ್ರಾಪ್ತವಾಗುವುದಿಲ್ಲ, ಏಕೆಂದರೆ ಜಗತ್ತಿನಲ್ಲಿ ಜಗತ್ತಿನದ್ದು ಸಹ ಅನ್ವಯವಿರುತ್ತದೆ, ಆದ್ದರಿಂದ ವ್ಯತಿರೇಕವನ್ನೂ ಸಹ ಜೊತೆಯಲ್ಲೇ ಹೇಳಲಾಗಿದೆ. ಅದಾಗ್ಯೂ ಮಡಿಕೆಯಿಂದ ಜಗತ್ತು ವ್ಯಕ್ತಿರಿಕ್ತವಾಗಿದೆ, ಆದರೇ ಜಗತ್ತಿನಿಂದ ಜಗತ್ತು ವ್ಯತಿರಿಕ್ತವಾಗಿಲ್ಲ. ಆದರೂ ಆಕಾಶ-ಕುಸುಮ, ಬಂಜೆಯ ಪುತ್ರ ಮುಂತಾದ ವಿಚಾರವು ಜಗತ್ತಿನಲ್ಲಿ ವ್ಯತಿರಿಕ್ತವಾಗಿರುತ್ತದೆ, ಆದರೆ ಅದರೊಂದಿಗೆ ಸತ್ವದ ಅನ್ವಯವಿರುವುದಿಲ್ಲ. ಸತ್ವವೇನೋ ಜಗತ್ತಿನಿಂದ ವ್ಯತಿರಿಕ್ತವಾದದ್ದು ಹಾಗೂ ಅದರ ಅನ್ವಯವೂ ಸಹ ಇದೆ. ಭಗವಂತನೂ ಸತ್ ಹಾಗೂ ಕಾರಣವೂ ಸಹ ಸತ್ ಎನ್ನಲಾಗಿದೆ. ಈಗ ಇದರಿಂದ ತಿಳಿಯುವುದೇನೆಂದರೆ ಯಾವುದರ ಅನ್ವಯ ಹಾಗೂ ವ್ಯತಿರೇಕವಿರುವುದೋ ಅದೇ ಎಲ್ಲವೂ ಆಗಿದೆ. ಸತ್ ಇತ್ಯಾದಿ ರೂಪದಿಂದ ಭಗವಂತನ ಅನ್ವಯ-ವ್ಯತಿರೇಕವುಂಟು, ಆದ್ದರಿಂದ ಭಗವಂತನೇ ವಿಶ್ವರೂಪನಾಗಿದ್ದಾನೆ.

ಮತ್ತೊಂದು ಮಾತು ಉಳಿದಿದೆ- ಯಾವ ವಸ್ತು ಅನ್ವಯ-ವ್ಯತಿರೇಕದಿಂದ ಸರ್ವತ್ರ ನೆಲಸಿರುವುದೋ, ಅಥವಾ ಸರ್ವದಾ ದೇಶ-ಕಾಲದಿಂದ ಯಾವುದರ ಪರಿಚ್ಛೇದವಾಗಿ ಇರುವುದಿಲ್ಲವೋ, ಅದೇ ಸಮಸ್ತವೂ ಆಗಿದೆ. ಮಾಯೆಯಲ್ಲಿ ಅನ್ವಯದ ಪರಿಚ್ಛೇದವುಂಟು, ಆದರೆ ಮಾಯೆಯ ವಿಷಯ ಆಭಾಸಾದಿಯಲ್ಲಿ ಸತ್‌ನ ಅನ್ವಯವಿಲ್ಲ. ಏನಾದರೂ ಆಭಾಸವು ಸತ್ವದಿಂದ ವ್ಯತಿರೇಕವಲ್ಲ ಎಂದು ಹೇಳಿದರೆ,

ಅದು ಸರಿಯಲ್ಲ, ಏಕೆಂದರೆ ಅದು ವ್ಯತಿರೇಕವಾದದ್ದು. ಇದಕ್ಕೆ ಉತ್ತರವೇನೆಂದರೆ, ಆಭಾಸವು ಸ್ವಯಂ ಅಸತ್ ಹಾಗೂ ಭಗವಂತನೋ ಸಂಪೂರ್ಣ ಜಗತ್ತಿನಲ್ಲಿದ್ದಾನೆ, ಮಾಯೆಯಲ್ಲೂ ಸಹ ಇದ್ದಾನೆ, ಎಲ್ಲದಕ್ಕಿಂತಲೂ ಅತಿರಿಕ್ತವಾದ ಸತ್ ಇತ್ಯಾದಿಯಲ್ಲೂ ಸಹ ಹಾಗೂ ಕಾಲದಲ್ಲೂ ಸಹ ನೆಲಸಿರುತ್ತಾನೆ. ಈಗ ಅರ್ಥವಾಗುವುದೇನೆಂದರೆ ಒಂದೇ ಮಡಿಕೆಯ ರೂಪ ವಿಷಯದಲ್ಲಿ ಕಾರಣವೂ ಸಹ ಸತ್ ಎನ್ನಲಾಗಿದೆ, ಕಾರ್ಯವೂ ಸಹ ಸತ್, ಆಧಾರ ಹಾಗೂ ಆಧೇಯವೂ ಸಹ ಸತ್ ಎಂದೇ ಹೇಳಲಾಗಿದೆ ಹಾಗೂ ಈ ರೀತಿಯಾಗಿ ಸತ್ ನೆಲಸಿದ್ದರೂ ಸಹ ವ್ಯತಿರಿಕ್ತವಾದದ್ದು. ಕೇವಲ ಮಣ್ಣು ಮಡಿಕೆಯಲ್ಲ, ಹಾಗೆ ಏನಾದರೂ ಮಣ್ಣಿನ ಸ್ಥಿತಿಯಲ್ಲೇ ಮಡಿಕೆ ಎಂದು ತಿಳಿಯುವುದಾದರೇ ಹಾಗೂ ಮಡಿಕೆಯ ಕಾರ್ಯವೂ ಸಹ ಅದೇ ಮಾಡುವಂತಾಗುತ್ತದೆ. ಆದರೆ ಹೀಗೆ ಸಾಧ್ಯವಾಗುವುದಿಲ್ಲ ಹಾಗೂ ಯಾರೂ ಸಹ ಅದನ್ನು ಮಡಿಕೆ ಎಂದು ಕರೆಯುವುದಿಲ್ಲ. ಆದ್ದರಿಂದ ಅದು ಮಡಿಕೆಯಲ್ಲ, ಮಡಿಕೆ ಎಂಬುದು ಒಂದು ಪ್ರತ್ಯೇಕ ವಸ್ತು. ಇದೇ ರೀತಿ ಈ ಉದಾಹರಣೆಯಲ್ಲಿ ಭಗವಂತನೂ ಸಹ ಜಗತ್ತಿನಲ್ಲಿ ಐದು ಪ್ರಕಾರದಿಂದ ಅನ್ವಯವನ್ನು ಪ್ರಾಪ್ತವಾಗಿಸುತ್ತಾನೆ. ಭಗವಂತನು ಕಾರಣ, ಭಗವಂತನು ಕಾರ್ಯ, ಭಗವಂತನು ಆಧಾರ, ಭಗವಂತನು ಆಧೇಯ ಹಾಗೂ ಇದರಿಂದ ಅತಿರಿಕ್ತ ರೂಪದಲ್ಲು ಸಹ ಭಗವಂತನ ಅನ್ವಯವಿದೆ.

ವಿವರಿಸಿರುವ ಉದಾಹರಣೆಯಲ್ಲಿ ಮಡಿಕೆಯ ವ್ಯತಿರೇಕವೂ ಸಹ ಐದು ಪ್ರಕಾರವಾಗಿದೆ. ಮಡಿಕೆ ಮತ್ತು ವಸ್ತ್ರ ವ್ಯತಿರಿಕ್ತವಾದದ್ದು, ಕಾರಣದಿಂದ ವ್ಯತಿರಿಕ್ತ, ಅನ್ಯ ಮಡಿಕೆಯಿಂದಲೂ ಸಹ ವ್ಯತಿರಿಕ್ತ ಹಾಗೂ ಆವಿರ್ಭಾವ ಹಾಗೂ ತಿರೋಭಾವದಿಂದಲೂ ಸಹ ವ್ಯತಿರಿಕ್ತವಾಗಿರುತ್ತದೆ. ಮಡಿಕೆಯ ಆವಿರ್ಭಾವವೂ ಸಹ ಉಂಟು ಹಾಗೂ ತಿರೋಭಾವವೂ ಸಹ ಉಂಟು. ಈ ಮಾತು ಈ ಉದಾಹರಣೆಯಲ್ಲೂ ಸಹ ಕಾಣಬಹುದು. ಒಂದೇ ಮಡಿಕೆಯ ರೂಪವು ಹಿಂದೆ ಹೇಳಿರುವ ಪ್ರಕಾರದಿಂದ ಆವಿರ್ಭಾವ-ತಿರೋಭಾವದ ಮೂಲಕ ಹತ್ತು ಪ್ರಕಾರದಿಂದ ಭಗವಂತನು ನೆಲಸಿದ್ದಾನೆ. ಈ ಪ್ರಕಾರವಾಗಿ ಭಗವಂತನು ಹತ್ತು-ಲೀಲೆಗಳೊಂದಿಗೆ ಸಮಸ್ತ ಜಗತ್ತಿನಲ್ಲಿ ನೆಲಸಿರುತ್ತಾನೆ. ಈ ರೀತಿಯಿಂದ ಈ ವಿಶ್ವದ ವಾಸ್ತವಿಕ ಸ್ವರೂಪವು ಭಗವಂತನೇ ಆಗಿದ್ದಾನೆ. ದೇಶದ (ಅಧಿಷ್ಠಾನದ) ಪ್ರತೀತಿ ಏನೋ ಮಾಯಿಕವಾಗಿದೆ ಹಾಗೂ ಕಾಲದ ಪ್ರತೀತಿಯು ಲೀಲಾಕೃತವಾಗಿದೆ. ಈ ಪ್ರಕಾರವಾಗಿ ಅರ್ಥವಾಗುವುದೇನೆಂದರೆ ದೇಶ, ಕಾಲ ಹಾಗೂ ವಸ್ತುವು ಮರೆಯಾಗಿಲ್ಲ ಹಾಗೂ ದೇಶ, ಕಾಲ ಹಾಗೂ ವಸ್ತುಗಳ ವಾಸ್ತವ ಸ್ವರೂಪವು 'ಅಹಂ' (ನಾನೇ) ಆಗಿದ್ದಾನೆ ಹಾಗೂ ಕೇವಲ ಈ ಸರ್ವಾತ್ಮ ಭಗವಂತನೇ ಜಿಜ್ಞಾಸ್ಯ (ತಿಳಿಯಲು ಯೋಗ್ಯನಾದವನು) ಆಗಿದ್ದಾನೆ. ಈ ತತ್ವವನ್ನೇ ವಿಚಾರಮಾಡಲಾಗಿದೆ. ಹಾಗೂ ಶ್ರುತಿಯ ವಚನಗಳೂ ಸಹ ಸಂಪೂರ್ಣ ಜಗತ್ತನ್ನು ಭಗವದ್ರೂಪವೆಂದೆ ಹೇಳುತ್ತದೆ- "ಪುರುಷ ಏವೇದಂ ಸರ್ವಂ", "ಏತಸ್ತಿಮಧಿತಿಷ್ಠತಿ", "ನ ಯತೋಸ್ತಿ ಕಿಂಚಿತ್", "ಪ್ರಾದೇಶ ಮಾತ್ರಂ ಪುರುಷಂ ವಸಂತಂ" ಇತ್ಯಾದಿ.

ಈ ಪ್ರಕಾರ ಶ್ರೀಭಗವಂತನ ಮೂಲಕ ಬ್ರಹ್ಮನಿಗೆ ನೀಡಲಾಗಿದ್ದ ಶಿಕ್ಷಣವನ್ನು ನಿರೂಪಣೆ ಮಾಡಲಾಗಿದೆ. ಇದರ ಸಾರವೇನೆಂದರೆ ಸಂಪೂರ್ಣ ಜಗತ್ತನ್ನು ಭಗವಂತನದ್ದೇ ಸ್ವರೂಪವೆಂದು ತಿಳಿದುಕೋ, ಆದರೆ ಭಗವಂತನು ಜಗತ್ತಿನಿಂದ ಭಿನ್ನನಾಗಿದ್ದಾನೆ, ಆದ್ದರಿಂದ ಜಗತ್ತಿಗಾಗಿ ಆಸಕ್ತರಾಗಬಾರದು. ಒಂದೊಂದು ವಸ್ತುವಿನಲ್ಲೂ ಸರ್ವ (ಹತ್ತು) ಲೀಲೆಗಳೊಂದಿಗೆ ಭಗವಂತನು ನೆಲಸಿದ್ದಾನೆ ಹಾಗೂ ದೇಶ, ಕಾಲ ಹಾಗೂ ವಸ್ತು ರೂಪನಾಗಿಯೂ ಸಹ ದೇಶ, ಕಾಲ ಹಾಗೂ ವಸ್ತುಗಳಿಂದ ಭಿನ್ನವಾಗಿರುತ್ತಾನೆ. ॥೩೫॥

ಶ್ರೀಭಕ್ತಿಸಿದ್ಧಾಂತ ಸರಸ್ವತೀ ಠಾಕುರರು 'ಪ್ರಭುಪಾದ್'

ಭರತವರ್ಷದಲ್ಲಿ ಯಾರು ಮನುಷ್ಯಜನ್ಮವನ್ನು ಪಡೆದುಕೊಂಡಿರುವರೋ, ಅವರು ಭಕ್ತಿಧರ್ಮವನ್ನು ಪ್ರಚಾರ ಮಾಡಿ ಪರೋಪಕಾರವನ್ನು ಮಾಡಿ ತಮ್ಮ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳಲಿ. ಉಪಾಸನೆಯ ವಿಷಯದಲ್ಲಿ ಜಿಜ್ಞಾಸ್ಯ (ಪ್ರಶ್ನೆ) ಸಂಬಂಧಜ್ಞಾನಕ್ಕೆ ಒಳಗೊಂಡ ವಿಷಯವಿದೆ. ಪ್ರಾಪ್ತ ಅಥವಾ ಪ್ರಯೋಜನ ಜಿಜ್ಞಾಸ್ಯಯ ಉತ್ತರವನ್ನು ಹಿಂದಿನ ಶ್ಲೋಕದಲ್ಲಿ ವಿವರಿಸಲಾಗಿದೆ, ಅರ್ಥಾತ್ ಜೀವಿ ಪರಮ ಸುದುರ್ಲಭ ಹರಿಪ್ರೇಮವನ್ನು ಪ್ರಾಪ್ತಿಸಿಕೊಳ್ಳಲು ಸಮರ್ಥನಾಗಿದ್ದಾನೆ ಹಾಗೂ ಆ ಹರಿಪ್ರೇಮದ ಪ್ರಾಪ್ತಿಯ ಉದ್ದೇಶದಿಂದ ಅದರ ಸಂಬಂಧಿತವಾದ ಯಾವ ಸಾಧನೆ ಇರುವುದೋ, ಅದೇ ಅಭಿಧೇಯ– ಜಿಜ್ಞಾಸೆ. ಸಕಾಮ ಹಾಗೂ ನಿಷ್ಕಾಮ ಭೇದದಿಂದ ಉಪಾಸ್ಯ ಹಾಗೂ ಉಪಾಸನೆಯ ಪ್ರಕಾರ ಭೇದವುಂಟು. ಉಪಾಸ್ಯ–ವಿಚಾರದಿಂದ ಬ್ರಹ್ಮ ಹಾಗೂ ಪರಮಾತ್ಮ ಶ್ರೀಭಗವಂತನಂತೆ ಉಪಯೋಗಿತನಲ್ಲ. ಕೇವಲ ಜ್ಞಾನಗಮ್ಯ ವಸ್ತುವನ್ನು ಬ್ರಹ್ಮ ಹಾಗೂ ಕೇವಲ ಜ್ಞಾನಗಮ್ಯ ವಸ್ತುವಿನ ಸಾನ್ನಿಧ್ಯದ ಪ್ರಾಪ್ತಿಗಾಗಿ ಪರಮಾತ್ಮನನ್ನು, ಭಜನೀಯ ಭಗವಂತನಂತೆ ಉಪಾಸ್ಯ–ಶ್ರೇಷ್ಠತ್ವಕ್ಕೆ ಅತಿರಿಕ್ತವಾದ ಅನ್ಯ ಮಾತುಗಳು ಪ್ರಕಟವಾಗುವುದು ಕಾಣಲ್ಪಡುತ್ತದೆ. ಕೇವಲ ಶ್ರೀಭಗವಂತನು ಮಾತ್ರ ಉಪಾಸನೆಕ್ರಮದಲ್ಲಿ ಸರ್ವಶ್ರೇಷ್ಠನಾಗಿದ್ದಾನೆ. ಬ್ರಹ್ಮ ಹಾಗೂ ಪರಮಾತ್ಮ ಅವನ ಪ್ರಕಾಶಭೇದವಾಗಿದೆ. ಬ್ರಹ್ಮ–ಉಪಾಸ್ಯತ್ವದ ಉಪಾಸನೆಯಲ್ಲಿ ಕೇವಲಜ್ಞಾನ, ಪರಮಾತ್ಮ–ಉಪಾಸ್ಯತ್ವದಲ್ಲಿ ಯೋಗ ಹಾಗೂ ಭಜನೀಯ ವಸ್ತುವಿನ ಉತ್ತಮಸೇವಾ ಕ್ರಮದಲ್ಲಿ ಅಭಿಧೇಯ–ಶಿರೋಮಣಿಯ ರೂಪದಲ್ಲಿ ಭಕ್ತಿಯು ನಿರ್ದಿಷ್ಟವಾಗಿದೆ. ತತ್ವಜಿಜ್ಞಾಸು ವ್ಯಕ್ತಿ ಅನಾತ್ಮವಿಷಯಕ ಸ್ಥೂಲದೇಹ ಹಾಗೂ ಮನಸ್ಸಿನ ಜಿಜ್ಞಾಸೆಯನ್ನು ಮಾಡುವುದಿಲ್ಲ. ಪರಮಾತ್ಮ–ವಸ್ತುವಿನ ಜಿಜ್ಞಾಸೆ ಸಕಾಮ–ವ್ಯಕ್ತಿಗಳಲ್ಲಿ ಕ್ರಮೇಣ ಕಾಮವಾಗಿ ಪರಿಣಮಿಸುತ್ತದೆ. ಎಲ್ಲ ಪ್ರಕಾರದಿಂದಲೂ ಅಭಿಧೇಯವು ಯಾವುದು?– ಈ ಜಿಜ್ಞಾಸೆಯು ಉದಿತವಾಗುವುದು ಕರ್ತವ್ಯ. ಇದಕ್ಕೆ ಉತ್ತರದಲ್ಲಿ ತಿಳಿಸಿಕೊಡಲಾಗುತ್ತದೆ–

ಎತಾವಾನೇವ ಲೋಕೇಽಸ್ಮಿನ್ ಪುಸಾಂ ಧರ್ಮಃ ಪರಃ ಸ್ಮೃತಃ ।
ಭಕ್ತಿಯೋಗೋ ಭಗವತಿ ತನ್ನಾಮಗ್ರಹಣಾದಿಭಿಃ ॥

(ಶ್ರೀಮದ್ಭಾ ೬/೩/೨೨)

ಅರ್ಥಾತ್ "ಈ ಜಗತ್ತಿನಲ್ಲಿ ಜೀವಿಗಳಿಗೆ ಮಾತ್ರ ಇದೇ ಎಲ್ಲದಕ್ಕಿಂತಲೂ ದೊಡ್ಡ ಕರ್ತವ್ಯ ಅರ್ಥಾತ್ ಪರಮ ಧರ್ಮವಾಗಿದೆ ಅದು ನಾಮಸಂಕೀರ್ತನೆ ಇತ್ಯಾದಿ ಉಪಾಯಗಳಿಂದ ಭಗವಂತನ ಶ್ರೀಚರಣಕಮಲಗಳಲ್ಲಿ ಭಕ್ತಿ ಭಾವವನ್ನು ಪ್ರಾಪ್ತಿಸಿಕೊಳ್ಳುವುದಾಗಿದೆ."

ಈ ಶ್ಲೋಕದ ತಾತ್ಪರ್ಯ–ಅನ್ವಯದಲ್ಲಿ ಅಭಿಧೇಯದ ಸಾರವು ಪ್ರತಿಷ್ಠಿತವಾಗಿದೆ ಹಾಗೂ,

ಅವಿಸ್ಮೃತಿಃ ಕೃಷ್ಣಪದಾರವಿಂದಯೋಃ,
ಕ್ಷಿಣೋತ್ಯಭದ್ರಾಣಿ ಚ ಶಂ ತನೋತಿ ।
ಸತ್ವಸ್ಯ ಸುದ್ಧಿಂ ಪರಮಾತ್ಮಭಕ್ತಿಂ
ಜ್ಞಾನಂಚ ವಿಜ್ಞಾನ–ವಿರಾಗಯುಕ್ತಮ್ ॥

(ಶ್ರೀಮದ್ಭಾ ೧೨/೧೨/೫೫)

ಅರ್ಥಾತ್ "ಭಗವಾನ್ ಶ್ರೀಕೃಷ್ಣನ ಚರಣಕಮಲಗಳ ಅಚಲ ಸ್ಮೃತಿಯು ಸಮಸ್ತ ಪ್ರಕಾರದ ಪಾಪ–ತಾಪ ಹಾಗೂ ಅಮಂಗಳಗಳನ್ನು ನಷ್ಟಗೊಳಿಸುತ್ತದೆ ಹಾಗೂ ಪರಮ ಶಾಂತಿಯನ್ನು ವಿಸ್ತಾರಗೊಳಿಸುತ್ತದೆ. ಅದರ ಮೂಲಕವೇ ಅಂತಃಕರಣ ಶುದ್ಧಿಯಾಗುತ್ತದೆ, ಭಗವಂತನ ಭಕ್ತಿ ಪ್ರಾಪ್ತವಾಗುತ್ತದೆ ಹಾಗೂ ಪರಮ ವೈರಾಗ್ಯದಿಂದ ಯುಕ್ತವಾದ ಭಗವಂತನ ಸ್ವರೂಪ ಜ್ಞಾನ ಹಾಗೂ ಅನುಭವ ಪ್ರಾಪ್ತವಾಗುತ್ತದೆ." ಇತ್ಯಾದಿ ವ್ಯತಿರೇಕ–ನಿರಾಸ–ತಾತ್ಪರ್ಯದಲ್ಲೂ ಸಹ ಅದೇ ಭಕ್ತಿಯು ಅಭಿಧೇಯದ ರೂಪದಲ್ಲಿ ನೆಲಸಿರುತ್ತದೆ. ಜೀವಿಯ ಸ್ವರೂಪದಲ್ಲಿ ಭಗವಂತನ ದಾಸ್ಯವು ನೆಲೆಯಾಗಿರುವ ಕಾರಣ ಆತ್ಮಾರಾಮ ಮುನಿಗಣ ಹಾಗೂ ನಿರ್ಮುಕ್ತ ಪರಮಹಂಸಗಣರನ್ನು 'ವೈಷ್ಣವ' ಎಂಬ ಹೆಸರಿನಿಂದ ತಿಳಿಯಲಾಗುತ್ತದೆ. ಶ್ರೀಭಗವಂತನ ದಾಸ್ಯಕ್ಕೆ ಅತಿರಿಕ್ತವಾಗಿ ವೈಷ್ಣವರಿಗೆ ಈ ಲೋಕದಲ್ಲಿ ಹಾಗೂ ಪರಲೋಕದಲ್ಲಿ (ವರ್ತಮಾನ ಹಾಗೂ ಭವಿಷ್ಯದಲ್ಲಿ) ಬೇರೆ ಯಾವುದೇ ಕಾರ್ಯವೂ ಸಹ ಇರುವುದಿಲ್ಲ. ಹರಿಸೇವೆಯ ವಿಸ್ಮೃತಿಯ ಕಾರಣದಿಂದಲೇ ಜೀವಗೆ ಇಂದ್ರಿಯಗಳ ವಿಷಯದ ಭೋಗ ಹಾಗೂ ಇಂದ್ರಿಯತರ್ಪಣವೇ ಪ್ರಯೋಜನ ರೂಪದಲ್ಲಿ ಗೋಚರಿಸುತ್ತದೆ. ಆ ಸಮಯದಲ್ಲಿ ಬುದ್ಧಿಜೀವಿಯ ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷ (ರೂಪ ತುಚ್ಛ ಪ್ರಯೋಜನ) ಹರಿಸೇವೆಯ ಸ್ಥಾನದಲ್ಲಿ ಅಧಿಕಾರವನ್ನು ಪಡೆಯಬಹುದಾದಂತಹ ಜೀವಿಯನ್ನು ಭೋಗ ಹಾಗೂ ತ್ಯಾಗದ ರಾಜ್ಯದಲ್ಲಿ ಭ್ರಮಣಗೊಳಿಸುತ್ತದೆ. ವ್ಯತಿರೇಕ–ಬುದ್ಧಿಯಿಂದ ಶ್ರೀಕೃಷ್ಣನ ವಿಸ್ಮರಣೆಯು ಉದಿತವಾಗುತ್ತದೆ. ಆಗ ಸುದರ್ಶನ (ವಿಷ್ಣು ಹಾಗೂ ವೈಷ್ಣವರನ್ನು ಸೇವೋನ್ಮುಖ ವೃತ್ತಿಯ ಮೂಲಕ ಯಥಾರ್ಥ ರೂಪದಲ್ಲಿ ದರ್ಶನ ಮಾಡುವುದು) ಜೀವಿಗಳಿಗೆ ಪುನಃ ವಿಭಿನ್ನ ಪ್ರಕಾರದಿಂದ ರಾಜನಂತೆ ನದಿಯಲ್ಲಿ ಮುಳುಗಿಸಿ ನಂತರ ಅವನನ್ನು ಉದ್ಧಾರ ಮಾಡುತ್ತಾನೆ. ಆಗ ಜೀವಿ ಹೇಳುತ್ತಾನೆ–

ನಾಸ್ಥಾ ಧರ್ಮೇ ನ ವಸುನಿಚಯೇ ನೈವ ಕಾಮೋಪಭೋಗೇ
ಯದ್ಯದ್ಭವ್ಯಂ ಭವತು ಭಗವನ್ ಪೂರ್ವಕರ್ಮಾನುರೂಪಮ್ ।
ಎತತ್ ಪ್ರಾರ್ಥ್ಯಂ ಮಮ ಬಹುಮತಂ ಜನ್ಮಜನ್ಮಾಂತರೇಽಪಿ
ತ್ವತ್ಪಾದಾಂಭೋರುಹಯುಗಗತಾ ನಿಶ್ಚಲಾ ಭಕ್ತಿರಸ್ತು ॥
(ಶ್ರೀಮುಕುಂದಮಾಲಾ ಸ್ತೋತ್ರಂ ೫)

ಅರ್ಥಾತ್ "ಹೇ ಭಗವಂತ! ಪುಣ್ಯಾತ್ಮಕ ಧರ್ಮದಲ್ಲಿ ಅಥವಾ ಧನರತ್ನಸಮೂಹದಲ್ಲಿ ಅಥವಾ ಕಾಮದ ಉಪಭೋಗದಲ್ಲಿ ನನಗೆ ಯಾವುದೇ ಆಕಾಂಕ್ಷೆಯೂ ಇಲ್ಲ. ಪೂರ್ವಕರ್ಮದ ಅನುಸಾರವಾಗಿ ನನಗೆ ಏನೆಲ್ಲ ಆಗಬೇಕಾಗಿರುವುದೋ, ಅವೆಲ್ಲವೂ ಆಗಿಲಿ. ಆದರೆ, ನನಗೆ ಜನ್ಮಜನ್ಮಾಂತರಗಳಲ್ಲಿಯೂ ಸಹ ನಿಮ್ಮ ಶ್ರೀಚರಣಕಮಲಗಳಲ್ಲಿ ಭಕ್ತಿಯು ನಿಶ್ಚಲವಾಗಿ ನೆಲಸಿರಲಿ- ಇದೇ ನನ್ನ ಏಕಮಾತ್ರ ಪ್ರಾರ್ಥನೆ."

ಹಾಗೂ ಅದೇ ಕಾಲಕ್ಕೆ ಜೀವಿ ಶ್ರೀಚೈತನ್ಯಚಂದ್ರರ ಶ್ರೀಚರಣಗಳ ಆಶ್ರಯವನ್ನು ಪಡೆಯುತ್ತಾನೆ-

ನ ಧನಂ ನ ಜನಂ ನ ಸುಂದರೀಂ ಕವಿತಾಂ ವಾ ಜಗದೀಶ ಕಾಮಯೇ ।
ಮಮ ಜನ್ಮನಿ ಜನ್ಮನೀಶ್ವರೇ ಭವತಾದ್ಭಕ್ತಿರಹೈತುಕೀ ತ್ವಯಿ ॥
(ಶ್ರೀಶಿಕ್ಷಾಷ್ಟಕಂ-೪)

ಅರ್ಥಾತ್ "ಹೇ ಜಗದೀಶ! ನಾನು ಧನವನ್ನು ಬಯಸುವುದಿಲ್ಲ, ಜನರನ್ನು ಬಯಸುವುದಿಲ್ಲ, ಸುಂದರ ಕವಿತೆಯನ್ನು (ಹೊಗಳಿಕೆಯನ್ನು) ಬಯಸುವುದಿಲ್ಲ. ಹೇ ಪ್ರಾಣೇಶ್ವರ ! ನನ್ನದೂ ಏಕಮಾತ್ರ ಕಾಮನೆ ಏನೆಂದರೆ ನನ್ನಲ್ಲಿ ಜನ್ಮಜನ್ಮಾಂತ್ರಗಳಲ್ಲಿಯೂ ನಿನ್ನ ಶ್ರೀಚರಣಕಮಲಗಳಲ್ಲಿ ಅಹೈತುಕಿ ಭಕ್ತಿಯು ನೆಲಸಿರಲಿ."

ಭಾಗ್ಯಹೀನ ಜೀವಿಯು ಶ್ರೀಚೈತನ್ಯಚಂದ್ರರ ಸೇವೆಯಿಂದ ವಂಚಿತನಾಗುವ ಕಾರಣದಿಂದಲೇ ತನ್ನ ವಿವೇಕವು ನಷ್ಟವಾಗುತ್ತದೆ ಹಾಗೂ ದ್ವಿತೀಯಾಭಿನಿವೇಶದ (ಅರ್ಥಾತ್ ಭಗವಂತನಿಗೆ ಅತಿರಿಕ್ತವಾಗಿ ಅನ್ಯ ವಸ್ತುಗಳಲ್ಲಿ ಆಸಕ್ತಿಯ) ಕಾರಣ ಅವನು ಕರ್ಮಫಲದ ಭೋಕ್ತಾರನಾಗಿಬಿಡುತ್ತಾನೆ. ಶ್ರೀಕೃಷ್ಣನನ್ನು ಬಿಟ್ಟು ಇತರ ವಸ್ತುಗಳಲ್ಲಿನ ಕಾಮನೆಗಳನ್ನು ತ್ಯಜಿಸಿ ಹಾಗೂ ಸಾಧು-ಗುರುವಿನ ಉಪದೇಶಕ್ಕೆ ಅನುಗತವಾಗುವುದೇ ಜೀವಿಗೆ ಚರಮ ಶ್ರೇಯಸ್ಕರಜನಕವಾದದ್ದು, ಇದೇ ಪ್ರೇಮಭಕ್ತಿ-ರಹಸ್ಯದ ಅಂಗರೂಪವಾದ ಅಭಿಧೇಯ. ಶ್ರೀಗುರುದೇವರ ನಿಕಟ ಶ್ರವಣಕ್ಕಾಗಿ ಇಚ್ಛುಕರಾಗಿ ಪ್ರಣತಿ, ಪರಿಪ್ರಶ್ನೆ ಹಾಗೂ ಸೇವೆಯ ಮೂಲಕ ಅನ್ವಯ ಅಥವಾ ಶ್ರೌತಪಥದಿಂದ ಭಕ್ತಿ ಲಭ್ಯವಾಗುತ್ತದೆ. ಮತ್ತೆ ಅದಕ್ಕೆ ವಿಪರೀತವಾದ ತರ್ಕಪಥದಲ್ಲಿ ದುರ್ಜನ ವ್ಯಕ್ತಿಗಳ ಸಂಗವನ್ನು ಪರಿತ್ಯಜಿಸಿ ತನಗಿಂತಲೂ ಶ್ರೇಷ್ಠ ಸ್ವಜಾತೀಯ-ಆಶಯ-ಸ್ನಿಗ್ಧ ಸಾಧುವಿನ ಸಂಗದಿಂದ ಕ್ರಮೇಣ ಅದೇ ಭಕ್ತಿಯು ಪ್ರಾಪ್ತವಾಗುತ್ತದೆ. ವ್ಯತಿರೇಕ-ವಿಚಾರದಿಂದಲೂ ಸಹ ಭಕ್ತಿ ಅಥವಾ ಶ್ರೌತಪಥದಲ್ಲಿ ಜೀವಿಯ ಸಾಧನ

ಪ್ರಯತ್ನವು ಸಫಲತೆಯನ್ನು ಪ್ರಾಪ್ತವಾಗಿಸುತ್ತದೆ. ಎಲ್ಲಿ ವ್ಯತಿರೇಕ–ಪಥ ಹಾಗೂ ಅನ್ವಯ–ಪಥದ ನಿರ್ದಿಷ್ಟ ವಸ್ತು ಅದ್ವಯಜ್ಞಾನವು ಇರುವುದಿಲ್ಲವೋ, ಅಲ್ಲಿ ಭಕ್ತಿಗೆ ಅತಿರಿಕ್ತವಾದ ಅನ್ಯವೃತ್ತಿ ಅರ್ಥಾತ್ ಜಡತ್ವವಾದ ಕಾಮ–ಕ್ರೋಧಾದಿ ಆರು ಪ್ರಕಾರದ ಶತ್ರುಗಳ ಚಂಚಲತೆಯು ಪ್ರಬಲವಾಗಿಬಿಡುತ್ತದೆ. ಅದು 'ಅಭಕ್ತಿ' ಶಬ್ದವಾಚ್ಯವು, ಯಾವುದೇ ಸ್ಥಿತಿಯಲ್ಲೂ ಸಹ ಅದು ಪ್ರೇಮಭಕ್ತಿಯ ಅಂಗವಾಗಲಾರದು.

ಸಾಧನಭಕ್ತಿಯ ಕ್ರಮದಲ್ಲಿ ಶ್ರೀಗುರುದೇವರ ಚರಣಕಲಗಳ ಆಶ್ರಯವೊಂದೇ ಮೂಲ ವಿಚಾರವಾದದ್ದು ಹಾಗೂ ಕೇವಲ ಶ್ರವಣಾಖ್ಯ–ಭಕ್ತಿ ಮಾತ್ರವೇ ಅವಲಂಬನೀಯವಾದದ್ದು. ಯಾರು ಶ್ರವಣ ಮಾಡುವರೋ, ಅವರೇ ವ್ಯತಿರೇಕ–ಪಂಥಿಯ ವಿಚಾರದ ವಿಷಾದವನ್ನು ಅಳಿಸಲು ಸಾಧ್ಯವಾಗುತ್ತದೆ ಅರ್ಥಾತ್ ತಾರ್ಕಿಕರನ್ನು ಶ್ರೌತ–ಭಕ್ತಿಮಾರ್ಗದಲ್ಲಿ ತಂದು ಅವರಿಗೆ ಅತಿ ದೊಡ್ಡ ಉಪಕಾರವನ್ನು ಮಾಡುತ್ತಾರೆ. ಇದೇ "ಜೀವಿಯ ಮೇಲಿನ ದಯೆ" ಹಾಗೂ ನಿಜವಾದ "ವೈಷ್ಣವ–ಸೇವೆ". ಅನ್ವಯರೂಪದಿಂದ ಶ್ರೌತ–ನಾಮಗ್ರಹಣ ಇತ್ಯಾದಿಯ ಪಥದ ಭಕ್ತಿಯೋಗದಲ್ಲಿ ಅವಲಂಬನೀಯವಾದದ್ದು ಹಾಗೂ ಅದನ್ನು ಪ್ರಾಪ್ತಿಸಿಕೊಂಡು ಕೀರ್ತನಾಖ್ಯ ಭಕ್ತಿಯ ಆಶ್ರಯದಲ್ಲೇ ವಿಭಿನ್ನ ಪ್ರಕಾರದ ಭಕ್ತಿಯನ್ನು ಸಾಧಿಸಲಾಗುತ್ತದೆ. ಯಾವ ವ್ಯಕ್ತಿ ಶ್ರೌತಪಥದ ಆಶ್ರಯವನ್ನು ಪಡೆದುಕೊಂಡು ಸದ್ಗುರುವಿನ ಶಿಷ್ಯನಾಗಿರುವನೋ, ಅವನೇ ವಿಶ್ರಂಭಭಾವದಿಂದ ಗುರುಸೇವೆಯ ಮೂಲಕ ಹಾಗೂ ಸಾಧುಪಥದ ಅನುಗಮನದ ಮಾಧ್ಯಮದಿಂದ ಕೀರ್ತನಾಖ್ಯ ಭಕ್ತಿಯ ಆಶ್ರಯವನ್ನು ಗ್ರಹಿಸುತ್ತಾನೆ. ಕೀರ್ಥನಾಖ್ಯ ಭಕ್ತಿಯ ಪ್ರಭಾವದಿಂದ ಅನರ್ಥಗಳು ದೂರವಾದಾಗ ಭಗವತ್–ಸ್ಮೃತಿಯು ಸ್ವತಃಸಿಧ ರೂಪದಿಂದ ಸ್ವಯಂ ಪ್ರಕಾಶಿತವಾಗುತ್ತದೆ. ಯಾರಲ್ಲಿ ಆತ್ಮಜಿಜ್ಞಾಸವು ಉದಿತವಾಗಿಲ್ಲವೋ ಹಾಗೂ ಅನಾತ್ಮಜಿಜ್ಞಾಸವು ಉದಯವಾಗಿರುವ ಕಾರಣ ಅಭಕ್ತಿಯನ್ನೇ ಯಾರು ಸಾಧನದ ರೂಪದಲ್ಲಿ ನಿರೂಪಣೆ ಮಾಡಿಕೊಂಡಿರುವರೋ, ಆ ವ್ಯಕ್ತಿಗಳಿಗೆ, ಲಭಿಸುವ ಪ್ರೇಮ–ಭಕ್ತಿಯ ಸೋಪಾನ ಅಥವಾ ಭಕ್ತಿಯ ಅಂಗವಾದ–ಸಾಧನಭಕ್ತಿಯು ಉದಿತವಾಗುವ ಯಾವುದೇ ಪ್ರಕಾರದ ಸುಯೋಗವು ಇರುವುದಿಲ್ಲ.

ಬ್ರಹ್ಮಸೂತ್ರದ ಸಾಧನಪಾದದಲ್ಲಿ ಯಾವ ಪ್ರಕಾರದಿಂದ ಅನ್ಯ (ಇತರ) ಸಾಧನೆಗಳ ಖಂಡನೆಯಾಗಿರುವುದೋ, ಅದೇ ಈ ಶ್ಲೋಕದ ಪ್ರತಿಪಾದನೆಯ ವಿಷಯ. ಬ್ರಹ್ಮಸೂತ್ರದ ಚತುರ್ಥಪಾದವನ್ನು ಫಲಾಧ್ಯಾಯವೆಂದು ಹೇಳಲಾಗಿದೆ ಹಾಗೂ ಈ ಫಲಾಧ್ಯಾಯದ ಹಿಂದಿನ ಅಧ್ಯಾಯವು 'ಸಾಧನ' ನಾಮದಿಂದ ವಿವರಿಸಲ್ಪಡುತ್ತದೆ. ಮೊದಲ ಎರಡು ಪಾದವು ಸಂಬಂಧಜ್ಞಾನ ವಿಷಯಕವಾಗಿದೆ, ಮೂರನೆಯ ಪಾದದಲ್ಲಿ ಭಕ್ತಿ ಅರ್ಥಾತ್ ಅಭಿಧೇಯ ಹಾಗೂ ನಾಲ್ಕನೆಯದರಲ್ಲಿ ಪ್ರೇಮರೂಪಿ ಪ್ರಯೋಜನ ಬ್ರಹ್ಮಸೂತ್ರದ ಉಪದಿಷ್ಟ ವಿಷಯವಾಗಿದೆ. ಸಂಬಂಧ–ಅಭಿಧೇಯ–ಪ್ರಯೋಜನ ತತ್ವವು ಮದನಗೋಪಾಲ, ಗೋವಿಂದ ಹಾಗೂ ಗೋಪೀಜನವಲ್ಲಭನ ಮೂರು ಸ್ವರೂಪ–ವೈಚಿತ್ರ್ಯಗಳಲ್ಲಿ ವಿವರಿಸಲಾಗಿದೆ. ಪ್ರಾರಂಭದ ಶ್ಲೋಕದಲ್ಲಿ

"ಗೃಹಾಣ ಗದಿತಂ ಮಯಾ" ಇದು ಶ್ರೌತಪಥ ಸಾಧನಪಾದದ ಹಾಗೂ ಈ ಶ್ಲೋಕದ ವರ್ಣನೀಯ ವಿಷಯ. ಅದರ ಫಲಸ್ವರೂಪ ಭಾವಭಕ್ತಿ ಹಾಗೂ ಪ್ರೇಮ-ಪ್ರಕಟಣೆಯು ನಿಶ್ಚಯವಾದದ್ದು. ಧರ್ಮ-ಅರ್ಥ-ಕಾಮ ಅಥವಾ ಮೋಕ್ಷದ ವಿಚಾರದಲ್ಲಿ ಯಾವ ಪ್ರಕಾರ ಅನ್ಯ (ಇತರ) ಫಲಗಳು ಕಲ್ಪಿತವಾಗುತ್ತದೆ, ರಹಸ್ಯಮಯ ಪ್ರೇಮದೊಂದಿಗೆ ಅದನ್ನು ಹೋಲಿಸಲಾಗುವುದಿಲ್ಲ. ಚತುರ್ವರ್ಗದ ಪ್ರಾಪ್ತಿಯ ಸಾಧನ ಕ್ರಮ ಹಾಗೂ ಜ್ಞಾನಮಾರ್ಗದಿಂದ ಬಂಧಿಸಲ್ಪಟ್ಟಿದೆ. ಆತ್ಮಧರ್ಮರೂಪ ಭಕ್ತಿಯು ಕೇವಲ ವೈಷ್ಣವರ ಮೂಲಕವೇ ಪ್ರಾಪ್ತವಾಗುತ್ತದೆ. ಅವೈಷ್ಣವ ವ್ಯಕ್ತಿಗಳು ಭ್ರಮವಶರಾಗಿ ಯಾವ ಎಲ್ಲ ಅಭಿಧೇಯಗಳನ್ನು ಸ್ಥಿರಪಡಿಸಿದ್ದಾರೋ, ಅವೆಲ್ಲವೂ ನಶ್ವರ ಅನುಭೂತಿಮಯ ಅನಾತ್ಮದ (ಜಡದ) ಅಭಿಧೇಯ ಶಬ್ದ-ವಾಚ್ಯವು.

ಅಧೋಕ್ಷಜ-ಸೇವೆಯನ್ನು ಅಭಕ್ತರ ಕರ್ಮ ಹಾಗೂ ಜ್ಞಾನದೊಂದಿಗೆ ಹೋಲಿಸಲಾಗುವುದಿಲ್ಲ. ಆ ವ್ಯಕ್ತಿಗಳು ಅನ್ವಯ-ವಿಚಾರದ ಪರಿತ್ಯಜಿಸಿ ವ್ಯತಿರೇಕ-ವಿಚಾರದಿಂದ ದಿಕ್ಕುಗೆಟ್ಟಿದ್ದಾರೆ, ಆದ್ದರಿಂದ ಅವರು ಭಗವತ್-ಕೃಪೆಗೆ ಅಯೋಗ್ಯರಾಗಿದ್ದಾರೆ. ಭಗವತ್-ಕೃಪೆಯನ್ನು ಅಭಿಧೇಯವೆಂದು ತಿಳಿದರೆ ಕೃಪಾಗ್ರಹಣರೂಪವಾದ ಭಜನೆಯನ್ನು ಅದರಿಂದ ಸ್ವತಂತ್ರವೆಂದು ಭಾವಿಸಬಾರದು. ಭಜನೆಯ ಫಲ ಪ್ರೇಮ- ಅಭಿಧೇಯದ ಫಲಸ್ವರೂಪ ಹಾಗೂ ಮೂಲ ಅಂಶಭೂತ ವಸ್ತು. ॥೩೫॥

ಶ್ರೀ ಶ್ರೀನಿವಾಸಾಚಾರ್ಯಪಾದರು

ತದೇವಂ ಮಧುರೇಣ ಸಮಾಪಯೇತ್- ಐತಾವದೇವೇತಿ । ಆತ್ಮನೋ ಮಮ ತತ್ತ್ವಂ ಪೂರ್ವೋಕ್ತಂ ಸುಗೋಪ್ಯಂ ಸರ್ವಗುಹ್ಯತಮಂ ಪರಮ-ರಹಸ್ಯಂ ಜಿಜ್ಞಾಸುನಾ ಜ್ಞಾತುಮಿಚ್ಛುನಾ ಶಿಷ್ಯೇಣ ಎತಾವದೇವ ಜಿಜ್ಞಾಸ್ಯಂ ಪುನಃ ಪುನಃ ಜ್ಞಾತವ್ಯಂ । ಕುತಃ ಪರಮಸ್ತು? ಪರಮಸಾಧನ-ಪರಮ-ಪುರುಷಾರ್ಥ-ವಿಚಾರನಿಪುಣ ಶ್ರೀಭಾಗವತ-ರಕ್ತರಸಿಕಾಸಂಗಸಂಗಿ-ಪ್ರಸನ್ನೋಜ್ಜ್ವಲಚಿತ್ತ-ಜೀವನೀಭೂತ-ಗೋವಿಂದಪಾದಪದ್ಮ-ಸುಧಾಸ್ವಾದಕ-ಶ್ರೀಚೈತನ್ಯ-ಚಂದ್ರಚರಣಾಬ್ಜಚಂಚರೀಕ-ಶ್ರೀರಾಧಾಪದನಖಚಂದ್ರಚಕೋರ-ಶ್ರೀಗುರುತಃ ಶಿಕ್ಷಣೀಯಂ ಪೂರ್ವೋಕ್ತಮೇವ, ಶ್ರೀಕೃಷ್ಣಲೀಲಾ-ರಹಸ್ಯಂ-ಸ್ವಕೀಯಾ ಪರಕೀಯಾ; ಗೋಪೀಷು ಪರಕೀಯಾ-ಭಾವಾದಿಕಂ, ನಾನ್ಯತ್ । ಕೇನ ಪ್ರಕಾರೇಣ? ಇತ್ಯಾಹ- ಅನ್ವಯ-ವ್ಯತಿರೇಕಾಭ್ಯಾಮ್। ಅನ್ವಯೇನ ಅನುಗಮನೇನ ಅನುಸೇವಯೇತ್ಯರ್ಥಃ; ವ್ಯತಿರೇಕೇಣ ವಿಶಿಷ್ಟೇನ ಅತಿರೇಕೇಣ ಔತ್ಕಟ್ಯೇನ ಪರಮಾರ್ತ್ಯೇತ್ಯರ್ಥಃ । ಯತ್ ಶ್ರೀಗುರೋರನುಗಮನಂ ಸರ್ವತ್ರ ಸರ್ವಭಜನಸಾಧನೇ ಅನುಸರಣಂ ಸರ್ವದಾ ಸರ್ವಕಾಲೇ ಜೀವನೇ ಮರಣೇ ವಿಪದಿ ಸಂಪದಿ ದೂರೇ ನಿಕಟೇ ದಿನಾದೌ ನಿಶಾದೌ ಸಂಕೀರ್ತನಾದೌ ಮಹಾಪ್ರಸಾದೇ ಅನುಶೀಲನೇ ಇತ್ಯಾದಿ । ಅತಏವ- *'ತಸ್ಮಾದ್ ಗುರುಂ ಪ್ರಪದ್ಯೇತ'* (ಶ್ರೀಮದ್ಭಾ ೧೧/೩/೨೧) ಇತ್ಯಾದಿ । *'ತತ್ರ ಭಾಗವತಾನ್ ಧರ್ಮಾನ್ ಶಿಕ್ಷೇದ್ ಗುರ್ವಾತ್ಮದೈವತಃ'* (ಶ್ರೀಮದ್ಭಾ ೧೧/೩/೨೨) ಗುರುರೇವಾತ್ಮಾ ದೈವತಂಚ; *'ತಸ್ಮೈ ಶ್ರೀಗುರವೇ ನಮಃ'*, *'ಯೇ ಮಯಾ ಗುರುಣಾ*

ವಾಚಾ ತರಂತ್ಯಂಜೋ ಭವಾರ್ಣವಮ್' (ಶ್ರೀಮದ್ಭಾ ೧೦/೮೦/೩೩), *'ಯಥಾಹಂ ಜ್ಞಾನದೋ ಗುರುಃ'* (ಶ್ರೀಮದ್ಭಾ ೧೦/೮೦/೩೨); ಗುರೋರನುಗ್ರಹೇಣೈವ ಪೂರ್ಣಃ । ಹರಿಗುರುಚರಣಾರವಿಂದ-ಯುಗಲಾನುಶೀಲನೇನ *'ಬಲವಾನಾದರೋ ಯಸ್ಯ ನ ಸ್ಯಾದ್ ಗುರುಪದಾಂಬುಜೆ । ಶ್ರುತೈರಪ್ಯಸ್ಯ ಸಚ್ಛಾಸ್ತ್ರೈಃ ಕೃಷ್ಣೆ ಭಕ್ತಿರ್ನ ಜಾಯತೆ ॥'*; ಹರಿರೇವ ಗುರುಃ, ಗುರುರೇವ ಹರಿಃ । *'ಗುರು-ಕರ್ಣಧಾರಮ್'* (ಶ್ರೀಮದ್ಭಾ ೧೧/೨೦/೧೭), 'ಗುರುಷು ನರಮತಿಃ (ಪಾದ್ಮೆ), *'ಗುರೋರವಜ್ಞಾ ಶ್ರುತಿಶಾಸ್ತ್ರನಿನ್ದನಮ್'* (ಪಾದ್ಮೆ), *'ಆಚಾರ್ಯಂ ಮಾಂ ವಿಜಾನೀಯಾತ್'* (ಶ್ರೀಮದ್ಭಾ ೧೧/೧೭/೨೭) ಇತ್ಯಾದಿ । ಕಿಂ ಬಹುನಾ? ನಾಸ್ತಿ ತತ್ವಂ ಗುರೋಃ ಪರಮ್ ಇತಿ ದಿಕ್ ॥೩೫॥

ಭಾವಾನುವಾದ- ಈಗ ಶ್ರೀಭಗವಂತನು ಮಧುರ-ಭಾವದಿಂದ ಪ್ರಸಂಗವನ್ನು ಸಮಾಪ್ತಗೊಳಿಸುತ್ತಿದ್ದಾರೆ. ನನ್ನ (ಶ್ರೀಕೃಷ್ಣನ) ಪೂರ್ವೋಕ್ತ ಸುಯೋಗ, ಪರಮಗುಹ್ಯತಮ, ಪರಮ-ರಹಸ್ಯ ತತ್ವದ ಜಿಜ್ಞಾಸು ಉದಿತವಾದರೆ ಶಿಷ್ಯರು ಮತ್ತೆ-ಮತ್ತೆ ಈ ವಿಷಯದಲ್ಲೇ ಜಿಜ್ಞಾಸು ನಡೆಸಲಿ. ಜಿಜ್ಞಾಸುವಿನಸ್ಥಳವು ಏಕಮಾತ್ರ ಶ್ರೀಗುರುದೇವರ ಚರಣಕಮಲವೇ ಆಗಿದೆ ಹಾಗೂ ಶ್ರೀಗುರುದೇವರೂ ಸಹ ಪರಮ ಸಾಧನ ಹಾಗೂ ಪರಮ ಪುರುಷಾರ್ಥಾದಿ ವಿಷಯಕ ವಿಚಾರದಲ್ಲಿ ನಿಪುಣರಾಗಿರಬಹುದು, ಶ್ರೀಭಾಗವತದಲ್ಲಿ ಆಸಕ್ತರಾದ ರಸಿಕಜನರ ಸಂಗಪರಾಯಣರಾದ ಕಾರಣ ಅವರು ಪ್ರಸನ್ನ ಹಾಗೂ ಉಜ್ವಲ-ಚಿತ್ತರಾಗಿರಬಹುದು, ತಮ್ಮ ಜೀವನ ಸ್ವರೂಪವನ್ನು ಶ್ರೀಗೋವಿಂದನ ಚರಣಕಮಲಗಳಲ್ಲಿನ ಸುಧೆಯನ್ನು ಆಸ್ವಾದಿಸುತ್ತಿರಬಹುದು, ಶ್ರೀಚೈತನ್ಯಚಂದ್ರರ ಶ್ರೀಚರಣಕಮಲಗಳ ಮಧುಕರ ಹಾಗೂ ಶ್ರೀರಾಧಿಕಾರವರ ಪಾದಗಳಲ್ಲಿ ಚಂದ್ರಚಕೋರರಾಗಿಬಹುದು. ಈ ರೀತಿ ಕೇವಲ ಶ್ರೀಗೌರ-ಗೋವಿಂದನ ಭಜನೆಯಲ್ಲಿ ನಿಪುಣರಾದ ಶ್ರೀಗುರುದೇವರ ಹತ್ತಿರದಲ್ಲೇ ಶ್ರೀಕೃಷ್ಣಲೀಲೆಯ ರಹಸ್ಯವನ್ನು ತಿಳಿಯಬೇಕು. ಈ 'ಲೀಲಾ-ರಹಸ್ಯ' ಶಬ್ದದಿಂದ ಸ್ವಕೀಯ ಹಾಗೂ ಪರಕೀಯ ಭೇದದಿಂದ ಎರಡು ಪ್ರಕಾರದ ಲೀಲೆ ಹಾಗೂ ಗೋಪಿಗಳ ವಿಷಯದಲ್ಲಿ ಪರಕೀಯಭಾವ ಇತ್ಯಾದಿ, ಅನ್ಯ ಯಾವುದೂ (ಸ್ವಕೀಯ ಇತ್ಯಾದಿ) ಸಹ ಇಲ್ಲ- ಇದನ್ನು ತಿಳಿಯುವುದೇ ಯೋಗ್ಯವಾದ ವಿಷಯ. ಈ ವಿಷಯವು ಯಾವ ರೀತಿಯಿಂದ ಶಿಕ್ಷಣೀಯವಾಗಿದೆ? ಇದಕ್ಕೆ ಉತ್ತರದಲ್ಲಿ ಹೇಳುತ್ತಾರೆ- ಅನ್ವಯ ಹಾಗೂ ವ್ಯತಿರೇಕ ರೂಪದಿಂದ. 'ಅನ್ವಯ' ಶಬ್ದದಿಂದ ಆನುಗತ್ಯ ಅರ್ಥಾತ್ ನಿರಂತರ ಸೇವೆ ಹಾಗೂ 'ವ್ಯತಿರೇಕ' ಶಬ್ದದಿಂದ ಉತ್ಕಂಠ ಅರ್ಥಾತ್ ಪರಮಾರ್ತಿಯೇ ಧ್ವನಿತವಾಗುತ್ತದೆ. ಆದ್ದರಿಂದ ಪರಮಾರ್ತಿಯಿಂದ ಪರಿಪೂರ್ಣನಾಗಿ ಶ್ರೀಗುರುದೇವರ ಚರಣಕಮಲಗಳಲ್ಲಿ ನಿತ್ಯ ಅನುಗತ ಸೇವೆಯ ಮೂಲಕವೇ ಶ್ರೀಕೃಷ್ಣಲೀಲೆಯ ರಹಸ್ಯವನ್ನು ತಿಳಿಯಬೇಕು. ಇದಕ್ಕೆ ಕಾರಣವೇನೆಂದರೆ ಶ್ರೀಗುರುದೇವರ ಚರಣಕಮಲಗಳ ಆನುಗತ್ಯವೇ 'ಸರ್ವತ್ರ' ಅರ್ಥಾತ್ ಸಮಸ್ತ ಭಜನ-ಸಾಧನೆಯಲ್ಲಿ; 'ಸರ್ವದಾ' ಅರ್ಥಾತ್ ಸರ್ವಕಾಲದಲ್ಲಿ-ಜೀವನ-ಮರಣದಲ್ಲಿ, ವಿಪತ್ತು-ಸಂಪತ್ತಿನಲ್ಲಿ, ದೂರ-

ಹತ್ತಿರದಲ್ಲಿ, ಪ್ರಭಾತ–ಪ್ರದೋಷದಲ್ಲಿ, ಸಂಕೀರ್ತನಾರಂಭ ಹಾಗೂ ಮಹಾಪ್ರಸಾದ ಸೇವನೆಯಲ್ಲಿ, ಒಂದು ವಿಚಾರದಿಂದ ಜೀವನದ ಪ್ರತಿ ಪದಕ್ಷೇಪ ಹಾಗೂ ಪ್ರತಿ ಮುಹೂರ್ತದಲ್ಲೇ ಅನುಶೀಲನೀಯ ಕಾರ್ಯಗಳಲ್ಲಿ ಅತ್ಯಾವಶ್ಯಕ ಧರ್ಮ.

ಈ ವಿಷಯದಲ್ಲಿ ಶ್ರೀಮದ್ಭಾಗವತಾದಿ ಶಾಸ್ತ್ರಗಳೆ ಪ್ರಮಾಣವಾಗಿವೆ– (ಶ್ರೀಮದ್ಭಾ.೧೧/೩/೨೧)– "ಯಾವ ವ್ಯಕ್ತಿಯಲ್ಲಿ ಪರಮ ಕಲ್ಯಾಣದ ಜಿಜ್ಞಾಸು ಇರುತ್ತದೋ, ಆ ವ್ಯಕ್ತಿ ಶ್ರೀಗುರುದೇವರ ಚರಣಕಮಲಗಳಲ್ಲಿ ಶರಣನಾಗಬೇಕು."; (ಶ್ರೀಮದ್ಭಾ ೧೧/೩/೨೨)– "ಶ್ರೀಗುರುವನ್ನೇ ತನ್ನ ಆತ್ಮ (ಪ್ರಿಯ ಬಾಂಧವ) ಹಾಗೂ ದೇವರಾಗಿ (ಪರಮಾರಾಧ್ಯ ಇಷ್ಟದೇವರಾಗಿ) ಭಾವಿಸಬೇಕು, ಅವರ ಹತ್ತಿರ ಭಾವದಿಂದ ಸೇವೆಯನ್ನು ಮಾಡಿ ಭಾಗವತ–ಧರ್ಮದ ಶಿಕ್ಷಣವನ್ನು ಗ್ರಹಿಸಬೇಕು."; (ಶ್ರೀಮದ್ಭಾ.೧೦/೮೦/೩೩)– "ಶ್ರೀಗುರುದೇವರ ಉಪದೇಶಾನುಸಾರವಾಗಿ ಅನಾಯಾಸವೇ ಭವ–ಸಾಗರದಿಂದ ಪಾರಾಗಿಬಿಡುತ್ತದೆ."; (ಶ್ರೀಮದ್ಭಾ ೧೦/೮೦/೩೨)– "ಜ್ಞಾನದ ಉಪದೇಶದ ಮೂಲಕ ಪರಮಾತ್ಮನನ್ನು ಪ್ರಾಪ್ತಿಸಿಕೊಂಡ ಶ್ರೀಗುರುಗಳೇನೋ ನನ್ನ ಸ್ವರೂಪವೇ ಆಗಿದ್ದಾರೆ."; "ಹರಿರೇವ ಗುರು ಗುರುರೇವ ಹರಿ ಅರ್ಥಾತ್ ಶ್ರೀಹರಿಯೇ ಗುರು ಹಾಗೂ ಗುರುದೇವರೇ ಹರಿ."; (ಶ್ರೀಮದ್ಭಾ ೧೧/೨೦/೧೭)– "ಕೇವಲ ಶರಣಾಗತಿಯಿಂದ ಮಾತ್ರವೇ ಶ್ರೀಗುರುದೇವರು ಮನುಷ್ಯಯ–ದೇಹರೂಪ ನೌಕೆಯ ಅಂಬಿಗನಾಗಿ (ಚಾಲಕನಾಗಿ) ಚುಕ್ಕಾಣಿಯನ್ನು (ಪತವಾರ) ಸಂಚಲನೆಮಾಡುತ್ತಾರೆ." "ಆಚಾರ್ಯಂ ಮಾಂ ವಿಜಾನೀಯತ್ (ಶ್ರೀಮದ್ಭಾ ೧೧/೧೭/೨೭) ಅರ್ಥಾತ್ ಆಚಾರ್ಯರನ್ನು ನನ್ನ ಸ್ವರೂಪವೆಂದು ಭಾವಿಸು." ಇತ್ಯಾದಿ. ಹೆಚ್ಚು ಮಾತೇಕೆ, ಏಕೆಂದರೆ ಶ್ರೀಗುರುದೇವರಿಗಿಂತಲು ಶ್ರೇಷ್ಠ ತತ್ವ ಮತ್ತೊಂದಿಲ್ಲ– ಇದೇ ಈ ವಿಚಾರದ ದಿಗ್ದರ್ಶನ. ॥೩೫॥

ವೇದ ಮತ್ತು ಚತುಃಶ್ಲೋಕಿ

(ಶ್ರೀಮದ್ಭಾ೨/೯/೩೨-೩೫)

ಯಾರೋ ಒಬ್ಬರು ವ್ಯಾಖ್ಯಾಯನಕಾರರು ಈ ರೀತಿ ಬರೆದಿದ್ದಾರೆ-

"ಸಮಗ್ರ ಋಗ್ವೇದದ ಸಂಕ್ಷೇಪ-ಸ್ವರೂಪ ಅದರ ಯಾವ ಪ್ರಥಮ ಮಂತ್ರವಿದೆಯೋ, ಅದರ ಅರ್ಥ ಚತುಃಶ್ಲೋಕೀ-ಭಾಗವತದ ಪ್ರಥಮ ಶ್ಲೋಕದಲ್ಲಿ ವ್ಯಕ್ತವಾಗಿದೆ. ಸಮಗ್ರ ಯಜುರ್ವೇದದ ಸಂಕ್ಷೇಪ-ಸ್ವರೂಪವು ಅದರ ಯಾವ ಪ್ರಥಮ ಮಂತ್ರವಿದೆಯೋ, ಅದರ ಅರ್ಥ ಚತುಃಶ್ಲೋಕೀ-ಭಾಗವತದ ದ್ವಿತೀಯ ಶ್ಲೋಕದಲ್ಲಿ ಹೇಳಲಾಗಿದೆ. ಸಮಗ್ರ ಅಥರ್ವಣವೇದದ ಸಂಕ್ಷೇಪ-ಸ್ವರೂಪ ಅದರ ಯಾವ ಪ್ರಥಮ ಮಂತ್ರವಿದೆಯೋ, ಅದರ ಅರ್ಥ ಚತುಃಶ್ಲೋಕೀ-ಭಾಗವತದ ತೃತೀಯ ಶ್ಲೋಕದಲ್ಲಿ ಸಂಗೃಹಿತವಾಗಿದೆ. ಸಮಗ್ರ ಸಾಮವೇದದ ಸಂಕ್ಷೇಪ-ಸ್ವರೂಪ ಅದರ ಯಾವ ಪ್ರಥಮ ಮಂತ್ರವಿದೆ, ಅದರ ಅರ್ಥ ಚತುಃಶ್ಲೋಕೀ-ಭಾಗವತದ ಚತುರ್ಥ ಶ್ಲೋಕದಲ್ಲಿದೆ.

ಹಾಗೂ (ಅದೇ ಪ್ರಕಾರ) ನಾಲ್ಕು ವೇದಗಳ ರಹಸ್ಯಭೂತ ಮಂತ್ರಗಳ ಅರ್ಥ ಶ್ರೀಮದ್ಭಾಗವತದ ಹನ್ನೊಂದನೆ ಸ್ಕಂಧದ ಪಂಚಮ ಅಧ್ಯಾಯದಲ್ಲಿ ಹೇಳಿರುವ "ಕೃಷ್ಣವರ್ಣಂ ತ್ವಿಷಾಕೃಷ್ಣಂ" (ಶ್ರೀಮದ್ಭಾ ೧೧/೫/೩೨) - ಈ ಪರಮರಹಸ್ಯಮಯ ಶ್ಲೋಕದಲ್ಲಿ ವ್ಯಾಖ್ಯಾಯನವಾಗಿದೆ.

ಯಥಾ-

'ಅಗ್ನಿಮೀಲೆ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಂ
ಹೋತಾರಂ ರತ್ನಧಾತಮಮ್ ।

(ಋಗ್ವೇದ -೧ ಅಷ್ಟ, ೧ ಅ, ೧ ಮಂತ್ರ)

ಅನ್ವಯ- ಯಜ್ಞಸ್ಯ (ನಾಮ-ಯಜ್ಞಸ್ಯ) ಪುರೋಹಿತಂ (ಅಭೀಷ್ಟ-ಸಂಪಾದಕಂ) ಋತ್ವಿಜಂ (ಋತೌ ಪ್ರತ್ಯುತ್ಪತ್ತಿಕಾಲಂ ಸಂಸಾರಂ ಯಜತಿ ಸಜ್ಗತಂ ಕರೋತಿ ಯಃ ತಂ) ಹೋತಾರಂ (ಪ್ರಪನ್ನಾನಾಂ ಆಹ್ವಾತಾರಂ) ರತ್ನಧಾತಮಂ (ಸರ್ವಕರ್ಮಫಲರೂಪಾಣಾಂ ರತ್ನಾನಾಂ ಅತಿಶಯೇನ ಧಾರಯಿತಾರಂ ಪಾಲಯಿತಾರಂ) ದೇವಂ (ಅಪ್ರಾಕೃತ-ಕ್ರೀಡಾಯಾಂ ಮೋದಮಾನಂ ನಿರತಿಶಯಂ ದೀಪ್ತಿಮನ್ತಂ) ಅಗ್ನಿಂ (ಅಗ್ರಂ ನಯತಿ ನೀಯತೇ ಇತಿ ವಾ ತತ್ ಸರ್ವೇಷಾಂ ಅಗ್ರವರ್ತಿನಂ ಪಶ್ಚಾದ್ ವರ್ತಿನಂ ಚ ಶ್ರೀನಂದನಂದನಂ) ಈಲೆ (ಈಡೆ, ಶಬ್ದಯಾಥಾರ್ಥ್ಯನಿರ್ಣಯಪುರಃ ಸ್ತೌಮಿ) ।

ಅನುವಾದ- ನಾಮಯಜ್ಞದ ಅಭೀಷ್ಟವನ್ನು ಸಂಪಾದನೆ ಮಾಡುವವನೆ (ಅರ್ಥಾತ್ ವ್ರಜದೇವಿಯರ ಮೂಲಕ ವಿರಹದಲ್ಲಿ ಕೃಷ್ಣನಾಮ ಸಂಯುಕ್ತ ಗೀತರೂಪೀ ಯಜ್ಞದ ಅಭೀಷ್ಟ ಅರ್ಥಾತ್ ತನ್ನ ದರ್ಶನವನ್ನು ಪ್ರದಾನಿಸುವವನು), ಪ್ರತ್ಯೇಕ ಋತುವಿನಲ್ಲಿ (ಉತ್ಪತ್ತಿಕಾಲದಲ್ಲಿ) ಸಂಸಾರದ ಯಜನ ಅಂದರೆ ಸಂಗತ

ಮಾಡುವವನು (ಅಂದರೆ ವಸಂತ, ಶರದ, ಹೇಮಂತ ಇತ್ಯಾದಿ ಋತುಗಳಲ್ಲಿ–ಆಢ್ಯ (ಶೃಂಗಾರ) ರಸದ ಉದ್ದೀಪನ ಕಾಲದಲ್ಲಿ ಸಂಪೂರ್ಣ ರೂಪದಿಂದ ಸಾರವಸ್ತುವಿನ ಯಜನ ಅಂದರೆ ರಾಸಲೀಲೆಗಾಗಿ ವ್ರಜದೇವಿಯರೊಂದಿಗೆ ಸಂಗಮ ಮಾಡುವವನು), ಶರಣಾಗತ ಜನರನ್ನು ಆಹ್ವಾನಿಸುವವನು (ಅಂದರೆ ವ್ರಜದೇವಿಯರನ್ನು ವೇಣುನಾದದ ಮೂಲಕ ಕರೆಯುವವನು), ಎಲ್ಲ ಕರ್ಮಫಲರೂಪೀ ರತ್ನವನ್ನು ಅತ್ಯಾಧಿಕವಾಗಿ ಧಾರಣೆ ಅಂದರೆ ಪಾಲನೆ ಮಾಡುವವನು (ಅಂದರೆ ಎಲ್ಲ ಪ್ರಯತ್ನಗಳ ಸಾರ ಸ್ವರೂಪ ರಾಸಲೀಲೆಯ ನೃತ್ಯ-ವಿಹಾರ ಮುಂತಾದ ರತ್ನಗಳನ್ನು ಅತ್ಯಾಧಿಕ ರೂಪದಲ್ಲಿ ಧಾರಣೆ ಮಾಡುವವನು), ಅಲೌಕಿಕ ಕ್ರೀಡೆಯಲ್ಲಿ ಆನಂದಮಗ್ನ ಮತ್ತು ಅತ್ಯಂತ ದೀಪ್ತಮಾನನಾಗಿರುವವನು, ಎಲ್ಲರ ಮುಂದೆ ಹಾಗು ಹಿಂದೆ ಅಂದರೆ ಸರ್ವದಾ ಇರುವವನಾದ (ಅಂದರೆ ರಾಸಲೀಲೆಯಲ್ಲಿ ಸರ್ವದಾ ಸಮಸ್ತ ವ್ರಜದೇವಿಯರ ಮುಂದೆ ಮತ್ತು ಹಿಂದೆ ಇರುವವನಾದ) ಶ್ರೀನಂದನಂದನನ್ನು ನಾನು ಶಬ್ದಗಳ ಯಥಾರ್ಥವಾದವನ್ನು (ಅರ್ಥಾತ್ ಈ ವೇದ ಮಂತ್ರದ ವಾಸ್ತವ ಅರ್ಥ) ನಿರ್ಣಯಿಸಿ ಸ್ತುತಿಸುತ್ತೇನೆ.

[ಪ್ರಸ್ತುತ ಶ್ಲೋಕದ ಮೂಲಕ ಶ್ರೀಭಗವಂತನು, ಅವನ ಪರಿಕಾರರು ಮತ್ತು ಅವನ ಲೀಲೆಯನ್ನು ನಿತ್ಯತೆಯನ್ನು ತೋರಿಸಲಾಗಿದೆ ಮತ್ತು ಇದರ ಅರ್ಥ "ಅಹಮೇವಾಸಮೇವಾಗ್ರೆ" (ಶ್ರೀಮದ್ಭಾ ೨/೯/೩೨) ಶ್ಲೋಕದಲ್ಲಿ ವ್ಯಕ್ತವಾಗಿದೆ.]

'ಓಂ ಇಷೇ ತ್ವೋರ್ಜೇ ತ್ವಾ ವಾಜವಃ ಸ್ಥ ದೇವೋ ವಃ ಸವಿತಾ ಪ್ರಾರ್ಪಯತು ಶ್ರೇಷ್ಠತಮಾಯ ಕರ್ಮಣೇ । ಅಪ್ಯಾಯಧ್ವಮಘ್ನ್ಯಾ ಇಂದ್ರಾಯ ಭಾಗಂ ಪ್ರಜಾವತೀರಣಮಿವಾ ಅಯಕ್ಷ್ಮಾ ಮಾ ವಃ ಸ್ತೇನ ಈಶತ । ಮಘಾಶಂಸೋ ಧ್ರುವಾ ಅಸ್ಮಿನ್ ಗೋಪತೌ ಸ್ಯಾತ್ ಬಹ್ವೀ ಯಜಮಾನಸ್ಯ ಪಶೂನ್ ಪಾಹಿ ।

(ಯಜುರ್ವೇದ– ೧ ಅ, ೧ ಮಂತ್ರ)

ಅನ್ವಯ– (ಹೇ ಗೋಪೀಶ್ವರ), ಸವಿತಾ (ಸರ್ವಜಗತ್ಪ್ರಸವಿತಾ) ದೇವಃ (ನಿರತಿಶಯಕಾಂತಿಯುಕ್ತಃ) ತ್ವಾ (ತ್ವಾಮ್) ಇಷೇ (ಅನ್ನಾರ್ಥಮ್) ಊರ್ಜೇ (ಕಾರ್ತಿಕೇ ಮಾಸಿ) ಶ್ರೇಷ್ಠತಮಾಯ ಕರ್ಮಣೇ (ಗೋವರ್ಧನಯಾಗಂ ಕರ್ತುಂ) ಪ್ರಾಪಯತು (ಪ್ರಕೃಷ್ಟತಯಾ ಸಂಯೋಜಯತು) । ಇಂದ್ರಾಯ (ಇಂದ್ರಮ್ ಉದ್ದಿಶ್ಯ) ಭಾಗಂ ಮಾ ಅಪ್ಯಾಯಧ್ವಂ (ಮಾ ವರ್ಧಯಧ್ವಂ ಯೂಯಂ ಇತಿ ಶೇಷಃ) । ಅಸ್ಮಿನ್ ಗೋಪತೌ (ಗೋವರ್ಧನೇ ಪೂಜಿತೇ ಸತಿ) ವಃ (ಯುಷ್ಮಾಕಂ ಗಾವಃ) ಅಘ್ನಯಃ (ವರ್ಧಯಿತುಮರ್ಹಾಃ ಹನ್ತುಮನರ್ಹಾಃ) ಪ್ರಜಾವತೀಃ (ಬಹ್ವಪತ್ಯಾಃ) ಅನಮಿವಾ (ಅಮಿವಾ ವ್ಯಾಧಿಃ–ತದ್ರಹಿತಾಃ ಕೃಮಿದುಷ್ಟತ್ವಾದಿ–ಕ್ಷುದ್ರರೋಗರಹಿತಾಃ ಇತಿ ಭಾವಃ) ಅಯಕ್ಷ್ಮಾಃ (ಯಕ್ಷ್ಮಾ ರೋಗರಾಜಃ) ತದ್ರಹಿತಾಃ ಪ್ರಬಲತರ–ರೋಗಶೂನ್ಯಾಃ ಇತಿ ಭಾವಃ, ಭವಿಷ್ಯಂತಿ ಇತಿ ಶೇಷಃ) । (ತಥಾ) ಸ್ತೇನಃ (ಚೌರಃ) ಮಾ ಈಶತ (ಸಮರ್ಥಃ ಮಾ ಭೂತ್) ಅಘಶಂಸಃ (ಅಘೇನ ತೀವ್ರಪ್ರಾಪೇಣ ಭಕ್ಷಣಾದಿನಾ ಶಂಸಃ ಘಾತಕಃ ವ್ಯಾಘ್ರಾದಿಃ ಅಪಿ ಹಿಂಸಕಃ ಮಾ ಭೂತ್) । ಹೇ ವತ್ಸಾಃ ! (ಯೂಯಂ

ವಾಯವಃ ಮಾತೃಭ್ಯಃ ಸಕಾಶಾತ್ ಅನ್ಯತ್ರ ಗಂತಾರಃ) ಸ್ಥ (ಭವಥ) । ಧ್ರುವಾಃ (ಶಾಶ್ವತಿಕ್ಯಃ) ಬಹ್ವೀಃ (ಬಹುವಿಧಾಃ ಪೂಜಾದಿಕಾಃ) ಸ್ಯಾತ್ (ಸ್ಯುಃ, ಭವೇಯುಃ) । (ಹೇ ಗೋಪತೆ) ಯಜಮಾನಸ್ಯ (ಗೋಪರಾಜಸ್ಯ) ಪಶೂನ್ (ಗೋವತ್ಸಾದೀನ್) ಪಾಹಿ (ಸಮ್ಯಕ್ ರಕ್ಷ) । (ಏತೇನ ಭಗವದಪರೋಕ್ಷಾನುಭವಸಾಧನಸ್ಯ ಮಾಯಾತ್ಯಜನಸ್ಯ ಕರ್ತ್ತವ್ಯತ್ವಮುಪದಿಷ್ಟಮ್)

ಅನುವಾದ– ಹೇ ಗೋಪೀಶ್ವರ ಶ್ರೀಕೃಷ್ಣ ! ನೀನು ಸಮಸ್ತ ಜಗತ್ತಿನ ರಚಯಿತನಾಗಿರುವೆ. ನೀನು ದೇವ ಅರ್ಥಾತ್ ಅತ್ಯಾಧಿಕ ಕಾಂತಿ ಯುಕ್ತನು. ನೀನು ನಮ್ಮೆಲ್ಲರಿಗು ಅನ್ನದ ಉದ್ದೇಶದಿಂದ ಕಾರ್ತಿಕ–ಮಾಸದಲ್ಲಿ ಗೋವರ್ಧನ–ಯಾಗರೂಪ ಶ್ರೇಷ್ಠ ಅನುಷ್ಠಾನದ ಪಾಲನೆ ಮಾಡಲೆಂದು ಪ್ರಕೃಷ್ಟ ರೂಪದಿಂದ ನಿಯೋಜಿಸಿದೆ ಮತ್ತು ಇಂದ್ರನ ಉದ್ದೇಶದಿಂದ ಪೂಜೆ–ಉಪಹಾರವನ್ನು ಸಮರ್ಪಿಸಲು ಬಿಡಲಿಲ್ಲ. ಈ ಗೋವರ್ಧನದ ಪೂಜೆ ನಡೆಯುವುದರಿಂದ ನಿಮ್ಮ ಗೋಸಂಪತ್ತು ನಷ್ಟವಾಗದೆ ವರ್ಧಿಸುವುದು ಮತ್ತು ಕ್ಷುದ್ರ (ಕ್ರಿಮಿ ಇತ್ಯಾದಿ) ಮತ್ತು ಪ್ರಬಲ (ಕ್ಷಯ ಇತ್ಯಾದಿ) ರೋಗ–ವ್ಯಾಧಿಗಳಿಲ್ಲದೆ ಹೆಚ್ಚು ಕರುಗಳಾಗಲಿ. ಕಳ್ಳರು ನಿಮ್ಮ ಈ ಗೋಸಂಪತ್ತನ್ನು ಕದಿಯಲು ಮತ್ತು ಪಶುಘಾತಕ ಹಿಂಸಕ ವ್ಯಾಘ್ರ ಮುಂತಾದವರು ಹಿಂಸೆಮಾಡಲು ಸಮರ್ಥರಾಗದಿರಲಿ. ಹೇ ಮಕ್ಕಳೇ ! ನೀವು ನಿಮ್ಮ ಪ್ರಾಣ ಸಮಾನರಾದ ಮಾತೆಯರನ್ನು ಬಿಟ್ಟು ಅನ್ಯತ್ರ ಎಲ್ಲಿಗೆ ಹೋಗುತ್ತಿರುವಿರಿ? (ಅಥವಾ ಪ್ರಾಣ ಸಮಾನವಾದ ಗೋರ್ವರ್ದ್ಧನವನ್ನು ತ್ಯಾಗಮಾಡಿ ಬೇರೆ ಎಲ್ಲೂ ಹೋಗಬೇಡಿ) । ನಿತ್ಯ–ನಿರಂತರವೂ ವಿವಿಧ ಪ್ರಕಾರದ ಪೂಜೆ ಇತ್ಯಾದಿ ನೆಡೆಯಲಿ । ಹೇ ಗೋಪತಿ ಶ್ರೀಕೃಷ್ಣ ! ಗೋಪರಾಜನ ಗೋವತ್ಸಾದಿಯನ್ನು ಚನ್ನಾಗಿ ರಕ್ಷಣೆ ಮಾಡು ।

[ಪ್ರಸ್ತುತ ಶ್ಲೋಕದ ಮೂಲಕ ಭಗವಂತನ ಅಪರೋಕ್ಷ ಅನುಭವವನ್ನು ಪ್ರಪ್ತಿಸಿಕೊಳ್ಳಲು ಮಾಯೆಯನ್ನು ತ್ಯಾಗಮಾಡುವ ಆವಶ್ಯಕತೆಯ ಉಪದೇಶವನ್ನು ಮಾಡಲಾಗಿದೆ ಮತ್ತು ಇದರ ಅರ್ಥ 'ಋತೇಽರ್ಥಂ' (ಶ್ರೀಮದ್ಭಾ ೨/೯/೩೩) ಶ್ಲೋಕದಲ್ಲಿ ವ್ಯಕ್ತವಾಗಿದೆ.]

'ಓಂ ಶನ್ನೋ ದೇವೀರಭೀಷ್ಟಯೆ ಆಪೋ ಭವನ್ತು
ಪೀತಯೇ ಶಂಯೋರಾಭಿಸ್ತ್ರವನ್ತು ನಃ ।'

(ಅಥರ್ವವೇದ– ೧ ಅ., ೧ ಪ್ರ., ೧ ಮಂತ್ರ)

ಅನ್ವಯ– ದೇವೀಃ (ದೇವ್ಯಃ) ಆಪಃ (ಚರಣಾಮೃತರೂಪಾಃ ಅಧರಾಮೃತರೂಪಾಃ ವಾ) ಅಭೀಷ್ಟಯೇ (ಅಭಿಲಷಿತಾಯ) ಪೀತಯೇ (ಪಾನಾಯ) ಭವನ್ತು, ನಃ (ಅಸ್ಮಾಕಂ) ಶಂ (ಕಲ್ಯಾಣಂ ಭವನ್ತು), ನಃ (ಅಸ್ಮಾಕಂ) ಶಂಯೋಃ (ಯೋಗಾಯ ಚ) ಅಭಿಸ್ತ್ರವನ್ತು (ಅಭಿಗಚ್ಛನ್ತು) ! (ಏತೇನ ಫಲಮುಕ್ತಮ್) ।

ಅನುವಾದ– ಹೇ (ವ್ರಜ) ದೇವಿಯರೆ ! ನಮ್ಮ ಅಭೀಷ್ಟ ರಸ–ಪಾನಕ್ಕಾಗಿ ನಿಮ್ಮ

ಚರಣಾಮೃತ ಅಥವಾ ಅಧರಾಮೃತವಾಗಲಿ (ವಚನಾಮೃತವಾಗಲಿ), ನಮಗೆ ಮಂಗಳವಾಗಲಿ ಮತ್ತು ಯೋಗಕ್ಕಾಗಿ ಅರ್ಥಾತ್ ನಿಮ್ಮ ಚರಣಸೇವೆಯನ್ನು ಪ್ರಸಾದಿಸಲು ನೀವು ನಮ್ಮ ಹತ್ತಿರ ಬನ್ನಿರಿ (ಹೃದಯದಲ್ಲಿ ಪ್ರಕಟವಾಗಿರಿ).

[ಪ್ರಸ್ತುತ ಶ್ಲೋಕದ ಮೂಲಕ ಫಲ ಅರ್ಥಾತ್ ಪ್ರಯೋಜನವನ್ನು ಹೇಳಲಾಗಿದೆ ಹಾಗೂ ಇದರ ಅರ್ಥ "ಯಥಾ ಮಹಾನ್ತಿ" (ಶ್ರೀಮದ್ಭಾ ೨/೯/೩೪) ಶ್ಲೋಕದಲ್ಲಿ ವ್ಯಕ್ತವಾಗಿದೆ.]

'ಓಂ ಅಗ್ನೇ ಆಯಾಹಿ ವೀತಯೇ ಗೃಣಾನೋ
ಹವ್ಯಾದಾತಯೇ ನಿ ಹೋತಾ ಸತ್ಸಿ ಬರ್ಹಿಷಿ ।'

(ಸಾಮವೇದ ೧ ಪ್ರ., ೧ ಅ., ೪. ಆ., ೧ ಮಂತ್ರ)

ಅನ್ವಯ– (ಹೇ) ಅಗ್ನೇ (ಗೋಪೀಜನವಲ್ಲಭ !) ವೀತಯೇ (ಅಸ್ಮದ್ದತ್ತಾನ್ನ–ಗ್ರಹಣಾಯ) ಹವ್ಯಾದಾತಯೇ (ಪ್ರಪನ್ನೇಭ್ಯಃ ಸ್ವ–ಪ್ರಸಾದರೂಪಸ್ಯ ಹವಿಷಃ ಪ್ರದಾನಾಯ ಚ) ಆಯಾಹಿ (ಪ್ರತ್ಯಾಗಚ್ಛ) । (ತಥಾ ಆಗತ್ಯ ಚ) ಗೃಣಾನಃ (ಅಸ್ಮಾಭಿಃ ಸ್ತೂಯಮಾನಃ ಸನ್) ಹೋತಾ (ಪ್ರಪನ್ನಾನಾಂ ಆಹ್ವಾತಾ ಭೂತ್ವಾ) ಬರ್ಹಿಷಿ (ಆಸ್ತೀರ್ಣೇಷು ಹೃದ್–ವೃಂದಾವನಸ್ಥೇಷು ಕುಶೇಷು) ನಿಷತ್ಸಿ (ನಿಷೀದ) । (ಏತೇನ ಸಾಧನಮುಕ್ತಮ್) ।

ಅನುವಾದ– ಹೇ ಗೋಪೀಜನವಲ್ಲಭ ! ನಮ್ಮ ಮೂಲಕ ಕೊಡಲಾದ ಅನ್ನವನ್ನು ಗ್ರಹಿಸಲು ಮತ್ತು ಶರಣಾಗತ ಜನರಿಗೆ ತಮ್ಮ ಪ್ರಸಾದ ರೂಪದಲ್ಲಿ ಹವಿಶೇಷವನ್ನು (ಯಜ್ಞ ಶೇಷವನ್ನು) ಪ್ರದಾನ ಮಾಡಲೆಂದು ನೀವು ನಮ್ಮ ಸಮ್ಮುಖ ಪ್ರಕಟವಾಗಿರಿ. ಈ ರೀತಿ ಪ್ರಕಟವಾಗಿ ನಮ್ಮ ಮೂಲಕ ಸ್ತುತಿಸಿಕೊಂಡು ತಮ್ಮ ಶರಣಾಗತ ಜನರ ಆಹ್ವಾನದಿಂದ ಅವರ ಹೃದಯರೂಪಿ ವೃಂದಾವನದ ಕುಶರೂಪೀ ಆಸನದಲ್ಲಿ ವಿರಾಜಿಸಿರಿ.

[ಪ್ರಸ್ತುತ ಶ್ಲೋಕದ ಮೂಲಕ ಸಾಧನ ಉಕ್ತವಾಗಿದೆ ಮತ್ತು ಇದರ ಅರ್ಥ "ಏತಾವದೇವ" (ಶ್ರೀಮದ್ಭಾ ೨/೯/೩೫) ಶ್ಲೋಕದಲ್ಲಿ ವ್ಯಕ್ತವಾಗಿದೆ.]

ಶ್ರೀಲ ಭಕ್ತಿಸಿದ್ಧಾಂತ ಸರಸ್ವತೀ ಠಾಕುರ್ 'ಪ್ರಭುಪಾದ'ರ

ವಿವೃತಿಸಾರ

(ಶ್ರೀಮದ್ಭಾ ೨/೯/೩೨-೩೫)

ಭಾಗವತ-ಚತುಃಶ್ಲೋಕಗಳನ್ನು ಬ್ರಹ್ಮದೇವರು ಶ್ರೀಭಗವಂತನಿಂದ ಪ್ರಾಪ್ತಿಸಿಕೊಂಡರು, ಇದರಿಂದಲೇ ಭಾಗವತ-ಶಾಸ್ತ್ರದ ಉದಯವಾಗಿದೆ. ಚತುಃಶ್ಲೋಕದ ಪ್ರಾರಂಭದ ಎರಡು ಶ್ಲೋಕಗಳಲ್ಲಿ ಮೊದಲ ವಿಶೇಷವೇನೆಂದರೆ ಭಾಗವತ್-ವಸ್ತು ಜ್ಞಾನಮಯವಾದದ್ದು, ಅದು ಅಚಿತ್ ಜಡ-ಪ್ರಕೃತಿಯಲ್ಲ. ಪ್ರಾಕೃತಜಗತ್ತಿನಲ್ಲಿ ಯಾವುದು ಚಿದಚಿತ್-ಮಿಶ್ರಜ್ಞಾನ ಇಂದ್ರಿಯಗಳ ಮೂಲಕ ಪ್ರಾಪ್ತವಾಗುತ್ತದೋ, ಅದು 'ಪ್ರತ್ಯಕ್ಷ' ಶಬ್ದವಾಚ್ಯವು, ಆದ್ದರಿಂದ ಬಾಹ್ಯ ಚಿನ್ಮಾತ್ರಜ್ಞಾನವು ಇಂದ್ರಿಯಗಳ ಮೂಲಕ ಪ್ರಾಪ್ತವಾಗುವುದಿಲ್ಲ. ಅದು ಅಪರೋಕ್ಷವಾದದ್ದು, ಆದ್ದರಿಂದ ತಟಸ್ಥ ಮತ್ತು ಗೋಪನೀಯವಾದದ್ದು; ಮತ್ತು ಚಿತ್-ವಿಲಾಸಜ್ಞಾನವು ಪ್ರತ್ಯಕ್ಷ ಮತ್ತು ಅಪರೋಕ್ಷದಿಂದ ಪರಮ ರಹಸ್ಯವಾದ ಅಧೋಕ್ಷಜನೊಂದಿಗೆ ಸಂಬಂಧಿತವಾಗಿದೆ. ನಶ್ವರ ಇಂದ್ರಿಯತೃಪ್ತಿಯ ಮೂಲಕ ಪ್ರಾಪ್ತವಾದ ಅನುಭವದ ವಿಜ್ಞಾನದಿಂದ ಯುಕ್ತವಾಗುವುದಲ್ಲ; ಕೇವಲಜ್ಞಾನದ ವಿಜ್ಞಾದಿಂದ ಯುಕ್ತವಾಗದಿದ್ದರು ಅದು ನಿರ್ವಿಶಿಷ್ಟ ಚಿನ್ಮಾತ್ರ-ವಾದದಲ್ಲಿ ಬದಲಾವಣೆಯಾಗುತ್ತದೆ. ಕೇವಲ ಜ್ಞಾನದ ವೈಶಿಷ್ಟ್ಯತೆಯ ವಿಚಾರದಲ್ಲಿ ಚಿತ್-ಶಕ್ತಿವಿಲಾಸ-ವೈಚಿತ್ರ್ಯವು ಸ್ಥಿತವಾಗಿದೆ. ಚಿತ್-ಶಕ್ತಿವಿಲಾಸವು ನಿತ್ಯಾನಂದಮಯವಾದದ್ದು ಮತ್ತು ಅಚಿತ್-ಶಕ್ತಿ ನಶ್ವರ ಅಥವಾ ಪರಿಣಾಮಶೀಲ, ಅನುಪಾದೇಯ, ಅಪೂರ್ಣ ಮತ್ತು ಆನಂದದ-ಅಭಾವದ ಧರ್ಮದಿಂದ ಯುಕ್ತವಾದದ್ದು. ವಿಜ್ಞಾನದ ಅಭಾವದಲ್ಲಿ ಜೀವಿ ಮತ್ತು ಮಾಯೆಯ ಸ್ವರೂಪಜ್ಞಾನದ ಅಭಾವವಿರುವ ಕಾರಣ, ಪ್ರತ್ಯಕ್ಷ ಮತ್ತು ಅನುಮಾನ- ಈ ಎರಡು ಪ್ರಮಾಣಗಳು ವರ್ತಮಾನವಿರುತ್ತದೆ. ಅದರ ಅಂತರಾಳದಲ್ಲಿ ಆಮ್ನಾಯ (ಶ್ರೌತಪಥ) ಅವ್ಯಕ್ತವಾಗಿ ಅಪರೋಕ್ಷ ಮತ್ತು ಅಧೋಕ್ಷಜ ವೈಶಿಷ್ಟ್ಯತೆಯೊಂದಿಗೆ ಸ್ಥಿತವಾಗಿದೆ. ಈ ಶ್ರೌತಪಥವು ಬಾಹ್ಯ-ಪ್ರಜ್ಞೆಯಿಂದ ಅನ್ವಿತವಲ್ಲ, ಆದರೆ ವ್ಯತಿರೇಕ-ಭಾವದ್ದು. ವಿಜ್ಞಾನವನ್ನು ಹೊರತುಪಡಿಸಿ ಶ್ರೌತಪಥವು ತರ್ಕಗ್ರಸ್ತ ಮತ್ತು ಜಡ-ನಿರ್ವಿಶೇಷ ವಾದವಾಗಿದೆ. ಚಿದಚಿತ್-ಮಿಶ್ರ ನಿರ್ವಿಶೇಷ ವಿಚಾರದಲ್ಲಿ ಬಹಿರ್ಮುಖ ಇಂದ್ರಿಯ ಗುಣಮಾಯೆಯ ಸಮನ್ವಯತೆಯನ್ನೇ 'ಚಿನ್ಮಾತ್ರ'ದ ರೂಪದಲ್ಲಿ ನಿರ್ದೇಶಿಸುತ್ತಾರೆ. ಶ್ರೀಭಗವಂತನ ವಚನಗಳಲ್ಲಿ ವಿಶ್ವಾಸವಿಲ್ಲದಿದ್ದರು ತರ್ಕಪಥದ ಅತಿರಿಕ್ತವಾಗಿ ಜ್ಞಾನದ ಯಾವುದೇ ಅನ್ಯ ಗತಿ ಇಲ್ಲ- ಇದೇ ಹರಿ-ವಿಮುಖತೆ. ಅದರ ನಿರಾಕಾರಣಕ್ಕಾಗಿ ಕೇವಲ ಶ್ರೀಭಗವಂತನ ಮೂಲಕ ವಿವರಿಸಲಾದ ವಚನ ಮಾತ್ರ ಗ್ರಹಣೀಯವಾದದ್ದು. ವಿಜ್ಞಾನರಹಿತ ಕೇವಲಜ್ಞಾನದ ರಹಸ್ಯವು ಮತ್ತು ತದಂಗದಿಂದ ವಿಹೀನವಾಗುವ ಕಾರಣ ಶ್ರೌತಪಥವನ್ನು ಜಡ-ಇಂದ್ರಿಯ ಮೂಲಕ ಗ್ರಾಹ್ಯ ತರ್ಕಪಥದ ಅಧೀನ

ಮಾಡಲಾಗುತ್ತದೆ. ತರ್ಕಪಥದಲ್ಲಿ ವಿಜ್ಞಾನದ ಅಭಾವದಲ್ಲಿ ಜೀವಿ ಮತ್ತು ಮಾಯೆಯ ಸ್ವರೂಪಜ್ಞಾನದ ಅಭಾವವಿರುತ್ತದೆ. ಆದ್ದರಿಂದ ತಟಸ್ಥ ಅಥವಾ ನಿರ್ವಿಶೇಷಭಾವದ ಪ್ರತಿಷ್ಠೆಯ ಮೂಲಕ ಬಾಹ್ಯಪ್ರಜ್ಞೆಯಿಂದ ಚಾಲಿತವಾಗಿ ರಹಸ್ಯ ಮತ್ತು ಅಂಗದ ಸಂಧಾನ ಮಾಡಲಾಗದು. ಜ್ಞಾನದ ರಹಸ್ಯ, ವಿಜ್ಞಾನದ ರಹಸ್ಯ, ಜ್ಞಾನದ ಅಂಗ ಮತ್ತು ವಿಜ್ಞಾನದ ಅಂಗದ ಶ್ರವಣದಿಂದ ವಿಮುಖವಾದರೆ ಮಾತ್ರ ಜೀವಿ ತರ್ಕಪಥದಲ್ಲಿ ಇಂದ್ರಿಯಜ್ಞಾನದ ವ್ಯತಿರೇಕ-ಕಲ್ಪನೆಯನ್ನು ಸತ್ಯವೆಂದು ಒಪ್ಪಿಕೊಳ್ಳುತ್ತಾನೆ ಮತ್ತು ಸಚ್ಚಿದಾನಂದ, ಶಕ್ತಿವಂತ ಸಮ್ವಿತ್-ವಿಗ್ರಹ ಭಗವತ್-ವಸ್ತುವಿನ ಅಂತರಂಗ, ಬಹಿರಂಗ ಮತ್ತು ಅದರ ಅಂತರ್ಗತ ತಟಾಂಗತ್ರಯದಲ್ಲಿ ನ್ಯೂನಾದಿಯ ಸ್ವಸ್ಥಿತಿ-ಭೇದ ಅಥವಾ ಗುಣ-ಗುಣವಂತ ಭೇದದ ಆರೋಪ ಮಾಡುತ್ತದೆ. ಆದರೆ ಸಮ್ವಿತ್-ವಿಗ್ರದಲ್ಲಿ ಸ್ವಸ್ಥಿತಿ-ಭೇದ ಸ್ವೀಕಾರ ಮಾಡುವುದರಿಂದ ಕೇವಲಜ್ಞಾನದಲ್ಲಿ ಅಥವಾ ಚಿನ್ಮಾತ್ರ-ವಿಚಾರದಲ್ಲಿ ದೋಷ ಉಂಟಾಗುತ್ತದೆ.

ವಿಜ್ಞಾನದ ವಿಚಾರದ ಅಭಾವದಲ್ಲಿ ಚಿತ್-ಶಕ್ತಿಪರಿಣತಿಯ ವರ್ಜಿತವಾದರೆ ಜೀವಿ ನಿತ್ಯಚಿನ್ಮಯ-ಲೀಲಾರಹಸ್ಯದ ಆನಂದದಿಂದ ವಂಚಿತನಾಗಿ ಪರಮ ಗೋಪನೀಯ ಜ್ಞಾನರಹಸ್ಯ ಅಥವಾ ಸಮ್ವಿತ್-ವಿಗ್ರಹ ವ್ರಜೇಂದ್ರನಂದನನ ಸನಾತನತನು-ಸ್ವರೂಪದ ನಿತ್ಯಾನಂದ-ಅನುಭವದಿಂದ ವಂಚಿತನಾಗುತ್ತಾನೆ. ತರ್ಕಪಥದಲ್ಲಿ ಜಡ-ಇಂದ್ರಿಯಗಳ ಸಹಾಯದಿಂದ ಭಗವತ್-ಅಸ್ತಿತ್ವವನ್ನು ಮಾಯಿಕ, ನಶ್ವರ ಮತ್ತು ಅಜ್ಞಾನದಿಂದ ಉದಿತವಾದದ್ದೆಂದು ತಿಳಿದು ನಿಃಶಕ್ತಿಕತ್ವವನ್ನೇ ಚಿನ್ಮಾತ್ರದ ರೂಪದಲ್ಲಿ ಭ್ರಾಂತವಾಗುತ್ತದೆ. ನಿಃಶಕ್ತಿಕತ್ವವನ್ನು ಚಿತ್-ಶಕ್ತಿಮತ-ಭಗವತ್-ವಸ್ತುವನ್ನೇ ಅನಂತ ಚಿತ್-ವೈಚಿತ್ರ್ಯಗಳಲ್ಲಿ ಬೇರೆಯಾಗಿ ಅರ್ಥಮಾಡಿಕೊಳ್ಳುವುದರಿಂದ ಬಲರಹಿತ ಭಾವವು ಪ್ರಬಲವಾಗಿ ವಿಜ್ಞಾನದ ಅಭಾವದಲ್ಲಿ ಜೀವಿ ಮಾಯಾವಾದಿಯಾಗುತ್ತಾನೆ. ಬ್ರಹ್ಮನೊಂದಿಗೆ ಬಹಿರಂಗಶಕ್ತಿ-ಪ್ರಕೃತಿಯ ಸಮನ್ವಯನಡೆಸುವ ದುಷ್ಪ್ರವೃತ್ತಿಯ ಕಾರಣ ಅಂತಹ ಜೀವಿ ಅಂತರಂಗ ಮತ್ತು ತಟಸ್ಥಶಕ್ತಿಯ ವಿಜ್ಞಾನದಿಂದ ರಹಿತನಾಗುತ್ತಾನೆ. ಶ್ರೀಭಗವಂತನ ವಚನ ಮತ್ತು ಗುರುವಿನ ವಚನದಲ್ಲಿ ಅಶ್ರದ್ಧೆಯ ಕಾರಣ ಮಾಯಾವಾದಿಗಳು ನಶ್ವರ ಜಡ-ಇಂದ್ರಿಯಗಳ ಮೂಲಕ ಅಶ್ರೌತ ಪ್ರಥವನ್ನು ಶ್ರೌತಪಥವೆಂದು ಭಾವಿಸುತ್ತಾರೆ. ವಾಸ್ತವ ಸತ್ಯವಸ್ತು ವ್ರಜೇಂದ್ರನಂದನನಲ್ಲೇ ವಿವೇಕಾಂಗ-ಪರಿವಾರದೊಂದಿಗೆ ಸೇರಿ ಪರಮಗೋಪ್ಯ ರಹಸ್ಯ ವರ್ತಮಾನವು ಮತ್ತು ಆ ಪ್ರಕ್ರಿಯೆಯಲ್ಲಿ ಲೀಲಾ-ವೈಚಿತ್ರ್ಯಕ್ರಮದಿಂದ ಖಂಡವಿಚಾರದಲ್ಲಿ 'ಪರಮಾತ್ಮ' ಮತ್ತು ಅಸಮ್ಯಕ್ ವಿಚಾರದಲ್ಲಿ 'ಬ್ರಹ್ಮ' ಮುಂತಾದ ಸಂಜ್ಞಾವನ್ನು ಶ್ರೌತಪಥದ ಭಾಷೆಯಲ್ಲಿ ಸ್ಥಾನ ದೊರಕಿದೆ. ಶ್ರೀಭಗವಂತನ ನಿತ್ಯರೂಪ, ನಿತ್ಯಗುಣ, ಪರಿವಾರ-ವೈಶಿಷ್ಟ್ಯತೆ ಮತ್ತು ನಿತ್ಯಲೀಲೆಗಳ ರಹಸ್ಯ ಮತ್ತು ಅಂಗವೈಚಿತ್ರ್ಯ ಕೇವಲ ಚಿದಾನಂದನಲ್ಲಿ ಸ್ವಗತ-ಭೇದರಹಿತವಾಗಿ ಅವಸ್ಥಿತವಾಗಿದೆ. ಇದು ವಾಸ್ತವ-ಸತ್ಯ ತರ್ಕಪಥದಲ್ಲಿ ಅಥವಾ ಅಧಿರೋಹ-ವಾದದ ಮೂಲಕ ಪ್ರಾಪ್ತ ವಿಚಾರದಿಂದ ಪ್ರಪ್ತವಾಗುವುದಿಲ್ಲ.

ಶ್ರೀಭಗವಂತ ಮತ್ತು ಭಾಗವತ (ಭಕ್ತ) ಜನರ ಕೃಪೆಯಿಂದ ವಾಸ್ತವ-ಸತ್ಯ ಕೀರ್ತಿತವಾಗಿ ಚಿತ್-ರಸವನ್ನು ಅರಿತುಕೊಳ್ಳುವವರು ಶ್ರವಣಪಥದಲ್ಲಿ (ಕರ್ಣ) ಪ್ರವಿಷ್ಟವಾದಾಗ ಚಿತ್-ಇಂದ್ರಿಯಗಳ ಮೂಲಕ ಅದರ ನಿತ್ಯ ಅನುಭವಾಗುತ್ತದೆ. ಬಹಿರಂಗಶಕ್ತಿ-ಪರಿಣತ ಬದ್ಧ-ಅನುಭೂತಿಯಿಂದ ಯುಕ್ತವಾದ ದೇಹ ಮತ್ತು ಅದರ ಅಂತರ್ಗತ ಅಚಿತ್-ವಿಚಾರ ಪರಾಯಣ ಜಡ-ಇಂದ್ರಿಯ-ಅಧಿಕಾರದ ಮನಸ್ಸು, ವಿಜ್ಞಾನಯುಕ್ತ ಪರಮಗೋಪನೀಯ ಸಪರಿವಾರ ಸಂವಿತ-ವಿಗ್ರಹದ ಅಂಗ-ಉಪಾಂಗ ಸಹಿತ ನಿತ್ಯ ಧಾರಣೆ ಮಾಡಲಾಗದು. ಬಾಹ್ಯಪ್ರಜ್ಞೆಯಲ್ಲಿ ದೃಶ್ಯಜಗತ್ತಿನಿಂದ ಅಧಿರೋಹವಾದದ ಅವಲಂಬನೆಯಿಂದ ಗುರುವಿನ ಅವಜ್ಞೆಯ ಕಾರಣ ಇಂದ್ರಿಯಗಳಿಂದ ಉದಿತವಾದ ಜ್ಞಾನ ವಾಸ್ತವ-ಸತ್ಯದಲ್ಲಿ ಪ್ರತಿಷ್ಠಿತವಾಗದೆ ಛಲದ ಮೂಲಕ ಆವೃತ್ತ ಪ್ರಕೃತಿವಾದ ಅಂದರೆ ಮಾಯವಾದದ ಉದ್ದಿಷ್ಟ ನಿರ್ವಿಶೇಷ (ರೂಪ) ಅವಾಸ್ತವ ಅಸತ್ಯದಲ್ಲಿ ಪ್ರತಿಷ್ಠಿತವಾಗುತ್ತಾದೆ. ಬದ್ಧಜೀವಿಯ ಆತ್ಮಸತ್ವವು ವಿಲುಪ್ತವಾಗುವ ಕಾರಣ ಅದರ ಮೂಲಕ ಶ್ರೌತಪಥ ಅಥವಾ ಶ್ರೀಕೃಷ್ಣನಿಷ್ಠ ಆತ್ಮವಿದ್ ಶ್ರೀಗುರುವಿನ ಚರಣಕಮಲಗಳಲ್ಲಿ ಆಶ್ರಯವನ್ನು ಹೊರತುಪಡಿಸಿ ಅಧೋಕ್ಷಜದ ಸೇವೆ ಎಂದಿಗೂ ಸಹ ಸಾಧ್ಯವಿಲ್ಲ. ಮಾಯಾಬದ್ಧ ಜೀವಿಯ ಭ್ರಮೆ, ಪ್ರಮಾದ, ಕರಣಾಪಾಟವ ಮತ್ತು ವಿಪ್ರಲಿಪ್ಸಾರೂಪ ನಾಲ್ಕು ಸ್ವಭಾವಗಳಿರುವಾಗ ಭಜನೀಯ ವಸ್ತುವಿನ ನಿರ್ದೇಶ ಮತ್ತು ಅದರ ಪ್ರಾಪ್ತಿರೂಪ ವರ್ತಮಾನ ಕ್ಲೇಶದಿಂದ ಮುಕ್ತಿ ಎಂದಿಗೂ ಸಂಭವವಲ್ಲ. ಲೀಲಾರಹಸ್ಯ ಮತ್ತು ಲೀಲಾಂಗ-ವಿಜ್ಞಾನದ ಅಭಾವದಲ್ಲಿ ಜೀವಿಗೆ ಸ್ವರೂಪ-ಬೋಧವಾಗುವುದಿಲ್ಲ. ಅವರೋಹವಿಚಾರ ಶ್ರೀಗುರುಮುಖದಿಂದ ಶ್ರವಣಿಸಿದರೆ ದಿವ್ಯಜ್ಞಾನದ ಉದಯವಾಗುತ್ತದೆ ಮತ್ತು ಬಾಹ್ಯಪ್ರಜ್ಞೆಯ ಅನುಭೂತಿಯಿಂದ ಜೀವಿ ಮುಕ್ತನಾಗುತ್ತಾನೆ. ಆಗ ಜೀವಿ ತನ್ನ ಸ್ವಭಾವದಲ್ಲಿ ನಿತ್ಯ ಅವಸ್ಥಿತವಾಗಿ ಶ್ರೌತಪಥದ ಕೀರ್ತನಕರ ಅನ್ಯ ಜೀವಿಗಳಲ್ಲಿ ದಯೆ ತೋರಿಸಲು ಸಮರ್ಥನಾಗುತ್ತಾನೆ.

ದ್ವಿತೀಯ ಶ್ಲೋಕದ ವಿಶೇಷವೇನೆಂದರೆ ಅದರಲ್ಲಿ ಪ್ರಥಮ ಶ್ಲೋಕವನ್ನು ದೃಢಪಡಿಸಲೆಂದು ಪುನಃ- ಉಲ್ಲೇಖಿಸುವ ಮೂಲಕ ಅದನ್ನು ಸ್ವಲ್ಪ ಅಧಿಕವಾಗಿ ವಿಸ್ತಾರಗೊಳಿಸಲಾಗಿದೆ. ಭಗವಂತನು ಭಗವತ್-ಇತರ-ಪರಿಚಯದಿಂದ ಭಿನ್ನನು, ಅಥವಾ ಭಗವತ್ ಮತ್ತು ಭಗವತ್-ಇತರ ಪರಿಚಯದ ವೈಶಿಷ್ಟ್ಯತೆ, ಜಡನಿರ್ವಿಶೇಷ ವಾದಗಳ ಹಾಗೂ ಚಿತ್-ಜಡ-ಸಮನ್ವಯಾತ್ಮಕ ನಿರ್ವಿಶೇಷ ವಾದದಿಂದ ಪೃಥಕ ಮತ್ತು ವಿಪರೀತನಾಗಿದ್ದಾನೆ. ಭಗವತ್-ವಸ್ತು ವಾಸ್ತವಸತ್ಯ, ಆದರೆ ಭಗವದಿತರ-ಅನುಭವವು ಅವಾಸ್ತವವಾಗಿದೆ. ಭಗವತ್-ವಸ್ತುವಿನ ಚಿತ್-ವೈಚಿತ್ರ್ಯದಲ್ಲಿ ಭಗವತ್-ಅಸ್ಮಿತೆ, ಭವಗದನುಷ್ಠಾನ-ಕರ್ತೃತ್ವ, ಭಗವತ್-ರೂಪ, ಭಗವತ್-ಗುಣ ಮತ್ತು ಭಗವತ್-ಲೀಲೆ ಮತ್ತು ಆಶ್ರಿತ ತತ್ವಗಳ ತನ್ನ-ತನ್ನ ನಿತ್ಯ-ಸ್ವರೂಪ-ವಿವೇಕ, ನಿತ್ಯಕರ್ತವ್ಯ ಮುಂತ್ತಾದ ವಾಸ್ತವಜ್ಞಾನವು ಶ್ರೀಗುರು ಮತ್ತು ಶ್ರೀಕೃಷ್ಣನ ಕೃಪೆಯಲ್ಲಿ ನಿರ್ಭರ ಮಾಡುತ್ತದೆ. ಮಾಯೆಯ ಭೋಕ್ತ (ಬದ್ಧಜೀವಿ) ಯಾವಾಗ

ಇಂದ್ರಿಯಗಳಿಂದ ಉದಿತವಾದ ಜ್ಞಾನದಲ್ಲಿ ವಿಮುಗ್ಧನಾಗಿ ವಾಸ್ತವಜ್ಞಾನರಹಿತ ಅಥವಾ ಹರಿವಿಮುಖನಾಗುತ್ತಾನೋ, ಆಗ ಶ್ರೀಭಗವಂತನ ಮತ್ತು ಭಕ್ತಿಯ ಕೃಪೆಗೆ ಅತಿರಿಕ್ತವಾಗಿ ಅವನ ಇಂದ್ರಿಯಜ್ಞಾನದ ಸತ್ಯಪ್ರಾಪ್ತಿಯ ವಾಸ್ತವ ಉಪಾಯ ನಿರೂಪಿತವಾಗುವುದರಿಂದ ಬದ್ಧಜೀವಿ ಶ್ರೀಭಗವಂತನನ್ನು ತನ್ನ ಸಮಾನನೆಂದು ತಿಳಿದು ಇಂದ್ರಿಯಗಳಿಂದ ಉದಿತವಾದ ಜ್ಞಾನದಿಂದ ಅವನನ್ನು ಅಳೆಯುತ್ತಾನೆ, ಆದ್ದರಿಂದ ಮಾಯಾವಾದಿಗೆ ಭಗವತ್–ಉಪಲಬ್ಧಿ ಸಾಧ್ಯವಿಲ್ಲ. ಮಾಯಾವಾದಿ ನಿರ್ವಿಶೇಷ–ಮತವನ್ನು ಅವಲಂಬಿಸಿ ನಿರ್ಭದ್ಧ–ಬ್ರಹ್ಮನ ಅನುಸಂಧಾನದಲ್ಲಿ ಅನುರಕ್ತರಾಗಿ ನಾಯಿ ಮತ್ತು ನರಿಯ ಮೂಲಕ ಭಕ್ಷ್ಯ ದೇಹ ಮತ್ತು ಚಂಚಲ ಮನೋಧರ್ಮದಿಂದ ಬಾಹ್ಯಪ್ರಜ್ಞೆಯ ಚಾಲನೆಯಲ್ಲಿ ವ್ಯಸ್ತರಾಗಿರುವ ಕಾರಣ ಸಂಬಂಧ, ಅಭಿದೇಯ ಮತ್ತು ಪ್ರಯೋಜನದ ನಿರ್ಣಯದಲ್ಲಿ ಭ್ರಾಂತರಾಗಿರುತ್ತಾರೆ. ಅವರು ಎಂದಿಗೂ ಸಹ ಶ್ರೀಭಗವಂತನ ದಯೆಯನ್ನು ಪ್ರಾಪ್ತಿಸಿಕೊಳ್ಳಲಾರರು. ಸ್ವರೂಪದ ವಿಭ್ರಾಂತವಾದರೂ ಸಹ ಜೀವಿ ಭಕ್ತಿಯನ್ನು ಅಭಿಧೇಯ ಮತ್ತು ಪ್ರೇಮದ ಪ್ರಜೋಜನವನ್ನು ಅರ್ಥಮಾಡಿಕೋಳುವುದನ್ನು ಬಿಟ್ಟು ಹೊರತಾಗಿ ಮೋಕ್ಷದ ಪ್ರಯಾಸನಾಗುತ್ತಾನೆ. ಫಲಸ್ವರೂಪ ಮುಮುಕ್ಷು (ಮುಕ್ತಿಕಾಮಿ) ಕ್ರಮೇಣ ಬುಭಕ್ಷು (ಭುಕ್ತಿಕಾಮಿ) ಆಗುತ್ತಾನೆ. ಹರಿಸೇವೆಗೆ ಹೊರತ್ತಾಗಿ ಮೋಕ್ಷವನ್ನು ಪ್ರಪ್ತಿಸಿಕೊಳ್ಳುವುದು ಸಾಧ್ಯವಿಲ್ಲ.

ಪ್ರಕೃತಿ, ಕಾಲ ಮತ್ತು ಕರ್ಮ– ಈ ಚೇತನಮಯ ಮತ್ತು ಅದ್ವಿತೀಯವಸ್ತುವಿನ ಜನಕ–ಜನನೀ ಅಥವಾ ವಿನಾಶಕಾರಿಯಲ್ಲ. ಚೇತನಮಯ ವಸ್ತುನಿನೊಂದಿಗೆ ಇದರ ವಿಷಮ (ಅಸಮತೆ) ಮತ್ತು ವಿಶೇಷತೆ ಉಂಟು ಮತ್ತು ಇದರ ಲೆಕ್ಕಾಚಾರವು ಅಚಿತ್ ಕ್ರಮದಲ್ಲಾಗುತ್ತದೆ. ಇದರಲ್ಲಿ ಮೊದಲ ಎರಡು ವಿನಾಶಕಾರವಲ್ಲ, ಕರ್ಮ ವಿನಾಶಕಾರಿಯಾದರೂ ಸಹ ಹಿಂದಿನಿಂದಲು–ಆನಾದಿಯಾದದ್ದು. ಈಶ್ವರ ಮತ್ತು ಜೀವಿ– ಈ ವಸ್ತು–ವೈಚಿತ್ರ್ಯದಲ್ಲಿ ಚಿತ್–ಧರ್ಮ ಸ್ಥಿತವಾಗಿದೆ. ಅಚಿತ್–ಭಾವಮಯ ಮೂರು ವಿಚಿತ್ರತೆಗಳು ಚೇತನಮಯವಲ್ಲದಿದ್ದರು ಸಹ ಕರ್ಮದ ಅತಿರಿಕ್ತವಾಗಿ ಅನ್ಯ ನಾಲ್ಕು ಅಂದರೆ ಈಶ್ವರ, ಜೀವಿ, ಪ್ರಕೃತಿ ಮತ್ತು ಕಾಲ ಖಂಢಕಾಲಕ್ಕೆ ಅತೀತವಾಗಿದೆ. ಚೇತನಧರ್ಮದಲ್ಲಿ ಸ್ವತಃಕರ್ತೃತ್ವದ ನಿತ್ಯ ಅಧಿಷ್ಠಾನವಿದೆ ಮತ್ತು ಕರ್ತೃತ್ವಾಧೀನ ಆಶ್ರಿತ ಚಿದಚಿತ್ ವಸ್ತುವಿನ ಈಶ್ವರತ್ವ, ಕಾಲ ಮತ್ತು ಕರ್ಮದ ಜನಕತ್ವವು ಸ್ಥಿತವಾಗಿದೆ. ಆಶ್ರಿತ–ತತ್ವ ಶಕ್ತಿಮತ್–ಚಿತ್–ವಿಗ್ರಹದ ಅನುಗತವಾಗಿ ಅನ್ವಯ ಮತ್ತು ವ್ಯತಿರೇಕವಾಗಿ ಅವನ ಸೇವಯಲ್ಲಿ ನಿಯುಕ್ತ. ಆಶ್ರೀತ ತತ್ವದ ಅನ್ವಯ ಮತ್ತು ವ್ಯತಿರೇಕವಾಗಿ ಸೇವೆ–ವೈಚಿತ್ರ್ಯ–ಧರ್ಮ ಆ–ಆ ರೂಪದಲ್ಲಿ ಅವಸ್ಥಿತವಾಗಿದೆ.

ವಿಭೂಸಂವಿತ ಭಗವತ್–ವಸ್ತುವನ್ನು ಆಶ್ರಿತ–ತತ್ವದ ಅಧೀನವೆಂದು ತಿಳಿಯುವುದರಿಂದ ಅಣುಸಂವಿತದ ಪ್ರಕೃತಿಯಲ್ಲಿ ವಿಪರೀತವೇ ಘಟಿಸುತ್ತದೆ. ಜೀವಿಯ ಅಧೀನ ಈಶ್ವರ, ಪ್ರಕೃತಿಯ ಅಧೀನ ಈಶ್ವರ, ಕಾಲದ ಅಧೀನ ಈಶ್ವರ, ಕರ್ಮದ ಅಧೀನ ಈಶ್ವರ– ಹೀಗೆ ಅಚಿತ್ ವೃತ್ತಿಯು ಯಾರಲ್ಲಿ ಪ್ರಬಲವಾಗಿದೆಯೋ,

ಆ ಜೀವಿಯನ್ನೇ ಭಗವತ್-ವಿಮುಖ 'ಬದ್ಧ, ದುಷ್ಟಜೀವಿ' ಎಂದು ಕರೆಯಲಾಗುತ್ತದೆ. ಪ್ರಕೃತಿ, ಕಾಲ ಮತ್ತು ಕರ್ಮ- ಈ ಮೂರು ಭಾವವು ಜೀವಿಯ ನಿತ್ಯ ಚಿದಾನಂದ-ಧರ್ಮದ ಮೇಲೆ ಈಶ್ವರತೆ ಮಾಡುತ್ತ ಜೀವಿಯನ್ನು ಬದ್ಧಗೊಳಿಸುತ್ತದೆ ಅರ್ಥಾತ್ ಜೀವಿಯ ಸ್ವರೂಪಾನುಭವದಲ್ಲಿ ತೊಂದರೆ ಕೊಡುತ್ತದೆ. ಅದೇ ಸಮಯ ಜೀವಿ ತನ್ನನ್ನು ಪ್ರಾಕೃತ-ಕಾಲಕರ್ಮದ ಅಧೀನವೆಂದು ತಿಳಿದು ಲುಪ್ತಚೇತನ ಅಥವಾ ಜಡ ಪದಾರ್ಥಗಳಲ್ಲಿ ಸರ್ವಶ್ರೇಷ್ಠವೆಂದು ತಿಳಿಯುತ್ತಾನೆ. ಪ್ರಾಕೃತ ವಿಚಿತ್ರತೆಗಳಲ್ಲಿ ಈಶ್ವರಭಾವವು ಅವ್ಯಕ್ತವಾದ ಕಾರಣ ಬದ್ಧ ಸ್ಥಿತಿಯಲ್ಲಿ ಈಶ್ವರನ ಉನ್ಮುಖ ಆಶ್ರಿತ-ತತ್ವವನ್ನು ಅಪ್ರಾಕೃತ ಅಥವಾ ವೈಕುಂಠ ಎಂದು ಕರೆಯಲಾಗುತ್ತದೆ. ತನ್ನ ಸ್ವರೂಪವನ್ನು ಮರೆತಾಗ ಮಾತ್ರ ಜೀವಿ ನಿತ್ಯ ಚಿದಾನಂದಮಯ ಶ್ರೀಗುರುದೇವರ ಚರಣಮಲಗಳಿಂದ ವಿಕ್ಷಿಪ್ತ ಮತ್ತು ಆವೃತ್ತನಾಗಿ ತನ್ನ ಚಿತ್-ವೃತ್ತಿಯ ವಿಶುದ್ಧ ಧರ್ಮದಿಂದ ವಂಚಿತನಾಗುತ್ತಾನೆ. ಅದೇ ಸಮಯದಲ್ಲಿ ಚಿತ್-ಧರ್ಮದ ನಿತ್ಯಾನುಷ್ಠಾನ ಅಚಿತ್, ಮೊದಲಿನಿಂದ-ಅನಾದಿ ವಿನಾಶೀ ಧರ್ಮದ ರೂಪದಲ್ಲಿ ಪ್ರತಿಭಾತವಾಗಿ ಜೀವಿಯನ್ನು ಅಹಂಕಾರದಿಂದ ವಿಮೂಢವಾಗಿಸುತ್ತದೆ.

ಭಗವತ್-ಶಕ್ತಿ ಆಶ್ರಯಜಾತೀಯ ಭಗವತ್-ಲೀಲೆಯನ್ನು ಪ್ರಕಾಶಿಸಿ ಸ್ವಜಾತೀಯ ಅನುಭೂತಿ ಪ್ರದರ್ಶನಪೂರ್ವಕ ಆಚಾರ್ಯರ ರೂಪದಲ್ಲಿ ಬದ್ಧಜೀವಿಯೊಂದಿಗೆ ಸಮತೆ ಸ್ಥಾಪಿಸುತ್ತದೆ. ಬ್ರಹ್ಮದೇವರ ಶ್ರೀಗುರುದೇವರ ರೂಪದಲ್ಲಿ ಲೀಲೆಯ ಅಭಿನಯ ಮಾಡುತ್ತಾ ಶ್ರೀಭಗವಂತನು ಯಾವ ಅಪ್ರಾಕೃತ ಸ್ವರೂಪದ ಮಾತನ್ನು ಹೇಳುತ್ತಿದ್ದಾನೋ, ಮತ್ತು ಚಿತ್-ವೈವಿಧ್ಯತೆಯ ಸೇವೋನ್ಮುಖ ಅಂಶದ ಅಭಿವ್ಯಕ್ತಿಯನ್ನು ವ್ಯಕ್ತಪಡಿಸುತ್ತಿದ್ದಾನೋ- ಅದನ್ನೇ ಚತುಃಶ್ಲೋಕದಲ್ಲಿ ಸಂಬಂಧ-ಅಭಿಧೇಯ-ಪ್ರಯೋಜನದ ಕ್ರಮ (ರೂಪ) ದಲ್ಲಿ ವರ್ಣಿಸಲಾಗಿದೆ. ಯಾವಾಗ ಮುಕ್ತಜೀವಿ ಪ್ರಕೃತಿ, ಕಾಲ ಮತ್ತು ಕರ್ಮದ ವಶೀಭೂತ ತತ್ವವಿಚಾರದಲ್ಲಿ ಭಗವತ್-ಸೇವಾ-ವಿಮುಖತೆಯನ್ನು ಸಂಗ್ರಹಿಸಿ ಅದರಲ್ಲಿ ಸ್ಥಿತನಾಗುತ್ತಾನೋ, ಆಗಲೇ ಅವನಲ್ಲಿ ವಿಷಯಾಂತರ-ಭೋಗ ಮತ್ತು ತ್ಯಾಗದ ಪ್ರವೃತ್ತಿಯು ಬರುತ್ತದೆ. ಶ್ರೀಭಗವಂತನ ಆವರ್ಣ-ಶಕ್ತಿ ಪ್ರಕೃತಿಯಲ್ಲಿ ಕಾಲರೂಪೀ ಗುಣದ ಸಮಾನ-ಸ್ಥಿತಿ ಮತ್ತು ಕರ್ಮರೂಪೀ ಗುಣದ ವಿಷಮತಾರೂಪಿ ವೈವಿಧ್ಯತೆಯನ್ನು ಉತ್ಪನ್ನ ಮಾಡುತ್ತದೆ. ನಿತ್ಯಲೀಲೆಯ ವಿಚಿತ್ರತೆಯ ಅನುಪಮದ ತುಚ್ಛ ಪ್ರತಿಫಲನ ಬದ್ಧ-ಜಗತ್ತಿನಲ್ಲಿ ಪ್ರತಿಹತವಾಗಿ ಅದೇ ಪ್ರಕಾರ ವಿಕಾಸಸಮ್ಮೂಹದ ಮೂಲಕ ನಶ್ವರ ರೂಪದಲ್ಲಿ ಅಧಿಷ್ಠಿತವಾಗಿದೆ. ಈಶ್ವರನ ಅನುಸರಣೆಯಿಂದ ನಶ್ವರತೆ ಮತ್ತು ಖಂಡ-ಪರಿಚಯದ ಅನರ್ಥವು ದೂರವಾದರೆ ಅಣುಚಿತ್ ಜೀವಿ ನಿತ್ಯ ಸೇವೋನ್ಮುಖನಾಗಿ ಭಗವತ್-ಭಾವಪಂಚಕದಿಂದ (ಅಂದರೆ ಶಾಂತ, ದಾಸ್ಯ ಇತ್ಯಾದಿ ಐದು ಭಾವಗಳಿಂದ) ವಾಸ್ತವ ಸೇವೆ ಮಾಡಲು ಸಮರ್ಥನಾಗುತ್ತಾನೆ. ಆತ್ಮವೃತ್ತಿಯ ವಿಶುದ್ಧ ಭಾವ ವಿಪರೀತವಾದರೆ ಮಾತ್ರ ವ್ಯಕ್ತಜಗತ್ತಿನಲ್ಲಿ ಅಹಂಕಾರದ ಇಂಧನಸ್ವರೂಪ ನಶ್ವರ ಜಡತ್ವವನ್ನು ಉದಯವಾಗಿಸುತ್ತದೆ. ಆಶ್ರಿತ-ತತ್ವದ (ಜೀವಿಯ) ನಿತ್ಯಮಂಗಳಕ್ಕಾಗಿಯೇ ಪ್ರಕೃತಿ,

ಕಾಲ ಮತ್ತು ಕರ್ಮ ವ್ಯತಿರೇಕ ರೂಪದಲ್ಲಿ ಜೀವಿಯ ಮಂಗಳವಿಧಾನವಾಗುತ್ತದೆ.

ಚತುರ್ಮುಖನಿಗೆ (ಬ್ರಹ್ಮನಿಗೆ) ಶ್ರೀಭಗವಂತನು ನಾಲ್ಕು ಉಪದೇಶವನ್ನು ನೀಡಿದನು. ಪ್ರಥಮ ಶ್ಲೋಕದಲ್ಲಿ ವಿಷಯಬೋಧನೆ, ದ್ವಿತೀಯದಲ್ಲಿ ಆಶ್ರಯಬೋಧನೆ, ತೃತೀಯದಲ್ಲಿ ಪ್ರಯೋಜನಬೋಧನೆ ಮತ್ತು ಚತುರ್ಥದಲ್ಲಿ ಆಶ್ರಯದ ಪ್ರಯೋಜನಜ್ಞಾನಕ್ಕಾಗಿ ತತ್ಪಾರ್ಯದ ಸ್ವರೂಪವನ್ನು ವರ್ಣಿಸಲಾಗಿದೆ. ವಿಷಯ ಮತ್ತು ಆಶ್ರಯದ ಜ್ಞಾನ ರಹಿತ ಸ್ಥಿತಿಯಲ್ಲಿ ಯಾವ ನಿರ್ವಿಶಿಷ್ಟ ಕೇವಲಜ್ಞಾನ ಸ್ಥಿತವಾಗಿದೆಯೋ, ಅದು ವ್ಯತಿರೇಕಭಾವವನ್ನು ನಿರಾಕರಿಸುವ ಉದ್ದೇಶದಿಂದ ಸ್ಥಾನವಿಶೇಷದಲ್ಲಿ ವರ್ಣನೆ ಯೋಗ್ಯವಾಗಿದೆ. ಆ ವರ್ಣನೆಯ ಪಾಠ ಮಾಡಿ ಜಡ–ಜಗತ್ತಿನ ವಿಚಿತ್ರ–ಆಕರ್ಷಣೆಯಿಂಡ ಆಕೃಷ್ಟವಾಗಲು ಯೋಗ್ಯತೆಯಿಂದ ರಹಿತವಾಗಿ ವಾಸ್ತವಜ್ಞಾನದಿಂದ ಪ್ರಕಾಶಿತವಾದರೆ ಮಾತ್ರ ನಿತ್ಯ ಚಿದಾನಂದಮಯ ಸೇವಕಾನುಭವದಲ್ಲಿ ಜೀವಿಗೆ ಸ್ವತಃಸಿದ್ಧ ಸ್ವಾಸ್ಥ್ಯದ ಪ್ರಾಪ್ತಿಯಾಗುತ್ತದೆ. ನಶ್ವರ–ಗೋಚರ ಈಶ್ವರನ ಸೇವೆಯಿಂದ ವಿಮುಖ ಭೋಗರಾಜ್ಯದಲ್ಲಿ ಜೀವಿಯನ್ನು ಬದ್ಧಾನುಭೂತಿವಶವಾಗಿ ಅಧೋಗತಿ ಪ್ರಪ್ತಿಸುತ್ತದೆ ಮತ್ತು ಅವನು ಆ ಸಮಯದಲ್ಲಿ ಅದನ್ನೇ ಉರ್ಧ್ವಗತಿ ಎಂದು ತಿಳಿದು ಪ್ರಾಮುಖ್ಯತೆ ಕೊಡುತ್ತಾನೆ– ಇದೇ ಚಿದ್ಧರ್ಮದ ಅಪವ್ಯವಹಾರ ಅಥವಾ ಅಚಿದ್ಧರ್ಮದ ಉದ್ದಾಮ (ನಿರಂಕುಶ) ನೃತ್ಯ.

ವಿಷಯತತ್ವದ ವಿಚಾರದಲ್ಲಿ ಬ್ರಹ್ಮದೇವರು ಶ್ರೀಹರಿಯ ಕೃಪೆಯಿಂದ ತಿಳಿದುಕೊಂಡಿರುವುದೇನೆಂದರೆ ಅವನು (ಶ್ರೀಭಗವಂತನು) ಜೀವಿ, ಪ್ರಕೃತಿ, ಕಾಲ, ಮತ್ತು ಕರ್ಮದಿಂದ ಸ್ವತಂತ್ರ ಸ್ವತಃ ಕರ್ತೃತ್ವಮಯ 'ಅಹಂ–ತತ್ವ'. 'ತ್ವಂ–ತತ್ವ' ಮತ್ತು 'ತತ್–ತತ್ವ'ವು ಅದೇ ಅಹಂ–ತತ್ವದ ನಡುವೆ ಕೇವಲ ವೈವಿಧ್ಯತೆಯ ಪೋಷಣೆ ಮಾಡುತ್ತದೆ. ತ್ವಂ–ತತ್ವದ ಅಧೀನದಲ್ಲಿ ಪೂರ್ವಪುರುಷ ಬ್ರಹ್ಮದೇವರು ಶ್ರೀಗುರುದೇವರ ರೂಪದಲ್ಲಿ ಶ್ರೀನಾರದರಿಗೆ ಆ ತ್ವಂ–ತತ್ವದ ಸ್ವರೂಪ ಮತ್ತು ತತ್–ತತ್ವದ ಸ್ವರೂಪದಲ್ಲಿ ಅಚಿಂತ್ಯಭೇದಾಭೇದ–ವಿಚಾರವನ್ನು ಕೃಪಾಪೂರ್ವಕವಾಗಿ ಪ್ರಸಾದಿಸಿದರು. ಶ್ರೀನಾರದರೂ ಸಹ ಶ್ರೀವ್ಯಾಸರಿಗೆ ಅದೇ ವಿಚಾರವನ್ನು ತಿಳಿಸಿದರು, ಏಕೆಂದರೆ ಶ್ರೀವ್ಯಾಸರಲ್ಲಿ ಮುಕ್ತ–ವಿಷ್ಣುಭಕ್ತರ ಅಭಿಮಾನವಿತ್ತು. ಶ್ರೀವ್ಯಾಸರು ಸಂಸಾರರೂಪಿ ಸಮುದ್ರದಿಂದ ಮುಕ್ತರಾದ ಶ್ರೀಮಧ್ವಮುನಿಯವರ ಹೃದಯದಲ್ಲಿ ಅಹಂ–ತತ್ವ, ತ್ವಂ–ತತ್ವ ಮತ್ತು ತತ್–ತತ್ವದ ನಿತ್ಯ–ವೈಚಿತ್ರ್ಯಭೇದ ಪ್ರಕಾಶಿತಗೊಳಿಸಿದರು. ಶ್ರೀಗೌರಸುಂದರರು ಅದೇ ಅಚಿಂತ್ಯಭೇದಾಭೇದ–ತತ್ವವನ್ನು ತಮ್ಮ ಆಶ್ರಿತಜನರ ಹೃದಯದಲ್ಲಿ ತಮ್ಮ ಲೀಲಾವೈವಿಧ್ಯತೆಯ ಮಾಧ್ಯಮದಿಂದ ಪ್ರಕಟಿತಗೊಳಿಸಿದರು. ಅವಿಮಿಶ್ರ ಮತ್ತು ಅಪ್ರಾಕೃತ–ತತ್ವವೈಚಿತ್ರ್ಯದಲ್ಲಿ ಈ ಮೂರು ಪ್ರಕಾರದ ತತ್ವಗಳ ನಿತ್ಯಚಿದಾನಂದಮಯ ಸಂಸ್ಥಿತಿ ನೆಲಸಿದೆ. ನಶ್ವರ ಪರಿಚಯದ ಮೂಲಕ ಬದ್ಧಜೀವಿಯ ಹೃದಯದಲ್ಲಿ ಭೋಗಾಶಯಗಳ ದಾಸ್ಯದಲ್ಲಿ ಅದೇ ತತ್ವ ಮಲಿನರೂಪದಿಂದ ವಿಶ್ವದಲ್ಲಿ ಪ್ರತಿಫಲಿಸುತ್ತಿದೆ. ವಿಶ್ವದಲ್ಲಿ

ಭಾವದ ನಿತ್ಯತೆಯ ಪರಿದರ್ಶನದಲ್ಲಿ, ಭೋಗ ಮತ್ತು ತ್ಯಾಗ-ಪ್ರವೃತ್ತಿಯ ಬದಲಾಗಿ ಸೇವೋನ್ಮುಖತಾರೂಪಿ ಆತ್ಮವೃತ್ತಿ ಅಂತರ್ಯಾಮೀ ರೂಪದಲ್ಲಿ ಸ್ಥಿತವಾಗಿದೆ ಮತ್ತು ಅದೇ ಸೇವೋನ್ಮುಖತಾ ರೂಪವು ಪ್ರಯೋಜನವನ್ನು ಲಕ್ಷ್ಯವಾಗಿ ಅಭಿಧೇಯವೃತ್ತಿ 'ಭಕ್ತಿ' ಯ ರೂಪದಲ್ಲಿ ಅಧಿಷ್ಠಿತವಾಗಿದೆ. ಶ್ರೀಭಗವಂತನ ಸೇವೆಯಿಂದ ದೂರನಾದ ಜೀವಿಯ ಅಭಕ್ತಿ-ವೃತ್ತಿಯಲ್ಲಿ ಕಾಣುವ ವಿಶ್ವವು ಸತ್ಯವಾದರೂ ಸಹ ನಶ್ವರ-ಧರ್ಮದಿಂದ ಯುಕ್ತನಾಗಿದ್ದಾನೆ. ಭೋಕ್ತನ ಹೃಷೀಕೇಶತ್ವ (ಬದ್ಧಜೀವಿಯ ಮೂಲಕ ಇಂದ್ರಿಯಪತಿಯಾಗುವ) ಅಭಿಮಾನ ನಶ್ವರ ಭೂಮಿಯಲ್ಲಿ ಜಾಗತಿಕ ಕರ್ಮ ಮತ್ತು ನಿತ್ಯಭೂಮಿಕೆಯಲ್ಲಿ ಚಿತ್-ವೃತ್ತಿಯ ಅಭಿವ್ಯಕ್ತಿಯಲ್ಲಿ ನಿತ್ಯವಸ್ತುವಿನ ಉದ್ದೇಶದಿಂದ ಅನುಷ್ಠಿತ ಕರ್ಮವೇ ನಿತ್ಯಭಕ್ತಿ ಅಥವಾ ಸುಷ್ಠುಭಾಷೆಯಲ್ಲಿ 'ಪ್ರೇಮ' ಎಂಬ ಶಬ್ದದಿಂದ ಕರೆಯಲ್ಪಡುತ್ತದೆ. ಶ್ರೀಭವಂತನ ದಾಸ್ಯದಿಂದ ವಂಚಿತ ಬುದ್ಧಿಯಲ್ಲಿ ನಶ್ವರ ವಿಶ್ವದ ಅನುಶೀಲನೆಗಾಗಿ ಯಾವ ಪ್ರಯತ್ನವಿದೆಯೋ, ಅದು ಫಲಭೋಗಮಯ ಅನಾದಿ 'ಕರ್ಮ'ವಾಗಿದೆ ಮತ್ತು ಪರಾಪ್ರಕೃತಿಯ ಅನುಭವದಲ್ಲಿ ಪುನಃ ಅದೇ ಪ್ರಯತ್ನವು 'ಹರಿಪ್ರೇಮ'ವಾಗಿದೆ.

ಶ್ರೀಭಗವಂತನ ಆಶ್ರಿತತತ್ವವು, ಬದ್ಧಜೀವಿಯ ತರಹ ಪ್ರಕೃತಿ, ಕಾಲ ಮತ್ತು ಕರ್ಮದ ವಶೀಭೂತವಲ್ಲ. ಆ ಭಗವತ್-ವಸ್ತು ಅಹಂ-ತತ್ವವನ್ನು ವಿಶ್ವದ ನಶ್ವರ ಸತ್ವಕ್ಕೆ ಒಳಗೊಂಡ 'ಸತ್' ಎಂದು ಭಾವಿಸಿ ಅದನ್ನು ಕೆಲವರು ಸಂಕೀರ್ಣ ಮಾಡದಿರಲಿ, ಆದ್ದರಿಂದ ಆ ಅಹಂ-ತತ್ವವು ಸತ್ ಮತ್ತು ಅಸತ್ ವಸ್ತುವಿನಿಂದ ಸ್ವತಂತ್ರ ವಸ್ತುವಾಗಿದೆ. ಅಚಿತ್ ಸತ್ ಹಾಗೂ ಅಚಿತ್ ಅಸತ್ತಿನ ವಿಚಾರವು ಜೀವಿಯ ನಿತ್ಯವೃತ್ತಿ. 'ಭಕ್ತಿ'ಯಿಂದ ವಿಪರೀತ ರೂಪದಲ್ಲಿ ವಿರುದ್ಧವೃತ್ತಿಯು ಅಭಕ್ತಿಯಲ್ಲಿ ಅಧಿಷ್ಠಿತವಾಗಿದೆ. ಭಜನೀಯ-ವಸ್ತು ಅಣುಚಿತ್ನ ಅಭಿಧೇಯ-ಭಕ್ತಿಯ ಮೂಲಕವೇ ಅನುಕೂಲ ರೂಪದಿಂದ ಅನುಶೀಲನೆಯಾಗುತ್ತದೆ. ಆ ವಸ್ತು ಭಕ್ತಿಯ ವಿರೋಧಿಯಾಗಿ ಅರ್ಥಾತ್ ಬದ್ಧಜೀವಿಯ ಕರ್ಮ ಹಾಗೂ ಜ್ಞಾನದ ಮಾರ್ಗದಿಂದ ಎಂದಿಗೂ ಸಹ ಪ್ರಾಪ್ತವಾಗುವುದಿಲ್ಲ. ಶ್ರೀಭಗವಂತನ ದರ್ಶನವನ್ನು ಹೊರತುಪಡಿಸಿ ಅನ್ಯ ಪರಿದೃಶ್ಯಮಾನವಾದ ಅನೀಶ್ವರ-ಪರಿಚಯರೂಪ ಯಾವುದೆಲ್ಲ ಇವೆಯೋ, ಅವೂ ಸಹ ಭಗವಂತನ ಅತಿರಿಕ್ತವಾಗಿ ಭಾವ ವಿಶೇಷವಲ್ಲ, ಮತ್ತೆ ಅದು ಭಗವತ್-ಭಾವಮಾತ್ರವೂ ಸಹ ಅಲ್ಲ. ಅದು ಭಗವತ್-ಭಾವದ ಅಂತರ್ಗತವಾಗಿ ಅವೈಧ (ನಿಯಮಭಂಗ) ರೂಪದಲ್ಲಿ ನಶ್ವರ ವಿಶ್ವದ ರೂಪದಲ್ಲಿ ಗೋಚರವಾಗುತ್ತದೆ, ಆದ್ದರಿಂದ ಇಂತಹ ನಶ್ವರ ದರ್ಶನವು ಭಗವತ್-ದರ್ಶನವಲ್ಲ.

ಅಹಂಕಾರದಿಂದ ವಿಮೂಢನಾದ ವ್ಯಕ್ತಿಯ ಅಹಂ-ತತ್ವದ ಧಾರಣೆಯು ಪ್ರಕೃತಿಯ ಗುಣದಿಂದ ಉತ್ಪನ್ನವಾಗುತ್ತದೆ ಮತ್ತು ಅವನು ಕಂಡಿತವಾಗಿ ನಾಶಹೊಂದುತ್ತಾನೆ. ಬದ್ಧಜೀವಿಗೆ ಈ ರೀತಿ ಧ್ವಂಸಶೀಲ ಅನುಭವವೂ ಸಹ ಪುನಃ ಕೇವಲ ಹರಿದಾಸ್ಯದಲ್ಲಿ ಮಾತ್ರ ಅಂತ್ಯಗೊಳ್ಳುತ್ತದೆ; ಆದ್ದರಿಂದ ಅಹಂ-ತತ್ವವೇ ಅನಿತ್ಯಕ್ಕೂ ಸಹ ಲಭ್ಯವಾಗುವ

ನಿತ್ಯಗತಿ. ಅನಿತ್ಯದ ಉಪಸಂಹಾರದಲ್ಲಿ ಅಹಂ-ತತ್ವದ ಸ್ಥಿತವಾಗುತ್ತದೆ, ಅತತ್ವದ ಪರಿಣತಿಯಲ್ಲಿ ಅಹಂ-ತತ್ವದ್ದೇ ಸ್ಥಾನವಾಗಿರುತ್ತದೆ, ತ್ವಂ-ತತ್ವ ಮತ್ತು ತತ್-ತತ್ವ-ನಿತ್ಯ ವೈವಿಧ್ಯತೆಯಲ್ಲಿ ಅಹಂ-ತತ್ವದೊಂದಿಗೆ ಏಕತ್ವಮಯ ಅಚಿಂತ್ಯ ಭಾವದಿಂದ ಯುಕ್ತವಾಗಿರುತ್ತದೆ. ತ್ವಂ-ತತ್ವ ಮತ್ತು ತತ್-ತತ್ವ ನಿತ್ಯಕಾಲ ಅಹಂ-ತತ್ವದಲ್ಲೇ ಆಶ್ರಿತವಾಗಿದೆ. ಎಲ್ಲಿ ಚಿಂತ್ಯಭೇದ ಆಕಾರ ಅಚಿಂತ್ಯಭೇದಾಭೇದದ ಸತ್ಯ ವಿಚಾರವನ್ನು ಕಲುಷಿತಗೊಳಿಸುತ್ತದೋ, ಎಲ್ಲಿ ಕೇವಲಭೇದ ಆಕಾರ ಅಚಿಂತ್ಯಭೇದಾಭೇದ ಸತ್ಯದಲ್ಲಿ ಆಘಾತ ಮಾಡುತ್ತದೋ, ಅಲ್ಲೇ ಹರಿಪ್ರೇಮದ ಅಭಾವವೆಂದು ಅರ್ಥಮಾಡಿಕೊಳ್ಳಬೇಕು. ವಿಷಯ-ಆಶ್ರಯದ ಅರಿವಿನ ಅಭಾವದಲ್ಲಿ ಕೇವಲಭೇದ-ವಾದ ಮತ್ತು ಅಶುದ್ಧಭೇದ-ವಾದ ನಿರ್ಮಿತವಾಗುತ್ತದೆ, ಅದು ಭಗವತ್-ವಿಮುಖತೆ. ಅಹಂ-ತತ್ವ ನಿತ್ಯಕಾಲ ಸ್ಥಿತವಾದದ್ದು, ಅಹಂ-ತತ್ವ ಸಂವಿದ್ವಿಗ್ರಹವಾದದ್ದು, ಅಹಂ-ತತ್ವದಲ್ಲಿ ನಶ್ವರ ಭೋಗಜಗತ್ತಿನ ಕಾಮನೆ ಇರುವುದಿಲ್ಲ, ಅದು ಸಮಸ್ತ ಕಾಮನೆಗಳ ಕಾಮದೇವ. ಸಂವಿದ್ವಿಗ್ರಹ ಜ್ಞಾತೃವಾಗಿರುವ (ಅರಿತವನಾಗಿರುವ) ಕಾರಣ ಅವನ ತನ್ನ ನಿತ್ಯ ಆಹ್ಲಾದ-ಧರ್ಮ, ಜ್ಞೇಯ ಸ್ವರೂಪದಲ್ಲಿ, ಅಪ್ರಾಕೃತ ಜ್ಞಾನಮಯ ಅಭಿನ್ನಸ್ವರೂಪದ್ವಯವು ಅವನಿಂದ ಅಭಿನ್ನವಾಗಿದ್ದರೂ ಸಹ ದ್ವಂದ್ವ ಸಚ್ಚಿದಾನಂದವಿಗ್ರಹತ್ರಯದಲ್ಲಿ (ಅರ್ಥಾತ್ ಸಂಧಿನೀ-ಸಂವಿತ್-ಹ್ಲಾದಿನಿಯ ಅಧೀಷ್ಠಾತೃ ಬಲದೇವ-ಕೃಷ್ಣ-ರಾಧಾರ ರೂಪದಲ್ಲಿ) ಸ್ಥಿತರಾಗಿದ್ದಾರೆ. ಸ್ವಯಂರೂಪ ಸಂವದ್ವಿಗ್ರಹ ಅದ್ವಯಜ್ಞಾನ ವ್ರಜೇನಂದ್ರನಂದನನಲ್ಲಿ ಹ್ಲಾದಿನೀಸಾರಸಮೇತ-ಮಹಾಭಾವ-ಸ್ವರೂಪಿಣಿ ನಿತ್ಯ ಸಮ್ಯಮ ರೂಪದಲ್ಲಿ ಸಂಯುಕ್ತವಾಗಿದೆ (ಆಲಿಂಗಿತವಾಗಿದೆ) ಮತ್ತು ಈ ಮಿಲಿತ ಎರಡು ತನುವಿನ ಸರ್ವತೋಭಾವದಿಂದ ಪ್ರೇಮಸೇವಾಮಯ ವಿಗ್ರಹ, ಬಲ-ಶಕ್ತಿ-ಪ್ರಕಾಶತತ್ವರೂಪದಲ್ಲಿ ನಿತ್ಯ ಪ್ರಕಟಿತವಾಗಿದೆ. ಶಕ್ತಿಮತ-ವಿಷಯತತ್ವದೊಂದಿಗೆ ಆಶ್ರಯತತ್ವದ ವಿಚಾರವನ್ನು ವಿಸ್ತಾರ ಮಾಡಲೆಂದು ವೈಕುಂಠದಿಂದ ಮಾಯೆಯ ವಿಚಾರ-ವೈವಿಧ್ಯತೆಯ ವರ್ಣನೆಯ ಇಚ್ಛೆಯಿಂದ ಆಶ್ರಿತ-ತತ್ವದ ಉಪದೇಶ.

ಮಾಯೆ ಎರಡು ಪ್ರಕಾರದ್ದು- ಭಕ್ತಿಯೋಗಮಾಯ ಮತ್ತು ಭಗವತ್-ವಸ್ತುವನ್ನು ಆವರ್ಣ ಮಾಡುವಂತಹ ಮಹಾಮಾಯಾ; ಪ್ರಾಪ್ಯವಿಚಾರ ಮತ್ತು ಪ್ರಾಪಕವಿಚಾರದಲ್ಲಿ ವಿಪರೀತ ದಿಶೆಯ ಅವಲಂಬನೆಯಿಂದ ಮಾಯೆಯು ಎರಡು ಪ್ರಕಾರದ ವೃತ್ತಿಗಳಿಲ್ಲಿವೆ- ವೈಕುಂಠವಸ್ತುವಿನ ವಿಷಯದಲ್ಲಿ ಸ್ಥಿರವಾದ ಯೋಗಮಾಯೆ ಪ್ರಬಲವಾದದ್ದು ಮತ್ತು ಕುಂಠ-ಮಾಯೆ ಕಾಲ ಮತ್ತು ಕರ್ಮರೂಪದಲ್ಲಿ ಅಶಾಶ್ವತ ಅಸ್ಥಿರ ಅಭಕ್ತಿಯ ಮೂಲಕ ಚಂಚಲವಾಗಿದೆ. ಯೋಗಮಾಯೆ ಸ್ವಯಂ ವಿಷಯತತ್ವವಾಗದೆ ಆಶ್ರಿತತತ್ವ ಅಥವಾ ಚಿತ್-ಶಕ್ತಿ ರೂಪದಲ್ಲಿ ಚಿತ್-ಉಚ್ಚಲಿತ ಮುಕ್ತಜೀವಿಗಳನ್ನು ಕೃಷ್ಣೋನ್ಮುಖಿಯಾಗಿ ಮಾಡುತ್ತದೆ, ಅಂದರೆ ತ್ವಂ-ತತ್ವವನ್ನು ಅಹಂ-ತತ್ವೋನ್ಮುಖಿಯನ್ನಾಗಿಸಿ ಅಹಂ-ಪ್ರೇಮದ ವಶೀಭೂತವನ್ನಾಗಿ ಮಾಡುತ್ತದೆ. ಆದರೆ ಕುಂಠಮಾಯಾ ತ್ವಂ-ತತ್ವವನ್ನು ಜಡ-ಅಹಂಕಾರದೊಂದಿಗೆ

ಚಿತ್-ಸಮನ್ವಯಿತೆಯನ್ನು ಪ್ರದರ್ಶನ ಮಾಡಿ ನಿರ್ಭೇದ-ಬ್ರಹ್ಮಾನುಸಂಧಾನದಲ್ಲಿ ಅಥವಾ ನಶ್ವರ ಭೋಗ-ಪ್ರವೃತ್ತಿಯಲ್ಲಿ ಪ್ರೇರೇಪಿಸುತ್ತದೆ. ಕಾಮದೇವ ಶ್ರೀಕೃಷ್ಣನ ಗಾಯತ್ರಿಯ ಸ್ಥಾನದಲ್ಲಿ ಬ್ರಹ್ಮಗಾಯತ್ರಿಯ ವಿಕೃತ ಅರ್ಥ ಕರ ಜೀವಯನ್ನು ಕರ್ಮ-ಭೋಗದ ಹಗ್ಗದಿಂದ ಆಬದ್ಧಗೊಳಿಸುತ್ತದೆ. ವಿಷಯ ಮತ್ತು ಆಶ್ರಯದ ಯತೋಚಿತ ಅನುಭವದ ಅಭಾವದಲ್ಲಿ ಒಂದು ಸಮಯ ನಿರ್ವಿಶೇಷವಾದವನ್ನೂ ಸಹ ಸವಿಶೇಷವಾದವೆಂದು ಕರೆಯಲುಹೋಗಿ ಅದನ್ನು (ತ್ವಂ-ತತ್ವವನ್ನು) ಜಡ-ಬಹೀಶ್ವರ-ವಾದದಲ್ಲಿ ಅರ್ಥಾತ್ ಪಂಚೋಪಸನೆಯಲ್ಲಿ ಎಳೆದೊಯ್ಯುತ್ತದೆ. ಭಗವತ್-ಉನ್ಮುಖ ಪ್ರಯತ್ನವು ಆಲೋಕದಿಂದ ಅಭಿನ್ನವಾದದ್ದು, ಅದರಿಂದ ಭಿನ್ನ ಕ್ರಮದಲ್ಲಿ ಬಾಹ್ಯಜಗತ್ತಿನಲ್ಲಿ ಅಚಿತ್-ಪ್ರವೃತ್ತಿಯಿಂದ ಮುಂದುವರೆದು ಅದು ಕಂಠಮಾಯಾ ಜೀವಿಯನ್ನು ಗಾಢ ಅಂಧಕಾರದ ಕಡೆಗೆ ಕರೆದೊಯ್ಯುತ್ತದೆ. ಬ್ರಹ್ಮವಿಚಾರದಲ್ಲಿ ಜೀವಿ ಭಗವಂತನೊಂದಿಗೆ ಬ್ರಹ್ಮನನ್ನು ಅಭಿನ್ನನೆಂದು ತಿಳಿಯದೆ ಅವರಲ್ಲಿ ಭೇದಜ್ಞಾನ ಮಾಡಿ ಮಾಯಾ ಅಥವಾ ಪ್ರಕೃತಿಯನ್ನೇ ಬ್ರಹ್ಮನ ರೂಪದಲ್ಲಿ ಸ್ಥಿರಪಡಿಸುತ್ತಾರೆ. ಅಹಂ-ತತ್ವದ ವಿಕೃತ-ಅನುಭವದಲ್ಲಿ ಈ ರೀತಿ ಭಗವತ್-ಕೈಂಕರ್ಯ ರಹಿತನಾಗಿ (ಭಗವತ್-ಸೇವೆಮಾಡದೆ) ಜೀವಿ ತನ್ನನ್ನು ಪ್ರಕೃತಿಪತಿ ಎಂದು ಭಾವಿಸಿ ಪ್ರಕೃತಿಯಲ್ಲಿ ತನ್ಮಯತೆಯನ್ನು ಪ್ರಾಪ್ತಿಸಿಕೊಳ್ಳುತ್ತಾನೆ. ಈ ವಿಚಾರವನ್ನು ಉತ್ತಮ ರೂಪದಿಂದ ಪ್ರದರ್ಶನ ಮಾಡಲೆಂದು ಶ್ರೀಕೃಷ್ಣನು ಅಹಂ-ತತ್ವ ಮತ್ತು ಮಮತ್ವದ ವಿಶೇಷವನ್ನು ಪ್ರದರ್ಶಿಸಿ ಚತುಃಶ್ಲೋಕದ ದ್ವಿತೀಯ ಶ್ಲೋಕದ ಪ್ರಸ್ತಾವನೆ ಮಾಡಿದ್ದಾರೆ.

ಅವರು ಅಹಂ-ತತ್ವದ ಮಮತೆಯನ್ನು 'ಮಾಯಾ' ಅರ್ಥಾತ್ "ವೈಕುಂಠದ ಮಾಯೆಯ ಸ್ವರೂಪ"ದ ವರ್ಣನೆ ಮಾಡಿದ್ದಾರೆ. ಅಹಂ-ತತ್ವದ 'ಮಾಯಾ' ಚಿತ್-ಶಕ್ತಿಯ ಪರಿಣತಿ ಮತ್ತು ಗೋಲೋಕ-ವೈಕುಂಠ ಇತ್ಯಾದಿಯು 'ತದ್ರೂಪವೈಭವ'. ಅಹಂ-ತತ್ವಜ್ಞಾನದ ಅಭಾವದಲ್ಲಿ ಪ್ರಕೃತಿಯನ್ನು 'ಅಹಂ' ನ ರೂಪದಲ್ಲಿ ಪ್ರಧಾನತೆ ನಿಡುವ ರೂಚಿಯ ಮೂಲಕ ಅನಹಂ-ತತ್ವ-ಪ್ರಕೃತಿಯ ಅಹಂ-ತತ್ವದೊಂದಿಗೆ ಕೇವಲ-ಅಭೇದ, ಅವ್ಯಕ್ತ-ಭೇದವಾದಿಗಳ ವಿಚಾರದಲ್ಲಿ ಅಪ್ರಬುದ್ಧತೆಯು ಉತ್ಪನ್ನವಾಗುತ್ತದೆ. ಬ್ರಹ್ಮನೊಂದಿಗೆ ಜೀವಿಯ, ಪ್ರಕೃತಿಯ, ಕಾಲದ ಮತ್ತು ನೈಷ್ಕರ್ಮ್ಯದ ಏಕತ್ವಗೊಳಿಸುವ ಪ್ರಯಾಸೆಯೇ ಅವ್ಯಕ್ತ-ಭೇದವಾದಿಗಳ ಅಭೇದ-ವಾದ. ಅವರ ನಿರಾಕಾರಣಕ್ಕಾಗಿ ಪರಮಾತ್ಮನ ಮಾಯೆಯ ಸ್ವರೂಪ, ಪರಮಾತ್ವ-ವಿಷಯದಿಂದ ಪರಮಾತ್ಮ-ಆಶ್ರಿತ-ಆಶ್ರಯದ ವೈವಿದ್ಯತೆಯನ್ನು ಭಗವಂತನು ಬ್ರಹ್ಮನ ಹತ್ತಿರ ಪ್ರಕಾಶಿತಗೊಳಿಸಿದರು. ವೈಕುಂಠವಸ್ತು ತದ್ರೂಪವೈಭವ ಮತ್ತು ನಶ್ವರ-ಬ್ರಹ್ಮಾಂಡ ಇತ್ಯಾದಿ ಶಕ್ತಿಯ ಪರಿಣಾಮವಾಗದೆ ಮತ್ತು ಅದರ ಮೂಲದಲ್ಲಿ ಶಕ್ತಿಯ ವೈವಿದ್ಯತೆಯನ್ನು ಸ್ವಾರ್ಥ-ಭ್ರಾಂತಿವಶದಿಂದ ಒಂದೇ ಎಂದು ತಿಳಿದು ಭ್ರಮಿಸಬಾರದು- ಇದನ್ನೂ ಸಹ ಹೇಳಿದರು. ಸತ್ಯದ ವೈವಿದ್ಯತೆ ಮತ್ತು ಅಸತ್ಯದ ಕುಹಕ (ವಂಚನೆ) ಒಂದೇ ಅಲ್ಲ, ಅದರಲ್ಲಿ ಭೇದವಿದೆ ಮತ್ತು ಅದು ನಿತ್ಯ- ಹೀಗೆ ಭೇದ, ಅಭೇದದಲ್ಲಿ ಅವಸ್ಥಿತವಾಗಿದೆ ಅರ್ಥಾತ್ ಚಿತ್-ಭೇದಸಮ್ಮೂಹ ಚಿತ್-

ಅಭೇದದಲ್ಲಿ ಅಚಿಂತ್ಯ ಸ್ವರೂದಿಂದ ನಿತ್ಯ ಸ್ಥಿತವಾದರೂ ಸಹ ನಿತ್ಯಭೇದಯುಕ್ತವಾಗಿದೆ ಮತ್ತು ವ್ಯಕ್ತಿವಿಶ್ವದ ಪ್ರಕಾಶಮಾತ್ರವೇ ಶಕ್ತಿಯ ಧರ್ಮವಲ್ಲ- ಇದನ್ನು ತಿಳಿಸಲೆಂದೇ ಅಹಂ-ತತ್ವ ಮತ್ತು ಅದರ ಮಾಯಾದ ವಿಶೇಷತೆ ಮತ್ತು ವಿಭೇದ ವರ್ಣಿಸಲಾಗಿದೆ. ಆತ್ಮ-ಅನಾತ್ಮ ವಿವೇಕದ ಅಭಾವದಲ್ಲಿ ಕೆಲುವೊಮ್ಮೆ ಭೋಗಿ ಮತ್ತು ಕೆಲುವೊಮ್ಮೆ ತ್ಯಾಗಿ ಮಾಯವಾದಿ ಆಗುತ್ತಾನೆ. ಸಂಬಂಧ-ಜ್ಞಾನವಿಷಯಕ ಈ ಎರಡು ಶ್ಲೋಕ ಅಚಿಂತ್ಯಭೇದಾಭೇದ- ತತ್ವದ ಉದ್ದೇಶದಿಂದ ವರ್ಣಿತವಾಗಿದೆ.

ವಿಶ್ವದ್ರಷ್ಟನ ಹತ್ತಿರ ಮಹಾಭೂತದರ್ಶನ ಮತ್ತು ಖಂಡಭೂತದರ್ಶನದಲ್ಲಿ ವ್ಯಾಪ್ಯ-ವ್ಯಾಪಕ ವಿಚಾರವು ಅವಸ್ಥಿತವಾಗಿದೆ. ಅಣುಚಿತ್ ಜೀವಿ-ವ್ಯಾಪ್ಯ (ಪ್ರವೇಶ್ಯ) ವಾದದ್ದು ಮತ್ತು ವಿಭೂಚಿತ್-ವ್ಯಾಪಕವಾದದ್ದು. ಅಣುಚಿತ್ ಜೀವಿ-ವ್ಯಾಪ್ಯ ಮತ್ತು ವಿಭೂಚಿತ್-ವ್ಯಾಪಕವಾಗಿದೆ. ವ್ಯಾಪಕದ ಅಂಶ-ವಿಶೇಷವೇ ವ್ಯಾಪ್ಯ, ವ್ಯಾಪ್ಯದ ಅಂಶೀ ವ್ಯಾಪಕವು. ವ್ಯಾಪ್ಯವು ವ್ಯಾಪಕದಿಂದ ಪೃಥಕ ವಸ್ತುವಲ್ಲ ಹಾಗೂ ವ್ಯಾಪ್ಯವು ವ್ಯಾಪಕವೂ ಅಲ್ಲ. ಅನಿರುದ್ಧ ವ್ಯಷ್ಟಿ-ವಿಷ್ಣು ವ್ಯಾಪ್ಯ-ಅಂತರ್ಯಾಮೀ ರೂಪದಲ್ಲಿ ಜಡಪಿಂಡದ ಒಳಗೆ ಸ್ಥಿತ-ವಿಚಾರದಿಂದ ಕೇವಲಮಾತ್ರ ಆಬದ್ಧನಾಗದೇ ವ್ಯಾಪಕನಾಗಿದ್ದಾನೆ ಹಾಗೂ ಸಮಷ್ಟಿವಿಷ್ಣು ಪ್ರಧ್ಯುಮ್ನ ಸ್ವತಂತ್ರ ಅವಸ್ಥಿತನಾಗಿದ್ದಾನೆ. ವ್ಯಷ್ಟಿ-ಸಮಷ್ಟಿ-ವಿಷ್ಣು-ವಿಷಯಾತ್ವನಾಗಿದ್ದಾನೆ ಹಾಗೂ ಅವನ ಆಶ್ರಿತ ವ್ಯಷ್ಟಿ-ಸಮಷ್ಟಿ-ಜೀವಿ ಇತ್ಯಾದಿ ನಾಲ್ಕು ಪ್ರಕಾರದ ಆಶ್ರಯದೊಂದಿಗೆ ಸೇವ್ಯ-ಸೇವಕನ ರೂಪದಲ್ಲಿ ಅವಸ್ಥಿತವಾಗಿದೆ- ಕೇವಲ ಈ ವಿಚಾರವನ್ನು ಅರ್ಥಮಾಡಿಕೊಳ್ಳುವುದರಿಂದ ಮಾತ್ರ ನಶ್ವರ ಖಂಡ-ಅಖಂಡ ಜ್ಞಾನದಿಂದ ಜೀವಿಯು ಮುಕ್ತನಾಗುತ್ತಾನೆ.

ಶ್ರೀಕೃಷ್ಣ ಹಾಗೂ ಆಕೃಷ್ಟ (ಅಶುದ್ಧದಿಂದ ಮುಕ್ತನಾದ ಜೀವಿ)- ಈ ಇಬ್ಬರು ಪ್ರೇಮಧರ್ಮದಲ್ಲಿ ಪ್ರತಿಷ್ಠಿತರಾಗಿದ್ದಾರೆ. ಪ್ರೇಮದ ವಿಚಾರದಿಂದ ಅವರಲ್ಲಿ ಸ್ವತಂತ್ರವು ಕಾಣಿಸಲ್ಪಟ್ಟರೂ ಸಹ ಅವರು ಒಂದೇ-ತಾತ್ಪರ್ಯಪರರಾಗಿದ್ದಾರೆ. ಪ್ರೇಮಮಯವಿಗ್ರಹ ಸ್ವತಂತ್ರ ರೂಪದಿಂದ ಸ್ಥಿತವಾಗಿ ಆಶ್ರಿತ ಪ್ರೇಮದ ವಿಷಯವಾಗಿದೆ; ಪುನಃ ಆಶ್ರಿತದ ಪ್ರೇಮದಲ್ಲಿ ಸಮಾಶಿಲಷ್ಟವಾಗಿ (ಸಮ್ಯಕ್ ರೂಪದಿಂದ ಆಲಿಂಗಿತವಾಗಿ) ಅಪೃಥಕವೂ ಸಹ ಆಗಿದೆ.

ನಾಲ್ಕನೇ ಶ್ಲೋಕದಲ್ಲಿ ಅಭಿಧೇಯ-ವಿಚಾರ ಪ್ರೇಮದ ಅಂಗ ರೂಪದಲ್ಲಿ ವರ್ಣಿಸಲಾಗಿದೆ. ನಶ್ವರ ಖಂಡಿತತತ್ವವು ಅತಾತ್ವಿಕ ಜನರಿಗೆ ಮಾತ್ರ ಜಿಜ್ಞಾಸದ ವಿಷಯವಾಗುತ್ತದೆ ಮತ್ತು ಅಂತಹ ಜನರು ಅದರಲ್ಲಿಯೇ ನಿರತರಾಗಿರುತ್ತಾರೆ; ಆದರೆ ತಾತ್ವಿಕ ಪಾರಮಾರ್ಥಿಕ ಸಂಪ್ರದಾಯ ಪರಮಾತ್ಮದ ವಿಷಯ ಯಾವ ರೀತಿ ಅನ್ವಯ ಹಾಗೂ ವ್ಯತಿರೇಕವಾಗಿ ಜಿಜ್ಞಾಸು ನಡೆಸುತ್ತದೆ, ಅದರ ಉತ್ತರದಲ್ಲಿ ಸಾಧನಭಕ್ತಿಯ ೬೪ ಅಂಗಗಳಿಂದ ಪ್ರವೇಶಾಂಗದ ವಿಚಾರದಿಂದ ಮೊದಲ ಹತ್ತು ಅಂಗವು ಅನ್ವಯವಾಗಿದೆ, ಪರವರ್ತಿ ಹತ್ತು ನಿಷೇಧಾತ್ಮಕವು ವ್ಯತಿರೇಕವಾಗಿದೆ- ಎರಡು ಪ್ರಕಾರದಿಂದಲೂ ಜಿಜ್ಞಾಸ್ಯ ವಿಷಯದಲ್ಲಿ ಅಭಿಧೇಯದ ಪ್ರವೃತ್ತಿ ಇದೆ.

ಅಭಿದೇಯ 'ಭಕ್ತಿ'ಯು ಅನಿತ್ಯವಾದದ್ದಲ್ಲ; ಆದರೂ ಸಾಧನದ ಸಮಯವು ನಶ್ವರದಂತೆ ಅನುಭವವಾಗುತ್ತದೆ, ಹಾಗೂ ಅದರ ಉದ್ದೇಶವನ್ನು ವಿಚಾರ ಮಾಡುವಾಗ ಅದರ ವೃತ್ತಿಯು ಆತ್ಮವೃತ್ತಿಯಾದ ಕಾರಣ ನಿತ್ಯವಾಗಿದೆ. ಸಮಸ್ತ ಕಾಲ ಮತ್ತು ಎಲ್ಲ ಸ್ಥಾನಗಳಲ್ಲೂ ಅನ್ವಯ ಹಾಗೂ ವ್ಯತಿರೇಕ ರೂಪದಲ್ಲಿ ಜಿಜ್ಞಾಸ್ಯ ವಸ್ತುವಿನ ವಿಷಯದಲ್ಲಿ ಅಭಿಧೇಯ ಸ್ಥಿತವಾಗಿರುತ್ತದೆ. ನಿರ್ವಿಶಿಷ್ಟತತ್ವದಲ್ಲಿ ಅಭಿದೇಯದ ಅಭಾವವಿರುತ್ತದೆ– ಅದರಲ್ಲಿ ಸಾಧನೆ ಅನಿತ್ಯವಾದದ್ದು, ಆದ್ದರಿಂದ ಶಕ್ತಿ–ಪರಿಣಾಮವಾದಿಜನರು ವಿವರ್ತವಾದಿಗಳ ಅಭಿಧೇಯವನ್ನು ಸ್ವೀಕರಿಸುವುದಿಲ್ಲ.

ಸಾಧನಭಕ್ತಿಯಲ್ಲಿ ಜಿಜ್ಞಾಸ್ಯವಸ್ತುವಿನ ವಿಷಯದಲ್ಲಿನ ವಿಪ್ರಲಂಭವೇ (ವ್ಯತಿರೇಕವಾಗಿ) ಅಭಿಧೇಯವು ಹಾಗೂ ಸ್ಫೂರ್ತಿ ಇತ್ಯಾದಿಯೇ ಸೇವೆಯ ಸಮಯ ಅನ್ವಯ ರೂಪದಿಂದ ಅಭಿಧೇಯವಾಗಿದೆ.

ಅಷ್ಟಮ-ಶ್ಲೋಕ

ಚತುಃಶ್ಲೋಕೀ-ಭಾಗವತದ ಗಂಭೀರವಾದ ಅರ್ಥವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಅಸಮರ್ಥತೆಯ ಶಂಕೆಯನ್ನು ಮಾಡಿದಾಗ ಶ್ರೀಭಗವಂತನ ಮೂಲಕ ಬ್ರಹ್ಮದೇವರಲ್ಲಿ ಉಪದೇಶ ಹಾಗೂ ಅವರಲ್ಲಿ ಸೃಷ್ಟಿಕರ್ತನೆಂಬ ಅಭಿಮಾನ ಬಾರದಿರಲು ಅನುಗ್ರಹ

ಏತನ್ಮತಂ ಸಮಾತಿಷ್ಠ ಪರಮೇಣ ಸಮಾಧಿನಾ ।
ಭವಾನ್ ಕಲ್ಪವಿಕಲ್ಪೇಷು ನ ವಿಮುಹ್ಯತಿ ಕರ್ಹಿಚಿತ್ ॥

(ಶ್ರೀಮದ್ಭಾ ೨/೯/೩೬)

ಅನ್ವಯ

[ಹೇ ಬ್ರಹ್ಮನ್ !] ಪರಮೇಣ ಸಮಾಧಿನಾ (ಚಿತ್ತವು ಪರಮ ಏಕಾಗ್ರತದೊಂದಿಗೆ) ಏತನ್ಮತಂ (ನನ್ನ ಈ ಮತದ) ಸಮಾತಿಷ್ಠ (ಅನುಷ್ಠಾನ ಮಾಡು) [ಹೀಗೆ ಮಾಡುವುದರಿಂದ] ಕಲ್ಪವಿಕಲ್ಪೇಷು (ಕಲ್ಪ-ಕಲ್ಪದಲ್ಲು ವಿವಿಧ ಪ್ರಕಾರದ ಸೃಷ್ಟಿಮಾಡಿಯೂ ಸಹ) ಭವಾನ್ (ನೀನು) ['ನಾನೇ ಸೃಷ್ಟಿಕರ್ತ' ಇತ್ಯಾದಿ ಅಹಂಕಾರದಿಂದ] ಕರ್ಹಿಚಿತ್ (ಎಂದಿಗೂ ಸಹ) ನ ವಿಮುಹ್ಯತಿ (ಮೋಹಿತನಾಗಲಾರೆ) ॥೩೬॥

ಅನುವಾದ

ಹೇ ಬ್ರಹ್ಮ ! ನೀನು ಮನಸ್ಸಿನ ಪರಮ ಏಕಾಗ್ರತೆಯೊಂದಿಗೆ ನನ್ನ ಈ ಮತದ ಅನುಷ್ಠಾನವನ್ನು ಮಾಡು. ಹೀಗೆ ಮಾಡುವುದರಿಂದ ಕಲ್ಪ-ಕಲ್ಪದಲ್ಲಿಯೂ ವಿವಿಧ ಪ್ರಕಾರದ ಸೃಷ್ಟಿಮಾಡಿದರೂ ಸಹ ನೀನು 'ನಾನೇ ಸೃಷ್ಟಿಕರ್ತ' ಎಂಬ ಇತ್ಯಾದಿ ಅಹಂಕಾರದಿಂದ ಎಂದಿಗೂ ಸಹ ಮೋಹಿತನಾಗಲಾರೆ. ॥೩೬॥

ಶ್ರೀವಿಶ್ವನಾಥ ಚಕ್ರವರ್ತೀಪಾದ

ನನು, ಅತಿಗಂಭೀರಾರ್ಥಂ ಚತುಃಶ್ಲೋಕೀ-ಭಾಗವತಮಿದಂ ಕಥಂ ಮಯಾ ಅವಗನ್ತುಂ ಶಕ್ಯಂ, ವಿವದಮಾನಾನಾಂ ಮತವೈವಿಧ್ಯಾತ್? ಇತ್ಯತ ಆಹ-ಏತನ್ಮತಂ ಮದೀಯಂ ಸಮ್ಯಗನುತಿಷ್ಠ ಸಮಾದಿನಾ ಚಿತ್ತೈಕಾಗ್ರ್ಯೇಣ ವಿಮೃಶೇತ್ಯರ್ಥಃ । ಕಲ್ಪ-ವಿಕಲ್ಪೇಷು ಮಹಾಕಲ್ಪಾನುಕಲ್ಪೇಷು ।

ಇತಿ ಚತುಶ್ಲೋಕೀ-ಭಾಗವತ ವಿವೃತಿಃ ಸಂಪೂರ್ಣಾ ॥
ಇಯಂ ವಿಶ್ವಜನೀನಾತಿರಮ್ಯಾ ಸಾರಾರ್ಥದರ್ಶಿನೀ ।
ಭಕ್ತಿಶಾಸ್ತ್ರಮಧೀಯಾನ್ಯೈರ್ಜನ್ಯೈರ್ದೃಶ್ಯಾ ನ ಚಾಪರೈಃ ॥೩೬॥

ಭಾವಾನುವಾದ- ಅತ್ಯಂತ ಗಂಭೀರ ಅರ್ಥದಿಂದ ಯುಕ್ತವಾದ ಈ ಚತುಃಶ್ಲೋಕೀ-ಭಾಗವತವನ್ನು ನಾನು ಯಾವ ಪ್ರಕಾರದಿಂದ ಅರ್ಥಮಾಡಿಕೊಳ್ಳುವುದರಲ್ಲಿ

ಸಮರ್ಥನಾಗುವೆ? ಎಂದು ಹೀಗೆ ಏನಾದರು ಶ್ರೀಬ್ರಹ್ಮದೇವರಿಗೆ ಈ ರೀತಿಯಾಗಿ ಆಪತ್ತುಂಟಾದರೆ, ವಿಶೇಷವಾಗಿ ಈ ವಿಷಯದಲ್ಲಿ ಪರಸ್ಪರ ವಿವಾದಿತ (ವಿವಿಧ-ಮತವಾದಿ) ಜನರ ವಿವಿಧ ಮತಗಳ ಭಿನ್ನತೆ ಇರುವುದು. ಇದಕ್ಕೆ ಉತ್ತರದಲ್ಲಿ ಶ್ರೀಭಗವಂತನು ಹೇಳುತ್ತಿದ್ದಾನೆ- 'ಎತನ್ಮತಂ'- ನನ್ನ ಈ ಮತದ 'ಸಮಾತಿಷ್ಠ'- ಸಮ್ಯಕ್ ರೂಪದಿಂದ ಅನುಷ್ಠಾನವನ್ನು ಮಾಡು. 'ಸಮಾಧಿನಾ'- ಸಮಾಧಿಯ ಮೂಲಕ ಅರ್ಥಾತ್ ಮನಸ್ಸಿನ ಏಕಾಗ್ರತೆಯೊಂದಿಗೆ ವಿಶೇಷ ಭಾವದಿಂದ ಪರ್ಯಾಲೋಚನೆ {ಗಾಢವಾಗಿ ಆಲೋಚನೆ} ಮಾಡು . 'ಕಲ್ಪ-ವಿಕಲ್ಪೇಷು'- ಮಹಾಕಲ್ಪ ಹಾಗೂ ಅನುಕಲ್ಪ ಎಲ್ಲದರಲ್ಲೂ ವಿವಿಧ ಪ್ರಕಾರದ ಸೃಷ್ಟಿ ಮಾಡಿಯೂ ಸಹ ನನ್ನ ಅನುಗ್ರಹದಿಂದ ನಿನ್ನಲ್ಲಿ 'ನಾನೇ ಸೃಷ್ಟಿಕರ್ತನು',- ಎಂಬ ಈ ರೀತಿಯಾದ ಅಭಿಮಾನವು ಉದ್ಭವಿಸುವುದಿಲ್ಲ.

ಈ ಪ್ರಕಾರವಾಗಿ ಚತುಃಶ್ಲೋಕಿ-ಭಾಗವತದ ವಿವರಣೆ ಸಂಪೂರ್ಣವಾಗಿದೆ.

ಈ ಸಾರಾರ್ಥದರ್ಶಿನಿ ಟೀಕೆಯು ವಿಶ್ವದ ಎಲ್ಲ ಮನುಷ್ಯರಿಗೂ ಅತ್ಯಂತ ರಮಣೀಯವಾದದ್ದು. ಭಕ್ತಿ-ಶಾಸ್ತ್ರಗಳ ಅಧ್ಯಾಯನಮಾಡುವ ಜನರು ಮಾತ್ರ ಇದರ ಅನುಶೀಲನೆ ಮಾಡುತ್ತಾರೆ, ಇತರರು ಮಾಡುವುದಿಲ್ಲ. ॥೩೬॥

ತಥ್ಯ-

ಮೊದಲು ಶ್ರೀಬ್ರಹ್ಮದೇವರು "ನಿಮ್ಮ ಅನುಗ್ರಹದಿಂದ ನಾನು ಪ್ರಜೆಗಳ ಸೃಷ್ಟಿ ಮಾಡಲು ಹೋಗಿ ಅಹಂಕಾರದಿಂದ ಆವರಿತನಾಗಲಾರೆ"- ಈ ಪ್ರಕಾರವಾಗಿ ಯಾವ ಪ್ರಾರ್ಥನೆಯನ್ನು ಮಾಡಿದ್ದರು, ಅದರ ಫಲವಾಗಿಯೇ ಶ್ರೀಭಗವಂತನು ಈಗ ಶ್ರೀಬ್ರಹ್ಮನಲ್ಲಿ ಅನುಗ್ರಹಿಸಿದನು. (ಶ್ರೀ ಶ್ರೀಧರ-ಸ್ವಾಮೀಪಾದರವರು) ॥೩೬॥

ಶ್ರೀವಲ್ಲಭಾಚಾರ್ಯಪಾದರವರು

ಏವಂ ಶಿಕ್ಷಂ ನಿರೂಪ್ಯ, ಗರ್ವಾಭಾವೇ ಎತದನುಸಂಧಾನಮೇವ ಕಾರಣಮಿತ್ಯಾಹ- ಎತನ್ಮತಮಿತಿ । ಸರ್ವಂ ಭಗವಾನ್, ಅನ್ಯಥಾಪ್ರತೀತಿಃ ಮಾಯಯಾ । ಸರ್ವತ್ರ ಭಗವಾನ್ ಸರ್ವಲೀಲಾಸಹಿತಃ ಸರ್ವದೋಷವಿವರ್ಜಿತ ಇತಿ ಎತನ್ಮತಂ ಮಮ ಭಗವತಃ, ಇದಂ ಹಿ ಭಗವಚ್ಛಾಸ್ತ್ರಂ ಮಮ ಆತಿಷ್ಠ । ಯಥಾ ತತ್ತನ್ಮತಾನುಸಾರಿಣಃ ತತ್ರ ತತ್ರ ಪ್ರತಿಷ್ಠಿತಾಃ, ತಥಾ ಭವಾನಪಿ ಅಸ್ಮಿಮನ್ಮತೇ ಪ್ರತಿಷ್ಠಿತೋ ಭವತು । ಅತಃ ಕುತರ್ಕಾ ಬಹವ ತತ್ಪತ್ಸ್ಯಂತೇ- ತೇ ಸರ್ವೇ ಅನುಭವೇನೈವ ದೂರೀಕರ್ತ್ತವ್ಯಾಃ, ತದಾಹ- ಪರಮೇಣ ಸಮಾಧಿನೇತಿ । ಸಮಾಧಿಶಿಚತ್ತೈಕಾಗ್ರಚ್ಯಂ, ಸೂಕ್ಷ್ಮದೃಷ್ಟಚ್ಯೈತಜ್ಞಾತವ್ಯಂ, ಆಪಾತತೋ ದೃಷ್ಟಚ್ಯಾ ವಿಚಾರೇಣ ವಾ ನೈತನ್ಮತಂ ಜ್ಞಾತಂ ಭವಿಷ್ಯತಿ । ಜ್ಞಾತೇ ತು ಅಸ್ಮಿನ್ ಮಹಾಕಲ್ಪೇ ಅವಾನ್ತರಕಲ್ಪೇಷು ಚ ಸೃಷ್ಟಿ ಪ್ರಲಯಯೋರ್ನ ಮುಹ್ಯತಿ । ಕಿಂಚ, ಕರ್ಹಿಚಿದಾಪಿ ನ ಮುಹ್ಯತಿ, ಕದಾಚಿದಪಿ ಮಾಯಾ ತನ್ನ ವ್ಯಾಮೋಹಯಿತಿ । ಅಸ್ಯ ಮತಸ್ಯ ಮಾಯಾಯಾಶ್ಚ ವಿರೋಧಾತ್ ತತ್ರೈವ ಮಾಯಾ, ಯತ್ರೈವೈತನ್ಮತಂ ನಾಸ್ತೀತ್ಯರ್ಥಃ ॥೩೬॥

ಭಾವಾನುವಾದ– ಹೀಗೆ ಬ್ರಹ್ಮನಲ್ಲಿ ಶಿಕ್ಷಣೆಯನ್ನು ನೀಡಿ ಈಗ ಶ್ರೀಭಗವಂತನು ಹೇಳುತ್ತಿದ್ದಾನೆ, ಜಗತ್–ಕರ್ತಾರನೆಂಬ ಗರ್ವವನ್ನು ದೂರ ಮಾಡಲೂ ಸಹ ಇದೇ ಶಿಕ್ಷಣದ ಅನುಸಂಧಾನವೆ ಉಪಾಯ. ಎಲ್ಲವೂ ಭಗವಂತನೇ ಆಗಿದ್ದಾನೆ. ಈ ಭಗವತ್–ಸ್ವರೂಪದಲ್ಲಿ ಬೇರೆ ಯಾವುದೆಲ್ಲ ಪ್ರಕಾಶಿತವಾಗುತ್ತಿದೆಯೋ, ಅದು ಭಗವಂತನ ಮಾಯೆಯಿಂದ ಆಗುತ್ತಿದೆ. ಈ ಜಗತ್ತಿನಲ್ಲಿ ಸರ್ವತ್ರ ಸರ್ವ (ಹತ್ತು) ಲೀಲಾ ಸಹಿತ ಭಗವಂತನೇ ನೆಲಸಿದ್ದಾನೆ ಹಾಗೂ ಅವನು ಸಮಸ್ತ ದೋಷಗಳಿಂದ ದೂರನಾಗಿದ್ದಾನೆ. ಇದೇ ನನ್ನ (ಭಗವಂತನ) ಮತ. ನನ್ನ ಈ ಮತವನ್ನು ಭಾಗವತ್–ಶಾಸ್ತ್ರವೆಂದು ತಿಳಿದು ದೃಢವಾಗಿ ಸ್ವೀಕಾರಮಾಡು. ಯಾವ ರೀತಿ ಭಿನ್ನ–ಭಿನ್ನ ಮತಗಳ ಅನುಸಾರಣೆ ಮಾಡುವ ಆ–ಆ ಮತಗಳಲ್ಲಿ ಪ್ರತಿಷ್ಠಿತವಾಗಿದೆ, ಅದೇ ರೀತಿ, ಹೇ ಬ್ರಹ್ಮ ! ನೀನು ನನ್ನ ಮತದಲ್ಲಿ ಪ್ರತಿಷ್ಠಿತನಾಗು. ಅನೇಕ ಕುತರ್ಕಗಳು ಉಪಸ್ಥಿತವಾಗಬಹುದು, ಅದನ್ನು ನಿನ್ನ ಅನುಭವದ ಮೂಲಕ ದೂರ ಮಾಡಬೇಕು. ಆದ್ದರಿಂದ ಹೇಳುತ್ತಿದ್ದಾರೆ– "ಪರಮೇಣ ಸಮಾಧಿನಾ ಅರ್ಥಾತ್ ಮನಸ್ಸಿನ ಏಕಾಗ್ರತೆಯನ್ನು ಸಮಾಧಿ ಎಂದು ಕರೆಯುತ್ತಾರೆ." ಆದ್ದರಿಂದ ನನ್ನ ಈ ಮಾತನ್ನು ಸೂಕ್ಷ್ಮ–ದೃಷ್ಟಿಯಿಂದ ಅರ್ಥಮಾಡಿಕೊಳ್ಳಬೇಕು. ಮೇಲಿನಿಂದ ನೋಡುವುದರಿಂದ ಅಥವಾ ವಿಚಾರ ಮಾಡುವುದರಿಂದಾಗಲಿ ನನ್ನ ಈ ಮತವು ಅರ್ಥವಾಗುವುದಿಲ್ಲ. ಯಾವಾಗ ಈ ಮತವು ಅರ್ಥವಾಗುವುದೋ, ಆಗ ನೀನು ಯಾವುದೇ ಮಹಾಕಲ್ಪ ಹಾಗೂ ಅವಾಂತರ ಕಲ್ಪದಲ್ಲಿ ಸೃಷ್ಟಿ ಹಾಗೂ ಪ್ರಳಯದ ಸಮಯದಲ್ಲು ಮೋಹವನ್ನು ಪ್ರಾಪ್ತಿಸಿಕೊಳ್ಳಲಾರೆ ಅಥವಾ ಮಾಯೆಯು ಎಂದಿಗೂ ಸಹ ನಿನ್ನನ್ನು ವಿಮೋಹಿತಗೊಳಿಸುವುದಿಲ್ಲ. ಯಾರ ಹೃದಯದಲ್ಲಿ ಈ ಮತವು ಸ್ಥಿರವಾಗಿರುವುದೋ, ಅವರನ್ನು ನನ್ನ ಮಾಯೆ ಮೋಹಿತಗೊಳಿಸುವುದಿಲ್ಲ. ಈ ಮತಕ್ಕು ಹಾಗೂ ಮಾಯೆಗೂ ಪರಸ್ಪರ ವಿರೋಧವುಂಟು. ಎಲ್ಲಿ ಈ ಮತವಿಲ್ಲವೋ, ಅಲ್ಲಿ ನನ್ನ ಮಾಯೆಯು ಮೋಹವನ್ನು ಉತ್ಪನ್ನ ಮಾಡುತ್ತದೆ. ॥೩೬॥

ನವಮ-ಶ್ಲೋಕ

ಶ್ರೀಬ್ರಹ್ಮನ ಸಮಕ್ಷದಲ್ಲಿ ಶ್ರೀಭಗವಂತನ ಮೂಲಕ ತನ್ನ ಅಲೌಕಿಕ ರೂಪದ ಅಂತರ್ಧಾನ

ಶ್ರೀಶುಕ ಉವಾಚ-
ಸಂಪ್ರದಿಶ್ಯೈವಮಜನೋ ಜನಾನಾಂ ಪರಮೇಷ್ಠಿನಮ್ ।
ಪಶ್ಯತಸ್ತಸ್ಯ ತದ್ರೂಪಮಾತ್ಮನೋ ನ್ಯರುಣದ್ಧರಿಃ ॥

(ಶ್ರೀಮದ್ಭಾ ೨/೯/೩೭)

ಅನ್ವಯ

ಶ್ರೀಶುಕ ಉವಾಚ (ಶ್ರೀಶುಕದೇವರು ಹೇಳಿದರು) ಅಜನಃ (ಅಲೌಕಿಕ ನಿತ್ಯ-ಶರೀರಿ) ಹರಿಃ (ಶ್ರೀಹರಿ) ಜನಾನಾಂ ಪರಮೇಷ್ಠಿನಮ್ (ಲೋಕಗಳ ಪರಮ ಆಧಿಪತ್ಯದಲ್ಲಿ ಸ್ಥಿತರಾದ ಪಿತಾಮಹ ಬ್ರಹ್ಮದೇವರಿಗೆ) ಏವಂ (ಈ ಪ್ರಕಾರವಾಗಿ) ಸಂಪ್ರದಿಶ್ಯ (ಉಪದೇಶವನ್ನು ಮಾಡಿ) ತಸ್ಯ ಪಶ್ಯತಃ (ಅವರ ಸಮಕ್ಷವೇ) ಆತ್ಮನಃ (ತನ್ನ) ತದ್ ರೂಪಮ್ (ಆ ರೂಪವನ್ನು) ನ್ಯರುಣತ್ (ಅಂತರ್ಹಿತರಾದರು) ॥೩೭॥

ಅನುವಾದ

ಶ್ರೀಶುಕಮುನಿಗಳು ಹೇಳಿದರು- ಅಲೌಕಿಕ ನಿತ್ಯ-ಶರೀರದವನಾದ ಶ್ರೀಹರಿಯು ಲೋಕಗಳ ಪರಮ-ಅಧಿಪತಿ ಪಿತಾಮಹ ಬ್ರಹ್ಮದೇವರಿಗೆ ಈ ಪ್ರಕಾರವಾಗಿ ಉಪದೇಶವನ್ನು ಪ್ರದಾನ ಮಾಡಿ ಅವರ ಸಮಕ್ಷದಲ್ಲೇ ತನ್ನ ಆ ರೂಪವನ್ನು ಅಂತರ್ಹಿತರಾದನು. ॥೩೭॥

ಶ್ರೀವಿಶ್ವನಾಥ ಚಕ್ರವರ್ತೀಪಾದರು

ಪರಮೇಷ್ಠಿನಂ ಸ್ರಷ್ಟಾರಮ್, ಆತ್ಮನೋ ರೂಪಮಿತಿ ವೈಕುಂಠಾದಿಮಪಿ ತಸ್ಯೈವ ರೂಪಮಿತಿ ಜ್ಞಾಪಿತಮ್ । ನ್ಯರುಣತ್ ಅನ್ತರ್ಧಾಪಯಾಮಾಸ ॥೩೭॥

ಭಾವಾನುವಾದ- 'ಪರಮೇಷ್ಠಿನಮ್'- ಲೋಕಗಳ ಪರಮ ಆಧಿಪತ್ಯದಲ್ಲಿ ಸ್ಥಿತ ಸ್ರಷ್ಟ ಬ್ರಹ್ಮನಿಗೆ. 'ಆತ್ಮನಃ ರೂಪಂ'- ತನ್ನ ರೂಪ; ಹೀಗೆ ಹೇಳುವುದರಿಂದ ವೈಕುಂಠ ಇತ್ಯಾದಿಯೂ ಸಹ ಅವನ ರೂಪವಾಗಿದೆ, ಅಂದರೆ ಅವನ ಸ್ವರೂಪದಲ್ಲಿ ಒಳಗೊಂಡಿದೆ- ಬ್ರಹ್ಮದೇವರಿಗೆ ಇದನ್ನೇ ತಿಳಿಸಲಾಗಿದೆ. 'ನ್ಯರುಣತ್'- ಅಂತರ್ಹಿತನಾದನು ಅರ್ಥಾತ್ ಶ್ರೀಭಗವಂತನು ಬ್ರಹ್ಮನ ದೃಷ್ಟಿಪಥದಿಂದ ಕಣ್ಮರೆಯಾದನು. ॥೩೭॥

ತಥ್ಯ-

ಶ್ರೀಭಗವಂತನು ಯಾವ ರೀತಿ ಬ್ರಹ್ಮದೇವರಿಗೆ ಸಮಾಧಿಯ ಅವಲಂಬನೆಯ

ಮೂಲಕ ಧ್ಯಾನ ಮಾಡಲು ಹೇಳಿದರೋ, ಸರಿಯಾಗಿ ಅದೇ ರೀತಿ ಶ್ರೀಬ್ರಹ್ಮದೇವರೂ ಸಹ ಸಂಕ್ಷೇಪವಾಗಿ ಶ್ರೀಮದ್ಭಾಗವತದ ವರ್ಣನೆಯನ್ನು ಮಾಡುತ್ತ ಶ್ರೀನಾರದರಿಗೆ ಶ್ರೀಮದ್ಭಾಗವತ (೨/೭/೫೨)ದಲ್ಲಿ ಹಾಗೂ ಶ್ರೀನಾರದರೂ ಸಹ ಈ ಮಹಾಪೂರಾಣದ ಆವಿರ್ಭಾವಕ್ಕಾಗಿ ಶ್ರೀವ್ಯಾಸದೇವರಿಗೆ ಶ್ರೀಮದ್ಭಾಗವತ (೧/೫/೧೩)ದಲ್ಲಿ ಸಮಾಧಿ ಅವಲಂಬನಪೂರ್ವಕವಾಗಿ ಶ್ರೀಭಗವಂತನ ಲೀಲಾಯ ಅನುಸ್ಮರಣೆ ಮಾಡಲು ಹೇಳಿದರು.

ಶ್ರೀಭಗವಂತನ ಮೂಲಕ ತನ್ನ ರೂಪದ ಅಂತರ್ಧಾನದ ಮಾತಿನಿಂದ ವೈಕುಂಠ ಮುಂತಾದವನ್ನು ಸಹ ಅವನ ಸ್ವರೂಪದ ರೂಪದಲ್ಲೇ ಅರ್ಥಮಾಡಿಕೊಳ್ಳಬೇಕು (ಶ್ರೀಜೀವ ಗೋಸ್ವಾಮಿಪಾದರು) ॥೩೭॥

ದಶಮ–ಶ್ಲೋಕ

ಭಗವಾನ್ ಶ್ರೀಹರಿಯ ಅಂತರ್ಧಾನದ ನಂತರ ಬ್ರಹ್ಮದೇವರು
ಮೋಹರಹಿತರಾಗಿ ವಿಶ್ವದ ಸೃಷ್ಟಿ

ಅಂತರ್ಹಿತೇಂದ್ರಿಯಾರ್ಥಾಯ ಹರಯೇ ವಿಹಿತಾಂಜಲಿಃ ।
ಸರ್ವಭೂತಮಯೋ ವಿಶ್ವಂ ಸಸರ್ಜೇದಂ ಸ ಪೂರ್ವವತ್ ॥

(ಶ್ರೀಮದ್ಭಾ ೨/೯/೩೮)

ಅನ್ವಯ

ಇಂದ್ರಿಯಾರ್ಥಾಯ (ಯಾವ ರೂಪದ ಪ್ರತ್ಯಕ್ಷ ದರ್ಶನವನ್ನು ಕೊಡಲಾಗಿತ್ತು) [ಶ್ರೀಭಗವಂತನು ಆ ರೂಪವನ್ನು] ಅಂತರ್ಹಿತ (ಅಂತರ್ಹಿತ ಮಾಡಿದರು) ಸರ್ವಭೂತಮಯಃ (ಸರ್ವಭೂತಮಯ) ಸಃ (ಶ್ರೀಬ್ರಹ್ಮದೇವರು) ಹರಯೇ (ಶ್ರೀಹರಿಯ ಉದ್ದೇಶದಿಂದ) ವಿಹಿತಾಂಜಲಿಃ (ಕೈ ಜೋಡಿಸಿ) ಪೂರ್ವವತ್ (ಪೂರ್ವ–ಪೂರ್ವ ಕಲ್ಪಗಳ ಸಮಾನ) ಇದಂ ವಿಶ್ವಂ (ಈ ವಿಶ್ವವನ್ನು) ಸಸರ್ಜ (ಸೃಷ್ಟಿಸಿದರು) ॥೩೮॥

ಅನುವಾದ

ಶ್ರೀಭಗವಂತನು ಬ್ರಹ್ಮದೇವರಿಗೆ ತನ್ನ ಯಾವ ರೂಪದ ಪ್ರತ್ಯಕ್ಷ ದರ್ಶನ ನೀಡಿದ್ದನು, ಆ ರೂಪವನ್ನು ಅವರ ಸಮ್ಮುಖವೇ ಅಂತರ್ಹಿತನಾದನು. ಆಗ ಸರ್ವಭೂತಮಯ ಶ್ರೀಬ್ರಹ್ಮದೇವರು ಶ್ರೀಹರಿಯ ಉದ್ದೇಶದಿಂದ ಕೈಗಳನ್ನು ಜೋಡಿಸಿ ಪೂರ್ವ–ಪೂರ್ವ ಕಲ್ಪಗಳ ಸಮಾನವಾಗಿ ಈ ವಿಶ್ವವನ್ನು ಸೃಷ್ಟಿಸಿದರು. ॥೩೮॥

ಶ್ರೀವಿಶ್ವನಾಥ ಚಕ್ರವರ್ತೀಪಾದರು

ಅಂತರ್ಹಿತ ಇಂದ್ರಿಯಾಣಾಂ- ಸ್ವಭಕ್ತಚಕ್ಷುರಾದೀನಾಮ್, ಅರ್ಥಃ ಪರಮಪುಷಾರ್ಥಃ ಸ್ವಸೌಂದರ್ಯಸೌರಭ್ಯಾದಿಕೋ ಯೇನ ತಸ್ಮೈ । ಪೂರ್ವವತ್ ಪೂರ್ವಪೂರ್ವಸ್ಮಿನ್ ವ್ಯತೀತ ಕಲ್ಪ ಇತ್ಯರ್ಥಃ । ತೇನ ಬ್ರಹ್ಮಣಃ ಸ್ವಕನ್ಯಾಭಿಗಮರೂಪೋ ಮೋಹಃ ಪೂರ್ವಕಲ್ಪೇ ತತ್ರೈವಾಭೂತ್, ನ ತು ಚತುಃಶ್ಲೋಕೀ-ಭಾಗವತೋಪದೇಶಾಂತರಮಪಿ, *'ಭವಾನ್ ಕಲ್ಪವಿಕಲ್ಪೇಷು ನ ವಿಮುಹ್ಯತಿ'* ಇತಿ ಭಗವದುಕ್ತೇಃ । ಯತ್ತು ಕೃಷ್ಣಾವತಾರೆ ಬ್ರಹ್ಮಮೋಹನಂ, ತತ್ತು ಭಗವತ್ಕೃಪಾವಿಲಸಿತಮೇವ ಜ್ಞೇಯಮ್ ॥೩೮॥

ಭಾವಾನುವಾದ- 'ಅಂತರ್ಹಿತೇಂದ್ರಿಯಾರ್ಥಾಯ'- ಯಾರು ತನ್ನ ಭಕ್ತಿಯ ಚಕ್ಷು, ಕರ್ಣ, ಮೂಗು ಇತ್ಯಾದಿ ಇಂದ್ರಿಯಗಳ ಪರಮ-ಪುರುಷಾರ್ಥ-ಸ್ವರೂಪವು ತಮ್ಮ ಉತ್ತಮ ರೂಪ, ಉತ್ತಮ ಸ್ವರ, ಉತ್ತಮ ಗಂಧ ಇತ್ಯಾದಿ ಗುಣಗಳನ್ನು ಬ್ರಹ್ಮದೇವರ ಸಮಕ್ಷದಲ್ಲೇ ಅಂತರ್ಹಿತರಾದರು ಅಂದರೆ ಅವರ ದೃಷ್ಟಿಯಿಂದ ಮರೆಯಾದರು, ಆ ಭಗವಾನ್ ಶ್ರೀಹರಿಯ ಉದ್ದೇಶದಿಂದ. 'ಪೂರ್ವವತ್'-ಪೂರ್ವ-ಪೂರ್ವ ಕಲ್ಪಗಳ ಸಮಾನ. ಇದರ ಮೂಲಕ ಸೂಚಿಸಲಾಗುವುದೇನೆಂದರೆ ಬ್ರಹ್ಮದೇವರು ತಮ್ಮ ಕನ್ಯೆಯ ಪ್ರತಿ ಅಭಿಮಾನರೂಪ ಮೋಹವು ಪೂರ್ವಕಲ್ಪದಲ್ಲೇ ಉಂಟಾಗಿತ್ತು, 'ಚತುಃಶ್ಲೋಕೀ-ಭಾಗವತ'ದ ಉಪದೇಶ ಪ್ರಾಪ್ತಿಸಿಕೊಂಡ ನಂತರವಲ್ಲ, ಏಕೆಂದರೆ ಶ್ರೀಭಗವಂತನು ಸ್ವಯಂ ಹೀಗೆ ಹೇಳಿದ್ದಾನೆ- "ಯಾವುದೇ ಕಲ್ಪದಲ್ಲಿ ಸೃಷ್ಟಿಯ ವಿವಿಧ ಪ್ರಯತ್ನಗಳ ಮೂಲಕ ನಿನ್ನಲ್ಲಿ ಯಾವುದೇ ಪ್ರಕಾರದ ಮೋಹವು ಉಪಸ್ಥಿತವಾಗುವುದಿಲ್ಲ." ಆದರೆ ಶ್ರೀಕೃಷ್ಣಾವತಾರದ ಸಮಯದಲ್ಲಿ ಯಾವ ಬ್ರಹ್ಮ-ಸಮ್ಮೋಹನೆಯು ಉಂಟಾಗಿತ್ತೋ, ಅದನ್ನು ಶ್ರೀಭಗವಂತನ ಕೃಪಾ-ವಿಲಾಸದ ರೂಪದಲ್ಲೇ ಅರ್ಥಮಾಡಿಕೊಳ್ಳಬೇಕು. ॥೩೭॥

ತಥ್ಯ-

ಬ್ರಹ್ಮ ಸರ್ವಭೂತಮಯ ಅರ್ಥಾತ್ ವ್ಯಷ್ಟಿ(ವ್ಯಕ್ತಿತ್ವ)-ಜೀವಿಗಳ ಸಮಷ್ಟಿ(ಸಂಗ್ರಹ)-ಸ್ವರೂಪ ಹಿರಣ್ಯಗರ್ಭರಾಗಿದ್ದಾರೆ. ವ್ಯಷ್ಟಿಯು ಸಮಷ್ಟಿಯಲ್ಲಿ ಒಳಗೊಂಡಿದೆ, ಆದ್ದರಿಂದ ವಿಶ್ವವನ್ನು ಸೃಷ್ಟಿ ಮಾಡಲು ಬ್ರಹ್ಮದೇವರು ಯಾವುದೇ ಪ್ರಕಾರದ ಆಯಾಸ (ಪ್ರಯಾಸೆ) ಇಲ್ಲದಿದ್ದರೂ ಸಹ ಅದು ಯಾವ ರೂಪದಲ್ಲಿ ಕರ್ತವ್ಯವಾಗಿದೆಯೋ, ಶ್ರೀಭಗವಂತನ ಕೃಪೆಯನ್ನು ಹೊರತುಪಡಿಸಿ ಬ್ರಹ್ಮದೇವರು ಅದನ್ನು ಅರ್ಥಮಾಡಿಕೊಳ್ಳಲಾಗುತ್ತಿರಲಿಲ್ಲ. ಈಗ ಅದೇ ಭಗವತ್-ಕೃಪೆಯನ್ನು ಪ್ರಾಪ್ತಿಸಿಕೊಂಡ ಕಾರಣ ಅವರ 'ಸರ್ವಭೂತಮಯ' ವಿಶೇಷಣೆಯಾಗಿದೆ (ಬಾಲ-ಪ್ರಬೋಧಿನಿ)॥೩೮॥

ಇತಿ ಶ್ರೀಮದ್ಭಾಗವತೀಯ ಚತುಃಶ್ಲೋಕೀ ಸಂಪೂರ್ಣಂ ॥

ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತ

॥ ಶ್ರೀಕೃಷ್ಣಾರ್ಪಣಮಸ್ತು ॥